

894.814 3
SAR N87
ಗ್ರಂಥ ಸ್ವಾಮ್ಯ ವಿಭಾಗ

ಅನುವಾದ: ಸರಿತಾ ಜ್ಞಾನಾನಂದ

ನಾಲ್ಕನೆಯ ಪ್ರಕಟಣೆ:

ಯಂಡಮೂರಿ ವೀರೇಂದ್ರನಾಥ್ [illegible] ಕಾದಂಬರಿ

ಅನುವಾದ

ಸರಿತಾ ಜ್ಞಾನಾನಂದ


ಸಾಹಿತ್ಯ ಪ್ರಕಾಶನ

ಸಿಟಿ ಕ್ಲಿನಿಕ್ ಸಂಕೀರ್ಣ; ದಾಜೀಬಾನ್ ಪೇಟೆ

ಹುಬ್ಬಳ್ಳಿ: ೫೮೦ ೦೨೮

ಸಾಹಿತ್ಯ ಪ್ರಕಾಶನ
ಸಿಟಿ ಕ್ಲಿನಿಕ್ ಕಾಂಪ್ಲೆಕ್ಸ್; ದಾಜೀಬಾನ್ ಪೇಟೆ
ಹುಬ್ಬಳ್ಳಿ-೫೮೦೦೨೮

ಸಂಪಾದನ-ಸಹಕಾರ
ಎಂ. ಎ. ಸುಬ್ರಮಣ್ಯ

ವಿಮರ್ಶೆ-ಮಾರ್ಗದರ್ಶನ
ಸರ್ವಶ್ರೀ ಮಲ್ಲೇಪುರಂ ಜಿ. ವೆಂಕಟೇಶ, ಬೆಂಗಳೂರು
,, ಜಿ. ಜ್ಞಾನಾನಂದ, ಕೆ.ಜಿ.ಎಫ್.
,, ಎಂ. ಪದ್ಮನಾಭಯ್ಯ, ಧಾರವಾಡ

ASHTAAVAKRA (Vol. II): Kannada Translation of Sri Yendamuri Veerendranath's Telugu Novel by Smt. Sarita Gnanananda; Published by Sahitya Prakashana, City Clinic Complex, Dajibanpet, Hubli:580 028

© ಶ್ರೀಮತಿ ಸರಿತಾ ಜ್ಞಾನಾನಂದ

ಮೊದಲ ಮುದ್ರಣ: 1987 ಪುಟಗಳು: 234+iv ಬೆಲೆ: 20.00
ಮುದ್ರಣ: ತ್ವರಿತ ಮುದ್ರಣ, ಗಂಗಾಪೂರಪೇಟೆ, ಗದಗ: 582 101

# ಮೊದಲ ಮಾತು

ಉಸಿರಾಡಲೂ ಕೂಡ ಅವಕಾಶ ಕೊಡದಂತೆ ಕಥೆ ನಾಗಾಲೋಟದಲ್ಲಿ ಓಡುವ ‘ಅಷ್ಟಾವಕ್ರ’ (ಭಾಗ–೧) ಈಗಾಗಲೇ ತಾವು ಓದಿರಬೇಕು. ಜೆನೆಟಿಕ್ಸ್ ಬಗ್ಗೆ ಅನೇಕ ವಿವರಣೆಗಳು ಕಾದಂಬರಿಯಲ್ಲಿ ಬೆರೆತು ಓದುಗರಲ್ಲಿ [illegible]ಯು ಪ್ರಜ್ಞೆ ವರ್ಧಿಸಲು ನೆರವಾಗುತ್ತದೆ. ಕ್ಷುದ್ರಶಕ್ತಿಯ ಉಪಾಸನೆ ಹಾಗೂ ಜೆನೆಟಿಕ್ಸ್ ಎರಡು ಭಿನ್ನವಾದ ಅಂಶಗಳನ್ನು ಬೆರೆಸಿ ಹೆಣೆದಿರುವ ಕಥೆಯ ಸೌಂದರ್ಯವು ಕಾದಂಬರಿಯ ಅಂತ್ಯದವರೆಗೂ ಓದಿದಾಗ ಮಾತ್ರವೇ ಗೊತ್ತಾಗುತ್ತದೆ.

ಕಾಷ್ಮೋರಾ ಅಂಶದ ಅಷ್ಟಾವಕ್ರನು ಜಗತ್ತಿನ ಆಳ್ವಿಕೆ ನಡೆಸಲು ಜನಿಸುತ್ತಾನೆಯೋ ಎಂಬುದರ ಉತ್ತರವನ್ನು ಈ ಭಾಗದಲ್ಲಿ ತಾವು ಓದಬಹುದು. ಯಾವುದೇ ಕಥೆಯಲ್ಲಿ ಒಳಿತು ಕೆಡಕುಗಳ ಮಧ್ಯ ನಡೆದ ಘರ್ಷಣೆಯೇ ಪ್ರಧಾನ. ಇಲ್ಲೂ ಅದೇ ಚಿತ್ರಿತವಾಗಿದೆ. ಬ್ರಹ್ಮ ಮುಡಿಗಳನ್ನು ಹಾಕುವುದು, ಅವನ್ನು ಮತ್ತೆ ಬಿಡಿಸುವುದೇ ಈ ಕಾದಂಬರಿ. ಮಹಾದ್ರಷ್ಟ, ವಂಶೀಕೃಷ್ಣ ಈ ಕಾದಂಬರಿಯ ಚರಮಗೀತೆ ಹಾಡಿದರೆ, ಕೇದಾರಗೌರಿ, ಸಿದ್ಧಾರ್ಥ, ರಂಜಿತಾ, ಪಾಡೋ ಕ್ಷುದ್ರಶಕ್ತಿಯನ್ನು ಧ್ವಂಸ ಮಾಡುತ್ತಾರೆ.

ಇಲ್ಲಿಯ ಪಾತ್ರ ಸೃಷ್ಟಿ, ಸನ್ನಿವೇಶದ ಜೋಡಣೆ, ಕಥೆಯ ಓಟ ಇವುಗಳಲ್ಲಿ ವೀರೇಂದ್ರನಾಥರ ಕಾದಂಬರಿಗಳ ಪೈಕಿ ‘ಅಷ್ಟಾವಕ್ರ’ ಕಾದಂಬರಿಗೆ ಸಮನಾದುದು ಬೇರೊಂದಿಲ್ಲ.

ಈ ಕಾದಂಬರಿಯನ್ನು ತಾವು ಆದರಿಸಿ, ಪ್ರೋತ್ಸಾಹಿಸುತ್ತಿರುವುದಕ್ಕೆ ಕೃತಜ್ಞತೆಗಳು. 37782 LR

ಈ ಕಾದಂಬರಿಯನ್ನು ಧಾರಾವಾಹಿಯಾಗಿ ತಮ್ಮ ‘ವಾರಪತ್ರಿಕೆ’ಯಲ್ಲಿ ಪ್ರಕಟಿಸಿದ ಸಂಪಾದಕರಾವ ಶ್ರೀ ಬಿ. ವಿ. ವೈಕುಂಠರಾಜು ಅವರಿಗೂ, ಈ ಕೃತಿಯನ್ನು ತಮ್ಮ ಪ್ರಕಾಶನದಲ್ಲಿ ಪ್ರಕಟಿಸುತ್ತಿರುವ ಶ್ರೀ ಎಂ. ಎ. ಸುಬ್ರಮಣ್ಯ ಅವರಿಗೂ, ಅಚ್ಚಿನ ಕಾರ್ಯವನ್ನು ಅಂದವಾಗಿ ನಿರ್ವಹಿಸಿರುವ ತ್ವರಿತ ಮುದ್ರಣದವರಿಗೂ, ಅನುವಾದದಲ್ಲಿ ಸಲಹೆ, ಸಹಕಾರ ನೀಡಿದ ನನ್ನ ಪತಿ ಶ್ರೀ ಜ್ಞಾನಾನಂದರಿಗೂ ಕೃತಜ್ಞತೆಗಳು.

**ಸರಿತಾ ಜ್ಞಾನಾನಂದ**

ಜ್ಞಾನ ಭಂಡಾರ
ಭಾರತ್ ನಗರ
ಬಿಇಎಂಎಲ್ ಅಂಚೆ, ಕೆಜಿಎಫ್: 563 125

# ಅರ್ಪಣೆ

ನನ್ನ ತಂದೆ

ಶ್ರೀ ಎನ್. ಆರ್. ನಂಜುಂಡಸ್ವಾಮಿ ಅವರಿಗೆ

—ಸರಿತಾ

ಅಂದು ಸಂಜೆ ಉಸ್ಸೋಕ್ ಸಮಾವೇಶ.

ಅಷ್ಟಾವಕ್ರ ಹುಟ್ಟುವುದಕ್ಕೆ ಮುನ್ನ ಬಹುಶಃ ಅದು ಕೊನೆಯ ಸಮಾವೇಶವಾಗಿರಬಹುದು. ಆದ್ದರಿಂದ ಎಲ್ಲರೂ ಮಹಾದ್ರಷ್ಟ ಏನು ಹೇಳುತ್ತಾನೆ ಎಂಬುದನ್ನು ಕೇಳಲು ಉತ್ಸುಕರಾಗಿದ್ದಾರೆ. ರೆಡ್‌ಸ್ಕೆಲಿಟನ್ಸ್ ಮತ್ತೂ ವಿಶೇಷವಾಗಿ ಓಡಾಡುತ್ತಿದ್ದಾರೆ.

ಸಮಾವೇಶದಲ್ಲಿ ಸಂಪೂರ್ಣವಾಗಿ ತನ್ನ ಹೆಸರು ಎಲ್ಲೂ ಬರದಿರುವುದನ್ನು ರಾಕೇಶ್ ಗಮನಿಸಿದ. ಅವತಾರ್ ಬಾಬಾ ಹೆಸರು ಮಾತ್ರ ಅಲ್ಲಲ್ಲಿ ಕೇಳಿಸುತ್ತಿದೆ. ಬಹುಶಃ ಮಹಾದ್ರಷ್ಟನಿಗೆ ಬಾಬಾ ಮನಸ್ಸು ಇನ್ನೂ ಪೂರ್ಣವಾಗಿ ತಿಳಿಯದು ಎನಿಸುತ್ತದೆ. ಇನ್ನು ಮುಂದೆ ಮಹಾದ್ರಷ್ಟನ ಸಮುಕ್ಷಮದಲ್ಲಿ ಮನಸ್ಸನ್ನು ಅಂಕೆಯಲ್ಲಿರಿಸಿಕೊಳ್ಳಬೇಕೆಂದು ತನ್ನನ್ನೇ ಎಚ್ಚರಿಸಬೇಕೆಂದುಕೊಂಡ ರಾಕೇಶ್.

ಮಹಾದ್ರಷ್ಟನ ಮಾತು ಮುಂದುವರಿಯುತ್ತಿದೆ: "....ಅಷ್ಟಾವಕ್ರ ಹುಟ್ಟುವ ತನಕ ನಾವೆಲ್ಲಾ ಈ ರಹಸ್ಯವನ್ನು ಭದ್ರವಾಗಿರಿಸಿದರೆ ಸಾಕು. ಒಮ್ಮೆ ಅವನನ್ನು ಸುರಕ್ಷಿತ ಪ್ರದೇಶಕ್ಕೆ ಸೇರಿಸಿದ ಮೇಲೆ ವಿಷಯವನ್ನು ಪ್ರಕಟಿಸೋಣ. ಆ ವೇಳೆಗೆ ಮುಕ್ಕಾಲು ಭಾಗದ ಜನಗಳು ನಮ್ಮ ಕಡೆಗೆ ಬಂದಿರುತ್ತಾರೆ. ಸೈತಾನನನ್ನು ಪ್ರಾರ್ಥಿಸಲು ಪ್ರಾರಂಭಿಸಿರುತ್ತಾರೆ. ಇನ್ನು ಉಳಿದ ಕಾಲು ಭಾಗದ ಜನ ಪ್ರೇತಗಣಗಳಿಂದ ನಾಶ ಹೊಂದುತ್ತಾರೆ."

ಅವತಾರ್ ಬಾಬಾ ಕಡೆಗೆ ತಿರುಗಿ "ಬಾಬಾ, ಈ ದಿನ ಬೆಳಗ್ಗೆ ನಿಮ್ಮ ಬಳಿ ನಡೆದ ಆ ಘಟನೆಗೆ ನೀವೇನು ಹೇಳುತ್ತೀರಿ?" ಎಂದು ಕೇಳಿದ.

ಸಭೆಯಲ್ಲಿ ಹೊಸ ಉತ್ಸಾಹ ಕಾಣಿಸಿಕೊಂಡಿತು.

ಬಾಬಾ ಎದ್ದುನಿಂತು "ತೀರಾ ಚಿಕ್ಕ ಘಟನೆ ಅದು" ಎಂದ.

"ಬಾಬಾ, ನೀವೆಷ್ಟೋ ಅದ್ಭುತಗಳನ್ನು ಮಾಡುತ್ತಿದ್ದೀರಿ. ಜನರು ಸೈತಾನನನ್ನು ನಂಬಲು ನಿಮ್ಮಿಂದ ಅನೇಕ ವಿಚಿತ್ರಗಳನ್ನು ಸೈತಾನ ಮಾಡಿಸುತ್ತಿದ್ದಾನೆ. ಅನೇಕ ದೇವೀ–ದೇವತೆಗಳನ್ನು ವರ್ಷಗಳ ಪರ್ಯಂತರ ಪೂಜಿಸಿದರೂ ವಾಸಿಯಾಗದ ವ್ಯಾಧಿಗಳನ್ನು ನೀವು ಹಸ್ತಸ್ಪರ್ಶದಿಂದಲೇ ವಾಸಿ ಮಾಡುತ್ತಿದ್ದೀರಿ. ತನ್ನನ್ನು ನಂಬಿದವರಿಗೆ ಮಾತ್ರವೇ ವಿಶೇಷವಾದ ಸುಖ

ಸಂತೋಷಗಳು ದೊರೆಯುತ್ತವೆ ಎಂಬ ವಿಷಯವನ್ನು ಜನರು ಗುರ್ತಿಸಲು ಸಾಧ್ಯವಾಗುವಂತೆ ಸೈತಾನ ನಿಮಗೆ ಅದ್ಭುತ ಶಕ್ತಿಗಳನ್ನು ದಯಪಾಲಿಸಿದ್ದಾನೆ. ದಕ್ಷಿಣ ಭಾರತದ ಪ್ರಜೆಗಳೆಲ್ಲಾ ನಿಮ್ಮನ್ನು ಈಗಾಗಲೇ ದೈವಸ್ವರೂಪದಲ್ಲಿ ಆರಾಧಿಸುತ್ತಿದ್ದಾರೆ. ಇನ್ನೊಂದು ತಿಂಗಳು ಪೂರ್ಣಗೊಳ್ಳುವ ವೇಳೆಗೆ ಭಾರತವೇ ನಿಮಗೆ ಆರತಿ ಹಿಡಿದು ನಿಲ್ಲುತ್ತದೆ."

ಅವತಾರ್ ಬಾಬಾ ಮುಖದಲ್ಲಿ ನಗೆ ಅದೇ ರೀತಿ ಇತ್ತು. ಆತ ಸಾಧಾರಣವಾಗಿಯೇ ಇದ್ದ. ಮಹಾದ್ರಷ್ಟ ಮಾತು ಮುಂದುವರಿಸಿದ:

"ಅಷ್ಟಾವಕ್ರನು ಹುಟ್ಟಿ ತನ್ನ ತಾಯಿ–ತಂದೆಗಳನ್ನು ಕೊಲ್ಲುತ್ತಲೇ ಸುರಕ್ಷಿತವಾದ ಸ್ಥಳಕ್ಕೆ ಸೇರಿಸಿ, ಉಸ್ನೋಕ್ ಅಷ್ಟಾವಕ್ರನ ಪೋಷಣೆ ನಡೆಸುತ್ತದೆ. ಸುರಕ್ಷಿತ ಪ್ರದೇಶಕ್ಕೆ ಸೇರಿದ ಎಂಬ ನಂಬಿಕೆ ಬಂದ ಮರುಕ್ಷಣವೇ ನೀವು ಸೈತಾನನ ದೂತನಾಗಿ ಈ ಪ್ರಪಂಚಕ್ಕೆ ಬಂದಿದ್ದೀರಿ ಎಂಬ ವಿಶೇಷ ವಾರ್ತೆ ಪ್ರಸಾರವಾಗುತ್ತದೆ. ಆಗ್ಗೆ ಅರ್ಧ ಭಾಗದಷ್ಟು ಜನರು ನಿಮಗೆ ವಿಧೇಯರಾಗಿರುತ್ತಾರೆ. ನೀವು ಹೇಳಿದಂತೆ ಕೇಳುತ್ತಾರೆ. ಅಷ್ಟಾವಕ್ರನ ಮುಂದಿನ ಆಳ್ವಿಕೆಯ ಬಗ್ಗೆ ನೀವು ಪ್ರಚಾರ ನಡೆಸಬೇಕು. ಇದನ್ನು ವಿರೋಧಿಸುವ ಎಲ್ಲಾ ಬಣಗಳನ್ನೂ ಉಸ್ನೋಕ್ ನಿಗ್ರಹಿಸುತ್ತದೆ. ಅಷ್ಟಾವಕ್ರನಿಗೆ ಎಂಟು ವರ್ಷಗಳಾಗುವ ವೇಳೆಗೆ ಪ್ರಪಂಚವೆಲ್ಲಾ ಸೈತಾನನ ಆಳ್ವಿಕೆಗೆ ಸಿದ್ಧವಾಗಿರುತ್ತದೆ. ಇದಿಷ್ಟು ಮಾಡುವುದು ನಿಮ್ಮ ಕರ್ತವ್ಯ. ಆದ್ದರಿಂದ ನೀವು ಹೇಳಿದ ಯಾವುದೇ ಮಾತು ನಡೆಯದೆ ಹೋದರೆ ಜನರಲ್ಲಿ ಅಪನಂಬಿಕೆ ಪ್ರಾರಂಭವಾಗುತ್ತದೆ. ಅಂಥಾದ್ದರಲ್ಲಿ ಆಕೆಗೆ ಸದ್ಯೋಗರ್ಭವೆಂದು ಏಕೆ ಶಪಿಸಿದಿರಿ? ಅದು ಸಾಧ್ಯವೇ?"

ಬಾಬಾ ಏನೋ ಹೇಳಲು ಬಾಯ್ತೆರೆಯುತ್ತಿದ್ದಂತೆ ರಾಕೇಶ್ ಎದ್ದು ನಿಂತು "ನಾನು ಹೇಳುತ್ತೇನೆ" ಎಂದ.

ಸಭೆ ಬೆಚ್ಚಿತು–ಮಹಾದ್ರಷ್ಟನ ಪ್ರಶ್ನೆಗೆ ಬೇರೊಬ್ಬರು ಉತ್ತರ ಹೇಳುವ ಪದ್ಧತಿ ಉಸ್ನೋಕ್ ಇತಿಹಾಸದಲ್ಲಿಯೇ ಇಲ್ಲ!

"ಬಂದದ್ದು ಮದುವೆಯಿಲ್ಲದಾಕೆ. ಅದು ನಾಟಕವೆಂದು ತಿಳಿಸಿದ್ದು ನಾನೇ. ಪಕ್ಕದಲ್ಲಿದ್ದವನನ್ನು ಎಲ್ಲೋ ನೋಡಿದ ನೆನಪು. ಅವನು ವೇಷ ಬದಲಿಸಿದ್ದನೇನೋ. ಅವರ ನಿಜ ಸ್ವರೂಪವನ್ನು ಬಯಲು ಮಾಡಿದ್ದರಿಂದ ಜನರಿಗೆ ಬಾಬಾ ಅವರಲ್ಲಿ ನಂಬಿಕೆ ಈಗ ಹೆಚ್ಚಾಗಿದೆ."

"ನಾಳೆ ಆಕೆ ಗರ್ಭವತಿಯಾಗದಿದ್ದರೆ?..."

"ಖಂಡಿತ ಗರ್ಭವತಿಯಾಗುತ್ತಾಳೆ" ಎಂದ ಬಾಬಾ.

ಅದುವರೆವಿಗೂ ನಿಶ್ಶಬ್ದವಾಗಿದ್ದ ಸಭೆಯಲ್ಲಿ ಕಲರವ ಮೊದಲಾಯಿತು. ಅವತಾರ್ ಬಾಬಾ ಶಾಂತನಾಗಿ ಅಷ್ಟು ನಿಖರವಾಗಿ ಹೇಳಿದ್ದನ್ನು ಕೇಳಿದವರೆಲ್ಲರೂ ಆಶ್ಚರಿಗೊಂಡರು. ಮಹಾದ್ರಷ್ಟನತ್ತ ತಿರುಗಿ ಬಾಬಾ ಹೇಳಿದ: "ಈಗ ಸತ್ಯಸಂಗತಿಯನ್ನು ಹೊರಗಿರಿಸಬೇಕಾದ ಕಾಲವಿದೇ ಎಂದುಕೊಂಡಿದ್ದೇನೆ."

ಮಹಾದ್ರಷ್ಟ ಮೌನವಾಗಿ ತಲೆದೂಗಿದ.

ಅವತಾರ್ ಬಾಬಾ ಸಭಿಕರೆಲ್ಲರನ್ನೂ ಉದ್ದೇಶಿಸಿ, "ಸದಸ್ಯರೇ, ನಾನು ಅವತಾರ್ ಬಾಬಾ ಅಲ್ಲ" ಎಂದ.

ಸಭೆಯೆಲ್ಲಾ ವಿಸ್ಮಿತವಾಯಿತು. ಎಲ್ಲರ ನೋಟವೂ ಬಾಬಾ ಮೇಲೆಯೇ ಇತ್ತು. ಬಾಬಾ ಮುಂದುವರಿಸಿದ:

"ಒಂದು ವರ್ಷದ ಹಿಂದಿನ ವರೆವಿಗೂ ದೇವರನ್ನು ನಂಬಿದ್ದವನು ನಾನಲ್ಲ. ಇನ್ನು ದೆವ್ವವನ್ನು ನಂಬುವುದು ದೂರ ಉಳಿಯಿತು. ಒಂದು ದಿನ ನಿದ್ರೆಯಲ್ಲಿರುವಾಗ ದೂರದಿಂದ 'ಬಾ... ಬಾ...' ಎಂಬ ಕರೆ ಸ್ವಾಗತಿಸಿತು. ನಿದ್ರೆಯಿಂದ ಎಚ್ಚೆತ್ತೆನೋ ನಿದ್ರೆಯಲ್ಲಿಯೇ ನಡೆದೆನೋ ಗೊತ್ತಿಲ್ಲ. ಎಚ್ಚರಗೊಳ್ಳುವ ವೇಳೆಗೆ ಅರ್ಧರಾತ್ರಿ ಕಳೆದಿತ್ತು. ಸ್ಮಶಾನದಲ್ಲಿದ್ದೆ. ಅಲ್ಲಿಗೆ ಹೇಗೆ ಬಂದೆನೆಂದು ಆಶ್ಚರ್ಯಗೊಂಡು ಎದ್ದು ಹಿಂತಿರುಗಲು ಸಿದ್ಧನಾಗುತ್ತಿದ್ದಂತೆ ಗಾಳಿ ಮಾತನಾಡತೊಡಗಿತು. ಮಿತ್ರರೇ ಇದು ನಿಜ! ಗಾಳಿಯೇ ನನ್ನೊಂದಿಗೆ ಮಾತಾಡಿತು! ಆಗಲೇ ಉಸ್ಸೋಕ್ ಬಗ್ಗೆ ನನಗೆ ಗೊತ್ತಾದದ್ದು. ಸೈತಾನ ಭೂಮಿಯಲ್ಲಿ ಅವತರಿಸುವುದಕ್ಕೆ ಮೊದಲು ಅದಕ್ಕೆ ಸೂಕ್ತವಾದ ಪರಿಸ್ಥಿತಿಯನ್ನು ಕಲ್ಪಿಸಬೇಕೆಂದು ನನಗೆ ಅಪ್ಪಣೆಯಾಯಿತು. ಈ ಕೆಲಸ ಹೇಗೆ ಸಾಧ್ಯವಾಗುತ್ತದೆ ಎಂದು ನಾನು ಪ್ರಶ್ನಿಸಿದೆ. ಪ್ರೇತಗಣಗಳು ಆಗತಾನೇ ತಮ್ಮ ಶಕ್ತಿಯನ್ನು ನನಗೆ ಪ್ರಸಾದಿಸಿದಂತಿತ್ತು. ನನಗೇ ಅರಿಯದ ಉತ್ಸಾಹ ತುಂಬಿತ್ತು. ಅಮಾವಾಸ್ಯೆಯಂದು ಅವತಾರ್ ಬಾಬಾನ್ನ ಭೇಟಿಯಾಗುವಂತೆ ಪ್ರಮಥ ಗಣಗಳು ಹೇಳಿದವು ಆಗ್ಗೆ ಅಮಾವಾಸ್ಯೆಗೆ ಇಪ್ಪತ್ತೆರಡು ದಿನಗಳಿದ್ದವು

"ಆ ಇಪ್ಪತ್ತು ದಿನಗಳಲ್ಲಿ ನನ್ನಲ್ಲಿ ಅಪಾರವಾದ ಬದಲಾವಣೆಗಳು ಬಂದುವು. ಶರೀರ ಬೆಳೆಯಿತು. ಉದ್ದವಾಗಿದ್ದ ಮುಖ ಗುಂಡಾಯಿತು. ಹದಿನೈದು ದಿನಗಳಲ್ಲಿ ನನ್ನನ್ನು ನಾನೇ ಗುರ್ತಿಸಲಾರದಷ್ಟು ಬದಲಾವಣೆಗಳು ಬಂದವು. ಇಪ್ಪತ್ತೆರಡನೆಯ ದಿನ ಅವತಾರ್ ಬಾಬಾ ಆಶ್ರಮಕ್ಕೆ ಹೋದೆ. ಸದಾ ಜನರಿಂದ ತುಂಬಿರುವ ಆ ಪ್ರದೇಶವು ವಿಚಿತ್ರವಾಗಿ ಬರಿದಾಗಿತ್ತು. ಎಲ್ಲಾ ಏನೋ ಮಾಯಾ ಪರಿಸರದಂದಿತ್ತು. ಒಳಗೆ ಹೋದೆ. ಆಶ್ರಮದ ಒಳಭಾಗದಲ್ಲಿ ಅವತಾರ್ ಬಾಬಾ ಮುದುಡಿ ಬಿದ್ದಿದ್ದರು. ಪ್ರೇತಾತ್ಮ ರಕ್ತವನ್ನೆಲ್ಲಾ ಕುಡಿ

ದಿದ್ದಂತೆ ಅವರ ಶರೀರ ಬಿಳಿಚಿಕೊಂಡಿತ್ತು. ನಿರ್ಜೀವವಾಗಿದ್ದಂತೆ ತೋರಿತು. ಆಗ ಗಾಳಿ ಮತ್ತೆ ಮಾತನಾಡಿತು. 'ಈ ದಿನದಿಂದ ನೀನೇ ಅವತಾರ್ ಬಾಬಾ! ಅಷ್ಟಾವಕ್ರನ ಬಗ್ಗೆ ಜನರಲ್ಲಿ ಭಕ್ತಿ ಹೆಚ್ಚಾಗುವಂತೆ ಮಾಡು. ಉಸ್ಸೋಕ್‌ನಲ್ಲಿ ಒಬ್ಬ ವ್ಯಕ್ತಿಗೆ ವಿಧೇಯನಾಗಿ ಆತನ ಆಜ್ಞೆ ಪಾಲಿಸು. ಆತನೇ ಅಷ್ಟಾವಕ್ರನ ರಾಜ್ಯದಲ್ಲಿ ಸರ್ವಸೇನಾನಿ. ಆತನು ಹೇಳಿದಂತೆ ನಡೆ" ಧ್ವನಿ ನಿಂತಿತು. ಅಪ್ರಯತ್ನವಾಗಿ ಕನ್ನಡಿಯಲ್ಲಿ ನೋಡಿಕೊಂಡು ಬೆಚ್ಚಿದೆ. ಶಿಖೆಯ ವಿನಾ ಉಳಿದ ಆಕೃತಿಯೆಲ್ಲಾ ಅವತಾರ್ ಬಾಬಾನನ್ನೆ ಹೋಲುತ್ತಿತ್ತು. ಕಳೆದ ಇಪ್ಪತ್ತೆರಡು ದಿನಗಳಲ್ಲಿ ನನ್ನಲ್ಲಿ ಬಂದ ಬದಲಾವಣೆಯ ಅರ್ಥ ಈಗ ಹೊಳೆದಿತ್ತು.

"ಆ ಕ್ಷಣದಿಂದಲೇ ನಾನು ಅವತಾರ್ ಬಾಬಾ ಆದೆ. ದೀರ್ಘವಾದ ಕರ್ಮವ್ಯಾಧಿಗಳೂ ಕೂಡ ನನ್ನ ಸ್ಪರ್ಶ ಮಾತ್ರದಿಂದಲೇ ಗುಣವಾಗಲಾರಂಭಿಸಿದವು ನಾನು ನುಡಿದದ್ದು ನಿಜವಾಗತೊಡಗಿತು. ಸ್ವಲ್ಪ ಕಾಲದಲ್ಲಿಯೇ ನನ್ನ ಖ್ಯಾತಿ ಕೃಷ್ಣಾಪುರ ದಾಟಿ ದೇಶವೆಲ್ಲಾ ವ್ಯಾಪಿಸಿತು."

—ಎಂದು ತನ್ನ ಶಿಖೆ ಸರಿಪಡಿಸಿಕೊಂಡ.

ರಾಕೇಶ್ ನಿಶ್ಚೇತನನಾಗಿ ಕೇಳುತ್ತಿದ್ದ. ತನ್ನೊಡನೆ ಮಾತನಾಡಿದ ಗಾಳಿಯೇ ಆತನೊಂದಿಗೂ ಮಾತನಾಡಿದೆ. ಆತನಿಗೂ ಆದೇಶವನ್ನು ನೀಡಿದೆ!

ಅವತಾರ್ ಬಾಬಾ ಅಷ್ಟರಲ್ಲಿ ನುಡಿದ: "ಈ ದಿನ ಬಂದ ಹುಡುಗ-ಹುಡುಗಿಯರನ್ನು ಕಂಡಾಗ ನನಗೆ ತುಂಬಾ ಕೋಪ ಬಂತು. ಶಾಪ ವಿಧಿಸಿದ್ದೇನೆ. ಇಷ್ಟು ದಿನ ನೆರವಾಗಿ ನಿಂತ ಕ್ಷುದ್ರ ಶಕ್ತಿಗಳೇ ಸಹಾಯ ಮಾಡುತ್ತವೆ ಎಂದುಕೊಳ್ಳುತ್ತೇನೆ, ನೋಡೋಣ."

ಮಹಾದ್ರಷ್ಟ ಎದ್ದು ನಿಂತು ಬಾಬಾನನ್ನು ಕುಳಿತುಕೊಳ್ಳುವಂತೆ ಸನ್ನೆ ಮಾಡಿ ತನ್ನ ಮಾತು ಪ್ರಾರಂಭಿಸಿದ : "...ಒಬ್ಬ ಬಾಬಾ ಮಾತ್ರನೇ ಅಲ್ಲ ಈ ರೀತಿಯಲ್ಲಿ ತಮ್ಮ ತಮ್ಮ ರಂಗಗಳಲ್ಲಿ ನಿಷ್ಣಾತರಾದವರು ಬಹುಮಂದಿ ಉಸ್ಸೋಕ್‌ನಲ್ಲಿದ್ದಾರೆ. ಇನ್ನೊಂದು ತಿಂಗಳಲ್ಲಿ ಇನ್ನೂ ಕೆಲವರು ಪ್ರಮುಖರು ಉಸ್ಸೋಕ್‌ಗೆ ಸೇರಲಿದ್ದಾರೆ. ಭಗವಂತನನ್ನು ನಂಬಿ ತೊಂದರೆಯಲ್ಲಿರುವವರು, ತಮ್ಮ ಬಯಕೆಗಳನ್ನು ಬೇಗ ಬೇಗ ತೀರಿಸುವ ಸೈತಾನನ್ನು ನಂಬುತ್ತಾರೆ. ಅದಕ್ಕಾಗಿಯೇ ಪ್ರೇತಗಣಗಳು ಉಸ್ಸೋಕ್ ಸದಸ್ಯರಿಗೆ ತಮ್ಮ ಅಂಶದಲ್ಲಿ ಸ್ವಲ್ಪವನ್ನು ಅವರಿಗೆ ಪ್ರಸಾದಿಸುತ್ತಿರುವುದು. ಇನ್ನು ಒಂದೇ ತಿಂಗಳು....ಒಂದೇ ತಿಂಗಳು.... ನಾವೆಲ್ಲಾ ಒಂದಾಗಿ ಶ್ರಮಿಸಬೇಕು..."

ಅಷ್ಟರಲ್ಲಿ ಬ್ಲಾಕ್‌ಸ್ಕೆಲಿಟನ್ ಒಬ್ಬ ಎದ್ದುನಿಂತ. ಒಂದು ಕಾಲದಲ್ಲಿ ಶ್ರೀಕಾಕುಳಂ ಜಿಲ್ಲೆಯ ಡೆಪ್ಯುಟಿ ಕಮೀಷನರ್ ಆಗಿದ್ದ. ಈಗ ಕರ್ನೂಲಿ

ನಲ್ಲಿದ್ದ. "ನಮ್ಮ ಜಿಲ್ಲೆಯಲ್ಲಿ ಮಳೆಯೇ ಇಲ್ಲ. ಸಾವಿರಾರು ಮಂದಿ ಮಳೆಗಾಗಿ ಪ್ರಾರ್ಥಿಸಿದ್ದಾರೆ. ಆದರೂ ಫಲವಿಲ್ಲ. ನಾನು ಸೂಕ್ಷ್ಮವಾಗಿ ಗಣಪೂಜೆಗಾಗಿ ಬಲಿ ಅರ್ಪಿಸಲು ಸೂಚಿಸಿದೆ. ಬಲಿಯನ್ನು ಕೊಟ್ಟ ನಂತರ ಮಳೆ ಸುರಿಯಲು ಪ್ರಾರಂಭವಾಯಿತು. ಈಗ ಪ್ರಮಥ ಗಣಾಧಿಪತಿಯ ಹೆಸರಿನಲ್ಲಿ ದೇವಾಲಯ ನಿರ್ಮಿಸುತ್ತಿದ್ದೇವೆ. ಈಗಾಗಲೇ ಐದು ಲಕ್ಷ ವಸೂಲಾಗಿದೆ...."

ಈ ಮಾತನ್ನು ಕೇಳಿ ಮಹಾದ್ರಷ್ಟ ತಲೆದೂಗಿದ. ಆತನ ಮುಖದಲ್ಲಿ ಸಂತೋಷವಿತ್ತು. ಯಜ್ಞಗಳನ್ನು ಮಾಡುತ್ತಾ, ಪ್ರಾರ್ಥನೆಗಳನ್ನು ಅರ್ಪಿಸುತ್ತಾ ತಮ್ಮ ಬಯಕೆಗಳನ್ನು ದೇವರು ಪೂರೈಸುತ್ತಾನೆ ಎಂದು ನಂಬಿರುವವರನ್ನು ದೇವರಿಂದ ದೆವ್ವದ ಕಡೆಗೆ ತಿರುಗಿಸುವುದು ತೀರಾ ಸುಲಭ. ದೇವರಿಗಿಂತಲೂ ದೆವ್ವವೇ ಶೀಘ್ರ ಫಲಕಾರಿ ಎಂಬುದು ತಿಳಿಸಿದರೆ ಸಾಕು. ಮನುಷ್ಯರು ಬೇಗ ಬದಲಾಗುತ್ತಾರೆ. ಅವರ ಗುರಿ ಎಲ್ಲಾ ತಮ್ಮ ಸಮಸ್ಯೆಗೆ ಶೀಘ್ರ ಪರಿಹಾರ! ಇದಕ್ಕೆ ಕುಟ್ಟ ಸೈತಾನ್ ಹೇಗಾದರೂ ನೆರವಾಗುತ್ತಾನೆ.

ಆ ಭಾವವನ್ನು ತೋರುವಂತೆ ಅಲ್ಲೊಂದು ವಿಶೇಷ ನಡೆಯಿತು. ವಾರ್ತಾ ವಾಹಕನೊಬ್ಬ ಬಂದು ಮಹಾದ್ರಷ್ಟನಿಗೆ ಒಂದು ಚೀಟಿಯನ್ನು ಕೊಟ್ಟ. ಅದನ್ನು ಓದುತ್ತಿದ್ದಂತೆಯೇ ಆತನ ಮುಖ ಅರಳಿತು. ಅವತಾರ್ ಬಾಬಾ ಕಡೆ ನೋಡುತ್ತಾ "ಬಾಬಾ ನಿಮ್ಮನ್ನು ಭಾರತೀಯ ಯೋಗ ಸಂಸತ್ತಿನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ" ಎಂದು ಹೇಳಿದ, "ಅಷ್ಟು ಮಾತ್ರವಲ್ಲ ಮುಖ್ಯಮಂತ್ರಿಗೆ ಸಲಹಾ ಮಂಡಳಿಯ ಸದಸ್ಯರೂ ಹೌದು."

ರಾಕೇಶ್ ಮಹಾದ್ರಷ್ಟನ ಕಡೆಯೇ ನೋಡುತ್ತಿದ್ದ. ಸೈತಾನ್ ತನಗೆ ವಹಿಸಿದ ಕೆಲಸವನ್ನು ಮಹಾದ್ರಷ್ಟ ತುಂಬಾ ಎಚ್ಚರಿಕೆಯಿಂದ ಭದ್ರವಾಗಿ ನಿರ್ವಹಿಸುತ್ತಿದ್ದ. ಈ ವೇಳೆಗಾಗಲೇ ಅನೇಕ ಐಎಎಸ್ ಆಫೀಸರ್‌ಗಳು, ಎಂಜಿನಿಯರ್‌ಗಳು, ಡಾಕ್ಟರ್‌ಗಳು ಉಸ್ಲೋಕ್‌ನಲ್ಲಿ ಸೇರಿದ್ದರು; ಇನ್ನೂ ಸೇರಲಿದ್ದರು. ಬಹುಶಃ ಗವರ್ನರ್ ಮುಖ್ಯಮಂತ್ರಿಗೆ ಸಲಹೆ ನೀಡಿರಬಹುದು. ಗವರ್ನರ್ ಬಾಬಾ ಕಾಲಿಗೆ ಬಿದ್ದು ನಮಸ್ಕಾರ ಮಾಡುವುದನ್ನು ಬಹು ಮಂದಿ ನೋಡಿದ್ದರು.

ಇದಕ್ಕಿಂತಲೂ ಮುಖ್ಯವಾದ ಸುದ್ದಿ-ಭಾರತೀಯ ಸೈನ್ಯದ ಸುಪ್ರೀಂ ಕಮಾಂಡರ್ ಕೃಷ್ಣಾಪುರಕ್ಕೆ ಕೆಲವು ದಿನಗಳಲ್ಲಿ ಬರಲಿದ್ದ. ಆತನಿಗೆ ಅಲ್ಸರ್. ವಿದೇಶಗಳಲ್ಲೂ ಔಷಧೋಪಚಾರ ನಡೆಸಿದ್ದರೂ ಖಾಯಿಲೆ ಗುಣವಾಗಿರಲಿಲ್ಲ. ಬಾಬಾ ಈ 'ಕೇಸ್' ಆಗಲೇ ಕುಟ್ಟ ಸೈತಾನನಿಗೆ ನಿವೇದಿಸಿದ್ದ.

ಉಸ್ಪೋಕ್‌ನ ಮತ್ತೊಬ್ಬ ಸದಸ್ಯ–ಆತ ಗ್ರೀನ್ ಸ್ಕೆಲಿಟನ್. ಒಂದು ಕಾಲದಲ್ಲಿ ಗುಜರಾತ್ ಸರ್ಕಾರದಲ್ಲಿ ಎಂಜಿನಿಯರ್ ಆಗಿದ್ದ. ಈಗ ಇಲ್ಲಿಯ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದ. ಪ್ರಧಾನವೂ ಬೃಹತ್ತಾದದ್ದು ಆದ ಆಣೆ ಕಟ್ಟೊಂದು ಸೀಳು ಬಂದು ಒಡೆಯಲು ಸಿದ್ಧವಾಗುತ್ತಿದೆಯೆಂದು ಆತನಿಗೆ ಸೈತಾನ್ ಕನಸಿನಲ್ಲಿ ಹೇಳಿದ. ಕೇಂದ್ರದಿಂದ ಅನೇಕ ಅಧಿಕಾರಿಗಳನ್ನು ಕೂಡಲೇ ಕರೆಸಿದ ಆ ಎಂಜಿನಿಯರ್. ಮೊದಲೇ ಅವರು ಬಂದು ಅದನ್ನು ರಿಪೇರಿ ಮಾಡಿದ್ದರಿಂದ ದೊಡ್ಡ ಅಪಘಾತವೊಂದು ತಪ್ಪಿತು. ಇದರಿಂದ ಆ ಗ್ರಾಮದ ಸುತ್ತಮುತ್ತಲಲ್ಲಿ ಆ ಎಂಜಿನಿಯರ್ ಆರಾಧ್ಯಮೂರ್ತಿಯಾದ.

ಇದೇ ರೀತಿ ಪರಿಸ್ಥಿತಿ ಮುಂದುವರಿದರೆ ಅಷ್ಟಾವಕ್ರನು ಹುಟ್ಟಿ, ಬೆಳೆದು, ಎಂಟು ವರ್ಷಗಳಾಗುವ ವೇಳೆಗೆ ಜನರೆಲ್ಲಾ ಆತನ 'ಗುಲಾಮ' ರಾಗಿರುತ್ತಾರೆ!

ಬಾಬಾ ಎದ್ದು ನಿಂತು "ಪುಟ್ಟಣ್ಣನ ವಿಷಯ" ಎಂದ. ಕೊನೆಯ ವಿಷಯ ಮಾತನಾಡುತ್ತಿದ್ದಂತೆ "...ಈ ಹುಟ್ಟುಗಳಿಗೆಲ್ಲಾ ಕಾರಣ ರಂಗ ಪ್ರಸಾದ್ ಎಂದು ಹೇಳಲು ಅಮೇರಿಕಾಕ್ಕೆ ಹೋಗಬೇಕೆಂದಿದ್ದಾನೆ. ಅದಕ್ಕೆ ನಮ್ಮ ನೆರವು ಬೇಕಂತೆ."

"ಪುಟ್ಟಣ್ಣನಿಗಿಂತಲೂ ರಂಗಪ್ರಸಾದ್ ಅಂಥವರಿಗೆ ನಾವು ಸಹಾಯ ಮಾಡುವುದೇ ನಮಗೆ ಲಾಭಕರ. ರಂಗಪ್ರಸಾದ್ ಎಂದರೆ ಇಲ್ಲಿಯ ಪ್ರಜೆ ಗಳಿಗೆ ತುಂಬಾ ಅಭಿಮಾನವಿದೆ."

"ಆದರೆ ರಂಗಪ್ರಸಾದ್ ಉಸ್ಪೋಕ್‌ನಲ್ಲಿ ಸೇರುತ್ತಾನೆ ಎಂಬ ನಂಬಿಕೆ ನನಗಿಲ್ಲ" ಎಂದ ರಾಕೇಶ್.

"ಸೇರಬೇಕಾಗಿಲ್ಲ. ಸೈತಾನ್ ಬಯಸಿದರೆ, ಆ ರಂಗಪ್ರಸಾದ್ ಬೇಡ ವೆಂದರೆ, ನಮ್ಮ ಮನುಷ್ಯನೇ ಹದಿನೈದು ದಿನಗಳಲ್ಲಿ ರಂಗಪ್ರಸಾದನಂತೆ ಸಿದ್ಧನಾಗುತ್ತಾನೆ...." ಎಂದ ಮಹಾದ್ರಷ್ಟ.

"ಕೇದಾರಗೌರಿ ರಂಗಪ್ರಸಾದ್ ಆಸ್ಪತ್ರೆಯಲ್ಲಿ ಪ್ರಸವಿಸುತ್ತಾಳೆ. ಅದ ಕ್ಕಾಗಿ ಆಕೆ ತುಂಬಾ ಹಠ ಹಿಡಿದಿದ್ದಾಳೆ. ಪ್ರಸವದ ಸಮಯಕ್ಕೆ ಸಿದ್ಧಾರ್ಥ ಕೂಡ ಅಲ್ಲಿಯೇ ಇರುವಂತೆ ನಾನೇ ಏರ್ಪಾಟು ಮಾಡುತ್ತೇನೆ. ಆಗ ಅವನೂ ಸಾಯುತ್ತಾನೆ. ಇನ್ನು ಉಳಿಯುವುದು ರಂಗಪ್ರಸಾದ್. ಈ ಬಾರಿ ಆತ ಜಾಗರೂಕನಾಗಿಯೇ ಇರುತ್ತಾನೆ. ಈ ಎಲ್ಲಾ ಹುಟ್ಟುಗಳ ಕಾರಣವನ್ನು ತಿಳಿಯಲು ತುಂಬಾ ಹಠದಿಂದ ತನ್ನ ಸಂಶೋಧನೆ ನಡೆಸುತ್ತಲೇ ಇದ್ದಾನೆ. ಆಗ್ಗೆ ಮಹಾದ್ರಷ್ಟರು ಹೇಳಿದಂತೆ ರಂಗಪ್ರಸಾದ್ ಸ್ಥಾನದಲ್ಲಿ ನಮ್ಮ ಮನುಷ್ಯ ಇದ್ದರೆ ಸರಿ, ಇಲ್ಲದಿದ್ದರೂ ಪ್ರೊಫೆಸರ್ ಪುಟ್ಟಣ್ಣ ಈ ಎಲ್ಲಾ ಹುಟ್ಟುಗಳಿಗೂ

ರಂಗಪ್ರಸಾದ್ ಕಾರಣವೆಂಬುದನ್ನು ಅಂತರರಾಷ್ಟ್ರೀಯ ವೇದಿಕೆಯಿಂದ ಹೇಳುತ್ತಾನೆ. ಕೃಷ್ಣಾಪುರದಲ್ಲಿ ನಡೆಯುವ ಎಂಟನೆಯ ಪ್ರಸವಕ್ಕೆ, ನನ್ನ ಊಹೆ ಸರಿಯಾಗಿದ್ದರೆ, ಆಗ ಅಲ್ಲಿ ಜನಸಂದಣಿ ಬಹಳವಾಗಿರುತ್ತದೆ. ಬಾಬಾ ಸಣ್ಣ ಮಾತನ್ನು ಅಲ್ಲಿಯವರ ಕಿವಿಗೆ ಊದಿದ ಕೂಡಲೇ ಆ ಜನರೆಲ್ಲಾ ತೋಳಗಳು, ಹುಲಿಗಳು, ಕರಡಿಗಳು ಆಗುತ್ತಾರೆ. ಆಸ್ಪತ್ರೆಯನ್ನೆಲ್ಲಾ ಹಾಳುಗೆಡುವುತ್ತಾರೆ. ರಂಗಪ್ರಸಾದ್ ಸಿದ್ಧಾರ್ಥರನ್ನು ಅಲ್ಲೇ ಚೂರು ಚೂರು ಮಾಡುತ್ತಾರೆ. ಅಷ್ಟಾವಕ್ರನು ಹುಟ್ಟುತ್ತಲೇ ತಂದೆಯನ್ನು ಕೊಂದು ಭಯ ವನ್ನು ಸೃಷ್ಟಿಸುವುದು ಎಂದರೆ ನನ್ನ ಅನಿಸಿಕೆಯಲ್ಲಿ ಇದೇ...."

ಈ ಮಾತಿಗೆ ಎಲ್ಲರೂ ಚಪ್ಪಾಳೆ ತಟ್ಟಿದರು.

ರಾಕೇಶ್ ಓರೆಗಣ್ಣಿನಿಂದ ಮಹಾದ್ರಷ್ಟನನ್ನು ನೋಡಿದ. ಮಹಾ ದ್ರಷ್ಟನ ಮುಖದಲ್ಲಿ ಯಾವ ಬದಲಾವಣೆಯೂ ಇಲ್ಲ. ಕಲರವ ಕಡಿಮೆ ಯಾಗುತ್ತಲೇ "ಇನ್ಯಾರಾದರೂ ಏನಾದರೂ ಮಾತನಾಡುವುದಿದೆಯೇ ?" ಎಂದು ಕೇಳಿದ.

ಕೊನೆಯಲ್ಲಿದ್ದ ಒಬ್ಬ ಸದಸ್ಯ ಎದ್ದು ನಿಂತು "ಅಷ್ಟಾವಕ್ರ ಹುಟ್ಟುವ ಮೊದಲು ಇನ್ನೂ ನಡೆಸಬೇಕಾದ ಕೆಲಸಗಳಾವುವಾದರೂ ಇವೆಯೇ?" ಎಂದು ಕೇಳಿದ.

"ಇಲ್ಲ. ಅಷ್ಟಾವಕ್ರ ಜನಿಸುವುದಕ್ಕೆ ಮೊದಲು ನಡೆಯುವ ಸಭೆಗಳಲ್ಲಿ ಇದೇ ಕೊನೆಯದಾಗುತ್ತದೆ. ಅದುವರೆವಿಗೂ ಸಾಧ್ಯವಿರುವಷ್ಟು ಹೆಚ್ಚು ಮಂದಿ ಯನ್ನು ಸೈತಾನನ ಬಳಿಗೆ ಕರೆತರಲು ಪ್ರಯತ್ನಿಸಿ. ವ್ಯಕ್ತಿಯ ಬಗ್ಗೆ ತುಂಬಾ ನಂಬಿಕೆ ಬಂದರೆ ಮಾತ್ರವೇ ಉಸ್ರೋಕ್ ಸದಸ್ಯನನ್ನಾಗಿಸಿ."

ಸಭೆ ಮುಗಿದಂತೆ ಘಂಟಾರವ, ಒಬ್ಬೊಬ್ಬರೇ ಎದ್ದು ಹೊರಟರು. ಬಾಬಾ ರಾಕೇಶ್ ಇಬ್ಬರೂ ಒಂದೇ ಬಾರಿಗೆ ಬಾಗಿಲ ಬಳಿ ಸೇರಿದರು. ರಾಕೇಶ್ ಇಳಿಸಿದ ಕಂಠದಲ್ಲಿ ಮೆಲ್ಲನೆ "ನಾನು ಸ್ವಲ್ಪ ಮಾತನಾಡಬೇಕಾಗಿತ್ತು" ಎಂದ.

ಬಾಬಾ ಕೂಡ ಅದೇ ರೀತಿ ಇಳಿಸಿದ ಸ್ವರದಲ್ಲಿ "ನನಗೆ ಅದೇಕೆ ಎನ್ನು ವುದು ಗೊತ್ತಿದೆ. ನಾವು ಇದನ್ನು ಮಾತನಾಡಬೇಕಾದ ಅವಶ್ಯಕತೆ ಇಲ್ಲ. ಸೈತಾನ್ ನಿನ್ನ ಬಗ್ಗೆ ಕೂಡ ನನ್ನಲ್ಲಿ ಹೇಳಿದ್ದಾನೆ. ಅಷ್ಟಾವಕ್ರನು ಹುಟ್ಟುವ ತನಕ ನೀನು ಹೊರಕ್ಕೆ ಬರಬೇಡ. ಮಹಾದ್ರಷ್ಟನ ಮುಂದೆ ಮನಸ್ಸನ್ನು ನಿಯಂತ್ರಣದಲ್ಲಿರಿಸಿಕೋ. ಇದು ತೀರಾ ಮುಖ್ಯವಾದದ್ದು!" ಎನ್ನುತ್ತಾ ಸರಸರನೆ ಅಲ್ಲಿಂದ ಹೊರಟುಹೋದ.

ರಾಕೇಶ್ ನಿಶ್ಚಲನಾದ.

# ೨೩

"ಕ್ಷಮಿಸಿ ಎಂದು ಕೇಳಲೂ ಕೂಡ ನಾಲಿಗೆ ಹೊರಳುತ್ತಿಲ್ಲ. ಆದರೆ ಒಂದು ವಿಷಯ ಮಾತ್ರ ಹೇಳಲೇಬೇಕು. ನಾನು ಯಾವ ದುರುದ್ದೇಶದಿಂದಲೂ ನಿಮ್ಮ ಮೊಮ್ಮಗಳನ್ನು ಕರೆದುಕೊಂಡು ಹೋಗಲಿಲ್ಲ. ಆತ ಕಪಟಿ. ಆತನ ನಿಜಸ್ವರೂಪ ಜನರ ಮುಂದಿಡಬೇಕೆಂದು ರಂಜಿತಾಳ ನೆರವನ್ನು ಕೋರಿದ್ದೆ. ಹೀಗಾಗುತ್ತೆಂದು ಕನಸಿನಲ್ಲೂ ನಾನು ಭಾವಿಸಿರಲಿಲ್ಲ...." ಷಾಡೋ ಹೇಳುತ್ತಿದ್ದ.

ಆತ ತಲೆ ಎತ್ತಿದ. ವೃದ್ಧಾಪ್ಯದಿಂದ ಮುಖವೆಲ್ಲಾ ಸುಕ್ಕುಗಟ್ಟಿದೆ. ಕಣ್ಣುಬ್ಬು ಬಿಳಿಯದಾಗಿದೆ, ಆದರೂ ಕಣ್ಣಲ್ಲಿ ಅಪೂರ್ವವಾದ ಹೊಳಪು. ಅನುಭವವು ಗಾಂಭೀರ್ಯದೊಂದಿಗೆ ಕೂಡಿಕೊಂಡು ತಿಳಿಯಾಗಿ ಆತನ ಮುಖವನ್ನೆಲ್ಲಾ ಆವರಿಸಿದೆ. ಆತ ಪ್ರೊಫೆಸರ್ ಜಯದೇವ್!

ಒಮ್ಮೆ ದೇಶವನ್ನೆಲ್ಲಾ ಗಡಗಡನೆ ನಡುಗಿಸಿದ ಜಯದೇವ್, ತಾನು ನಂಬಿದ ಸಿದ್ಧಾಂತಕ್ಕಾಗಿ ಪ್ರಾಣವನ್ನೇ ಪಣವನ್ನಾಗಿಸಿದವನು.

"ಯಾವುದೇ ಸಂಗತಿ ನಮಗೇ ಅನ್ವಯವಾಗುವಾಗ್ಗೆ ಎಷ್ಟೇ ದೃಢವಾದ ಮನೋಸ್ಥೈರ್ಯವನ್ನೇ ಅವರು ಪಡೆದಿದ್ದರೂ, ಅವರೂ ಅತ್ಯಂತ ದುರ್ಬಲರಾಗಿ ಅತೀತ ಶಕ್ತಿಗಳನ್ನು ನಂಬುವಂತಾಗುತ್ತಾರೆ ಎನ್ನಲು ರಂಜಿತಾ ತುಂಬಾ ಒಳ್ಳೆಯ ಉದಾಹರಣೆ."

"ಅದೇನು ಸಾರ್, ತಪ್ಪು ರಂಜಿತಾ ಮೇಲೆ ಹೊರಸುತ್ತಿದ್ದೀರಿ!" ರವಿ ವಿಸ್ಮಯದಿಂದ ಕೇಳಿದ.

"ರಂಜಿತಾಳದು ತಪ್ಪು ಎನ್ನುತ್ತಿಲ್ಲ. ನಮ್ಮ ಮನೆತನದ ಮೇಲೆ ಈ ತಪ್ಪಿದೆ! ತುಂಬಾ ದೊಡ್ಡ ಕುಟುಂಬವೆಂದು, ನಮಲ್ಲಿರುವವರೆಲ್ಲಾ ವೈಜ್ಞಾನಿಕ ಮನೋಭಾವದವರೆಂದೂ, ಕಾರ್ಯ-ಕಾರಣ ಸಂಬಂಧವಾದಿಗಳೆಂದು ಪ್ರಖ್ಯಾತಿ ಪಡೆದಿದ್ದಾರೆ. ಆದರೆ ಈಗ ಅವರು ಮಾಡುತ್ತಿರುವುದೇನು ಗೊತ್ತೇ? ರಂಜಿತಾಳನ್ನು ದರ್ಗಾಕ್ಕೆಕರೆದುಕೊಂಡು ಹೋಗಿ ತಾಯತ ಕಟ್ಟಿಸುತ್ತಿದ್ದಾರೆ!" ಎದ್ದು ನೇರವಾಗಿ ಕಿಟಕಿಯ ಬಳಿಗೆ ನಡೆದು ಹೊರಕ್ಕೆ ನೋಡುತ್ತಾ "ಶಾರೀರಿಕ

ಸಂಬಂಧವೇ ಇಲ್ಲದೆ, ಒಬ್ಬ ಬಾಬಾನ ಮಾತಿನಿಂದ ಒಂದು ಹೆಣ್ಣು ಗರ್ಭಿಣಿಯಾಗುತ್ತಾಳೆಯೆ? ಇದೆಷ್ಟು ಹಾಸ್ಯಾಸ್ಪದವೋ, ಆ ಗರ್ಭ ಬರದಿರಲು ಕೈಗೆ ತಾಯತ ಕಟ್ಟಿಸುವುದೂ ಅಷ್ಟೇ ಹಾಸ್ಯಾಸ್ಪದವಲ್ಲವೇ? ಇದನ್ನು ಹೇಳಿದರೆ ಕೇಳುವವರು ಯಾರು?" ಎಂದಾಗ ಆತ ಹತಾಶನಾಗಿದ್ದಂತೆ ಧ್ವನಿಸುತ್ತಿತ್ತು.

ಷಾಡೋ ಮುಖ ಅರಳಿತು "ಹೋಗಲಿ ನೀವಾದರೂ ನಂಬುತ್ತಿದ್ದೀರಿ ತಾನೇ?"

"ಈಗ ನನ್ನ ನಂಬಿಕೆ ಮುಖ್ಯವಾದುದಲ್ಲ. ರಂಜಿತಾಳ ಬಾಳು ಮುಖ್ಯ. ಆಕೆಯನ್ನು ಈ ಷಾಕ್‌ನಿಂದ ಹೊರಕ್ಕೆ ತರಬೇಕು. ಮತ್ತೆ ಆಕೆ ಕೃಷ್ಣಾಪುರಕ್ಕೆ ಹೋಗುವಂತೆ ಮಾಡಬೇಕು. ಆಕೆಯ ಸಹಪಾಠಿಗಳಲ್ಲಿ ಆಕೆಗೆ ಏನೂ ನಡೆದಿಲ್ಲ ಎನ್ನುವಂತೆ ಅವರಿಗೆಲ್ಲಾ ಗೊತ್ತಾಗಬೇಕು. ತನ್ನ ಸೀಮಿತ ಪರಿಧಿಯಲ್ಲಿಯೇ ತಾನೊಂದು ದೊಡ್ಡ ಕೆಲಸ ಮಾಡಬೇಕೆಂದು ಪ್ರಯತ್ನಿಸಿ ಸೋಲೊಪ್ಪಿದ್ದಾಳೆ. ಆದರೆ ಅದನ್ನು ಅರ್ಥಮಾಡಿಕೊಳ್ಳುವವರೆಷ್ಟು ಮಂದಿ? ಅರ್ಥಮಾಡಿಕೊಳ್ಳುವುದಕ್ಕೆ ಬದಲಾಗಿ ಆಕೆಯನ್ನು ಬೇರೊಂದು ದೃಷ್ಟಿಯಿಂದ ನೋಡುತ್ತಾರೆ. ಅದನ್ನು ನಾನು ಊಹಿಸಬಲ್ಲೆ. ನಾಳೆ ಆಕೆ ಪುತ್ತೆ ಓದಲು ಕಾಲೇಜಿಗೆ ಹೋದರೆ ಪ್ರತಿಯೊಬ್ಬರ ನೋಟವೂ ಆಕೆಯ ಹೊಟ್ಟೆಯ ಮೇಲೇ ಇರುತ್ತದೆ. ಕೆಲವರು ನಗುತ್ತಾರೆ. ಕೆಲವರು ಪರೀಕ್ಷಾ ದೃಷ್ಟಿಯಿಂದ ನೋಡುತ್ತಾರೆ. ಮೊದಲೇ ಸೂಕ್ಷ್ಮ ಮನೋಧರ್ಮದ ರಂಜಿತಾ ಇದನ್ನೆಲ್ಲಾ ಸಹಿಸಬಲ್ಲಳೇ? ನನ್ನ ವಿಶ್ಲೇಷಣೆ ನಿಜವಾಗಿದ್ದರೆ ಈಗಿನ ಮನಸ್ಥಿತಿಗೆ ರಂಜಿತಾಳ ಮನಸ್ಸನ್ನು ಆವರಿಸಿರುವ ಭಯ ಬಾಬಾ ಶಾಪವಲ್ಲ, ಏನೋ ನಡೆಯುತ್ತದೆ ಎಂಬ ಭಯವೂ ಅಲ್ಲ, ಈ ಜನರ ಬಾಯಿಂದ ಹೇಗೆ ಉಳಿಯಲು ಸಾಧ್ಯವೆಂಬ ಅಸಹಾಯಕತೆ!.. ರವೀ, ನೀನು ರಂಜಿತಾಳನ್ನು ಮದುವೆಯಾಗುತ್ತೀಯಾ?"

ಅದುವರೆವಿಗೂ ಎಲ್ಲಾ ಮಾತನ್ನೂ ಕೇಳುತ್ತಿದ್ದ ರವಿ ಬೆಚ್ಚಿ "ಏನು?" ಎಂದ. ತನ್ನ ಕಿವಿ ಸರಿಯಾಗಿಯೇ ಕೇಳಿಸಿತೇ ಎನ್ನುವ ಭ್ರಾಂತಿಯಿಂದ.

"ನಿನಗೇನೂ ಅಡ್ಡಿಯಿಲ್ಲ ಎಂದರೆ...."

"ನನಗೆ ಅಡ್ಡಿಯೇ? ಇದಕ್ಕಿಂತಲೂ ಸಂತೋಷಕರವಾದ ವಿಷಯ ಬೇರೇನು ತಾನೆ ಇದ್ದೀತು? ಅಡ್ಡಿಯೇನಾದರೂ ಇದ್ದರೆ ಅದು ರಂಜಿತಾಳೇ ಹೇಳಬೇಕು...." ಎಂದ ಅಗ್ಗ ಅಚ್ಚರಿಯ ಷಾಕ್‌ನಿಂದ ಎಚ್ಚರಗೊಂಡಿದ್ದ ರವಿ.

ಈ ಮಾತು ಹೇಳುತ್ತಿದ್ದಾಗಲೂ ಅವನ ಕಣ್ಮುಂದೆ ರಂಜಿತಾಳೇ ಇದ್ದಳು. ಮಾತು ಮುಗಿಯುತ್ತಲೇ ಅವನ ಮನಃಪಟಲದಲ್ಲಿ ಕಾಳಿಯಂತೆ ನಿಂತು 'ಮದುವೆಯಾದ ನಂತರ ಬೇರೊಂದು ಹುಡುಗಿಯ ಬಳಿ ನೀನೇನಾದರೂ

ಮಾತನಾಡಿದ್ದಾದರೆ ಈ ಬಾರಿ ನಿನ್ನ ಮುಖ್ಯವಾದ ಅಂಗಗಳನ್ನು ಶಾಶ್ವತವಾಗಿ ಮಾಯ ಮಾಡುತ್ತೇನೆ' ಎಂದು ಹೇಳಿದಂತೆ ಅನಿಸಿತು.

ಅವನ ಯೋಚನಾಲಹರಿಯನ್ನು ಕಂಡುಕೊಂಡ ಜಯದೇವ್ "ರಂಜಿತಾಳಿಗೆ ಅಡ್ಡಿಯೇನೂ ಇರದು. ಆಕೆಯ ತಂದೆತಾಯಿಗಳೂ ಆ ಬಗ್ಗೆ ವಿರೋಧ ಹೇಳುವದಿಲ್ಲ. ಭವಾನಿಶಂಕರ್ ನಮಗೆ ತುಂಬಾ ಚೆನ್ನಾಗಿ ಗೊತ್ತಿದ್ದವರು" ಎಂದರು.

ಷಾಡೋ ಒಡನೆಯೇ ಬಾಯ್ತಾಕಿ ನುಡಿದ. ಮೊದಲು ನಾನೊಂದು ಮಾತು ಹೇಳಬೇಕೆನಿಸುತ್ತೆ. ನಮ್ಮ ತಂದೆಯವರ ಆಸ್ತಿ ನನಗೆ ಬರುವುದಿಲ್ಲ. ಅದೆಲ್ಲಾ ಪಾರ್ಟಿಗೆ ಹೋಗುತ್ತದೆ. ಆ ಸಂಗತಿ ಮೊದಲೇ ಅವರಿಗೆ ತಿಳಿಸಿ. ಈ ವಿಷಯ ತಿಳಿದ ನಂತರವೂ ಅವರು ಒಪ್ಪಿಕೊಂಡರೆ ಮದುವೆ ನಡೆಯುತ್ತದೆ. ನನ್ನ ಸಂತೋಷಕ್ಕಾಗಿ ನಾನು ನಂಬಿದ ತತ್ವವನ್ನೇ ಕೈಬಿಡಲು ಸಾಧ್ಯವಾಗದು."

ಜಯದೇವ್ ನಗುತ್ತಾ "ಇದೆಲ್ಲಾ ನನಗೆ ಮೊದಲೇ ಗೊತ್ತಪ್ಪಾ! ರಂಜಿತಾ ತಾಯಿಗೆ ಹಣವೆಂದರೆ ತುಂಬಾ ಆಸೆ. ಆದರೆ ಈಗಿನ ಸ್ಥಿತಿಯಲ್ಲಿ ಆಕೆ ಕೂಡ ವಿರೋಧಿಸುವುದಿಲ್ಲ ಎಂದುಕೊಂಡಿದ್ದೇನೆ" ಎಂದರು.

ಷಾಡೋ ಎದ್ದು ಕೈಚಾಚಿ "ನಾನಿನ್ನು ಬರುತ್ತೇನೆ" ಎಂದ.

ಜಯದೇವ ಕೂಡ ಎದ್ದು ಕೈಕುಲುಕುತ್ತಾ "ಎಷ್ಟು ಬೇಗ ಈ ಮದುವೆ ನಡೆದರೆ ಅಷ್ಟು ಒಳ್ಳೆಯದು" ಎಂದರು.

"ಮುಂದಿನ ತಿಂಗಳಲ್ಲಿ ತಂಗಿಯ ಹೆರಿಗೆ ನಂತರದ ತಿಂಗಳಲ್ಲಿ ಮದುವೆ ಆಗಬಹುದು."

"ಗುಡ್, ಈ ಸುದ್ದಿ ಗೊತ್ತಾಗುತ್ತಲೇ ರಂಜಿತಾಳ ಮನೋವ್ಯಾಧಿ ಅರ್ಧ ಗುಣವಾಗುತ್ತದೆ."

"ನಾನಿನ್ನು ಬರುತ್ತೇನೆ"

"ಒಳ್ಳೆಯದು"

ಷಾಡೋ ಹೊರಕ್ಕೆ ನಡೆದ.

ಅದುವರೆವಿಗೂ ಕಿಟಕಿಯ ಹಿಂದೆ ಮರೆಯಲ್ಲಿ ನಿಂತು ಅವರ ಮಾತು ಕೇಳುತ್ತಿದ್ದ ರಂಜಿತಾ ಬಾಯಲ್ಲಿ ಸೆರಗನ್ನು ತುರುಕಿಕೊಂಡು ನಗುವನ್ನು ತಡೆದುಕೊಳ್ಳುತ್ತಿದ್ದಳು. ಬರುಬರುತ್ತಾ ಮಾತು ಆಕೆ ನಿರೀಕ್ಷಿಸದ ಕಡೆಗೆ ತಿರುಗುತ್ತಲೇ ನಾಚಿಕೆಯಿಂದ ಒಳಕ್ಕೆ ಸದ್ದಿಲ್ಲದೆ ಹೋಗಬೇಕಾಯಿತು. ಈ ಪರಿಸ್ಥಿತಿ ಹೀಗೆ ರೂಪುಗೊಳ್ಳುತ್ತದೆ ಎಂಬುದನ್ನು ಊಹಿಸಿದ್ದಳಾದರೂ ಅದು ಇಷ್ಟು ಬೇಗನೇ ಎದುರಾಗುತ್ತದೆ ಎಂದುಕೊಂಡಿರಲಿಲ್ಲ. ಹಣವೆಂದರೆ ಅತ್ಯಂತ

ಆಸೆ ಇರಿಸಿಕೊಂಡಿರುವ ತಾಯಿಯನ್ನು 'ನನ್ನ ಮಗಳಿಗೆ ಇನ್ನು ಮುಂದೆ ಮದುವೆಯೇ ಆಗುವ ಅವಕಾಶ ದೊರೆಯುವುದೇ ಇಲ್ಲ' ಎಂಬ ಅನುಮಾನ ತುಂಬಾ ಬಲವಾಗಿ ಬೇರು ಬಿಡುವ ತನಕ ಯಾವುದೋ ತತ್ವಕ್ಕೆ ಅಂಟಿಕೊಂಡು ತನ್ನ ಆಸ್ತಿಯನ್ನೆಲ್ಲಾ ದಾನ ಮಾಡುತ್ತಿರುವ ಷಾಡೋನಂತಹ ಹುಚ್ಚನನ್ನು ತನ್ನ ಅಳಿಯನನ್ನಾಗಿ ಮಾಡಿಕೊಳ್ಳಲು ಖಂಡಿತ ಒಪ್ಪುವುದಿಲ್ಲ ಎಂಬುದನ್ನು ಮೊದಲೇ ಊಹಿಸಿದ್ದಳು. ಷಾಡೋನಂತಹ ಸ್ಫುರದ್ರೂಪಿ ಹುಚ್ಚನಾದರೂ, ಅಂಥವನಿಗಾಗಿ ಹುಡುಗಿಯರು ಯಾವುದಕ್ಕಾದರೂ ಸಿದ್ಧರಾಗುತ್ತಾರೆ ಎಂಬುದನ್ನು ರಂಜಿತಾ ನಿರೂಪಿಸುವಂತಿದ್ದಳು. 'ಸದ್ಯೋಗರ್ಭವೇ ನಿನಗೆ ವಂದನೆ!!' ಎಂದುಕೊಂಡಳು. ಕುಂತಿದೇವಿ–ಸೂರ್ಯನಿಗೆ ನಮಸ್ಕಾರ ಪದೇ ಪದೇ ಸಲ್ಲಿಸಿದಳು.

ಆ ನಂತರವೇ ರವಿಯೊಂದಿಗೆ ತಾಪತ್ರಯ ಬಂದಿದ್ದು.

ರವಿ ಬಂದಾಗಲೆಲ್ಲಾ ಚುಡಾಯಿಸಲು ಪ್ರಾರಂಭಿಸಿದ. "ಎಲ್ಲೋ ಓದಿದ್ದೆ ಹೆಂಗಸರಿಗೆ ಬುದ್ಧಿ ಮೆದುಳಿಗೆ ಸರಿಯಾಗಿ ಮೂರು ಅಡಿ ಕೆಳಗೆ ಇರುತ್ತದಂತೆ. ಅದನ್ನ ತುಂಬಾ ಚೆನ್ನಾಗಿ ನಿರೂಪಿಸಿದೆ!"

ರಂಜಿತಾ ಕೋಪದಿಂದ ಕುದಿಯುತ್ತಾ "ಏಕೆ?" ಎಂದಳು.

"ಹೋಗುವಾಗ ಹುಲಿಯಂತೆ ಹೋಗಿ ಬಾಬಾ ಶಾಪ ಕೊಡುತ್ತಲೇ ಇಲಿಯಾದೆ. ಏನೇ ಆಗಲಿ ದೆವ್ವಗಳನ್ನು, ಶಾಪಗಳನ್ನು ನಂಬುವವರು ಈ ರೀತಿ ಸಾಹಸಗಳಿಗೆ ಕೈಹಾಕಬಾರದು. ಇಲ್ಲದಿದ್ದರೆ ನಿನ್ನಂತೆ ಬೆದರಿ ಬೆತ್ತವಾಗುತ್ತಾರೆ."

ರಂಜಿತಾ ಮೌನವಾಗಿ ಓರೆನೋಟದಿಂದ ಅವನನ್ನು ನೋಡುತ್ತಾ "ಹಾಗೇ ಮಾತನಾಡ್ತಾ ಇರು. ಮೊದಲ ರಾತ್ರಿಯೇ ವಾಂತಿ ಮಾಡಿಕೊಂಡು ನೀನು ಬೆದರಿ ಬೆಕ್ಕಾಗುವಂತೆ ಮಾಡದಿದ್ದರೆ ನನ್ನ ಹೆಸರೇ ರಂಜಿತಾ ಅಲ್ಲ....' ಎಂದುಕೊಳ್ಳುತ್ತಿದ್ದಳು.

* * * *

"ಆ ರವಿ ಆಸ್ತಿಯನ್ನೆಲ್ಲಾ ದಾನ ಮಾಡುತ್ತಿದ್ದಾನೆ. ಅವನಿಗೆ ಬೇವಿನ ಕಾಯಿ ಗಾತ್ರದ ಹುಚ್ಚಿರುವಂತಿದೆ" ಎಂದ ರಾಕೇಶ್.

"ಅವನ ಆಸ್ತಿ, ಅವನಿಗೆ ಮನಸ್ಸು ಬಂದಂತೆ ಮಾಡಲಿಬಿಡು, ಮಧ್ಯೆ ನಿನ್ನದೇನು?" ಎಂದ ಪಕ್ಕದಲ್ಲಿದ್ದ ಉಸ್ಕೋಕ್ ಸದಸ್ಯ.

"ಭವಾನಿಶಂಕರ್ ಸತ್ತ ಸುದ್ದಿ ಅವನಿಗೆ ಇನ್ನೂ ಸ್ವಲ್ಪ ಕಾಲ ತಿಳಿಯದೆ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಆಗ ಅದೆಲ್ಲಾ ಕೇದಾರಗೌರಿಗೇ ಬಂದು ನನಗೆ ಸೇರುತ್ತಿತ್ತು!" ಎಂದು ಒಂದು ನಿಮಿಷ ನಿಲ್ಲಿಸಿ "ಆಗಲಿ ಕೊನೆಯ ಪ್ರಯತ್ನ

ಮಾಡುತ್ತೇನೆ" ಎಂದ ಗಂಭೀರ ಧ್ವನಿಯಲ್ಲಿ.

"ಏನು ಮಾಡುತ್ತೀ?"

"ನನ್ನ ಪಾಲು ಕೊಡಿ ಎಂದು ಕೇಳುತ್ತೇನೆ"

"ಉಸ್ಸೋಕನಲ್ಲಿ ರೆಡ್‌ಸ್ಕೆಲಿಟನ್, ಇನ್ನೇನು ಒಂದೆರಡು ವಾರಗಳಲ್ಲಿ ಅಷ್ಟಾವಕ್ರನ ಅಂಗರಕ್ಷಕನಾಗುತ್ತೀ, ಈ ಸಣ್ಣ ಆಸ್ತಿಯ ಗೋಜೇಕೆ?"

"ಅದನ್ನ ಹಾಗೆ ಅರ್ಥಮಾಡಬಾರದು. ಬರುವ ಆಸ್ತಿ ಬಿಡುವುದೇಕೆ?" ಎಂದು ಹೊರಟ ರಾಕೇಶ್. ಅಷ್ಟಾವಕ್ರನನ್ನು ಬೆಳೆಸಿ ದೊಡ್ಡವನನ್ನಾಗಿ ಮಾಡಲು ತುಂಬಾ ಹಣ ಬೇಕಾಗುತ್ತದೆ ಎಂಬುದು ರಾಕೇಶ್ ಬಲ್ಲ. ಏನೂ ಅರಿಯದ ಕೇದಾರಗೌರಿ ಎರಡು ಲಕ್ಷ ಕೊಡದಿದ್ದರೆ ಕ್ಷುದಕ್ಷಯಜ್ಞ ಇಷ್ಟು ಸುಲಭವಾಗಿ ನಡೆಯುತ್ತಿತ್ತೆ? ನಗರವನ್ನು ಸೇರುವ ವೇಳೆಗೆ ಆರು ಗಂಟೆಯಾಗಿತ್ತು. ಮುಸಕು ಕತ್ತಲೆಯಾವರಿಸಿತ್ತು.

ಅದೇ ಸಮಯಕ್ಕೆ ರವಿ ಮತ್ತು ರಂಜಿತಾ ಮನೆಯಲ್ಲಿಯ ವಸ್ತುಗಳನ್ನೆಲ್ಲಾ ಸಂಗ್ರಹಿಸುತ್ತಿದ್ದರು. ನಗರದ ಈ ದೊಡ್ಡ ಬಂಗಲೆಯನ್ನು ಪಾರ್ಟಿ ಕಾರ್ಯಾಲಯಕ್ಕಾಗಿ ದಾನ ಮಾಡಿದ್ದ. ಮನೆಯಲ್ಲಿ ಉಳಿದಿದ್ದ ವಸ್ತುಗಳನ್ನೆಲ್ಲಾ ಸಂಗ್ರಹಿಸುತ್ತಿದ್ದರು ಅವರು.

ಭಾವೀ ದಂಪತಿಗಳಾದ್ದರಿಂದ ಅವರಿಬ್ಬರೂ ಆ ರೀತಿ ಓಡಾಡುವುದನ್ನು ಯಾರೂ ನಿಷೇಧಿಸಲಿಲ್ಲ. ಕೇದಾರಗೌರಿಯು ರಂಜಿತಾಳನ್ನು ಮೊದಲೇ ಮೆಚ್ಚಿದ್ದಳು. ಇದು ಎಲ್ಲಾ ಸಮಸ್ಯೆಗಳನ್ನು ದೂರ ಮಾಡಿತು.

ಮನೆಯಲ್ಲಿದ್ದ ಕೆಲವು ವಸ್ತುಗಳನ್ನು ಗೌರಿಗೆ ಕೊಟ್ಟಿದ್ದ ರವಿ. ತಂದೆಯ ಬ್ಯಾಂಕ್ ಲೆಕ್ಕ, ವ್ಯಾಪಾರದ ಲೇವಾದೇವಿಗಳನ್ನು ಲೆಕ್ಕಿಸಿ ಗುರ್ತಿಸಲು ನಾಲ್ಕು ದಿನಗಳು ಬೇಕಾಯಿತು. ಒಳ್ಳೆಯ ಬೆಲೆಗೆ ವ್ಯಾಪಾರವನ್ನೇ ಮಾರಿದ. ತಾನು ತಾನಾಗಿಯೇ ಬದುಕಬೇಕೆಂಬ ಆಸೆ. ಆದ್ದರಿಂದ ಆ ಹಣವನ್ನೂ ಪಾರ್ಟಿಗೆ ಕೊಟ್ಟ.

ರಂಜಿತಾಳಿಗೆ ಕಮ್ಯೂನಿಸ್ಟರ ಬಗ್ಗೆ ಹೆಚ್ಚು ಗೊತ್ತಿಲ್ಲ. ಕಮ್ಯೂನಿಸ್ಟರು ಸ್ವಾತಂತ್ರ್ಯ ಬಂದ ಹೊಸದರಲ್ಲಿ ಹಣವನ್ನು ಮಾತ್ರವಲ್ಲ ಹೆಂಡತಿ ಮಕ್ಕಳನ್ನು ಹೇಗೆ ತ್ಯಾಗ ಮಾಡಿದರು ಎಂಬ ಸಂಗತಿಯಾಗಲಿ, ನಿಜವಾದ ಕಮ್ಯೂನಿಸಂ ಎಂದರೆ ಏನು ಎಂಬುದಾಗಲಿ ಆಕೆಗೆ ಗೊತ್ತಿರಲಿಲ್ಲ.

ದಿನದಿನಕ್ಕೂ ಅವನ ಬಗ್ಗೆ ಇಷ್ಟ ವೃದ್ಧಿಗೊಳ್ಳುತ್ತಿತ್ತು. ಆ ಇಷ್ಟವು ಪ್ರೇಮವಾಗಿ ಮಾರ್ಪಾಟುಗೊಳ್ಳಲು ಗೌರವವು ಬೆರೆಯುವುದು ಅವಶ್ಯವಾಗಿತ್ತು. ಹೊರಕ್ಕೆ ತೀರಾ ಸಾಧಾರಣವಾಗಿ, ಹಾಸ್ಯಪ್ರಿಯನಾಗಿ ಲಘುವರ್ತನೆ

ಯವನಾಗಿ ಕಾಣುವ ವ್ಯಕ್ತಿ ಅಂತರಂಗಕ್ಕಿಳಿದಂತೆಲ್ಲಾ ಅಷ್ಟೇ ಸಂಕೀರ್ಣನಾಗಿ ಕಾಣಿಸಿಕೊಳ್ಳುತ್ತಿದ್ದ. ಈ ಸಮಸ್ಯಾತ್ಮಕ ವ್ಯಕ್ತಿತ್ವವೇ ಎಲ್ಲರಲ್ಲೂ ಅವನ ಬಗ್ಗೆ ಅಭಿಮಾನ ಬೆಳೆಯುವುದಕ್ಕೆ ಕಾರಣವಾಗಿತ್ತು. ಆದ್ದರಿಂದ ರಂಜಿತಾಳಿಗೆ ತನ್ನ ನಿರ್ಣಯದ ಬಗ್ಗೆ ಹೆಮ್ಮೆ ಎನಿಸುತ್ತಿತ್ತು.

ಭವಾನಿಶಂಕರರ ಆಫೀಸು ಕೋಣೆಯಲ್ಲಿ ಉಳಿದಿದ್ದ ವಸ್ತುಗಳನ್ನು ಸಂಗ್ರಹಿಸುತ್ತಿದ್ದಳು. ಒಂದೊಂದೇ ವಸ್ತುವನ್ನು ತೆಗೆದು ಒಂದು ಕಾಗದದಲ್ಲಿ ಬರೆದುಕೊಂಡು ಬೇರೆಯಾಗಿಡುತ್ತಿದ್ದಳು. ಕೊನೆಗೆ ಟೇಬಲ್‌ನಲ್ಲಿ ಟೇಪ್ ರೆಕಾರ್ಡರ್ ಡಿಕ್ಟಾಫೋನ್ ಕಾಣಿಸಿತು. ಅವನ್ನು ಕೊಡಬಹುದು. ಆದರೆ ತಮ್ಮಲ್ಲಿ ಉಳಿಸಿಕೊಳ್ಳಬೇಕಾದ ವಸ್ತುಗಳಲ್ಲಿ ಕ್ಯಾಸೆಟ್ ಒಂದು.

ಭವಾನಿಶಂಕರ್ ಹೇಳಿರುವ ಕೊನೆಯ ಪತ್ರವೋ, ಸೂಚನೆಯೋ ಅದರಲ್ಲಿರಲು ಸಾಧ್ಯವಿದೆ. ಆತನ ನೆನಪಿಗಾಗಿ ಅದನ್ನು ಉಳಿಸಿಕೊಳ್ಳಬೇಕು. ಅದೇನೆಂದು ಕ್ಯಾಸೆಟ್ ತೆಗೆದು ನೋಡಿದಳು, ಕ್ಯಾಸೆಟ್‌ನಲ್ಲಿ ಟೇಪ್ ಒಂದು ಕಡೆ ಕೊನೆಗೆ ಬಂದು ನಿಂತಿರುವುದು ಗೊತ್ತಾಯಿತು. ಎಲ್ಲವನ್ನೂ ಹಿಂದಕ್ಕೆ ತಿರುಗಿಸಿ ಮತ್ತೆ ಪ್ಲೇ ಬಟನ್ ಒತ್ತಿದಳು.

ಏನೋ 'ಡಬ್' ಎಂದು ಬಿದ್ದ ಸದ್ದು. ನಂತರ ಮಾತು 'ಲೋ ಮುದುಕಾ!... ನಾನು ಕ್ರೂರ ಕಾಮಿಯೇ ಅದನ್ನೆ ಸಾಡಿಸ್ಟ್ ಅಂತಾರೆ. ಅದಕ್ಕಿಂತಲೂ ಒಳ್ಳೇ ಪದವಿದೆ–ಸ್ಕಿಜೋಫ್ರೇನಿಯಾ. ಮಾನವದ್ವೇಷಿ ನಾನು. ಹೊರನೋಟಕ್ಕೆ ಸಮಾಜದಲ್ಲಿ ಗೌರವ ಪ್ರತಿಷ್ಠೆಗಳ ಮನುಷ್ಯ. ನಿಮ್ಮೆಲ್ಲರಿಗೂ ಬೇಕಾದವನು. ಆದರೆ ನನ್ನೊಳಗೆ ನೀನು, ನಿನ್ನ ಮಗಳು ಎಂದರೆ ಜಿಗುಪ್ಸೆ. ನಿನ್ನ ಮಗಳ ಮೇಲೆ ಇನ್ನೂ ಭಯಂಕರವಾಗಿ ಸೇಡು ತೀರಿಸಿಕೊಳ್ಳುತ್ತೇನೆ.... ಉಸ್ಸೋಕ್ ಪ್ರಭುವಾದ ಕುಟ್ಟಿ ಸೈತಾನ್ ಅಷ್ಟಾವಕ್ರನ ರೂಪದಲ್ಲಿ ಭೂಮಿಯ ಮೇಲೆ ಅವತರಿಸಲಿದ್ದಾರೆ...ಅಷ್ಟಾವಕ್ರ ಹುಟ್ಟುವುದು ನಿನ್ನ ಮಗಳ ಹೊಟ್ಟೆಯಲ್ಲಿಯೇ...'

ರಂಜಿತಾಳ ಮುಖವೆಲ್ಲಾ ಅಸಹ್ಯ ಪೀಡೆಗೆ ತುತ್ತಾಗಿತ್ತು. ಮಾತು ಇನ್ನೂ ಪೂರ್ತಿಯಾಗಿರಲಿಲ್ಲ. ಇದನ್ನು ರವಿಗೆ ಹೇಳಬೇಕೆಂದು ಎದ್ದಳು.

ಅದೇ ಸಮಯಕ್ಕೆ ರಾಕೇಶ್ ಮನೆಯೊಳಕ್ಕೆ ಬಂದ. ಆಫೀಸ್‌ರೂಂನಲ್ಲಿ ತನ್ನ ಕಂಠ ಕೇಳಿ ಬಾಗಿಲ ಬಳಿಯೇ ನಿಂತ. ಮೊದಲಿಗೆ ಒಂದು ಕ್ಷಣ ಇದೇನೆಂಬುದು ಅರ್ಥವಾಗಲಿಲ್ಲ. ಕಿಟಕಿಯಲ್ಲಿ ಇಣುಕಿದ. ಆಕೆ ಅತ್ತ ತಿರುಗಿದ್ದಳು. ಟೇಪ್‌ರೆಕಾರ್ಡರ್ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಅದು ಭವಾನಿಶಂಕರ್‌ಗೆ ಸೇರಿದ್ದು ಎಂಬುದು ಒಡನೆಯೇ ಗೊತ್ತಾಯಿತು.

ಪರಿಸ್ಥಿತಿ ಅರ್ಥವಾಗಿತ್ತು. ಆ ಮನೆಯವನಾಗಿ ಓಡಾಡಿದ್ದ ಅವನಿಗೆ ಭವಾನಿಶಂಕರ್ ಅವರ ಡಿಕ್ಟಾಫೋನ್ ಬಗ್ಗೆ ತಿಳಿದಿತ್ತು. ತನ್ನ ಮಾತೆಲ್ಲಾ ರೆಕಾರ್ಡ್ ಆಗಿದೆ ಎಂಬುದನ್ನು ಗ್ರಹಿಸಿದ. ಬೇರ್ಯಾರಾಗಿದ್ದರೂ ಆ ಕ್ಷಣ ದಲ್ಲಿ ಏನು ಮಾಡಲೂ ತೋಚದೆ ತಲ್ಲಣಿಸುತ್ತಿದ್ದರು. ರಾಕೇಶ್ ಮೈತುಂಬಾ ವಿಷ ತುಂಬಿಕೊಂಡ ಪ್ರಾಣಿ. ಏನೂ ಚಿಂತಿಸಲಿಲ್ಲ. ಬೇರಿನ್ನಾರಾದರೂ ಇರು ವರೇ ಎಂದು ನೋಡಿದ. ಅಲ್ಲಾಗಲಿ, ವರಂಡಾದಲ್ಲಾಗಲಿ ಬೇರಾರೂ ಕಾಣಿಸ ಲಿಲ್ಲ. ಆಳುಗಳನ್ನೆಲ್ಲಾ ರವಿ ತುಂಬಾ ಮೊದಲೇ ಕೆಲಸದಿಂದ ತೆಗೆದಿದ್ದ. ಮನೆ ಎಲ್ಲಾ ಬರಿದಾಗಿತ್ತು.

ರಂಜಿತಾ ಟೇಪ್ ಆಫ್ ಮಾಡಿ ನಿಂತಳು. ಆಯಾಸದಿಂದ ಮಹಡಿಯ ಮೇಲೆ ಮಲಗಿದ್ದ ರವಿಯನ್ನು ಎಚ್ಚರಿಸಲೆಂದು ಬೇಗ ಬೇಗ ಹೊರಕ್ಕೆ ಬಂದಳು. ಮುಖವೆಲ್ಲಾ ಬೆವರಿತ್ತು, ಕೇಳಿದ್ದು ಅರ್ಥವಾಗದೆ, ಅರ್ಥವಾದು ದನ್ನು ಅನ್ವಯಿಸಿ ಅರಿಯಲಾರದೆ ತೊಳಲಾಡುತ್ತಿದ್ದಳು. ಕೈಕಾಲು ಆಡಿಸ ಲಾರದೆ ದಿಕ್ಕೇಗಾಣದ ಸ್ಥಿತಿಯಲ್ಲಿ ಕೋಣೆಯಿಂದ ಹೊರಬಂದಳು.

ಬರುತ್ತಿದ್ದಂತೆಯೇ ಹಿಂದಿನಿಂದ ಪೆಟ್ಟು...ತಲೆಯ ಮೇಲೆ ಪೆಟ್ಟು, ಚಿಟ್ಟನೇ ಚೀರುವಷ್ಟರಲ್ಲಿ ಮತ್ತೊಂದು ಪೆಟ್ಟು!

ರಾಕೇಶನ ಉದ್ದೇಶ ಅವಳನ್ನು ಕೊಲ್ಲುವುದು. ತನಗೆ ಸಂಬಂಧಿಸಿದಂತೆ ಯಾವ ಸಂಗತಿಯಾದರೂ ಸ್ವಲ್ಪವಾದರೂ ಹೊರಕ್ಕೆ ಬರುವ ಸಾಧ್ಯತೆ ಇದೆ ಎಂಬ ಅನುಮಾನದ ಸುಳಿವು ದೊರೆತರೂ ನಿರ್ದಾಕ್ಷಿಣ್ಯವಾಗಿ ಅವರನ್ನು ತೊಲಗಿಸುವುದು ಅವನಿಗೆ ಈ ಮೊದಲೇ ಅಭ್ಯಾಸವಾಗಿತ್ತು. ಆಫೀಸ್‌ರೂಂ ಪಕ್ಕದ ನೆಲದಲ್ಲಿ ಹುದುಗಿಸಿದ್ದ ಕಬ್ಬಿಣದ ಸಲಾಕೆಯನ್ನು ಎತ್ತಿಕೊಂಡು ಬಂದು ಬಾಗಿಲ ಪಕ್ಕದಲ್ಲಿ ನಿಂತ. ಆಕೆ ಒಳಗಿನಿಂದ ಬರುತ್ತಲೇ ನೆತ್ತಿಯ ಮೇಲೆ ಎರಡು ಬಾರಿ ಬಡಿದ. ಆಕೆ ನೆಲಕ್ಕೆ ಜಾರಿ ಬೀಳುತ್ತಿದ್ದಂತೆಯೇ ಮತ್ತೊಮ್ಮೆ ಬಡಿಯಲು ಕಬ್ಬಿಣದ ಸರಳನ್ನು ಮೇಲೆತ್ತಿದ. ಆ ಪೆಟ್ಟೂ ಬಿದ್ದಿದ್ದರೆ ಅವಳ ತಲೆ ಎರಡು ಹೋಳಾಗುತ್ತಿತ್ತು. ಅಷ್ಟರಲ್ಲಿ ದೂರದಲ್ಲಿ ಸದ್ದು ಕೇಳಿಸಿತು. ನೋಡಿದ–ರವಿ ಬರುತ್ತಿದ್ದಾನೆ.

ರಾಕೇಶ್ ಸದ್ದಾಗದಂತೆ ಒಡನೆಯೇ ಒಳಕ್ಕೆ ಓಡಿದ. ಟೇಬಲ್ ಹಿಂಭಾ ಗದಲ್ಲಿ ಅಡಗಿ ಕುಳಿತ. ಕೈಯಲ್ಲಿ ಕಬ್ಬಿಣದ ಸರಳು ಬಿಗಿಯಾಗಿ ಹಿಡಿದಿದ್ದ. ರವಿ ಒಳಕ್ಕೆ ಬಂದರೆ ಅವನನ್ನೂ ಕೊಲ್ಲಬೇಕೆಂದೇ ಆ ಕ್ಷಣದಲ್ಲಿ ತೀರ್ಮಾನಿಸಿದ್ದ.

ರಕ್ತದ ಮಡುವಿನಲ್ಲಿ ಬಿದ್ದಿದ್ದ ರಂಜಿತಾಳನ್ನು ನೋಡುತ್ತಲೇ ರವಿ ಗಾಬರಿಯಿಂದ "ರಂಜಿತಾ" ಎನ್ನುತ್ತಾ ಬಗ್ಗಿದ. ಅಷ್ಟರಲ್ಲಿ ಅವನ ಅನುಮಾನ

ಒಡನೆಯೇ ಕಳ್ಳನ ಮೇಲೆ ಹರಿಯಿತು. ಯಾರಾದರೂ ಕಳ್ಳ ಒಳಕ್ಕೆ ಬಂದು ಅವನಿಗೆ ಅಡ್ಡಿಯಾದುದಕ್ಕೆ ಹೀಗಾಯಿತೇನೋ ಎಂದುಕೊಂಡು ಆಫೀಸು ಕೋಣೆಯೊಳಕ್ಕೆ ಪ್ರವೇಶಿದ. ಕೋಣೆಯಲ್ಲೆಲ್ಲಾ ನೋಡಿದ. ವಸ್ತುಗಳ ಲೆಲ್ಲಾ ಸಕ್ರಮವಾಗಿ ತಮ್ಮ ಸ್ಥಳಗಳಲ್ಲಿಯೇ ಇದ್ದವು.

ಟೇಬಲ್ ಹಿಂದೆ ಅಡಗಿದ್ದ ರಾಕೇಶ್ ಉಸಿರು ಬಿಗಿ ಹಿಡಿದಿದ್ದ. ರವಿ ಒಂದು ಹೆಜ್ಜೆ ಮುಂದೆ ಬಂದರೆ ಅವನು ತನ್ನನ್ನು ನೋಡುವುದಕ್ಕೂ ಮೊದಲೇ ಅವನ ಮೇಲೆರಗಿ ಕೊಲ್ಲಬೇಕೆಂದುಕೊಂಡಿದ್ದ.

ಆದರೆ ರವಿ ಅಲ್ಲಿಗೆ ಬರಲೇ ಇಲ್ಲ. ನೇರವಾಗಿ ರಂಜಿತಾ ಕಡೆಗೆ ತಿರುಗಿ ಅವಳನ್ನು ಕೈಗಳಲ್ಲಿ ಎತ್ತಿಕೊಂಡು ಕಾರಿನ ಬಳಿಗೆ ಕೊಂಡೊಯ್ದ. ಆ ಸಮಯದಲ್ಲಿ ಮನೆಯ ಬಗ್ಗೆಯೂ ಅವನು ಗಮನಿಸಲಿಲ್ಲ.

ಕಾರು ವೇಗವಾಗಿ ಹೊರಟಿತು.

ಕಾರು ದೂರ ಹೋಯಿತೆಂಬುದನ್ನು ನಿಶ್ಚಯಿಸಿಕೊಂಡು ರಾಕೇಶ್ ಹೊರಬಂದ. ಅವನ ಕೈಯಲ್ಲಿ ಟೇಪ್‌ರೆಕಾರ್ಡರ್ ಇತ್ತು. ಅದನ್ನು ಎತ್ತಿಕೊಂಡು ತೋಟದೊಳಕ್ಕೆ ಹೋದ. ಸುತ್ತಮುತ್ತಲಲ್ಲಿ ಯಾರೂ ಇಲ್ಲವೆಂಬುದನ್ನು ತೀರ್ಮಾನಿಸಿಕೊಂಡು ಬಟನ್ ಅದುಮಿದ: 'ಅರ್ಥವಾಯಿತೇ... ನನ್ನನ್ನು ಬೇಡವೆಂದು ಸಿದ್ಧಾರ್ಥನನ್ನು ಮದುವೆಯಾದುನಕ್ಕೆ...' ಎಂದು ಕೇಳಿಸಿತು. ಅಲ್ಲಿಯವರೆವಿಗೂ ಕೇಳಿದ್ದಾಳೆ. ಒಡನೆಯೇ ಟೇಪನ್ನು ಹಿಂದಕ್ಕೆ ತಿರುಗಿಸಿ ಮೊದಲಿನಿಂದ ಕೇಳಿದ. ತನ್ನ ಪ್ರಸ್ತಾಪ ಎಲ್ಲೂ ಇಲ್ಲ.

ರಿಕಾರ್ಡರ್‌ನಿಂದ ಕ್ಯಾಸೆಟ್ ತೆಗೆದು ಬೆಂಕಿಯ ಕಡ್ಡಿಯಿಂದ ಟೇಪನ್ನು ಹೊತ್ತಿಸಿದ. ಟೇಪ್ ಭಗ್ಗನೆ ಉರಿದು ಹೋಯಿತು. ನಂತರ ರೆಕಾರ್ಡರ್ ತಂದು ಅದರ ಸ್ಥಾನದಲ್ಲಿ ಇರಿಸಿದ.

ಈಗ ರಾಕೇಶ್ ಯಾವ ರೀತಿಯಾಗಿಯೂ ಕಳವಳಗೊಂಡಿರಲಿಲ್ಲ. ರಂಜಿತಾಳಿಗೆ ಪ್ರಜ್ಞೆ ಬರಲು ಎರಡು ಮೂರು ಗಂಟೆಗಳಾದರೂ ಬೇಕೇಬೇಕು. ರಂಜಿತಾ ತನ್ನೊಂದಿಗೆ ಇದುವರೆಗೂ ಮಾತನಾಡಿಲ್ಲವಾದ್ದರಿಂದ ಸ್ವರ ಗುರ್ತಿಸುವ ಅವಕಾಶವಿಲ್ಲ. ಆ ಮಾತಿನಲ್ಲಿ ಎಲ್ಲೂ ಕೊಲೆ ಮಾಡಿದ್ದರ ಬಗ್ಗೆ ಅಥವ ಅದರ ಪ್ರಸ್ತಾಪವಿಲ್ಲ. ಭವಾನಿಶಂಕರ್ ಆಫೀಸಿನಲ್ಲಿ ಕೊಲೆಯಾದರೆಂಬುದನ್ನು ಆ ಮಾತಿನಿಂದ ಹೇಳುವುದು ಸಾಧ್ಯವೇ ಇಲ್ಲ.

ಆದರೂ ಯಾವುದೇ ರೀತಿಯಲ್ಲೂ ಎಚ್ಚರ ತಪ್ಪಿರಬಾರದೆಂದು ನೇರವಾಗಿ ಆಸ್ಪತ್ರೆಗೆ ಹೋದ. ರಂಜಿತಾ ಪ್ರಜ್ಞೆ ಬಂದನಂತರ ಅನುಮಾನಕ್ಕೆ ಗ್ರಾಸವಾಗುವಂತಹ ಹೇಳಿಕೆ ನೀಡಿದರೆ ಅಲ್ಲೇ ಅವಳ ಕಥೆ ಮುಗಿಸಬೇಕು.

ಆವಶ್ಯಕವಾದರೆ ಅವಳೊಂದಿಗೆ ರವಿಯನ್ನೂ ಮುಗಿಸಲು ಸನ್ನದ್ಧನಾಗಿಯೇ ಇದ್ದ. ಏನೇ ಆಗಲಿ ಭವಾನಿಶಂಕರ್ ಕೊಲೆ ಹೊರಬೀಳಬಾರದು. ಉಸ್ಲೋಕ್ ತನ್ನನ್ನು ರಕ್ಷಿಸುತ್ತದೆ ಎಂಬುದು ಅವನಿಗೆ ಗೊತ್ತು. ಜೇಬಿನಲ್ಲಿ ರಿವಾಲ್ವರ್ ಇತ್ತು.

ಬಹುಶಃ ಅದರ ಆವಶ್ಯಕತೆ ಇಲ್ಲವೇನೋ!

ಅವನ ಹಿಂದೆಯೇ ಎರಡು ಬೇಟೆಯ ನಾಯಿಗಳು ಬರುತ್ತಿವೆ. ಮೂರು ಅಡಿಗಳಿಗಿಂತಲೂ ಎತ್ತರವಾಗಿವೆ. ಅವಕ್ಕೆ ಇಬ್ಬರು ಮನುಷ್ಯರನ್ನು ಕೊಲ್ಲಲು ಎರಡು ನಿಮಿಷಕ್ಕಿಂತಲೂ ಹೆಚ್ಚು ಬೇಕಾಗಿರಲಿಲ್ಲ.

## ೨೪

"ಭವತೀ ಭಿಕ್ಷಾಂದೇಹಿ ಮಾತಾ ಅನ್ನಪೂರ್ಣೇಶ್ವರೀ"

ಮಟಮಟ ಮಧ್ಯಾಹ್ನ, ಬಿಸಿಲು ಕೆಂಡಗಳನ್ನು ಸುರಿಸುತ್ತಿರುವ ಸಮಯ. ಬಂಡೆಗಳೇ ಬಿರಿಯುವಷ್ಟು ಬಿಸಿ. ದೂರದಲ್ಲಿ ಒಂದು ಕರು ತನ್ನ ತಾಯಿಯಾಗಿ 'ಅಂಬಾ' ಎನ್ನುತ್ತಿದೆ. ಹಳ್ಳಿಯೆಲ್ಲಾ ಮಧ್ಯಾಹ್ನದ ಬಿಸಿಲಿಗೆ ಬಳಲಿ ನಿದ್ರಿಸುತ್ತಿರುವಂತೆ ತೋರಿಬರುತ್ತಿದೆ.

"ತಾಯೀ ಅನ್ನಪೂರ್ಣೇ, ಒಂದು ತುತ್ತು ಅನ್ನ ಹಾಕಮ್ಮಾ."

ಕೇದಾರಗೌರಿ ಮಂಚದಿಂದ ಏಳಲಾರದೆ ಸೋಮಾರಿತನದಿಂದ "ಮುಂದೆ ಹೋಗಪ್ಪಾ..." ಎಂದಳು. ಆಕೆಗೂ ಬಳಲಿಕೆ, ಈ ಬಿಸಿಲಿಗೆ ಅದು ಮತ್ತೂ ಉಲ್ಬಣಿಸಿತ್ತು. ತಿಂಗಳು ತುಂಬಿದಂತೆಲ್ಲಾ ನಿತ್ರಾಣವಾದಂತೆ ಅನುಭವ ಹೆಚ್ಚುತ್ತಿತ್ತು. ಡಾಕ್ಟರ್ ಕೂಡ ಹೆಚ್ಚು ಚಲಿಸದಿರಲು ಹೇಳಿದ್ದರು. ಸಾಧಾರಣ ಗರ್ಭದಂತೆ ಕಾಣುತ್ತಿರಲಿಲ್ಲ. ಏನೋ ಅನುಮಾನ, ಆದರೆ ಯಾವುದೂ ಸ್ಪಷ್ಟವಾಗಿಲ್ಲ. ಸ್ವಲ್ಪ ಚಲಿಸಿದರೂ ನೋವು, ದೇವರ ಮನೆಯ ಮೆಟ್ಟಲು ಹತ್ತುವಷ್ಟರಲ್ಲಿ ಗರ್ಭದಲ್ಲಿ ಮಗು ಒಂದೇ ಸಮನೆ ಒದ್ದಾಡಿದಂತೆ ಭಾವನೆ.

ಭಿಕ್ಷೆ ಕೇಳುತ್ತಿದ್ದ ವ್ಯಕ್ತಿ ಚಲಿಸದೆ ಅಲ್ಲೇ ನಿಂತಿದ್ದರಿಂದ ಮತ್ತೊಮ್ಮೆ ಮುಂದೆ ಹೋಗೆಂದಳು.

"ತಾಯೀ, ದಿನಕ್ಕೆ ಮೂರು ಮನೆಗಳಲ್ಲಿ ಮಾತ್ರವೇ ಬೇಡುತ್ತೇವೆ. ಹಾಗೇ ಭಿಕ್ಷೆ ಬೇಡಿದ ಊರಿನಲ್ಲಿ ರಾತ್ರಿಯನ್ನು ಕಳೆಯುವುದೂ ನಮ್ಮ ಪದ್ಧತಿಯಲ್ಲ. ಇಬ್ಬರು ಇಲ್ಲವೆಂದಿದ್ದಾರೆ. ಮೂರನೆಯದು ನಿಮ್ಮ ಮನೆ

ಹಸಿದಿರುವವನನ್ನೇ ಈ ಊರಿನಿಂದ ಕಳುಹಿಸುತ್ತೀಯಮ್ಮಾ....?"

ಈ ಮಾತುಗಳಲ್ಲಿದ್ದ ಸ್ಪಷ್ಟತೆ, ಸುಸಂಸ್ಕೃತ ಧ್ವನಿ ಆಕೆಯನ್ನು ಮಂಚದಿಂದ ಎಬ್ಬಿಸಿತು. ತಲೆ ಎತ್ತಿ ಕಿಟಕಿಯಿಂದ ಹೊರಕ್ಕೆ ನೋಡಿದಳು. ಅಜಾನುಬಾಹು. ಯೋಗಿಯಂತೆ ಕಾಂತಿಯಿಂದಿರುವ ಮುಖ. ನಡುನೆತ್ತಿಯ ಮೇಲಿರುವ ಸೂರ್ಯನೇ ಆತನ ಮುಖದಲ್ಲಿರುವಂತೆ ಕಾಣಿಸಿತು. ಆತನು ನಿಂತಿರುವ ಠೀವಿಗೆ ಸೂರ್ಯಕಿರಣಗಳೂ ಬಗ್ಗಿ ನಮಸ್ಕರಿಸುತ್ತಾ ಪಕ್ಕಕ್ಕೆ ಸರಿಯುತ್ತಿರುವಂತೆ ಕಾಣಿಸಿತು. ಭಿಕ್ಷುಕನಾಗಿ ಈಗ ಬೇಡುತ್ತಿದ್ದರೂ ನೋಟಕ್ಕೆ ಸ್ಫಟಿಕದಂತೆ ಸ್ವಚ್ಛವಾಗಿ ಕಾಣಿಸುತ್ತಿದ್ದ.

ಒಳಕ್ಕೆ ಹೋಗಿ ಇದ್ದದ್ದನ್ನು ತಂದು ಆತನ ಜೋಳಿಗೆಗೆ ಹಾಕಿದಳು.

ಭಿಕ್ಷೆ ನೀಡುತ್ತಿರುವ ಆಕೆಯನ್ನು ಆರ್ದ್ರ ನೇತ್ರಗಳಿಂದ ನೋಡುತ್ತಾ "ಒಳ್ಳೆಯ ಜಾಣ ಮಗನನ್ನು ಹೆರು ತಾಯೀ" ಎಂದು ಆಶೀರ್ವದಿಸಿದಂತೆ ನುಡಿದ.

ಬರಿದಾದ ಬಟ್ಟಲನ್ನೆತ್ತಿಕೊಂಡು ಮನೆಯೊಳಕ್ಕೆ ಹೋಗಲು ಸನ್ನದ್ಧಳಾಗುತ್ತಿದ್ದಂತೆ ಆತನ ನೋಟ ಆಕೆಯ ಹೊಟ್ಟೆಯ ಮೇಲೆ ಬಿತ್ತು. ಇದ್ದಕ್ಕಿದ್ದಂತೆಯೇ ಬಿಲ್ಲಿನೇಟು ತಿಂದ ಜಿಂಕೆಯಂತೆ ವಿಲವಿಲನೆ ಒದ್ದಾಡಿದ. "ಇಲ್ಲೇ..? ಇಲ್ಲೇನೇ?" ಎಂದು ಗೊಣಗಿದ. ಆತನ ಮುಖ ಬಿಳಿಚಿತ್ತು. ನೊಸಲಿನಿಂದ ಬೂದಿ ಉದುರಿತು. ಈ ಆಂದೋಳನಕ್ಕೆ ಸಿಲುಕಿ ಕಣ್ಣಿಂದ ಒಂದೆರಡು ಹನಿ ಉದುರಿದಂತೆ ಅಪ್ರಯತ್ನವಾಗಿ ಒಂದಡಿ ಹಿಂದಿರಿಸಿದ. "ಗರ್ಭ ಛಿದ್ರವಾಗಬೇಕು.... ತಾಯಿಗೆ ತೊಂದರೆಯಾದರೂ ಸರಿಯೇ ಗರ್ಭ ಛಿದ್ರವಾಗಲೇಬೇಕು. ಮಗು ಭೂಮಿಯ ಮೇಲೆ ಬರಬಾರದು" ಎಂದು ಗೊಣಗಿದ.

ಕೇದಾರಗೌರಿಗೆ ಇದೇನೂ ಅರ್ಥವಾಗಲಿಲ್ಲ. "ಏನು?" ಎಂದು ಕೇಳಿದಳು.

ಯಾರೋ ಆತನನ್ನು ಅನುಸರಿಸಿ ಓಡಿಸುತ್ತಿರುವಂತೆ ಬೇಗ ಬೇಗ ಬಡಬಡಿಸಿದ: "ಕುಟ್ಟಿ ಸೈತಾನ್ ಕಾಷ್ಮೋರಾ ರೂಪದಲ್ಲಿ ಭೂಮಿಯ ಮೇಲೆ ಬರದಂತೆ ಮಾಡಲು ಮಂತ್ರಜಲ ಬೇಕು. ಪಂಚ ಮಹಾಯಜ್ಞಗಳನ್ನು ನೆರವೇರಿಸಿ ಕಾಷ್ಮೋರಾ ಭೂಮಿಯ ಮೇಲೆ ಬರುವುದನ್ನು, ತಡೆಯುವುದನ್ನು ತಿಳಿದುಕೊಳ್ಳಲು ಹೇಳು. ತನ್ನ ಹಾಗೂ ತನ್ನ ಹೆಂಡತಿಯ ಜೀವವನ್ನು ಉಳಿಸಿಕೊಳ್ಳಲು ಎಚ್ಚರಿಸು. ಬೇಗ ಮಾಡಬೇಕು. ಹೆಚ್ಚು ಸಮಯವಿಲ್ಲ."

ಗೌರಿ ಹಾಗೆಯೇ ಆ ಮೆಟ್ಟಿಲ ಬಳಿ ತುಂಬಾ ಹೊತ್ತು ನಿಂತಿದ್ದಳು. ಆಕೆಗೆ ನಗು ಬಂತು–ಈ ಬಾರಿ ಮತ್ತೊಂದು ಹೆಸರು ಕೇಳಿಸಿತ್ತು. ಅಷ್ಟಾವಕ್ರ

ಅಲ್ಲ. ಏನೋ ಮೋರಾ...ಏನು ಮೋರಾ....ಆ್ಞಾ ಹೌದು ಕಾಷ್ಮೋರಾ....

ಎಲ್ಲಾ ಹೊಸ ಹೊಸ ಹೆಸರುಗಳು. ಕೇದಾರಗೌರಿ ನಗುತ್ತ ಒಳಗೆ ಹೋದಳು.

ಗಂಡ ಬರುವ ವೇಳೆಗೆ ಈ ಘಟನೆಯೇ ಮರೆತಿತ್ತು.

* * * *

ಸದ್ದಾಗದಂತೆ, ತನ್ನ ಇರವು ಒಳಗಿನವರಿಗೆ ಅರಿವಾಗದಂತೆ ರಾಕೇಶ್ ಕಿಟಕಿಯೊಳಗಿನಿಂದ ನೋಡಿದ—ಡಾಕ್ಟರ್ ಬ್ಯಾಂಡೇಜ್ ಕಟ್ಟಿ ಇಂಜೆಕ್ಷನ್ ಕೊಟ್ಟಿದ್ದ. "ಅದೃಷ್ಟ ಒಳ್ಳೆಯದು. ತಲೆಯಲ್ಲಿ ಕೂದಲು ಒತ್ತಾಗಿದ್ದುದರಿಂದ ಬುರುಡೆ ಉಳಿದಿದೆ. ಭಯಕ್ಕೆ ಪ್ರಜ್ಞೆ ತಪ್ಪಿದೆ ಅಷ್ಟೆ..."ಎಂದು ಹೇಳಿ ಡಾಕ್ಟರ್ ಅಲ್ಲಿಂದ ಹೋಗಿದ್ದರು. ಸ್ವಲ್ಪ ಹೊತ್ತಿಗೆ ಎಲ್ಲಾ ಸರಿಹೋಗುತ್ತದೆ ಎಂದು ಧೈರ್ಯ ಹೇಳಿದ್ದರು.

ರಂಜಿತಾ ಅತ್ತಿತ್ತ ಹೊರಳಿ ಮೆಲ್ಲನೆ ಕಣ್ತೆರೆದಳು. ರಾಕೇಶ್ ಕಿಟಕಿಯ ಬಳಿಯೇ ಇದ್ದ. ರವಿ ಆತುರದಿಂದ "ಹೇಗಿದೆ ರಂಜಿತಾ?" ಎಂದ.

"ಚೆನ್ನಾಗೆ ಇದೀನಿ."

"ಏನು ನಡೀತು?"

"ಮಾವಯ್ಯನವರ ಆಫೀಸ್‌ರೂಮಿನಲ್ಲಿಯ ವಸ್ತುಗಳನ್ನು ತೆಗೆದಿಡುತ್ತಿದ್ದೆ ಟೇಪ್‌ರಿಕಾರ್ಡ್‌ರ್ ಕಾಣಿಸಿತು. ಅವರ ಕೊನೆಯ ಮಾತುಗಳೇನಾದರೂ ಇರಬಹುದೆಂದು ಕ್ಯಾಸೆಟ್ ಕೇಳಿದೆ... ಅದರಲ್ಲಿ... ಅದರಲ್ಲಿ..." ಭಯದಿಂದ ಮಾತೇ ಹೊರಡಲಿಲ್ಲ.

ಕಿಟಕಿಯ ಹೊರಗಿನಿಂದ ಈ ಮಾತು ಕೇಳುತ್ತಿದ್ದ ರಾಕೇಶನ ಮುಷ್ಟಿ ಬಿಗಿಯಿತು. ಸುತ್ತಲೂ ನೋಡಿದ. ಜನರ್‍ಯಾರೂ ಇಲ್ಲ, ಅಷ್ಟು ದೂರದಿಂದ ಗುಂಡು ಹಾರಿಸುವದು ರಿಸ್ಕ್. ಆದರೂ ಅನಿವಾರ್ಯ.

ಅಷ್ಟರಲ್ಲಿ ಷಾಡೋ ಧ್ವನಿ ಕೇಳಿಸಿತು! "ಅದರಲ್ಲಿ ಏನಿತ್ತು?"

"ಕುಟ್ಟಿ ಸೈತಾನ್ ಅಂತಿತ್ತು....?"

"ಕುಟ್ಟಿ ಸೈತಾನ್....ಆಮೇಲೆ?" ಷಾಡೋ ಮತ್ತೆ ಕೇಳಿದ. ಆಕೆ ನೆನೆಸಿಕೊಳ್ಳಲು ಪ್ರಯತ್ನಿಸುತ್ತಿದ್ದಂತೆ ವಿಪರೀತವಾದ ತಲೆನೋವು ಪ್ರಾರಂಭವಾಯಿತು.

"ನನಗೆ ನೆನಪಿಲ್ಲ" ಎಂದು ತಲೆ ಕೊಡವಿಕೊಂಡಳು.

ರಾಕೇಶನಿಗೆ ಕೈಲಾಸ ಪರ್ವತ ನೆತ್ತಿಯಿಂದ ಇಳಿಸಿದಂತಾಯಿತು. ರಂಜಿತಾ ತನ್ನ ಧ್ವನಿ ಗುರ್ತಿಸಿಲ್ಲ. ಅಷ್ಟೇ ಬೇಕಾದದ್ದು. ಇನ್ನು ಯಾವ

ಸಮಸ್ಯೆಯೂ ಇಲ್ಲ. ತನ್ನ ಧ್ವನಿ ಗುರ್ತಿಸದೆ ಹೋದ ನಂತರ ಟೇಪ್ ಮಾಯವಾದ ನಂತರ ಆಕೆಗೆ ಯಾವ ಆಧಾರ ದೊರೆಯಲು ಸಾಧ್ಯ? ಅದರಲ್ಲಿ ಯಾವ ಸಾಕ್ಷ್ಯವೂ ಸಾಧ್ಯವಿಲ್ಲ. ಕೊಲೆಯ ಪ್ರಸ್ತಾಪವೇ ಬರುವುದಿಲ್ಲ. ಯಾವನೋ ಕಳ್ಳನೊಬ್ಬ ಒಳಕ್ಕೆ ನುಗ್ಗಿ ರಂಜಿತಾಳನ್ನು ಬಡಿದು ಮನೆಯಲ್ಲಿ ಏನೂ ದೊರೆಯದೆ ಹೋದ ಎಂದುಕೊಳ್ಳುತ್ತಾರೆ. ಅದೇ ರಾಕೇಶ್ ಕೂಡ ಬಯಸುವುದು.

ಅಷ್ಟರಲ್ಲಿ ಷಾಡೋ"ಸರಿ..ನೆನಪಿಲ್ಲದಿದ್ದರೆ ಬಿಡು" ಎಂದದ್ದು ಕೇಳಿಸಿತು.

ರಾಕೇಶ್ ಮುಖದಲ್ಲಿ ನಗೆ ಮೂಡಿತು. ಅವನಿಗೆ ಅಲ್ಲಿ ಇನ್ನೇನು ಕೆಲಸವೂ ಇರಲಿಲ್ಲ. ಅವನು ತನ್ನ ಬಾಳಿನಲ್ಲಿ ಮಾಡಿದ ಮೊದಲು ತಪ್ಪು ಉಸ್ನೋಕ್‌ನ ಸದಸ್ಯನಾಗಿ ಸೇರಿದ್ದು. ಎರಡನೆಯದು ಷಾಡೋವನ್ನು ತೀರಾ ಕಡಿಮೆಯೆಂದು ಅಂದಾಜು ಮಾಡಿದ್ದು.

'ನೆನಪಿಲ್ಲದಿದ್ದರೆ ಬಿಡು' ಎಂದು ಆ ಸಂಗತಿಯನ್ನು ಅಲ್ಲಿಗೆ ಕೈ ಬಿಟ್ಟಂತೆ ಮಾತನಾಡಿದ್ದರೂ ಅವನ ಮನ ಮಾತ್ರ ಅದೇ ಸಂಗತಿಯ ಬಗ್ಗೆ ಯೋಚಿಸುತ್ತಲೇ ಇತ್ತು:

'ಕುಟ್ಟ ಸೈತಾನ್ ಎಂಬ ಪದ ತಂದೆಯ ಕ್ಯಾಸೆಟ್‌ನಲ್ಲೇಕೆ ಬಂತು?'

ತಲೆಗೆ ಪೆಟ್ಟು ತಿಂದಿದ್ದ ರಂಜಿತಾಳನ್ನು ಆಗ ಒತ್ತಾಯಿಸಲಿಲ್ಲ. ಎರಡು ದಿನಗಳ ನಂತರ ರಂಜಿತಾ ಮಾಮೂಲಿನಂತಾದಾಗ ಮತ್ತೆ ಆ ಸಂಗತಿಯ ಪ್ರಸ್ತಾಪ ಮಾಡಿದ.

"ರಂಜಿತಾ ಆ ದಿನ ಟೇಪ್‌ರೆಕಾರ್ಡರ್‌ನಲ್ಲಿ ಏನು ಕೇಳಿದೆಯೋ ಅದೆಲ್ಲಾ ಹೇಳು. ನನಗೆ ಅದು ಬೇಕಾಗಿದೆ."

ಷಾಡೋನನ್ನು ವಿಚಿತ್ರವಾಗಿ ನೋಡುತ್ತಾ "ನನಗೆ ನೆನಪಿಲ್ಲ" ಎಂದಳು.

"ಹಾಗೆಂದರೆ ಹ್ಯಾಗೆ ರಂಜಿತಾ, ನೆನಪು ಮಾಡಿಕೋ."

"ಏನೋ ಹುಟ್ಟುವುದು... ಸಾಡಿಸ್ಟ್....ಹೀಗೇ ಏನೋ ಇತ್ತು."

"ರಂಜಿತಾ, ನೀನು ಏಕಸಂಧಿಗ್ರಾಹಿ. ಅಷ್ಟು ಮಾತ್ರ ಹೇಳಲಾರೆಯಾ?"

ರಂಜಿತಾ ಅವನನ್ನೇ ನೋಡುತ್ತಿದ್ದಳು. ಆಕೆಯ ನೆನಪನ್ನು ಹೊಗಳಿ ಉದ್ದೀಪನಗೊಳಿಸುವಂತೆ "ಕಾಗೆ, ಷಾಡೋ, ನೊಣ ಇಂಥ ಸಂಬಂಧವೇ ಇಲ್ಲದ ಪದಗಳನ್ನು ನೆನಪಿನಲ್ಲಿರಿಸಿಕೊಳ್ಳಬಲ್ಲ ನೀನು ನಾಲ್ಕೈದು ವಾಕ್ಯಗಳನ್ನು ನೆನಪಿನಲ್ಲಿರಿಸಿಕೊಳ್ಳುವುದು ಸಾಧ್ಯವಿಲ್ಲ ಎಂದು ಕೇಳಿ ನನಗೆ ನಂಬಿಕೆ ಇಲ್ಲ. ನೀನು ಒಂದೊಂದೇ ಪದ ಹೇಳುತ್ತಿರುವುದು ನನ್ನಲ್ಲಿ ಅನುಮಾನವನ್ನು ಉಲ್ಬಣಿಸುತ್ತಿದೆ. ಆದ್ದರಿಂದ ನೆನಪು ಮಾಡಿಕೋ... ಪ್ಲೀಸ್..."

ರಂಜಿತಾ ಕಣ್ಮುಚ್ಚಿಕೊಂಡಳು. ಷಾಡೋ ಪ್ರೋತ್ಸಾಹದ ಮಾತು ಕೇಳುತ್ತಿದ್ದಂತೆಲ್ಲಾ ಅವಳಲ್ಲಿ ಶಕ್ತಿ ಗುಣಿತಗೊಳ್ಳುತ್ತಿತ್ತು. ಎಲ್ಲಾ ಶಕ್ತಿಯನ್ನೂ ಸಂಗ್ರಹಿಸಿ ಯೋಚಿಸತೊಡಗಿದಳು. ಅವಳು ಏಕ ಸಂಧಿಗ್ರಾಹಿಯೇ. ಅದರಲ್ಲಿ ಸಂಶಯಕ್ಕೆ ಎಡೆಯೇ ಇರಲಿಲ್ಲ. ಆದರೆ ಆಗಿನ ಪರಿಸ್ಥಿತಿಯೇ ಬೇರೆ. ಭಯದಿಂದ ಕೇಳಿದಳು. ಅದರಲ್ಲೂ ಅರ್ಧಭಾಗ ಅರ್ಥವೇ ಆಗಿರಲಿಲ್ಲ. ಇದೆಲ್ಲಕ್ಕೂ ಶಿಖರವಾಗಿ ನೆತ್ತಿಯ ಮೇಲೆ ಬಿದ್ದ ಪೆಟ್ಟು. ಇವೆಲ್ಲದರಿಂದ ಆ ಮಾತುಗಳು ಮರೆತಿತ್ತು.

ಆದರೂ ನೆನಪು ಮಾಡಿಕೊಳ್ಳುತ್ತಿದ್ದಳು. ಸ್ವಲ್ಪ ಸ್ವಲ್ಪವಾಗಿ ಕತ್ತಲೆಯ ತೆರೆಗಳು ಕಳಚಿದಂತೆ. ಬೆಳಕು ಸ್ವಲ್ಪ ಸ್ವಲ್ಪವಾಗಿ ಕಾಣಿಸಿಕೊಂಡಂತೆ, ಕಣ್ಮುಚ್ಚಿಕೊಂಡೇ ಹೇಳಲು ಪ್ರಾರಂಭಿಸಿದಳು. ಮಿದುಳಲ್ಲಿ ಎಲ್ಲೋ ಒಳಪೊರೆಗಳ ಅಡಿಯಲ್ಲಿ ಅಡಗಿದ್ದ ಮಾತುಗಳು ಪ್ರವಾಹದಂತೆ ಹೊರಕ್ಕೆ ಉಕ್ಕಿತು.

"ಲೋ ಮುದುಕಾ....! ನಾನು ಕ್ರೂರ ಕಾಮಿಯೇ, ಅದನ್ನೇ ಸಾಡಿಸ್ಟ್ ಎನ್ನುತ್ತಾರೆ..." ಎಂದು ಹೇಳಲು ಪ್ರಾರಂಭಿಸಿದಳು. ತಾನು ಕೇಳಿದ್ದಷ್ಟನ್ನೂ ಯಥಾವತ್ತಾಗಿ ಹೇಳಿದಳು.

ಷಾಡೋ ನಿಶ್ಚೇತನಾದ. ತನ್ನ ತಂದೆಯ ಮುಂದೆ, ನಿಸ್ಸಹಾಯಕವಾದ ಸ್ಥಿತಿಯಲ್ಲಿ ಈ ಮಾತುಗಳು ರೆಕಾರ್ಡ್ ಆಗಿರಬೇಕು. ಈ ಬಗ್ಗೆ ಅವನು ಯೋಚಿಸುತ್ತಿರಲಿಲ್ಲ. ತನ್ನ ತಂಗಿಯ ಹೊಟ್ಟೆಯಲ್ಲಿ ಹುಟ್ಟಲಿರುವ ಮಗುವಿನ ಬಗ್ಗೆ ಯೋಚಿಸುತ್ತಿದ್ದ.

ಅಷ್ಟಾವಕ್ರ...! ಅ...ಷ್ಟಾ...ವ...ಕ್ರ!!— ಈ ಹೆಸರು ಮೊದಲೇ ಬೇರೆಲ್ಲೋ ಕೇಳಿದ್ದ ನೆನಪು. ಎಲ್ಲಿ...? ಎಲ್ಲಿ?

ಅವತಾರ್ ಬಾಬಾ ತನ್ನ ತಂಗಿಯನ್ನು ಶಪಿಸಿದಾಗ ಇದೇ ಪದ ಪ್ರಯೋಗಿಸಿದ್ದ ಎಂಬುದು ನೆನಪಾಯಿತು.

ಸಾಮಾನ್ಯವಾಗಿ ರೂಢಿಯಲ್ಲಿ ದೊರೆಯದ ಪದ. ಹಾಗಿದ್ದರೆ ಈ ಮಾತನ್ನು ತನ್ನ ತಂದೆಯ ಮುಂದೆಯೂ ನುಡಿಯಬೇಕಾದರೆ ಇದು ಕೇವಲ ಆಕಸ್ಮಿಕವೋ ಅಥವಾ ಬೇರ್ಯಾವ ಸಂಬಂಧವಾದರೂ ಇದೆಯೋ? ಅದನ್ನು ಟೇಪ್ ಮಾಡಿದ ನಂತರ ಅದನ್ನು ಬೇರಾರಿಗೂ ಹೇಳದೆ ಟೇಪ್ ಅಲ್ಲಿಯೇ ಏಕೆ ಇರಿಸಿದರು? ಅದರಲ್ಲೂ ತನ್ನ ಮಗಳಿಗೆ ಸಂಬಂಧಿಸಿದ್ದ ಈ ಸಂಗತಿಯಲ್ಲಿ ಆತ ಇಷ್ಟೊಂದು ಉಪೇಕ್ಷೆ ತೋರುವುದು ಸಾಧ್ಯವೇ ಇಲ್ಲ. ಕುಟ್ಟಿ ಸೈತಾನ್,

—ಏನೋ ಸ್ಫುರಿಸಿದಂತಾಗಿ ವೇಗವಾಗಿ ಮನೆಯನ್ನು ಸೇರಿಕೊಂಡ. ತಂದೆ ಸತ್ತಂದಿನಿಂದ ಮನೆಯನ್ನು ಹಾಗೇ ಇರಿಸಿದ್ದಾರೆ. ಯಾವ ಬದಲಾವಣೆಯನ್ನೂ ಮಾಡಿರಲಿಲ್ಲ. ಕೊನೆಗೆ ಮುರಿದಿದ್ದ ಬಾತ್‌ರೂಂ ಬಾಗಿಲೂ ಹಾಗೇ ಇತ್ತು.

ಪೊಲೀಸಿನವರೂ ಹೆಚ್ಚು ಶ್ರದ್ಧೆ ತೋರಿಸಿರಲಿಲ್ಲ. ಷಾಡೋ ಬಾಗಿಲನ್ನು ಪರೀಕ್ಷಾ ದೃಷ್ಟಿಯಿಂದ ನೋಡಿದ. ಅವನ ಅನುಮಾನ ನಿಜವಾಯಿತು. ಆಳುಗಳು ಬಾಗಿಲನ್ನು ಒಡೆದು ಬಾತ್‌ರೂಂ ಪ್ರವೇಶಿಸಿದ್ದರೆ ಒಳ ಚಿಲಕ ಮುರಿದಿರಬೇಕಲ್ಲವೇ? ಚಿಲಕ ಚೆನ್ನಾಗಿಯೇ ಇತ್ತು.

ಇನ್ನೂ ತಡಮಾಡಬಾರದೆಂದು ಮೊದಲಿದ್ದ ಆಳುಗಳ ವಿಳಾಸಗಳೊಂದಿಗೆ ಹೊರಬಂದ. ಭವಾನಿಶಂಕರ್ ಸಾಯುತ್ತಲೇ ಅವರೆಲ್ಲಾ ಹೊರಟುಹೋಗಿದ್ದರು. ಮೊದಲನೆಯ ಆಳು ದೊರೆಯಲಿಲ್ಲ. ಅವನೆಲ್ಲಿ ಹೋದ ಎಂಬುದೂ ಗೊತ್ತಾಗಲಿಲ್ಲ. ಎರಡನೇಯವನೂ ಮನೆ ಖಾಲಿ ಮಾಡಿದ್ದ. "ಅವನು ಎಲ್ಲಿಗೆ ಹೋಗಿದ್ದಾನೆ ?" ಎಂದು ಹೊಸದಾಗಿ ಆ ಮನೆಗೆ ಬಂದವರನ್ನು ವಿಚಾರಿಸಿದಾಗ "ಗೊತ್ತಿಲ್ಲ" ಎಂದು ಉತ್ತರ ಬಂತು.

"ನಂತರ ಯಾವುದೋ ಊರು ಹೆಸರು ಹೇಳಿದ...ಏನಾದರೂ ಕಾಗದಗಳು ಬಂದರೆ ಇಟ್ಟಿರಿ, ಬಂದು ನಾನೇ ತಗೋಳ್ತೀನಿ ಎಂದು ಹೇಳಿದ" ಎಂದು ನಿಧಾನವಾಗಿ ಏನೋ ನೆಪವಾದವನಂತೆ ಹೇಳಿದ.

"ಯಾವ ಊರು ?" ಆತುರದಿಂದ ಕೇಳಿದ ಷಾಡೋ.

"ಅದೇನು ಊರು... ಆ್ಞ.... ಕೃಷ್ಣಾಪುರ."

ಷಾಕ್ ತಿಂದಂತಾಯಿತು ಷಾಡೋ ಪರಿಸ್ಥಿತಿ.

ಅವತಾರ್‌ಬಾಬಾ ಇರುವ ಊರು–ಕೃಷ್ಣಾಪುರ. ಆರು ಮಂದಿ ವಿಕೃತ ಶಿಶುಗಳು ಜನಿಸಿರುವ ಕೃಷ್ಣಾಪುರ. ತನ್ನ ತಂಗಿ ಇರುವ ಊರು.

ಏನೋ ಅನುಮಾನದಿಂದ ಬಳ್ಳಿ ಹಿಡಿದೆಳೆದರೆ ಮರವೇ ಆಡುತ್ತಿರುವಂತಿದೆ! ಇದೆಲ್ಲಾ ಏನು ?

ಅಲ್ಲಿಂದ ಕೃಷ್ಣಾಪುರಕ್ಕೆ ಹೋಗುತ್ತಿದ್ದಾಗಲೂ ಷಾಡೋ ಯೋಚನೆಯಲ್ಲಿಯೇ ಇದ್ದ. ಆಳುಗಳು ಸುಳ್ಳು ಸಾಕ್ಷ್ಯ ನೀಡಿದ್ದಾರೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತಲೇ ಇದೆ. ಹಾಗೇಕೆ ಅವರು ಹೇಳಬೇಕಾಯಿತು

ಎಂಬುದು ಗೊತ್ತಿಲ್ಲ. "ಅವರಲ್ಲಿ ಒಬ್ಬ ಕೃಷ್ಣಾಪುರದಲ್ಲಿದ್ದಾನೆ.

ಇದ್ದಕ್ಕಿದ್ದಂತೆಯೇ ಬಂದ ಅಣ್ಣನನ್ನು ಕಂಡು ಗೌರಿ ಕಾತುರದಿಂದ, "ರಂಜಿತಾ ಹೇಗಿದ್ದಾಳೆ ?" ಎಂದು ಕೇಳಿದಳು.

"ಚೆನ್ನಾಗಿದ್ದಾಳೆ "

"ಅಬ್ಬಾ....ನೀನು ಹೀಗೆ ಬಂದದ್ದು ನೋಡಿ ನನಗೆ ಭಯವಾಗಿತ್ತು!"

"ನನಗೆ ಸ್ವಲ್ಪ ಕೆಲಸವಿತ್ತು ಅದಕ್ಕೆ ಬಂದೆ."

"ಈ ಊರಲ್ಲಿ ನಿನಗೇನಪ್ಪಾ ಅಂಥಾ ಕೆಲಸ ?"

"ಇದೆ" ಆಗಲೇ ಅದನ್ನು ಹೇಳಲು ಷಾಡೋ ಬಯಸಲಿಲ್ಲ. ಸಂಜೆಯು ತನಕ ಕಾದಿದ್ದ. ಸಂಜೆಯಲ್ಲಿ ಮಾತಿನ ಮಧ್ಯೆ ಪ್ರಸ್ತಾಪಿಸಿದ. "ಅವತಾರ್ ಬಾಬಾ ನಿನಗೆ ಏನು ಹೇಳಿದ?"

"ಯಾವಾಗ?"

"ಅದೇ ನೀನು ಪ್ರಶ್ನೆ ಕೇಳಲು ಹೋಗಿದ್ದೆಯಲ್ಲ ಆಗ."

"ಅಯ್ಯೋ, ಅದೆಲ್ಲಾ ಮತ್ತೆ ಈಗೇಕೆ ?"

"ಹಾಗಲ್ಲವಮ್ಮಾ ಅದನ್ನು ಹೇಳು, ಅದೇನು...? ಷ್ಟಾ...ಷ್ಟಾ..."

"ಅಷ್ಟಾವಕ್ರ" ಎಂದಳು ಗೌರಿ.

ತಾನು ಕೇಳಿದ್ದು ಸರಿಯೇ. ಅಲ್ಲಿ ಟೇಪ್‌ರೆಕಾರ್ಡರಿನಲ್ಲಿ ಕೇಳಿಬಂದದ್ದೇ ಇಲ್ಲಿ ಅವತಾರ್ ಬಾಬಾ ಬಾಯಿಂದಲೂ ಬಂದಿದೆ. ಮನೆಯಿಂದ ಹೊರಕ್ಕೆ ಬರುತ್ತಾ ಜೇಬಿನಲ್ಲಿದ್ದ ಒಂದು ಕಾಗದದಲ್ಲಿ ಬರೆದಿರಿಸಿಕೊಂಡ— ಉಸ್ಸೋಕ್ ಪ್ರಭುವಾದ ಕುಟ್ಟಿ ಸೈತಾನ್ ಅಷ್ಟಾವಕ್ರನ ರೂಪದಲ್ಲಿ ಈ ಭೂಮಿಯ ಮೇಲೆ ಅವತರಿಸಲಿದ್ದಾನೆ....

ಕುಟ್ಟಿ ಸೈತಾನ್ ಎಂದರೆ ದೆವ್ವ ಎಂದು ಗೊತ್ತಾಗುತ್ತದೆ. ಇನ್ನು ಅರ್ಥವಾಗಬೇಕಾದದ್ದು ಒಂದೇ ಪದ ಉಸ್ಸೋಕ್.

ಹಾಗೆಂದರೇನು ?

ಉ....ಸ್ಸೋ....ಕ್....

ಷಾಡೋ ತಲೆಯ ನರಗಳು ಉಬ್ಬಿಬಿಗಿದವು. ಇಲ್ಲಿ ಗೌರಿಯನ್ನು ಬಾಬಾ ಶಪಿಸಿದ. ಅಲ್ಲಿ ತಂದೆಯ ಮುಂದೆ ಯಾರೋ ಅದೇ ಮಾತುಗಳನ್ನು ಹೇಳಿದ್ದಾರೆ. ನಿಸ್ಸಹಾಯಕ ಸ್ಥಿತಿಯಲ್ಲಿ ತಂದೆ ಅದನ್ನು ಕೇವಲ ಟೇಪ್ ಮಾಡಿದರು. ಟೇಪ್‌ನಲ್ಲಿದ್ದದ್ದು ಬಾಬಾ ಮಾತುಗಳಲ್ಲ. ಹಾಗೇನಾದರೂ ಆಗಿದ್ದರೆ ರಂಜಿತಾ ಖಂಡಿತ ಗುರ್ತಿಸುತ್ತಿದ್ದಳು. ಆದ್ದರಿಂದ ಕನಿಷ್ಠ ಇಬ್ಬರಿಗೆ ಉಸ್ಸೋಕ್ ಎಂದರೇನೋ ಗೊತ್ತು. ಅಷ್ಟೇ ಅಲ್ಲ, ಆಳುಗಳು ಕೃಷ್ಣಾಪುರವನ್ನೇ ಸೇರಿ

ಕೊಂಡಿದ್ದಾರೆ. ಕೃಷ್ಣಾಪುರದಲ್ಲಿ ಈಗ್ಗೇ ಆರು ವಿಕೃತ ಶಿಶುಗಳ ಜನನವಾಗಿದೆ.

ಆತ ಹುಟ್ಟುವಾಗಲೇ ತಾಯಿಯನ್ನು ಕೊಲ್ಲುತ್ತಾನೆ. ಹುಟ್ಟಿದ ದಿನವೇ ತಂದೆಯನ್ನೂ ಕೊಲ್ಲುತ್ತಾನೆ—ಏಯ್ ಮುದುಕಾ! ಈ ಮಾತು ಕೇಳಿ ಪ್ರಾಣವನ್ನು ಬಿಡು. ಅಷ್ಟಾವಕ್ರ ಹುಟ್ಟುವುದು ನಿನ್ನ ಮಗಳ ಹೊಟ್ಟೆಯಲ್ಲಿಯೇ...

ಮಾಮೂಲಿ ಪರಿಸ್ಥಿತಿಯಲ್ಲಾಗಿದ್ದರೆ ಅವನು ಇವ್ಯಾವನ್ನೂ ನಂಬುತ್ತಿರಲಿಲ್ಲ. ಬದಲಾಗಿ ನಗುತ್ತಿದ್ದ. ಆದರೆ ಈಗ ಅವನು ಆ ಸ್ಥಿತಿಯಲ್ಲಿರಲಿಲ್ಲ. ಏನೋ ಒಂದು ರೀತಿಯ ಸಂದಿಗ್ಧ ಅಪಾಯಕ್ಕೂ ಅದರ ಕಾರಣಕ್ಕೂ ಮಧ್ಯೆ ನಿಂತು ತೂಗಾಡುವ ಭಯ. ಇದನ್ನೆಲ್ಲಾ ಬಿಡಿಸುವುದು ಹೇಗೆ?

ಈ ಯೋಚನೆಯಲ್ಲೇ ಊರಿನ ಅಂಚಿಗೆ ಬಂದಿದ್ದ. ಅಲ್ಲಿಂದ ಅವತಾರ್ ಬಾಬಾ ಆಶ್ರಮದ ಬೀಡು ಪ್ರಾರಂಭವಾಗುತ್ತದೆ. ಮತ್ತೇ ಅದೇ ಯೋಚನೆಗಳ ಮಹಾಪೂರ.

ಮೊದಲು ಕೇದಾರಗೌರಿಯ ರೂಪ ಮನದಲ್ಲಿ ಕಾಣಿಸಿತು. ಅನಂತರ ಆ ಹಳ್ಳಿಯಲ್ಲಿ ನಡೆದಿದ್ದ ಆರು ವಿಕೃತ ಜನನಗಳು. ಅಂತಹ ವಿಕೃತ ಶಿಶುವೇ ಜನಿಸಿದರೆ...

ಈ ಯೋಚನೆಯೇ ಅವನಿಗೆ ಸಹ್ಯವಾಗಲಿಲ್ಲ.

ಏನಾದರೂ ಮಾಡಿ ಈ ರಹಸ್ಯವನ್ನು ಬಿಡಿಸಬೇಕು. ಎದುರಾಗಿ ಬಾಬಾ ಆಶ್ರಮವಿದೆ.

ಒಡನೆಯೇ ಒಂದು ಯೋಚನೆ ಬಂತು.... ತೀರಾ ಕಷ್ಟವಾದ ಕೆಲಸ. ತನ್ನ ಗುರಿಯಿಂದ ತುಂಬಾ ದೂರದಲ್ಲಿದ್ದ ಎಂಬುದು ನಿಜವೇ. ತನ್ನ ಪ್ರಯತ್ನ ಫಲ ನೀಡದೆಯೂ ಹೋಗಬಹುದು. ಸದ್ಯದ ಸ್ಥಿತಿಯಲ್ಲಿ ಅದರ ವಿನಾ ಬೇರೆಯ ಮಾರ್ಗವೇ ಇಲ್ಲ.

ನೇರವಾಗಿ ಆಶ್ರಮದತ್ತ ನಡೆದ.

ಅಲ್ಲಿ ಶಿಷ್ಯರ ವಿನಾ ಬೇರೆ ಯಾರೂ ಇರಲಿಲ್ಲ. ಭಕ್ತ ಜನ ಬಂದಿರಲಿಲ್ಲ. ಅತ್ತಿತ್ತ ನೋಡಿದ ಯಾರೂ ತನ್ನನ್ನು ಗಮನಿಸುತ್ತಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಂಡು ಇದ್ದಲಿನಿಂದ ಒಂದು ಗೋಡೆಯಮೇಲೆ ಕಂಡೂಕಾಣದಂತೆ ಬರೆದ :

ಉಸ್ಪೋಕ್.

ಡಾಕ್ಟರ್ ರಂಗಪ್ರಸಾದ್ ಒಳ ಕೋಣೆಯಿಂದ ಹೊರಬಂದ. ಒಳಗೆ ಲೇಡಿ ಡಾಕ್ಟರ್ ಇನ್ನೂ ಗೌರಿಯೊಂದಿಗೆ ಮಾತನಾಡುತ್ತಿದ್ದಳು.

"ಹೆರಿಗೆ ಯಾವಾಗ ಆಗಬಹುದು ಡಾಕ್ಟರ್" ಎಂದು ಹೊರಗೆ ಕಾಯುತ್ತಾ ಕುಳಿತಿದ್ದ ಸಿದ್ಧಾರ್ಥ ಕೇಳಿದ.

"ಇನ್ನೂ ಒಂದು ವಾರವಾದರೂ ಬೇಕು."

ಆಧುನಿಕ ಪರಿಸರಗಳ ನೆರವಿನಿಂದ ಪ್ರಸವ ಸಮಯವನ್ನು ಒಂದು ಗಂಟೆಯ ವ್ಯತ್ಯಾಸದಲ್ಲಿ ಸರಿಯಾಗಿ ಕಂಡುಕೊಳ್ಳುವುದು ಸಾಧ್ಯವಿದೆ.

ಸಿದ್ಧಾರ್ಥ ಕ್ಯಾಲೆಂಡರನ್ನು ನೋಡಿದ. ಏಳು ದಿನಗಳು ಸೇರಿಸಿದರೆ ನಂತರ! "ಅಂತೂ ಅಮಾವಾಸ್ಯೆಯ ದಿನವೇ ಪ್ರಸವ ಅಂತೀರಿ!" ಎಂದ.

ಅಷ್ಟರಲ್ಲಿ ಒಳಗಿನಿಂದ ಲೇಡಿ ಡಾಕ್ಟರ್ ಬಂದಳು. ರಂಗಪ್ರಸಾದ್ ಆಕೆಯನ್ನೇನೋ ಕೇಳಿದ. ಸಿದ್ಧಾರ್ಥನಿಗೆ ವೈದ್ಯಕೀಯ ಪದಗಳು ಸರಿಯಾಗಿ ಅರ್ಥವಾಗಲಿಲ್ಲ. ಆದರೂ ಲೇಡಿ ಡಾಕ್ಟರ್ ಮಾತು ಕೇಳಿ ರಂಗಪ್ರಸಾದ್ ಕಡೆ ತಿರುಗಿ "ಏನು? ಈಗ ಏನಾಗಿದೆ?" ಎಂದು ಕೇಳಿದ.

"ಏನೂ ಇಲ್ಲ. ಅವಳಿ ಮಕ್ಕಳು ಎಂದು ಅನುಮಾನಿಸುತ್ತಿದ್ದೇವೆ. ಪ್ರಸವಕ್ಕೆ ನಗರಕ್ಕೆ ಹೋದರೆ ಒಳ್ಳೆಯದೇನೋ ಎಂದು ಚರ್ಚಿಸುತ್ತಿದ್ದೇವೆ."

"ಆಗಲಿ, ಕರೆದುಕೊಂಡು ಹೋಗುತ್ತೇನೆ" ಎಂದ ಸಿದ್ಧಾರ್ಥ, ಒಳಗಿನಿಂದ ಬರುತ್ತಿದ್ದ ಗೌರಿ ಇದನ್ನು ಕೇಳಿಸಿಕೊಂಡು "ಏನು?" ಎಂದು ಪ್ರಶ್ನಿಸಿದಳು. ಸಿದ್ಧಾರ್ಥ ವಿವರಿಸಿದ.

ಗೌರಿ, ರಂಗಪ್ರಸಾದ್ ಕಡೆ ತಿರುಗಿ "ಏಕೆ?" ಎಂದು ಪ್ರಶ್ನಿಸಿದಳು. ಡಾಕ್ಟರ್ ಉತ್ತರಿಸುವುದಕ್ಕೂ ಮೊದಲೇ ಸಿದ್ಧಾರ್ಥ ಬಾಯಿ ಹಾಕಿ "ನಗರದ ಆಸ್ಪತ್ರೆಯಲ್ಲಿ ಹೆಚ್ಚು ಸೌಲಭ್ಯಗಳಿರುತ್ತವೆ" ಎಂದ. ಈ ಉತ್ತರವು ಆಕೆಯನ್ನು ತೃಪ್ತಿ ನೀಡಲಾರದೆಂದು "ಈ ಹಳ್ಳಿಯಲ್ಲಿ ಏನಾದರೂ ತುರ್ತಾಗಿ ಬೇಕು ಎಂದರೆ ದೊರೆಯುವುದಿಲ್ಲವಲ್ಲ. ಅದನ್ನೂ ಅವರು ಗಮನಿಸಿದ್ದಾರೆ" ಎಂದೂ ಸೇರಿಸಿದ.

ಸಿದ್ಧಾರ್ಥನೊಂದಿಗೆ ಮಾತನಾಡದೆ ರಂಗಪ್ರಸಾದ್ ಕಡೆ ತಿರುಗಿ

"ನಿಮ್ಮಲ್ಲಿ ಲಭಿಸದೆ ಇರುವ ಸವಲತ್ತುಗಳು, ವೈದ್ಯಕೀಯ ಪರಿಸರಗಳು ನಗರದಲ್ಲಿ ದೊರೆಯುತ್ತವೆ ಎನ್ನುತ್ತಿದ್ದೀರಲ್ಲಾ ಅವು ಯಾವುವು ಎಂದು ಹೇಳಬಲ್ಲಿರಾ?" ಎಂದು ಇಂಗ್ಲೀಷಿನಲ್ಲಿ ಪ್ರಶ್ನಿಸಿದಳು. ಯಾವಾಗಲೂ ತುಂಬಾ ಗೌರವದಿಂದ ವಿನಯವಾಗಿ ಮಾತನಾಡುವಾಕೆ ತುಂಬಾ ಪ್ರಯಾಸದಿಂದ ತನ್ನೆಲ್ಲಾ ಕೋಪ, ಬೇಸರಗಳನ್ನು ಈ ಮಾತಿನಲ್ಲಿ ಅಡಗಿಸಿದ್ದಾಳೆ ಎಂದು ಸ್ಪಷ್ಟವಾಗಿ ಭಾಸವಾಗುತ್ತಿತ್ತು.

ರಂಗಪ್ರಸಾದ್ ಕೂಡ ಉತ್ತರಿಸಲು ತಡಬಡಿಸಿದ. ಸಿದ್ಧಾರ್ಥನೇ ಮತ್ತೆ ಬಾಯಿ ಹಾಕಿ "ಡಾಕ್ಟರರು ಅವಳಿ ಮಕ್ಕಳಿರಬಹುದೆಂದು ಅನುಮಾನಿಸುತ್ತಿದ್ದಾರೆ. ಅದಕ್ಕೆ ನಗರವಾದರೆ ಒಳ್ಳೆಯದು ಎಂದು ಅವರ ಅಭಿಪ್ರಾಯ" ಎಂದ.

"ಈ ಆಸ್ಪತ್ರೆಯಲ್ಲಿ ಎಷ್ಟು ಅವಳಿ ಮಕ್ಕಳಿಗೆ ಅದಕ್ಕಿಂತಲೂ ಕಡು ಕಷ್ಟವಾದ ರೂಪಗಳೊಂದಿಗೆ ಹುಟ್ಟಿದವರಿಗೆ ಹೆರಿಗೆ ನಡೆದಿಲ್ಲ?"

"ಅದಕ್ಕೆ ಇಲ್ಲಿ ಬೇಡ ಅಂದಿದ್ದು" ಎಂದ ಸಿದ್ಧಾರ್ಥ ಏರಿಸಿದ ಸ್ವರದಲ್ಲಿ. ಈಗಾಗಲೇ ಅವನಿಗೆ ಕೋಪ ಬಂದಿತ್ತು.

ಗೌರಿ ತಲೆ ಎತ್ತಿ ಗಂಭೀರವಾಗಿ ಗಂಡನತ್ತ ನೋಡಿದಳು. ನಂತರ ರಂಗಪ್ರಸಾದ್ ಕಡೆ "ಈ ಆಸ್ಪತ್ರೆಯಲ್ಲಿ ಡೆಲಿವರಿ ಕೇಸ್ ನೋಡಿ ಎಷ್ಟು ದಿನವಾಯಿತು ಡಾಕ್ಟರ್?" ಎಂದು ಕೇಳಿದಳು.

ಸಂಬಂಧವಿಲ್ಲದ ಈ ಪ್ರಶ್ನೆಗೆ ಡಾಕ್ಟರ್ ಉತ್ತರಿಸಲಿಲ್ಲ. ಹೊಸದಾಗಿ ಬಂದ ಲೇಡಿ ಡಾಕ್ಟರ್ ಇವರನ್ನೇ ನೋಡುತ್ತಾ ಕುಳಿತಳು. ಗೌರಿ ತಾನೇ ಹೇಳತೊಡಗಿದಳು. ಮಾತು ನಿರರ್ಗಳವಾಗಿ ಹೊಮ್ಮಿಬರುತ್ತಿತ್ತು.

"ಮೊದಲು ಈ ಆಸ್ಪತ್ರೆ ರೋಗಿಗಳಿಂದ ಸದಾ ತುಂಬಿರುತ್ತಿತ್ತು. ಡಾಕ್ಟರ್ ಕೈಮುಟ್ಟಿ ನೋಡಿದರೆ ಸಾಕು ಎಂದು ಕಾಯುತ್ತಾ ಕುಳಿತಿರುತ್ತಿದ್ದರು. ಬರುತ್ತಿದ್ದ ರೋಗಿಗಳನ್ನು ಉಪಚರಿಸಲು ಸಾಧ್ಯವಾಗದೆ ಒಬ್ಬ ಲೇಡಿ ಡಾಕ್ಟರನ್ನು ಕೆಲಸಕ್ಕೆ ನಿಯಮಿಸಿಕೊಂಡಿದ್ದರು. ಆದರೆ ಈಗ ನೋಡಿ ಆಸ್ಪತ್ರೆ ಹೇಗೆ ಬರಿದಾಗಿದೆಯೋ. ಒಬ್ಬಿಬ್ಬರು ಮಾತ್ರವೇ ಇಲ್ಲಿಗೆ ಬರುತ್ತಾರೆ. ಮೊನ್ನೆ ಮೊನ್ನೆಯ ತನಕ ತಂಡ ತಂಡವಾಗಿ ಬರುತ್ತಿದ್ದ ಜನರನ್ನು ಬರದಂತೆ ಮಾಡಿರುವುದೇನು...? ಮೂರ್ಖತನ.... ಕೇವಲ ಮೂರ್ಖತನ! ಹೆರಿಗೆಗೆ ಸಿದ್ಧವಾಗಿದ್ದ ಮೂವರೂ ಈ ಹಳ್ಳಿ ಬಿಟ್ಟು ಹೋಗಿದ್ದಾರೆ. ಅವರು ಮೂವರೂ ಹಣವಿಲ್ಲದ ಬಡವರು—ಕೂಲಿಗಳು. ಆದರೂ ಹಣ ಜತೆಗೂಡಿಸಿಕೊಂಡು ಹೋಗಿದ್ದಾರೆ! ಈಗ ನಾವೂ ಹೋಗೋಣ ಎಂದು ನೀವು ಹೇಳುತ್ತಿದ್ದೀರಿ. ಅದಕ್ಕೆ ಕಾರಣವಾಗಿ ವೈದ್ಯಕೀಯ ಸೌಲಭ್ಯ, ಸವಲತ್ತು ಇತ್ಯಾದಿ

ಬಣ್ಣವನ್ನು ಕಟ್ಟುತ್ತಿದ್ದೀರಿ; ಆತ್ಮವಂಚನೆ ಮಾಡಿಕೊಳ್ಳುತ್ತಿದ್ದೀರಿ. ಆದರೆ ನಿಜವಾದ ಕಾರಣ ಅದಲ್ಲ; ಇಲ್ಲಿ ಆರು ವಿಕೃತ ಜನನಗಳಾಗಿವೆ. ನಮಗೇ ನಾಗುವುದೋ ಎನ್ನುವ ಭಯ. ಹೌದು ತಾನೇ? ಹೇಳಿ. ಆ ಭಯದಿಂದಲೇ ಹೆರಿಗೆ ಇಲ್ಲಿ ಬೇಡ ಎನ್ನುತ್ತಿದ್ದೀರಿ... ಹೇಳಿ....ಇದು ಸಣ್ಣ ಆಸ್ಪತ್ರೆ, ಅವಳಿ ಮಕ್ಕಳ ಹೆರಿಗೆ ನಿರ್ವಹಿಸಲು ಸಾಕಷ್ಟು ಸವಲತ್ತು ಪರಿಕರಗಳಿಲ್ಲ! ನೀವು ಹೇಳುತ್ತಿರುವಂತೆ ನಗರದ ಆಸ್ಪತ್ರೆಯಲ್ಲಿ ಇಲ್ಲಿ ಇಲ್ಲದೆ ಇರುವ ಎಲ್ಲಾ ಪರಿಕರಗಳೂ ನಿಜವಾಗಿ ಇವೆಯೇ? ಸತ್ಯವಾಗಿಯೂ ಇವೆ ಎಂದು ನೀವು ಪ್ರಮಾಣ ಮಾಡಿದರೆ ನಾನು ಖಂಡಿತವಾಗಿ ಬರುತ್ತೇನೆ....ಆದರೆ ಅಲ್ಲೇನೂ ಹೆಚ್ಚಾಗಿಲ್ಲ. ಅದು ನಿಮಗೂ ಗೊತ್ತಿದೆ. ಆಯುಸ್ಸಿರುವ ಮಗು ಅಲ್ಲಾದರೂ ಬದುಕುತ್ತದೆ ಇಲ್ಲಾದರೂ ಬದುಕುತ್ತದೆ...." ಕೇದಾರಗೌರಿ ಸಿದ್ಧಾರ್ಥನ ಬಳಿಗೆ ಬಂದು "ಎಲ್ಲವನ್ನೂ ಬಿಟ್ಟು ಬಡವರಿಗೆ ಸಹಾಯವಾಗಬೇಕೆಂಬ ಏಕೈಕ ಉದ್ದೇಶದಿಂದ ಡಾಕ್ಟರ್ ಈ ಹಳ್ಳಿಯಲ್ಲಿ ಪ್ರಾಕ್ಟೀಸ್ ಪ್ರಾರಂಭಿಸಿದರು. ಇವರ ಸೇವೆಗೆ ಮೆಚ್ಚಿ 'ಇವರೇ ದೇವರು!' ಎಂದರು. ರೋಗಿಗಳ ಪಾಲಿನ ಧನ್ವಂತರಿಯಾದರು.

"ವಾತಾವರಣ ಸ್ವಲ್ಪ ಬದಲಾಗುತ್ತಲೇ ಗುಂಡಿನ ಸದ್ದಿಗೆ ಹಾರಿ ಚದುರುವ ಹಕ್ಕಿಗಳ ಗುಂಪಿನಂತಾಯಿತು. ಒಂದು ಕಾಲದಲ್ಲಿ ರೋಗಿಗಳಿಂದ ತುಂಬಿ ತುಳುಕುತ್ತಿದ್ದ ಈ ನರ್ಸಿಂಗ್ ಹೋಂ ಈಗ ಓಬ್ಬ ರೋಗಿಯೂ ಇಲ್ಲದೆ ಬರಿದಾಗಿರುವುದರ ಕಾರಣವೇನೋ ನಿಮಗೂ ಗೊತ್ತು" ಅವಳ ಕಂಠ ರುದ್ಧಗೊಂಡಿತು. "ಮಾನವತೆಯ ಮೇಲೆ ನಂಬಿಕೆಯಿರಿಸಿ, ಸಾಧಾರಣ ಸುಖಗಳನ್ನೆಲ್ಲಾ ಬಿಟ್ಟು ಬಂದ ಈ ಡಾಕ್ಟರ್ ಬಲವಾದ ತೊಯ್ದಾಡುತ್ತಿರುವ ದೀಪಶಿಖೆಯನ್ನುಳಿಸಲು ಅಂಗೈ ಅಡ್ಡಯಿರಿಸಿ ಉಳಿಸಲು ಪ್ರಯತ್ನಿಸುತ್ತಿದ್ದಾರೆ. ಈಗ ನಾವು ಅವರಿಗೆ ನೆರವಾಗಿ ನಿಲ್ಲದೆ ಹೋದರೆ ನಗರದ ಆಧುನಿಕ ಸೌಲಭ್ಯದ ಹೆಸರಿನಲ್ಲಿ ಈ ದೀಪವನ್ನು ಇನ್ನೂ ಬೇಗ ಆರಿಸಲು ನೆರವಾಗುತ್ತೇವೆ. ಹಾಗೇನಾದರೂ ಆದರೆ ನಮ್ಮನ್ನು ದೇವರು ಕ್ಷಮಿಸುವುದಿಲ್ಲರೀ", ಆವೇಶದಿಂದ ಮಾತನಾಡುತ್ತಿದ್ದರೂ ಆಯಾಸದಿಂದ ಉಸಿರಾಟದ ವೇಗ ಹೆಚ್ಚಾಗಿತ್ತು. ಸಿದ್ಧಾರ್ಥ ತಡೆದರೂ ಆಕೆ ಮಾತು ನಿಲ್ಲಿಸಲಿಲ್ಲ. ತನ್ನ ದೃಢವಾದ ಸ್ವರದಲ್ಲಿ "ನಾನು ಈ ಆಸ್ಪತ್ರೆಯಲ್ಲಿಯೇ ಮಗುವನ್ನು ಹೆರುತ್ತೇನೆ. ಇಲ್ಲಿ ಯಾರು ಇಲ್ಲದಿದ್ದರೂ ಚಿಂತೆಯಿಲ್ಲ. ಇಲ್ಲಿ ನರ್ಸುಗಳೂ ಹೆದರಿ ಓಡಲಿ ನನಗೆ ಭಯವಿಲ್ಲ. ನಾನು ಮಾತ್ರ ಯಾವುದೇ ಕಾರಣಕ್ಕೆ ನಗರಕ್ಕೆ ಬರುವುದಿಲ್ಲ. ಈ ಆಸ್ಪತ್ರೆಗೆಲ್ಲಾ ನಾನೊಬ್ಬಳೇ ಇರುತ್ತೇನೆ," ಎನ್ನುತ್ತಾ ಡಾಕ್ಟರ್ ಕಡೆ ತಿರುಗಿ "ಡಾಕ್ಟರ್,

ನಿಮ್ಮಲ್ಲಿ ನಂಬಿಕೆ ಉಳಿಸಲು, ನಿಮ್ಮ ಜತೆಯಾಗಿ ಆ ನಂಬಿಕೆ ಸರಿಯೆಂದು ಸಾಧಿಸಲು ನಾನೂ ಇರುತ್ತೇನೆ. ಹಳ್ಳಕ್ಕೆ ಬಿದ್ದ ಹುಲಿಯ ಮೇಲೆ ಆಳಿಗೊಂದು ಕಲ್ಲೆಸೆಯುವ ಹೇಡಿ ಜನಗಳಿಂದ ನಂಬಿಕೆಯನ್ನು ರಕ್ಷಿಸಿ ಕಾಪಾಡಲು, ಅದೇ ಸಮಸ್ಯೆ ತನ್ನ ತನಕ ಬರುತ್ತಲೇ ಅದುವರೆವಿಗೂ ತಾನು ನಂಬಿದ್ದನ್ನೂ ಕೈಬಿಡುವ ಪುಕ್ಕಲುತನವನ್ನು ದೂರ ಇಡಲು ನಾನಿಲ್ಲಿಯೇ ಇರುತ್ತೇನೆ. ಈ ವಿಷಯದಲ್ಲಿ ಪ್ರಪಂಚವೆಲ್ಲಾ ನನಗೆ ವಿರೋಧವಾದರೂ ನಾನು ಯೋಚಿಸುವುದಿಲ್ಲ" ಎನ್ನುತ್ತಾ ಬೇಗ ಬೇಗ ಅಲ್ಲಿಂದ ಹೋದಳು.

ತುಂಬು ಬಸುರಿ ಚಲಿಸುತ್ತಿದ್ದರೆ ಹಿಮಾಲಯವನ್ನೇ ಡೋಲಾಯಮಾನಗೊಳಿಸುತ್ತಾ ಭೂಮಿಯ ಮೇಲಕ್ಕೆ ಬಾನಿನಿಂದ ಧುಮ್ಮಿಕ್ಕಿದ ದೇವಗಂಗೆಯು ನೆನಪಾಗುವಂತಿತ್ತು. ತೊರೆಯಾಗಿ ನೊರೆಯಾಗಿ ಉಕ್ಕಿದ ಸುರಗಂಗೆ, ಬಾನೇ ಬೆದರಲು, ಐರಾವತ ಅದುರಲು,ನಂದನವನ ನಡುಗಲು ಧುಮ್ಮಿಕ್ಕಿ ಧಾವಿಸಿದಳು. ದೇವಗಂಗೆ ಉನ್ಮತ್ತ ಮಾನಸ ವಿಹಂಗ ಪರಮ ರಾಜಸ ಭಾವ ಪರಿಚುಂಬಿತ ನಿಜಾಂಗ...ಎಂದು ಹಾಡಿದ ಕವಿಯ ನುಡಿ ಕಿವಿಯಲ್ಲಿ ಮೊರೆಯುವಂತಿತ್ತು.

ಕೇದಾರಗೌರಿ ಅಲ್ಲಿಂದ ಹೋದಳು.

ಡಾಕ್ಟರ್ ಹಾಗೆಯೇ ನಿಂತಿದ್ದ. ಅಭಿವ್ಯಕ್ತಿಗೆ ತೀರಾ ದೂರವಾಗಿರುವ ಭಾವ. ಅಂತಃಕರಣವನ್ನೆಲ್ಲಾ ತುಂಬಿ ಕಣ್ಣಿನ ಮೂಲಕ ಹೊರಸೂಸಲು ಪ್ರಯತ್ನಿಸುವ ಕರುಣೆ, ಹೃದಯವನ್ನು ತುಂಬಿದ ಅಭಿಮಾನ ಆತನನ್ನು ಕ್ರಮ ಕ್ರಮವಾಗಿ ಆಕ್ರಮಿಸಿಕೊಂಡಿತು.

ಕಳವಳಗೊಂಡ ಸಿದ್ಧಾರ್ಥ ಹೆಂಡತಿಯ ಹಿಂದೆ ಹೊರಟ. ಇದೇನು ಅರ್ಥ ಮಾಡಿಕೊಳ್ಳಲಾರದ ಲೇಡಿ ಡಾಕ್ಟರ್ ಹೋದಳು. ಅಲ್ಲಿ ಡಾಕ್ಟರ್ ಒಬ್ಬರೇ ಶಿಲಾಮೂರ್ತಿಯಂತೆ ನಿಂತೇ ಇದ್ದರು.

ಕ್ರಮ ಕ್ರಮವಾಗಿ ಆತನ ಕಣ್ಣನ್ನು ನೀರಿನ ಪೊರೆ ಆವರಿಸಿತು. ರೋಗಿಗಳೆಲ್ಲರೂ ಇದ್ದಕ್ಕಿದ್ದಂತೆಯೇ ಆಸ್ಪತ್ರೆಗೆ ಬರುವುದನ್ನುನಿಲ್ಲಿಸಿದ್ದರಿಂದ ಮಾನಸಿಕವಾಗಿ ತುಂಬಾ ನೋವನ್ನು ಅನುಭವಿಸುತ್ತಿದ್ದ. ಸೋಲಿನ ದವಡೆಗೆ ಸಿಲುಕಿಕೊಂಡವನಿಗೆ ಬೇಕಾಗಿರುವುದು ಸಾಂತ್ವನದ ನುಡಿಗಳಲ್ಲ; ಸಹಾನುಭೂತಿಯೂ ಅಲ್ಲ. ನಿನ್ನ ಕೆಲಸದಲ್ಲಿ ನೆರವಾಗಿ ನಿನ್ನೊಂದಿಗೆ ನಾನೂ ಇದ್ದೇನೆ ಎಂದು ತುಂಬಾ ಭಾರವಾಗಿರುವ ಹೊಣೆಗೆ ಹೆಗಲು ಕೊಡಲು ಸಿದ್ಧನಾಗಿ ಪಕ್ಕದಲ್ಲಿ ನಿಲ್ಲುವ ವ್ಯಕ್ತಿಯೇ! ತುಂಬಾ ಉದಾತ್ತ ರೀತಿಯಲ್ಲಿ ಗೌರಿ ಈ ಮಾತನ್ನು ಹೊರಹಾಕಿದ್ದಳು.

ಎರಡು ಅಡಿ ಮುಂದೆ ನಡೆದ. ಅಲ್ಲಿಯೇ ಕೇದಾರಗೌರಿ ಇದುವರೆವಿಗೂ

ನಿಂತು ಮಾತನಾಡುತ್ತಿದ್ದದ್ದು. ಆ ಭೂಮಿಯನ್ನು ಮುಟ್ಟಿ ನಮಸ್ಕರಿಸಬೇಕೆಂಬತನ್ನ ಬಲವಾದ ಬಯಕೆಯನ್ನು ತುಂಬಾ ಪ್ರಯತ್ನದಿಂದ ನಿಯಂತ್ರಿಸಿ ಅಲ್ಲಿಂದ ಮುಂದೆ ನಡೆದ.

ಮನಸ್ಸಿನ ಯಾವುದೋ ಮೂಲೆಯಲ್ಲಿ ಚಲಿಸುವ ಭಾವಗಳಿಗೆ ಯಾವ 'ಕಾರಣ'ವೂ ಕಾಣುವುದಿಲ್ಲ.

* * * *

ಷಾಡೋ ಎರಡು ದಿನಗಳಿಂದ ಅಲ್ಲಿಯೇ ಕುಳಿತಿದ್ದಾನೆ. ನೋಟವನ್ನು ಬದಲಿಸದೆ, ಕಣ್ಣನ್ನು ಬದಲಿಸದೆ ಅಲ್ಲೇ ನೋಡುತ್ತಿದ್ದಾನೆ. ಭಕ್ತರು ಬರುತ್ತಿದ್ದಾರೆ, ಹೋಗುತ್ತಿದ್ದಾರೆ. ಸಂಜೆಯಾಗುತ್ತಿದೆ. ಕತ್ತಲಾದಂತೆ ಬರಿದಾದ ಎಡೆಯನ್ನೆಲ್ಲಾ ಪರಿಚಾರಕರು ಗುಡಿಸಿ ಶುಭ್ರಗೊಳಿಸುತ್ತಿದ್ದಾರೆ. ಮತ್ತೆ ಜನ. ಎಲ್ಲಿಂದಲೋ ರಭಸದಿಂದ ನುಗ್ಗಿ ಬಂದ ಪ್ರವಾಹದಂತೆ.

ಷಾಡೋ ಹಾಗೇ ಕುಳಿತಿದ್ದಾನೆ. ಯಾರೋ ಒಬ್ಬರು ಅತ್ತ ನೋಡುತ್ತಾರೆ, ಅವನ ಮುಖದಲ್ಲಿ ಕಳವಳ ಕಾಣಿಸುತ್ತದೆ ಎಂದೇ ಊಹಿಸಿದ್ದ. ಅದಕ್ಕೆಂದೇ ಕಾಯುತ್ತಾ ಕುಳಿತಿದ್ದ.

ಬಂದ ಜನರಲ್ಲಿ ಮತ್ತೆ ಗೂನು ಬೆನ್ನಿನ ಹುಡುಗಿಯನ್ನು ನೋಡಿದ! ಅಸ್ತಮಾ ರೋಗಿಯನ್ನೂ ಕಂಡ! ಅವರು ಈಗ ತುಂಬಾ ಆರೋಗ್ಯದಿಂದಿದ್ದಾರೆ. ಕ್ಯೂನಲ್ಲಿ ಬಾಬಾ ದರ್ಶನಕ್ಕೆ ನಡೆಯುತ್ತಿದ್ದರು. ಬಾಬಾಗೆ ತಮ್ಮ ಕೃತಜ್ಞತೆ ತಿಳಿಸಲು ಹೋಗುತ್ತಿದ್ದಾರೇನೋ ಎಂದುಕೊಂಡ. ಇದರಿಂದ ತನ್ನ ಯೋಚನಾಪಥವೇ ತಪ್ಪೇನೋ ಎನಿಸುತ್ತಿತ್ತು. ಆದರೂ ಏನೋ ಅನುಮಾನ. ತಂಗಿಯ ಪ್ರಸವಕ್ಕೆ ಕೆಲವೇ ದಿನಗಳು ಉಳಿದಿದ್ದವು.

ಮತ್ತೊಂದು ದಿನವು ಕಳೆಯಿತು. ಷಾಡೋಗೆ ನಿರಾಸೆ ಹೆಚ್ಚಿತು. ಊಟ, ತಿಂಡಿ, ನಿದ್ರೆಗಳಿಲ್ಲದೆ ನೀರಸಗೊಂಡಿದ್ದ.

ಮೂರನೆಯ ದಿನ ಮಧ್ಯಾಹ್ನ ಆ ಸಂಘಟನೆ ನಡೆಯಿತು.

ಷಾಡೋ ಮಾಮೂಲಾಗಿಯೇ ಜನರನ್ನು ಗಮನಿಸುತ್ತಾ ಕುಳಿತಿದ್ದ. ಮಧ್ಯವಯಸ್ಕನಾದವನೊಬ್ಬನ ದೃಷ್ಟಿ ಗೋಡೆಯ ಮೇಲೆ ಬಿತ್ತು. ಆತ ತೆಳುವಾಗಿದ್ದ ಅವನ ಮುಖದಲ್ಲಿ ಬದಲಾವಣೆ ಸ್ಪಷ್ಟವಾಗಿ ಕಾಣಿಸಿತು. ಕ್ಯೂನಿಂದ ಬಂದು ಅದರತ್ತ ಪರೀಕ್ಷಾ ದೃಷ್ಟಿಯಿಂದ ನೋಡಿದ.

ಷಾಡೋ ರಕ್ತದ ಒತ್ತಡ ಏರಿತು. ಅವನ ಮುಖವನ್ನು ಮನದ ತೆರೆಯ ಮೇಲೆ ಚಿತ್ರಿಸಿಕೊಂಡ. ಐದಾರು ನಿಮಿಷಗಳ ನಂತರ ಏನೋ ಕೆಲಸವಿರುವವ

'ಉಸ್ನೋಕ್' ಎಂದ.

ಅಸ್ಥಿಪಂಜರದಂತಿದ್ದ ಅವನು ಬೆಚ್ಚಿದ. ಷಾಡೋವನ್ನು ತಪ್ಪಿಸಿಕೊಂಡು ದೂರವಾಗಲು ಪ್ರಯತ್ನಿಸುವವನಂತೆ ದೂರವಾದ. ಐದಾರು ನಿಮಿಷಗಳಲ್ಲಿ ಅವನು ಜನರ ಗುಂಪಿನಿಂದ ದೂರವಾಗಿ ಅವನ ಹಿಂದೆಯೇ ಬರುವಂತೆ ನಡೆಯ ತೊಡಗಿದ. ಇಬ್ಬರೂ ನಿರ್ಜನ ಪ್ರದೇಶವನ್ನು ಸೇರಿದರು.

"ಹೇಳು ಫ್ರೆಂಡ್" ಎಂದ ಅವನು.

ಷಾಡೋ ಏನು ಹೇಳಬೇಕೆಂಬುದು ಗೊತ್ತಾಗದೆ ಮತ್ತೆ 'ಉಸ್ನೋಕ್' ಎಂದ.

"ಏನು? ಮತ್ತೇ ಮೀಟಿಂಗ್ ಇದೆಯೇ?"

ಷಾಡೋಗೆ ಮಾತಿಗೆ ಕೊಂಡಿ ದೊರಕಿದಂತಾಯಿತು. "ಹೌದು ಮೀಟಿಂಗ್ ಎಂಬುದೇ ಗೊತ್ತಾಗುತ್ತಿಲ್ಲ. ಅದನ್ನು ಕುರಿತೇ ಯೋಚಿಸುತ್ತಿದ್ದೇನೆ" ಎಂದ.

ಅಲ್ಲೆಲ್ಲಾ ಕತ್ತಲೆ, ದೂರದಲ್ಲಿ ಮನುಷ್ಯರು ಮಸಕು ಮಸಕಾಗಿ ಕಾಣಿಸುತ್ತಿದ್ದರು.

"ಅವತಾರ್ ಬಾಬಾ ಅವರನ್ನು ಕೇಳಿ ಬರುತ್ತೇನೆ." ಎಂದ ಅವನು.

ಷಾಡೋ ಹೃದಯ ಬಡಿತದ ಗತಿ ತೀವ್ರಗೊಂಡಿತು.

"ಹೋಗಿ ಬೇಗ ಬಾ" ಎಂದ.

"ಈಗಲೇ ಬರುತ್ತೇನೆ" ಎಂದು ಹೇಳಿಹೋದವನು ಹತ್ತು ನಿಮಿಷದ ನಂತರ "ಈಗ ಮೀಟಿಂಗ್ ಇಲ್ಲವಂತೆ" ಎಂದ.

"ಹೌದೇ?" ಎಂದ ಷಾಡೋ.

"ನೀನೇನು ಬ್ಲಾಕ್ ಸ್ಕೆಲಿಟನ್ನೇ?"

"ಅಲ್ಲ."

"ಮತ್ತೆ....?" ಎಂದು ಅನುಮಾನದಿಂದ ನೋಡಿದ.

"ಉಸ್ನೋಕಲ್ಲಿ ಸೇರಬೇಕೆಂದುಕೊಂಡಿದ್ದೇನೆ. ಹೇಗೆ ಸೇರಬೇಕೋ ಗೊತ್ತಾಗಿಲ್ಲ" ಎಂದ ಅನುಮಾನಿಸುತ್ತಾ.

"ನಿನಗೆ ಉಸ್ನೋಕ್ ಬಗ್ಗೆ ಹೇಳಿದವರ್‍ಯಾರು?"

"ನನ್ನ ಸ್ನೇಹಿತ. ಸೇರಿಸುತ್ತೇನೆ ಎಂದಿದ್ದ. ಇದ್ದಕ್ಕಿದ್ದಂತೆಯೇ ಸತ್ತು ಹೋದ...."

"ಎಲ್ಲಾ ಮುಗಿದಿದೆಯೇ?"

"ಮೊದಲ ಪರೀಕ್ಷೆಗಳೆಲ್ಲಾ ಮುಗಿದಿವೆ. ಇನ್ನು ಸೇರುವುದೇ ಬಾಕಿ.

ಅಷ್ಟರಲ್ಲಿ ಈ ದುರ್ಘಟನೆ ನಡೆಯಿತು..."

"ನಿನ್ನ ಸ್ನೇಹಿತನ ಹೆಸರೇನು?"

"ರಾಮ್‌ಸಿಂಗ್"—ಅದು ಭವಾನಿಶಂಕರ್ ನೌಕರನ ಹೆಸರು. ಕತ್ತಲಲ್ಲಿ ಬಾಣ ಪ್ರಯೋಗ ಮಾಡುತ್ತಿರುವುದು ಷಾಡೋ ಅರಿತಿದ್ದ. ಆದರೆ ಅವು ನೇರ ವಾಗಿ ಗುರಿ ಮುಟ್ಟುತ್ತಿವೆ ಎಂಬುದು ಮಾತ್ರ ಅವನಿಗೆ ಗೊತ್ತಿರಲಿಲ್ಲ.

"ಉಸ್ಟೋಕ್ ಬಗ್ಗೆ ಹೇಳುತ್ತಿದ್ದೀ ಎಂದರೆ ನಮ್ಮ ಬ್ಲಾಕ್ ಸ್ಕೆಲಿಟನ್ ನಿನಗೆ ಚೆನ್ನಾಗಿ ಗೊತ್ತಿರಬೇಕು..."

"ಪರಿಚಯವೇನು ನಾವು ಪ್ರಾಣಸ್ನೇಹಿತರು. ಆತ ಬದುಕಿದ್ದಿದ್ದರೆ ಈ ವೇಳೆಗೆ ನಾನು ಸೇರಿ ಹಳಬನಾಗುತ್ತಿದ್ದೆ!"

"ಈಗಲು ಸೇರಬೇಕೆಂಬ ಆಸೆಯಿದೆಯೇನು?"

"ಇನ್ಯಾಕೆ ಇಷ್ಟೊಂದು ತೊಂದರೆ?"

ಏನೋ ಅನುಮಾನ ಬಂದಂತೆ ಇದ್ದಕ್ಕಿದ್ದಂತೆಯೇ "ನಾನು ಬ್ಲಾಕ್ ಸ್ಕೆಲಿಟನ್ ಎಂದು ನಿಮಗೆ ಗೊತ್ತಾದದ್ದು ಹೇಗೆ?" ಎಂದು ಕೇಳಿದ.

"ನೀವು ಬಾಬಾ ಜತೆ ಮಾತನಾಡುತ್ತಿದ್ದಾಗ ನೋಡಿದೆ. ಬಾಬಾ ಉಸ್ಟೋಕ್ ಸದಸ್ಯರೆಂಬುದು ನನಗೆ ಗೊತ್ತಿತ್ತು...."

"ಹಾಗಾದರೆ ಸಿಂಗ್ ನಿನಗೆ ಬಹಳ ವಿಷಯಗಳು ಹೇಳಿದ್ದಾನೆ! ಸೇರುವುದಕ್ಕೆ ಮೊದಲೇ ಇವೆಲ್ಲಾ ಹೇಳಬಾರದು."

"ಇನ್ನೇನು ಸೇರಿದಂತೇ....ಪರೀಕ್ಷೆಗಳನ್ನು ನಡೆಸಿದಾಗಲೇ ಉಸ್ಟೋಕ್ ಬಗ್ಗೆ ಹೇಳಿದ್ದ."

"ದೊಡ್ಡ ಪರೀಕ್ಷೆಯಾಗಿಲ್ಲ ಅನ್ಸುತ್ತೆ. ಆಗಿದ್ರೆ ಈ ಮಾತೇ ಬರ್‍ತಿರ್ಲಿಲ್ಲ..."

"ಪರೀಕ್ಷೆಯೇ?...ಅದೇನು?"

"ಇಷ್ಟೆಲ್ಲಾ ಹೇಳಿದವನು ಅದನ್ನು ಹೇಳಲಿಲ್ಲವೇ?"

"ಇಲ್ಲವಲ್ಲಾ!"

"ನಿನ್ನ ಮನಸ್ಸಿನಲ್ಲಿ ಸ್ವಲ್ಪವಾಗಿಯಾದರೂ ಕಲ್ಮಷವಿದ್ದರೆ, ಉಸ್ಟೋಕ್ ಬಗ್ಗೆ ಮೋಸದ ಮಾತಿದ್ದರೆ ಪ್ರಮಥಗಣಾಧಿಪತಿಗಳಾದ ರೆಡ್‌ಸ್ಕೆಲಿಟನ್ಸ್ ನೀಡುವ ಪರೀಕ್ಷೆಯಲ್ಲಿ ನಿನ್ನ ಮನಸ್ಸಿನ ರಹಸ್ಯಗಳನ್ನೆಲ್ಲಾ ಹೊರಹಾಕುತ್ತಾರೆ. ಅದಕ್ಕೆ ನೀನು ಸಿದ್ಧವಾಗಿದ್ದರೆ ನಾಳೆಯೇ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ."

ಷಾಡೋ ತಲೆಯಾಡಿಸಿದ. ತುಂಬಾ ಉದ್ವಿಗ್ನಗೊಂಡಿದ್ದ. ತಾನು ಎತ್ತಲೋ ಎಸೆದ ಗಾಳ ಏನನ್ನು ಹಿಡಿದಿದೆ? ಅದರಲ್ಲಿ ಜಯಶಾಲಿಯಾಗುವೆನೇ?

ರೆಡ್‌ಸ್ಕೆಲಿಟನ್ಸ್ ಮನಸ್ಸಿನ ಆಳವನ್ನು ಹೇಗೆ ಹೊರಹಾಕಿಸುತ್ತಾರೆ? ಅದನ್ನೆಲ್ಲಾ ತಿಳಿದು ಏನು ಮಾಡುತ್ತಾರೆ? ಏನೂ ಗೊತ್ತಿಲ್ಲವಾದರೂ ರಿಸ್ಕ್ ತೆಗೆದುಕೊಳ್ಳಲೇಬೇಕು. "ನಾಳೆ ನನ್ನನ್ನು ಎಲ್ಲಿಗೆ ಕರ್‍ಕೊಂಡು ಹೋಗ್ತೀರಿ?" ಷಾಡೋ ಕೇಳಿದ.

"ಉಸ್ಲೋಕ್ ಹೆಡ್‌ಕ್ವಾರ್ಟರ್ಸ್‌ಗೆ" ಎನ್ನುತ್ತಾ ಬಂದು ಷಾಡೋ ಭುಜದ ಮೇಲೆ ಕೈಹಾಕಿ "ನೀನು ತುಂಬಾ ಅದೃಷ್ಟಶಾಲಿ. ಇನ್ನೇನು ಅಷ್ಟಾವಕ್ರ ಕೆಲವು ದಿನಗಳಲ್ಲಿ ಹುಟ್ಟುತ್ತಾನೆ. ಕಾಪ್ಲೋರಾವನ್ನು ನಂಬದವರನ್ನೆಲ್ಲಾ ನಿಲುವಾಗಿ ಸೀಳುತ್ತಾರೆ. ಕೊನೆಯ ಗಳಿಗೆಯಲ್ಲಿ ಇದರಲ್ಲಿ ಸೇರುತ್ತಿರುವ ನೀನು ತುಂಬಾ ಅದೃಷ್ಟವಂತ, ಅಷ್ಟಾವಕ್ರನ ಜನ್ಮದ ನಂತರ ನಾವೇ ಒಡೆಯರು. ಇತರರೆಲ್ಲಾ ನಮ್ಮ ಆಧೀನದಲ್ಲಿರುತ್ತಾರೆ..."

'ಅಷ್ಟಾವಕ್ರ ಕೆಲವು ದಿನಗಳಲ್ಲಿ ಹುಟ್ಟುತ್ತಾನೆ' ಎಂದು ಕೇಳುತ್ತಲೇ ಅವನ ಯೋಚನೆ ಕೇಂದ್ರೀಕೃತವಾಗಿ ಉಳಿದ ಯಾವ ಮಾತು ಷಾಡೋ ಕಿವಿಗೆ ಬೀಳಲಿಲ್ಲ. ಇಷ್ಟು ಮಂದಿ ಹೇಳುತ್ತಿರುವ ಈ ಒಂದೇ ಮಾತಿನಲ್ಲಿ ಸತ್ಯವಿದೆಯೇ. ಇದು ನಿಜವಾದರೆ ತನ್ನ ತಂಗಿಯ ಸಾವು ಖಂಡಿತವೇನು?... ಇಲ್ಲ ಹಾಗಾಗಬಾರದು; ಹಾಗಾಗಕೂಡದು...

"ಮಿತ್ರ ಬರ್‍ತೀನಿ."

ಷಾಡೋ ತಲೆ ಎತ್ತಿದ.

"ನಾಳೆ ಇದೇ ಸಮಯಕ್ಕೆ ಇಲ್ಲೇ ಇರು. ಯಾರಿಗೂ ಇದನ್ನು ಹೇಳಬೇಡ. ಇದು ಸಾಮಾನ್ಯವಾದ್ದಲ್ಲ. ಸ್ವಲ್ಪ ವ್ಯತ್ಯಾಸವಾದರೆ ಪ್ರಾಣವೇ ಹೋಗುತ್ತೆ."

ಷಾಡೋ ಮೌನವಾಗಿ ತಲೆಯಾಡಿಸಿದ.

* * * *

"ಹಾಗೆ ಮಾತನಾಡಬಾರದಾಗಿತ್ತು ಗೌರೀ"

ಗೌರಿಯು ಸಿದ್ಧಾರ್ಥನನ್ನು ಸಮೀಪಿಸಿ "ಏನು ಮಾಡಬಾರದಾಗಿತ್ತು?"

"ಇದೆಲ್ಲಾ ತಮಾಷೆಯಾಗಿದೆಯಾ ನಿನಗೆ?"

"ನಾನು ಹೇಳಿದ್ದರಲ್ಲಿ ತಮಾಷೆಯೇನೂ ಇಲ್ಲವಲ್ಲ. ನಾವೇನು ಮಾಡಬಾರದು ಎಂಬುದನ್ನು ಮಾತ್ರವೇ ಹೇಳಿದೆ. ಅಷ್ಟೇ."

ಸಿದ್ಧಾರ್ಥ ತುಂಬಾ ಪ್ರಯಾಸದಿಂದ ತನ್ನ ಕೋಪವನ್ನು ಅಡಗಿಸಿಕೊಂಡು "ನಮಗೆ ಗೊತ್ತಾಗದ ವಿಷಯಕ್ಕೂ ಬೇರೆ ಯಾವುದಾದರೂ ಕಾರಣವಿರಬಹುದು ಎಂದು ಅದನ್ನು ಹುಡುಕುವುದೇ ಕಾರ್ಯಕಾರಣ ಸಂಬಂಧವಾದ.

ನಮಗೆ ತಿಳಿಯದಿರುವುದೇ ಇಲ್ಲವೆನ್ನುವುದು ತೀರಾ ಮೂರ್ಖತ್ವ" ಎಂದ.

ಗೌರಿಯು ಕೋಪದಿಂದಲೇ "ನಾನೀಗ ಅಂಥಾ ಮೂರ್ಖ ಕೆಲಸ ಏನು ಮಾಡಿದ್ದೇನೆ?" ಎಂದು ಕೇಳಿದಳು.

"ಇಷ್ಟು ಮಂದಿ ಹಿರಿಯರೆಲ್ಲಾ ಹೇಳುತ್ತಿದ್ದರೂ ಅವರ ಮಾತಿಗೆ ವಿರುದ್ಧವಾಗಿ ಇಲ್ಲೇ ಇರುತ್ತೇನೆ ಎನ್ನುವುದು ಮೂರ್ಖತ್ವವಲ್ಲವೇ?"

"ಆ ಮಾತು ಹೇಳುವವರೇ ಮೂರ್ಖರು..." ಎಂದಳು ತಟ್ಟನೆ ನಿಯಂತ್ರಿಸಿಕೊಂಡು ಮಾತನ್ನು ಅರ್ಧದಲ್ಲಿಯೇ ತಡೆದು ನಿಲ್ಲಿಸಿದಳು. ಆದರೆ ಆಕೆಯ ಮಾತನ್ನು ಅರ್ಥಮಾಡಿಕೊಂಡಿದ್ದ ಸಿದ್ಧಾರ್ಥ. ಮುಖವೆಲ್ಲಾ ಕೆಂಪಾಗಿತ್ತು. ಇದುವರೆವಿಗೂ ಅವನು ಆ ರೀತಿ ಇದ್ದದ್ದನ್ನು ಆಕೆ ಕಂಡದ್ದು ಅದೇ ಮೊದಲು. ಆದರಿಂದ ಭಯವಾಯಿತು. ಸಂತೋಷವೂ ಆಯಿತು. ಶ್ರೀಮಂತ ಮನೆತನದ ಹೆಣ್ಣನ್ನು ಮದುವೆಯಾಗಿದ್ದೇನೆ, ತಾನು ಆಕೆಗೆ ತಕ್ಕವನಲ್ಲ ಎಂಬ ಕೀಳರಿಮೆ ಆತನಲ್ಲಿ ಯಾವುದೋ ಮೂಲೆಯಲ್ಲಿ ಅಡಗಿತ್ತು. ಈಗ ನಿಜವಾದ ಗಂಡನಂತೆ ತನ್ನ ಅಧಿಕಾರವನ್ನು ಚಲಾಯಿಸುತ್ತಿದ್ದ. ಅದೇ ಸಂತೋಷದ ಸಂಗತಿ.

ಸಿದ್ಧಾರ್ಥನ ಕೈಮೇಲೆ ಕೈಹಾಕಿ ಪ್ರೇಮದಿಂದ "ನೋಡ್ರೀ, ಚಿಕ್ಕಂದಿನಿಂದ ನನ್ನಲ್ಲಿ ಒಂದು ಕೆಟ್ಟಗುಣವಿದೆ. ಎಷ್ಟು ಪ್ರಯತ್ನಿಸಿದರೂ ತಿದ್ದಿಕೊಳ್ಳಲು ಸಾಧ್ಯವಾಗಿಲ್ಲ. ತರ್ಕಕ್ಕೆ ಎಟುಕದ ಯಾವುದನ್ನಾದರೂ ನಾನು ಒಪ್ಪುವುದಿಲ್ಲ. ಈ ಒಂದು ವಿಷಯದಲ್ಲಿ ಮಾತ್ರ ನನ್ನನ್ನು ದಯಮಾಡಿ ಕ್ಷಮಿಸಿ. ಒಂಬತ್ತು ತಿಂಗಳ ಮೊದಲೇ ಇಲ್ಲಿಂದ ನಾನು ಹೋಗೋಣ ಎಂದು ನೀವು ಹೇಳಿದ್ದಿದ್ದರೆ ಖಂಡಿತವಾಗಿ ನಾನು ಒಪ್ಪುತ್ತಿದ್ದೆ" ಎಂದು ಸ್ವಲ್ಪ ತಡೆದು ಇನ್ನೂ ಶಾಂತವಾದ ಧ್ವನಿಯಲ್ಲಿ "ಈ ಬಗ್ಗೆ ನೀವೂ ಯೋಚಿಸಬಹುದು. ನನ್ನ ತರ್ಕದಲ್ಲಿ ನಿಜವಿದೆ ಎಂದು ಖಂಡಿತ ಒಪ್ಪುತ್ತೀರಿ. ಸಮಸ್ಯೆಯಲ್ಲಿ ನೀವೂ ಸಿಕ್ಕಿಬಿದ್ದಿರುವುದರಿಂದ ನೀವು ಸ್ವಲ್ಪ ಬೆದರಿದ್ದೀರಿ. ಶಾಂತವಾಗಿ ನೀವೇ ಯೋಚಿಸಿ....ಪ್ಲೀಸ್, ನನಗಾಗಿ ನೀವು ಹೀಗೆ ಭಯಪಟ್ಟರೆ ಕೊನೆಗೆ ಬೀದಿಯಲ್ಲಿ ಹೋಗುವ ಭಿಕ್ಷುಕನೂ ಮನೆಯ ಮುಂದೆ ನಿಂತು 'ಮೋರಾ...ಕಾಷ್ಮೋರಾ...' ಎಂದು ಅರಚಿ ಬೆದರಿಸುತ್ತಾನೆರೀ..."

ಅವಳ ಮಾತು ಪೂರ್ಣವಾಗಲಿಲ್ಲ. ಸಿದ್ಧಾರ್ಥ ತಟ್ಟನೆ ತಲೆಎತ್ತಿ "ಕಾಷ್ಮೋರಾ ಅಂದರೇನು?" ಎಂದು ಕೇಳಿದ.

"ಏನೋರೀ, ಸುಮ್ಮನೆ ಹಾಗಂದೆ ಅಷ್ಟೆ!"

ಗೌರಿಯ ತೋಳನ್ನು ಹಿಡಿದು ಸೆಳೆಯುತ್ತಾ "ಕಾಷ್ಮೋರಾ ಎಂದರೇನು?

ಆದರ ಮಾತು ಹೀಗೇಕೆ ಬಂತು?" ಎಂದು ಕಿರುಚಿದ. ಅವನ ಧ್ವನಿ ಆ ಕೋಣೆ ಯಲ್ಲಿ ಭಯಂಕರವಾಗಿ ಧ್ವನಿಸಿತು. ಇದ್ದಕ್ಕಿದ್ದಂತೆಯೇ ಅವನಲ್ಲುಂಟಾದ ಮಾರ್ಪಾಟಿಗೆ ಕಂಗಾಲಾದಳು ಕೇದಾರಗೌರಿ. ಈ ಬದಲಾವಣೆ ಇದ್ದಕ್ಕಿದ್ದಂ ತೆಯೇ ಹೇಗಾಯಿತು ಎಂಬುದು ಅರ್ಥವಾಗಲಿಲ್ಲ.

"ಏನೋ ಹೇಳಿದಾರೀ, ಅದು ಶಾಪ್ವೋ/ರಾನೋ ಅಲ್ಲವೋ ಸರಿಯಾಗಿ ಕೇಳಿಸಲಿಲ್ಲ" ಎಂದು ಅಂದು ನಡೆದದ್ದನ್ನೆಲ್ಲಾ ಹೇಳಿದಳು.

ಕೇಳುತ್ತಿದ್ದಂತೆಲ್ಲಾ ಅವನ ಮುಖ ಬಿಳಿಚಿಕೊಂಡಿತು. "ಆತನೆಲ್ಲಿರು ತ್ತಾನೆ?" ಎಂದು.

ತಲೆತಗ್ಗಿಸಿ "ದಿನಕ್ಕೆ ಮೂರು ಮನೆಗಳಿಗಿಂತಲೂ ಹೆಚ್ಚಾಗಿ ಭಿಕ್ಷೆ ಬೇಡುವುದಿಲ್ಲ" ಎಂದು ಹೇಳಿದ. "ಒಂದು ರಾತ್ರಿಯನ್ನು ಕಳೆದ ಊರಿನಲ್ಲಿ ಇನ್ನೊಂದು ರಾತ್ರಿ ಕಳೆಯುವುದಿಲ್ಲ" ಎಂದು ಹೇಳಿದಂತೆ ನೆನಪು ಎಂದಳು. ತನ್ನ ಮಾತು ಗಂಡನನ್ನು ನಂಬಿಸುವುದಿಲ್ಲವೆಂದು ತಿಳಿದಿದ್ದಳು. ಆಕೆ ಭಾವನೆಗೆ ವಿರುದ್ಧವಾಗಿ ಗಾಳಿಯಂತೆ ಅಲ್ಲಿಂದ ಎದ್ದು ವೇಗವಾಗಿ ಹೋದ.

ಕೇದಾರಗೌರಿ ಒಬ್ಬಳೇ ಉಳಿದುಕೊಂಡಳು—ಗಂಡನ ಕಣ್ಣಲ್ಲಿಯ ಆಂದೋಲನ, ಕಳವಳ, ಕೃಷ್ಣಾಪುರದಲ್ಲಿ ಜನಿಸುತ್ತಿರುವ ವಿಕೃತ ಜನನಗಳು ಅವತಾರ್ ಬಾಬಾ ಶಾಪ. ಸುತ್ತಲೂ ಸೇರಿದ್ದ ಜನರು...

ಒಂಬತ್ತು ತಿಂಗಳ ಘರ್ಷಣೆ, ಅಂತರಂಗದ ಹೊಯ್ದಾಟದ ನಂತರ ಆಕೆಯಲ್ಲಿ ಮೊದಲ ಬಾರಿಗೆ ತಾನು ತಪ್ಪು ಹಾದಿಯಲ್ಲಿ ಯೋಚಿಸುತ್ತಿದ್ದೇನೋ ಎಂಬ ಅನುಮಾನ ತಲೆ ಎತ್ತಿತು.

ಈ ವಿಷಯದಲ್ಲಿ ತನಗೆ ಧೈರ್ಯ ಹೇಳುವರಾರು?...ರವಿ ಇಲ್ಲ, ಅಣ್ಣಯ್ಯ ನಂತಹ ಬೇರೊಬ್ಬರು ಬೇಕು. ಆರಿಹೋಗಲು ಸಿದ್ಧವಾಗುತ್ತಿದ್ದ ಕಾರ್ಯ— ಕಾರಣವಾದದ ದೀಪವು ತೊಯ್ದಾಡುತ್ತಿದ್ದಾಗ ಆ ಉರಿಯನ್ನು ರಕ್ಷಿಸಲು ಕೈಮರೆಮಾಡಲು ಒಬ್ಬರು ಬೇಕು. ಯಾರು? ಆಕೆಗೆ ಸ್ಫುರಿಸಿದ್ದು ಒಂದೇ ಹೆಸರು—ಡಾಕ್ಟರ್ ರಂಗಪ್ರಸಾದ್!

* * * *

"ಆತನಿಗಾಗಿ ತುಂಬಾ ಹುಡುಕಿದೆ. ಸಿಗಲಿಲ್ಲ. ಇನ್ನು ಹೆಚ್ಚು ಸಮಯವೂ ಇಲ್ಲ. ಇನ್ನೇನಾಗುವುದೋ ನನಗೆ ಇವೆಲ್ಲಾ ಭಯಂಕರವಾಗಿ ಕಾಣಿಸುತ್ತಿವೆ. ಈಗ ನೀವೇ ಸಹಾಯ ಮಾಡಬೇಕು" ಎಂದು ಬೇಡಿದ ಸಿದ್ಧಾರ್ಥ.

ಜಯದೇವ್ ಮಾತನಾಡದೆ ಯೋಚಿಸುತ್ತಲೇ ಇದ್ದ. ಆತನಿಗೆ ರಂಜಿತಾ ಮೂಲಕ ಸಿದ್ಧಾರ್ಥನ ಕುಟುಂಬ ಪರಿಚಯವಾದ ಹೊಸದರಲ್ಲಿ ಆಕೆ

ಜಯದೇವ್ ಅವರ ಪೂರ್ವಾನುಭಾವಗಳನ್ನು ಕಥೆಯಾಗಿ ಹೇಳಿದ್ದಳು.

"ಹೇಗಾದರೂ ಈ ರಹಸ್ಯ ಬಯಲು ಮಾಡಬೇಕು."

"ತುಂಬಾ ಹಿಂದೆ ನನ್ನ ಮಿತ್ರನಾಗಿದ್ದ ಶ್ರೀಧರ್ ತನ್ನ ಮಗಳನ್ನು ರಕ್ಷಿಸಿಕೊಳ್ಳಲು ಕಾದ್ರ ಎಂಬ ಮಾಂತ್ರಿಕನನ್ನು ಕೊಂದ. ಆದರೆ ತುಲಸಿಯ ಅನಾರೋಗ್ಯಕ್ಕೆ ಅದು ಕಾರಣವಲ್ಲ ಎಂದು ನಾನು ನಂಬಿದ್ದೇನೆ. ಅದೇ ರೀತಿ ತುಲಸಿ ಹಲ್ಯೂಸಿನೇಷನ್ಸ್‌ಗೆ (ಭ್ರಾಮಕ ಅನುಭೂತಿಗಳಿಗೆ) ಕಾರಣ ಕಾಷ್ಮೋರಾ ಅಲ್ಲ ಶ್ರೀನಿವಾಸ ಪಿಳ್ಳೈ ಮಾಡಿದ ಬ್ರೈನ್‌ವಾಷ್ ಎಂದು ನಾನು ಭಾವಿಸುತ್ತೇನೆ. ಅದೇ ನಂಬಿಕೆ ಇಂದಿಗೂ ನನ್ನಲ್ಲಿದೆ..."

"ಸರ್...." ಎಂದು ಅವರ ಮಾತನ್ನು ತಡೆಯುತ್ತಾ ಹೀಗೆ ಹೇಳುತ್ತಿದ್ದೇನೆ ಎಂದು ನೀವೇನೂ ಭಾವಿಸಬೇಡಿ. ಈ ಸಮಸ್ಯೆ ನನ್ನದು. ನಿಮಗೆ ಇದೆಲ್ಲಾ ಹಾಸ್ಯಾಸ್ಪದವಾಗಿ ಕಾಣಿಸಬಹುದು. ಆದರೆ ಅಂದು ಶ್ರೀಧರ್ ನೀವು ಹೇಳಿದಂತೆ ಕಾದ್ರಾನ ಯಜ್ಞವನ್ನು ಭಂಗಗೊಳಿಸದಿದ್ದರೆ ತುಲಸೀ ಬದುಕುತ್ತಿರಲಿಲ್ಲವೇನೋ? ತುಲಸೀ ಸತ್ತಿದ್ದರೆ ನೀವೇನು ಹೇಳುತ್ತಿದ್ದಿರಿ? ಆಕೆಯ ಸಾವಿಗೆ ಬೇರೊಂದು ಕಾರಣವನ್ನು ಹುಡುಕುವುದರಲ್ಲಿ ಮಗ್ನರಾಗುತ್ತಿದ್ದಿರಿ! ಆದರೆ ಈಗ ನನಗೆ ಬೇಕಾಗಿರುವುದು ನನ್ನ ಹೆಂಡತಿ, ಮಗುವಿನ ಬದುಕು. ಅದಕ್ಕೆ ಪರಿಹಾರ ಮಾರ್ಗ ತಿಳಿಸಿ" ಎಂದ ಸಿದ್ಧಾರ್ಥ.

ಜಯದೇವ್ ಅವನ ಮುಖವನ್ನೇ ದಿಟ್ಟಿಸಿ ನೋಡಿದ. ಒಂದು ಕಾಲದಲ್ಲಿ ಶ್ರೀಧರ್ ಕೂಡ ಹೀಗೆ ವಿಲಪಿಸಿದ್ದ. ಅಯ್ಯೋ ಎನಿಸಿತು (ಅದಕ್ಕೆ ಕಾರಣವೇ ಬೇರೆ) ತನ್ನ ಮನದ ಭಾವವನ್ನು ಹೊರಗೆ ತೋರಿಸದೆ "ಇದರ ಬಗ್ಗೆ ನನಗೆ ಹೆಚ್ಚೇನು ಗೊತ್ತಿಲ್ಲ. ವಯಸ್ಸಾದ ಮೇಲೆ ಮನೆಯಿಂದ ಹೊರಕ್ಕೆ ಹೋಗುವುದೂ ಇಲ್ಲ. ಈ ವಿದ್ಯೆಗಳ ಬಗ್ಗೆ ತಿಳಿಯಬೇಕೆಂದುಕೊಂಡರೆ ನಾನೊಂದು ಪುಸ್ತಕ ಕೊಡಬಲ್ಲೆ" ಎಂದ.

ಸಿದ್ಧಾರ್ಥನಲ್ಲಿ ಆಸೆ ಚಿಗುರಿತು. ತಟ್ಟನೆ ತಲೆ ಎತ್ತಿ "ಅದೇನು?" ಎಂದು ಕೇಳಿದ.

"ಪ್ರಾಚೀನ ವಿದ್ಯೆಗಳನ್ನು ಕುರಿತು ನನ್ನಲ್ಲಿ ಒಂದು ಪುಸ್ತಕವಿದೆ.'ತಂತ್ರ' ಎಂದು ಅದರ ಹೆಸರು. ಅದರಲ್ಲಿ ನಿಮಗೆ ಈ ವಿವರಗಳು ದೊರೆಯಬಹುದು." ಎಂದು ಹೇಳಿ ಆ ಪುಸ್ತಕವನ್ನು ಹುಡುಕಿ ತಂದು ಕೊಟ್ಟರು.

ಬೌಂಡ್ ಪುಸ್ತಕವನ್ನು ಹಿಡಿದಾಗ ಅವನ ಎದೆಯ ಬಡಿತದ ವೇಗ ಹೆಚ್ಚಿತು. ನಡುಗುತ್ತಿರುವ ಬೆರಳುಗಳು ಪುಟಗಳನ್ನು ತಿರುಗಿಸಿದವು. ಅವನ ನೋಟ ಒಂದು ಪುಟದ ಬಳಿ ನಿಂತಿತು!

**ಕಾಷ್ಮೋರಾ**— ಕ್ಷುದ್ರ ಗಣಾಧಿಪತಿ. ಕುಟ್ಟಿಸೈತಾನ್ ಅಂಶ.

—ಎಂದು ಮಾತ್ರವೇ ಇತ್ತು.

ಸಿದ್ಧಾರ್ಥ ಹತಾಶನಾದ. ತುಂಬಾ ಆಸೆಯಿಂದ ಬಂದರೆ ಮುಖಕ್ಕೆ ತಣ್ಣೀರೆರೆಚಿದಂತಾಗಿತ್ತು. ಅದೇನೆಂಬುದಕ್ಕೆ ವಿವರಣೆ ದೊರೆಯಲಿಲ್ಲ. ಪುಸ್ತಕ ವನ್ನು ಕೆಳಗಿರಿಸಿದ. ನಿರಾಶನಾಗಿ ಎದ್ದು ನಿಂತ. ನಿಟ್ಟುಸಿರಿಟ್ಟು ಒಂದು ಹೆಜ್ಜೆ ಮುಂದಿಟ್ಟವನು ಥಟ್ಟನೆ ಹಿಂದಕ್ಕೆ ತಿರುಗಿ ಏನೋ ಹೊಳೆದವನಂತೆ ಪುಸ್ತಕದ ಪುಟಗಳನ್ನು ಗಬಗಬನೆ ತಿರುಗಿಸಿದ. ಈ....ಇ...ಆ...ಅ....

**ಅಷ್ಟಾವಕ್ರ** ...

ಎದೆ ತನ್ನ ಬಡಿತವನ್ನೇ ನಿಲ್ಲಿಸಿದಂತಾಯಿತು. ಕುರ್ಚಿಯಲ್ಲಿ ಕೂರಲು ಕೂಡ ತಾಳ್ಮೆಯಿಲ್ಲದೆ ಓದತೊಡಗಿದ.

**ಅಷ್ಟಾವಕ್ರ**—ಕ್ಷುದ್ರ ಗಣಾಧಿಪತಿ ಕಾಷ್ಮೋರಾ ಮೂರನೆಯ ಬಾರಿಗೆ ಎಚ್ಚೆತ್ತಾಗ ಎರಡು ಬಾರಿ ಎಚ್ಚೆತ್ತಾಗಿನ ಶಕ್ತಿಗಳನ್ನೂ ಸಂಚಯಿಸಿಕೊಂಡು ಅಧಿಕ ಶಕ್ತಿಯಿಂದ ಅಷ್ಟಾವಕ್ರನಾಗಿ ಜನಿಸುತ್ತಾನೆ. ಗರ್ಭವನ್ನು ಸೀಳಿಕೊಂಡು ಬರುವುದರಿಂದ ತಾಯಿಯನ್ನು, ಹುಟ್ಟಿದ ದಿನವೇ ತಂದೆಯನ್ನೂ ಕೊಂದು, ನಾಯಿಗಳ ತೋಳಗಳ ನೆರವಿನಿಂದ ಬೆಳೆದು ದೊಡ್ಡವನಾಗಿ ಜಗತ್ತಿನಲ್ಲಿ ಸೈತಾನನ ರಾಜ್ಯವನ್ನು ಸ್ಥಾಪಿಸುತ್ತಾನೆ. ಆತನ ಆಗಮನಕ್ಕೆ ಮೊದಲು ಅದೇ ಗ್ರಾಮದಲ್ಲಿ ಒಂದೇ ಸವನೆ ವಿಕೃತ ಜನನಗಳಾಗುತ್ತವೆ. ಪ್ರಮಥ ಗಣಾಧಿಪತಿಗಳೇ ಅಷ್ಟಾವಕ್ರನನ್ನು ಪೋಷಿಸುತ್ತಾರೆ. ತುಂಬಾ ಕ್ರೂರಿಯಾಗಿ, ರಕ್ತವನ್ನು ಕುಡಿಯುತ್ತಾ, ಮಾಂಸವನ್ನು ಭುಜಿಸುತ್ತಾ ಅಷ್ಟಾವಕ್ರ ಬೆಳೆಯುತ್ತಾನೆ. ದೆವ್ವವನ್ನು ನಂಬಿದವರು ಮಾತ್ರವೇ ಆತನ ರಾಜ್ಯದಲ್ಲಿ ಸುಖವಾಗಿರುತ್ತಾರೆ.

ಸಿದ್ಧಾರ್ಥನ ಮುಖದಲ್ಲಿ ರಕ್ತ ಇಂಗಿತು.

ಗೋಡೆಗಳೆಲ್ಲಾ ಕುಸಿದು ಮನೆಯ ಛಾವಣಿಯೇ ತನ್ನ ಮೇಲೆ ಬಿದ್ದಂತೆ ಪ್ರಜ್ಞೆಯೇ ದೂರ ಹಾರಿ ಹೋದಂತೆ ಭಾಸವಾಯಿತು.

## ೨೬

ಡಾಕ್ಟರ್ ರಂಗಪ್ರಸಾದ್ ತುಂಬಾ ಹೊತ್ತು ತಮ್ಮ ಕುರ್ಚಿಯಲ್ಲಿ ಹಾಗೇ ಕುಳಿತಿದ್ದರು. ತನ್ನ ಗಂಡನೊಂದಿಗೆ ಮನೆಗೆ ಹೋದ ಎರಡು ಗಂಟೆಗಳ ಅವಧಿಯಲ್ಲಿಯೇ ಒಂಟಿಯಾಗಿ ಹಿಂತಿರುಗಿದ್ದು ಅಚ್ಚರಿಗೊಳಿಸಿತ್ತು. ಆಕೆಯ

ಮುಖ ನೋಡುತ್ತಲೇ ಏನೋ ಘರ್ಷಣೆ ನಡೆದಿದೆ ಎನಿಸುವಂತಿತ್ತು.

ಆತನ ಅನುಮಾನ ನಿಜವಾಯಿತು.

ತನ್ನ ಗಂಡನೊಂದಿಗೆ ನಡೆದ ಸಂಭಾಷಣೆಯನ್ನು ವಿವರವಾಗಿ ಹೇಳಿ "ಯಾರೋ ಬೀದಿಯಲ್ಲಿರುವ ಸನ್ಯಾಸಿಯ ಮಾತಿಗೆ ಹಾಗೇ ನಂಬುವವರು ಭಯದಿಂದ ಹೋದದ್ದು ಕಂಡರೆ ನಾನೇ ಒಮ್ಮೆ ನಗುತ್ತಿದ್ದೆ. ಆದರೆ ಈಗಿನ ಪರಿಸ್ಥಿತಿಗಳು ಹಾಗಿಲ್ಲ ಡಾಕ್ಟರ್. ಎಲ್ಲವನ್ನೂ ಮತ್ತೆ ಕೂಲಂಕುಷವಾಗಿ ಪರ್ಯಾಲೋಚಿಸಬೇಕು ಎನಿಸುತ್ತೆ. ಈ ಸಂದರ್ಭದಲ್ಲಿ ನನಗೆ ಸ್ವಲ್ಪ ಮನೋಸ್ಥೈರ್ಯವನ್ನು ನೀಡಬಲ್ಲವರು ನೀವೊಬ್ಬರೇ. ನನ್ನನ್ನು ನಿಮ್ಮ ತಂಗಿ ಎಂದು ತಿಳಿದು ಹೇಳಿ–ಈಗ ನಾನೇನು ಮಾಡಬೇಕು?" ಎಂದು ಹೇಳಿದಳು.

ರಂಗಪ್ರಸಾದ್ ತೆಳುವಾಗಿ ನಕ್ಕರು. ತಾನೇನು ಮಾಡಬೇಕೆಂಬುದು ತನಗೇ ಗೊತ್ತಿಲ್ಲದ ಪರಿಸ್ಥಿತಿ! ಇನ್ನು ತಾನು ಹೇಳುವದೇನಿದೆ? ಏನು ಮಾಡಿದರೂ ಗರ್ಭದಲ್ಲಿರುವ ಶಿಶು ಬದಲಾಗುವುದು ಸಾಧ್ಯವಿಲ್ಲನೆ? 'ನನಗೊಂದು ಎರಡು ದಿನಗಳ ಅವಕಾಶ ಕೊಡಿ' ಎಂದು ಹೇಳಿ ಆಕೆಯನ್ನು ಕಳುಹಿಸಿ ಕೊಟ್ಟರು. ಮತ್ತೆ ಯೋಚನೆಯಲ್ಲಿ ಬಿದ್ದರು.

ಅಸ್ತಮಾಕ್ಕೆ ಇದುವರೆವಿಗೂ ಔಷಧವಿಲ್ಲ. ಅಂತಹ ಖಾಯಿಲೆಯನ್ನೂ ಹಿಪ್ನಾಟಿಜಂ ಮುಖಾಂತರ ವಾಸಿಮಾಡುತ್ತೇವೆ ಎಂದು ಕೆಲವರು ಪ್ರಚಾರ ಮಾಡುತ್ತಿದ್ದಾರೆ. ಯಾವ ಡಾಕ್ಟರ್ ಪದವಿಯನ್ನೂ ಪಡೆಯದೆ ತಾವು ಸೆಕ್ಸ್ ಸ್ಪೆಷಲಿಸ್ಟ್‌ಗಳೆಂದು ಗುಪ್ತರೋಗಗಳಿಗೆ ರಾಮಬಾಣಗಳು ತಮ್ಮಲ್ಲಿವೆಯೆಂದೂ ರೋಗಿಗಳನ್ನು ಆಹ್ವಾನಿಸುತ್ತಾರೆ. ನೋವು ಅನುಭವಿಸುತ್ತಿರುವ ವ್ಯಕ್ತಿ ಈ ಪ್ರಚಾರದಲ್ಲೇ ಆಶಾಕಿರಣವನ್ನು ಕಂಡು ಹಣ ಕಳೆದುಕೊಳ್ಳುತ್ತಿದ್ದಾನೆ. ಇದೇ ಪಂಥಕ್ಕೆ ಸೇರಿದವನು ಅವತಾರ್‌ಬಾಬಾ ಎಂದೇ ಇಷ್ಟು ದಿನವೂ ಪರಿಗಣಿಸಿದ್ದ. ಆದರೆ ಷಾಡೋ ಹೇಳಿದ ಮಾತುಗಳು ಹುಚ್ಚನನ್ನಾಗಿಸುತ್ತಿವೆ. ಅವನ ಕಣ್ಮುಂದೆಯೇ ತನ್ನ 'ಮಾಂತ್ರಿಕ ಸ್ಪರ್ಶ'ದಿಂದ ಗೂನನ್ನು ಇಲ್ಲವಾಗಿ ಮಾಡಿದ. ಗೂರಲಿನಿಂದ ನರಳುತ್ತಿದ್ದ ರೋಗಿ ಸ್ವಸ್ಥನಾಗಿದ್ದಾನೆ. ಇದೆಲ್ಲಾ ನಿಜ. ನಂಬಿದರೆ ನಂಬಿ ಬಿಟ್ಟರೆ ಬಿಡಿ. ಆದರೂ ಇದು ನಿಜ.

ಇವೆಲ್ಲಾ ಹೇಗೆ ನಡೆಯುತ್ತವೆ?

ಇವೆಲ್ಲಾ ನಿಜವೇ ಆಗಿದ್ದರೆ ತಮ್ಮ ಮೂರ್ಖತನದಿಂದಲೇ ಅದನ್ನು ಎದುರಿಸುತ್ತಿದ್ದೇವೆಯೇ? ಸಿದ್ಧಾರ್ಥನ ಅಭಿಮತ ಸರಿಯೇ? ನಡೆದುದಕ್ಕೆ ಕ್ಷಮೆಕೋರಿ ಬಾಬಾನ ಬಳಿ ಮತ್ತೆ ತಾಯತ ಕಟ್ಟಿದರೆ ಗೌರೀ ಆರೋಗ್ಯ ಪೂರ್ಣ ಮಗುವನ್ನು ಹೆರುತ್ತಾಳೇನು? ಕೇವಲ ತಮ್ಮ (ಮೂರ್ಖ) ಹಠ

ದಿಂದಲೇ ಇಷ್ಟೆಲ್ಲಾ ತೊಂದರೆಗಳು ಒದಗುತ್ತಿವೆಯೇ? ತನ್ನ ಬಳಿ ಚಿಕಿತ್ಸೆ ಪಡೆಯುತ್ತಿರುವವರು ಮಾತ್ರವೇ ವಿಕೃತ ಶಿಶುಗಳನ್ನು ಹೆರುತ್ತಿದ್ದಾರೆಯೇ?.... ಏನೂ ತೀರ್ಮಾನಿಸಲಾಗದೆ ತೊಳಲುತ್ತಿದ್ದ ಡಾಕ್ಟರ್.

ಅಷ್ಟರಲ್ಲಿ ಒಂದು ಯೋಚನೆ ಹೊಳೆಯಿತು.

ತಮ್ಮ ಬಗ್ಗೆ ಆ ಊರಿನಲ್ಲಿ ಅವಿಶ್ವಾಸ ಮೂಡುವ ಮುನ್ನ ತನ್ನ ಬಳಿ ಚಿಕಿತ್ಸೆ ಪಡೆಯುತ್ತಿದ್ದವರಲ್ಲಿ ತುಂಬು ಬಸುರಿಯರಿದ್ದಾರೆ. ಅವರಲ್ಲಿ ಇಬ್ಬರು ತಾಯತಗಳನ್ನು ಕಟ್ಟಿಸಿಕೊಂಡಿದ್ದರು. ಮೂರನೆಯ ಹೆಂಗಸಿಗೆ ಬಾಬಾ ತಾಯತ ಕಟ್ಟುವುದಿಲ್ಲ ಎಂದಿದ್ದ. ಆಕೆ ದೇವರಿಗೆ ದ್ರೋಹ ಮಾಡಿದ್ದಳಂತೆ ಆದ್ದರಿಂದ ಆಕೆ ಅನರ್ಹಳು. ಆಕೆ ಒಬ್ಬ ಕೂಲಿಯವನ ಹೆಂಡತಿ. ಎಷ್ಟು ಬೇಡಿದರೂ ಪ್ರಯೋಜನವಿಲ್ಲವಾಯಿತು. ನಿರಾಶೆಯಿಂದ ನೆರೆಯ ಊರಿನ ಹೆರಿಗೆ ಆಸ್ಪತ್ರೆಗೆ ಸೇರಿದ್ದಳು.

ಅವರು ಈಗ ಹೇಗಿದ್ದಾರೆ ಎಂಬುದನ್ನು ತಾನೇ ಹೋಗಿ ನೋಡಿ ಬಂದರೆ...? ಈ ಯೋಚನೆ ಬರುತ್ತಲೇ ಆತ ಒಂದು ನಿಮಿಷವೂ ತಡಮಾಡದೆ ತಕ್ಷಣವೇ ಹೊರಟ.

ಎದುರಿನಲ್ಲಿದ್ದ ಡಾಕ್ಟರನ್ನು ಕುರಿತು "ನಾನೂ ಲೇಬರ್ ರೂಮಿನೊಳಗೆ ಹೋಗಬಹುದೇ?" ಎಂದು ಕೇಳಿದರು ಡಾ. ರಂಗಪ್ರಸಾದ್.

"ಅಯ್ಯೋ ಅದೇನ್ಸಾರ್. ಹೀಗೆ ಕೇಳ್ತೀರಿ? ನೀವೂ ಡಾಕ್ಟರ್ ತಾನೆ. ನಿಮ್ಮನ್ನು ಬೇಡ ಎನ್ನುವರು ಯಾರು?" ಎಂದ ಡಾಕ್ಟರ್ ತನ್ನೊಂದಿಗೇ ಕರೆದುಕೊಂಡು ಹೋದ.

ಇಬ್ಬರೂ ಉದ್ದವಾದ ವರಾಂಡದಲ್ಲಿ ನಡೆಯುತ್ತಿದ್ದರು. ಇದ್ದಕ್ಕಿದ್ದಂತೆಯೇ ಡಾ. ರಂಗಪ್ರಸಾದ್ ತಟ್ಟನೆ ನಿಂತರು. ಲೇಬರ್ ರೂಂ ಮುಂದೆ ವೀರಯ್ಯ (ಆ ಹೆಣ್ಣಿನ ಗಂಡ) ಕುಳಿತಿದ್ದ, ಜತೆಯಲ್ಲಿ ಬರುತ್ತಿದ್ದ ಡಾಕ್ಟರ್ ನಿಂತು 'ಏನು?' ಎನ್ನುವಂತೆ ನೋಡಿದ.

ತನಗೆ ಹೆದರಿ ಕ್ಲಿನಿಕ್ ಬಿಟ್ಟು ಇಲ್ಲಿಗೆ ಬಂದವರು ಇವರು. ತಾನು ಇಲ್ಲೂ ಇವರ ಕಣ್ಣಿಗೆ ಬಿದ್ದರೆ 'ಇದೇನೋ ಇಲ್ಲೂ ವಕ್ರಿಸಿದ?' ಎಂದುಕೊಳ್ಳುತ್ತಾರೆ. ಅವರು ತನ್ನ ಪ್ರವೇಶವನ್ನು ನಿರೋಧಿಸಲಾರರಾದರೂ ಅವರ ಮನ ನೊಂದುಕೊಳ್ಳುವ ಸಾಧ್ಯತೆ ಇದೆ, ಅವರು ಮೂರ್ಖರೇ ಇರಬಹುದು. ತನ್ನ ನರ್ಸಿಂಗ್ ಹೋಂನಲ್ಲಿ ಪ್ರಸವ ನಡೆದರೆ ವಿಕೃತ ಶಿಶುಗಳು ಜನಿಸುತ್ತಾರೆ ಎಂಬ ನಂಬಿಕೆಯಿಂದ ನಗರಕ್ಕೆ ಬಂದವರೇ. ಆದರೂ ಕೊನೆಯ ಘಳಿಗೆಯಲ್ಲೂ ಅವರಿಗೆ ಕಾಣಿಸಿಕೊಂಡು ಅವರ ತೃಪ್ತಿಗೆ ಭಂಗತರುವ ಹಕ್ಕು ತನಗಿಲ್ಲ.

"ಲೇಬರ್ ರೂಂಗೆ ಹಿಂದಿನಿಂದ ಬೇರ್ಯಾವುದಾದರೂ ದಾರಿ ಇದೆಯೇ?"

"ಇದೆ. ಏಕೆ?"

"ಆ ಕಡೆಯಿಂದಲೇ ಹೋಗೋಣ ನಡೆಯಿರಿ"

ಜತೆಯಲ್ಲಿದ್ದ ಡಾಕ್ಟರ್ ಏನೋ ಕೇಳಲು ಬಾಯ್ತೆರೆದು ಸುಮ್ಮನಾದ. ಪಕ್ಕದ ಸಂದಿಯಲ್ಲಿ ತಿರುಗಿ ಇಬ್ಬರೂ ಹಿಂಬಾಗಿಲಿಂದ ಲೇಬರ್ ರೂಂ ಪ್ರವೇಶಿಸಿದರು.

ಸರ್ಕಾರಿ ಆಸ್ಪತ್ರೆಗಳ ಎಲ್ಲಾ ಕೋಣೆಗಳಂತೆಯೇ ಅದೂ ಇದೆ. ಯಾರೂ ಅದನ್ನು ಗಮನಿಸುತ್ತಿರುವಂತಿಲ್ಲ. ಸರ್ಕಾರದ ಕೆಲಸವಾದ್ದರಿಂದ ಆಳುಗಳಿಗೆ ಉದಾಸೀನ. ಡಾಕ್ಟರಾಗಲಿ, ಸೂಪರ್‌ವೈಸರ್‌ಗಳಾಗಲಿ ಏನೂ ಮಾಡುವ ಸ್ಥಿತಿಯಲ್ಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಹಣದ ಕೊರತೆ.

ರಂಗಪ್ರಸಾದ್ ಮಧ್ಯದಲ್ಲಿದ್ದ ಮಂಚದ ಬಳಿಗೆ ಬಂದ. ಅಲ್ಲಿ ಡಾಕ್ಟರ್ ವನಜಾಕ್ಷಿ ನಿಂತಿದ್ದಳು.

ರಂಗಪ್ರಸಾದ್ ಆಕೆಗೆ ಗೊತ್ತು. ತುಂಬಾಮಂದಿ ಡಾಕ್ಟರ್‌ಗಳಿಗೆ ಆತನು ಪರಿಚಿತ. ಬಹುಮಂದಿ ಡಾಕ್ಟರ್‌ಗಳು ಮಾಡಬೇಕೆಂದು ಬಯಸುವುದು, ಬಹುಮಂದಿ ತಮ್ಮ ಕಲ್ಪನೆಯಲ್ಲಿಯೇ ಮಾಡಿದೆವೆಂದುಕೊಂಡು ತೃಪ್ತಿ ಪಡೆಯುವಂಥದ್ದನ್ನು ಆತ ಆ ಗ್ರಾಮದಲ್ಲಿಯೇ ಮಾಡಿ ತೋರಿಸಿದ್ದ. ಆದ್ದರಿಂದಲೇ ಆತನೆಂದರೆ ಎಲ್ಲರಿಗೂ ಗೌರವ-ಶ್ರದ್ಧೆಗಳು. ಆ ನಿಸ್ವಾರ್ಥತೆ ಅನೇಕರ ಆಶಯವಾಗಿ ಮಾತ್ರವೇ ಕಾಣಬರುತ್ತದೆ.

"ಎಷ್ಟು ಹೊತ್ತಿನಿಂದ ಪ್ರಯತ್ನಿಸಿದರೂ ಮೂವ್ ಆಗುತ್ತಲೇ ಇಲ್ಲ" ಎಂದಳು. ಅಷ್ಟರಲ್ಲಿ ಹಾಸಿಗೆಯಲ್ಲಿದ್ದ ಪೇಷಂಟ್ ನೀಡಿದ ಚಿಕ್ಕ ಜರ್ಕ್ ಆ ಮೂವರ ದೃಷ್ಟಿಯನ್ನೂ ಆಕರ್ಷಿಸಿತು. ನರ್ಸ್ ಒಡನೆಯೇ ಬಗ್ಗಿ ಅಣಿಗೊಳಿಸಿದಳು.

ಮೊದಲು ಕಾಲೇ ಕಾಣಿಸಿಕೊಂಡಿತು.

ರಂಗಪ್ರಸಾದ್ ಉಸಿರು ಬಿಗಿ ಹಿಡಿದ. ಹಿಂದಿನ ರಾತ್ರಿಯ ಆಹಾರ ಜೀರ್ಣವಾಗದ ಹಾವೊಂದು ಹುತ್ತದಿಂದ ಮೆಲ್ಲ ಮೆಲ್ಲನೆ ಹೊರಬರುತ್ತಿರುವಂತೆ ಭಾಸವಾಗುತ್ತಿತ್ತು. ಅದೇನೋ ಸಂದಿಗ್ಧ. ಅಷ್ಟರಲ್ಲಿ ಅರ್ಧ ಶಿಶು ಹೊರಬಂತು.

ರಂಗಪ್ರಸಾದ್ ಅಪ್ರಯತ್ನವಾಗಿ ಒಂದಡಿ ಹಿಂದಿರಿಸಿದ. ತುಂಬಾ ಅನುಭವಶಾಲಿಯಾದ ಡಾ|| ವನಜಾಕ್ಷಿಯೂ ಕಣ್ಣರಳಿಸಿ ಕ್ಷಣಕಾಲ ಏನೂ ತೋಚದವಳಂತೆ ನೋಡಿದಳು. ಶಿಶುವಿನ ಕಾಲಿನೊಂದಿಗೆ ಸೊಂಟವೂ

ಬಂದಿತ್ತು. ಮೂರನೆಯ ಡಾಕ್ಟರ್‌ಗೆ ಪ್ರಸವಗಳ ಬಗ್ಗೆ ಹೆಚ್ಚು ತಿಳಿಯದಾದ್ದರಿಂದ ಆತ ಮಾಮೂಲಿಯಾಗಿಯೇ ಇದ್ದ. ಉಳಿದಿಬ್ಬರೂ ತೀರಾ ವಿಕಲಚಿತ್ತರಾಗಿದ್ದದ್ದು ನೋಡುತ್ತಲೇ ಗೊತ್ತಾಗುತ್ತಿತ್ತು.

ಕಾಲುಗಳ ಮಧ್ಯದಿಂದ ಪೂರ್ಣ ಶಿಶು ಹೊರಬಂತು.

ತಾಯಿಯ ಮುಖದ ಬಳಿ ಇದ್ದ ನರ್ಸ್ ಕಾತರಳಾಗಿದ್ದಳು. ಇದ್ದಕ್ಕಿದ್ದಂತೆಯೇ ಭೂಲೋಕಕ್ಕೆ ಇಳಿದು ಬಂದವಳಂತೆ ಎಚ್ಚೆತ್ತು ಆ ಕಡೆಗೆ ಹೊರಟಳು. ರಂಗಪ್ರಸಾದ್ ಮಾತ್ರ ಕದಲಲಿಲ್ಲ. ಹಾಗೇ ನಿಂತಿದ್ದ.

ತಾಯಿ ಸತ್ತಳೆಂಬುದು ಕಾಣಿಸುತ್ತಿದೆ. ಆದರೂ ಆತ ಚಲಿಸಲಿಲ್ಲ. ತಾನು ಮಾಡಲು ಏನೂ ಉಳಿದಿಲ್ಲ ಎಂಬುದು ಆತನಿಗೆ ಗೊತ್ತಾಗಿತ್ತು. ಆದರೂ ಆತ ಯೋಚಿಸುತ್ತಿದ್ದದ್ದು ತಾಯಿಯ ಬಗ್ಗೆಯಲ್ಲ. ಕಣ್ಣೆವೆ ಇಕ್ಕದೆ ಆ ಮಗುವನ್ನೇ ನೋಡುತ್ತಿದ್ದ.

ಪ್ರಪಂಚದ ಚರಿತ್ರೆಯಲ್ಲಿ ಎಂದೂ ಆ ರೀತಿ ನಡೆದಿಲ್ಲ. ಹುಟ್ಟಿದ ಮಗು ಎಲ್ಲೂ ಇಲ್ಲದ ರೀತಿಯಲ್ಲಿ ಕುಳಿತಿದ್ದ. ಕಾಲು 'ಮೂರು' ಅಂಕಿಯಂತಿದೆ. ಇನ್ನೊಬ್ಬ ನರ್ಸ್ ಸಣ್ಣ ಬಟ್ಟೆಯಿಂದ ಅಲ್ಲಿ ಒರೆಸುತ್ತಿದ್ದಾಳೆ. ಆಕೆಯೂ ಹೊಸಬಳೇನೋ, ತಲೆಯನ್ನು ಮುಟ್ಟಲು ಭಯಪಡುತ್ತಿದ್ದಾಳೆ.

ಶಿಶು ಕಣ್ತೆರೆದುಕೊಂಡೇ ಇದೆ!

ಹುಟ್ಟಿ ಎರಡು ತಿಂಗಳಾಯಿತೇ? ಗರ್ಭದಿಂದಲೇ ಪ್ರಪಂಚವನ್ನೆಲ್ಲಾ ನೋಡುತ್ತಿದ್ದನೇನೋ ಎನಿಸುವಂತೆ ತೆರೆದಿದ್ದ ಆ ಕಣ್ಣು. ರಂಗಪ್ರಸಾದ್ ಹೃದಯಾಂತರಾಳದಲ್ಲಿರುವ ರಹಸ್ಯವನ್ನು ನೋಡುತ್ತಿರುವಂತೆ ರಂಗಪ್ರಸಾದ್ ಕಡೆ ತೀಕ್ಷ್ಣವಾಗಿ ನೋಡಿತು. ಅಷ್ಟರಲ್ಲಿ ನಗು! 'ಎಂಟನೆಯವನು ಬರುತ್ತಿದ್ದಾನೆ' ಎಂದು ಹೇಳುತ್ತಿರುವಂತೆ ಅನಿಸಿಕೆ. ತನ್ನ ಈ ಸಂದೇಹಕ್ಕೆ ಪ್ರತಿಕ್ರಿಯೆ ಏನು ಎಂದು ಕುತೂಹಲದಿಂದ ನೋಡುತ್ತಿವೆ ಆ ಕಣ್ಣುಗಳು. ಸಮಾಧಿಯ ಮೇಲೆ ಮೊಳೆತ ಪೊರಕೆ ಕಟ್ಟುಗಳಂತೆ ತಲೆಗೂದಲು ತೂಗುತ್ತಿದೆ.

ರಂಗಪ್ರಸಾದ್‌ನ ಮೈಮೂಳೆಗಳಲ್ಲಿ ಚಳಿಯ ಕೊರೆತ ಪ್ರಾರಂಭವಾಗಿ ಮೈಯೆಲ್ಲಾ ವ್ಯಾಪಿಸಿದಂತಿತ್ತು. ಮೈನಡುಗುತ್ತಿತ್ತು. ಕ್ಷುದ್ರಗಣಾಧಿಪತಿಗಳೆಲ್ಲಾ ತನ್ನ ಸುತ್ತಲೂ ಸೇರಿ ಮೌನ ಸ್ವರದಲ್ಲಿ 'ಹಹಾ ಹಿಹೀ ಹೆಹೇ ಹೋ ಹೋ...' ಎಂದು ಚೀರುತ್ತಾ ರುದ್ರ ಭಯಂಕರ ತಾಂಡವವನ್ನಾಡುತ್ತಿರುವಂತೆ ತೋರಿತು. ಅಷ್ಟಾವಕ್ರನ ಹುಟ್ಟನ್ನು ಇನ್ಯಾರೂ ತಡೆಯಲಾರರು ಎನ್ನುವಂತೆ ಧೈರ್ಯದಿಂದ ಆ ಶಿಶು ಆತನನ್ನೇ ದಿಟ್ಟಿಸುತ್ತಿತ್ತು.

ರಂಗಪ್ರಸಾದ್ ಮನೋರಂಗ ಭಾವನೆಗಳ ತಾಕಲಾಟದ ರಣರಂಗವಾ

ಯಿತು. ಮೊದಲ ಬಾರಿಗೆ ಭಯವೆಂಬುದು ಆತನಲ್ಲಿ ಪ್ರವೇಶಿಸಿತ್ತು. ಬಾಬಾ ಮಾತುಗಳು ಸತ್ಯವೇ? ಅಷ್ಟಾವಕ್ರನು ಹುಟ್ಟುತ್ತಾನೇನು? ಅದಕ್ಕೆ ಕೊನೆಯ ನಿದರ್ಶನ ಇದೇನೇ? ಕೇದಾರಗೌರಿಯ ಗರ್ಭವೇ ಇದಕ್ಕೆ ಎಡೆಯಾಗುತ್ತದೆಯೇ....?

ಅಷ್ಟರಲ್ಲಿ ಒಳಗೆ ತಾಯಿಯ ಸ್ಥಿತಿ ಹೊರಗಿನವರಿಗೆ ತಿಳಿದಂತಿದೆ. ಅಳುವಿನ ಸ್ವರ ಕೇಳಿಸುತ್ತಿದೆ. ರಂಗಪ್ರಸಾದ್ ನಿಶ್ಚಲನಾಗಿದ್ದ. ಶಿಶುವನ್ನು ಹಾಗೇ ನೋಡುತ್ತಿದ್ದ.

ತನ್ನ ಕೆಲಸ ಮುಗಿದಂತೆ, ತಾನು ತಲುಪಿಸಬೇಕಾಗಿದ್ದ ಸಂದೇಶವನ್ನು ತಲುಪಿಸಿದಂತೆ, ಆ ಶಿಶುವಿನ ಶರೀರ ಬರುಬರುತ್ತಾ ಸಾಮಾನ್ಯದ್ದಾಗಿ ಹಿಂದಕ್ಕುರುಳಿತು; ಕಣ್ಮುಚ್ಚಿತು. ಶಿಶುವಿನ ಪ್ರಾಣವೂ ಹೋಗಿತ್ತು.

ಐದು ನಿಮಿಷಗಳ ನಂತರ ಡಾ|| ರಂಗಪ್ರಸಾದ್ ಆಸ್ಪತ್ರೆಯಿಂದ ಹೊರಕ್ಕೆ ಬಂದ. ಸ್ಮಶಾನದಿಂದ ಮನೆಗೆ ಹೋಗುತ್ತಿರುವವನ ಮುಖದಂತಿತ್ತು ಆತನ ಮುಖ–ಯಾವುದೇ ರೀತಿಯ ತೇಜಸ್ಸೂ ಇರಲಿಲ್ಲ. ತುಂಬಾ ನಿಶ್ಶಕ್ತನಂತೆ ಅಡಿಯಿರಿಸುತ್ತಿದ್ದ.

ತಾನು ಗೌರಿಯ ಹೆರಿಗೆ ಮಾಡಿಸುವುದು ಎಂಬುದೇ ಭಯಂಕರವಾಗಿ ತೋರುತ್ತಿತ್ತು. ತನ್ನ ಹಿಂದೆ ನಿಂತು ಏಳು ಶಿಶುಗಳು ವಿಕಟಾಟ್ಟಹಾಸ ಮಾಡುತ್ತಿರುವಂತೆ ಧ್ವನಿ. ಆ ಧ್ವನಿ ಕ್ರಮ ಕ್ರಮವಾಗಿ ಹತ್ತಿರವಾಗಿ ಕಿವಿಯಲ್ಲೇ ಅಪ್ಪಳಿಸುತ್ತಿದ್ದಂತಹ ಭಾವನೆ.

## ೨೭

"ನನಗೆ ಭಯವಾಗುತ್ತದೆ" ಎಂದಳು ರಂಜಿತಾ.

ಷಾಡೋ ಮಾತನಾಡಲಿಲ್ಲ.

"ಅಷ್ಟು ಎಚ್ಚರಿಕೆಯಲ್ಲಿದ್ದಾರೆ ಎಂದರೆ ಎಂತಹ ಪರಿಸ್ಥಿತಿಯಲ್ಲೂ ತಮ್ಮ ರಹಸ್ಯ ಹೊರಬೀಳದೆಂಬ ನಂಬಿಕೆ ಅವರಿಗಿದೆ. ಅಂತಹುದರಲ್ಲಿ ಅಲ್ಲಿಗೆ ನೀವು ಹೋಗುವುದು ದುಸ್ಸಾಹಸವೇ!"

ಷಾಡೋ ಎದ್ದುನಿಂತು "ನಾನು ಹೋಗಿಬರುತ್ತೇನೆ ರಂಜಿತಾ" ಎಂದ.

ಅದುವರೆವಿಗಿನ ತನ್ನ ಯಾವ ಮಾತನ್ನೂ ಕೇಳಿಸಿಕೊಂಡಿಲ್ಲ ಎಂಬುದನ್ನು ಅರಿತ ರಂಜಿತಾ "ಖಂಡಿತವಾಗಿಯೂ ಹೋಗಲೇಬೇಕೇನು?" ಎಂದು

ಕೇಳಿದಳು.

"ಬೇರೆ ಹಾದಿಯೇ ಇಲ್ಲ ರಂಜಿತಾ. ನಾನು ಮಾಡುತ್ತಿರುವುದು ತೀರಾ ಭಯಂಕರವಾದ ಕೆಲಸವೆಂದೂ, ಹುಲಿಯ ಬೋನಿನಲ್ಲಿ ಪ್ರವೇಶಿಸುವ ಕೆಲಸ ವೆಂದೂ ನನಗೆ ಗೊತ್ತು. ಆದರೆ ಬೇರೆ ಮಾರ್ಗವೇ ಇಲ್ಲ. ಈ ಸಮಸ್ಯೆ ನನ್ನ ತಂಗಿಗೆ ಸಂಬಂಧಿಸಿದ್ದಲ್ಲವೆಂದಿದ್ದರೆ ನಾನಿಷ್ಟು ರಿಸ್ಕ್ ತೆಗೆದುಕೊಳ್ಳು ತ್ತಿರಲಿಲ್ಲ" ಎಂದು ಆಕೆಯತ್ತ ನೋಡಿ ಶಾಂತ ಸ್ವರದಲ್ಲಿ ಗಂಭೀರವಾಗಿ ನುಡಿದ, "ಸಾರಿ ರಂಜಿತಾ, ನನ್ನ ಈ ನಿರ್ಣಯ ಮೂರ್ಖರ ನಿರ್ಣಯದಂತೆ ಕಾಣಿಸಬಹುದು. ಆದರೆ ನಾನು ಉಸ್ಕೋಕ್‌ನಲ್ಲಿ ಸೇರಬೇಕು, ಅದೇನೋ ತಿಳಿಯಬೇಕು. ಆ ಅಷ್ಟಾವಕ್ರನ ವಿಷಯವೇನೋ ತಿಳಿದುಕೊಳ್ಳಲೇಬೇಕು. ಆದ್ದರಿಂದ ನನ್ನನ್ನು ದಯಮಾಡಿ ತಡೆಯಬೇಡ.

ತಾನೆಷ್ಟು ಹೇಳಿದರೂ ಆತ ಕೇಳುವುದಿಲ್ಲವೆಂಬುದನ್ನು ಅರಿತು ರವಿ ಯನ್ನು ಸಮೀಪಿಸಿದಳು. ಆ ನರರೂಪೀ ರಾಕ್ಷಸರು ಈತನ ಬಗ್ಗೆ ಎಳ್ಳಷ್ಟು ಅನುಮಾನಿಸಿದರೂ ಸಾಕು ಇದೇ ಕಡೆಯ ಭೇಟಿ! ಅಪ್ರಯತ್ನವಾಗಿ ಕಣ್ಣೀರು ತುಂಬಿತು. ಆದರೆ ಅದನ್ನು ಅವನ ಕಣ್ಣಿಗೆ ಬೀಳಗೊಳಿಸಲಿಲ್ಲ.

ರವಿ ಅವಳನ್ನು ಬರಸೆಳೆದು ಅಪ್ಪಿಕೊಂಡು ನೊಸಲಿನ ಮೇಲೆ ಮೃದು ವಾಗಿ ಮುತ್ತನ್ನೊತ್ತಿ "ಒಂದು ವೇಳೆ ನನಗೇನಾದರೂ ಆದರೆ ಹುಚ್ಚು ಆದರ್ಶಗಳಿಗೆ ಬಲಿಯಾಗಬೇಡ. ಷಾಡೋನ ಪರಿಚಯದ ಮಧುರ ಸ್ಮೃತಿ ಉಳಿಸಿಕೊಂಡು ಭವಿಷ್ಯವನ್ನು ಆನಂದವಾಗಿಸಿಕೋ. ಇದೇ ನನ್ನ ಕೊನೆಯ ಕೋರಿಕೆ" ಎಂದು ಮತ್ತೊಮ್ಮೆ ಮುತ್ತಿಟ್ಟ.

ಈ ಮಾತಿನಿಂದ ಅವಳ ವ್ಯಥೆ ಮತ್ತೂ ಹೆಚ್ಚಿತು. ತುಂಬಾ ಪ್ರಯತ್ನ ದಿಂದ ಅದನ್ನು ಅಡಗಿಸಿಕೊಂಡಳು. ತನ್ನ ಕೈಯಲ್ಲಿದ್ದ ವಾಚನ್ನು ತೆಗೆದು ಅವನ ಕೈಗೆ ಕಟ್ಟುತ್ತಾ "ನಿನಗೆ ನನ್ನ ನೆನಪಿರಲು ಇದು" ಎಂದಳು ನಕ್ಕು. ಆದರೆ ಆ ನಗುವಿನಲ್ಲಿ ಜೀವವಿರಲಿಲ್ಲ. ರವಿ ವಹಿಸಿಕೊಂಡಿರುವುದು ಎಷ್ಟು ಭಯಂಕರ ವಾದ ರಿಸ್ಕ್ ಎಂಬುದನ್ನು ಅವಳು ತಿಳಿದಿದ್ದಳು. ಮನಸ್ಸಿನ ಆಡಿಪೊರೆಯಲ್ಲಿ ಅಡಗಿರಬಹುದಾದುದನ್ನೂ ಕ್ಷುದ್ರಗಣಗಳ ನೆರವಿನಿಂದ ಹೊರಕ್ಕೆಳೆದು ತಿಳಿಯ ಬಲ್ಲ ನರರಾಕ್ಷಸರ ಬಳಿ ಹೋಗುತ್ತಿದ್ದಾನೆ. ಬಹುಶಃ ಮತ್ತೆ ಬರಲಾರದೆ ಹೋಗಬಹುದು. ಅತ್ಯಂತ ಭಯಂಕರವಾದ ಆ ಘಳಿಗೆಯನ್ನು ತೀರಾ ಸಾಧಾ ರಣವಾಗಿ ತೆಗೆದುಕೊಳ್ಳಲು ಪ್ರಯತ್ನಿಸುತ್ತಿರುವಂತೆ, ಎದುರಿನಲ್ಲಿರುವವರನ್ನು ನಂಬಿಸಲು ಇಬ್ಬರೂ ಪ್ರಯತ್ನಿಸುತ್ತಿದ್ದರು!

ಅಷ್ಟರಲ್ಲಿ ಗಡಿಯಾರ ಗಂಟೆಯನ್ನು ಬಡಿದು ಸಮಯವಾಯಿತೆಂದು

ಎಚ್ಚರಿಸಿತು. "ಹೊತ್ತಾಯಿತು, ಬರ್ತೀನೆ" ಎಂದ ರವಿ. ಆಕೆ ಮೌನವಾಗಿ ತಲೆಯಾಡಿಸಿದಳು.

ರವಿ ಹೊರಕ್ಕೆ ಅಡಿ ಇರಿಸಿದ.

ರಂಜಿತಾ ಅವನನ್ನೇ ನೋಡುತ್ತಾ ಇದ್ದಳು. ರವಿ ದೂರ ಸಾಗುತ್ತಿದ್ದ.

* * * *

ರವಿ ಬರುವ ವೇಳೆಗೆ ಗೊತ್ತುಮಾಡಿದ ಪ್ರದೇಶದಲ್ಲಿ ಬ್ಲಾಕ್ ಸ್ಕೆಲಿಟನ್ ಕಾಯುತ್ತಿದ್ದ. ಅವನನ್ನು ಕಾಣುತ್ತಲೇ "ಹೋಗೋಣವೆ?" ಎಂದ. ಷಾಡೋ ತಲೆದೂಗಿದ.

ಅದೇ ಇಕ್ಕಟ್ಟಾದ ಸಂದು. ಅದೇ ಕತ್ತಲೆ.

ಇಬ್ಬರೂ ಒಂದು ಮನೆಯ ಮುಂದೆ ನಿಂತರು. ತೀರಾ ಸಣ್ಣ ಬಾಗಿಲು.

ಬ್ಲಾಕ್ ಸ್ಕೆಲಿಟನ್ ಬಾಗಿಲು ತಟ್ಟಿದ. ಒಳಗೆಲ್ಲೊ ಗಂಟೆಯ ಸದ್ದಾಯಿತು. ಬಾಗಿಲು ತೆರೆದುಕೊಂಡಿತು. ಇಬ್ಬರೂ ಒಳಕ್ಕೆ ಅಡಿಯಿಡುತ್ತಾ ಇರುವಾಗ "ಮನಸ್ಸನ್ನು ನಿರ್ಮಲವಾಗಿರಿಸಿಕೋ, ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರವನ್ನು ಹೇಳು. ನೀನು ಸುಳ್ಳು ಹೇಳಬೇಕೆಂದುಕೊಂಡರೂ ಹೇಳಲಾರೆ. ಜಾಗ್ರತೆಯಿಂದಿರಲು ನಿನಗೆ ಸಾಧ್ಯವೇ ಇಲ್ಲ!" ಎಂದು ಹೇಳಿದ ಅವನು.

ಬಿಳಿಯ ವಸ್ತ್ರಗಳನ್ನು ತೊಟ್ಟಿದ್ದ ವೃದ್ಧನೊಬ್ಬ ಅಲ್ಲಿಗೆ ಬಂದ.

ಒಳಗೆ ವಿಶಾಲವಾದ ಹಾಲ್. ಅಲ್ಲಿ ಸ್ಮಶಾನ ಮೌನ ಹರಡಿತ್ತು.

ಹಾಲು ಮಧ್ಯದಲ್ಲಿ ಗೆಲಿಟಿನ್! ತಲೆಗಳನ್ನು ಇಡಲು ರಂಧ್ರಗಳು! ಕತ್ತರಿಸಲು ಕತ್ತಿಗಳು!

ಇಬ್ಬರ ಕೈಗಳನ್ನು ಹಿಂದಕ್ಕಿರಿಸಿ ಕಟ್ಟಲಾಯಿತು.

"ಉಸ್ರೋಕ್‌ನನ್ನು ಮೋಸ ಮಾಡುವ ಮನಸ್ಸೇನಾದರೂ ನಿನ್ನಲ್ಲಿ ಇದ್ದರೆ ನಿನ್ನ ತಲೆಯೂ, ನಿನ್ನನ್ನು ಕರೆತಂದುದಕ್ಕಾಗಿ ನನ್ನ ತಲೆಯೂ ಕತ್ತರಿಸಲ್ಪಡುತ್ತವೆ."

ಷಾಡೋ ಮಾತನಾಡಲಿಲ್ಲ. ಯಾವುದೋ ಅದೃಶ್ಯ ಶಕ್ತಿ ಅವನನ್ನು ಆವರಿಸುತ್ತಿರುವಂತೆ ತೋರುತ್ತಿತ್ತು, ಮನಸ್ಸನ್ನು ನಿಯಂತ್ರಿಸಬೇಕೆಂದುಕೊಂಡ, ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ಕೊರಳಿನ ಮೇಲೆ ಮರದ ಹಲಿಗೆ ಬಿಗಿಯಿತು. ಕೊರಳಿಗೆ ಆರು ಅಂಗುಲಗಳ ಮೇಲೆ ಕತ್ತಿ ತೂಗಾಡುತ್ತಿತ್ತು. ದೂರದಲ್ಲಿ ಸದ್ದು ಪ್ರಾರಂಭವಾಯಿತು.

ಅದರೊಂದಿಗೇ ಪ್ರಶ್ನೆಗಳು ಪ್ರಾರಂಭವಾದುವು.

"ಮಿತ್ರನೇ, ನಿನ್ನ ಹೆಸರು?"

ಪಾಡೋ ಸುಳ್ಳು ಹೇಳೋಣ ಎಂದುಕೊಂಡ. ಆದರೆ ಏನೋ ನಡೆಯುತ್ತಿದೆ. ಏನೋ ಕಂಪನ ಅಲ್ಲಿ ಧ್ವನಿಸುತ್ತಿದೆ. ಮತ್ತೆ ಏನೋ ಕೇಳಿಸುತ್ತಿದೆ. ಅವನ ಮಿದುಳನ್ನೇ ನಿಯಂತ್ರಿಸುತ್ತಿವೆ. ಅವು ಶಾಸ್ತ್ರೀಯವಾದ ತಂತ್ರವಾದ್ಯಗಳು ಸೃಷ್ಟಿಸುತ್ತಿರುವ ಕಂಪನವೋ ಇಲ್ಲ, ಅದೃಶ್ಯರೂಪದಿಂದ ಸುತ್ತಲೂ ನೆರೆದು 'ಹೇಳು... ನಿಜ ಹೇಳು' ಎಂದು ಒಂದೇ ಸಮನೆ ಕಿರುಚುತ್ತಿರುವ ಅತೀಂದ್ರ ಶಕ್ತಿಗಳೋ ಗೊತ್ತಾಗುತ್ತಿರಲಿಲ್ಲ. ಆ ಗೂಂಜಾರವ ಕೇಳಿಸುತ್ತಿರಲಿಲ್ಲವಾದರೂ ಅವನ ಮಿದುಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಅವನಿಂದ ನಿಜವನ್ನು ಹೇಳಿಸುತ್ತಿವೆ. ಈ ವಿಷಯ ಅವನಿಗೂ ಗೊತ್ತಾಗುತ್ತಿದೆ.

ಇನ್ನು ಸ್ವಲ್ಪ ಹೊತ್ತಾದರೆ ಅದೂ ಗೊತ್ತಾಗುವುದಿಲ್ಲ. ಆಗ್ಗೆ ಅವನ ಅಂತರ್ಮನ ಅವರ ಮುಷ್ಟಿಯಲ್ಲಿ ಸಿಕ್ಕಿಕೊಳ್ಳುತ್ತದೆ. ಕಾನ್‌ಷಿಯಸ್ ಮೈಂಡ್‌ಗೂ, ಸಬ್‌ಕಾನ್‌ಷಿಯಸ್ ಮೈಂಡ್‌ಗೂ ಮಧ್ಯೆ ನಡೆಯುತ್ತಿದ್ದ ಈ ಘರ್ಷಣೆಯಲ್ಲಿ ಸ್ವಲ್ಪಹೊತ್ತಿಗೆ ಮನಸ್ಸು ತನ್ನ ಶಕ್ತಿಯನ್ನು ಕಳೆದುಕೊಂಡು ನಿಜವನ್ನು ಹೊರಹಾಕುತ್ತದೆ.

ಹಾಗೆ ಮೊದಲ ನಿಜಸಂಗತಿ ತನ್ನ ಬಾಯಿಂದ ಹೊರಬಂದ ಮರುಕ್ಷಣವೇ ಗಿಲೆಟನ್ನಿನ ಕತ್ತಿ ಮೇಲಿಂದಿಳಿದು ಕೊರಳನ್ನು ಕತ್ತರಿಸುತ್ತದೆ. ಅದರೊಂದಿಗೆ ಪಕ್ಕದಲ್ಲಿರುವವನ ತಲೆಯನ್ನು ಬೇರೆ ಮಾಡುತ್ತದೆ.

ಮೊದಲೇ ಸಣ್ಣನೆಯ ಧ್ವನಿ ಮತ್ತೂ ಸಣ್ಣದಾಗಿ ಮಿದುಳಿನಲ್ಲಿ ಸೂಜಿಯಂತೆ ಚುಚ್ಚುತ್ತಾ ಇತ್ತು: "ಮಿತ್ರನೇ ನಿನ್ನ ಹೆಸರು?"

'ಕೃಷ್ಣ' ಎಂದು ಉತ್ತರಿಸಬೇಕೆಂದುಕೊಂಡ. ಆದರೆ ಮನಸ್ಸು ಅದಕ್ಕೆ ವಿರೋಧಿ, ಕ್ಷುದ್ರ ಶಕ್ತಿಗಳು ತನ್ನ ಅಶಕ್ತತೆಯನ್ನು ನೋಡಿ ವಿಕಟಾಟ್ಟಹಾಸ ಮಾಡುತ್ತಿರುವಂತೆ ಭ್ರಾಂತಿ. "ಕ್... ಕು.... ಕೃ.... ಕರ್.... ರ್.... ರ... ರವಿ" ಎಂದ. ಅವನ ನೊಸಲಿನಿಂದ ಧಾರೆಯಾಗಿ ಬೆವರು ಹನಿಯುತ್ತಿತ್ತು. ತಾನು ಸೋಲುತ್ತಿರುವುದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಈ ಅಧೃಶ್ಯ ಶಕ್ತಿಯೊಂದಿಗೆ ಸೆಣಸುವುದು ಹೇಗೆ? ನಿಜವಾಗಿಯೂ ಕ್ಷುದ್ರದೇವತೆಗಳು ಉಂಟೇ? ಉಸ್ಪೋಕ್ ಹಿಂದೆ ನೆರವಾಗಿ ನಿಂತಿವೆಯೇ? ಇಷ್ಟು ಕಾಲದಿಂದ ತಾನು ಗಳಿಸಿರುವ ತಿಳಿವೆಲ್ಲಾ ಕೇವಲ ತನ್ನಲ್ಲೂ ನಿಜವೆನಿಸಿಕೊಳ್ಳುವುದಿಲ್ಲವೇ?

ಇನ್ನು ಕಥೆ ಮುಗಿಯಿತು. ಮರುಕ್ಷಣದಲ್ಲಿ ಅವರು ಕೇಳಲಿರುವ ಎರಡನೆಯ ಪ್ರಶ್ನೆಗೆ ನಿಜವಾದ ಉತ್ತರ ಹೇಳದೆ ಗತ್ಯಂತರವೇ ಇಲ್ಲ. ಅದರ ಫಲವಾಗಿ ತಲೆಯುರುಳುವುದೂ ಅಷ್ಟೇ ಖಚಿತ. ಮುಂದಿನ ಹಾದಿ....

ಅಷ್ಟರಲ್ಲಿ ರಂಜಿತಾ ಕೊಟ್ಟ ವಾಚ್ ನೆನಪಾಯಿತು. 'ನಿನ್ನ ಶರೀರದಿಂದ ಮುಖ್ಯವಾದ ಒಂದು ಅಂಗ ಮಾಯವಾಗುತ್ತದೆ' ಎಂದು ಸೂಚನೆ ಕೊಟ್ಟಾಗಲೂ ಮಿದುಳು ಇದೇ ರೀತಿಯಲ್ಲಿ ನಿರ್ವೀರ್ಯವಾಗಿತ್ತು. ಅದರ ಕಾರಣವನ್ನು ಹೇಳುತ್ತಾ ರಂಜಿತಾ ಗಡಿಯಾರದಿಂದ ಹೊರಚಿಮ್ಮುವ ಸಾನಿಕ್ ಸೌಂಡ್ ಬಗ್ಗೆ ವಿವರಿಸಿದ್ದಳು. ಅದೇ ತರಂಗಗಳನ್ನು ಈ ಕ್ಷುದ್ರ ಶಕ್ತಿಗಳ ಮೇಲೆ ಪ್ರಯೋಗಿಸಿದರೆ...?

...ಯೋಚನೆಯಲ್ಲಿ ಕಾಲವನ್ನು ಕಳೆಯುವುದರಲ್ಲಿ ಇಚ್ಛೆಯಿರಲಿಲ್ಲ. ಹಿಂದೆ ಕಟ್ಟಿದ್ದ ಕೈಯನ್ನು ಕದಲಿಸಲಾರಂಭಿಸಿದ. ಕಟ್ಟಿದ್ದರಿಂದ ಅದು ಮೇಲಕ್ಕೆ ಬರುವುದು ಕಷ್ಟವಾಗಿತ್ತು. ಆದರೇನು ಇದು ಜೀವನ್ಮರಣದ ಸಮಸ್ಯೆ. ಮೊಣಕೈ ಬಳಿ ವಿಪರೀತವಾದ ನೋವು. ಆದರೂ ಪ್ರಯತ್ನ ನಿಲ್ಲಿಸಲಿಲ್ಲ. ಹಿಂದೆ ಕೊರಳತನಕ ಕೈಗಳು ಬಂದವು. ಆಗ ರಾಡನ್ನು ಅದುಮಿದ. ಕೇಳಿಯೂ ಕೇಳಿಸದಂತೆ ಸದ್ದು ಮೊದಲಾಯಿತು. ಕ್ರಮವಾಗಿ ಸದ್ದು ಕೇಳಿಸದಾಯಿತು. ಕಿವಿಗೆ ಮಾತ್ರವೇ ಅದು ಕೇಳಿಸುತ್ತಿರಲಿಲ್ಲ. ಮಿದುಳು ಮಾತ್ರ ಆ ತರಂಗಗಳನ್ನು ಗ್ರಹಿಸುತ್ತಲೇ ಇದೆಯೆಂಬುದನ್ನು ಹದಿನೈದು ಸೆಕೆಂಡುಗಳಲ್ಲಿಯೇ ಷಾಡೋ ಅರಿತುಕೊಂಡ.

ಅದುವರೆವಿಗೂ ಆ ಕೋಣೆಯಲ್ಲಿ ಹರಡಿಕೊಂಡಿದ್ದ ಇಕ್ಕಟ್ಟಿನ ಭಾವನೆ ತನ್ನ ಪಾಲಿಗೆ ತೊಲಗಿತ್ತು. ಮಿದುಳನ್ನು ಅದುಮಲು ಹುಟ್ಟಿಸಿದ ಸದ್ದು ಮಾಯವಾದ ಅನಿಸಿಕೆ. ಸಿನಿಮಾದಲ್ಲಿ ಒಂದು ಬಾಣಕ್ಕೆ ವಿರುದ್ಧವಾಗಿ ಮತ್ತೊಂದು ಬಾಣ ಬಂದು ಎರಡೂ ಡಿಕ್ಕಿ ಬಡಿದುಕೊಂಡು ಬೂದಿಯಾದ ಕ್ಷಣದಲ್ಲಿ ಮಾಮೂಲು ಪರಿಸ್ಥಿತಿ ಸ್ಥಾಪಿತವಾದಂತೆ ಆಗಿತ್ತು.

'ಥ್ಯಾಂಕ್ಯೂ ರಂಜಿತಾ' ಎಂದುಕೊಂಡ. ಉಸ್ಪೋಕ್‌ನಲ್ಲಿ ಸೇರಲಿರುವ ಸದಸ್ಯನಿಂದ ಹೇಗಾದರೂ ನಿಜವನ್ನೇ ಹೇಳಿಸುತ್ತಾರೆ ಎಂದು ತಾನು ಹೇಳುತ್ತಲೇ ಇಷ್ಟು ದೂರ ಯೋಚಿಸಿದ್ದಳು. ಇದು ಶಬ್ದ ಕಂಪನಕ್ಕೆ ಸಂಬಂಧಿಸಿದ್ದು ಎಂದು ಗ್ರಹಿಸಿ ಬಹುಮಾನದ ಹೆಸರಿನಲ್ಲಿ ಇದನ್ನು ಕಟ್ಟಿ ಕಳುಹಿಸಿದ ತನ್ನ ಗರ್ಲ್‌ಫ್ರೆಂಡ್....ತನ್ನ ಭಾವೀ ಪತ್ನಿ....ತನ್ನ ಜೀವವನ್ನೇ ರಕ್ಷಿಸಿದ್ದಳು.

ಮನವೆಲ್ಲಾ ಕೃತಜ್ಞತೆಯಿಂದ ತುಂಬಿತ್ತು. ಅದರೊಂದಿಗೆ ಆನಂದವೂ ಮಿಶ್ರಿತವಾಗಿತ್ತು. ಇಷ್ಟೊಂದು ಪ್ರಜ್ಞಾಶಾಲಿ ತನ್ನ ಪತ್ನಿಯಾಗುತ್ತಿದ್ದಾಳೆ ಎಂಬುದೇನು ಸಾಮಾನ್ಯದ ಸಂಗತಿಯೇ! ಇಷ್ಟು ದಿನವೂ ತಾನು ಮ್ಯಾಜಿಕ್ ಮಾಡಿದರೆ ಅದನ್ನು ಬಿಟ್ಟ ಕಣ್ಣುಗಳಿಂದಲೇ ನೋಡುವಂತಹ ಮುಗ್ಧ ಹುಡುಗಿಯರನ್ನು ಮಾತ್ರವೇ ನೋಡಿದ್ದ. ಹೆಂಗಸರ ಜಾಣತನದ ಬಗ್ಗೆ ಅವನಿಗೇನು

ಒಳ್ಳೆಯ ಅಭಿಪ್ರಾಯವಿರಲಿಲ್ಲ. ಆದರೆ ಅವನ ಅಭಿಪ್ರಾಯಗಳನ್ನೆಲ್ಲಾ ತಲೆ ಕೆಳಗು ಮಾಡುವಂತಹ ಒಬ್ಬ ಹುಡುಗಿಯನ್ನು ಅವನು ಈಗ ಕಂಡಿದ್ದ. ಇಷ್ಟು ದಿನಗಳಿಗೆ ಪ್ರೇಕ್ಷಕರನ್ನು ಮೂಕರನ್ನಾಗಿಸಿ ಅವರ ಮನಸ್ಸನ್ನು ಅರಳಿಸುವಂತೆ ಯಕ್ಷಿಣಿ ಮಾಡಬಲ್ಲ ಸಾಧಾರಣ ಪಾಚನ್ನು ತೀರಾ ಬಲವತ್ತರವಾಗಿ ಪ್ರಯೋಗಿಸಿ ತನ್ನ ತಲೆ ಕಡಿದುಹೋಗದಂತೆ ಕಾಪಾಡಿತು.

ನಂತರದಲ್ಲಿ ರವಿಯದೇ ಮೇಲುಗೈ!

ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಹೇಳಿದ. ಸುಮಾರು ನಾಲ್ಕು ಗಂಟೆಗಳ ಕಾಲ ಅವನನ್ನು ಪ್ರಶ್ನಿಸಿದ ನಂತರ ಅವನನ್ನು ಸದಸ್ಯನನ್ನಾಗಿ ಸ್ವೀಕರಿಸಲಾಯಿತು. ಗಲಿಟಿನ್‌ನಿಂದ ಹೊರಬಂದ ನಂತರ ಆ ವಿಷಯವನ್ನು ಪಕ್ಕದಲ್ಲಿದ್ದ ಬ್ಲಾಕ್‌ಸ್ಕೆಲಿಟನ್ ಹೇಳಿದ. ಅಷ್ಟರಲ್ಲಿ ಮುದುಕ ಬಂದು ಆತನನ್ನು ಪಕ್ಕದ ಕೋಣೆಯೊಳಕ್ಕೆ ಕರೆದೊಯ್ದ.

ಆ ಕೋಣೆಯಲ್ಲೆಲ್ಲಾ ಹೊಗೆ ತುಂಬಿತ್ತು. ಬಿಳಿ ಬಟ್ಟೆಗಳನ್ನು ತೊಟ್ಟಿದ್ದ ವೃದ್ಧ ಅಲ್ಲಿದ್ದ. ನೀಳವಾದ ಗಡ್ಡ. ಹೋಮಕುಂಡದ ಮುಂದೆ ಕುಳಿತಿದ್ದಾನೆ. ಹೋಮ ಕುಂಡದಲ್ಲಿ ಹೊಗೆ ಬರುತ್ತಿದೆ. ಷಾಡೋನನ್ನು ಕರೆದುಕೊಂಡು ಬಂದಿದ್ದ ವೃದ್ಧ ಆತನೊಂದಿಗೆ "ಇನ್ನೊಬ್ಬ ಸದಸ್ಯ..." ಎಂದ.

ಆ ವೃದ್ಧ ತಲೆಎತ್ತಿ "ಒಳ್ಳೆಯದು" ಎಂದು ಹೇಳಿ ರವಿಯತ್ತ ನೋಡಿ "ಅಂತಿಮ ದಿನಗಳಲ್ಲಿ ನೀನು ಸೇರುತ್ತಿರುವುದು ನಿನ್ನ ಅದೃಷ್ಟವನ್ನು ಸೂಚಿಸುತ್ತದೆ. ಪ್ಯಾಂಟು ಬಿಚ್ಚು" ಎಂದ.

ಷಾಡೋ ಬೆಚ್ಚಿದ. 'ರಂಜಿತಾಳಿಗೆ ದ್ರೋಹ ಮಾಡುವುದಿಲ್ಲ' ಎಂದುಕೊಂಡ. ಅಷ್ಟರಲ್ಲಿ ವೃದ್ಧ ಅಲ್ಲಿಂದ ಹೊರಟುಹೋದ.

ಬಿಳಿಯಾದ ಹೊಗೆ ಮತ್ತಷ್ಟು ವೃದ್ಧಿಸಿತು. ಹಿಂದಿನಿಂದ ವೃದ್ಧನ ಮಾತು ಕೇಳಿಸುತ್ತಿದೆ. "ಬ್ರಹ್ಮೋಪಾಸನೆ, ಪ್ರತಿಮೋಪಾಸನೆಗಳಿಂದ ಕುಟ್ಟಿಸೈತಾನ್ ಅನುಗ್ರಹವನ್ನು ಸಂಪಾದಿಸಲಿರುವ ಹೊಸ ಸದಸ್ಯನೇ, ಅಷ್ಟವಿಧ ಪುರುಷಶಕ್ತಿಯೂ ಗ್ರಹಾಧಿಪತಿಯೂ ಆದ ಕುಟ್ಟಿಸೈತಾನ್ ನಿನಗೆ ಅನುಗ್ರಹಿಸಲಿ!"

ದಟ್ಟವಾಗಿ ಹರಡಿಕೊಂಡ ಹೊಗೆಯಲ್ಲಿ ಯಾರೋ ಲಾಂದ್ರ ಹಿಡಿದುಕೊಂಡು ಬರುತ್ತಿರುವಂತೆ ಸಣ್ಣದಾದ ಬೆಳಕು ಬಳಿಗೆ ಬಂತು. ಒಂದು ತಟ್ಟೆಯಲ್ಲಿ ರಬ್ಬರ್ ಮೊಹರಿನಂತಹ ವಸ್ತುವೊಂದು ಉರಿಯುತ್ತಿರುವುದು ಕಾಣಿಸಿತು. ಸೇವಕ ತಟ್ಟೆಯನ್ನು ಅಲ್ಲಿರಿಸಿ ಮೌನವಾಗಿ ಹಿಂತಿರುಗಿದ.

"ಇದೇನು?" ಷಾಡೋ ಕೇಳಿದ.

"ಉಸ್ಪೋರ್ಕಿನ ಮುದ್ರೆ, ಈ ಕ್ಷಣದಿಂದ ನೀನು ಪ್ರಪಂಚದ ಯಾವುದೇ ಭಾಗದಲ್ಲಿ ಇದ್ದರೂ ಉಳಿದ ಸದಸ್ಯರು ನಿನ್ನನ್ನು ಗುರ್ತಿಸಲು ಈ ಮುದ್ರೆ ಸಹಾಯವಾಗುತ್ತದೆ. ಅಂತೆಯೇ ಅವರ ಮುದ್ರೆಗಳು ನಿನಗೆ ಕಾಣಿಸಿ ನೀನು ಅದನ್ನು ನೋಡಿ ಗುರ್ತಿಸಬಹುದು."

ಷಾಡೋ ಕೈಯಲ್ಲಿದ್ದ ವಾಚಿನ ರಾಡ್ ಅದುಮಿದ.

ವೃದ್ಧ ಮತ್ತಿನಲ್ಲಿಳಿಯಲು ಇನ್ನೂ ಎರಡು ನಿಮಿಷಗಳು ಬೇಕು. ಅದು ವರೆವಿಗೂ ಆತನನ್ನು ತಡೆಯಲು ಮಾತನ್ನು ಮುಂದುವರಿಸಿದ.

"ನೀವು ಯಾರು?"

"ನಾನು ರೆಡ್‌ಸ್ಕೆಲಿಟನ್. ಈಗ ಸೇರುತ್ತಲೇ ನೀನೂ ಬ್ಲೂ ಸ್ಕೆಲಿಟನ್ ಆಗುತ್ತೀ. ನಿನ್ನ ಕಾರ್ಯದ ಮೇಲೆ ಮುಂದಿನ ಹಂತಗಳಲ್ಲಿ ಪ್ರಮೋಷನ್ ದೊರೆಯುತ್ತದೆ. ಎಲ್ಲಕ್ಕಿಂತಲೂ ಹಿರಿಯದಾದ ಸ್ಥಾನ ರೆಡ್‌ಸ್ಕೆಲಿಟನ್. ಇವರು ಮಾತ್ರವೇ ಮಹಾದ್ರಷ್ಟನಿಗೆ ಸಹಾಯ ಮಾಡುವವರು."

ಮಹಾದ್ರಷ್ಟ... ಮಹಾದ್ರಷ್ಟ...

ನಾಲ್ಕಾರು ಬಾರಿ ತನ್ನಲ್ಲಿಯೇ ಹೇಳಿಕೊಂಡ.

ಅಷ್ಟರಲ್ಲಿ ಆ ವೃದ್ಧ ಇಕ್ಕಳದಿಂದ ನಾಯಿಯ ಆಕಾರದಲ್ಲಿದ್ದ ಸ್ಟಾಂಪನ್ನು ಹಿಡಿದು "ಸಿದ್ಧವಾಗಿ..." ಎಂದ.

"ಅದೇನು ಸ್ವಾಮಿ? ಈಗತಾನೇ ಮುದ್ರಾಧಾರಣೆ ಮಾಡಿದಿರಿ!" ಎಂದ. ಅವನ ಎದೆ ಬಲವಾಗಿ ಬಡಿದುಕೊಳ್ಳುತ್ತಿತ್ತು. ತನ್ನ ಪಾಲಿಗೆ ಇದೊಂದು ಸಮಸ್ಯೆ.

"ಹಾಕಿದೆನೇನು?"

"ಹೌದು, ನೋಡಿ" ಎಂದು ಮತ್ತಷ್ಟು ಹತ್ತಿರವಾದ. ಇದರಿಂದ ವಾಚೂ ಹತ್ತಿರವಾಯಿತು.

"ಓ...ಹೌದು..." ಎಂದ ವೃದ್ಧ. ಷಾಡೋ ನಿಟ್ಟುಸಿರಿಟ್ಟ. ಈ ಬಾರಿಯೂ ತಂತ್ರಶಕ್ತಿಯ ಮೇಲೆ ಯಂತ್ರವೇ ಗೆದ್ದಿದೆ.

ಇಬ್ಬರೂ ಹೊರಕ್ಕೆ ಬಂದರು. ಹೊರಗೆ ಕೆಲವು ಸದಸ್ಯರು ಅತ್ತ ಇತ್ತ ತಿರುಗುತ್ತಿದ್ದರು. ಅವರು ಹೊಸ ಸದಸ್ಯನನ್ನು ಗಮನಿಸಿ ನೋಡಿದರು. ವೃದ್ಧ ಷಾಡೋಗೆ ಅವರನ್ನು ಪರಿಚಯ ಮಾಡಿದ. ನಂತರ ಅವನನ್ನು ಅಲ್ಲಿ ಬಿಟ್ಟು ಹೊರಟುಹೋದ. ಅಷ್ಟರಲ್ಲಿ ಅವನನ್ನು ಉಸ್ಪೋರ್ಕ್‌ಗೆ ಸೇರಿಸಿದ ಸದಸ್ಯ ಬಂದ. ಅವನ ಮುಖ ಸಂತೋಷದಿಂದ ಬೆಳಗುತ್ತಿತ್ತು. "ನನಗೆ ವೈಟ್‌ಸ್ಕೆಲಿಟನ್ನಾಗಿ ಬಡ್ತಿಯಾಯಿತು!" ಎಂದ. "ನಿನ್ನನ್ನು ಸೇರಿಸಿ ನನ್ನ ಕೋಟಾ ಪೂರ್ತಿ

ಮಾಡಿದೆ."

ಷಾಡೋ ಅವನ ಮಾತನ್ನು ಅಷ್ಟಾಗಿ ಗಮನಿಸಲಿಲ್ಲ. "ನನ್ನನ್ನು ಗುರ್ತಿಸಬಲ್ಲೆಯಾ?" ಎಂದು ಕೇಳಿದ.

ವೈಟ್‌ಸ್ಕೆಲಿಟನ್ ತನ್ನ ಮಾತನ್ನು ನಿಲ್ಲಿಸಿ ಅವನ ಹೊಕ್ಕಳ ಬಳಿ ನೋಡಿ "ಗುರ್ತಿಸದೆ ಏನು? ಉಸ್ರೋಕ್ ಮುದ್ರೆ ಸ್ಪಷ್ಟವಾಗಿ ಕಾಣಿಸುತ್ತಿದೆ!" ಎಂದ.

ಈಗ ಅರ್ಥವಾಗಿತ್ತು. ಅದುವರೆವಿಗೂ ಅಸ್ಪಷ್ಟವಾಗಿ ತೂಗಾಡುತ್ತಿದ್ದ ಅನುಮಾನ ನಿಜವಾಗಿತ್ತು. ವಾಚಿನಿಂದ ತರಂಗಗಳು ಯಾವಾಗಲೋ ನಿಂತು ಹೋಗಿದ್ದರೂ ತನ್ನ ಹೊಕ್ಕಳ ಬಳಿ ಇಲ್ಲದ ಮುದ್ರೆಯನ್ನು ಎದುರಿನವನು ಕಾಣಬೇಕೆಂದರೆ ಅದಕ್ಕೆ ಶಾಸ್ತ್ರೀಯವಾಗಿ ಇರುವುದೇ ಒಂದೇಒಂದು ಕಾರಣ...
**ಭ್ರಾಂತಿ ! (ಹ್ಯಾಲ್ಯೂಸಿನೇಷನ್)**

## ೨೮

ಸಿದ್ಧಾರ್ಥ ಭವಾನಿಶಂಕರ್ ಅವರ ಬಂಗಲೆಗೆ ಹೋದ. ಅಲ್ಲಿ ಒಬ್ಬಿಬ್ಬರು ಆಳುಗಳು ಮಾತ್ರ ಇದ್ದರು. ಸಿದ್ಧಾರ್ಥನನ್ನು ಕಂಡು ನಮಸ್ಕರಿಸಿದರು.

"ರವಿ ಇರುವನೇ?"

"ಇಲ್ಲ ಸಾರ್. ಕೃಷ್ಣಾಪುರಕ್ಕೆ ಹೋಗಿದ್ದಾರೆ."

ಸಿದ್ಧಾರ್ಥನಿಗೆ ಆಶ್ಚರ್ಯವಾಯಿತು. ಅಲ್ಲಿಗೆ ಯಾಕೆ ಹೋದ? ಅದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. "ಕಾರು ಇದೆಯೇ?" ಎಂದು ಕೇಳಿದ.

"ಇದೆ ಸಾರ್."

ಸಿದ್ಧಾರ್ಥ ಷೆಡ್‌ನಿಂದ ಕಾರನ್ನು ಹೊರಕ್ಕೆ ತೆಗೆದ.

ಐದು ನಿಮಿಷಗಳ ನಂತರ ಕಾರು ಕೃಷ್ಣಾಪುರದತ್ತ ಹೋಗುತ್ತಿತ್ತು. ಅವನನ್ನು ಕಂಡವರು ಯಾರೂ ಅರ್ಧ ಗಂಟೆಗೆ ಮೊದಲು ಅಪಾರಕ್ಷೋಭೆಗೆ ತುತ್ತಾಗಿದ್ದವನು ಎಂದು ಊಹಿಸಲು ಸಾಧ್ಯವಿರಲಿಲ್ಲ. ಅಷ್ಟಾವಕ್ರನು ತನ್ನ ಹೆಂಡತಿಯ ಗರ್ಭದಲ್ಲಿ ಹುಟ್ಟುತ್ತಾನೆ ಎಂಬ ವಿಷಯವನ್ನು ತಿಳಿದಾಗ ವಿಚಲಿತನಾಗಿದ್ದ. ಅಷ್ಟಾವಕ್ರನ ಬಗ್ಗೆ ವಿವರಣೆ ಓದಿದಾಗ ಅವನ ಹೃದಯ ಕಂಪಿಸಿತ್ತು. ಅದು ಕೆಲವು ನಿಮಿಷಗಳ ಕಾಲ ಮಾತ್ರವೇ. ಒಡನೆಯೇ ಎಚ್ಚೆತ್ತುಕೊಂಡು ಮಾಮೂಲಿ ಮನುಷ್ಯನಾಗಿದ್ದ. ಆದುದಕ್ಕಾಗಿ ಚಿಂತಿಸುವುದು ಅವನಿಗೆ ಅಭ್ಯಾಸವಿರಲಿಲ್ಲ. ಆಗುವುದಕ್ಕಾಗಿ ಯೋಚಿಸುವುದು ಮಾತ್ರವೇ ಅವನಿಗೆ ಗೊತ್ತು.

ಒಮ್ಮೆ ವಿಷಯ ಗೊತ್ತಾದ ನಂತರ ಅವನ ಮನವೆಲ್ಲಾ ಕರ್ತವ್ಯದ ಮೇಲೆಯೇ ಕೇಂದ್ರೀಕೃತವಾಯಿತು.

ಕಾರು ವೇಗವಾಗಿ ಪ್ರಯಾಣಿಸುತ್ತಿದೆ. ಡ್ರೈವಿಂಗ್ ಸಿದ್ಧಾರ್ಥನಿಗೆ ಹೊಸದು. ಮದುವೆಯಾದ ಹೊಸದರಲ್ಲಿ ಭವಾನಿಶಂಕರ್ ಅವರ ಬಲವಂತಕ್ಕೆ ಕಟ್ಟುಬಿದ್ದು ಡ್ರೈವಿಂಗ್ ಕಲಿತದ್ದು. ಒಂದೇ ತಿಂಗಳಲ್ಲಿ ಕಲಿತಿದ್ದ. ಅದೇ ಅವನ ಹೆಗ್ಗಳಿಕೆ. ಯಾವುದನ್ನಾದರೂ ಸಾಧಿಸಬಲ್ಲ ಹಠ. ಅದೇ ಹಠದಿಂದ ಈಗ ಹೊರಕ್ಕೆ ನಡೆದಿದ್ದ. ಸೀಟಿನ ಪಕ್ಕದಲ್ಲೇ ಕೃಷ್ಣಾಪುರ ಪಂಚಾಯತಿ ಮ್ಯಾಪ್ ಇತ್ತು.

ಸಿದ್ಧನು ಕಾಲ್ನಡಿಗೆಯಲ್ಲೇ ಓಡಾಡುತ್ತಾನೆ. ಭಿಕ್ಷೆ ಕೇಳಿದ ಊರಿನಲ್ಲಿ ರಾತ್ರಿ ಇರುವುದಿಲ್ಲ ಇದೇ ಕೇದಾರಗೌರಿ ಹೇಳಿದ್ದು. ಅದೇ ಪ್ರಕಾರ ಲೆಕ್ಕ ಹಾಕಿದ್ದ.

ತಮ್ಮ ಮನೆಗೆ ಬಂದ ದಿನ ಗೊತ್ತು. ಆದರೆ ಆತ ಯಾವ ದಿಕ್ಕಿಗೆ ಹೊರಟನೋ ಗೊತ್ತಿಲ್ಲ. ದಿನಕ್ಕೆ ಒಂದು ಊರಿನಂತೆ ಎಷ್ಟು ಊರುಗಳನ್ನು ಆತ ದಾಟಬಲ್ಲ? ನಡಿಗೆಯಲ್ಲಿ ದಿನಕ್ಕೆ ಐದಾರು ಕಿಲೋಮೀಟರ್ ಮಾತ್ರವೇ ಹೋಗಬಲ್ಲ.... ಈ ಪರಿಸ್ಥಿತಿಯಲ್ಲಿ ಕೃಷ್ಣಾಪುರದ ಪಕ್ಕದಲ್ಲಿ ಎರಡು ಗ್ರಾಮಗಳಿದ್ದವು ಆದ್ದರಿಂದ ಮರುದಿನ ಸಿದ್ಧ ಈ ಎರಡು ಗ್ರಾಮಗಳಲ್ಲಿ ಯಾವುದರಲ್ಲೊ ಒಂದು ದಿನ ಕಳೆದಿರಬೇಕು. ಅಲ್ಲಿಂದ ಮುಂದಿನ ದಿನ ಇನ್ನೊಂದು ಕಡೆ ಹೋಗಿರಬಹುದು. ಹೀಗೇ ಲೆಕ್ಕಿಸುತ್ತಾ ಹೋದರೆ ಒಟ್ಟು ಹದಿನಾರು ಗ್ರಾಮಗಳು ಲೆಕ್ಕಕ್ಕೆ ಸಿಕ್ಕಿದುವು. ಇವೆಲ್ಲವೂ ಒಂದರ ಪಕ್ಕ ಒಂದು ಬರುವಂತಹವೇ. ಸಾಧಾರಣವಾಗಿ ನಾಲ್ಕು ಕಿಲೋಮೀಟರ್ ಒಳಗೆ ಇರುವಂತಹವು. ಒಂದೇ ಕಷ್ಟ, ಗ್ರಾಮದಲ್ಲೆಲ್ಲಾ ಕೇಳಬೇಕು. ಪ್ರತಿ ದೇವಾಲಯ, ಸತ್ರಗಳ ಬಳಿಯೂ ನೋಡಬೇಕು ಭಿಕ್ಷುಕರು ಇರಬಹುದಾದ ಎಡೆಗಳನ್ನೆಲ್ಲಾ ಹುಡುಕಬೇಕು. ಇದು ಸಾಧಾರಣ ವಿಷಯವಲ್ಲ.

ಆದರೂ ಸಿದ್ಧಾರ್ಥ ಗಂಭೀರವಾಗಿಯೇ ಇದ್ದಾನೆ. ಅವನ ನಿರ್ಣಯ ಒಂದೇ–ಇಷ್ಟೆಲ್ಲಾ ಗೊತ್ತಿರುವ ಸಿದ್ಧನಿಗೆ ರಕ್ಷಣಾ ವಿಧಾನವೂ ಗೊತ್ತಿರಲೇಬೇಕು.

ಒಂದು ವೇಳೆ ಪುಸ್ತಕದಲ್ಲಿ ಬರೆದಿರುವುದೇ ನಿಜವಾಗಿದ್ದರೆ ಪ್ರಸವದಲ್ಲಿ ಕೇದಾರಗೌರಿ ಸಾಯುತ್ತಾಳೆ. ಅವಳ ನಂತರ ತಾನು ಹೇಗಿದ್ದರೂ ಬದುಕುವುದಿಲ್ಲ. ತಾನು ಸಾಯುವ ಮೊದಲು ಅಷ್ಟಾವಕ್ರನನ್ನು ಕೊಲ್ಲಲೇಬೇಕು. ಅದು ಸಾಧ್ಯವಾಗದೆ ಕ್ಷುದ್ರಶಕ್ತಿಗಳು. ನರಿ, ತೋಳಗಳ ನೆರವಿನಿಂದ ಅಷ್ಟಾವಕ್ರ

ಜಯಿಸಿದರೆ ತನ್ನ ಸಾವಿನ ನಂತರ ಈ ಸಂಗತಿ ಪ್ರಪಂಚದಲ್ಲೆಲ್ಲಾ ತಿಳಿಯುವಂತೆ ಮಾಡಬೇಕು. ಯಾರೂ ಹೇಗೇ ಇದ್ದರು ಷಾಡೋ ಮಾತ್ರ ಇದನ್ನು ಇಲ್ಲಿಗೇ ಬಿಡುವುದಿಲ್ಲ.

ಯಾವುದೋ ತೀರ್ಮಾನವಾಗಲು ಮೊದಲು ಸಿದ್ಧನನ್ನು ಕಾಣಬೇಕಾಗಿತ್ತು. ಕಾರು ವೇಗವಾಗಿ ಹೋಗುತ್ತಿತ್ತು. ಐದು ನಿಮಿಷಗಳಲ್ಲಿ ಕಾರು ಕೃಷ್ಣಾಪುರದ ಪಕ್ಕದ ಗ್ರಾಮುದ ಎಲ್ಲೆಯನ್ನು ಪ್ರವೇಶಿಸಿತ್ತು.

* * * *

ಎರಡು ಕೈಗಳನ್ನೂ ಹಣೆಗೆ ಆಸರೆಯಾಗಿ ಕೊಟ್ಟು, ಕೈಗಳ ಮಧ್ಯ ತಲೆ ಇರಿಸಿಕೊಂಡು ಮೌನವಾಗಿ ಕುಳಿತಿದ್ದ ಡಾಕ್ಟರ ರಂಗಪ್ರಸಾದ್. ಅದೆಷ್ಟು ಹೊತ್ತಿನಿಂದ ಹಾಗೆ ಕುಳಿತಿದ್ದನೋ! ಸುತ್ತಲಿನ ಪರಿಸರವೂ ಹಾಗೇ ಸ್ತಬ್ಧವಾಗಿತ್ತು—ರೋಗಿಗಳೇ ಇಲ್ಲದೆ ನಿರ್ಮಾನುಷ್ಯವಾಗಿದ್ದ ಕ್ಲಿನಿಕ್!

ಆತನ ಕಣ್ಮುಂದೆ ಕೇದಾರಗೌರಿಯ ಮುಖವೇ ಇತ್ತು. ಮುಗ್ಧವಾಗಿ, ತುಂಬಾ ವಿಶ್ವಾಸ-ಗೌರವಗಳಿಂದ ತನ್ನನ್ನು ನೋಡುತ್ತಿರುವ ಆ ಕಣ್ಣುಗಳು...

ಅಷ್ಟರಲ್ಲಿ ಅದೇ ಸ್ಥಳದಲ್ಲಿ ತಾನು ಆಸ್ಪತ್ರೆಯಲ್ಲಿ ನೋಡಿದ ಶಿಶುವಿನ ಮುಖ ಮೂಡಿತು. ಕುಳಿತಿರುವ ಮಗು, ಹುಟ್ಟುತ್ತಲೇ ತನ್ನನ್ನು ನೋಡಿ ನಕ್ಕು, ಭೇಡಿಸಿ ಒಡನೆಯೇ ಸಾವನ್ನಪ್ಪಿದ ವಿಕೃತ ಸ್ವರೂಪಿ! ಅವನು ಏಳನೆಯವನು—ಅಷ್ಟಾವಕ್ರನಿಗೂ ಮೊದಲಿನವನು!!

ರಂಗಪ್ರಸಾದ್ ತಲೆಕೊಡವಿಕೊಂಡ. ಯಾವುದೋ ಕೊಂಡಿ ಅಸ್ಪಷ್ಟವಾಗಿ ಕಾಣಿಸುತ್ತಿದೆ-ಕಂಡೂ ಕಾಣದಂತಿದೆ.

ಕೃಷ್ಣಾಪುರವನ್ನು ತ್ಯಜಿಸಿ ಹೊರಗೆ ಹೋದ ದಂಪತಿಗಳಿಗೆ ವಿಕೃತ ಶಿಶುಗಳು ಜನಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಕ್ರೋಮೋಜೋಮ್ ಮುಟೇಷನ್ಸ್ ಎಂಬುದಿದ್ದರೆ ಅದು ಗರ್ಭಧಾರಣಾ ಸಮಯದಲ್ಲೇ ನಡೆದಿರಬೇಕಾದದ್ದು. ಅದಕ್ಕೆ ಕಾರಣ ಕೃಷ್ಣಾಪುರವೇ ಆಗಿದ್ದರೆ ಕೇದಾರಗೌರಿಯ ಗರ್ಭದಲ್ಲೂ ವಿಕೃತ ಶಿಶುವೇ ಜನಿಸಬೇಕು. ತಾನು ಮಾಡಬಹುದಾದ ಕೆಲಸ ಕೇವಲ ತಾಯಿಯ ಪ್ರಾಣ ಕಾಪಾಡುವ ಒಂದೇ ಕೆಲಸವೇ. ಆದರೆ ಈ ಸಮಸ್ಯೆ ಇಷ್ಟು ಸರಳ ಎನಿಸುತ್ತಿಲ್ಲ. ಇದರ ಹಿಂದೆ ಇನ್ನೂ ಏನೋ ಇದೆ. ಒಂದೊಂದನ್ನೂ ತಾರ್ಕಿಕವಾಗಿ ಚಿಂತಿಸತೊಡಗಿದ.....

ಅವತಾರ್‌ಬಾಬಾ ತಾಯಿತ ಕಟ್ಟದವರಿಗೆ ವಿಕೃತ ಶಿಶು ಜನಿಸಲಿಲ್ಲ. ಕಟ್ಟಿದವರಿಗೆ ವಿಕೃತ ಶಿಶು ಜನಿಸಿತು. ಅವರು ಕೃಷ್ಣಾಪುರದಲ್ಲಿ ಇರಲಿ ಇಲ್ಲದಿರಲಿ. ಈ ಶಾಪ ತಪ್ಪಲಿಲ್ಲ. ಕೃಷ್ಣಾಪುರದೊಂದಿಗೆ ಈ ವಿಕೃತ ಜನನಗಳ

ಸಂಬಂಧ ಇಲ್ಲದಿದ್ದರೂ ದೇಶದಲ್ಲಿ ಅಲ್ಲಲ್ಲಿ ನಡೆಯುತ್ತಲೇ ಇವೆ. ಆದ್ದರಿಂದ ವಿಕೃತ ಜನನಗಳಿಗೂ ಕೃಷ್ಣಾಪುರಕ್ಕೂ ಸಂಬಂಧವಿಲ್ಲ. ಆದರೆ ಕೃಷ್ಣಾಪುರದ ಹೆಸರು ಹೊರಗೆ ಬಂದದ್ದು ಅಲ್ಲಿ ಒಂದೇ ಸಮನೆ ಆರು ವಿಕೃತ ಜನನಗಳಾಗಿದ್ದರಿಂದ. ದೇಶದಲ್ಲಿರುವವರಿಗೆಲ್ಲಾ ಬಾಬಾ ಹೆಸರು ಗೊತ್ತಿಲ್ಲ, ಆದರೂ ಅವರಲ್ಲಿ ಕೆಲವರಿಗೆ ವಿಕೃತ ಶಿಶುಗಳು ಹುಟ್ಟಿವೆ. ಅವರಲ್ಲಿ ಯಾರಿಗಾದರೂ ಕೃಷ್ಣಾಪುರದೊಂದಿಗೆ ಸಂಬಂಧವಿದೆಯೇ?

ಈ ಯೋಚನೆ ಬರುತ್ತಲೇ ರಂಗಪ್ರಸಾದ್ ಎಚ್ಚರಗೊಂಡ.

ನಿಜ ತಾನಿಷ್ಟು ಕಾಲವೂ ಒಂದೇ ದೃಷ್ಟಿಕೋನದಿಂದ ಯೋಚಿಸುತ್ತಾ ಇದ್ದೆ. "ಕೃಷ್ಣಾಪುರದಲ್ಲಿ 'ಎಲ್ಲರಿಗೂ' ವಿಕೃತ ಶಿಶುಗಳೇಕೆ ಹುಟ್ಟುತ್ತಿಲ್ಲ" ಎಂದು ಯೋಚಿಸುತ್ತಿದ್ದನೇ ಹೊರತು ಬೇರೊಂದು ಸ್ಥಳದಲ್ಲಿ ಹುಟ್ಟಿದವರಿಗೆ ಕೂಡ ಈ ರೀತಿಯ ಸ್ವರೂಪ ಬರಲು ಕಾರಣವೇನು ಎನ್ನುವದನ್ನು ಯೋಚಿಸಲಿಲ್ಲ. ಇವುಗಳ ಮಧ್ಯೆ ಸಂಬಂಧವಿಲ್ಲದೆ ಇರಬಹುದಾದರೂ ಶೋಧನೆ ಒಳ್ಳೆಯದೇ ಅಲ್ಲವೇ ?

ರಂಗಪ್ರಸಾದ್ ಎದ್ದುನಿಂತ— ದೇಶದಲ್ಲಿ ಯಾವಾಗ, ಎಲ್ಲಿ ವಿಕೃತ ಶಿಶುಗಳು ಜನನವಾಗಿವೆ ಎಂಬುವನ್ನು ತಿಳಿದುಕೊಳ್ಳಬೇಕು. ಈ ವಿಷಯ ಯಾವ ಲೈಬ್ರರಿ, ವಾರ್ತಾಪತ್ರಿಕೆಗಳಲ್ಲಿ ದೊರೆಯದು. ಅದರ ಬಗ್ಗೆ ವಿವರಗಳು, ಛಾಯಾಚಿತ್ರಗಳು ಬೇಕು. ಆ ಮಗುವಿನ ತಂದೆ–ತಾಯಿ ಅವರ ಹೆಸರು ಮತ್ತು ಇತರ ವಿವರಗಳು ಬೇಕು. ಈ ಆರು ಮಂದಿ ತಂದೆ ತಾಯಿಗಳನ್ನು ಹೇಗೆ ಹಲವು ಗಂಟೆಗಳ ಕಾಲ ಸಂದರ್ಶನ ನಡೆಸಿದ ರೀತಿಯಲ್ಲಿಯೇ ಅವರ ಸಂದರ್ಶನವನ್ನೂ ನಡೆಸಬೇಕು. ಇಷ್ಟೆಲ್ಲಾ ವಿವರಗಳು ದೊರೆಯಬಹುದಾದ ಒಂದೇ ಸ್ಥಳ–ಇನ್ಸ್‌ಟಿಟ್ಯೂಟ್ ಆಫ್ ಜೆನೆಟಿಕ್ಸ್ !

ತಡಮಾಡಲಿಲ್ಲ. ಒಡನೆಯೇ ನಗರಕ್ಕೆ ಹೊರಟ. ಇನ್ಸ್‌ಟಿಟ್ಯೂಟ್ ತಲುಪುವ ವೇಳೆಗೆ ಹತ್ತೂವರೆಯಾಯಿತು. ಬಿಸಿಲು ಆಗ್ಗೆ ಚೆನ್ನಾಗಿ ಬಲಿತ್ತಿತ್ತು. ವಿಶಾಲವಾದ ಮೆಟ್ಟಿಲನ್ನು ಹತ್ತಿ ರಿಸೆಪ್ಷನ್ ಕೌಂಟರ್ ಬಳಿಗೆ ಹೋದ. "ಡಾಕ್ಟರ್ ವಂಶೀಕೃಷ್ಣ ಇದ್ದಾರೆಯೇ ?" ಎಂದು ಕೇಳಿದ.

"ಇದ್ದಾರೆ....ತಾವು...?"

"ರಂಗಪ್ರಸಾದ್."

ಇಂಟರ್‌ಕಾಂನಲ್ಲಿ ಮಾತನಾಡಿ "ನೋಡಿ, ಅವರು ಆ ಕಡೆಯ ರೂಂನಲ್ಲಿದ್ದಾರೆ...." ಎಂದಳು.

ರಂಗಪ್ರಸಾದ್ ವಿಶಾಲವಾದ ಮತ್ತೊಂದು ಬಾಗಿಲ ಬಳಿಗೆ ಹೋಗುತ್ತಿ

ದ್ದಂತೆಯೇ [redacted] ಗಮನಿಸದೆ ಬಂದು [redacted] ಇಬ್ಬರೂ ಒಂದೇ ಬಾರಿಗೆ 'ಸಾರಿ' ಎಂದರು. ರಂಗಪ್ರಸಾದ್ ಆಕೆಯತ್ತ ನೋಡಿದ—

ಆ ಕ್ಷಣ ಉಸಿರಾಡುವುದನ್ನೂ ಮರೆತ.

ವಯಸ್ಸು ಇಪ್ಪತ್ತೆಂಟಿರಬಹುದು. ವಯಸ್ಸು ಏರಿದಂತೆ ಗಾಂಭೀರ್ಯವನ್ನು ತಮ್ಮಲ್ಲಿ ಬೆಳೆಸಿಕೊಳ್ಳದೆ ಹೋದರೆ ಹೆಂಗಸರ ಸೌಂದರ್ಯ ಕ್ಷೀಣಿಸುತ್ತದೆ. ಈ ರಹಸ್ಯವನ್ನು ತಿಳಿದ ಹೆಂಗಸರು ತುಂಬಾ ಕಡಿಮೆ. ಈ ರೀತಿಯ ಕಡಿಮೆ ಮಂದಿಯಲ್ಲಿ ಆಕೆಯೂ ಒಬ್ಬಳು.

ತನ್ನ ಜೀವನದಲ್ಲಿ ಇದುವರೆಗೆ ತಾನೇನೂ ಪಡೆದಿಲ್ಲವೆಂಬುದು ಮೊದಲಬಾರಿಗೆ ಅರಿವಾಯಿತು. ಆಕೆಯ ವಕ್ಷವನ್ನು ಸ್ಪರ್ಶಿಸಿದ ಅವನ ಎದೆ, ಆಕೆಯ ಶರೀರದ ಕೋಮಲತೆಯನ್ನು ತಾಕಿದ ಆತನ ಮೈ, ಆ ಕ್ಷಣದಲ್ಲಿ ಅವನನ್ನು ಎಲ್ಲಾ ಕಡೆಯಿಂದಲೂ ಆವರಿಸಿದ ಪರಿಮಳದ ಗಾಳಿ ಅವನ ಚಿತ್ತವನ್ನು ಕಲಕಿತು. ಜೇನ್ನು ಮೂಳೆ ಬಿಲ್ಲಾದರೆ, ಜಡೆ ಅದನ್ನು ಹೆದೆಗೇರಿಸಿದ ಹಗ್ಗವಾಗಿ ಆಕೆಯ ವಕ್ಷವೇ ಮನ್ಮಥನ ನಿವಾಸವಾಗಿ ಅಲ್ಲಿಂದ ಏಕಪ್ರಕಾರವಾಗಿ ಬಾಣದ ಸುರಿಮಳೆಯಾದಂತಾಗಿತ್ತು ಆ ಕ್ಷಣದಲ್ಲಿ. ಅದಕ್ಕೆ ಮೊದಲು ಯಾರಾದರೂ ಇತಿಹಾಸಜ್ಞನೋ, ಕಾದಂಬರಿಕಾರನೋ ಪ್ರೇಮ, ಆಕರ್ಷಣೆಗಳು ಬೆಳೆಯಲು ಚಿಕ್ಕ ಕಾರಣವೊಂದೇ ಸಾಕು ಎಂದು ಬರೆದಿದ್ದರೆ ಅದನ್ನು ಓದಿ ನಗುತ್ತಿದ್ದ. ಆದರೆ ಈಗ ತಾನೇ ನಂಬಬೇಕು.

ಇದೆಲ್ಲಾ ಒಂದು ಕ್ಷಣದ ಭಾವನೆ ಮಾತ್ರವೇ. ಮರುಕ್ಷಣದಲ್ಲಿಯೇ ರಂಗಪ್ರಸಾದ್ ಡಾಕ್ಟರ್ ರಂಗಪ್ರಸಾದ್ ಆದ. ಮತ್ತೆ ಇನ್ನೊಮ್ಮೆ "ಸಾರಿ" ಎಂದ.

"ಪರವಾಗಿಲ್ಲ...."

"ನನ್ನ ಹೆಸರು ಡಾಕ್ಟರ್ ರಂಗಪ್ರಸಾದ್."

"ನಿಮ್ಮ ಪರಿಚಯ ನನಗಿದೆ. ನಾನು ನಿಮಗಿಂತ ಜೂನಿಯರ್. ಡಾಕ್ಟರ್ ನಿವೇದಿತ..."

"ಗ್ಲಾಡ್ ಟು ಮೀಟ್‌ಯೂ"

"ಸೇಂ ಟು ಮಿ...." ಎಂದು ನಗುತ್ತಾ "ವಂಶೀಕೃಷ್ಣ ನಿಮಗಾಗಿ ಕಾಯುತ್ತಿದ್ದಾರೆ" ಎಂದಳು ಆಕೆ.

"ಹಾಗಿದ್ದರೆ ಬರುತ್ತೇನೆ" ಎಂದು ಒಳಕ್ಕೆ ಹೋದ.

ರಂಗಪ್ರಸಾದ್‌ನನ್ನು ನೋಡಿದ ಕೂಡಲೇ ಕುರ್ಚಿಯಿಂದ ಎದ್ದು

ಸಗೌರವದಿಂದ ಆಹ್ವಾನಿಸಿದ ವಂಶೀಕೃಷ್ಣ. ಔಪಚಾರಿಕ ಮಾತಿನ ನಂತರ ರಂಗ ಪ್ರಸಾದ್ ತಾನು ಬಂದ ಕೆಲಸವನ್ನು ವಿವರಿಸಿದ : "ಇದುವರೆವಿಗೂ ಕೃಷ್ಣಾ ಪುರದಲ್ಲಿ ಜನಿಸಿರುವ ವಿಕೃತ ಶಿಶುಗಳ ತಂದೆ-ತಾಯಿಗಳನ್ನು ಮಾತ್ರವೇ ಪ್ರಶ್ನಿಸಿ ಅವರ ಅಭ್ಯಾಸ, ಅಭಿರುಚಿ ಇತ್ಯಾದಿಗಳ ಬಗ್ಗೆ ತಿಳಿದಿದ್ದೇನೆ. ಈ ವಿಕೃತ ಜನನಗಳಿಗೆ ಅವರ ಹವ್ಯಾಸಗಳು ಕಾರಣವೇನು ಎಂಬುದನ್ನು ವಿಶ್ಲೇಷಿಸಿದ್ದೇನೆ. ಯಾವ ಇಬ್ಬರೂ ದಂಪತಿಗಳೂ ಈ ವಿಷಯದಲ್ಲಿ ಹೋಲುವುದಿಲ್ಲ. ಇನ್ನೊಂದು ವಿಕೃತ ಶಿಶುವಿನ ಬಗ್ಗೆ ವಿವರ ಶೇಖರಿಸೋಣವೆಂದು ಕೊಂಡೆ. ಇದೆಲ್ಲಾ ಕತ್ತಲಲ್ಲಿ ಬಾಣ ಪ್ರಯೋಗ ನಡೆಸುತ್ತಿರುವಂತೆ ನಿಮಗೆ ಕಾಣಿಸಬಹುದು...."

"ಇಲ್ಲ....ಇಲ್ಲ. ಹೇಳಿ"

"ನಿಮ್ಮಲ್ಲಿ ಬೇರೆ ವಿಕೃತ ಶಿಶುಗಳ ವಿವರಗಳಿದ್ದರೆ ಕೊಟ್ಟರೆ ಉಪಕಾರ ವಾಗುತ್ತದೆ."

"ನಮ್ಮಲ್ಲಿ ಆ ರೀತಿಯ ಮಾಹಿತಿ ಯಾವುದೂ ಇಲ್ಲ..."

ರಂಗಪ್ರಸಾದ್ ನಿರಾಶೆಗೊಂಡ. ಆದರೂ ಬಿಡದೆ "ನಿಮ್ಮದು ಜೆನೆಟಿಕ್ಸ್ ಇನ್ಸ್‌ಟಿಟ್ಯೂಟ್ ಅಲ್ಲವೇ? ಈ ರೀತಿ ವಿವರಗಳು ನಿಮ್ಮಲ್ಲಿರಲೇಬೇಕು" ಎಂದು ಕೇಳಿದ.

"ಇಲ್ಲ ಡಾಕ್ಟರ್, ಅವುಗಳ ಅಗತ್ಯ ನಮಗಿಲ್ಲ. ಹೊಸ ವಿಷಯವೇನಾದರೂ ಇದ್ದರೆ ಮಾತ್ರವೇ ಆ ವಿವರಗಳನ್ನು ನೋಟ್ ಮಾಡುತ್ತೇವೆ. ಉದಾಹರಣೆಗೆ ಕೃಷ್ಣಾಪುರದ ಜನನಗಳ ಬಗ್ಗೆ ನಮ್ಮಲ್ಲಿ ಸಂಪೂರ್ಣ ಮಾಹಿತಿ ದೊರೆಯುತ್ತದೆ."

"ಅದು ನನ್ನಲ್ಲೂ ಇದೆ. ನನಗೆ ಬೇಕಾಗಿರುವುದು ಉಳಿದ ಬೇರೆಯ ಜನನಗಳ ಬಗ್ಗೆ..."

"ಸಾರಿ ಡಾಕ್ಟರ್."

ರಂಗಪ್ರಸಾದ್ ಎದ್ದು "ಬರ್ತೀನಿ ಡಾಕ್ಟರ್" ಎಂದ.

ವಂಶೀಕೃಷ್ಣ ಉತ್ಸಾಹದಿಂದ "ನಿಮ್ಮೂರಿನ ಸಂಗತಿಯ ಬಗ್ಗೆ ಏನಾದರೂ ಗೊತ್ತಾಯಿತೇ?" ಎಂದು ಕೇಳಿದ.

"ಇಲ್ಲ, ಇನ್ನೊಂದು ಹುಟ್ಟಿನ ನಂತರ ಆ ರಹಸ್ಯವೂ ಬೇಕಾಗಿಲ್ಲ ವೇನೋ?" ಎನ್ನುತ್ತಾ ಹೊರಕ್ಕೆ ಬಂದ.

ರಂಗಪ್ರಸಾದ್‌ನನ್ನು ನೋಡುತ್ತಾ ಡಾಕ್ಟರ್ ನಿವೇದಿತಾ ನಕ್ಕಳು. ಆದರೆ ಆತನ ಮನಸ್ಸು ಯೋಚನೆ ಇಲ್ಲಿರಲಿಲ್ಲ. ತುಂಬಾ ಆಸೆ ಹೊತ್ತು ಬಂದ

ಕೆಲಸ ವಿಫಲವಾಗಿತ್ತು.

ಆತನನ್ನು ತನ್ನ ಕೋಣೆಗೆ ಆಹ್ವಾನಿಸಿ ಕೂರಿಸಿದ ಮೇಲೆ "ತುಂಬಾ ದೀರ್ಘಾಲೋಚನೆಯಲ್ಲಿ ಮುಳುಗಿದ್ದೀರಲ್ಲಾ?" ಎಂದು ಕೇಳಿದಳು. ರಂಗ ಪ್ರಸಾದ್ ತಾನು ಬಂದ ಉದ್ದೇಶವನ್ನು ವಿವರಿಸಿದ: "ನಾನು ಊಹಿಸಿರುವುದೇ ಸತ್ಯಕ್ಕೆ ತುಂಬಾ ದೂರವಾದದ್ದು. ಅದಕ್ಕೆ ಜತೆಯಾಗಿ ಇಲ್ಲಿ ಯಾವ ವಿವರಗಳೂ ದೊರೆಯದೆ ಈ ಬಗ್ಗೆ ಯೋಚನೆಯನ್ನೇ ಕೈಬಿಡಬೇಕಾಗಿದೆ."

"ಅಂತಹ ವಿವರಗಳು ನನ್ನಲ್ಲಿವೆ."

ಈ ಮಾತಿನಿಂದ ಒಮ್ಮೆಗೇ ಚೈತನ್ಯ ತುಂಬಿದಂತಾಯಿತು. "ನಿಜವಾಗಿಯೂ ನಿಮ್ಮ ಬಳಿ ಇದೆಯೇ?" ಎಂದು ಆತುರದಿಂದ ಕೇಳಿದ.

"ಮಕ್ಕಳಿಗೆ ಸ್ಟಾಂಪ್ ಕಲೆಕ್ಷನ್ ಬಗ್ಗೆ ಆಸ್ಥೆ ಇರುವಂತೆ ನನಗೆ ಈ ರೀತಿ ಸೈನ್ಸ್ ಹಾಬಿ. ಇತ್ತೀಚಿನವರೆಗೂ ಈ ರೀತಿಯ ಸಂಗತಿಗಳ ಬಗ್ಗೆ ನೋಟ್ಸ್ ಬರೆದಿಡುತ್ತಿದ್ದೆ."

"ಆ ನೋಟ್ಸ್ ಎಲ್ಲಿದೆ?"

"ಬೊಂಬಾಯಿಯಲ್ಲಿ."

ಈ ಉತ್ತರ ಕೇಳಿ ಭೂಮಿಯೊಳಕ್ಕೆ ಕುಸಿದಂತಾಯಿತು. ಅದನ್ನು ಗುರ್ತಿಸಿದ ಆಕೆ, "ನನ್ನ ಲಗೇಜ್ ತರಲು ಈ ದಿನ ಬೊಂಬಾಯಿಗೆ ಹೋಗುತ್ತಿದ್ದೇನೆ. ನಾನು ಇಲ್ಲಿ ಸೇರಿ ಒಂದು ವಾರ ಮಾತ್ರವೇ ಆಗಿದೆ..."

"ಮತ್ತೆ ನೀವು ಹಿಂತಿರುಗುವುದು ಯಾವಾಗ?"

ಒಂದು ವಾರವಾಗಬಹುದು. ನಿಮ್ಮ ಫೋನ್ ನಂಬರ್ ಕೊಡಿ ಹೋಗಿ ಫೋನ್ ಮಾಡುತ್ತೇನೆ. ನಿಮಗೆ ಬೇಕಾಗಿರೋದು ಹೆಸರುಗಳು ತಾನೇ?"

ಬರಿ ಹೆಸರುಗಳಿಂದೇನು ಲಾಭ? ಕನ್‌ಜೆನಿಟಲ್ ಮಾಲ್ ಫಾರ್ಮೆಷನ್ನಿಗೆ ಕಾರಣಗಳೇನಾದರೂ ಇವೆಯೇ? ಆ ಶಿಶುವಿನ ತಂದೆ-ತಾಯಿಗಳ ಬಗ್ಗೆ ಅವರ ಹಿನ್ನೆಲೆ. ಇಂಥಾ ವಿಷಯಗಳೆಲ್ಲಾ ಗೊತ್ತಾಗಬೇಕು. ಮೊದಲು ನೀವು ಅವರ ಹೆಸರು ವಿಳಾಸ ಕೊಡಿ ಇವೆಲ್ಲಾ ನಾನು ಶೇಖರಿಸುತ್ತೇನೆ" ಎನ್ನುತ್ತಾ ಎದ್ದು ನಿಂತು ಸಣ್ಣ ಕಾಗದದಲ್ಲಿ ತನ್ನ ಫೋನ್ ನಂಬರ್ ಬರೆದು ಕೊಟ್ಟ.

ಈಕೆಯಿಂದ ತನಗೆ ಉಪಯೋಗವಾಗುವಂಥ ವಿಷಯ ದೊರೆಯುತ್ತದೆ ಎಂಬ ನಂಬಿಕೆ ಇರಲಿಲ್ಲ. ಆದರೆ ಇಷ್ಟು ದೂರಬಂದ ಮೇಲೆ ಅನ್ಯಮಾರ್ಗ ಕಾಣದೆ 'ಇರಲಿ' ಎಂದು ಹೇಳಿದ್ದ. ಆಕೆಯ ಉತ್ಸಾಹಕ್ಕೆ ತಣ್ಣೀರೆರಚಬಾರದೆಂದು ಹೇಳಿದ್ದಾಗಿತ್ತು.

ಫೋನ್ ನಂಬರಿನ ಚೀಟಿಯನ್ನು ತೆಗೆದುಕೊಳ್ಳುತ್ತಾ "ಇಷ್ಟೊಂದು ವಿವರಗಳನ್ನು ನಾನು ಕೊಟ್ಟರೆ ನನಗೆ ಗಿಫ್ಟ್?!" ಎಂದಳು ನಕ್ಕು.

ಅದುವರೆವಿಗೂ ಗಂಭೀರವಾಗಿದ್ದ ಡಾಕ್ಟರ್ ವೈದ್ಯನಾಗಿ "ಏನು ಬೇಕು?" ಎಂದು ಕೇಳಿದರು.

"ಹೆಲಿಕಾಪ್ಟರ್!"

"ಮೈ ಗಾಡ್. ತುಂಬಾ ಹೆಚ್ಚೆಂದರೆ ಐಸ್‌ಕ್ರೀಂ ಕೊಡಿಸಬಲ್ಲೆ."

"ನನಗೆ ಬಟರ್ ಸ್ಕಾಚ್ ಅಂದ್ರೆ ತುಂಬಾ ಇಷ್ಟ."

"ಓಕೇ" ಎಂದ ರಂಗಪ್ರಸಾದ್ ಹೊರಗೆ ಬರುತ್ತಾ.

ಕೃಷ್ಣಾಪುರಕ್ಕೆ ಹೋದ ನಂತರ ಎರಡು ದಿನಗಳ ವರೆಗೆ ಫೋನ್‌ಗಾಗಿ ಕಾದ. ನಿರಾಸೆ. ಇನ್ನು ಮುಂದೆ ಕಾಲ್ ಬರುತ್ತದೆ ಎಂದು ಆಶಿಸಲೂ ಇಲ್ಲ. ಬಳಿಯಲ್ಲಿದ್ದಾಗ ಮಾತು ಬೇರೆ. ಅದನ್ನು ಕಾರ್ಯರೂಪಕ್ಕೆ ಇಳಿಸುವುದೇ ಬೇರೆ. ನಿವೇದಿತಾ ಕೂಡ ಅದೇ ರೀತಿಯ ಹೆಣ್ಣು ಎಂದುಕೊಂಡಾಗ ಸ್ವಲ್ಪ ವೇದನೆಯಾಯಿತು. ಒಮ್ಮೆ ಫೋನ್ ಮಾಡಿದರೆ ಮತ್ತೆ ಆಕೆಯನ್ನು ಕಾಣಬಹುದೇನೋ ಎಂಬ ದೂರದ ಆಸೆ! ಆಕೆ ತನ್ನನ್ನು ನೆನಪಿನಲ್ಲಿಟ್ಟುಕೊಂಡಿಲ್ಲ, ಈ ಭೇಟಿಗೆ ಯಾವ ಪ್ರಾಮುಖ್ಯತೆಯೂ ಕೊಟ್ಟಿಲ್ಲ ಎಂಬ ನೋವು ಎದೆಯಲ್ಲಿ ಮಿಸುಗುತ್ತಿತ್ತು.

ಕೇದಾರಗೌರಿಗೆ ಪ್ರಸವ ಸಮಯ ಹತ್ತಿರಕ್ಕೆ ಬರುತ್ತಿದೆ. ನರ್ಸಿಂಗ್ ಹೋಂನಲ್ಲಿಯೇ ಇರುವುದು ಒಳ್ಳೆಯದೆಂದು ಸೂಚಿಸಿದ್ದ. ಅತ್ತೆಯೇ ಆಕೆಯನ್ನು ಕರೆತಂದು ಇಬ್ಬರೂ ಅಲ್ಲಿಯೇ ಇದ್ದರು.

ಇಂತಹ ಪರಿಸ್ಥಿತಿಯಲ್ಲಿ ಆಕೆಯ ಗಂಡ ಸಿದ್ಧಾರ್ಥ ಮತ್ತು ಅಣ್ಣ ರವಿ ಇಬ್ಬರೂ ಕಾಣದಾಗಿದ್ದು ರಂಗಪ್ರಸಾದ್‌ನಲ್ಲಿ ಕೋಪವನ್ನು ತರಿಸಿತು. ಕೇದಾರಗೌರಿಗೂ ಈ ಬಗ್ಗೆ ದುಃಖವೇ. ಡಾಕ್ಟರ್ ಮಾತ್ರ ಆಕೆಯನ್ನು ತುಂಬಾ ಜಾಗರೂಕತೆಯಿಂದ ನೋಡಿಕೊಳ್ಳುತ್ತಿದ್ದಾರೆ.

ಆಗ್ಗೆ ಬೆಳಕು ಮೂಡಿಲ್ಲ. ಹಾಸಿಗೆಯಲ್ಲೇ ರಂಗಪ್ರಸಾದ್ ಮಲಗಿದ್ದ. ಫೋನ್ ಕರೆಯಿತು. ರಿಸೀವರನ್ನು ಎತ್ತಿ "ಹಲೋ" ಎಂದ.

ದೂರದಿಂದ ಬರುತ್ತಿದ್ದ ಸದ್ದು "ನಾನು...ನಿವೇದಿತಾ..." ಎಂದು ಕೇಳಿಸುತ್ತಲೇ ಹೊದ್ದಿದ್ದ ರಗ್ಗನ್ನು ದೂರಕ್ಕೆಸೆದು ಎದ್ದು ಕುಳಿತು "ಯಾಕೆ ಇಷ್ಟು ತಡವಾಯಿತು?" ಎಂದು ಕೇಳಿದ. ಆತನ ಧ್ವನಿಯಲ್ಲಿ ಉತ್ಸಾಹದೊಂದಿಗೆ ಸಂತೋಷವೂ ಇತ್ತು.

"ಅದೇ ರೀತಿ ಡೆಲಿವರಿ ಕೇಸ್ ಗೊತ್ತಾಯಿತು."

"ಯಾರು?"

"ಅಗರ್ವಾಲ್...ಮಿಸೆಸ್ ಪ್ರತಿಮಾ ಅಗರ್ವಾಲ್, ಬೊಂಬಾಯಿಯ ಓಪನ್‌ವ್ಯೂನ ನರ್ಸಿಂಗ್ ಹೋಂನಲ್ಲಿ ಹೆರಿಗೆಯಾದದ್ದು. ಆಗಲೇ ಎರಡು ವರ್ಷ ಆಗಿದೆ..."

"ಇದು ಹೇಳಲು ಮೂರು ದಿನ ಬೇಕಾಯಿತೇ?"

"ಸ್ವಲ್ಪ ನಿಧಾನಿಸಿ, ಇದು ಇಲ್ಲಿಗೇ ನಿಂತಿಲ್ಲ. ನೀವೇ ಹೇಳಿದ್ದಿರಲ್ಲಾ ಆ ಶಿಶುವಿನ ತಂದೆ. ತಾಯಿಗಳ ಬಗ್ಗೆ ವಿವರಗಳು, ವೆನೀರಿಯಲ್ಸ್ ಡೀಟೈಲ್ಸ್ ಎಲ್ಲಾ ತಿಳಿಯಬೇಕು ಅಂತ. ಈ ಕೇಸು ಬೊಂಬಾಯಲ್ಲಿ ನಡೆದಿದ್ದು. ಆದ್ದರಿಂದ ನಾನೇ ಯಾಕೆ ಈ ವಿಷಯ ಸಂಗ್ರಹಿಸಬಾರದು ಅನ್ನಿಸಿತು. ನಿನ್ನೆ ಅದೇ ಕೆಲಸ. ಅಗರ್ವಾಲನನ್ನು ನೋಡಿ ಬಂದೆ..."

ರಂಗಪ್ರಸಾದ್‌ಗೆ ಈ ವಿವರ ತೀರಾ ಆನಂದದಾಯಕವಾಗಿತ್ತು. ತನಗಾಗಿ ಆಕೆ ಅಷ್ಟೊಂದು ಉತ್ಸಾಹ, ಆಸಕ್ತಿಗಳೊಂದಿಗೆ ಕೆಲಸ ಮಾಡುತ್ತಿರುವುದು ತುಂಬಾ ಹರ್ಷವೆನಿಸಿತ್ತು. "ಆ ವಿವರಗಳೇನು?" ಎಂದು ಕೇಳಿದ.

ಡಾಕ್ಟರ್ ಪ್ರಶ್ನೆಗೆ ಉತ್ತರವಾಗಿ "ಪ್ರತಿಮಾ ಅಗರ್ವಾಲ್ ಹೆರಿಗೆಯಾದ ಮೂರು ತಿಂಗಳಿಗೆ ಹುಚ್ಚಿಯಾದಳು."

ಡಾಕ್ಟರ್ ಬೆನ್ನಿನ ಮೇಲೆ ಚಾಟಿಯ ಏಟು ಬಿದ್ದಂತೆ "ವಾಟ್?" ಎಂದ.

"ಹೌದು. ನಂತರದಲ್ಲಿ ಕಪಾಡಿಯಾ ಮೆಂಟಲ್ ಹಾಸ್ಪಿಟಲ್‌ನಲ್ಲಿ ಸೇರಿಸಿದ್ದರು. ಸ್ವಲ್ಪ ಗುಣಮುಖವಾಗುತ್ತಿರುವಾಗಲೇ ಎರಡು ನಾಯಿಗಳು ಆಕೆಯನ್ನು ಕಚ್ಚಿ ಕೊಂದವು.

"ಇದೇನು ವಿಚಿತ್ರ."

"ನನಗೂ ಹಾಗೇ ವಿಚಿತ್ರವಾಗಿಯೇ ಕಾಣಿಸಿತು. ನಾಯಿಗಳು ಕಚ್ಚುತ್ತವೆ. ಆದರೆ ಕಚ್ಚಿ ಕೊಲ್ಲುವುದಿಲ್ಲ. ಆದರೆ ಈ ಕೇಸಿನಲ್ಲಿ ಅವೇ ಕಚ್ಚಿ ಕೊಂದಿದ್ದು ಸ್ಪಷ್ಟವಾಗಿದೆ. ನಿನ್ನೆ ಸಂಜೆಯೆಲ್ಲಾ ಪೋಲೀಸ್ ಸ್ಟೇಷನ್ನಲ್ಲಿ ಹಳೆಯ ರಿಕಾರ್ಡ್ ನೋಡಿದೆ, ಫೋಟೋ ಸಹ ನೋಡಿದ್ದೇನೆ."

"ಪೋಲೀಸ್ ಸ್ಟೇಷನ್ನಿಗೂ ಹೋಗಿದ್ದಿರಾ?"

"ವಿಷಯ ಸಂಗ್ರಹಣೆಗೆ ನಿಂತ ಮೇಲೆ ಎಲ್ಲಾ ಕಡೆ ಹೋಗಬೇಕಲ್ಲಾ! ಅದರಲ್ಲೂ ಡಾಕ್ಟರ್ ರಂಗಪ್ರಸಾದ್ ಅವರೊಂದಿಗೆ ಕುಳಿತು ಬಟರ್‌ಸ್ಕಾಚ್ ತಿನ್ನುವುದು ಎಂದರೆ..." ಆಕೆಯ ಧ್ವನಿಯಲ್ಲಿದ್ದ ಗಾಂಭೀರ್ಯ ಈಗ ಇರಲಿಲ್ಲ.

ರಂಗಪ್ರಸಾದ್ ಯೋಚಿಸುತ್ತಲೇ ಇದ್ದ. ಆತನ ಯೋಚನೆ ಒಂದೇ–

ನಾಯಿ... ನಾಯಿ....

ಪ್ರತಿಮಾ ಅಗರ್ವಾಲ್–ಅವಳನ್ನು ನಾಯಿಗಳೇ ಕೊಂದುವು!

## ೨೯

ಪಕ್ಕದಲ್ಲಿದ್ದ ವೈಟ್ ಸ್ಕೆಲಿಟನ್‌ನೊಂದಿಗೆ ಅಡಿಯಿರಿಸುತ್ತಿದ್ದನಾದರೂ ಷಾಡೋ ಮನಸ್ಸಿನಲ್ಲಿ ಬೆಲ್ಲಕ್ಕೆ ಮುತ್ತುವ ನೊಣಗಳಂತೆ ಅನೇಕ ಅನುಮಾನಗಳು.

"ಉಸ್ತ್ರೋಕ್ ಸದಸ್ಯರೆಲ್ಲರ ಮೈಮೇಲೂ ನಾಯಿಯ ಗುರ್ತಿರುತ್ತದೆ. ಅದು ಬಟ್ಟೆಯ ಹಿಂದೆ ಇದ್ದರೂ ಉಳಿದ ಸದಸ್ಯರಿಗೆ ಅದು ಕಾಣಿಸುತ್ತಿರುತ್ತದೆ ಈ ಗುರ್ತಿನಿಂದಲೇ ಬೇರೆಯವರು ಗುರ್ತಿಸಲು ಸಾಧ್ಯ" ಎಂದು ಹೇಳಿದ ಅವನ ಮಾತೇ ಕಿವಿಯಲ್ಲಿ ಮೊರೆಯುತ್ತಿದೆ.

ತನಗೆ ಎದುರಾದ ಪ್ರತಿಯೊಬ್ಬ ಸದಸ್ಯನನ್ನೂ ಗಮನಿಸಿ ನೋಡಿದ. ಅಂತಹ ಗುರ್ತುಗಳೇನೂ ಕಾಣಿಸಲಿಲ್ಲ. ಆದರೆ ತಾನೇ ತಪ್ಪಾಗಿರುವ ಸಾಧ್ಯತೆ ಉಂಟು. ನಿಜವೆಂದರೆ ತಾನು ಉಸ್ತ್ರೋಕ್ ಸದಸ್ಯನಲ್ಲ. ಆದರೂ ಒಂದು ಅಂಶ ರುಜುವಾತಾಗಿದೆ—ಗಿಲೆಟಿನ್‌ಗೆ ತಲೆ ಕೊಟ್ಟದ್ದಾಗ ಎಂತಹ ಪರಿಸ್ಥಿತಿಯಲ್ಲಾದರೂ ನಿಜವನ್ನೇ ಹೇಳಿಸುವ ಕ್ಷುದ್ರ ದೇವತೆಗಳು ತನ್ನ ಕೈಯಲ್ಲಿದ್ದ ಸಾನಿಕ್‌ಸೌಂಡ್ ಮುಂದೆ ಸೋತಿವೆ.

ಪಕ್ಕದಲ್ಲಿದ್ದವನು ಇನ್ನೊಬ್ಬನ ಪರಿಚಯ ಮಾಡಿಸಿದ. ಆತ ರೈತನಂತೆ ಕಾಣಿಸುತ್ತಿದ್ದ. ಷಾಡೋ ಗುರ್ತಿಸಿದ—ಕೃಷ್ಣಾಪುರದಲ್ಲಿ ಗದ್ದೆಯಲ್ಲಿದ್ದ ವ್ಯಕ್ತಿ. ಆತನನ್ನು ನೋಡಿದರೆ ಉಸ್ತ್ರೋಕ್ ಸದಸ್ಯ ಎನ್ನುವುದು ಸಾಧ್ಯವೇ ಇರಲಿಲ್ಲ... ಅಷ್ಟೊಂದು ಮುಗ್ಧವಾಗಿ ಕಾಣಿಸುತ್ತಿದ್ದ. "ಉಸ್ತ್ರೋಕ್‌ನಲ್ಲಿ ಮತ್ತೊಬ್ಬ ರೆಡ್‌ಸ್ಕೆಲಿಟನ್ ಎಂದು ಪರಿಚಯ ಮಾಡಿದ.

"ಯಾರೀ ಹುಡುಗ?" ಎಂದು ಕೇಳಿದ ಆತ.

"ಈ ದಿನವೇ ಹೊಸದಾಗಿ ಸೇರಿದ್ದಾನೆ."

ರೆಡ್‌ಸ್ಕೆಲಿಟನ್ ಷಾಡೋನನ್ನು ಗಮನಿಸಿ ನೋಡುತ್ತಾ "ಈತನನ್ನು ಎಲ್ಲೋ ನೋಡಿದೀನಲ್ಲಾ!" ಎಂದ.

ರವಿಯ ಎದೆಯ ಬಡಿತ ಹೆಚ್ಚಾಯಿತು.

"....ಆ್ಞ, ನೆನಪಾಯಿತು. ಕೃಷ್ಣಾಪುರದಲ್ಲಿ ರಾವೇ ಪ್ರೋಗ್ರಾಂಗೆ

ಬಂದಿದ್ದ ಹುಡುಗರಲ್ಲಿ....ಹೌದು ತಾನೇ?" ಎಂದ.

ರವಿ ಸರಾಗವಾಗಿ ಉಸಿರಾಡುತ್ತಾ ಹೌದೆನ್ನುವಂತೆ ತಲೆದೂಗಿದ. ಅನಕ್ಷರಸ್ಥನಂತೆ ಕಾಣುವವನು ಇಷ್ಟೆಲ್ಲಾ ತಿಳಿದುಕೊಂಡಿರುವುದು ವಿಚಿತ್ರವಾಗಿ ತೋರಿತು. ಇಲ್ಲಿಯ ವಾತಾವರಣದಲ್ಲಿ ಏನೋ ಅಸ್ಪಷ್ಟವಾದ ಅಪಶ್ರುತಿ ಪ್ರತಿಯೊಂದರಲ್ಲೂ ಸ್ಪಂದಿಸುತ್ತಿದೆ. ಇದು ನಿಜವೇ ಅಥವಾ ತನ್ನ ಭ್ರಮೆಯೇ?

"ಹೊಸ ಸದಸ್ಯನಿಂದ ಪಂಚ ಪಂಚಕ್ರಿಯೆ ಮಾಡಿಸಿದೆಯಾ?"

"ಇನ್ನೂ ಇಲ್ಲ."

"ಮಾಡಿಸು. ಉಸ್ನೋಕ್‌ನ ಅಮರತ್ವ ಆತನಿಗೂ ಲಭ್ಯವಾಗಲಿ. ನಾಳಿದ್ದು ಮತ್ತೆ ಸಭೆ ಇದೆ...."

"ನಾಳಿದ್ದೇ?"

"ಹೌದು" ಎಂದ ವೃದ್ಧ. "ಅಕಸ್ಮಾತ್ತಾಗಿ ಅಷ್ಟಾವಕ್ರನ ಜನನಕ್ಕೆ ಮೊದಲು ಮತ್ತೊಂದು ಸಮಾವೇಶ ಕರೆಯಲು ಮಹಾದ್ರಷ್ಟ ಆಜ್ಞಾಪಿಸಿದ್ದಾರೆ."

"ಹಾಗಿದ್ದರೆ ಸದಸ್ಯರಿಗೆ ಈ ವಿಷಯ ಹೇಳಬೇಕಲ್ಲಾ?"

"ಹೌದು."

"ಅವತಾರ್‌ಬಾಬಾಗೆ ಕೂಡ ಈ ವಿಷಯ ಹೇಳಬೇಕಲ್ಲಾ."

ಈ ಮಾತು ಕೇಳಿದ ಷಾಡೋ ಬೆಚ್ಚಿದ.

"ನಿಮ್ಮವರಿಗೆಲ್ಲಾ ನೀನು ಹೇಳು."

ಸಾಮಾನ್ಯವಾಗಿ ಕೇಳುವವರಿಗೆ ಇದು ತೀರಾ ಸಾಮಾನ್ಯವಾಗಿಯೇ ತೋರಿಬರುತ್ತದೆ. ಆದರೆ ಷಾಡೋ ಪ್ರತಿಯೊಂದು ಸಣ್ಣ ಸಂಗತಿಯನ್ನೂ ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾನೆ. ನಾಯಿಯ ಗುರ್ತಿನಿಂದ ಪರಸ್ಪರ ಗುರ್ತಿಸುವ ಅವರು ಭೇಟಿಯಾದವರಿಗೆಲ್ಲಾ ತಿಳಿಸುತ್ತಾರೆ. ಯಾರೊಬ್ಬರು ಅದೇ ಕಾರ್ಯಾರ್ಥವಾಗಿ ಸುತ್ತುವುದಿಲ್ಲ!

"ಅವತಾರ್‌ಬಾಬಾ ಕೂಡ ಸಮಾವೇಶಕ್ಕೆ ತನ್ನ ಶಿಷ್ಯರೊಂದಿಗೆ ಬರುವಂತೆ ಹೇಳಬೇಕು. ಅದಕ್ಕೆ ಯಾರನ್ನು ಕಳುಹಿಸುತ್ತೀ?"

ಷಾಡೋನನ್ನು ತೋರಿಸುತ್ತಾ "ಪಂಚ ಪಂಚಕ್ರಿಯೆಯಾದ ನಂತರ ಈತನನ್ನು ಕಳುಹಿಸುತ್ತೇನೆ" ಎಂದ ಅವನು.

ವೃದ್ಧ ತಲೆದೂಗಿ 'ಸರಿ' ಎನ್ನುತ್ತಾ ಅಲ್ಲಿಂದ ಹೋದ.

"ಪಂಚ ಪಂಚಕ್ರಿಯೆ ಎಂದರೇನು?" ಷಾಡೋ ಕೇಳಿದ.

"ಪಂಚೇಂದ್ರಿಯ ಬದ್ಧವಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಈ

ಐದನ್ನು ಉಸ್ನೋಕ್ ಸದಸ್ಯನು ಸ್ನಾನ, ಪೂಜೆ, ನೈವೇದ್ಯ, ಪ್ರದಕ್ಷಿಣೆ ಮತ್ತು ನಮಸ್ಕಾರಗಳ ಮೂಲಕ ಪ್ರೇರಿಸಿ ಪಂಚೇಂದ್ರಿಯ ಸ್ಥಾನಗಳಲ್ಲಿ ಲಗ್ನವಾಗಿ ಪಂಚೋದಗಳ ಮೇಲೆ ಅಧಿಕಾರವನ್ನು ಸಂಪಾದಿಸಬೇಕು. ಇದಕ್ಕಾಗಿ ಕ್ಷುದ್ರ ಗಣಗಳು ಸಹಾಯ ಮಾಡುತ್ತವೆ. ಈ ಸ್ಥಿತಿಗೆ ಬರಬೇಕೆಂದರೆ ಸಂಚಾರೀ ಅವಸ್ಥೆಗಳಾದ ಮದನ, ಸಮ್ಮೋಹನ, ಸಂತಾಪ, ವಶೀಕರಣವನ್ನು ದಾಟಿ ಉನ್ಮತ್ತ ಸ್ಥಿತಿಯನ್ನು ತಲುಪಬೇಕು. ಪಂಚೋಪಚಾರ, ಪಂಚೇಂದ್ರಿಯ, ಪಂಚಾಧಿಷ್ಠಾನ, ಪಂಚೋದ, ಪಂಚಾವಸ್ಥೆ ಹೀಗೆ ಒಟ್ಟು ಐದು. ಆದ್ದರಿಂದ ಇವನ್ನು ಪಂಚ ಪಂಚಕ್ರಿಯೆ ಎನ್ನುತ್ತಾರೆ. ಈ ಐದೂ ಮುಗಿದ ನಂತರ ಉಸ್ನೋಕ್ ಸದಸ್ಯ ಕೊನೆಯದಾದ ಐದನೆಯ ಉನ್ಮಾತ್ತಾವಸ್ಥೆಯನ್ನು ತಲುಪುತ್ತಾನೆ. ಅದೇ ಅಲೌಕಿಕ ಸ್ಥಿತಿ. ಕುಟ್ಟಿ ಸೈತಾನ್ ಅಂಶವಾದ ಕಾಪ್ಮೋರಾಕ್ಕೆ ಅತಿ ಸಮೀಪವಿರುವ ಸ್ಥಿತಿ."

ಉಸ್ನೋಕ್‌ನ ಪ್ರತಿ ಸದಸ್ಯನೂ ಒಂದು ವಿಧವಾದ ಉನ್ಮತ್ತಾವಸ್ಥೆಯಲ್ಲಿರುವುದಕ್ಕೆ ಇದು ಕಾರಣವೆಂಬುದು ಷಾಡೋ ತಿಳಿದು ಅಚ್ಚರಿಗೊಂಡ. ಈಗ ತನ್ನನ್ನು ಆ ರೀತಿಯ ಉನ್ಮತ್ತಾವಸ್ಥೆಗೆ ಕಳುಹಿಸುತ್ತಾರೆ, ಎಂದರೆ ಮತ್ತೊಂದು ತೊಂದರೆ ಎದುರಾಗುತ್ತಿದೆ.

ಸ್ನಾನಾನಂತರ ಪೂಜೆ, ಅನೇಕ ಕರಣಗಳು, ಮಂತ್ರ ಪಠಣ, ನಂತರ ಮಾಂಸ ಭಕ್ಷಣ, ವಶೀಕರಣ ಪ್ರಯೋಗ....ಇದೆಲ್ಲಾ ಬ್ರೈನ್‌ವಾಷ್‌ನಂತೆ ನಡೆಯಿತು. ಷಾಡೋಗೆ (ಮಂತ್ರಗಾರರ ರಹಸ್ಯ ಸಮಾಜಗಳಲ್ಲಿ ಹೊಸಬರನ್ನು ತಮ್ಮಲ್ಲಿ ಸೇರಿಸಿಕೊಳ್ಳಲು ನಡೆಸುವ ಪ್ರಕ್ರಿಯೆಗಳ ಬಗ್ಗೆ ದೀರ್ಘ ವಿವರಣೆ ನೀಡುತ್ತಾ ಟಿ. ಬಾಲವಾಲ ಅವರು ಕೆಲವು ಕ್ರಿಯೆಗಳನ್ನು ವಿವರಿಸಿದ್ದಾರೆ. ಅವೆಲ್ಲವೂ ಚೀನಾ ದೇಶದ ಬ್ರೈನ್‌ವಾಷ್ ಪದ್ಧತಿಯನ್ನು ಹೋಲುತ್ತದೆ ಎಂಬುದು ಗಮನಾರ್ಹ. ತುಂಬಾ ನಿಕೃಷ್ಟವಾದ ಈ ಪದ್ಧತಿಗಳನ್ನು ಓದುತ್ತಿದ್ದರೇನೇ ಅಸಹ್ಯ ಭಾವವನ್ನುಂಟುಮಾಡುತ್ತದೆ. ಅವನ್ನು ಇಲ್ಲಿ ಉಲ್ಲೇಖಿಸಿಲ್ಲ.—ಲೇಖಕ) ಜೋನ್ಸ್ ನೆನಪಾದ. ತನ್ನದೇ ಆದ ಒಂದು ಗುಂಪನ್ನು ಆಚಾರಾದಿಗಳನ್ನು ರೂಪಿಸಿಕೊಂಡು ಒಂದು ಸಾವಿರ ಮಂದಿಯೊಂದಿಗೆ ಪ್ರತ್ಯೇಕ ರಾಜ್ಯವನ್ನು ಸ್ಥಾಪಿಸಿದ ಕಲಿಯುಗ ರಾಕ್ಷಸ! ತನ್ನ ರಹಸ್ಯವು ಒಬ್ಬ ಪತ್ರಕರ್ತನಿಂದ ಬಹಿರಂಗವಾಗಿ ಹೊರ ದೇಶದಿಂದ ವಿಮಾನಗಳು ತನ್ನ ನೆಲೆಗೆ ಬರುತ್ತವೆ ಎಂಬುದು ಗೊತ್ತಾಗುತ್ತಲೇ ತನ್ನ ಅನುಚರರಿಗೆಲ್ಲಾ ಪಿಪಾಯಿಯ ತುಂಬಾ ನೀರಿನಲ್ಲಿ ಪೊಟಾಸಿಯಂ ಸೈನೇಡ್ ಬೆರಸಿ 'ಈ ದ್ರಾವಣವನ್ನು ಕುಡಿದರೆ ನೀವು ಸಾಯುತ್ತೀರಿ. ಆದರೂ ನನಗಾಗಿ ಈ

ದ್ರಾವಣ ಕುಡಿಯಿರಿ' ಎಂದನಂತೆ. ಅವನ ಅನುಚರರೆಲ್ಲಾ ಸಂತೋಷದಿಂದ ಆ ನೀರು ಕುಡಿದು ಸತ್ತರು. ಬ್ರೈನ್‌ವಾಷ್ ಎಂದರೆ ಇದು! ಷಾಡೋಗೆ ಆ ಕ್ಷಣದಲ್ಲಿ ಅದೇ ನೆನಪಾಯಿತು.

ಎಲ್ಲಾ ಮುಗಿಸುವ ವೇಳೆಗೆ ಷಾಡೋನನ್ನು ಒಂದು ತೆರನಾದ ಮತ್ತು ಆವರಿಸಿತ್ತು. ಹತ್ತು ದಿನಗಳಿಂದ ನಿದ್ರೆ ಕೆಟ್ಟವನಂತೆ ತೂಕಡಿಸುತ್ತಾ ತೂರಾಡ ತೊಡಗಿದ. ತುಂಬಾ ಪ್ರಯಾಸದಿಂದ ತನ್ನನ್ನು ತಾನು ಸಂಬಾಳಿಸಿಕೊಂಡ. ಉಸ್ಲೋಕ್‌ನಲ್ಲಿ ಸೇರುವ ಮುನ್ನ ಕೇಳಿಸಿದ ಕ್ಷುದ್ರ ಗಣಗಳ ಕೂಗು (?) ಇದಕ್ಕೂ ಮೊದಲೇ ತನ್ನ ಪ್ರಭಾವವನ್ನು ಬೀರಿದ್ದರೆ ಈ ವಶೀಕರಣ ಚರ್ಯೆಗೆ ಅವನೆಂದೋ ಉನ್ಮತ್ತನಾಗುತ್ತಿದ್ದ. ಆದರೆ ಅದೃಷ್ಟವಶದಿಂದ ರಂಜಿತಾ ಕೊಟ್ಟ ವಾಚ್ ಅವನನ್ನು ಮೊದಲ ಸ್ಥಿತಿಯಿಂದ ರಕ್ಷಿಸಿತು. ಅವನ ಮಾನಸಿಕ ಸ್ಥೈರ್ಯ ಎರಡನೆಯ ಸ್ಟೇಜಿನಲ್ಲಿ ಅವನನ್ನು ರಕ್ಷಿಸಿತು.

ಇದರ ನಂತರ ಅವತಾರ್‌ಬಾಬಾ ಬಳಿಗೆ ಹೊರಟ.

ಉಸ್ಲೋಕ್ ಜನರು ಅವತಾರ್‌ಬಾಬಾ ಅವರನ್ನು ಕಾಣಬೇಕಾದರೆ ಕ್ಯೂ ಅನುಸರಿಸಬೇಕಾಗಿಲ್ಲ ಎಂಬುದು ಷಾಡೋಗೆ ಮೊದಲೇ ತಿಳಿಸಲಾಗಿತ್ತು. ಷಾಡೋ ಹಿಂದಿನ ಬಾಗಿಲಿನಿಂದ ಮೈನ್ ಹಾಲ್‌ಗೆ ಬಂದ. ಬಾಬಾ ದಿಂಬಿಗೆ ಒರಗಿ ಕುಳಿತಿದ್ದ. ಷಾಡೋ ಕಡೆಗೆ ಬೆನ್ನಿತ್ತು. ಅದು ಉಚಿತ ದರ್ಶನದ ಸಮಯವಾಗಿದ್ದರಿಂದ ಕ್ಯೂನಲ್ಲಿ ಒಬ್ಬೊಬ್ಬರೇ ಬಂದು ಕಾಣಿಕೆಗಳನ್ನು ಅರ್ಪಿಸಿ ಮುಂದೆ ಹೋಗುತ್ತಿದ್ದಾರೆ.

ಬಾಬಾ ಕೈ ಎತ್ತಿದ. ಕ್ಯೂ ನಿಂತಿತು. ತಲೆಯನ್ನು ತಿರುಗಿಸದೆಯೇ "ಬಾ ಷಾಡೋ..." ಎಂದ.

ಷಾಡೋ ಪ್ರತಿಮೆಯಂತಾದ–ಹಿಂದಕ್ಕೆ ನೋಡದೆಯೇ ಕರೆದ ಎಂದಲ್ಲ ತನ್ನನ್ನು ನಿಜನಾಮದಿಂದ ಗುರ್ತಿಸಿದ್ದಕ್ಕಾಗಿ!

ಇನ್ನು ತನ್ನ ಕೆಲಸ ಮುಗಿಯಿತು. ಅಷ್ಟು ಮಂದಿ ಅನುಚರರೊಂದಿಗೆ ಹೋರಾಡಿ ತಪ್ಪಿಸಿಕೊಂಡು ಹೋಗಲು ತಾನೇನು ಸಿನೆಮಾ ಹೀರೋನೇ? ಅನುಚರರೂ ಬೇಕಾಗಿಲ್ಲ. ಬಾಬಾ ಸಣ್ಣ ಸನ್ನೆ ಮಾಡಿದರೆ ಸಾಕು ಈ ಜನವೇ ತನ್ನನ್ನು ತುಳಿದುಹಾಕಬಲ್ಲರು. ಇವರೆಲ್ಲರೂ ಭಕ್ತಿಯ ಮತ್ತಿನಲ್ಲಿರುವುದರಿಂದ ಜೋನ್ಸ್ ಅನುಚರರಂತಿದ್ದಾರೆ!

ಮನಸ್ಸಿನ ಭಾವಗಳು ಮುಖದ ಮೇಲೆ ಕಾಣಿಸದಂತೆ ಎಚ್ಚರವಹಿಸಿ ಬಾಬಾ ಸಮೀಪಕ್ಕೆ ಹೋದ.

"ನಿನಗೆ ಗೊತ್ತು ತಾನೇ? ನಿನ್ನ ತಂಗಿ ಅಷ್ಟಾವಕ್ರನನ್ನು ಹೆರುತ್ತಾಳೆ" ಎಂದ ಬಾಬಾ.

ಈ ಮಾತನ್ನು ತನಗೆ ಹೇಳುತ್ತಿರುವುದು ಷಾಡೋಗೆ ಆಶ್ಚರ್ಯಕರವಾಗಿ ಕಾಣಿಸಿತು.

"...ಹುಟ್ಟುತ್ತಲೇ ಅಷ್ಟಾವಕ್ರನು ತಾಯಿ–ತಂದೆಗಳನ್ನೇ ಕೊಲ್ಲುತ್ತಾನೆ." ಷಾಡೋ ಮಾತನಾಡಲಿಲ್ಲ. ಎಚ್ಚರಿಕೆಯಿಂದ ಗಮನಿಸಿದರೆ ಆತನ ಅಂಗೈ ಮುಚ್ಚಿದ್ದು ಗೊತ್ತಾಗುತ್ತಿತ್ತು.

ಅಷ್ಟರಲ್ಲಿ ಬಾಬಾ ಹಿಂದಕ್ಕೆ ತಿರುಗಿ "ಆದರೂ ಸರಿ, ನೀನು ಉಸ್ಸೋಕ್‌ಗೆ ಸೇರಿದೆ. ಅದು ನಿನ್ನ ದೂರದೃಷ್ಟಿಯನ್ನು ಹೇಳುತ್ತದೆ. ಮುಂದೆ ಸಕಲ ಸುಖಗಳೂ ನಿನ್ನವಾಗುತ್ತವೆ. ತಂಗಿ–ಬಂಧು ಇವೆಲ್ಲಾ ತೀರಾ ಸಣ್ಣವಿಷಯಗಳು. ಕಾಷ್ಮೋರಾ ಒಂದೇ ಕೊನೆಗೆ ನಮ್ಮನ್ನು ರಕ್ಷಿಸುವುದು. ನೀನು ಆ ವಿಷಯವನ್ನು ತಿಳಿದುಕೊಂಡಿದ್ದಕ್ಕಾಗಿ ನನಗೆ ತುಂಬಾ ಸಂತೋಷವಾಗಿದೆ." ಷಾಡೋಗೆ ಒಂದು ಅಂಶ ಸ್ಪಷ್ಟವಾಯಿತು. ತಾನು ಉಸ್ಸೋಕ್‌ಗೆ ಸೇರಿದ್ದು ಬಾಬಾಗೆ ವರ್ತಮಾನ ಬಂದಿದೆ. ತನ್ನನ್ನು ನೋಡುತ್ತಲೇ ಅವರು ಕೇದಾರ ಗೌರೀ ಅಣ್ಣನೆಂದು ಗುರ್ತಿಸಿದ್ದಾರೆ....ತನ್ನನ್ನು ಗುರ್ತಿಸಿದ್ದರೂ ತನ್ನನ್ನು ಏನೂ ಮಾಡದೆ ಇರುವುದರ ರಹಸ್ಯವೇನು?—ಉಸ್ಸೋಕ್ ಬಗ್ಗೆ ಬಾಬಾಗಿರುವ ನಂಬಿಕೆ. ಉಸ್ಸೋಕ್‌ನಲ್ಲಿ ಸೇರುವ ಪ್ರತಿಯೊಬ್ಬನೂ ತಪ್ಪದೆ ತನ್ನ ಅಂತರಂಗದ ಎಲ್ಲಾ ಸಂಗತಿಗಳನ್ನೂ ಹೇಳುತ್ತಾನೆ ಎಂಬುದನ್ನು ಇವರು ತುಂಬಾ ಬಲವಾಗಿ ನಂಬುತ್ತಾರೆ. ಆದ್ದರಿಂದಲೇ ತಾನು ತಂಗಿಯನ್ನೂ ಬಿಟ್ಟು ನಿಜವಾಗಿಯೂ ಉಸ್ಸೋಕ್ ಸೇರಿರುವಂತೆ ನಂಬುತ್ತಿದ್ದಾರೆ; ತಮ್ಮವನು ಎಂದುಕೊಳ್ಳುತ್ತಿದ್ದಾರೆ. ಆ ನಂಬಿಕೆಯಲ್ಲಿಯೇ ಇರುವುದು ಒಳ್ಳೆಯದು.

ಮಂಡಿಯೂರಿ ಮೊಣಕಾಲ ಮೇಲೆ ಕುಳಿತು "ನಾಳಿದ್ದು ಉಸ್ಸೋಕ್ ಸಭೆ ಇದೆ. ಅದನ್ನು ನಿಮಗೆ ತಿಳಿಸಲೆಂದು ನನ್ನನ್ನು ಕಳುಹಿಸಿದ್ದಾರೆ" ಎಂದ ಷಾಡೋ.

"ಒಳ್ಳೆಯದು."

"ಬರ್ತೀನಿ" ಎಂದು ಎದ್ದುನಿಂತ ಷಾಡೋ. ಬಾಬಾ ಕೈ ಎತ್ತಿದ. ಕ್ಯೂ ಮತ್ತೆ ಪ್ರಾರಂಭವಾಯಿತು.

ಹಿಂದಿರುಗುತ್ತಿದ್ದ ಷಾಡೋಗೆ ಷಾಕ್ ಹೊಡೆದಂತಾಯಿತು. ಏನೋ ಸಣ್ಣ ಮಿಂಚು. ಕೆಲವು ದಿನಗಳ ಹಿಂದೆ ತನ್ನ ಕಣ್ಣ ಮುಂದೆಯೇ ಬಾಬಾ ಅವರ ಸ್ಪರ್ಶದಿಂದ ಗೂನನ್ನು ಕಳೆದುಕೊಂಡ ಆ ಗೂನಿ ಹುಡುಗಿ ಕ್ಯೂನಲ್ಲಿ ಬರುತ್ತಿದ್ದಾಳೆ.

ಈಗ ಗೂನಿಲ್ಲ. ಆದರೆ ಕುರುಡಳಂತೆ ನಿಧಾನವಾಗಿ ತಡವರಿಸಿ ಅಡಿ

ಯಿಡುತ್ತಿದ್ದಳು!

* * * *

ಅದುವರೆವಿಗೂ ಫೋನ್ ಕರೆಗಾಗಿ ಕಾಯುತ್ತಾ ಕುಳಿತಿದ್ದ ರಂಗ ಪ್ರಸಾದ್ ಕರೆಬಂದ ಒಡನೆಯೇ "ಹೇಳಿ, ಏನಾದರೂ ಮುಂದುವರಿಯಲು ಸಾಧ್ಯವಾಯಿತೋ....?" ಎಂದು ಕೇಳಿದ.

"ಇರೋದು ಸ್ವಲ್ಪ, ಇಲ್ಲದಿರೋದು ಸ್ವಲ್ಪ. ಇರೋದು ಮೊದಲು ಹೇಳಲೇ? ಇಲ್ಲದನ್ನು ಮೊದಲು ಹೇಳಲೇ?"

"ಇಲ್ಲದ್ದನ್ನೇ ಮೊದಲು ಹೇಳಿ. ಇರೋದನ್ನ ನಂತರ ಹೇಳಿ. ಕೊನೆಗೆ ಸ್ವಲ್ಪ ಕಾಲವಾದರೂ ಸಂತೃಪ್ತಿಯಿಂದ ಇರಬಹುದು."

"ಪ್ರತಿಮಾಳ ಗಂಡನಾದ ಅಗರ್ವಾಲ್ ನಾನು ಕೇಳಿದ ಯಾವ ಪ್ರಶ್ನೆಗೂ ಉತ್ತರವನ್ನೂ ಹೇಳುತ್ತಿಲ್ಲ. ತಪ್ಪು ಆತನದಲ್ಲ, ವ್ಯವಹಾರದ ವಿನಾ ಬೇರೇನೂ ಗೊತ್ತೆ ಇಲ್ಲ."

"ಒಳ್ಳೆ ಸುದ್ದಿ ಅದೇನೋ ಹೇಳಿ" ಎಂದ ರಂಗಪ್ರಸಾದ್.

"ಪ್ರತಿಮಾ ಅಗರ್‌ವಾಲ್ ತೆಲುಗಿನವಳು. ಅಗರ್‌ವಾಲನನ್ನು ಮದುವೆ ಮಾಡಿಕೊಂಡ ನಂತರ ಆ ಹೆಸರು ಬಂತು."

ರಂಗಪ್ರಸಾದ್ ಫೋನನ್ನು ಬಲವಾಗಿ ಹಿಡಿದು "ಆಕೆಯದು ಕೃಷ್ಣಾಪುರ ವೇನು?" ಎಂದು ಕೇಳಿದ ನಡಗುವ ಧ್ವನಿಯಲ್ಲಿ.

"ಅಲ್ಲ" ಶಾಂತವಾದ ಧ್ವನಿ ಕೇಳಿಸಿತು.

"ಮತ್ತೆ ಒಳ್ಳೇ ಸುದ್ದಿ. ಒಳ್ಳೇ ಸುದ್ದಿ ಅಂದಿದ್ದು?" ಎಂದು ಹೇಳುವಾಗ ತೀರಾ ಬೇಸರಗೊಂಡಿದ್ದ.

"ಆಕೆ ತೆಲುಗಿನವಳು ಎಂಬುದೇ ಸುದ್ದಿ ಎಂದುಕೊಂಡೆ!"

'ನಿನ್ನ ತಲೆ' ಎನ್ನೋಣ ಎಂದುಕೊಂಡವನು ತನ್ನ ನಾಲಿಗೆಯನ್ನು ನಿಗ್ರಹಿಸಿದ; ಆಕೆಯ ಉತ್ಸಾಹಕ್ಕೆ ತಣ್ಣೀರೆರಚಿದಂತಾಗಬಹುದು ಎಂದು. "ಇನ್ನೇನಾದರೂ ಪ್ರೋಗ್ರೆಸ್ ಇದೆಯೇ?" ಎಂದು ಕೇಳಿದ.

"ಇನ್ನೊಮ್ಮೆ ಅಗರ್‌ವಾಲನನ್ನು ನೋಡ್ತಾ ಇದೀನಿ. ಏನಾದರೂ ಕ್ಲೂ ದೊರೆಯುತ್ತಾ ನೋಡ್ತೀನಿ. ಆದರೂ ನನ್ನ ಅಭಿಪ್ರಾಯ ತಿಳಿಸಬಹುದೇ?..."

"ಅದೇನು?"

"ಎಲ್ಲಿಯದೋ ಕೃಷ್ಣಾಪುರ. ಅಲ್ಲಿಯ ವಿಕೃತ ಜನನಗಳಿಗೂ ಇಲ್ಲಿ ಪ್ರತಿಮಾ ಅಗರ್‌ವಾಲಳಿಗೆ ಎಂದೋ ಹುಟ್ಟಿದ ಶಿಶುವಿಗೂ ಸಂಬಂಧ ಇರೋಲ್ಲ. ನಾವು ಸುಮ್ಮನೆ ಕತ್ತಲೆಯಲ್ಲೇ ತಡಕಾಡ್ತಾ ಇದೀವೇನೋ ಅನ್ಸುತ್ತೆ...."

"ಹೌದು. ಇನ್ನು ಹೆಚ್ಚು ಶ್ರಮ ಬೇಡ. ನಿಮ್ಮ ಕೆಲಸ ಮುಗಿಸಿಕೊಂಡು ಬನ್ನಿ. ಇದಕ್ಕಾಗಿ ನಿಲ್ಲಬೇಡಿ" ಎನ್ನುತ್ತಾ ಕೋಪದಿಂದ ರಿಸೀವರ್ ಇರಿಸಿದ.

## ೩೦

ಅವತಾರ್ ಬಾಬಾ ಬಳಿಯಿಂದ ಉಸ್ನೋಕ್ ಕಾರ್ಯಾಲಯಕ್ಕೆ ಬರುತ್ತಾ ಷಾಡೋ ಯೋಚಿಸುತ್ತಿದ್ದ. ಈಗ ಅವನಿಗೆ ಸ್ಪಷ್ಟವಾಗಿತ್ತು: ಬಾಬಾ ಬಳಿಗೆ ಬರುವ ಭಕ್ತರಲ್ಲಿ ಅರ್ಧಭಾಗ ಅಲ್ಲಿಯವರೇ. ಒಂದು ರಹಸ್ಯ ಬಿಡಿಸಿದ್ದಾಯಿತು. ಇನ್ನು ಉಸ್ನೋಕ್ ಬಗ್ಗೆ ತಿಳಿಯಬೇಕು.

ಉಸ್ನೋಕ್‌ನಲ್ಲಿ ಮೋಸವೇನೂ ಇಲ್ಲದಿರಬಹುದು. ಕೇವಲ ಕ್ಷುದ್ರಶಕ್ತಿ ಸೇವಾ ಸಂಸ್ಥೆಯೇ ಅದಾಗಿರಬಹುದು. ತಾಂತ್ರಿಕ ವಿದ್ಯೆಗಳು ಇರುವುದೇ ಇಲ್ಲವೇ ಎಂಬುದು ಗೊತ್ತಾಗಬೇಕಷ್ಟೆ. ಇವೆಲ್ಲವನ್ನು ಶೋಧಿಸಿ ಸತ್ಯವನ್ನು ತಿಳಿಯುವಷ್ಟು ಪುರುಸೊತ್ತು ಇಲ್ಲ. ತನಗೆ ಬೇಕಾದದ್ದು ತನ್ನ ತಂಗಿಯ ಬಗ್ಗೆ, ಅವರಿಬ್ಬರೂ ಬದುಕುವುದರ ಬಗ್ಗೆ. ಇಷ್ಟು ಮಂದಿಯೂ ಇಷ್ಟೊಂದು ನಂಬಿಕೆಯಿಂದ ಅಷ್ಟಾವಕ್ರನ ಬಗ್ಗೆ ಹೇಳುತ್ತಾರೆ ಎಂದರೆ ಇದರಲ್ಲಿ ಸ್ವಲ್ಪವಾದರೂ ನಿಜವಿರಲೇಬೇಕು. ಅದೇ ನಿಜವಾಗಿದ್ದರೆ ಸಿದ್ಧಾರ್ಥ-ಗೌರಿ ಅವರ ಭವಿಷ್ಯ... ಮುಂದೆ ಆಲೋಚಿಸಲಾರದಾದ.

ಮೌನವಾಗಿ ಉಸ್ನೋಕ್ ಕಾರ್ಯಾಲಯದ ಮೆಟ್ಟಿಲನ್ನೇರಿದ. ಹೊರಗೆ ನಿರ್ಜೀವವಾಗಿ ನಿರ್ಮಾನುಷ್ಯನಾಗಿ ಕಾಣಿಸುವ ಈ ಭವನದ ಮುಚ್ಚಿದ ಬಾಗಿಲ ಹಿಂದೆ ಪ್ರಪಂಚವನ್ನೆಲ್ಲಾ ಗಡಗಡ ನಡುಗಿಸುವ ವ್ಯಕ್ತಿಯ ಹುಟ್ಟಿಗಾಗಿ ಅವಿರತ ಶ್ರಮ ಸಾಗುತ್ತಿದೆ ಎಂದು ಯಾರೂ ಊಹಿಸಲು ಕೂಡ ಸಾಧ್ಯವಿರಲಿಲ್ಲ.

ಷಾಡೋ ಒಳಕ್ಕೆ ಹೋದ.

ಅವನನ್ನು ಉಸ್ನೋಕ್‌ನಲ್ಲಿ ಸೇರಿಸಿಕೊಂಡಾಗ ಪ್ರಶ್ನೆ ಕೇಳಿದ ವೃದ್ಧ ಅಲ್ಲಿದ್ದ—ಅವನಿಗಾಗಿಯೇ ಕಾಯುತ್ತಿರುವಂತೆ. "ಬಾಬಾಗೆ ಹೇಳಿದ್ಯಾ" ಎಂದು ಕೇಳಿದ. ಷಾಡೋ ತಲೆತೂಗಿದ.

"ನನ್ನೊಡನೆ ಬಾ" ಎಂದು ವೃದ್ಧ ಮುಂದೆ ನಡೆದ. ಷಾಡೋ ಆತನನ್ನು ಅನುಸರಿಸಿದ. ಇಬ್ಬರೂ ಚಿಕ್ಕದಾದ ಹಾಲ್ ಪ್ರವೇಶಿಸಿದರು. ಅಲ್ಲಿ ಆಗ್ಲೇ ಇಪ್ಪತ್ತು ಮೂವತ್ತು ಮಂದಿ ಕುಳಿತಿದ್ದರು. ಅವರ ಮುಂದೆ ಒಬ್ಬ ವ್ಯಕ್ತಿ ದ್ದ. ನೋಡಲು ಭಯಂಕರವಾಗಿದ್ದ. ಅಜಾನುಬಾಹು. "ಅವರೇ ಮಹಾ

ದ್ರಷ್ಟ" ಎಂದ ಕೊನೆಯ ಸಾಲಿನಲ್ಲಿ ಕುಳಿತುಕೊಳ್ಳುತ್ತಾ. ಷಾಡೋ ಆತನನ್ನೇ ನೋಡಿದ. ಮಹಾದ್ರಷ್ಟ ಹೇಳುತ್ತಾ ಇದ್ದ:

"ಅಷ್ಟಾವಕ್ರನ ಹುಟ್ಟಿನ ಬಗ್ಗೆ ಆತನ ತಂದೆ ಸಿದ್ಧಾರ್ಥನಿಗೆ ಒಬ್ಬ ಸಾಧುವಿನ ಮೂಲಕ ಗೊತ್ತಾಗಿದೆ. ಆ ಸಾಧು ಸ್ವಾಮಿ ಶಿವಾನಂದನ ಶಿಷ್ಯ. ಭಿಕ್ಷಾಟನೆ ಮಾಡುತ್ತಾ ತಿರುಗುವವನು. ಅಷ್ಟಾವಕ್ರನ ಜನನವನ್ನು ನಿಲ್ಲಿಸಲು ಸ್ವಾಮಿ ಶಿವಾನಂದ ತನಗೆ ನೆರವಾಗುತ್ತಾನೆಂದು ಸಿದ್ಧಾರ್ಥ ಹಿಮಾಲಯಕ್ಕೆ ಹೊರಟಿದ್ದಾನೆ. ಆದರೆ ಆ ಸ್ವಾಮಿ ಶಿವಾನಂದನನ್ನು ತುಂಬಾ ಮೊದಲೇ ನಾನು ಕೊಂದಿದ್ದೇನೆ ಎಂಬುದು ಅವನಿಗೆ ಗೊತ್ತಿಲ್ಲ! ಸಿದ್ಧಾರ್ಥ ನಿರಾಸೆಗೊಂಡು ಹಿಂತಿರುಗದೆ ಬೇರೆ ಮಾರ್ಗವೇ ಇಲ್ಲ...ರಾಕೇಶ್...."

ಕೇಳುತ್ತಾ ಕುಳಿತಿದ್ದ ಷಾಡೋ ಬೆಚ್ಚಿದ.

ಮುಂದಿನ ಸಾಲಿನಲ್ಲಿ ಕುಳಿತಿದ್ದ ಒಬ್ಬ ವ್ಯಕ್ತಿ ಎದ್ದು ನಿಂತ.

"ಈ ಕೂಡಲೇ ನೀನು ಹೋಗಬೇಕು. ಸಿದ್ಧಾರ್ಥನನ್ನು ನೋಡು. ಈಗ ಸಿದ್ಧಾರ್ಥ ಹರಿದ್ವಾರದಿಂದ ಹೃಷಿಕೇಶಕ್ಕೆ ಹೋಗುವ ಹಾದಿಯಲ್ಲಿದ್ದಾನೆ. ನೀನು ಮಾಡಬೇಕಾದ ಕೆಲಸ ಸಿದ್ಧಾರ್ಥನೊಂದಿಗಿದ್ದು ಸ್ವಾಮಿ ಶಿವಾನಂದನ ಆಶ್ರಮ ತೋರಿಸಿ ಶಿವಾನಂದ ಸತ್ತದ್ದನ್ನು ತಿಳಿಸಬೇಕು. ನಂತರ ಒಳ್ಳೇ ಮಾತಿನಿಂದ ಇಲ್ಲಿಗೆ ಕರೆದು ತಾ. ಅಷ್ಟಾವಕ್ರನ ಜನನದ ಕಾಲಕ್ಕೆ ಸಿದ್ಧಾರ್ಥ ಇಲ್ಲಿರುವಂತೆ ಮಾಡಬೇಕು. ಸಿದ್ಧಾರ್ಥನಿಗೆ ಸಾವು ಇಲ್ಲೇ ಬರಬೇಕು."

ರಾಕೇಶ್ ಮೌನವಾಗಿ ತಲೆಯಾಡಿಸಿದ.

"ಒಡನೆಯೇ ಹೊರಡಬೇಕು."

ಬಾಗಿಲ ಬಳಿಗೆ ಬರುವ ವೇಳೆಗೆ ಆತನ ಮೇಲೆ ಹೆಚ್ಚು ಬೆಳಕು ಬಿತ್ತು. ಈಗ ಸ್ಪಷ್ಟವಾಗಿ ಗುರ್ತು ಸಿಕ್ಕಿತು-ತನ್ನ ಭಾವ ರಾಕೇಶ್! ಷಾಡೋ ದಿಗ್ಭ್ರಾಂತನಾದ.

ಆ ಕ್ಷಣವೇ ಅವನ ಮೇಲೆರಗಿ ಅವನ ನೆತ್ತರು ಚೆಲ್ಲೋಣ ಎನಿಸಿತು. ನಂಬಿಕೆದ್ರೋಹ, ನರರಾಕ್ಷಸನನ್ನು ಪ್ರತ್ಯಕ್ಷವಾಗಿ ಕಾಣುತ್ತಿದ್ದ. ಇಷ್ಟು ಕಾಲ ತಮ್ಮ ಮಧ್ಯೆ ಇದ್ದ ರಾಕೇಶ್ ಇಂಥವನೇ?

"ರಾಕೇಶ್" ಮಹಾದ್ರಷ್ಟ ಕರೆದ.

"ಒಂದು ವೇಳೆ ಸರಿಯಾದ ಸಮಯಕ್ಕೆ ಸಿದ್ಧಾರ್ಥನನ್ನು ಕರೆತರಲು ಸಾಧ್ಯವಾಗದಿದ್ದರೆ ಅವನನ್ನು ಪರ್ವತಗಳ ಮಧ್ಯೆಯೇ ಕೊಂದುಹಾಕು. ಇಲ್ಲಿ ಅಷ್ಟಾವಕ್ರ ಹುಟ್ಟುತ್ತಲೇ ಆ ಸಂಗತಿ ನಿನಗೆ ತಿಳಿಯಪಡಿಸಲಾಗುತ್ತದೆ. ಒಡನೆಯೇ ಅಲ್ಲಿಯೇ ಅವನನ್ನು ಕೊಲ್ಲಬೇಕು ಗೊತ್ತಾಯಿತೆ?"

ರಾಕೇಶ್ ತಲೆದೂಗಿದ.

ಷಾಡೋಗೆ ತಾನೇನು ಮಾಡಬೇಕೆಂಬುದೇ ಸ್ಫುರಿಸಲಿಲ್ಲ. ತಾನು ಹೊರಬೀಳುವ ಸಮಯವಿದಲ್ಲ. ಸಿದ್ಧಾರ್ಥನ ಪ್ರಾಣ ಸಂಕಟದಲ್ಲಿದೆ. ಏನು ಮಾಡಬೇಕು?

ರಾಕೇಶ್ ಹೊರಕ್ಕೆ ಹೋಗುತ್ತಲೇ ಬಾಗಿಲು ಮೊದಲಿನಂತೆ ಮುಚ್ಚಿ ಕೊಂಡಿತು. ಮಹಾದ್ರಷ್ಟ ತನ್ನ ಮಾತು ಮುಂದುವರಿಸಿದ.

ಒಂದು ನಿರ್ಣಯ ತೆಗೆದುಕೊಳ್ಳಲು ಮಹಾದ್ರಷ್ಟ ಅಷ್ಟು ಶ್ರಮ ಎಂದೂ ವಹಿಸಿರಲಿಲ್ಲ. ಸಿದ್ಧಾರ್ಥನ ಬಾಳು ಅಪಾಯದ ಅಂಚಿನಲ್ಲಿದೆ. ಇನ್ನು ಮೂರು-ನಾಲ್ಕು ಗಂಟೆಗಳ ಅವಧಿಯಲ್ಲಿ ರಾಕೇಶ್ ಸಿದ್ಧಾರ್ಥನನ್ನು ಕಾಣು ತ್ತಾನೆ ಎಂಬುದೂ ಗೊತ್ತು. ಉಸ್ಪೋರ್ಕ್‌ಗೆ ಈಗ ಹಣದ ಮುಗ್ಗಟ್ಟೇನೂ ಇಲ್ಲ. ಡೆಹರಾಡೂನ್‌ನಲ್ಲಿ ಹೆಲಿಪ್ಯಾಡ್ ಇದೆಯಾದ್ದರಿಂದ ರಾಕೇಶ್ ಅಲ್ಲಿ ಇಳಿಯು ತ್ತಾನೆ. ಅಲ್ಲಿಂದ ಹಿಮಾಲಯದೊಳಕ್ಕೆ ಎರಡು ಗಂಟೆ ಪ್ರಯಾಣ. ಇವರ ಯೋಜನೆಯಂತೆ ಸಿದ್ಧಾರ್ಥನನ್ನು ಹಿಮಾಲಯದಲ್ಲಿ ಕೊಲ್ಲಬೇಕು.

ಸ್ವಾಮಿ ಶಿವಾನಂದನನ್ನು ಈ ಮೊದಲೇ ಕೊಂದಿದ್ದರೆ ಸಿದ್ಧಾರ್ಥ ಅಲ್ಲಿಗೆ ಹೋಗಿ ಪ್ರಯೋಜನವಿಲ್ಲ. ಕೇದಾರಗೌರಿಯ ಪ್ರಸವ ಕಾಲಕ್ಕೆ ಸಿದ್ಧಾರ್ಥ ಖಂಡಿತ ಹಿಂತಿರುಗುತ್ತಾನೆ. ಅಂಥಾದ್ದರಲ್ಲಿ ರಾಕೇಶ್ ಅಷ್ಟು ದೂರ ಹೋಗು ವುದೇಕೆ? ಒಂದು ವೇಳೆ ಹಿಂತಿರುಗದೆ ಇದ್ದರೆ ಆ ಪರ್ವತ ರಾಶಿಯಲ್ಲಿ ಕೊಲ್ಲ ಲೆಂದೇ ಏನೋ ಈ ಮಾತು ನಂಬಿಕೆಗೆ ಸಿಲುಕಲಿಲ್ಲ.

ಏನಾದರೂ ಸಿದ್ಧಾರ್ಥನ ಪ್ರಾಣಕ್ಕೆ ಅಪಾಯ ಒದಗಿದೆ. ರಾಕೇಶ್ ಬಗ್ಗೆ ಅವನಿಗೆ ತಿಳಿಹೇಳಬೇಕು. ಮುಂದಿನ ವಿಪತ್ತಿನ ಬಗ್ಗೆ ಎಚ್ಚರಿಸಬೇಕು. ಹಣ ಸಮಸ್ಯೆಯಲ್ಲ. ತಾನೆಷ್ಟು ಪ್ರಯತ್ನಿಸಿದರೂ ತನಗೆ ಬೇರೊಂದು ಹೆಲಿಕಾಪ್ಟರ್ ದೊರೆಯದು. ನಂತರದಲ್ಲಿ ದೊರೆತರೂ ಪ್ರಯೋಜನವಿಲ್ಲ. ಹೃಷಿಕೇಶದಿಂದ ಬದರೀನಾಥದ ಕಡೆ ಪ್ರಯಾಣ ಪ್ರಾರಂಭಿಸಿದರೆ ಅವರು ದೊರೆಯುವುದು ಕಷ್ಟ. ಅಷ್ಟರಲ್ಲಿ ಅಲ್ಲಿಗೆ ಹೋಗುವುದೂ ಅಸಾಧ್ಯದ ಕೆಲಸ.

ರಂಗದ ಮೇಲೆ ಮಹಾದ್ರಷ್ಟ ತನ್ನ ಮಾತು ಮುಂದುವರಿಸುತ್ತಿದ್ದ. ಒಂದೊಂದು ನಿಮಿಷ ಕಳೆದರೂ ಅಪಾಯ ಸನ್ನಿಹಿತವಾದಂತೆ, ಏನಾದರೂ ಆಗಲಿ ಎಂದು ಷಾಡೋ ಎದ್ದು ನಿಂತ. ಮಹಾದ್ರಷ್ಟನ ದೃಷ್ಟಿ ಅವನ ಮೇಲೆ ಬಿತ್ತು. ಪ್ರಶ್ನಾರ್ಥಕವಾಗಿ ನೋಡಿದ. ಇದರಿಂದ ಮುಂದಿದ್ದ ಎಲ್ಲಾ ಸದಸ್ಯರೂ ಹಿಂತಿರುಗಿ ನೋಡಿದರು.

"ಏನು?" ಎಂದು ಕೇಳಿದ ಮಹಾದ್ರಷ್ಟ ಎಲ್ಲರಿಗೂ ಕೇಳಿಸುವಂತೆ.

"ರಾಕೇಶ್ ಜತೆಯಲ್ಲಿ ನಾನೂ ಹೋಗುತ್ತೇನೆ."

"ಏಕೆ?"

ಷಾಡೋ ಗಂಟಲು ಸರಿಪಡಿಸಿಕೊಂಡು "ಸಿದ್ಧಾರ್ಥನ ಮೇಲೆ ನನ್ನ ದ್ವೇಷ ಹಾಗೇ ಉಳಿದಿದೆ. ಅದನ್ನು ತೀರಿಸಿಕೊಳ್ಳಲು ಇದೇ ಸಮಯ..."

"ನಿನಗೇಕೆ ಈ ದ್ವೇಷ?"

"ಕೇದಾರಗೌರಿ ನನ್ನ ತಂಗಿ ಆದ್ದರಿಂದ."

ಸದಸ್ಯರು ಪರಸ್ಪರ ಮಾತನಾಡಿಕೊಳ್ಳಲು ಪ್ರಾರಂಭಿಸಿದ್ದರಿಂದ ಹಾಲ್ಲೆಲ್ಲಾ ಗುಸುಗುಸು ಸದ್ದು. ಮಹಾದ್ರಷ್ಟ ಕೈಯೆತ್ತಿದ. ಮತ್ತೆ ನಿಶ್ಶಬ್ದವಾಯಿತು ವಾತಾವರಣ.

"ಇಲ್ಲಿ ಬಾ...."

ಸೀಟುಗಳ ಮಧ್ಯದಿಂದ ನಡೆದ. ಹುಲಿಯ ಬಾಯಲ್ಲಿ ತಲೆ ಇಡುತ್ತಿದ್ದೇನೆ ಎಂಬುದು ಗೊತ್ತಿತ್ತು. ಆದರೆ ಸಿದ್ಧಾರ್ಥನನ್ನು ರಕ್ಷಿಸಲು ಇದಕ್ಕಿಂತ ಬೇರೆ ಮಾರ್ಗವೇ ಇಲ್ಲ. ಮೆಟ್ಟಿಲನ್ನು ಏರಿ ರಂಗವನ್ನು ಪ್ರವೇಶಿಸಿದ. ತಾನು ಬೆಳಕಿನಲ್ಲಿದ್ದು ಮಹಾದ್ರಷ್ಟ ಸ್ವಲ್ಪ ಕತ್ತಲೆಯಲ್ಲಿದ್ದುದರಿಂದ ಆತನ ಆಕಾರ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಸೂಜಿಯಂತೆ ಬೆಳಕು ಕಣ್ಣು ಚುಚ್ಚುತ್ತಿತ್ತು.

"ಸಿದ್ಧಾರ್ಥ ಸಾಯುತ್ತಾನೆ. ಅದರೊಂದಿಗೆ ನಿನ್ನ ತಂಗಿಯೂ ಸಾಯುತ್ತಾಳೆ ಎಂಬುದು ನಿನಗೆ ಗೊತ್ತೇ?"

ಷಾಡೋ 'ಗೊತ್ತು' ಎನ್ನುವಂತೆ ತಲೆಯಾಡಿಸಿದ. "ನನಗೂ ನನ್ನ ಮನೆಗೂ ಅಂಥಾ ಸಂಬಂಧವೇನೂ ಇಲ್ಲ. ಚಿಕ್ಕಂದಿನಲ್ಲೇ ನಾನು ಮನೆಬಿಟ್ಟವನು. ನನ್ನ ತಂದೆಯ ಸಾವಿನ ಸುದ್ದಿ ಪೇಪರಿನಲ್ಲಿ ಓದಿ ಆಸ್ತಿಗಾಗಿ ಇಲ್ಲಿಗೆ ಬಂದೆ. ಆಗಲೇ ನನ್ನ ತಂಗಿ ಮದುವೆಯಾಗಿತ್ತು. ಸಿದ್ಧಾರ್ಥ ನನ್ನ ಆಸ್ತಿ ನನಗೆ ಒಪ್ಪಿಸಲು ತುಂಬಾ ತಕರಾರು ಮಾಡಿದ...." ಮಾತು ಒಂದೆರಡು ಕ್ಷಣ ನಿಲ್ಲಿಸಿ ಸಭೆಯನ್ನು ನೋಡಿದ. ನಂತರ "ನನಗೆ ಹಣವೆಂದರೆ ತುಂಬಾ ಆಸೆ. ಹಣಕ್ಕಾಗಿ ನಾನು ಏನು ಬೇಕಾದರೂ ಮಾಡುತ್ತೇನೆ. ಕೊನೆಗೆ ತಂಗಿಯನ್ನು ಬೇಕಾದರೂ ಕೊಲ್ಲುತ್ತೇನೆ. ಉಸ್ಸೋಕ್‌ಗಾಗಿ ನನ್ನ ಪ್ರಾಣವನ್ನೇ ಅರ್ಪಿಸುತ್ತೇನೆ" ಎಂದು ಹೇಳಿದ.

ಮಹಾದ್ರಷ್ಟ ಕೈಯೆತ್ತುತ್ತಲೇ ಹರ್ಷಧ್ವನಿ ನಿಂತಿತು.

ಷಾಡೋ ತುಂಬಾ ಪ್ರಯಾಸದಿಂದ ತನ್ನ ಮನದ ಭಾವನೆಗಳನ್ನು ನಿಯಂತ್ರಿಸುತ್ತಿದ್ದಾನೆ. ಆ ಕ್ಷಣದಲ್ಲಿಯೇ ಮೆಷಿನ್‌ಗನ್‌ನಿಂದ ಆ ಸಭೆ

ಯಲ್ಲಿದ್ದವರನ್ನೆಲ್ಲಾ ಷೂಟ್ ಮಾಡಬೇಕೆನಿಸಿತು. ಅಷ್ಟೊಂದು ಕೋಪವಿತ್ತು.

ಎದುರಿಸಿದರೆ ಮನಸ್ಸಿನ ಭಾವಗಳನ್ನು ಅರಿಯುವ ಶಕ್ತಿ ಉಸ್ನೋಕ್‌ನ ಕೆಲವು ರೆಡ್‌ಸ್ಕೆಲಿಟನ್‌ಗಳಿಗೆ ಮತ್ತು ಮಹಾದ್ರಷ್ಟನಿಗೆ ಉಂಟೆಂದು ಷಾಡೋಗೆ ಗೊತ್ತಿತ್ತು. ಆದರೆ ಅದು ಆಯಾ ವ್ಯಕ್ತಿಗಳ ಭ್ರಾಂತಿ ಮಾತ್ರವೇ ಎಂಬುದು ಈಗ ಸ್ಪಷ್ಟವಾಗಿತ್ತು. ಹಾಗಿಲ್ಲದಿದ್ದರೆ ತನ್ನ ಮೈಮೇಲೆ ಉಸ್ನೋಕ್ ಮುದ್ರೆ ಇಲ್ಲ ಎಂಬುದು ಮಹಾದ್ರಷ್ಟನಾದರೂ ಗುರ್ತಿಸಬೇಕಾಗಿತ್ತು.

ಅದೇ ಷಾಡೋಗೆ ಧೈರ್ಯ.

ಅಷ್ಟರಲ್ಲಿ ಮಹಾದ್ರಷ್ಟ ನುಡಿದ: "ಸಿದ್ಧಾರ್ಥನನ್ನು ಕೊಲ್ಲಲು ನೀನು ಹೋಗಬೇಕಾಗಿಲ್ಲ ರವಿ. ಸಿದ್ಧಾರ್ಥನೆ ಅಷ್ಟಾವಕ್ರನ ಜನನ ಕಾಲಕ್ಕೆ ಇಲ್ಲಿಗೆ ಬರುತ್ತಾನೆ. ತಾನೇ ಅಷ್ಟಾವಕ್ರನ ಕೈಯಿಂದ ಸಾಯುತ್ತಾನೆ..."

"ಆದರೆ ರಾಕೇಶ್?...."

"ರಾಕೇಶ್ ಸಿದ್ಧಾರ್ಥನನ್ನು ಕೊಲ್ಲುವುದಿಲ್ಲ. ಅಷ್ಟಾವಕ್ರನ ಜನನ ಕಾಲಕ್ಕೆ ಸಿದ್ಧಾರ್ಥ ಬರದಿದ್ದರೆ, ಅನ್ಯ ಎಲ್ಲಾ ಮಾರ್ಗಗಳಿಂದ ವಂಚಿತನಾದಾಗ ಕೊಲ್ಲುತ್ತಾನೆ. ಆದರೆ ಹಾಗೆ ನಡೆಯದು. ಹೃಷಿಕೇಶದಲ್ಲಿ ರಾಕೇಶ್ ಭೇಟಿಯಾಗುವ ಷೇರ್ಪಾ ಹಿಮಾಲಯವನ್ನೆಲ್ಲಾ ಚೆನ್ನಾಗಿ ಅರಿತಿರುವವನು. ಸಿದ್ಧಾರ್ಥನಿಗೆ ಯಾವ ಅನುಮಾನಕ್ಕೂ ಕಾರಣವಾಗದಂತೆ ಸ್ವಾಮಿ ಶಿವಾನಂದ ದರ್ಶನ ಮಾಡಿಸಿ ಅಲ್ಲಿಂದ ನಾವು ನಿರೀಕ್ಷಿಸುವ ಸಮಯಕ್ಕೆ ಸರಿಯಾಗಿ ಬರುತ್ತಾನೆ..." ಈ ಮಾತು ಹೇಳುತ್ತಾ ಮಹಾದ್ರಷ್ಟ ಮುಂದಡಿಯಿರಿಸಿದ. ಆತನ ಮುಖವನ್ನು ಅಷ್ಟೊಂದು ಬೆಳಕಿನಲ್ಲಿ ನೋಡಿ ಷಾಡೋ ಅಪ್ರಯತ್ನವಾಗಿ ನಡುಗಿದ. ಮಹಾದ್ರಷ್ಟನ ಕಣ್ಣು ಜಗತ್ತಿನ ಎಲ್ಲಾ ದ್ವೇಷ, ಕೋಪ, ವೈಷಮ್ಯಗಳನ್ನು ತನ್ನಲ್ಲೇ ಅಡಗಿಸಿಕೊಂಡಂತಿತ್ತು.

ಈ ಸಂಬಂಧದ ಮಾತು ಮುಗಿದಂತೆ ಸಭಿಕರತ್ತ ತಿರುಗಿ ಸೂಚನೆ ಕೊಡತೊಡಗಿದ. "ಹರನಾಮ್..." ಎಂದ.

ಎರಡನೆಯ ಸಾಲಿನಲ್ಲಿದ್ದಾತ ಒಬ್ಬ ಎದ್ದುನಿಂತು,

"ಅಷ್ಟಾವಕ್ರ ಹುಟ್ಟುವ ಘಳಿಗೆ ಹತ್ತಿರವಾಗುತ್ತಿದೆ. ಅದಕ್ಕೆ ಅಡ್ಡಿಯಾಗಿರುವುದೊಂದನ್ನು ನೀನು ತೊಲಗಿಸಬೇಕು....ನಗರದ ಮಧ್ಯೆ ದೊಡ್ಡ ಆಲಯವೊಂದಿದೆ. ಅದು ಆಂಜನೇಯಸ್ವಾಮಿ ಗುಡಿ. ಅದನ್ನು ಪೂರ್ಣವಾಗಿ ನಾಶಗೊಳಿಸಬೇಕು. ಈ ಪರಿಧಿಯಲ್ಲಿ ಆ ದೇವಸ್ಥಾನ ಇರಕೂಡದು. ನಿನ್ನೊಂದಿಗೆ ಇನ್ನೂ ಮೂರು ನಾಲ್ಕು ಮಂದಿಯನ್ನು ತೆಗೆದುಕೊಳ್ಳಬಹುದು. ಈ ರಾತ್ರಿ ಅಥವಾ ನಾಳೆ ರಾತ್ರಿ ಈ ಕೆಲಸ ಮುಗಿಯಬೇಕು.

ಹರನಾಂ ತಲೆಯಾಡಿಸಿದ.

ಈ ಮಾತು ಕೇಳುತ್ತಿದ್ದ ಷಾಡೋ ರಕ್ತ ಕುದಿಯಿತು. ದೇವಾಲಯದ ಬಗ್ಗೆಯಲ್ಲ. ದೇವಾಲಯದ ಪ್ರಾಂಗಣದಲ್ಲಿ ಏನು ನಡೆದರೂ ಹಿಂದೂಗಳು ಸುಮ್ಮನಿರುವುದಿಲ್ಲ. ಅವರ ಅನುಮಾನವೆಲ್ಲಾ ಮುಸ್ಲಿಮರ ಮೇಲೆ ಇರುತ್ತದೆ. ಅದರಲ್ಲಿ ಪೂರ್ಣವಾಗಿ ದೇವಾಲಯದ ನಾಶ!

ಅಷ್ಟರಲ್ಲಿ ಮಹಾದ್ರಷ್ಟನ ಆಜ್ಞೆಯನ್ನನುಸರಿಸಿ ಮತ್ತೆ ನಾಲ್ವರು ಸದಸ್ಯರು ಎದ್ದುನಿಂತರು.

"ಶ್ರೀಲಂಕಾದಿಂದ ಸಮರ್ಥನೆ, ನಮ್ಮ ದೇಶಕ್ಕೆ ಬರಲಿದ್ದಾರೆ. ಪ್ರೋಗ್ರಾಂ ಪ್ರಕಾರ ನಾಳೆ ಮದರಾಸಿಗೆ ಬರಬೇಕು. ಸಮರ್ಥನೆ ಬಾಲ್ಯದಲ್ಲಿ ಮಂತ್ರ ಶಾಸ್ತ್ರ ಓದಿರುವವನು. ಆತನ ಪೂರ್ವಜರಿಗೆ ಕ್ಷುದ್ರದೊಂದಿಗೆ ಪರಿಚಯವಿದೆ. ಅದರ ವಿರುದ್ಧವಾಗಿ ಸಾಧನೆ ನಡೆಸುತ್ತಿದ್ದರು. ಒರಿಸ್ಸಾದಲ್ಲಿದ್ದ ಕಾದ್ರ, ವಿಷಾಚಿ ವಂಶಸ್ಥರಿಗೂ, ಈತನ ವಂಶಸ್ಥರಿಗೂ ಹಲವು ತಲೆಮಾರುಗಳಿಂದ ಬದ್ಧದ್ವೇಷ. ಸಮರ್ಥನೆ ಮದರಾಸಿನಿಂದ ಇಲ್ಲಿಗೆ ಬರಬಹುದು. ಹಾಗೇನಾದರೂ ಬಂದರೆ ಆತನಿಗೆ ಅನುಮಾನ ಉಂಟಾಗಿದೆ ಎಂದು ಅರ್ಥ." ಒಬ್ಬ ಸದಸ್ಯನನ್ನು ಬೊಟ್ಟು ಮಾಡಿ ಕೇಳಿದ ಮಹಾದ್ರಷ್ಟ "ಈಗ ನೀನು ಎಲ್ಲಿ ಕೆಲಸ ಮಾಡುತ್ತಿದ್ದೀ?"

"ಏರ್‌ಪೋರ್ಟ್ ಆಫೀಸಿನಲ್ಲಿ."

"ಏರ್ ಕಾರ್ಗೋ ಹೋಗುವ ಹಾದಿಯಲ್ಲಿ ಕರೆದುಕೊಂಡು ಹೋಗಲು ಸಾಧ್ಯವೇ?"

ಸದಸ್ಯ ತಲೆಯಾಡಿಸಿದ.

"ಅವರ ಆಯುಧಗಳೊಂದಿಗೆ ಮೆಷಿನ್‌ಗನ್ ಇರುತ್ತದೆ."

"ಪರವಾಗಿಲ್ಲ! ನಮ್ಮ ಏರ್‌ಪೋರ್ಟ್‌ಗಳಲ್ಲಿ ಬಾಂಬ್ ಸಿಡಿದರೆ ಮಾತ್ರವೇ ಜಾಗರೂಕತೆಯಿಂದ ಇರುತ್ತಾರೆ. ಎಲ್ಲಿಲ್ಲದ ಶ್ರದ್ಧೆಯಿಂದ ನಾಲ್ಕು ದಿನ ಅನೇಕ ಪರೀಕ್ಷೆಗಳನ್ನು ಮಾಡುತ್ತಾರೆ. ನಂತರ ಮಾಮೂಲಿಯೇ ಒಮ್ಮೆ ಬಾಂಬು ಸಿಡಿಸಿದವನು ನಾಲ್ಕು ದಿನ ಸುಮ್ಮನಿದ್ದರೆ ಸಾಕು!"

"ಒಳ್ಳೆಯದು" ಎಂದು ಉಳಿದವರತ್ತ ತಿರುಗಿ "ವಿಮಾನದಿಂದ ಸಮರ್ಥನೆ ಇಳಿಯುತ್ತಿರುವಂತೆಯೇ ಅವನನ್ನು ನೀವು ಕೊಲ್ಲುತ್ತೀರಿ" ಎಂದ.

ಅವರು ತಲೆದೂಗಿದರು.

ಷಾಡೋಗೆ ಇದೇನು ಸಾಹಸ ಎನಿಸಿತು. ಸಮರ್ಥನೆಯ ಕೊಲೆಯಿಂದ ಏರ್ಪಡುವ ರಾಷ್ಟ್ರೀಯ–ಅಂತರರಾಷ್ಟ್ರೀಯ ಸಂಬಂಧಗಳ ಬಗ್ಗೆ ಅವನು

ಯೋಚಿಸುತ್ತಿರಲಿಲ್ಲ. ಆ ಸಮಸ್ಯೆ ಇದ್ದೇ ಇರುತ್ತದೆ ಆದರೆ ಈ ಜನರ ಧೈರ್ಯ! ತುಂಬಿದ ಏರ್‌ಪೋರ್ಟ್‌ನಲ್ಲಿ ಎಲ್ಲರ ಮಧ್ಯೆ ಕಗ್ಗೊಲೆ!

"ನೀವು ನಾಲ್ವರೂ ಸಾಯುತ್ತೀರಿ" ಮಹಾದ್ರಷ್ಟನ ಕಂಠ ನುಡಿಯಿತು. "ಗಾರ್ಡುಗಳು ಅಲ್ಲೇ ನಿಮ್ಮನ್ನು ಸುಟ್ಟು ಕೊಲ್ಲಬಹುದು. ಅಥವಾ ಪೊಲೀಸಿನವರು ಚಿತ್ರಹಿಂಸೆ ನೀಡಿ ನಿಮ್ಮನ್ನು ಕೊಲ್ಲಬಹುದು. ಆದರೆ ನೀವು ಯಾವ ಉತ್ತರವೂ ಹೇಳುವುದಿಲ್ಲ. ಉಸ್ಸೋಕ್‌ಗಾಗಿ ನಿಮ್ಮ ಪ್ರಾಣವನ್ನು ಅರ್ಪಿಸುತ್ತೀರಿ. ಅಷ್ಟಾವಕ್ರನ ಜನ್ಮದ ನಂತರ ನಿಮ್ಮ ಶವಗಳನ್ನು ಹೊರತೆಗೆದು ಪ್ರಾಣ ಕೊಡಲು ನಾನು ಬೇಡುತ್ತೇನೆ. ಒಂದು ವೇಳೆ ಅದು ಸಾಧ್ಯವಾಗದೆ ಹೋದರೂ ಮುಂದಿನ ಜನ್ಮದಲ್ಲಿ ನೀವು ಉಸ್ಸೋಕ್ ಸದಸ್ಯರಾಗಿ ಹುಟ್ಟಿ ಉನ್ನತ ಸ್ಥಾನವನ್ನು ಗಳಿಸುತ್ತೀರಿ..."

ಅವರ ಮುಖ ಭಕ್ತಿಯಿಂದ ಕಾಂತಿಯುತವಾಗಿತ್ತು. ಅವರನ್ನು ನೋಡಿದ ಷಾಡೋಗೆ 'ಅಯ್ಯೋ' ಎನಿಸಿತು. ಈ ಮತ್ತಿನಲ್ಲಿ ಬಿದ್ದವರಿಗೆ ನೆನಪಿರುವುದು ಎರಡೇ ಪದಗಳು—ಆವೇಶ! ತ್ಯಾಗ!

ಉಸ್ಸೋಕ್ ಮೇಲೆ, ಅಷ್ಟಾವಕ್ರನ ಮೇಲೆ ಇಷ್ಟು ಭಕ್ತಿ ಇರುವ ಅನುಚರರಿಗೆ ತುಂಬಾ ಎಚ್ಚರಿಕೆಯಿಂದ 'ಪೋಸ್ಟ್ ಹಿಪ್ನಾಟಿಕ್ ಸಜೆಷನ್ಸ್' ಕೊಡುತ್ತಿದ್ದಾನೆ ದ್ರಷ್ಟ. ಭಕ್ತಿಯನ್ನು ಕ್ಯಾಷ್ ಮಾಡಿಕೊಳ್ಳುತ್ತಿದ್ದಾನೆ. ಏರ್‌ಪೋರ್ಟ್‌ನಲ್ಲಿ ಸಾಯುವುದು ಖಂಡಿ[illegible] ಆ[illegible] ಅದನ್ನು ಲೆಕ್ಕಿಸುವುದಿಲ್ಲ.

ಸದಸ್ಯರನ್ನೆಲ್ಲಾ ಎದ್ದು ನಿಂತ[illegible]. ಆದರೊಂದಿಗೆ ಸಭೆ ಮುಗಿಯಿತೆಂದು ಗ್ರಹಿಸಿದ ಷಾಡೋ ತನ್ನ ಯೋಚನಾ ಪ್ರಪಂಚದಿಂದ ಹೊರಬಂದ. ಒಬ್ಬೊಬ್ಬರಾಗಿ ಎಲ್ಲರೂ ಹೋಗತೊಡಗಿದರು.

ಷಾಡೋ ಕೂಡ ಹೊರಟ. ಮೊದಲು ಆಂಜನೇಯ ಗುಡಿಯನ್ನು ನೋಡಬೇಕು. ಎರಡು ದಿನಗಳಲ್ಲಿ ಮುಸ್ಲಿಮರ ಹಬ್ಬ ಬರುತ್ತದೆ. ಅದರೊಂದಿಗೆ ರಕ್ತಪಾತ!

ಹಾಲ್ ಖಾಲಿಯಾಯಿತು. ತಾನೇ ಕೊನೆಯವನು. ಬಾಗಿಲು ದಾಟುತ್ತಿದ್ದಂತೆಯೇ "ಷಾಡೋ" ಎಂದು ಕೇಳಿಸಿತು. ರಂಗದ ಮೇಲೆ ಅಲ್ಲಿಯೇ ಮಹಾದ್ರಷ್ಟ ನಿಂತಿದ್ದಾನೆ. "ಇಲ್ಲಿ ಬಾ" ಎಂದು ಕರೆದ.

ಷಾಡೋಗೆ ತುಂಬಾ ಆಶ್ಚರ್ಯವೆನಿಸಿತು. ಏಕೆ ಎಂಬು ಅರ್ಥವಾಗಲಿಲ್ಲ. ಆದರೂ ಮಾತನಾಡದೆ ಅಲ್ಲಿಗೆ ಹೋದ. ಇಬ್ಬರೂ ಹಿಂದಿದ್ದ ಕತ್ತಲೆಯ ವೆರಾಂಡದಲ್ಲಿ ನಡೆಯುತ್ತಿದ್ದರು. ತುಂಬಾ ದೊಡ್ಡ ಕಟ್ಟಡ, ಅಲ್ಲಿಯ ಅನೇಕ ಸದಸ್ಯರಿಗೆ ಆ ಕಟ್ಟಡದ ಪೂರ್ಣ ದರ್ಶನವಾಗಿರಲಿಲ್ಲ.

"ನಿನ್ನ ತಂಗಿಯ ಮೇಲೆ ನಿನಗೆ ಅಷ್ಟೊಂದು ದ್ವೇಷವೇ?" ಮಹಾದ್ರಷ್ಟ ಕೇಳಿದ.

"ಹೌದು"

ಈ ಉತ್ತರ ಕೇಳುತ್ತಲೇ ಮಹಾದ್ರಷ್ಟನ ತುಟಿಯ ಮೇಲೆ ನಗೆ ಅರಳಿತು "ಸಿದ್ಧಾರ್ಥನನ್ನು ರಕ್ಷಿಸಲೆಂದು-ಅದೇ ವಧಿಸಲೆಂದು ಹಿಮಾಲಯಕ್ಕೆ ಹೋಗುತ್ತೀಯಾ?"

"ಹೋಗಬೇಕೆಂದೇ ಇದ್ದೇನೆ"

ಮಹಾದ್ರಷ್ಟನ ಮುಖದಲ್ಲಿ ಅದೇ ನಗು ಷಾಡೋ ಮನಸ್ಸಲ್ಲಿ ಏನೋ ಮುಜುಗರ. ತಾನೇನಾದರೂ ತಪ್ಪು ಮಾತನಾಡಿದ್ದೇನೆಯೇ ಎಂದು ಯೋಚಿಸಿದ. ಅನುಮಾನ ಅವನಲ್ಲಿ ಮೊದಲ ಬಾರಿಗೆ ತಲೆ ಎತ್ತಿತು. ಇವ್ಯಾವುದರ ಪರಿವೆಯೇ ಇಲ್ಲದಂತೆ ಆ ಕತ್ತಲಲ್ಲಿ ಮಹಾದ್ರಷ್ಟನ ಧ್ವನಿ ಕೇಳಿಸಿತು.

"ಪ್ರೊಫೆಸರ್ ಪುಟ್ಟಣ್ಣ ಅಂತ ಒಬ್ಬರಿದ್ದಾರೆ. ಅವರಿಗೂ ಡಾಕ್ಟರ್ ರಂಗಪ್ರಸಾದ್ ಮೇಲೆ ತುಂಬಾ ದ್ವೇಷವಿದೆಯೋ ಹಾಗೆಯೇ ಅವತಾರ್ ಬಾಬಾಗೂ ನಿನ್ನ ತಂಗಿ ಕೇದಾರಗೌರಿಯ ಮೇಲೆ ತುಂಬಾ ಕೋಪವಿದೆ. ಪುಟ್ಟಣ್ಣ ಬಾಬಾ ಬಳಿ ರಂಗಪ್ರಸಾದನ ನರ್ಸಿಂಗ್ ಹೋಂ ಜನರಿಂದ ನಾಶವಾಗಬೇಕೆಂದು ಬೇಡಿಕೊಂಡಿದ್ದಾನೆ. ಭಕ್ತರ ಕೋರಿಕೆ ತೀರಿಸುವುದೇ ಬಾಬಾ ಕೆಲಸವಲ್ಲವೇ?" ಮಹಾದ್ರಷ್ಟ ವಿಕಟವಾಗಿ ನಕ್ಕ. ಸೈತಾನ್ ಹುಟ್ಟಲು ರಂಗಪ್ರಸಾದ್ ತನ್ನ ಆಸ್ಪತ್ರೆಯಲ್ಲಿ ನೆರವು ನೀಡುತ್ತಿದ್ದಾನೆ. ಅದನ್ನು ಎದುರಿಸುವ ಹೊಣೆಗಾರಿಕೆ ಜನರ ಮೇಲಿದೆ ಎಂದು ಒಂದೇ ಒಂದು ಮಾತನ್ನು ಹೇಳಿದರೂ ಸಾಕು ಜನರೆಲ್ಲಾ ಒಡನೆಯೇ ತಿರುಗಿ ಬೀಳುತ್ತಾರೆ. ಈ ಕೆಲಸವನ್ನು ನಾಳೆ ರಾತ್ರಿ ಬಾಬಾ ಮಾಡಲಿದ್ದಾನೆ. ಜನರು ಪಂಜುಗಳೊಂದಿಗೆ ರಂಗಪ್ರಸಾದ್ ಕ್ಲಿನಿಕ್ಕನ್ನು ಸುತ್ತುವರೆಯುತ್ತಾರೆ. ಆತನ ಮನೆಯನ್ನು ಸುಡುತ್ತಾರೆ. ನಿನ್ನ ತಂಗಿಯನ್ನು ಹಾಗೇ ಬಿಡೋಣವೇ ಅಥವಾ ನಿನಗೆ ಕೊಟ್ಟರೆ ನೀನೇ ಕೊಲ್ಲುತ್ತೀಯೋ?..."

ಷಾಡೋ ಮಾತನಾಡಲಿಲ್ಲ. ಏನೋ ಆಗಿದೆ ಅಥವಾ ಆಗುತ್ತಿದೆ.

"ಅಷ್ಟಾವಕ್ರ ಹುಟ್ಟುವ ತನಕ ನಿನ್ನ ತಂಗಿಯ ಪ್ರಾಣ ಮುಖ್ಯವಾದದ್ದು. ಆದ್ದರಿಂದ ನಾವು ಆ ಸಮಯದಲ್ಲಿ ಅಲ್ಲಿರಬೇಕು. ಆಗ ಎಲ್ಲರೂ ಒಂದಾಗಿಯೇ ಸಾಯಬಹುದು" ಎಂದು ಹೇಳುತ್ತಿದ್ದಂತೆಯೇ ವೆರಂಡಾ ಮುಗಿದು ಹಾಲ್ ಬಂತು.

ಹಾಲ್‌ನಲ್ಲಿ ಬೆಳಕು ತುಂಬಾ ಇತ್ತು. ವಿಶಾಲವಾಗಿತ್ತು. ಅಷ್ಟು ದೊಡ್ಡ

ಹಾಲಿನಲ್ಲಿ ಒಂದೇ ಒಂದು ಕುರ್ಚಿ. ಆ ಕುರ್ಚಿಯಲ್ಲಿದ್ದ ವ್ಯಕ್ತಿಯನ್ನು ನೋಡಿ ಪಾಡೋ ಅಪ್ರಯತ್ನವಾಗಿ ಒಂದಡಿ ಹಿಂದಿರಿಸಿ "ರಂಜಿತಾ" ಎಂದ ಕಂಪಿಸುತ್ತಿರುವ ಕಂಠದಲ್ಲಿ.

ರಂಜಿತಾ ತಲೆ ಎತ್ತಲಿಲ್ಲ. ರಕ್ತವೆಲ್ಲಾ ಸೆಳೆದುಕೊಂಡಿರುವಂತೆ ಮುಖ ಬಿಳಿಚಿಕೊಂಡಿದೆ, ಉಸ್ನೋಕ್ ಸದಸ್ಯರ ಅಂತರಂಗವನ್ನು ಹೊರಕ್ಕೆ ಸೆಳೆಯುವುದರಲ್ಲಿ ಯಶಸ್ವಿಯಾಗುವ ಕ್ಷುದ್ರಗುಣಗಳ ಸ್ವರಗಳೇ ಆಕೆಯ ರಹಸ್ಯಗಳನ್ನೆಲ್ಲಾ ಸೆಳೆದುಕೊಂಡಿರುವಂತೆ ಕಾಣುತ್ತದೆ. ನಿಸ್ಸಹಾಯಕಳಾಗಿ ತನ್ನೊಂದಿಗೆ ತನ್ನ ಪ್ರಿಯನನ್ನು ಅಪಾಯದಲ್ಲಿ ಇರುಕಿಸಿದ್ದಕ್ಕಾಗಿ ದುಃಖಿಸುತ್ತಾ ಅಚೇತನಾವಸ್ಥೆಯಲ್ಲಿದ್ದಂತೆ ಕಾಣುತ್ತಿತ್ತು.

ಪಾಡೋ ಶಿಲಾಪ್ರತಿಮೆಯಂತೆ ನಿಂತಿದ್ದ. ಹಿಂದಿನಿಂದ ಮಹಾದ್ರಷ್ಟನ ಕಂಠ ಗಂಭೀರವಾಗಿ ಕೇಳಿಸಿತು:

"ರಾಕೇಶ್ ಟೇಪ್ ರೆಕಾರ್ಡರ್ ಬಗ್ಗೆ ಹೇಳಿದ. ಉಸ್ನೋಕ್ ರಹಸ್ಯವನ್ನು ಯಾವ ಸದಸ್ಯನೂ ಇದುವರೆಗೂ ಬಹಿರಂಗಗೊಳಿಸಿಲ್ಲ. ಆದರೆ ಮಿತಿಮೀರಿದ ಆವೇಶ ಅವನ ಎಲ್ಲೆಯನ್ನು ಮೀರಿಸಿತ್ತು. ರಂಜಿತ ಈ ವಿಷಯವನ್ನು ಮರೆತಿದ್ದಾಳೆ" ಎಂದು ಅವಳನ್ನು ಕೊಲ್ಲದೆ ಬಿಟ್ಟಿರುವುದಾಗಿ ರಾಕೇಶ್ ಹೇಳಿದಾಗ ನನಗೆ ಅನುಮಾನವಾಯಿತು ಅಷ್ಟು ಸುಲಭವಾಗಿ ಆಕೆ ಹೇಗೆ ಮರೆತಳು ಎಂದು ಯೋಚಿಸಿದೆ.

"ರಂಜಿತಾಳನ್ನು ಇಲ್ಲಿಗೆ ಕರೆತರಲು ನಮ್ಮವರನ್ನು ಕಳುಹಿಸಿದೆ. ಪಾಪ ಹುಡುಗಿ ಗಣಗಳ ಮುಂದೆ ಎರಡೇ ನಿಮಿಷಗಳಲ್ಲಿ ಎಲ್ಲವನ್ನೂ ಹೇಳಿದಳು. ನಂತರವೇ ನಾನು ಸಭೆಗೆ ಬಂದದ್ದು. ಅಲ್ಲಿ ಮುಗ್ಧತೆಯನ್ನು ನಟಿಸುತ್ತಿದ್ದ ನಿನ್ನ ಮಾತುಗಳು ನನಗೆ ನಗೆ ತರಿಸಿದುವು".

ಮಹಾದ್ರಷ್ಟ ನಕ್ಕ. ಪಾಡೋ ತನ್ನನ್ನು ತಾನೇ ಹಳಿದುಕೊಂಡ. ರಂಜಿತಾ ಬಗ್ಗೆ ಯಾರೂ ಕಾಳಜಿ ವಹಿಸುವುದಿಲ್ಲ ಎಂದುಕೊಂಡು ಉಸ್ನೋಕ್ ಬಗ್ಗೆ ತಪ್ಪು ತಿಳಿದದ್ದು ಈ ಗಂಡಾಂತರಕ್ಕೆ ದಾರಿ ತೆರೆಯಿತು ಎಂದು ಮರುಗಿದ.

ಅಷ್ಟರಲ್ಲಿ ಮಹಾದ್ರಷ್ಟ ಬಳಿಗೆ ಬಂದು ಕೈ ಚಾಚಿ "ಡಿಯರ್ ಪಾಡೋ ನಿನ್ನ ಕೈ ಗಡಿಯಾರ ಕೊಡ್ತೀಯಾ?" ಎಂದ. ಇದ್ದಕ್ಕಿದ್ದಂತೆಯೇ ಧ್ವನಿ ಕಠಿಣವಾಗಿ ಬದಲಾಯಿತು. ಆತನ ಕಣ್ಣು ಕ್ರೂರವಾಗಿ ಬೆಂಕಿಯ ಉಂಡೆಯಂತಿತ್ತು. "ಉಸ್ನೋಕನ್ನು ಇದುವರೆವಿಗೂ ಯಾರೂ ಮೋಸ ಮಾಡಿಲ್ಲ. ಮೊದಲಬಾರಿಗೆ ಈ ರೀತಿ ಮೋಸ ಮಾಡಿದವರನ್ನು ಯಾವ ಕಠೋರ ಶಿಕ್ಷೆಗೆ

ಒಳಪಡಿಸಬೇಕೋ, ಆ ಚಿತ್ರಹಿಂಸೆ ಹೇಗಿರಬೇಕೋ ನಾನೇ ಯೋಚಿಸುತ್ತೇನೆ. ಅದುವರೆಗೂ ನೀವು ನಮ್ಮ ಅತಿಥಿಗಳಾಗಿರಿ"

ನಾಚನ್ನು ತೆಗೆದುಕೊಂಡು ಮಹಾದ್ರಷ್ಟ ಹೊರಟು ಹೋದ.

ವಿಶಾಲವಾದ ಆ ಹಾಲ್‌ನಲ್ಲಿ ಉಳಿದವರು ಇಬ್ಬರೇ. ಪಾಡೋ ಆಕೆಯ ಬಳಿಗೆ ಹೋಗಿ "ರಂಜಿತಾ" ಎಂದ.

ಅದುವರೆವಿಗೂ ನಿಶ್ಶಬ್ದವಾಗಿದ್ದವಳು ಇದ್ದಕ್ಕಿದ್ದಂತೆಯೇ ಗೋಳೋ ಎನ್ನುತ್ತಾ "ಇದೆಲ್ಲಾ ನನ್ನಿಂದಲೇ....ನನ್ನಿಂದಲೇ...." ಎಂದು ಅವನ ತೋಳಲ್ಲಿ ತನ್ನ ಮುಖ ಹುದುಕಿಸಿಕೊಂಡು ರೋದಿಸಿದಳು.

"ಇರಲಿ...ಸುಮ್ಮನಿರು ರಂಜಿತಾ" ಎಂದು ಅವಳನ್ನು ಸಂತೈಸಿದ.

ಹಾಲ್‌ನಲ್ಲಿ ಒಂದು ಮೂಲೆಯಲ್ಲಿ ಗೆಲಟಿನ್ ಅವರನ್ನು ಆಹ್ವಾನಿಸುತ್ತಾ ಕುಳಿತಿತ್ತು.

ರೊಚ್ಚಿಗೆದ್ದಿರುವ ಕ್ಷುದ್ರ ಮಾಂತ್ರಿಕರು ನೀಡುವ ನೋವನ್ನು, ಚಿತ್ರ ಹಿಂಸೆಯನ್ನು ಅನುಭವಿಸುವುದಕ್ಕಿಂತಲೂ ಒಂದೇ ಸಾರಿಗೆ ಅದರಲ್ಲಿ ತಲೆಯಿರಿಸಿ ಸಾಯುವುದೇ ವಾಸಿ ಎನಿಸಿತು ಪಾಡೋಗೆ.

ಅದೇ ಸಮಯಕ್ಕೆ ಡಾಕ್ಟರ್ ರಂಗಪ್ರಸಾದ್ ಮನೆಯಲ್ಲಿ ಫೋನ್ ಗಂಟೆ ಬಡಿಯಿತು ರಿಸೀವರನ್ನು ಎತ್ತಿ "ಹಲೋ" ಎಂದ.

ಅತ್ತಕಡೆಯಿಂದ ನಿವೇದಿತಾ ಕಂಠ ತುಂಬಾ ಸಂತೋಷವಾಗಿದ್ದಂತೆ ಕೇಳಿಸಿತು. "ನಮಗೊಂದು ದೊಡ್ಡ ಕ್ಲೂ ದೊರಕಿದೆ ಎನಿಸುತ್ತೆ" ಎಂದಳು.

ರಂಗಪ್ರಸಾದ್ ತುಂಬಾ ಆಸಕ್ತಿಯಿಂದ "ಏನು?" ಎಂದರು.

"ಮತ್ತೆ ಈ ದಿನವೂ ಅಗರ್‌ವಾಲ್ ಬಳಿಗೆ ಹೋಗಿದ್ದೆ. ಈ ಸಾರಿ ಅವನು ತುಂಬಾ ಬೇಸರದಿಂದ ಮಾತನಾಡಿದ. ಅದರಲ್ಲಿ ಅವನ ತಪ್ಪೇನೂ ಇಲ್ಲ. ಮತ್ತೆ ಮತ್ತೆ ಹೋಗ್ತಿದ್ರೆ ಯಾರಿಗೆ ತಾನೇ ಬೇಸರವಾಗೋಲ್ಲ? ನಾನು ಈ ಬಾರಿ ಪ್ರಶ್ನಿಸಿದರೆ ಅವನಲ್ಲಿ ಭಯಕಾಣಿಸಿತು. ಅದೊಂದು ರೀತಿ ಗಿಲ್ಟಿ ಕಾನ್‌ಷಸ್‌ನೆಸ್..."

ಆಕೆ ಕ್ಲೂ ಎನ್ನುತ್ತಲೇ ಏನೋ ಭಾವಿಸಿದ್ದವನು ಈ ಪುರಾಣದಿಂದ ಬೇಸರಗೊಂಡು "ನೀವೇನು ಹೇಳುತ್ತಿದ್ದೀರಿ?..." ಎಂದ ಬೇಸರದಿಂದ.

"ಅದೇ ಹೇಳ್ತಿದ್ದೀನಿ. ಅಷ್ಟು ಆತುರವೇಕೇ?" ಎಂದಳು ಆಕೆ. "ಅಗರ್‌ವಾಲ್‌ನಿಂದ ಬೇರೇನೂ ಗೊತ್ತಾಗುವುದಿಲ್ಲವೆಂದು ಬರುತ್ತಿದ್ದಾಗ ಹೊರಗೆ ಆತನ ಪಿ. ಎ. ಇದ್ದ. ಒಳಕ್ಕೆ ಬಂದಾಗ ಒಂದು ರೀತಿಯ ನೋಟ ಬೀರಿದ್ದ ಅವನಿಗೆ ಒಂದು ನಗೆ ಖರ್ಚು ಮಾಡಿದ್ದಕ್ಕೆ ಒಳಗೆ ಕರೆದುಕೊಂಡು ಹೋಗಿ

ಅಗರ್‌ವಾಲ್ ತಾಯಿಗೆ ಪರಿಚಯ ಮಾಡಿಸಿದ. ಆಕೆ ಏನೂ ತಿಳಿಯದವಳು. ಸೊಸೆ ಸತ್ತಾಗಿನಿಂದ ಬೀಗ ಹಾಕಿರಿಸಿದ್ದ ಕೋಣೆ ತೋರಿಸಿದಳು. ಬೀಗ ತೆಗೆದು ನೋಡಿದೆ. ಒಳಗೆ ಡೈರಿಗಳು ದೊರೆತವು..."

ರಂಗಪ್ರಸಾದ್ ಉತ್ತೇಜಿತನಾಗಿ "ಏನಾದರೂ ದೊರೆಯಿತೇ?" ಎಂದು ಕೇಳಿದರು.

"ಪ್ರತಿಮಾ ತೆಲುಗರವಳು. ತುಂಬಾ ಬಡ ಕುಟುಂಬಕ್ಕೆ ಸೇರಿದವಳು. ಕೇವಲ ಹಣಕ್ಕಾಗಿಯೇ ಅಗರ್‌ವಾಲ್‌ನನ್ನು ಮದುವೆ ಮಾಡಿಕೊಂಡು ಬಾಂಬೇ ಸೇರಿದ್ದು. ಅಗರ್‌ವಾಲ್ ನಪುಂಸಕ"

"ಹೌದೇ?!"

"ಹೌದು, ಡೈರಿಯಲ್ಲಿ ಈ ಬಗ್ಗೆ ಸ್ಪಷ್ಟವಾಗಿ ಬರೆದಿದ್ದಾಳೆ."

ರಂಗಪ್ರಸಾದ್ ರಿಸೀವರನ್ನು ಹಿಡಿದುಕೊಂಡು ಹಾಗೇ ಕುಳಿತಿದ್ದ. ನಂತರ ತನ್ನ ಮೂರ್ಖತೆಗೆ ತಾನೇ ನಗುತ್ತಾ "ಇದೇನಾ ಕ್ಲೂ?" ಎಂದು ಕೇಳಿದ.

"ಹೌದು."

"ಇದರಿಂದ ನಮಗಾಗುವ ಪ್ರಯೋಜನವೇನೂ ಇಲ್ಲ. ಕೃಷ್ಣಾಪುರದಲ್ಲಿ ಹುಟ್ಟಿದ ಏಳು ಮಕ್ಕಳ ತಂದೆಗಳೂ ನಪುಂಸಕರಲ್ಲವಲ್ಲ! ಗಂಡ ನಪುಂಸಕನಾಗಿದ್ದರೆ ಹೆಂಡತಿಗೆ ವಿಕೃತ ಶಿಶು ಜನಿಸುತ್ತದೆ ಎಂದು ಜೆನೆಟಿಕ್ಸ್ ಹೇಳುವುದೂ ಇಲ್ಲ" ಎಂದ ರಂಗಪ್ರಸಾದ್ ನಿರಾಶೆಯಿಂದ.

"ಅಷ್ಟೇನಾ"

"ಹೌದು ಅಷ್ಟೇ. ನಾವಂತೂ ಯಾವ ಪ್ರಗತಿಯೂ ಸಾಧಿಸಿಲ್ಲ."

"ನಾನಿನ್ನೂ ಡೈರಿಗಳನ್ನೆಲ್ಲಾ ಪೂರ್ತಿಯಾಗಿ ಓದಿಲ್ಲ. ಈ ವಿಷಯ ಓದುತ್ತಲೇ ಹೇಳಬೇಕೆನಿಸಿತು, ಸರಿ ಹೋಗಲಿ ಬಿಡಿ. ನೀವು ಹೇಗಿದ್ದೀರಿ?"

"ಸಿಕ್" ರಂಗಪ್ರಸಾದ್ ಹೇಳಿದ.

"ಯಾಕೆ?"

"ಗೌರಿಯ ಪ್ರಸವಕಾಲ ಸಮೀಪಿಸುತ್ತಿದೆ. ಸಿದ್ಧಾರ್ಥ ಮತ್ತು ರವಿ ಎಲ್ಲಿ ಹೋದರೋ, ಏನು ಮಾಡುತ್ತಿದ್ದಾರೋ ಒಂದೂ ಗೊತ್ತಿಲ್ಲ. ಊರಿನವರೆಲ್ಲಾ ಕೋಪದಿಂದಿರುವಂತಿದೆ. ನಾನೇ ದೋಷಿ ಎನ್ನುವಂತೆ ದುರುಗುಟ್ಟಿ ನೋಡುತ್ತಾರೆ. ಇಂಥಾದ್ರಲ್ಲಿ ಸಿಕ್ ಆಗದೆ ಇನ್ನೇನಾಗೋದು ಸಾಧ್ಯ?"

"ಅದಕ್ಕೆ ಒಂದು ರಿಡ್ಲ್ ಕೊಡಲೇ?

"ರಿಡ್ಲ್? ಈಗಿರೋ ಸಮಸ್ಯೆಗಳು ಸಾಲದೆಂದೇ!"

"ಬೇರೆ ಯಾರಿಗೂ ಹೇಳಬಾರ್ದು...ನಮ್ಮಿಬ್ಬರ ಮಧ್ಯೆಯೇ ಇರಬೇಕು.

"ಅಂಥಾದ್ದೇನು ನಿವೇದಿತಾ?"

"Dont feel sick
Take the last letter
Kick the third letter
Keep the second letter
Double the first letter"

"ನನಗೇನೂ ಗೊತ್ತಾಗ್ಲಿಲ್ಲ!"

"ನಿಧಾನವಾಗಿ ಯೋಚಿಸಿ ಅರ್ಥವಾಗುತ್ತೆ, ಯಾರಿಗೂ ಹೇಳಬೇಡಿ ಈ ಸಂಜೆಯೇ ಬರ್ತಿದೀನಿ" ಎನ್ನುತ್ತಾ ಫೋನ್ ಇರಿಸಿದಳು.

ರಂಗಪ್ರಸಾದ್ ಆಕೆ ಹೇಳಿದ್ದನ್ನು ಕಾಗದದ ಮೇಲೆ ಬರೆದು ನೋಡಿದ, ಅರ್ಥವಾಯಿತು!

'ಯುರೇಕಾ' ಎಂದು ಅರಚೋಣ ಎನ್ನಿಸಿತು. ಆ ಕ್ಷಣದಲ್ಲಿ ಅಷ್ಟಾವಕ್ರನ ಬಗ್ಗೆಯಾಗಲಿ, ತನ್ನ ತೊಂದರೆಗಳ ಬಗ್ಗೆಯಾಗಲಿ ಚಿಂತೆಯಿರಲಿಲ್ಲ. ಎಲ್ಲವೂ ಮರೆತಿತ್ತು. ನಿವೇದಿತಾ ಮಾತ್ರವೇ ಮನದಲ್ಲಿ ಮನೆ ಮಾಡಿದ್ದಳು.

## ೩೧

It is very difficult to Love
But very easy to fall in Love

—ವಾಕ್ಯ ಚಿಕ್ಕದು. ಆದರೆ ಯೋಚಿಸಿದಷ್ಟೂ ಅರ್ಥಗಳ ಅಕ್ಷಯಪಾತ್ರೆಯಂತಿರುವ ವಾಕ್ಯ! ಇದರಲ್ಲಿ ಎಂತಹ ಮಹತ್ತರ ಅರ್ಥವಿದೆ....ಈ ವಾಕ್ಯವೇ ನಿಜವಾಗಿದ್ದರೆ ಈ ಪ್ರಪಂಚದಲ್ಲೆಲ್ಲಾ ನೂರಿಗೆ ಒಬ್ಬಿಬ್ಬರೂ ಮಾತ್ರವೇ ನಿಜವಾದ ಪ್ರೇಮವನ್ನು ಆಸ್ವಾದಿಸಿರಬಹುದೇನೋ!

ಎದುರು ಮನೆಯ ಹುಡುಗಿಯ ಆಕರ್ಷಣೆಗೆ ಸಿಕ್ಕ ಹುಡುಗ ಅದೇ ಪ್ರೇಮ ಎಂದುಕೊಳ್ಳುತ್ತಾನೆ. ಒಂದೇ ಕಡೆ ಕೆಲಸ ಮಾಡುತ್ತಾ ಪರಿಚಯವು ವೃದ್ಧಿಗೆ ಬಂದರೆ ಅದೇ ಪ್ರೇಮ ಎಂದುಕೊಳ್ಳುತ್ತಾರೆ. ಹದಿನಾರು ವರ್ಷಗಳಲ್ಲಿ ಪರಿಚಯವಾದ ಮೊದಲ ವಿರುದ್ಧಲಿಂಗಿಯ ಬಗ್ಗೆಯ ಆಕರ್ಷಣೆಯನ್ನೇ ಪ್ರೇಮ ಎಂದು ಭಾವಿಸುತ್ತಾರೆ. ಅನೇಕರು ತಮ್ಮ ವಿನಾ ಜಗತ್ತಿನಲ್ಲಿ ಬೇರ್‍ಯಾರೂ ತಮ್ಮಷ್ಟು ಗಾಢವಾಗಿ ಪ್ರೇಮಿಸಿಲ್ಲ ಎಂಬ ಭ್ರಮೆಯಲ್ಲಿರುತ್ತಾರೆ...

—ಇವರ್ಯಾರೂ ಪ್ರೇಮಿಸಿಲ್ಲ. ಇವರೆಲ್ಲಾ ಪ್ರೇಮದಲ್ಲಿ ಬದ್ಧಿದ್ದಾರೆ ಅಷ್ಟೆ!

ಪ್ರೇಮಿಸಬೇಕೆಂದು, ಪ್ರೇಮಕ್ಕೆ ಅರ್ಥ ತಿಳಿದುಕೊಳ್ಳಬೇಕೆಂದು ಪ್ರತಿಮಾ ಅಗರ್‌ವಾಲ್ ಕಳೆದ ಮುವ್ವತ್ತು ವರ್ಷಗಳಿಂದ ಪ್ರಯತ್ನಿಸಿದ್ದಳು.

ಆರನೆಯ ಕ್ಲಾಸಿಗೆ ಬರುವತನಕ ಆಕೆಯ ನಿಜವಾದ ಹೆಸರು ವಿಜಯ ಲಕ್ಷ್ಮೀ. ಅದು ಚೆನ್ನಾಗಿಲ್ಲವೆಂದು 'ಪ್ರತಿಮಾ' ಎಂದು ಹೆಸರು ಬದಲಿಸಿ ಕೊಂಡಳು. ಎಂದರೆ ಆ ವಯಸ್ಸಿಗೇ ಹೆಸರಿನ ಸಾಧಾರಣತೆ ಅರ್ಥವಾಗಿತ್ತು! ಇದಕ್ಕೆ ಕಾರಣ ಅವಳ ತಂದೆ-ತಾಯಿಗಳು.

ವಿಜಯಲಕ್ಷ್ಮಿ ತಂದೆ ಒಬ್ಬ ಟೈಲರ್. ಒಬ್ಬ ಲಾಯರ್ ಮನೆಯ ಜಗುಲಿಯ ಮೇಲೆ ಕುಳಿತು ಬಟ್ಟೆ ಹೊಲಿಯುತ್ತಿದ್ದ. ಅಲ್ಲಿಯೇ ಹಿಂದಿನ ಸಣ್ಣ ಕೋಣೆಯಲ್ಲಿ ಸಂಸಾರ. ಒಬ್ಬಳೇ ಮಗಳು-ಅದೊಂದೇ ಅದೃಷ್ಟ. ಅವನ ಆದಾಯವೆಲ್ಲಾ ಕುಡಿತಕ್ಕೆ ಸರಿಯಾಗುತ್ತಿತ್ತು. ರಾತ್ರಿ ಹನ್ನೊಂದು ಗಂಟೆಗೆ ಬರುತ್ತಿದ್ದ. ಬರುತ್ತಲೇ ನಿದ್ರಿಸುತ್ತಿದ್ದ ಹೆಂಡತಿಯನ್ನು ಎಚ್ಚರಗೊಳಿಸಿ, ಅರ್ಧಗಂಟೆಯ ನಂತರ ತಾನು ನಿದ್ರಿಸುತ್ತಿದ್ದ. ತಂದೆ-ತಾಯಿಗಳಿಬ್ಬರೂ ನಿದ್ರಿಸಿದ ಬಹುಹೊತ್ತಿನ ತನಕ ಮಗಳು ನಿದ್ರಿಸುತ್ತಿರಲಿಲ್ಲ. ಅರ್ಧಗಂಟೆಯ ಹಿಂದೆ ಆರು ಅಡಿ ದೂರದಿಂದ ಕೇಳಿ ಬಂದ ಸದ್ದು, ಗುಸುಗುಸು ಮಾತು, ನಿಟ್ಟುಸಿರು ಇವೆಲ್ಲಾ ನಂತರದ ಆರು ಗಂಟೆಗಳ ಕಾಲವೂ ಅವಳನ್ನು ಸುತ್ತು ವರಿದು ರಾಕ್ಷಸ ನೃತ್ಯ ಮಾಡುತ್ತಾ ಹಿಂಸಿಸುತ್ತಿತ್ತು. ಅಷ್ಟರಲ್ಲಿ ಬೆಳಗಾಗು ವದು. ಈ ರೀತಿಯಾಗಿ ಎರಡು ಸಾವಿರ ರಾತ್ರಿಗಳು ಕಳೆದವು.

ದುರದೃಷ್ಟವಶಾತ್ ವಿಜಯಲಕ್ಷ್ಮಿ ಬುದ್ಧಿವಂತಳು. ತಂದೆ ಕೊಡು ತ್ತಿದ್ದ ಹಣ ಸಂಸಾರಕ್ಕೆ ಸಾಲದಾಗಿದ್ದರೂ ತಾಯಿ ಮಗಳನ್ನು ಆರನೆಯ ತರಗತಿ ತನಕ ಓದಿಸಿದಳು. ಆಗ್ಗೆ ಆಕೆ ತನ್ನ ವಯಸ್ಸಿಗಿಂತ ಹಿರಿಯಳಾಗಿ ಬೆಳೆದಿದ್ದಳು. ಆರನೆಯ ಕ್ಲಾಸಿನಲ್ಲಿ ಓದುತ್ತಿದ್ದಾಗಲೇ ಒಮ್ಮೆ ತುರ್ತಾಗಿ ಶಾಲೆಯ ಫೀಜು ಕಟ್ಟಬೇಕಾಗಿತ್ತು. ಅದರ ಹಿಂದಿನ ದಿನವೇ ತಂದೆ ಭಟ್ಟಿ ಸಾರಾಯಿ ಕುಡಿದು ಆಸ್ಪತ್ರೆ ಸೇರಿದ್ದ. ಲಾಯರನ್ನು ಕೇಳಲು ಅಮ್ಮನೇ ಸೂಚಿಸಿ ದಳು. ಆ ಮುದುಕ ಮುತ್ತಿಟ್ಟು ಹತ್ತು ರೂಪಾಯಿ ಕೊಟ್ಟ.

ಆಗಲೇ ಅವಳಿಗೆ ಒಂದು ವಿಷಯ ಚೆನ್ನಾಗಿ ಅರ್ಥವಾಯಿತು-ಮುದುಕ ನಾದ ಲಾಯರ್, ತನ್ನ ಶಾಲೆಯ ಮಾಸ್ತರ, ತನ್ನ ತಂದೆ ಎಲ್ಲರೂ ಒಂದೇ!

ಮಾಸ್ತರ (ಅದು ಹೆಣ್ಣುಮಕ್ಕಳ ಶಾಲೆಯಾದ್ದರಿಂದ) ತಾನೇ ಹೀರೋ ಎಂದುಕೊಂಡೇ ಓಡಾಡುತ್ತಾನೆ. ಸೆರಗನ್ನೂ ಹಾಕಿಕೊಳ್ಳಲಾರದೆ ಓಡಾಡುವ

ಹುಡುಗಿಯರು ಅವನನ್ನು ಯುಗಪುರುಷನಂತೆ ನೋಡುತ್ತಾರೆ. ಅವರನ್ನು ಒಳಿಗೆ ಸೆಳೆದುಕೊಂಡು ಅವರ ವ್ಯಸನವರುತ್ತಾ ಪಾಠ ಹೇಳುತ್ತಾನೆ. ರಾಕ್ಷಸ ಹೊರಗೆ ಬೀಳುವುದಿಲ್ಲ. ಇನ್ನು ಮುದುಕ ಲಾಯರ್ ಅವಕಾಶವಾದಾಗಲೆಲ್ಲಾ ತೆರೆಯುಮರೆಯಿಂದ ರಾಕ್ಷಸ ರೂಪದಲ್ಲಿ ಹೊರಬರುತ್ತಾನೆ. ಇನ್ನು ತಂದೆ ಅವಕಾಶವಿರಲಿ ಇಲ್ಲದಿರಲಿ ಸದಾ ರಾಕ್ಷಸನೇ.

ಆ ಎಳೆಯ ಮನಸ್ಸಿನ ಮೇಲೆ ಹೀಗೆ ಮುವ್ವರು ಮುದ್ರೆ ಹಾಕಿದ್ದರು.

ದೈಹಿಕವಾಗಿ ಆಕೆ ಕೆಟ್ಟಿದ್ದು ಹದಿನೇಳನೆಯ ವಯಸ್ಸಿನಲ್ಲಿಯೇ, ಆದರೆ ಅದು 'ಕೆಟ್ಟಿದ್ದು' ಎಂದು ಅವಳು ಎಂದೂ ಅಂದುಕೊಂಡಿದ್ದೇ ಇಲ್ಲ. [ಆಕೆಯ ಸಾಲಿಗೆ ಮೊದಲು ಹುಚ್ಚು ಸ್ವಲ್ಪ. ಸ್ವಲ್ಪವಾಗಿ ಗುಣವಾಗುತ್ತಿದ್ದ ಸಮಯದಲ್ಲೂ ಆಕೆ ಈ ವಿಷಯವಾಗಿ ನೋವು ಅನುಭವಿಸಲಿಲ್ಲ] ಹತ್ತನೆಯ ಕ್ಲಾಸಿನಲ್ಲಿ ಓದುತ್ತಿದ್ದಾಗ ಮತ್ತೆ ಪರೀಕ್ಷೆಗಾಗಿ ಹಣ ಬೇಕಾದಾಗ ಈ ಬಾರಿ ಲಾಯರ್ ಮಗ ಇನ್ನೂ ಸ್ವಲ್ಪ ದೊಡ್ಡದನ್ನು ಕೇಳಿದ. ಕುಡಿದು ಬಂದು ತಾಯಿಯನ್ನು ಹಿಂಸಿಸುವ ತಂದೆಗೂ ಕಾಮಾತುರನಾಗಿ ಪಕ್ಕದಲ್ಲಿ ಮಲಗಿ 'ಐಲವ್‌ಯೂ' ಎಂದು ಕಥೆ ಕಟ್ಟುವ ಲಾಯರ್ ಮಗನಿಗೂ ಯಾವ ವ್ಯತ್ಯಾಸವೂ ಅವಳಿಗೆ ಕಾಣಿಸಲಿಲ್ಲ.

ಆಗಲೇ ಅವಳಿಗೆ ಮತ್ತೊಂದು ವಿಷಯವೂ ಅರ್ಥವಾಯಿತು—ಗಂಡು ತನ್ನ ಮೂರು ನಿಮಿಷಗಳ ವಿಜಯಕ್ಕಾಗಿ ಹೆಣ್ಣನ್ನು ಪ್ರೇಮ ಎಂಬ ಹೆಸರಿನಲ್ಲಿ ಮೂರು ನೂರು ಗಂಟೆಗಳ ಕಾಲವು ಅವಳ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಾನೆ.

ತಮ್ಮ ಬಾಳಿನಲ್ಲಿ ಶಾರೀರಕ ಜಯಕ್ಕೂ, ಹೊರಜಗತ್ತಿನಲ್ಲಿಯ ಜಯಕ್ಕೂ ಅವಿನಾಭಾವ ಸಂಬಂಧವಿದೆಯೆಂಬುದನ್ನು ಅರಿತಿರುವವರು ತೀರಾ ಕಡಿಮೆ. ಅವರು ಈ ಎರಡನ್ನೂ ಬೇರೆ ಬೇರೆಯಾಗಿಯೇ ಕಾಣುತ್ತಾರೆ. ಗಂಡನ ಮುಖದ ಮೇಲಣ ಕಿರುನಗೆ ಅಳಿಯದಂತೆ ಉಳಿಸಬಲ್ಲವಳು ಹೆಣ್ಣೇ. ಮನೆಯಲ್ಲಿ ಪರಿಪೂರ್ಣ ಸುಖದೊರೆತ ಗಂಡು ಕೋಪಿಸುವುದೇ ಇಲ್ಲ; ಬೇಸರಿಸುವದೂ ಇಲ್ಲ.

ಇದು ಹದಿನೆಂಟನೆಯ ವಯಸ್ಸಿನಲ್ಲಿ ಪ್ರತಿಮಾ ತಿಳಿದುಕೊಂಡ ನಗ್ನ ಸತ್ಯ. ಆಗ್ಗೇ ಅವಳು ಡಿಗ್ರಿಗೆ ಬಂದಿದ್ದಳು. ತಾಯಿ-ತಂದೆ ಸತ್ತ ಮೇಲೆ, ಅವಳಿಗೇನು ಸಮಸ್ಯೆಯಾಗಲಿಲ್ಲ. ಹಾಗೆಂದು ಅನಾವಶ್ಯಕವಾಗಿ ನಗುತ್ತಿದ್ದವಳೂ ಅಲ್ಲ. ಹೆಚ್ಚಾಗಿ ಫ್ರೆಂಡ್ಸ್ ಕೂಡ ಇರಲಿಲ್ಲ. ಬಾಳಿನ ಹೋರಾಟದೊಂದಿಗೆ ನೀತಿ-ಧರ್ಮಗಳ ನಿರ್ವಚನವೂ ಬದಲಿಸಬೇಕಾಗುತ್ತದೆ. ಅವಶ್ಯಕತೆ

ಯನ್ನು ಅನುಸರಿಸಿ ಅನುಭವವನ್ನು ಬಯಸಿದಳು. ತನ್ನ ಸ್ಥಿತಿಗೆ ತಾನೆಂದೂ 'ಅಯ್ಯೋ' ಎಂದುಕೊಂಡವಳಲ್ಲ. ಗಂಡನ್ನು ನೋಡಿ 'ಅಯ್ಯೋ!' ಎಂದು ಮರುಗ ತೋರಿದಳು ಅಷ್ಟೆ. ಪುಸ್ತಕ ಕೊಟ್ಟ ಸಂತೃಪ್ತಿ ಯಾವ ಗಂಡೂ ಕೊಡಲಿಲ್ಲ [ಪ್ರತಿಮಾ ಅಗ್ರವಾಲ್ ಡಿಗ್ರಿಯಲ್ಲಿ ರ್‍ಯಾಂಕ್!] ಪುಸ್ತಕಗಳನ್ನು ಓದಬೇಕಾಗಿದ್ದ ವಯಸ್ಸಿನಲ್ಲಿ ಗಂಡಸರನ್ನು ಓದುವ ಅವಸ್ಥೆ ಬಂತಲ್ಲ ಎಂದು ನೋವಾಗುತ್ತಿತ್ತು.

ಭಾರತ ದೇಶದಲ್ಲಿ ಶೇಕಡ ಐವತ್ತು ಮಂದಿ ಗಂಡಸರಿಗೆ ಹೆಣ್ಣನ್ನು ತೃಪ್ತಿ ಪಡಿಸುವುದು ಗೊತ್ತೇ ಇಲ್ಲ ಎಂದು ಒಬ್ಬ ಮನಶ್ಶಾಸ್ತ್ರಜ್ಞ ಹೇಳಿದ್ದಾನೆ. ಆದರೆ ಅವಳ ಅಭಿಪ್ರಾಯದಲ್ಲಿ ಅರ್ಧಭಾಗ ಗಂಡಸರಿಗೆ ಹೆಣ್ಣಿಂದ ಹೇಗೆ ತಮಗೆ ಬೇಕಾದುದನ್ನು ಪಡೆದುಕೊಳ್ಳಬೇಕೆಂಬುದೇ ಗೊತ್ತಿಲ್ಲ. ಇದೆಲ್ಲಾ ಸೆಕ್ಸ್ ಎಜುಕೇಷನ್ ಮತ್ತು ಸೆಕ್ಸ್ ಸೈಕಾಲಜಿಯ ಅವಜ್ಞತೆಯ ಫಲ. ಪುರುಷ ಜಾಣನಾದರೆ ಹೆಣ್ಣನ್ನು ತನಗೆ ಬೇಕಾದ ರೀತಿಯಲ್ಲಿ ಬಳಸಿಕೊಳ್ಳುತ್ತಾನೆ. ಇಲ್ಲದಿದ್ದರೆ ಆ ತಲೆನೋವೇ ಇಲ್ಲ. ಇಬ್ಬರೂ ಕತ್ತಲಲ್ಲೇ ಇರುತ್ತಾರೆ. ತಾಪ ತ್ರಯವೆಲ್ಲಾ ಬರುವುದು ಹೆಣ್ಣಿಗೆ ಆ ಪ್ರಜ್ಞೆ ಇದ್ದು ಗಂಡಿಗೆ ಇಲ್ಲದೆ ಹೋದಾಗ ಮಾತ್ರವೇ!

ಒಂದು ಹೆಣ್ಣಿಗೆ ಸಂಪೂರ್ಣವಾಗಿ ತನ್ನ ಸಂಗಾತಿಗೆ ಬೇಕಾದುದನ್ನು ಅರಿತು ಅದನ್ನು ಮತ್ತಷ್ಟು ಆನಂದಕರವಾದ ರೀತಿಯಲ್ಲಿ ಪೂರೈಸುವ ಮಾರ್ಗ ಗಳನ್ನು ಅನುಸರಿಸುವುದು, ನಾಚಿಕೆಯ ಸಂಕೋಲೆಗೆ ಬಿದ್ದು ಪೂರ್ಣ ಸುಖ ವನ್ನು ಅನುಭವಿಸಲು ಮದುವೆಯ ನಂತರ ಮೂರು ವರ್ಷಗಳು ಬೇಕು ಎಂದು ಹೇಳಿದರೆ, ಆಕೆ ಮಾತ್ರ ತನ್ನ ಬಾಳಿನಲ್ಲಿ ಮೊದಲ ಅನುಭವ ಗಳಿಸಿದ ನಂತರದ ಹದಿನೈದು ದಿನಗಳಿಗೇ ಗಂಡನ್ನು ಪುಸ್ತಕದಂತೆ ಓದಿ ಮುಗಿಸಿದ್ದಳು. ನಂತರ ದಲ್ಲಿ ಅವಳ ಬಾಳನ್ನು ಪ್ರವೇಶಿಸಿದ ಪ್ರತಿಯೊಬ್ಬನನ್ನು ಕರುಣಾದೃಷ್ಟಿಯಿಂದ ನೋಡುತ್ತಿದ್ದಳು. ಮದುವೆಯಾಗಿದ್ದರೂ, ಮಕ್ಕಳನ್ನು ಹೆತ್ತಿದ್ದರೂ ನಿಜ ವಾಗಿಯೂ ಆನಂದವೆಂದರೇನೆಂಬುದೇ ತಿಳಿದಿರದು. ಒಂದು ಹೆಣ್ಣು ತನ್ನ ಜಾಣತನದಿಂದ ಒಂದು ರಾತ್ರಿಯನ್ನು ಕಳೆಯಬಹುದೆಂದೂ, ಮಾತನಾಡ ದೆಯೇ ಆಲ್‌ಜೀಬ್ರಾದಿಂದ ನ್ಯೂಟನ್ನನ ನಾಲ್ಕನೆಯ ಸೂತ್ರದ ತನಕ ಹೋಗ ಬಹುದೆಂದು ಆಕೆ ಅನೇಕರಿಗೆ ಕಲಿಸಿದ್ದಳು. ಮೊದಲಲ್ಲಿ ತೃಪ್ತಿ ಇರುತ್ತಿತ್ತು. ಆದರೆ ಕಾಲ ಕಳೆದಂತೆ ತನ್ನಿಂದ ತಾನು ದೂರವಾಗುತ್ತಿರುವೆನೆಂಬ ಭಾವನೆ ಯುಂಟಾಗುತ್ತಿತ್ತು. ಈ ಏಕಾಕಿತನವೇ ಅವಳನ್ನು ತುಂಬಾ ಕಾಡುತ್ತಿತ್ತು. ಮಡಲಲ್ಲಿ ಮುಖ ಹುದುಗಿಸಿಕೊಂಡು ಅಳುವವರು, ಪ್ರೇಮದ ಹೆಸರಿನಲ್ಲಿ

ತಮ್ಮ ತೊಂದರೆಗಳನ್ನು ಹೇಳಿಕೊಂಡು ಸಾಂತ್ವನವನ್ನು ಆಶಿಸುವವರು.... ಇವರೆಲ್ಲಾ ಗಂಡಸರೇ? ಗಂಡು ಹೇಗಿರಬೇಕು? ಹೃದಯ ಕುಹುರದಲ್ಲಿ ಏನಿದೆ ಎಂಬುದೇ ತೋರದೆ ಕಿರುನಗೆಯ ವಿನಾ ಬೇರಾವ ನೋವು, ದುಃಖ, ತೊಂದರೆ ಗಳನ್ನು ಹೊರಕ್ಕೆ ಬಿಡದೆ, ಹಿಮಾಲಯದಂತೆ, ಸದಾ ಎಚ್ಚರವಾಗಿರುವ ಸಿಂಹದಂತೆ....

ಈ ವಿಷಯದ ಬಗ್ಗೆ ಸಂಶೋಧನೆ ಕೈಗೊಂಡಿದ್ದರೆ ಆಕೆಗೆ ಡಾಕ್ಟರೇಟ್ ಖಂಡಿತ ಬರುತ್ತಿತ್ತು. ಗಂಡು ಬದುಕಿನಲ್ಲಿ ಮಾನಸಿಕವಾಗಿ ಸಂಪೂರ್ಣ ವೃದ್ಧಿಯನ್ನು ಗಳಿಸಲು ಅವನ ಶರೀರದ ಬೇಡಿಕೆಗಳ ಸಂಪೂರ್ಣ ಪೂರೈಕೆಯು ಅತ್ಯಾವಶ್ಯಕ ಎಂಬ ಹೊಸ 'ಥಿಯರಿ'ಯನ್ನು ಆಕೆ ಕಂಡುಕೊಂಡಿದ್ದಳು. ಹಸಿವು, ನಿದ್ದೆ ಅಗತ್ಯವಾದವು, ಆದರೆ ಸ್ವಲ್ಪ ಹೆಚ್ಚು ನಿದ್ದೆ ಮಾಡುವುದರಿಂದ, ಸ್ವಲ್ಪ ಹೆಚ್ಚು ತಿನ್ನುವುದರಿಂದ ಈ ಅವಶ್ಯಕತೆಗಳ ಮೂಲಕವೂ ಅವನು ಆನಂದ ಪಡೆಯುತ್ತಿದ್ದಾನೆ. ಇದೇ ರೀತಿಯಲ್ಲಿ ಯಾರಾದರೂ ಸೆಕ್ಸ್ ಎಂಬುದೂ ಅವಶ್ಯಕವಾದುದು ಎಂದು ಭಾವಿಸಿದ್ದಾದರೆ ಆ ವ್ಯಕ್ತಿ ಪ್ರಪಂಚದ ಎಲ್ಲಾ ಸದ್ಭಾವನೆಗಳು, ಸದ್ವರ್ತನೆಗಳೂ ಕೇವಲ ಕಪಟವೆಂದು ನಂಬಿ ಅಲ್ಲಗಳೆವ ದೂಷಕ ದೃಷ್ಟಿಯ ಸಿನಿಕನಾಗಿರುತ್ತಾನೆ. 'ನಾನು' – 'ನೀನು' ಬೆರೆತು 'ನಾವಾ'ಗುವ ಒಳತೋಟಿಗೆ ಸೆಳೆದೊಯ್ಯುವ ಕೊನೆಯ ಅಂಶ ಕಾಮ. ತನ್ನ ಪಾರ್ಟನರ್‌ಗೆ ಸೇರಿದ ಕರವಸ್ತ್ರ, ಕೈಗಡಿಯಾರ, ಉಂಗುರ ಇವೆಲ್ಲದರಿಂದಲೂ ಪ್ರೇರಣೆ ಹೊಂದುವಂತಿರಬೇಕು. ಹಾಗೆಂದರೆ ಪಾರ್ಟನರ್ ಜೀವನವಾಗಬಾರದು. ಗುರಿ ಸಾಧನೆಗೆ ಅದು ಉತ್ತೇಜಕ ಮಾತ್ರವಾಗ ಬೇಕು. ಆಕೆಯ ಭಾವಗಳು ಹೀಗಿರುತ್ತಿದ್ದವು. ಈ ರೀತಿಯಲ್ಲಿ ಹಾಸಿಗೆ ಯನ್ನು ಪ್ರಯೋಗ ಶಾಲೆಯನ್ನಾಗಿಸುವ ಶಾಸ್ತ್ರಜ್ಞನಿಗಾಗಿ ಆಕೆ ತನ್ನ ಊಹೆಗೆ ಇವು ಎಟುಕಿದಂದಿನಿಂದಲೂ ಕಾಯುತ್ತಿದ್ದಳು. ಆಗಾಗ ಅವಳಿಗೆ ತನ್ನ ಲ್ಲಿಯೇ ಅನುಮಾನ– ತಾನು ನಿಂಫೋಮೇನಾಯಿಕ್ (ಅದಮ್ಯ ಕಾಮಿ) ಯಾಗುತ್ತಿದ್ದೇನೇನೋ ಎಂಬ ಅನುಮಾನವಾಗುತ್ತಿತ್ತು. ಆದರೆ ತಾನು ಹಾಗಾ ಗುತ್ತಿಲ್ಲ. ತನ್ನಲ್ಲಿ ಕೇವಲ ಅನ್ವೇಷಣೆಯ ಸೆಳತವಿದೆಯೇ ಹೊರತು ಅಲ್ಲಿಯೇ ನತವಾಗಬೇಕೆಂದು ದಾಹವಿಲ್ಲ ಎಂಬುದು ಖಚಿತ ಮಾಡಿಕೊಂಡಿದ್ದಳು. ಅವಳ ನಾಚಿಕೆಯೇ ಅಂದ, ಈ ಅಂದದ ತೆರೆಯ ಮುಸುಕು ತೊಲಗಿಸಿ ಶತೃ ಸೈನ್ಯ ದಲ್ಲಿ ನುಗ್ಗಿಸಿ, ವೀರ ಸ್ವೈರ ವಿಹಾರವನ್ನು ನಡೆಸಿ, ಜಯ ಪತಾಕೆ ಹಾರಿಸಿ, ತನ್ನ ಶಿಬಿರಕ್ಕೆ ಹೋಗುವ ಯುವರಾಣಿಯಂತೆ ಹೊರಬಂದು ಮತ್ತೆ ತೆರೆಯ ಹಿಂದೆ ಅಡಗುತ್ತಿದ್ದಳು.

ಸದಾ ನವೀನವಾಗಿರುವ ಅವಳ ಕಳೆ ಕೊನೆಯ ತನಕ ಹಾಗೇ ಉಳಿದಿತ್ತು. ಸಿರಾಸೆಯೇ ಅವಳಲ್ಲಿ ಹೆಚ್ಚು. ಗಂಡಸರೊಂದಿಗೆ ಪ್ರಯೋಗ ನಡೆಸುತ್ತಿರುವೆನೇನೋ ಎಂದು ಆಕೆಗೆ ಆಗಾಗ ಅನುಮಾನ ಬರುತ್ತಿತ್ತು. ಇಷ್ಟೊಂದು ಮಂದಿ ಗಂಡಸರು ಇಂತಹ ಒಳ್ಳೆಯ ವಿಷಯದ ಪ್ರಜ್ಞೆಯೇ ಇಲ್ಲದೆ ತಮ್ಮ ಬಾಳಿನಲ್ಲಿ ಹೆಂಡತಿಯರೊಂದಿಗೆ ಅದೇನು ಸುಖ ಅನುಭವಿಸುತ್ತಿದ್ದಾರೋ ಎಂದು ಅವಳಿಗೇ ಆಶ್ಚರ್ಯವಾಗುತ್ತಿತ್ತು. ಹೆಣ್ಣು ಮನೆಯಲ್ಲಿ ಯಾವಾಗ ಬೇಕಾದರೂ ದೊರೆಯುತ್ತಾಳೆ. ಆದ್ದರಿಂದ ಮಧ್ಯಾಹ್ನ ರೇಸು, ಇಸ್ಪೀಟು, ಸಂಜೆ ಮೀಟಿಂಗ್, ಬಾರು, ಪಾರ್ಟಿಗಳಲ್ಲಿ ಕಳೆಯುವುದರಲ್ಲಿ ಉತ್ಸಾಹ ತೋರುತ್ತಾನೆ ಗಂಡು, ಎಂದು ನಿಶ್ಚಿತ ನಿರ್ಣಯಕ್ಕೆ ಬಂದಳು ಆಕೆ. ಇನ್ನು ಹೆಂಡತಿಯನ್ನು ತನ್ನತ್ತ ಆಕರ್ಷಿಸುವ ಆವಶ್ಯಕತೆ ಗಂಡನಿಗೆಲ್ಲಿಯದು? ಇದಕ್ಕೆ ಎರಡು ಕಾರಣಗಳು– ಒಂದು ವಿವಾಹ ವ್ಯವಸ್ಥೆ, ಎರಡನೆಯದು ಹೆಣ್ಣು ಆನಂದದ ಮುಖಾಂತರ ಗಂಡಸನ್ನು ನಿಯಂತ್ರಿಸುವ ವಿಧಾನವನ್ನು ಅರಿಯದಿರುವುದು.

ಇಂಗ್ಲೀಷು, ಲೆಕ್ಕಗಳು, ಭೂಗೋಳ ಹೀಗೆಯೇ ಮನಶಾಸ್ತ್ರವನ್ನು ಎಳೆಯ ಪ್ರಾಯದಿಂದಲೇ ಶಾಲೆಯಲ್ಲಿ ಕಲಿಸಬೇಕೆಂದು ವಾದಿಸುತ್ತಿದ್ದಳು ಆಕೆ. ಯಾವುದಕ್ಕೂ ಉಪಯೋಗವಿಲ್ಲದ ಜಿಯೋಗ್ರಫಿ, ಹಿಸ್ಟರಿಗಳ ಬದಲಾಗಿ ಸೆಕ್ಸ್, ಸೈಕಾಲಜಿ, ಮನೆಯನ್ನು ಓರಣವಾಗಿರಿಸಿಕೊಳ್ಳುವುದು ಹೇಗೆ, ತನ್ನ ಜೀವನಭಾಗಸ್ವಾಮಿಯನ್ನು ತೃಪ್ತಿಯಾಗಿರಿಸಿಕೊಳ್ಳುವುದು ಹೇಗೆ ಎಂಬ ಸಂಗತಿಗಳನ್ನು, ಕಲರ್ ಕಾಂಬಿನೇಷನ್, ಮಕ್ಕಳನ್ನು ಬೆಳೆಸುವ ಪದ್ಧತಿ ಮುಂತಾದವು ಗೃಹಿಣಿಯರಾಗಲಿರುವ ವಿದ್ಯಾರ್ಥಿನಿಯರಿಗೆ ಕಲಿಸುವುದು ಮುಖ್ಯವಲ್ಲವೇ? ಎಂದು ಕೇಳುತ್ತಿದ್ದಳು. ಒಬ್ಬಿಬ್ಬರೊಂದಿಗೆ ವಾದಿಸಿದರೆ ಅವರು ವಿಚಿತ್ರವಾಗಿ ನೋಡಿದ್ದರು. ಈ ದೌರ್ಭಾಗ್ಯದ ದೇಶದಲ್ಲಿ ಯಾವ ಹೊಸದನ್ನು ಪ್ರತಿಪಾದಿಸಿದರೂ ವಿಚಿತ್ರವೇ. ಸಾಧ್ಯವಾದರೆ ಒಂದು ಕಲ್ಲು ಒಗೆಯುವ ಅಭ್ಯಾಸಕ್ಕೆ ಹೊಂದಿರುವವರಲ್ಲವೇ? ಸೆಕ್ಸ್ ಮುಖ್ಯ, ಪ್ರೇಮ ಅದಕ್ಕಿಂತಲೂ ಮುಖ್ಯವಾದದ್ದು. ಅದಕ್ಕೂ ಪ್ರಧಾನವಾದದ್ದು ವಿವಾಹ, ಆದರೆ ಮೆಟ್ಟಿಲು ಇಳಿಯುತ್ತಾ ಬಂದಂತೆಲ್ಲಾ ಉಳಿಯುವುದು ಅದೇ ಅಲ್ಲವೇ? ಕಲ್ಚರ್ ಷಾಕ್‌ಗಿಂತಲೂ ಹೆಚ್ಚು ಭಯಂಕರವಾದದ್ದು ಪ್ಯುಬರ್ಟಿ ಷಾಕ್. ಇಷ್ಟು ಚಿಕ್ಕ ವಿಷಯವನ್ನು ಯಾರೂ ತಿಳಿದಿಲ್ಲವೇಕೇ? ಒಂದು ಕಾಸೂ ಖರ್ಚಾಗದೆ ಪ್ರೇಮಿಗಳು ಮತ್ತಷ್ಟು ಸುಖವಾಗಿ ಆನಂದಕರವಾಗಿ ಬದುಕುವ ಅವಕಾಶವಿರುವಾಗ ಆ ಮಾರ್ಗವನ್ನು ಹುಡುಕುವುದಿಲ್ಲವೇಕೇ? ಈ ಪ್ರಶ್ನೆ ಆಕೆಯನ್ನು ನಿರಂತರವಾಗಿ ಭೇಧಿಸುತ್ತಿತ್ತು.

ಹೊರ ಜಗತ್ತಿಗೆ ಆಕೆ ಸಾಧಾರಣ ಹುಡುಗಿ. ಕೋಣೆಗೆ ಆಗಾಗ ಹುಡುಗರನ್ನು ಕರೆತರುವ 'ಫಾಸ್ಟ್ ಗರ್ಲ್.' ಆದರೆ ಕುಡುಕನ ಮಗಳು. ಬಾಲ್ಯದಲ್ಲಿಯೇ ತಾಯಿ ತಂದೆಗಳನ್ನು ಕಳೆದುಕೊಂಡವಳು. ಯಾವ ನೆರವು, ಆರ್ಥಿಕ ಸಹಾಯವೂ ಇಲ್ಲದೆಯೇ ಪೋಸ್ಟ್ ಗ್ರಾಜ್ಯುಯೇಷನ್ ತನಕ ಬಂದಿದ್ದಾಳೆ ಎಂದರೆ ಸಾಧಾರಣವಾದುದೇನೂ ಅಲ್ಲ. ಈ ಸಾಧನೆಯ ಹಿಂದೆ ಹಠ, ಜೀವನದಲ್ಲಿ ನಿಶ್ಚಿತವಾದ ಗುರಿ ಅದನ್ನು ಸಾಧಿಸಬೇಕೆಂಬ ಆಕಾಂಕ್ಷೆಗಳಿವೆ ಎಂಬುದನ್ನು ಪ್ರಪಂಚ ಗುರುತಿಸದು. ಅಷ್ಟು ಆಳಕ್ಕೆ ಇಳಿದು ಮನುಷ್ಯನ ಕಷ್ಟವನ್ನು ಶೋಧಿಸುವ ಸೈರಣೆ ಈ ಪ್ರಪಂಚಕ್ಕೆ ಇಲ್ಲ. ಆದ್ದರಿಂದ ಮನಸ್ಸಿಗೆ ತೋಚಿದ ಮುದ್ರೆಯನ್ನು ಆ ವ್ಯಕ್ತಿಯ ಬಗ್ಗೆ ಒತ್ತಿ ಚಲಾವಣೆಗೆ ಬಿಡುವುದೇ ಈ ಪ್ರಪಂಚದ ಕೆಲಸ.

ಅದೇ ರೀತಿಯೇ ಆಕೆಗೂ ಮುದ್ರೆ ಒತ್ತಿದ್ದಾಯಿತು. ಈ ವಿಧವಾದ ಜೀವನ ರೀತಿಯನ್ನು ಪಾಲಿಸಿದವರು (ಎಂದರೆ ವಿದ್ಯಾರ್ಥಿ ದೆಸೆಯಲ್ಲಿ ಪ್ರೇಮದ ಹೆಸರಿನಲ್ಲಿ ಒಬ್ಬರಿಗಿಂತಲೂ ಹೆಚ್ಚು ಗಂಡಸರನ್ನು ಸ್ನೇಹಿತರಾಗಿರಿಸಿಕೊಂಡಿರುವವರು) ವಯಸ್ಸು ಹೆಚ್ಚಿದಂತೆಲ್ಲಾ ತಮ್ಮ ಸ್ಥಿತಿಯ ಬಗ್ಗೆ ತಾವೇ ಒಂದು ವಿಧವಾದ ನಿರಾಸಕ್ತಿಯನ್ನು ಬೆಳೆಸಿಕೊಳ್ಳುತ್ತಾರೆ. ಯೌವನವು ತುಂಬಾ ನೋವಿನಿಂದಲೇ ಇವರಿಂದ ದೂರವಾಗುತ್ತದೆ. ಯೌವನದಲ್ಲಿ ಪ್ರೇಮದ ಲೆಕ್ಕದಲ್ಲಿ ಪರಿಪೂರ್ಣತೆಯನ್ನು ಪಡೆದವರು ಮಾತ್ರವೇ ಉಳಿದ ಬಾಳನ್ನು ಆನಂದದಿಂದ ಕಳೆಯಬಲ್ಲರು. ಈ ಸತ್ಯ ಗೋಚರವಾಗುತ್ತಲೇ ಪ್ರತಿಮಾ ಪ್ರೇಮದ ಬಗ್ಗೆ ಯೋಚಿಸತೊಡಗಿದಳು. ಅದುವರೆವಿಗೂ ಆಕೆ ಶೀಲವನ್ನು ಕಳೆದಿದ್ದರೂ ಸ್ವಚ್ಛತೆಯನ್ನು ಕಳೆದುಕೊಂಡಿರಲಿಲ್ಲ.* ಅದುವರೆವಿಗೂ ಆಕೆ ಅವಶ್ಯಕತೆಗೂ ಆನಂದಕ್ಕೂ ನಡುವೆ ಎಲ್ಲೆಯನ್ನು ಗುರ್ತಿಸಿಕೊಂಡಿದ್ದಳು. ಈಗ ಎರಡನ್ನೂ ಬೆರಸಬೇಕಾದ ಸಮಯ ಹತ್ತಿರವಾಯಿತು ಎಂಬುದನ್ನು ಗ್ರಹಿಸಿದ್ದಳು. ಆದರೆ ಹೇಗೆ ಇದನ್ನು ಸಾಧಿಸುವುದು? ಮೊವಲ್ನೋಟದಲ್ಲಿ ಪ್ರೇಮ ಎಂಬ ತಾರುಣ್ಯದ ಕನಸಿನಿಂದ ದೂರ ಬಂದಿದ್ದಳು. ತನ್ನ ಊಹೆಗೆ ಅನುಗುಣವಾಗಿ ತನ್ನೊಂದಿಗೆ ಸಮಾನ ಸ್ಥಾಯಿಯಲ್ಲಿ ರೊಮಾನ್ಸ್ ನಡೆಸಬಲ್ಲವನು ಸಿಗ್ಮಂಡ್ ಫ್ರಾಯ್ಡ್ ಎಂಬುದು ಆಕೆಯ ನಂಬಿಕೆ.

ಸಾಧ್ಯವಿದ್ದರೆ ಫ್ರಾಯ್ಡ್‌ನಿಂದ ಒಬ್ಬ ಮಗನನ್ನು ಹೆರಬೇಕೆಂಬ ಆಸೆ.

---

* ಶೀಲವನ್ನು ಕಳೆದುಕೊಂಡ ಪ್ರತಿಯೊಬ್ಬರೂ ನಿಶ್ಚಯವಾಗಿ ಸ್ವಚ್ಛತೆಯನ್ನು ಕಳೆದುಕೊಳ್ಳಬೇಕೆಂದು ನಿಯಮವಿಲ್ಲ. ಹಾಗೆಯೇ ಶೀಲವನ್ನು ಕಳೆದುಕೊಳ್ಳದೆ ಸ್ವಚ್ಛತೆಯನ್ನು ಕಳೆದುಕೊಳ್ಳುತ್ತಿರುತ್ತಾರೆ. –ಹ್ಯಾವ್ ಲಾಕ್ ಎಲ್ಲಿಸ್

ಇದು ವಿಚಿತ್ರ ಆಸೆಯೇ" ಆದರೆ ದಿನ ಕಳೆದಂತೆ ಆಕೆಯ ಈ ಆಸೆ ಬಲವಾಗುತ್ತಾ ಹೋಯಿತು. ಫ್ರಾಯ್ಡ್... ಫ್ರಾಯ್ಡ್.... ಆತನ ಪುಸ್ತಕಗಳನ್ನು ಬಹುವಾಗಿ ಓದಲಾರಂಭಿಸಿದಳು. ಅವನನ್ನು ಕುರಿತೇ ಯೋಚಿಸುತ್ತಿದ್ದಳು. ತನ್ನ ಭಾವನೆಗಳಿಗೂ ಫ್ರಾಯ್ಡ್ ಸೂತ್ರಗಳಿಗೂ ಅತಿ ಸಮೀಪದ ಸಂಬಂಧ ಇರುವುದೆಂಬುದನ್ನು ಆಕೆ ಗುರ್ತಿಸಿದ್ದಳು. ಅದಕ್ಕಾಗಿಯೇ ಫ್ರಾಯ್ಡ್‌ನ ಮಗುವನ್ನು ತನ್ನ ಮೂಲಕ ಈ ಪ್ರಪಂಚಕ್ಕೆ ಅರ್ಪಿಸಬೇಕೆಂದು ಆಕೆ ಆಗಾಗ ತನಗೇ ಹೇಳಿಕೊಳ್ಳುತ್ತಿದ್ದಳು.

ಇದೇ ಸಮಯದಲ್ಲಿ ಜಗದೀಶ್‌ಚಂದ್ರನ ಪರಿಚಯವಾಯಿತು. ಅವನ ಪ್ರವೇಶವೇ ಅವಳ ಬಾಳಿನಲ್ಲಿ ಬಿರುಗಾಳಿಯಂತಾಯಿತು. ಯಾವುದೋ ಪಾರ್ಟಿಯಲ್ಲಿ ಆಕೆ ಯಾರೊಂದಿಗೋ ಮಾತನಾಡುತ್ತಾ "ಹೆಣ್ಣಿನ ಮನಸ್ಸನ್ನು ಯಾರೂ ಕಂಡುಕೊಳ್ಳಲು ಸಾಧ್ಯವಿಲ್ಲ. ತುಂಬಾ ಕಷ್ಟ" ಎಂದು ಹೇಳುತ್ತಿದ್ದರೆ, "ಕಷ್ಟವೇಕೆ? ಈಗ ಲೋನೆಕ್ ಬ್ಲೌಸ್ ಹಾಕೋದು ಪ್ರಾರಂಭವಾದ ಮೇಲೆ ಅದು ತೀರಾ ಸುಲಭವಾಗಿದೆ" ಎಂದು ಕೇಳಿಸಿತು.

ಪರಿಚಯವೇ ಇಲ್ಲದ ವ್ಯಕ್ತಿಯೊಬ್ಬ ಈ ರೀತಿ ಮಾತನಾಡಿದ್ದು ಕೇಳಿ ಅವಳಿಗೆ ತುಂಬಾ ಕೋಪ ಬಂತು. ಅದೇ ಅವರ ಮಧ್ಯ ಮೊದಲ ಪರಿಚಯ. ತುಂಬಾ ಬೇಗ ಅವನು ಅವಳ ಗಮನ ಸೆಳೆದ. ಇಬ್ಬರಿಗೂ ನಿರ್ದಿಷ್ಟವಾದ ಗುರಿಗಳಿದ್ದವು. ಅವರು ಸಂಧಿಸುತ್ತಿದ್ದದ್ದು ಸ್ಫೂರ್ತಿಗಾಗಿ ಮಾತ್ರವೇ, ಪ್ರೇಮ ಇಲ್ಲವೆಂದಲ್ಲ. ಆದರೆ ಅದಕ್ಕಿಂತಲೂ ನೈಜ ಪರಿಸ್ಥಿತಿಗೇ ಹೆಚ್ಚು ಸ್ಥಾನ ನೀಡುತ್ತಿದ್ದರು. ಮೇಘ ಸಂದೇಶವಾಗಲಿ, ವಿರಹದ ನಿಟ್ಟುಸಿರಾಗಲಿ ಇಲ್ಲ. ಬಳಲಿ ನಿದ್ರಿಸಿದ್ದರೆ ಹೊದಿಕೆ ಇಲ್ಲದ ಆಕೆಯ ಬೆನ್ನಿನ ಮೇಲೆ ಒರಗಿ, ಮತ್ತೆ ಮರೆಯುವ ಭಯದಿಂದ ನೆನಪಾದಾಗಲೇ ಆ ಕವಿತೆಗಳನ್ನು ಬರೆದು ಇರಿಸುತ್ತಿದ್ದ. ತನ್ನ ಬಗ್ಗೆ ಈ ನಿರ್ಲಕ್ಷ್ಯವೇ ಆಕೆಗೆ ಇಷ್ಟವಾಯಿತು. ಅವನಿಗೆ ಹೆಣ್ಣೇ ಜೀವನವಲ್ಲ. ದೊಡ್ಡದಾದ ಬಾಳಿನಲ್ಲಿ ಹೆಣ್ಣು ಚಿಕ್ಕದಾದ ಒಂದು ಭಾಗ ಮಾತ್ರವೇ. ಅವಳಿಗೂ ಅಷ್ಟೇ! ಎಷ್ಟೋ ಸಾಧಿಸಬೇಕಾಗಿರುವ ಈ ಬಾಳಿನಲ್ಲಿ ಅವನೊಬ್ಬ ಜತೆಗಾರ ಮಾತ್ರವೇ. 'ನೀನೇ ನನ್ನ ಪ್ರಾಣ' ಎಂದು ಸಾರುವ ಅನೇಕ ಪ್ರೇಮಿಗಳಿಗಿಂತಲೂ ಅವರು ತುಂಬಾ ಅನ್ಯೋನ್ಯವಾಗಿ ಬದುಕುತ್ತಿದ್ದರು. ಒಬ್ಬರನ್ನು ಇನ್ನೊಬ್ಬರು ತಾವು ಗೆದ್ದುಕೊಂಡ ಅಪರೂಪವಾದ ವಸ್ತುವೆಂದು ಭಾವಿಸುತ್ತಿದ್ದರು. ಬದುಕಿನ ಬಗ್ಗೆ ಆಕೆಯ ಹಠವನ್ನು ಕಂಡು ಅವನು ಆಶ್ಚರ್ಯಗೊಳ್ಳುತ್ತಿದ್ದ. ಅವನೆಂದರೆ ಸದಾ ಅವಳಿಗೆ ಆಶ್ಚರ್ಯಾರ್ಥಕವೇ. ಯಾವಾಗಲೂ ಯಾವುದಾದರೂ ಒಂದು ಪ್ರಯೋಗ ನಡೆಸುತ್ತಲೇ

ಇರುತ್ತಿದ್ದ– ಕಾವ್ಯದಲ್ಲಿ, ಜಾಮೆಟ್ರಿಯಲ್ಲಿ, ದೇಹದಲ್ಲಿ... ಮಾತೇ ಇಲ್ಲದೆ ಎಷ್ಟು ವಿಧದಲ್ಲಿ ಮಾತನಾಡಿಕೊಳ್ಳಬಹುದೆಂಬುದು ಒಂದು ಪ್ರಯೋಗ. ಕನಿಷ್ಠ ಹತ್ತು ಬಗೆಯನ್ನಾದರೂ ಅವರು ಕಂಡುಕೊಂಡಿದ್ದರು. ಹಾಸಿಗೆಯ ಮೇಲೆ ಪಂದ್ಯ ಕಟ್ಟಿ ಇಬ್ಬರೂ ಲೆಕ್ಕ ಮಾಡುತ್ತಿದ್ದದ್ದು ಉಂಟು. ಸಂಭೋಗದ ಸವಿ ಅಪರೂಪವೆನಿಸಬೇಕಾಗಿದ್ದರೆ ಇಬ್ಬರಿಗೂ ಕನಿಷ್ಠ ಸಾಮಾನ್ಯ ಜ್ಞಾನವಾದರೂ ಇರಲೇಬೇಕು ಎಂಬುದು ಆಕೆಯ ಅಭಿಪ್ರಾಯ ಅದೇ ವಿಧವಾಗಿಅವನೂ ಭಾವಿಸಿದ್ದ. ಆಕೆಯ ಜೀವನದಲ್ಲಿ ಅತ್ಯಂತ ಆನಂದಕರವಾದ ಕಾಲ ಅದು.

ಜಗದೀಶ್‌ಗೆ ಇದ್ದಕಿದ್ದಂತೆಯೇ ಸಿನಿಮಾದಲ್ಲಿ ಅವಕಾಶ ದೊರೆಯಿತು. ಒಂದು ಕ್ರಾಂತಿಯ ಚಿತ್ರಣಕ್ಕಾಗಿ ಯುನಿವರ್ಸಿಟಿ ಆವರಣಕ್ಕೆ ಬಂದ ನಿರ್ದೇಶಕ ಜಗದೀಶ್‌ಚಂದ್ರನಿಗೆ ಸಣ್ಣ ರೋಲ್ ಕೊಟ್ಟ. ನೋಡುತ್ತಿರುವಂತೆ ಜಗದೀಶ್ ಹಂತಹಂತವಾಗಿ ಬೆಳೆದ. ಒಂದು ನಿಮಿಷದ ಬಿಡುವೂ ಇಲ್ಲದಂತೆ 'ಬಿಜಿ'ಯಾದ. ಜಗದೀಶ್‌ಚಂದ್ರನ ನೆನಪುಗಳಿಂದ ಹೊರಬರುವುದಕ್ಕೆಂದೇ ಓದಲು ಪ್ರಾರಂಭಿಸಿದಳು. ಜಗದೀಶ್ ಮತ್ತು ಫ್ರಾಯ್ಡ್ ಒಂದೇ ಬುನಾದಿಯ ಮೇಲೆ ಎದ್ದ ಎರಡು ಕಂಭಗಳಾಗಿ ಆಕೆಗೆ ಕಾಣಿಸುತ್ತಿದ್ದರು. ಹೊರಗಿನವರಿಗೆ ಇದು ನಗುವಾಗಿ ಕಾಣಿಸಬಹುದು. ಫ್ರಾಯ್ಡ್ ವ್ಯಕ್ತಿಗತ ಜೀವನವನ್ನು ಕುರಿತು ಪ್ರೇಮವನ್ನು ಕುರಿತು ಆಕೆಗೇನೂ ಗೊತ್ತಿಲ್ಲ. ಆದರೆ ಚಂದ್ರ ಬರೆಯಲು ಪ್ರಾರಂಭಿಸಿದರೆ ಫ್ರಾಯ್ಡ್‌ನ ಮಟ್ಟದಲ್ಲಿಯೇ ಸ್ತ್ರೀ ಬಗ್ಗೆ, ಸೆಕ್ಸ್ ಬಗ್ಗೆ ಬರೆಯಬಲ್ಲ ಎಂದುಕೊಳ್ಳುತ್ತಿದ್ದಳು. ಸಿನಿಮಾದಲ್ಲೂ ಚಂದ್ರನ ಸ್ಥಾನ ಕಡಿಮೆಯೇನಲ್ಲ. ಅವನ ವಾಲ್‌ಪೋಸ್ಟರ್ ಕೂಡ ಹುಡುಗಿಯರು ಮುತ್ತಿಡುತ್ತಿದ್ದರು ಅಷ್ಟು ಮಂದಿ ಫ್ಯಾನ್ಸ್ ಆತನಿಗೆ. ಸಾಧ್ಯವಿರುವಷ್ಟೂ ಅವನೊಂದಿಗೆ ತನ್ನ ಪರಿಚಯವನ್ನು ಮರೆಯಲು ಪ್ರಯತ್ನಿಸಿದಳು ಪ್ರತಿಮಾ. ಅದಕ್ಕೂ ಮೊದಲೇ ಆಕೆಗೆ ಬೊಂಬಾಯಲ್ಲಿಯ ಒಂದು ಕಂಪನಿಯಲ್ಲಿ ಒಳ್ಳೆಯ ಉದ್ಯೋಗ ದೊರೆಯಿತು. ವರ್ಷಕ್ಕೊಮ್ಮೆಯಾದರೂ ಒಂದುದಿನದ ಮಟ್ಟಿಗೂ ಭೇಟಿ ಸಾಧ್ಯವಿರಲಿಲ್ಲ. ಇಬ್ಬರಿಗೂ, ತನ್ನೊಂದಿಗೆ ಬರಲು ಕೋರಿದ್ದ ಅವನು. ಆದರೆ ಅವಳು ಒಪ್ಪಲಿಲ್ಲ, ಅವನೊಂದು ಮರೆಯದ ಅನುಭವ, ಅಷ್ಟೆ. ಆದರೆ ಬೊಂಬಾಯಿ ಸೇರಿದ ಮೇಲೆ ಒಂಟಿತನ ಅವಳನ್ನು ಬಹುವಾಗಿ ಕಾಡಿತು. ತನ್ನ ಮನಸ್ಸನ್ನೇ ಬದಲಿಸಿಕೊಂಡಳು. ಅವನನ್ನು ಮದುವೆಯಾಗಲು ತೀರ್ಮಾನಿಸಿದಳು ತಾನು ಅಲ್ಲಿಗೇ ಬರುತ್ತಿದ್ದೇನೆ ಎಂಬುದನ್ನು ತಿಳಿಸಲು ಮದರಾಸಿಗೆ ಟ್ರಂಕ್ ಕಾಲ್ ಮಾಡಿದಳು. ಒಂದು ಗಂಟೆಯ ಮೊದಲು ಷೂಟಿಂಗ್ ಸಮಯದಲ್ಲಿ ನಡೆದ ದುರ್ಘಟನೆಯಲ್ಲಿ ಜಗದೀಶ್‌ಚಂದ್ರ ಮರಣಿಸಿದನೆಂದು ಅತ್ತಕಡೆಯಿಂದ ಸುದ್ದಿ ಬಂತು!

ಅವಳ ಬಾಳಿನಲ್ಲಿ ದೊಡ್ಡ ಷಾಕ್ ಅದು!

ಕಳೆದುಹೋದ ವಸ್ತುವಿನ ಮೌಲ್ಯ ತುಂಬಾ ಹೆಚ್ಚಾಗಿರುತ್ತದೆ.ಪ್ರತಿಮಾ ವಿಷಯದಲ್ಲಿ ಇದು ನಿಜವಾಗಿತ್ತು. ಹಲವು ವರ್ಷಗಳಿಂದ ಆತನನ್ನು ಸಂಧಿಸಿರಲಿಲ್ಲ. ಆದರೆ ಮದರಾಸಿನಲ್ಲಿದ್ದಾನೆ ಎಂಬ ಭಾವನೆ ಆಕೆಗೆ ತೃಪ್ತಿಯನ್ನು ನೀಡುತ್ತಿತ್ತು. ಈಗ ಆ ವ್ಯಕ್ತಿ ಈ ಪ್ರಪಂಚದಲ್ಲಿ ಇಲ್ಲ ಎಂಬ ವಿಷಯ ಆಕೆಯ ಪಾಲಿಗೆ ಷಾಕ್ ಆಗಿ ಮತಿ ಸ್ಥಿಮಿತವಿಲ್ಲದಂತೆ ಮಾಡಿತ್ತು. ಅವನ ಪ್ರಭಾವ ಆಕೆಯ ಮೇಲೆ ಅಷ್ಟಾಗಿತ್ತು.

ಮನಸ್ಸಿಗೂ ಶರೀರಕ್ಕೂ ಎಷ್ಟು ಹತ್ತಿರದ ಸಂಬಂಧವಿದೆ ಎಂಬುದನ್ನು ತಿಳಿಹೇಳಲು ಆಕೆಯ ಸ್ಥಿತಿ ಒಂದು ಉದಾಹರಣೆ. ರಾತ್ರಿಯ ಮೊಗ್ಗು ಬೆಳಗಾಗುವ ವೇಳೆಗೆ ಒಂದೊಂದು ದಳವೂ ಬಿಚ್ಚಿಕೊಂಡು ಪೂರ್ಣವಾದ ಹುವ್ವಾದಂತೆ ಹೆಣ್ಣು ಸಂತೃಪ್ತಿಗೊಂಡಂತೆಲ್ಲಾ ಒಂದೊಂದೇ ರೇಖೆಯನ್ನು ಬಿಡಿಸಿಕೊಂಡು ಪರಿಪೂರ್ಣವಾಗುತ್ತಾಳೆ ಎಂದು ಒಬ್ಬ ಮನಶ್ಶಾಸ್ತ್ರಜ್ಞ ನುಡಿದಿದ್ದಾನೆ. ಹೆಣ್ಣು ಎಷ್ಟು ಅರಳುತ್ತಾಳೆ ಎಂಬುದು ಅವಳ ಸಹಚರನ ಮೇಲೆ ಆಧಾರಗೊಂಡಿರುತ್ತದೆ ಅವಳ ಬಾಳಿನಲ್ಲಿ ಮೊದಲು ಪ್ರವೇಶಿಸಿದ ಮುವ್ವರೂ ತೀರಾಸಾಮಾನ್ಯರು; ಯಾವುದನ್ನೂ ಶೋಧಿಸಿ ಅರಿಯುವ ಪ್ರಜ್ಞೆಯೇ ಇಲ್ಲದವರು. ಅವರ ಸ್ನೇಹದಿಂದ ಆಕೆ ತನ್ನಲ್ಲಿ ತಾನೇ ಸೇರಿಸಿಕೊಳ್ಳುವ ಆಮೆಯಂತಾಗುತ್ತಿದ್ದಳು. ಅಂತಹ ಸ್ಥಿತಿಯಲ್ಲಿ ಬಾಳು ಎಂದರೇನೆಂಬುದನ್ನು ಅವನು ತೋರಿಸಿದ್ದ. ಬಯಕೆ ಇದ್ದರೆ ಹೆಣ್ಣನ್ನೂ ಕೂಡ ಒಂದು ಶಾಸ್ತ್ರದಂತೆ ಅಧ್ಯಯನ ಮಾಡುತ್ತಾರೆ ಎಂಬುದನ್ನು ಆಕೆ ಗ್ರಹಿಸಿದ್ದಳು. ಆ ರೀತಿ ಓದಲ್ಪಡುವುದರಲ್ಲಿಯ ಆನಂದದ ಸವಿಯನ್ನೂ ಉಂಡಿದ್ದಳು.ಪೌರುಷ ಮತ್ತು ದೃಢತೆಗಳನ್ನು ಮಾತ್ರವೇ ಅಲ್ಲದೆ ಮೂರನೆಯ ಆಯಾಮವಾದ ಮತ್ತೊಂದು ಸಾಮೀಪ್ಯವನ್ನೂ ಆಸ್ವಾದಿಸಿದಳು.ಆದ್ದರಿಂದಲೇ ಅವನು ಸತ್ತ ನಂತರ ಇಬ್ಬರು ಮುವ್ವರು ಹಣದಿಂದ ಮಿತ್ರರಾದರೂ ಅವರಿಂದ ಸುಖವನ್ನು ಪಡೆಯಲಾರದಾದಳು. ಒಂದು ಮಹಾವೃಕ್ಷವನ್ನು ಗೆದ್ದಲು ಒಳಗೇ ಟೊಳ್ಳು ಮಾಡಿದಂತೆ ಹೊರಕ್ಕೆ ಎಷ್ಟೇ ಭೌತವಾದಿಯಾಗಿದ್ದರೂ ಒಳಗೇ ಆಕೆ ಅವನ ನೆನಪಿನಲ್ಲಿ ಸವೆಯುತ್ತಿದ್ದಳು.

ಅನೇಕರ ದೃಷ್ಟಿಯಲ್ಲಿ ಅವಳು ತುಂಬಾ ವ್ಯವಹಾರಜ್ಞೆ. ಲೆಕ್ಕಾಚಾರದವಳು. ಆದರೆ ಅನೇಕರೊಂದಿಗೆ ಸಂಬಂಧವಿರಿಸಿಕೊಂಡಿದ್ದೂ (ಅದೂ ಕೇವಲ ತನ್ನ ಗುರಿಯಾದ ಓದು ಎಂಬುವನ್ನು ಪಡೆಯಲು) ಕೂಡ ಆಕೆ ಅವನನ್ನು ಬಯಸಿದ್ದಳು. ಅದನ್ನು ಪ್ರೇಮ ಎನ್ನುತ್ತಾರೋ ಇಲ್ಲವೋ ಮತ್ತೇನೆಂದು ಕರೆಯುತ್ತಾರೋ ಗೊತ್ತಿಲ್ಲ. ಆದರೆ ಒಂದು ವಿಷಯ ಮಾತ್ರ ಈ ನಿಜ–

ಪ್ರಪಂಚದಲ್ಲಿ ಬಹುಮಂದಿ ದಂಪತಿಗಳು 'ಮೇಡ್ ಫಾರ್ ಈಚ್ ಅದರ್' ರೀತಿ ಬದುಕಿ, ಅವರಲ್ಲಿ ಒಬ್ಬರು ಸಾಯುತ್ತಲೇ ಒಂದೆರಡು ವರ್ಷಗಳು ಅತ್ತು, ರೋದಿಸಿ ಕ್ರಮಕ್ರಮವಾಗಿ ಸಾಮಾನ್ಯರಂತಾಗುವುದು ಎಲ್ಲಾ ಕಡೆ ರೂಢಿಯಲ್ಲಿರುವ ವಿಷಯ. ಅವರದೇ ಪ್ರೇಮ ಎಂದುಕೊಂಡರೆ ಆಕೆಯದು ಅದಕ್ಕಿಂತಲೂ ಹೆಚ್ಚಿನದೇ! ವಿವಾಹವೇ ಆಗದೆ ಇದ್ದರೂ ಅವನ ಮರಣಕ್ಕಾಗಿ ಮಾನಸಿಕ ಸಂತುಲನವನ್ನೇ ಕಳೆದುಕೊಂಡು ಆಸ್ಪತ್ರೆಯನ್ನು ಸೇರಿದಳು. ಒಂದು ವರ್ಷದ ಉಪಚಾರದ ನಂತರ ಸಾಮಾನ್ಯ ವ್ಯಕ್ತಿಯಾದಳು.

ನಂತರವೇ ಆಕೆಯನ್ನು ಸರೋಜ್‌ಕುಮಾರ್ ಅಗರವಾಲ್ ಮದುವೆ ಮಾಡಿಕೊಂಡಿದ್ದು. ಆತ ಮುಂಬೈಯಲ್ಲಿ ತನ್ನ ತಾಯಿಯ ಹೆಸರಿನಲ್ಲಿ ಒಂದು ಟ್ರಸ್ಟ್ ಏರ್ಪಡಿಸಿ ಮನದ ಸಂತುಲನವನ್ನು ಕಳೆದುಕೊಂಡಿರುವ ರೋಗಿಗಳಿಗಾಗಿ ಒಂದು ಆಸ್ಪತ್ರೆಯನ್ನು ಕಟ್ಟಿಸುವ ಸಲುವಾಗಿ ಬಂದು ಆಸ್ಪತ್ರೆಯನ್ನು ನೋಡುತ್ತಿದ್ದಾಗ ಪ್ರತಿಮಾಳನ್ನು ನೋಡಿದ. ಆಗ್ಗೆ ಅವಳು ಆರೋಗ್ಯವಂತಳಾಗಿದ್ದಳು ಇನ್ನೇನು ಡಿಸ್‌ಚಾರ್ಜ್ ಆಗಬೇಕಾಗಿತ್ತು.

ಪ್ರತಿಮಾಳ ಅದ್ಭುತ ಸೌಂದರ್ಯ ಅದರೊಂದಿಗೆ ಅವಳಲ್ಲಿರುವ ಆಕರ್ಷಣೆ ಅವನನ್ನು ಸೆಳೆಯಿತು.

ಅಗರ್‌ವಾಲನನ್ನು ಮದುವೆಯಾಗಿ ಪ್ರತಿಮಾ ಬೊಂಬಾಯಿ ಸೇರಿದ ಒಂದು ತಿಂಗಳಿಗೆ ಗೊತ್ತಾಯಿತು–ಆತನು ಗಂಡಸಲ್ಲ ಎಂದ. ಆದರೂ ಅವಳಿಗೆ ಅದರಿಂದೇನೋ ದುಃಖವಾಗಲಿಲ್ಲ. (ಈ ವಿಷಯನ್ನು ಸ್ಪಷ್ಟವಾಗಿ ಡೈರಿಯಲ್ಲಿ ಬರೆದಿದ್ದಾಳೆ) ಆದರೆ ಅವಳಿಗೆ ನೋವುಂಟು ಮಾಡುವ ಬೇರೊಂದು ಸತ್ಯ ಗೊತ್ತಾಯಿತು. ಅಗರ್‌ವಾಲ್ ಅವಳನ್ನು ಮದುವೆ ಮಾಡಿಕೊಂಡಿದ್ದು ಸಮಾಜದಲ್ಲಿ ತನ್ನ ಪಕ್ಕದಲ್ಲಿ ಅದ್ಭುತಲಾವಣ್ಯ ರಾಶಿಯಾದ 'ಹೆಂಡತಿ' ಇದ್ದಾಳೆ ಎಂಬುದನ್ನು ತೋರಿಸುವ ಉದ್ದೇಶದಿಂದ ಮಾತ್ರವೇ! ವಿವಾಹಕ್ಕೂ ಮೊದಲೇ ಅವಳ ಬಗ್ಗೆ ವಿಚಾರಿಸಿ ವಿವರಗಳನ್ನು ತಿಳಿದು ಸಂತೋಷಗೊಂಡಿದ್ದ. ತಾನು ಹೇಗಿದ್ದರೂ ಗಂಡಲ್ಲ, ಆದ್ದರಿಂದ ಶೀಲದ ಬಗ್ಗೆ ನಂಬಿಕೆ ಇಲ್ಲದ ಆಕೆಯನ್ನು ಮದುವೆಯಾದರೆ ದೊಡ್ಡ 'ಸರ್ಕಲ್'ಗಳಲ್ಲಿ ತನ್ನ ಕೆಲಸಗಳು ಸುಲಭವಾಗಿ ನೆರವೇರಲು ಆಕೆ ಖಂಡಿತ ನೆರವಾಗುತ್ತಾಳೆ ಎಂದುಕೊಂಡಿದ್ದ. ಈ ರೀತಿ ಒಂದೆರಡು ಮಕ್ಕಳಾದರೂ ಅವು ತನ್ನ 'ವಂಶಾಂಕುರ'ಗಳು ತಾನೇ? ಆದರೆ ಇದಕ್ಕೆ ಆಕೆ ಒಪ್ಪಲಿಲ್ಲ. ಹಿಂದೆ ಎಂದೋ ತನ್ನ ಜೀವನದ ಗುರಿ ಸಾಧಿಸಲು ಹುಡುಗರೊಂದಿಗೆ ಸುತ್ತಿದ್ದಳು. ಆದರೆ ಈಗ ಕೋಟೀಶ್ವರನ ಪತ್ನಿಯಾಗಿ ಈ ಕೆಲಸ ಮಾಡಲು ಒಪ್ಪಲಿಲ್ಲ. ಗಂಡ-ಹೆಂಡತಿಯರಿಗೆ ಈ ವಿಷಯದಲ್ಲಿ ಘರ್ಷಣೆ

ನಡೆಯಿತು.

ಪ್ರತಿಮಾಳ ವ್ಯಕ್ತಿತ್ವ ತುಂಬಾ ದೊಡ್ಡದು. ಶಾರೀರಕವಾಗಿ ಕೆಡುವುದು, ಮಾನಸಿಕವಾಗಿ ನಿರ್ಮಲವಾಗಿರುವುದು ಎಂಬುದಕ್ಕೆ ಅವಳು ಉತ್ತಮ ಉದಾಹರಣೆ. ಹಣದ ಅವಶ್ಯಕತೆ ಮುಗಿದ ನಂತರ ಒಮ್ಮೆಯಾದರೂ ಯಾವ ಗಂಡನ್ನೂ ಅವಳು ಆಹ್ವಾನಿಸಿದವಳಲ್ಲ. ಗಂಡನಿಂದ ತನಗೆ ಅಂಗಸುಖ ದೊರೆಯದೆಂದು ಗೊತ್ತಾದ ಮೇಲೂ ತಾನು ಹಾಗೆಯೇ ಉಳಿಯುತ್ತೇನೆ ಎಂದೇ ತೀರ್ಮಾನಿಸಿದ್ದಳು! ಗಂಡನೇ ಪ್ರೋತ್ಸಾಹಿಸಿದಾಗ ಕಳವಳಕೊಂಡಳು. ಅವಶ್ಯವೆನಿಸಿದರೆ ವಿಚ್ಛೇದನ ಪಡೆದು ಬೇರೆಲ್ಲಿಯಾದರೂ ಕೆಲಸವನ್ನು ಗಳಿಸಿಕೊಳ್ಳುತ್ತೇನೆ ಎಂದೂ ಸಿದ್ಧವಾದಳು! ಅದಕ್ಕೆ ಅಗರ್‌ವಾಲ್ ಒಪ್ಪಲಿಲ್ಲ. ಅವನ 'ಘನತೆ' ಅಡ್ಡಿಯಾಗಿತ್ತು.

ಈ ರೀತಿಯಾಗಿ ಇಬ್ಬರೂ ಸುಮಾರು ಆರು ತಿಂಗಳು ಘರ್ಷಣೆ ನಡೆಸುತ್ತಾ ಇದ್ದರು. ಕೊನೆಗೆ ಅಗರ್‌ವಾಲ್ ಜೆನೆಟಿಕ್ಸ್ ಇನ್ಸ್ಟಿಟ್ಯೂಟನ್ನು ಈ ಬಗ್ಗೆ ವಿಚಾರಿಸಿದ. ಗಂಡಿನೊಂದಿಗೆ ಶಾರೀರಕ ಸಂಬಂಧ ಇಲ್ಲದೆಯೇ ಹೆಣ್ಣು ಗರ್ಭವತಿಯಾಗುವ ವಿಧಾನದ ಬಗ್ಗೆ ತಿಳಿದುಕೊಂಡ. ಅದೇ ಕೃತಕ ಗರ್ಭದಾರಣೆ.

ನಿಜ ಸಂಗತಿ ತಿಳಿಸದೆಯೇ ಅಗರ್‌ವಾಲ್ ಆಕೆಯನ್ನು ಹಾಗೆ ಅಂಧಕಾರದಲ್ಲಿರಿಸಿ ಆಕೆಗೆ ಗರ್ಭದಾನ ಮಾಡಲು ಡಾ|| ವಂಶೀಕೃಷ್ಣ ಒಪ್ಪಲಿಲ್ಲ. ಸಾಧ್ಯವಿರುವಷ್ಟು ಬುದ್ಧಿವಂತನೂ ಬಲಶಾಲಿಯೂ ಆದ ಗಂಡಿನ ವೀರ್ಯವನ್ನು ಕೊಡುವುದಾಗಿ ಮಾತ್ರವೇ ಹೇಳಿದರು. ನಿಜವಾದ ಸಂಗತಿ ಗೊತ್ತಾಗುತ್ತಲೇ ಪ್ರತಿಮಾ ಕೋಪದಿಂದ ಸಿಡಿಮಿಡಿಗೊಂಡಳು. ತನಗೆ ಗೊತ್ತಿಲ್ಲದೆಯೇ ಈ ಎಲ್ಲಾ ಏರ್ಪಾಟು ನಡೆಸಿದ ಗಂಡನ ಜನ್ಮವನ್ನು ಡಾಕ್ಟರ್ ಮುಂದೆಯೇ ಜಾಲಾಡಿದಳು. ಅಪಮಾನದಿಂದ ಸೋತು ಸೋರೇಕಾಯಾದ. ಅಂದೇ ಹೆಂಡತಿಯನ್ನು ಕರೆದುಕೊಂಡು ಬೊಂಬಾಯಿ ಸೇರಿದ.

ನಂತರದ ಆರು ತಿಂಗಳಿಗೆ ಪ್ರತಿಮಾ ಅಗರ್‌ವಾಲ್ ಗರ್ಭವತಿಯಾದಳು...

## ೩೨

ಓದುತ್ತಿದ್ದ ರಂಗಪ್ರಸಾದ್ ಬೆಚ್ಚಿಬಿದ್ದ.

"ಏನಾಯ್ತು?" ನಿವೇದಿತ ಕೇಳಿದಳು. ಪ್ರತಿಮಾ ಅಗರ್‌ವಾಲ್ ಡೈರಿಗ

ಳನ್ನೆಲ್ಲಾ ಓದಿ ಆ ರಿಪೋರ್ಟ್ ಸಿದ್ಧಪಡಿಸಿದ್ದಳು ಆಕೆ. ಇದರಿಂದ ಹೆಚ್ಚು ಉಪಯೋಗವಿಲ್ಲವೆಂದು ಅವಳಿಗೂ ಗೊತ್ತಿತ್ತು. ಕೊನೆಯ ವಾಕ್ಯವೇ ಅವಳ ಕುತೂಹಲವನ್ನು ಕೆರಳಿಸಿತ್ತು. ರಂಗಪ್ರಸಾದ್ ಕೂಡ ಅಲ್ಲೇ ನಿಲ್ಲಿಸಿದ್ದ.

"ಇದು ಹೇಗಾಯಿತು?" ರಂಗಪ್ರಸಾದ್ ಕೇಳಿದ.

"ನನಗೂ ಅದೇ ಅನುಮಾನವಿದೆ."

"ಈ ಬಗ್ಗೆ ಪ್ರತಿಮಾ ಏನೂ ಬರೆದಿಲ್ಲವೇನು?"

ಮದುವೆಯ ನಂತರ ಡೈರಿಯನ್ನು ಮೊದಲಿನಂತೆ ನಿಖರವಾಗಿ ಬರೆದಿಲ್ಲ. ಅಲ್ಲಲ್ಲಿ ಬರೆದಿದ್ದಾಳೆ. ಬೊಂಬಾಯಿಯಿಂದ ಬರುತ್ತಲೇ ನಮ್ಮ ಇನ್ಸ್‌ಟಿಟ್ಯೂಟ್‌ಗೆ ಹೋದೆ. ನಮ್ಮ ರಿಜಿಸ್ಟರ್‌ನಲ್ಲಿ ಮೂರು ವರ್ಷಗಳ ಹಿಂದೆ ಅಗರ್ವಾಲ್ ದಂಪತಿಗಳು ಬಂದಂತೆ ಉಲ್ಲೇಖವಿದೆ. ಆದರೆ ಬಂದವರಿಗೆಲ್ಲಾ ಕೃತಕ ಗರ್ಭಧಾರಣೆಯ ಬಗ್ಗೆ ಮೊದಲು ಸಂಪೂರ್ಣವಾಗಿ ವಿವರಿಸಿ ಈ ಇಬ್ಬರಲ್ಲಿ ಯಾರಿಗೊಬ್ಬರಿಗೆ ಇಷ್ಟವಿಲ್ಲದಿದ್ದರೂ ಅದನ್ನು ಪ್ರಯೋಗಿಸಕೂಡದೆಂದು ನಮ್ಮ ನಿಯಮ. ಆದ್ದರಿಂದ ಆ ಪ್ರಯೋಗ ಇಲ್ಲದೆಯೇ ಅವರು ವಾಪಸುಹೋದರು."

"ನಂತರದಲ್ಲಿ ಪ್ರತಿಮಾ ಗರ್ಭವತಿಯಾದಳು."

"ಹೌದು."

"ಎಂದರೆ ಅಗರ್‌ವಾಲ್ ನಂತರದಲ್ಲಿ ಅವಳನ್ನು ಇದಕ್ಕೆ ಒಪ್ಪಿಸಿರಬೇಕು."

"ಇಲ್ಲ."

"ಇಲ್ಲವೆಂದರೆ ಯಾರಿಂದಲಾದರೂ ಬಲವಂತದಿಂದ ರೇಪ್ ಮಾಡಿಸಿರಬೇಕು...."

"ಅದೂ ನಡೆಯುವಂತಿಲ್ಲ. ಏಕೆಂದರೆ ಗರ್ಭಧಾರಣೆಯ ನಂತರ ಪ್ರತಿಮಾ ತುಂಬಾ ಸಂತೋಷದಿಂದ ಇದ್ದಳು. ತನ್ನ ಡೈರಿಯಲ್ಲಿ 'ಈ ದಿನ ಡಾಕ್ಟರ್ ಪರೀಕ್ಷಿಸಿ ನಾನು ಗರ್ಭವತಿ ಎಂದು ಹೇಳಿದ್ದಾರೆ. ತುಂಬಾ ಸಂತೋಷವಾಗಿದೆ. ಈ ರೀತಿಯಾದರೂ ನನ್ನ ಕತ್ತಲ ಬದುಕಿನಲ್ಲಿ ಒಂದು ಬೆಳಕು ಕಾಣಿಸಿಕೊಂಡಿದೆ' ಎಂದು ಬರೆದಿರುವಳು. ಆ ಒಂಬತ್ತು ತಿಂಗಳೂ ತುಂಬಾ ಉತ್ಸಾಹದಿಂದ ಇರುತ್ತಿದ್ದಳು. ವಿಕೃತ ಶಿಶು ಹುಟ್ಟುತ್ತಲೇ ಮತಿಗೆಟ್ಟಿತು. ಆದ್ದರಿಂದ ಅವಳ ಮನಸ್ಸಿಗೆ ವಿರುದ್ಧವಾಗಿ ಏನೂ ನಡೆಯಲಿಲ್ಲವೆಂದೇ ತೋರುತ್ತದೆ."

"ಇದೆಲ್ಲಾ ತುಂಬಾ ಆಶ್ಚರ್ಯಕರವಾಗಿದೆ."

"ಹೌದು."

"ಇದರ ಬಗ್ಗೆ ಅಗರವಾಲ್ ಏನು ಹೇಳುತ್ತಾನೆ?"

"ಏನೂ ಇಲ್ಲ. ಈ ಡೈರಿಗಳನ್ನು ನಾನು ಸಂಪಾದಿಸಿರುವುದೇ ಅವನಿಗೆ ಗೊತ್ತಿಲ್ಲ. ಅವನನ್ನು ಮತ್ತೊಮ್ಮೆ ಕಂಡರೆ ಗುಂಡು ಹಾರಿಸಿ ನನ್ನನ್ನು ಕೊಂದೇ ಬಿಡುತ್ತಾನೆ. ತಾನು ಗಂಡಸಲ್ಲ ಎಂಬುದನ್ನು ಬಹಿರಂಗಪಡಿಸಲು ಯಾರು ಬಯಸುತ್ತಾರೆ?"

ರಂಗಪ್ರಸಾದ್ ಯೋಚಿಸುತ್ತಾ ಸ್ವಲ್ಪ ಕಾಲದ ನಂತರ ಕೇಳಿದರು. "ಪ್ರತಿಮಾ ಎರಡನೆಯ ಬಾರಿ ಮತಿಭ್ರಮಣೆಗೆ ಯಾವಾಗ ತುತ್ತಾದಳು?"

"ಹೆರಿಗೆಯ ನಂತರ."

"ಏಕೆ..." ಎಂದು ಕೇಳಿ ತಾನೇ ಯೋಚಿಸುತ್ತಿದ್ದ. "ಆಸ್ಪತ್ರೆಯಲ್ಲಿ ಆಕೆಯಿಂದೇನಾದರೂ ವಿಷಯ ತಿಳಿಯಿತೇ?"

"ಮೊದಲಲ್ಲಿ ಆಕೆ ಏನೂ ಮಾತನಾಡುತ್ತಿರಲಿಲ್ಲ. ಆದರೆ ಮತಿಭ್ರಮಣೆಯಿಂದ ಬಿಡುಗಡೆ ಹೊಂದುತ್ತಿದ್ದ ಹೊಸದರಲ್ಲಿ ಮಾತ್ರ ಆಗಾಗ 'ಎಸ್ಸೆಸ್ಸೆ' ಎನ್ನುತ್ತಿದ್ದಳಂತೆ. ಆಗಲೇ ಬೇಟೆ ನಾಯಿಗಳು ಆಕೆಯ ಮೇಲೆ ಬಿದ್ದು ಕೊಂದಿದ್ದು" ಎಂದು ನಿವೇದಿತಾ ಹೇಳಿದಳು.

ರಂಗಪ್ರಸಾದ್ ಕುತೂಹಲದಿಂದ "ಎಸ್ಸೆಸ್ಸೇನೇ?" ಎಂದು ಕೇಳಿದ.

"ಹೌದು ಅದೇ ರೀತಿಯದು...." ಎಂದಳು ನಿವೇದಿತ. ರಂಗಪ್ರಸಾದ್ ಮತ್ತೆ ಯೋಚನೆಯಲ್ಲಿ ಬಿದ್ದ. ಸ್ವಲ್ಪಕಾಲ ಮೌನ. ಆ ಮೌನವನ್ನು ನಿವೇದಿತಾಳೇ ಮುರಿದಳು; "ಪ್ರತಿಮಾ ಮರಣಕ್ಕೆ ಅಗರ್‌ವಾಲ್ ಕಾರಣ ಎಂದರೂ ಆಕೆ ಸಾಯುವಾಗ ಅಗರ್‌ವಾಲ್ ವಿದೇಶದಲ್ಲಿದ್ದ!"

"ಅದಕ್ಕೇನು ಅಗರ್‌ವಾಲರಂಥಾವರಿಗೆ ಕೊಲೆ ತುಂಬಾ ಸುಲಭದ ಕೆಲಸ. ಅವರು ಹತ್ತಿರದಲ್ಲಿ ಇರಬೇಕಾಗೇ ಇಲ್ಲ."

"ಆ ಅನುಮಾನ ನನಗೂ ಇದೆ. ಆದರೆ ಕೃಷ್ಣಾಪುರದಲ್ಲಿಯ ವಿಕೃತ ಶಿಶುಗಳಿಗೂ, ಪ್ರತಿಮಾ ಮರಣಕ್ಕೂ ಯಾವ ಸಂಬಂಧವಿದೆಯೋ ನನಗೆ ಗೊತ್ತಿಲ್ಲ. ಪ್ರತಿಮಾಳನ್ನು ನಾಯಿಗಳು ಕೊಂದಿದ್ದು ಕೊಲೆ ಎಂದುಕೊಂಡರೆ, ಯಾವುದೋ ರಹಸ್ಯವನ್ನು ಬಚ್ಚಿಡಲು ಅಗರ್‌ವಾಲ್ ಅವಳನ್ನು ಕೊಲೆ ಮಾಡಿದ ಎಂದು ಅನುಮಾನಿಸಿದರೆ, ಇದುವರೆವಿಗೂ ಕೃಷ್ಣಾಪುರದಲ್ಲಿ ಹುಟ್ಟಿದ ಏಳು ವಿಕೃತ ಶಿಶುಗಳ ತಾಯಿಯರಾಗಲಿ, ತಂದೆಗಳಾಗಲಿ ಆ ರಹಸ್ಯವನ್ನು ಹೇಳಬೇಕಾಗಿತ್ತಲ್ಲ. ಅವರಲ್ಲಿ ಯಾರಾದರೂ ಒಬ್ಬರಾದರೂ ರಹಸ್ಯ ಬಯಲು ಮಾಡಬೇಕಾಗಿತ್ತು...."

"ನಾನು ಇಷ್ಟೆಲ್ಲಾ ಯೋಚಿಸಲಿಲ್ಲ. ಮೆಂಟಲ್ ಆಸ್ಪತ್ರೆಯಲ್ಲಿ ಪ್ರತಿಮಾ ಹೇಳಿದ ಮಾತಿಗೂ ಅಗರ್‌ವಾಲನಿಗೂ ಏನಾದರೂ ಸಂಬಂಧವಿದೆಯೇನೊ

ಎಂದುಕೊಂಡು ಅನುಮಾನ ಬಂತು. ಎದುರಿನಲ್ಲಿ ಈ ವಿಷಯ ಕೇಳಲು ಭಯ ವಾಯಿತು. ಅದಕ್ಕಾಗಿ ಫೋನ್ ಮಾಡಿ ಎಸ್ಸೆಸ್ಸೆ ಬಗ್ಗೆ ನಿಮಗೇನು ಗೊತ್ತು ಎಂದು ಕೇಳಿದೆ."

"ಏನು ಹೇಳಿದ?" ಎಂದ ಉತ್ಸುಕತೆಯಿಂದ ಕೇಳಿದ ರಂಗಪ್ರಸಾದ್.

"ತುಂಬಾ ಹುಚ್ಚುತನ ಅನ್ನಿಸಿದರೂ ಈ ಪ್ರಶ್ನೆ ಕೇಳಬೇಕೆನಿಸಿತು. ಪ್ರಶ್ನೆಗೆ ಉತ್ತರ ಕೊಡದೆ 'ನೀವ್ಯಾರು?' ಎಂದು ಕೇಳಿದ. ಆದ್ದರಿಂದ ಇದರಲ್ಲಿ ಏನೋ ರಹಸ್ಯ ಇರಲೇಬೇಕು" ಎಂದಳು ನಿವೇದಿತಾ.

"ವಿಕೃತ ಶಿಶುಗಳ ರಹಸ್ಯವನ್ನು ತಿಳಿಯುವುದು ಬಿಟ್ಟು ನಾವು ಯಾವುದೋ ಕೊಲೆಯ ರಹಸ್ಯವನ್ನು ಬಿಡಿಸುತ್ತಿರುವಂತಿದೆ...." ಎಂದ ರಂಗ ಪ್ರಸಾದ್.

"ಎಸ್ಸೆಸ್ಸೇ ಅನ್ನೋದು ಇಂಗ್ಲಿಷ್ ಪದವೋ ಅಲ್ಲವೋ ಅದು ಗೊತ್ತಿಲ್ಲ. ESS ಆಗಿರಬಹುದು, ESSESS ಆಗಿರಬಹುದು. ಹುಚ್ಚಿಯ ಬಾಯಿಂದ ಬಂದ ಮಾತಾದ್ದರಿಂದ ಅದು USSO ಆಗಿದ್ದರೂ ಆಗಿರಬಹುದು..." ಎಂದು ನಿವೇದಿತಾ ತನ್ನಲ್ಲಿ ತಾನೇ ಯೋಚಿಸುತ್ತಿರುವಂತೆ ಮಾತನಾಡುತ್ತಿದ್ದಳು.

"ಇದೆಲ್ಲಾ ಯಾಕೆ ಅಗರ್‌ವಾಲಾಗೆ ಇನ್ನೊಮ್ಮೆ ಫೋನ್ ಮಾಡೋಣವೇ?" ಎಂದ ರಂಗಪ್ರಸಾದ್.

"ಟ್ರಂಕ್‌ಕಾಲೇ?"

"ಅಲ್ಲ ಎಸ್‌ಟಿಡಿ. ನಿಮ್ಮಲ್ಲಿ ಫೋನಿದೆಯಲ್ಲವೇ?"

"ಮನೆಯಲ್ಲೂ ಇದೆ."

"ಹೋಗೋಣವೇನು?"

ಐದು ನಿಮಿಷದಲ್ಲಿ ಇಬ್ಬರೂ ಮನೆ ಸೇರಿದರು. ಡ್ರಾಯಿಂಗ್ ರೂಂನಲ್ಲಿ ಫೋನ್ ಬಳಿ ಕುಳಿತಿದ್ದರೆ ಅರೆ ತೆರೆದಿದ್ದ ಬೆಡ್‌ರೂಂ ಕಾಣಿಸುತ್ತಿತ್ತು. "ನಾನು ಸಿಕ್" ಎಂದ ರಂಗಪ್ರಸಾದ್ ನಗು ತೋರಗೊಡದೆ.

ತೋರು ಬೆರಳಿಂದ ಫೋನ್ ತೋರಿಸುತ್ತಾ "ಮೊದಲು ಕೆಲಸ!..." ಎಂದಳು ಅಷ್ಟೇ ಗಂಭೀರವಾಗಿ.

ಅಗರ್‌ವಾಲ್ ಫೋನ್ ನಂಬರ್ ತಿರುಗಿಸಿದರು ಹದಿನೈದು ನಿಮಿಷಗಳ ನಂತರ ಬಾಂಬೇ ಲೈನ್ ದೊರೆಯಿತು.

"ಹಲೋ ಅಗರ್‌ವಾಲ್."

"ಸ್ಪೀಕಿಂಗ್."

"ಎಸ್ಸೆಸ್ಸೇ."

"ಏನು?" ಅತ್ತ ಕಡೆಯಿಂದ ಕೇಳಿದ ಮಾತು.

ಮುಂದೇನು ಹೇಳಲು ಗೊತ್ತಾಗದೆ ಮತ್ತೆ ಎಸ್ಸೆಸ್ಸೆ ಎಂದ. ಲೈನ್ ತುಂಬಾ ದುರ್ಬಲನಾಗಿತ್ತು. ಮಾತು ತೀರಾ ದುರ್ಬಲವಾಗಿ ಕೇಳಿಸುತ್ತಿತ್ತು. ಆದ್ದರಿಂದ ಅವರಿಗೆ ಉಪಕಾರವೇ ಆಯಿತು.

"ಮೊನ್ನೆ ಫೋನ್ ಮಾಡಿದ್ದು ನೀವೇನೇ?" ಅಗರ್‌ವಾಲ್ ಕೇಳಿದ.

ಅವನು ಕೇಳುತ್ತಿರುವುದು ನಿವೇದಿತಾ ಫೋನ್ ಬಗ್ಗೆ ಎಂಬುದು ಅರ್ಥ ಮಾಡಿಕೊಂಡು "ಹೌದು ನಮ್ಮವರೇ" ಎಂದ ರಂಗಪ್ರಸಾದ್.

"ಹೇಳಿ ಏನಾಗಬೇಕಾಗಿತ್ತು?" ಎಂದು ಕೇಳಿದಾಗಲೇ ಅವನ ಧ್ವನಿಯಲ್ಲಿ ಬೇಸರವಿತ್ತು. ಭಯವಿಲ್ಲದೆ ಇರುವುದನ್ನು ರಂಗಪ್ರಸಾದ್ ಗುರುತಿಸಿದ್ದ. ಏನು ಕೇಳಬೇಕೆಂಬುದು ಹೊಳೆಯಲಿಲ್ಲ. "ನಿಮ್ಮೊಡನೆ ಮಾತನಾಡಬೇಕಾಗಿತ್ತು" ಎಂದ.

"ಮಿಸ್ಟರ್, ನೀವ್ಯಾರೋ ನನಗೆ ಗೊತ್ತಿಲ್ಲ, ಎಂದೋ ಎರಡು ವರ್ಷಗಳ ಹಿಂದಿನ ಕಾಂಟ್ರ್ಯಾಕ್ಟ್, ಬೇರೆ ಯಾರಾದರೂ ಆಗಿದ್ದರೆ ನೀವು ಮಾಡಿದ ಮೋಸಕ್ಕೆ ಕಟಕಟೆ ಹತ್ತಿಸುತ್ತಿದ್ದರು. ಗೌರವ ಮರ್ಯಾದೆಗಳನ್ನು ಗಮನಿಸಿ ನಾನು ಸುಮ್ಮನಿದ್ದೇನೆ. ನಿಮಗೇನಾದರೂ ಸತ್ಯ ನೀತಿಗಳ ಬಗ್ಗೆ ಸ್ವಲ್ಪವಾದರೂ ಗೌರವವಿದ್ದರೆ ನನ್ನ ಎರಡು ಲಕ್ಷ ಹಿಂತಿರುಗಿಸಿ..."

"ಎರಡು ಲಕ್ಷವೇ?..."

"ಹೌದು. ನನ್ನ ಹೆಂಡತಿಗೆ ಜಗದೀಶ್‌ಚಂದ್ರನ ಮೇಲೆ ಮನಸ್ಸಿತ್ತು ಎಂಬುದನ್ನು ನೀವಿಷ್ಟು ಜಾಣತನದಿಂದ ಬಳಸಿಕೊಂಡು ಹಣ ಮಾಡಿದಿರಿ ಎಂಬುದು ನನಗೆ ಆಶ್ಚರ್ಯಕರವಾಗಿದೆ. ನೀವಿಂತಹ ಮೋಸಗಾರರು ಎಂದುಕೊಂಡಿರಲಿಲ್ಲ. ನನಗೆ ಈಗ ಅನುಮಾನವಾಗುತ್ತಿದೆ!"

"ಏನು ಅಂಥಾ ಅನುಮಾನ?"

"ತನ್ನ ಸ್ಪರ್ಮ್ ಕೊಟ್ಟಿದ್ದೇನೆ ಎಂದು ಜಗದೀಶ್‌ಚಂದ್ರ ಕೊಟ್ಟಿದ್ದ ಬಾಂಡ್ ನಿಜವಾದದ್ದೋ ಅಲ್ಲವೋ ಎಂಬುದೇ. ಅದನ್ನೂ ನೀವೇ ಫೋರ್ಜರಿ ಮಾಡಿದೀರೇನೋ!" ಅತ್ತ ಕಡೆ ಕೋಪದಿಂದ ಫೋನ್ ಕಟ್ ಮಾಡಿದಂತೆ ಸದ್ದಾಯಿತು.

ರಂಗಪ್ರಸಾದ್ ನಿಶ್ಚೇಷ್ಟಿತನಾದ. ಪಕ್ಕದಲ್ಲಿದ್ದ ನಿವೇದಿತಾಳನ್ನು ನೋಡಿ "ನಿನಗೆ ಪರಿಚಿತರಾದ ನಂಬಿಕೆಗೆ ಅರ್ಹರಾದ ಮಿತ್ರರು ಬೊಂಬಾಯಿಯಲ್ಲಿ ಯಾರಾದರೂ ಇರುವರೇ?" ಎಂದು ಕೇಳಿದ.

"ಏಕೆ?" ಎಂದಳು ಅರ್ಥವಾಗದವಳಂತೆ ನಿವೇದಿತಾ,

"ಹೇಳುತ್ತೇನೆ. ನನಗೆ ಸ್ವಲ್ಪ ಸಹಾಯವಾಗಬೇಕಾಗಿದೆ. ಬೇಗ ಯೋಚಿಸು" ಎಂದ ರಂಗಪ್ರಸಾದ್.

## ೩೩

ನೆಲದ ಮೇಲೆ ಹತ್ತಿ ಹಾಸಿದಂತೆ ಸುತ್ತಲೂ ಮಂಜು. ಪರ್ವತಗಳೆಲ್ಲಾ ಹತ್ತಿಯ ಹೊದಿಕೆ ಹೊತ್ತಂತೆ ಕಾಣಿಸುತ್ತಿದ್ದುವು. ಕಣ್ಣು ಹರಿದತ್ತೆಲ್ಲಾ ಬಿಳಿಯ ವಿನಾ ಬೇರೆ ಬಣ್ಣವೇ ಇಲ್ಲ. ಮಧ್ಯದಲ್ಲಿದ್ದ ರಸ್ತೆ ಮಾತ್ರ ತಾನಿದ್ದೇನೆ ಎನ್ನುವಂತೆ ಅಲ್ಲಲ್ಲಿ ಕಪ್ಪು ಮಚ್ಚೆಗಳಾಗಿ ಕಾಣಿಸುತ್ತಿದೆ.

ಬಸ್ಸು ನಿಂತಿತು.ಅವರು ಮೂವರೂ ಇಳಿದರು. ಅದು ಬಸ್‌ಸಿಲ್ಲುವ ತಾಣವೇ ಅಲ್ಲ. ಬದರೀನಾಥ್‌ಗೆ ಹೋಗುವ ಬಸ್, ಅವರ ಬೇಡಿಕೆಯಂತೆ ಬಸ್ ಅಲ್ಲಿ ನಿಲ್ಲಿಸಿದರು. ಬಸ್ ಹಿಂತಿರುಗುವ ಸಮಯಕ್ಕೆ ಮತ್ತೆ ಅಲ್ಲಿಯೇ ಬಸ್ಸಿಗಾಗಿ ಕಾಯುತ್ತಿರುತ್ತೇವೆ ಎಂದು ಬೇಡಿ, ಡ್ರೈವರ್‌ಗೆ ಸ್ವಲ್ಪ ಹಣದ ಆಸೆ ತೋರಿಸಿದ ನಂತರವೇ ಅವನು ಬಸ್ ನಿಲ್ಲಿಸಲು ಒಪ್ಪಿಕೊಂಡಿದ್ದು. ಅಲ್ಲಿಂದ ಬದರೀ ನಾಥ್‌ಗೆ ಹನ್ನೆರಡು ಗಂಟೆಯ ಪ್ರಯಾಣ. ಹೋಗಿಬರಲು ಮೂರು ದಿನ ಗಳಾಗುತ್ತವೆ. ಅಷ್ಟರಲ್ಲಿ ಶಿವಾನಂದಾಶ್ರಮಕ್ಕೆ ಹೋಗಿ ಬರಬೇಕೆಂಬುದು ಅವರ ಗುರಿ. ಹಾಗೆ ಹೋಗಿ ಏನು ಮಾಡಬೇಕೆಂಬುದು ತಿಳಿದುಕೊಂಡು ಬಸ್ ಹಿಡಿದರೆ ಕೃಷ್ಣಾಪುರ ಸೇರುವ ವೇಳೆಗೆ ಕೇದಾರಗೌರಿ ಪ್ರಸವ ನಡೆಯು ತ್ತಿರುತ್ತದೆ. ಪ್ರಸವ ಕಾಲ ಸಮೀಪಿಸುತ್ತಿದೆ. ಆತ ಅಷ್ಟಾವಕ್ರನನ್ನು ಕೊಲ್ಲು ವುದನ್ನು ಉಪದೇಶಿಸುತ್ತಾನೋ, ಅಷ್ಟಾವಕ್ರನು ಹುಟ್ಟುವ ಮಾರ್ಗವನ್ನೇ ಇಲ್ಲವಾಗಿಸುತ್ತಾನೋ ಆತನನ್ನೇ ಕೇಳಬೇಕು.

ಸದ್ದು ಮಾಡುತ್ತಾ ಬಸ್ ಹೊರಟುಹೋಯಿತು. ಎತ್ತಲೂ ದಾರಿಯೇ ಇಲ್ಲದೆ ಮಂಜು ತುಂಬಿಕೊಂಡಿದ್ದ ಬೆಟ್ಟಗಳ ಮಧ್ಯೆ ಇಳಿದ ಆ ಮೂವರೂ ಉಳಿದೆಲ್ಲ ಪ್ರಯಾಣಿಕರಿಗೂ ತುಂಬಾ ವಿಚಿತ್ರವಾಗಿ ಕಾಣಿಸಿದರು. ಅವರನ್ನೇ ದಿಟ್ಟಿಸಿ ನೋಡುತ್ತಿದ್ದಂತೆಯೇ ಬಸ್ ಬೆಟ್ಟದ ರಸ್ತೆಯಲ್ಲಿ ಒಂದು ತಿರುವಿನಲ್ಲಿ ಮರೆಯಾಯಿತು. ಸಿದ್ಧಾರ್ಥ ಆಳವಾದ ಉಸಿರನ್ನೆಳೆದುಕೊಂಡ. ಪರ್ವತಗಳ ಬಗ್ಗೆ ಸ್ವಲ್ಪ ಮಾಹಿತಿ ಗೊತ್ತಿತ್ತು. ಮೌಂಟನೀರಿಂಗ್ ಬಗ್ಗೆ ತಿಳಿದುಕೊಂಡಿದ್ದ. ರಾಕೇಶ್‌ಗೆ ಏನೂ ಗೊತ್ತಿಲ್ಲ.

ಬದರೀನಾಥ್‌ವರೆವಿಗೂ ಬಸ್ಸಿನಲ್ಲಿ ಪ್ರಯಾಣಮಾಡಿ ಅಲ್ಲಿಂದ ಕಾಲ್ನಡಿಗೆ

ಯಲ್ಲಿ ಮತ್ತೆ ಪರ್ವತದ ಹಿಂಬಾಗಕ್ಕೆ ಬಂದರೆ ಸುಲಭವಾಗಿ ಸಾಧ್ಯವಾಗುತ್ತಿತ್ತು. ಆದರೆ ಹಾಗೆ ಹೋದರೆ ಬಸ್ಸಿನಲ್ಲಿ ಎರಡು ದಿನ ಮತ್ತು ಕಾಲ್ನಡಿಗೆಯಲ್ಲಿ ಎರಡು ದಿನಗಳ ಪ್ರಯಾಣ. ಹೀಗಾಗಿ ನಾಲ್ಕು ದಿನಗಳು ಬೇಕಾಗುತ್ತಿತ್ತು. ಎಷ್ಟು ಬೇಗ ಸಾಧ್ಯವಾದರೆ ಅಷ್ಟು ಬೇಗ ಹಿಂತಿರುಗಬೇಕೆಂಬ ಆತುರದಲ್ಲಿದ್ದ ಸಿದ್ಧಾರ್ಥ; ರಾಕೇಶ್ ಕೂಡ ಅದನ್ನೇ ಸಮರ್ಥಿಸಿದ. ಆದ್ದರಿಂದ ಷೆರ್ಪಾ ಇಲ್ಲಿ ಇಳಿಯುವ ಯೋಜನೆಯನ್ನು ಸಿದ್ಧಪಡಿಸಿದ್ದು.

ಸಿದ್ಧಾರ್ಥ ಯಾವುದಕ್ಕೂ ಹಿಂದಡಿ ಇಡಲಿಲ್ಲ. ತಾನು ಪರ್ವತಾರೋಹಣ ಮಾಡಬಲ್ಲನೇ ಎಂಬುದನ್ನೂ ಅವನು ಯೋಚಿಸಲಿಲ್ಲ. ಅಲ್ಲಿ ಮಗುವಾಗುವುದಕ್ಕೂ ಮೊದಲೇ ಇಲ್ಲಿ ಶಿವಾನಂದರನ್ನು ಕಂಡು ಅವರಿಂದ ಉಪದೇಶ ಪಡೆಯಬೇಕು ಎಂಬುದೊಂದೇ ಗುರಿ ಇದೆ. ಅದು ಅವನ ಕಣ್ಣಲ್ಲಿ, ತುಟಿಯಲ್ಲಿ, ಹಿಡಿದ ಕೈಯಲ್ಲಿ ಕಾಣಿಸುತ್ತಿದೆ.

ರಾಕೇಶ್‌ನ ಯೋಚನೆಯೇ ಬೇರೆ–ಸಾಧ್ಯವಿರುವಷ್ಟು ಬೇಗ ಸಿದ್ಧಾರ್ಥನನ್ನು ಕರೆದೊಯ್ಯಬೇಕು. ಅದು ಸಾಧ್ಯವಾಗದಿದ್ದರೆ ಅವನನ್ನು ಅಲ್ಲಿಯೇ ಕೊಲ್ಲಬೇಕು!

ಪೂರ್ವದಿಂದ ಬರುತ್ತಿದ್ದ ಕುಳಿರ್ಗಾಳಿ ಮೂಳೆಗಳನ್ನು ಕರಕರನೆ ಕೊರೆಯುವಂತಿತ್ತು ಉಣ್ಣೆಯ ಉಡುಗೆಗಳು ಅದನ್ನು ತಡೆಯಲು ಸೋಲುತ್ತಿದ್ದವು. ಒಮ್ಮೆ ಎದುರಾಗಿದ್ದ ಉನ್ನತ ಶಿಖರವನ್ನು ತಲೆಎತ್ತಿ ನೋಡಿ ನಂತರ ಮೂವರೂ ನಡೆಯಲು ಪ್ರಾರಂಭಿಸಿದರು. ಮೊದಲು ಷೆರ್ಪಾ ಹಿಮದಲ್ಲಿ ಏಕ್ಸ್ ಚುಚ್ಚಿ ನಂತರ ಹೆಜ್ಜೆ ಇಡುತ್ತಿದ್ದಾನೆ. ಅಡಿ ಬೂಟಿನ ತನಕ ಮಂಜಿನಲ್ಲಿ ಒಳಕ್ಕೆ ಹೋಗುತ್ತಿತ್ತು. ಹೆಜ್ಜೆಯನ್ನು ಕಿತ್ತು ಮತ್ತೆ ಮುಂದಿಡಲು ಒಂದು ನಿಮಿಷವಾದರೂ ಬೇಕು.

ಬೆಟ್ಟಗಳ ಮೇಲೆ ಬೀಳುತ್ತಿದ್ದ ಬಿಳಿಯ ಪ್ರಭೆಯನ್ನು ತೋರಿ "ನಾವು ಹೋಗಬೇಕಾದದ್ದು ಆ ಕಡೆಗೆ ಅಲ್ಲವೇ?" ಎಂದು ಕೇಳಿದ ಸಿದ್ಧಾರ್ಥ. ಷೆರ್ಪಾ ನಗುತ್ತಾ "ಮಂಜಿನಲ್ಲಿ ಪೂರ್ವ ಬೆಳಕು ಬೀಳುವ ದಿಕ್ಕಿಗೆ ವಿರುದ್ಧವಾಗಿರುತ್ತದೆ" ಎಂದ. ಸಿದ್ಧಾರ್ಥನಿಗೆ ನೆನಪಾಯಿತು ನಿಜವೇ, ಸೂರ್ಯ ಮಂಜಿನ ಪರ್ವತಗಳಲ್ಲಿ ಪಶ್ಚಿಮ ಪರ್ವತಗಳು ಹಿಂದಿನಿಂದ ಬರುತ್ತಿರುವಂತೆ ಕಂಡುಬಂದು ಯಾತ್ರಿಕರನ್ನು ವಿಭ್ರಮಗೊಳಿಸಿದ್ದ.

ಸುಮಾರು ಮೂರು ಗಂಟೆಗಳ ಕಾಲ ನಡೆದ ನಂತರ ಅವರು ಸಣ್ಣ ಶಿಖರದ ಹಿಂಭಾಗ ಸೇರಿದರು. ನಾಗರಿಕ ಪ್ರಪಂಚದಿಂದ ತುಂಬಾ ದೂರ

ಬಂದ ಭಾವವುಂಟಾಯಿತು. ಅಲ್ಲಿ ಕಿರುಚಿದರೂ ಗಮನಿಸುವವರು ಯಾರೂ ಇಲ್ಲ. ಸತ್ತರೂ ಶವವನ್ನು ಸುಡುವವವರೂ ಇಲ್ಲ. ಮಂಜಿನ ರಾಶಿ ಇರುವುದರಿಂದ ಶವ ಕೆಡುವ ಮಾತೇ ಇಲ್ಲ. ಈ ಯೋಚನೆ ಬರುತ್ತಲೇ ರಾಕೇಶನ ಮೈ ನಡುಗಿತು.

ಷೆರ್ಪಾ ಅಲ್ಲಿ ನಿಲ್ಲುತ್ತಾ ಮತ್ತೊಂದು "ಮೂರು ಗಂಟೆ ಅಷ್ಟೆ!" ಎಂದ. ಸಿದ್ಧಾರ್ಥ ಸಂತೋಷವಾಗಿದ್ದ. ತಾನು ಭಾವಿಸಿದ್ದಕ್ಕಿಂತಲೂ ಮೊದಲೇ ಪ್ರಯಾಣ ಮುಗಿಯುತ್ತದೆ.

ಪೂರ್ವದಿಂದ ಬರುತ್ತಿದ್ದ ಗಾಳಿ ಹೆಚ್ಚಿತು. ಅದರ ತಾಡನದಿಂದ ಮಂಜು ಹಾರುತ್ತಿದ್ದುದರಿಂದ ಎಲ್ಲವೂ ಶ್ವೇತವರ್ಣವಾಯಿತು. ಒಂದು ಅಡಿ ದೂರದಲ್ಲಿರುವ ವಸ್ತುವೂ ಕಾಣಿಸದಾಯಿತು. ಕಿವಿಯನ್ನು ಆ ಘೋರ್ಗರೆತ ಆವರಿಸಿತು. ಪರ್ವತಗಳ ಮಧ್ಯೆ ಬಿರುಗಾಳಿಯೊಂದಿಗೆ ಮಂಜನ್ನು ವೇಗವಾಗಿ ಉರುಳಿಸಿಕೊಂಡು ಕಲ್ಲುಮಣ್ಣುಗಳನ್ನು ಕೊಚ್ಚಿ ತರುವ ಪ್ರವಾಹವನ್ನು ಹಿಮಘನ ಪ್ರಪಾತ (ಅವಲಾನ್ಷ್) ಎನ್ನುತ್ತಾರೆ. ಅದೃಷ್ಟವಶಾತ್ ಅದು ಭಾರಿಯದಾಗಿರಲಿಲ್ಲ. ಎರಡು ನಿಮಿಷಗಳಲ್ಲಿ ಅದರ ಹುಚ್ಚಾಟ ಇಳಿಯಿತು. ಎಷ್ಟು ಬೇಗ ಬಂದಿತೋ ಅಷ್ಟೇ ಬೇಗ ಅದು ದೂರವಾಯಿತು. ಆದರೆ ಆ ಎರಡು ನಿಮಿಷಗಳಲ್ಲಿಯೇ ಅಲ್ಲಿಯ ಪರಿಸ್ಥಿತಿ ಅತ್ಯಂತ ಘೋರವಾಗಿ ಬದಲಾಯಿತು. ಹಿಮಗಾಳಿ ಪ್ರಪಾತದ ಸಮಯದಲ್ಲಿ ಸ್ವಲ್ಪ ಅಜಾಗರೂಕನಾಗಿದ್ದರೂ ಅಪಾಯ ತಪ್ಪಿದ್ದಲ್ಲ. ಮೊದಲು ಅಪಾಯ ಕಣ್ಣಿಗೆ. ಈ ವಿಷಯ ರಾಕೇಶ್‌ಗೆ ಗೊತ್ತಿಲ್ಲ. ಈ ಗಾಳಿಗೆ ಓರೆಯಾಗಿ ನಿಲ್ಲಬೇಕು. ತಾನು ಕುರುಡಾದೆ ಎಂದೇ ಭಾವಿಸಿದ. ಬೆನ್ನುಮೂಳೆಯಿಂದ ಭಯದ ಸರ್ಪ ಮೈಯೆಲ್ಲಾ ಆವರಿಸಿತು. ಸೂಜಿಗಳಿಂದ ಕಣ್ಣು ಚುಚ್ಚಿದ ಅನುಭವ. ಸಣ್ಣ ಮರಳಕಣಗಳು ಕಣ್ಣುಗುಡ್ಡೆಯನ್ನು ತೂರಿಕೊಂಡು ಹೋಗುತ್ತಿರುವಂತೆ ಅನಿಸಿಕೆ. ತಡೆಯಲು ಅಸಾಧ್ಯವಾದ ನೋವು. ಎರಡೂ ಕೈಗಳಿಂದ ಕಣ್ಣುಗಳನ್ನು ಉಜ್ಜಲು ಹೋದ. ಹಾಗೇನಾದರೂ ಉಜ್ಜಿದ್ದರೆ ಶಾಶ್ವತವಾಗಿ ಅಂಧನಾಗುತ್ತಿದ್ದ. ಅಷ್ಟರಲ್ಲಿ ಸಿದ್ಧಾರ್ಥ "ನಿಲ್ಲು" ಎಂದು ಕಿರುಚಿದ.

ಪರ್ವತಾರೋಹಿಗಳಿಗೆ ಹೇಳುವ ಮೊದಲ ಪಾಠ. ಚಳಿಯಿಂದ ಸ್ಪರ್ಶಜ್ಞಾನವನ್ನು ಕಳೆದುಕೊಂಡು ಕಣ್ಣು ಗುಡ್ಡೆಯ ಮೇಲೆ ಬಲವಾಗಿ ಒತ್ತಿದರೆ ಮರಳಕಣಗಳು ಗುಡ್ಡೆಯನ್ನು ಕತ್ತರಿಸಿದರೂ ರಕ್ತ ಹೊರಬರುವ ತನಕ ಆ ವಿಷಯ ಗೊತ್ತಾಗುವುದೇ ಇಲ್ಲ. ಚಳಿಗೆ ರಕ್ತವೂ ಬೇಗ ಹೊರಬರದು ಕೂಡ. ಒಟ್ಟಿನಲ್ಲಿ ಕಣ್ಣು ಪೂರ್ಣವಾಗಿ ಹೋಗುವುದು ನಿಶ್ಚಿತ. ಅದಕ್ಕೆ ಸಿದ್ಧಾರ್ಥ

"ನಿಲ್ಲು" ಎಂದು ಕಿರುಚಿದ್ದು. ರಾಕೇಶ್ ಹಾಗೇಕೆ ಕಿರುಚಿದನೆಂಬುದು ತಿಳಿಯು ಲಾರದೆ ಬೆಪ್ಪಾದ. ತನ್ನ ಕಣ್ರೆಪ್ಪೆಯ ಮೇಲೆ ಯಾವುದೋ ಪುಡಿಯನ್ನು ಸವರಿದ.

"ಅದೇನು?" ರಾಕೇಶ್ ಕೇಳಿದ.

"ಬೂದಿ" ಸಿದ್ಧಾರ್ಥ ಹೇಳಿದ. "ಎಸ್ಕಿಮೋ ಜನರು ಹಿಮಗಾಳಿ ಪ್ರಪಾತದಲ್ಲಿ ಇದನ್ನು ಬಳಿದುಕೊಂಡಿರುತ್ತಾರಂತೆ. ಹಾಗೆಂದು ಎಲ್ಲಿಯೋ ಓದಿದ್ದೆ. ಈ ಬೂದಿ ಕಣ್ಣನ್ನು ಮಂಜಿನಿಂದ ದೂರವಿರಿಸುತ್ತದೆ."

"ನಿಮಗೆ ತುಂಬಾ ಗೊತ್ತಿದೆಯಲ್ಲಾ" ಎಂದ ನಗುತ್ತಾ ಷೆರ್ಪಾ. ಅವನ ನಗುವಿನಲ್ಲಿ ಕೃತ್ರಿಮತೆಯನ್ನು ಸಿದ್ಧಾರ್ಥ ಗುರ್ತಿಸಿದ.

"ಇನ್ನೂ ಎಷ್ಟು ದೂರ?"

"ಇನ್ನೊಂದು ಎರಡು ಗಂಟೆ ಅಷ್ಟೆ!"

"ತುಂಬಾ ಹತ್ತಿರವೇ ಇದೆ ಎಂದು ಹೇಳಿದ್ದೆ."

"ಮಂಜಿನಲ್ಲಿ ಎಷ್ಟೋ ದೂರ ಪ್ರಯಾಣ ನಡೆಸಿದಂತೆ ಅನಿಸುತ್ತದೆ. ಆದರೆ ಮಾತ್ರ ನಾವು ಭಾವಿಸಿದಷ್ಟು ನಡೆದಿರುವುದಿಲ್ಲ.

ಅಷ್ಟರಲ್ಲಿ ರಾಕೇಶ್ ದೃಷ್ಟಿ ಸ್ವಲ್ಪ ಸರಿಯಾಯಿತು. "ಸ್ವಲ್ಪ ಟೀ ಕುಡಿಯೋಣವೇ?" ಎಂದು ಕೇಳಿದ.

ಷೆರ್ಪಾ ಏಕ್ಸ್‌ನಿಂದ ಹಳ್ಳ ತೋಡಿ ಅದರಲ್ಲಿ ಬೆಂಕಿಯ ಉರಿ ಮಾಡಿದ. ಆ ಚಳಿಯಲ್ಲಿ ನೀರು ಬಿಸಿಯಾಗಲು ಅರ್ಧಗಂಟೆ ಬೇಕಾಯಿತು. ಹಳ್ಳದಲ್ಲಿ ಬೆಂಕಿ ಮಾಡಿದರೆ ಹೊರಗಾಳಿ ಅದನ್ನು ಆರಿಸುವ ಭಯವಿಲ್ಲ ಎಂಬುದನ್ನು ಸಿದ್ಧಾರ್ಥ ಗುರ್ತಿಸಿದ. ಅವನ ಮನದಲ್ಲಿ ಎಲ್ಲೋ ಯಾವುದೋ ಅಪಶೃತಿ ಕೇಳಿಸುತ್ತಿದೆ. ಷೆರ್ಪಾ ವರ್ತನೆಯಲ್ಲಿ ಏನೋ ಅನುಮಾನ. ಅವನು ಮೊದಲು ಹೇಳಿದ್ದಂತೆ ಆಗಿದ್ದರೆ ಇಲ್ಲಿಯ ದೃಶ್ಯವೇ ಬೇರಾಗಿರಬೇಕಾಗಿತ್ತು. ಬಸ್ಸು ನಿಂತ ಸ್ಥಳದಿಂದ ಕಾಲುಹಾದಿಯಲ್ಲಿ ನಡೆದರೆ ಬೆಟ್ಟದ ಹಿಂಭಾಗಕ್ಕೆ ಬರುತ್ತೇವೆ. ಅಲ್ಲಿಯೇ ಶಿವಾನಂದಾಶ್ರಮ ಇದೆ. ಅಲ್ಲಿ ಜನಸಂಚಾರ ಇರುತ್ತದೆ. ಅದು ಅವನು ತೋರಿದ್ದ ದೃಶ್ಯ.

ಆದರೆ ಅಂತಹುದೇನೂ ಇಲ್ಲಿಲ್ಲ. ಎತ್ತ ನೋಡಿದರೂ ಮಂಜು. ಮಂಜು. ಅಷ್ಟೆ.

ಅಷ್ಟರಲ್ಲಿ ದೂರದಲ್ಲಾಗಿ ಒಂದು ಪರ್ವತ ಶಿಖರ ಚಲಿಸಿದಂತೆ ಕಾಣಿಸಿತು. ನೋಡುತ್ತಿದ್ದಂತೆ ಘನ ಹಿಮದ ಚಕ್ಕೆಯೊಂದು ಮುರಿದು ಕೆಳಗುರುಳಿತು— ಒಂದು ಹಳ್ಳಿಯನ್ನು ಸಂಪೂರ್ಣವಾಗಿ ಆವರಿಸಿ ಸಮಾಧಿ ಮಾಡಬಲ್ಲಷ್ಟು,

ವಿಶಾಲವಾದ ಚಿಕ್ಕೆ ಅದು. ಸೂರ್ಯಕಿರಣ ತೀಕ್ಷ್ಣವಾದಾಗ ಗರ್ಭದ ಯಾವುದೋ ಪೊರೆ ಕರಗಿ ಮೇಲ್ಭಾಗವೆಲ್ಲಾ ಹಾಗೇ ಕುಸಿಯುತ್ತದೆ. ಇದರಿಂದ ಕಾಡಿಗೆ ಕಾಡೇ ನಾಶವಾಗುವುದೂ ಉಂಟು.

ಇದನ್ನು ನೋಡುತ್ತಿದ್ದ ಸಿದ್ಧಾರ್ಥನ ಮೈ ನಡುಗಿತು. ಮೊದಲ ಬಾರಿಗೆ ಅನ್ನಿಸಿತು ಹೀಗೆ ಬಂದು ತಪ್ಪು ಮಾಡಿದೆವೇನೋ ಎಂದು. ಆದರೂ ಅವರು ನಡೆಯುತ್ತಲೇ ಇದ್ದರು. ಮುಂದೆ ಷೆರ್ಪಾ, ಹಿಂದೆ ಇಬ್ಬರು.

"ಇನ್ನೂ ಎಷ್ಟು ದೂರ?" ರಾಕೇಶ್ ಕೇಳಿದ. ಷೆರ್ಪಾ ಮಾತನಾಡಲಿಲ್ಲ. ಏಕ್ಸ್ ಮಂಜಿನಲ್ಲಿ ಚುಚ್ಚುತ್ತಾ ಮುಂದೆ ನಡೆಯುತ್ತಿದ್ದ.

ಇನ್ನೊಂದು ಗಂಟೆಯಲ್ಲಿ ಸಂಜೆಯಾಗುತ್ತದೆ. ಸಾಧಾರಣವಾಗಿ ಪರ್ವತಗಳ ಮೇಲೆ ನಡೆಯುವಂತೆಯೇ ಸೂರ್ಯನನ್ನು ಹಠಾತ್ತಾನೆ ಮೇಘ ಆವರಿಸಿಕೊಂಡು ಕತ್ತಲಾಗಿತ್ತು. ಆನೆಯಂತೆ ಕಪ್ಪಾಗಿ ಭಾರಿಯಾಗಿದ್ದ ಮೇಘ ಸೂರ್ಯನನ್ನೇ ನುಂಗಿದಂತಿತ್ತು. ಅದಕ್ಕಾಗಿಯೇ ಕಾಯುತ್ತಿದ್ದವನೇನೋ ಎನ್ನುವಂತೆ ಷೆರ್ಪಾ ನಿಂತ.

ಮೇಘಗಳೂ ಕೂಡ ತಮ್ಮ ಸಿಲುಕಿನಲ್ಲಿಯೇ ಇದ್ದುದರಿಂದ ಅವು ಪರಸ್ಪರ ಢಿಕ್ಕಿ ಹೊಡೆದಾಗ ಉಂಟಾಗುವ ಮಿಂಚು ಬೆಳಕಿನ ಬಳ್ಳಿ ಕಣ್ಣು ಕೋರೈಸಿದಂತಾಯಿತು. ಸ್ವಲ್ಪ ಕಾಲ ಏನೂ ಕಾಣಿಸಲಿಲ್ಲ. ಝುಂ ಎಂದು ಗಾಳಿಯ ಸದ್ದೇ ಕೇಳುತ್ತಿತ್ತು; ಮನುಷ್ಯನನ್ನೇ ಕೆಳಗುರುಳಿಸುವಷ್ಟು ಬಲವಾದ ಗಾಳಿ.

ಇದ್ದಕ್ಕಿದ್ದಂತೆಯೇ ರೂಪುಗೊಂಡ ಈ ಪ್ರಕೃತಿ ಪ್ರಕೋಪವನ್ನು ಕಂಡು ಏನು ಮಾಡೋಣ ಎಂದು ಕೇಳಲು ಪಕ್ಕಕ್ಕೆ ತಿರುಗಿದ ಸಿದ್ಧಾರ್ಥ ನಿಶ್ಚೇಷ್ಟಿತನಾಗಿ ಅಂತೆಯೇ ನಿಂತ—ಷೆರ್ಪಾ ಕೈಯಲ್ಲಿ ರಿವಾಲ್ವರ್ ಇದೆ. ಅವನು ಗಹಗಹಿಸಿ ನಗುತ್ತಿದ್ದಾನೆ.

"ರಾಕೇಶ್ ಉಸ್ನೋಕ್‌ಗೆ ನೀನು ಮಾಡಬೇಕಾದ ಸಹಾಯ ಮುಗಿದಿದೆ. ನಿನ್ನನ್ನು ಕೊಲ್ಲಬೇಕೆಂದು ಆಜ್ಞೆ ಬಂದಿದೆ, ಸಿದ್ಧವಾಗು!" ಷೆರ್ಪಾ ಕಿರುಚಿದ.

ಮೊದಲು ಸ್ವಲ್ಪ ಹೊತ್ತು ರಾಕೇಶ್‌ಗೆ ಅರ್ಥವಾಗಲಿಲ್ಲ. ಭೋರನೆ ಬೀಸುತ್ತಿರುವ ಗಾಳಿಯಲ್ಲಿ, ಆಗಲೇ ಆವರಿಸಿದ್ದ ಕತ್ತಲಲ್ಲಿ ಉಸ್ನೋಕ್ ಹೆಸರು ಸಿದ್ಧಾರ್ಥನ ಮುಂದೆ ಕೇಳಿಸುತ್ತಲೇ ರಾಕೇಶ್ ಗಾಬರಿಗೊಂಡ. ಅವನ ಗಾಬರಿಯನ್ನು ಗುರ್ತಿಸಿದಂತೆ ಷೆರ್ಪಾ ಮತ್ತಷ್ಟು ಜೋರಾಗಿ ಗಹಗಹಿಸಿ ನಕ್ಕ.

"ಅಲ್ಲಿ ಅಷ್ಟಾವಕ್ರನ ಜನನ ಕಾಲ ಸಮೀಪಿಸಿದೆ. ಇಲ್ಲಿ ನಿನ್ನ ಕೊನೆಗಾಲ ಬಂದಿದೆ. ರಾಕೇಶ್! ಉಸ್ನೋಕ್ ಸದಸ್ಯನನ್ನು ಕೊಲ್ಲುವಾಗ ಪಂಚ

ಭೂತಗಳ ಛಾಯೆ ಮಾತ್ರವೇ ಇರಬೇಕು. ಆದರೆ ಅವು ಪ್ರತ್ಯಕ್ಷವಾಗಿರ ಕೂಡದು. ಭೂಮಿಯ ಛಾಯೆ ಇರಬೇಕು—ಭೂಮಿ ಇರಕೂಡದು. ಅದಕ್ಕೆಂದೇ ಮಂಜಿನ ಮೇಲೆ ಕರೆತಂದಿದ್ದೇನೆ. ಆಕಾಶವಿದೆ. ಆದರೆ ಮೇಘಾವೃತಗೊಂಡಿದೆ. ಅಗ್ನಿ ಮಿಂಚಿನಲ್ಲಿ, ಗಾಳಿ ಮಂಜಿನಲ್ಲಿ, ನೀರು ಘನವಾಗಿ ಛಾಯಾ ಮಾತ್ರವೇ ಇದೆ. ಉಸ್ನೋಕ್ ಆಜ್ಞೆಯನ್ನು ಅನುಸರಿಸಿಯೇ ನಿನ್ನನ್ನು ಕೊಲ್ಲುತ್ತಿದ್ದೇನೆ!"

ಇಷ್ಟು ಸ್ಪಷ್ಟವಾಗಿ ಮಾತನಾಡುತ್ತಿರುವ ಅವನತ್ತ ಆಶ್ಚರ್ಯದಿಂದ ನೋಡಿದ ರಾಕೇಶ್. ಅವನ ಮೆದುಳು ಆಲೋಚನೆ ಮಾಡಲು ಸಾಧ್ಯವಾಗದಂತೆ ಮೊದ್ದಾಗಿತ್ತು. ಮಹಾದ್ರಷ್ಟನೊಂದಿಗೆ ನಡೆಸಿದ ಚದುರಂಗದಾಟದಲ್ಲಿ ಆತನೇ ಕೊನೆಯದಾಗಿ ನಡೆಸಿದ ಈ ಆಟದಲ್ಲಿ ತಾನು ಉಸಿರಾಡಲೂ ಅವಕಾಶವಿಲ್ಲದಂತೆ ಮಾಡಿ ಈ ಬಲವಾದ ಪ್ರಹಾರ ನೀಡಿದ್ದಾನೆ ಎಂದುಕೊಂಡ.

"ನೀನು....ನೀನು ಯಾರು?"

ಪೆರ್ಪಾ ನಕ್ಕು "ನೋಡು" ಎಂದ.

ರಾಕೇಶ್ ಅವನನ್ನು ನೋಡಿ ಬೆಚ್ಚಿದ—ತನ್ನ ಸಮಾನ ಸ್ಥಾನದ ರೆಡ್ ಸ್ಕೆಲಿಟನ್!

ರಾಕೇಶ್ ಅಪ್ರಯತ್ನವಾಗಿ ಒಂದಡಿ ಹಿಂದಕ್ಕೆ ಸರಿದ.

"ಎಲ್ಲಿಗೆ ಹೋಗ್ತೀ ರಾಕೇಶ್? ಮೈಲಿಗಟ್ಟಲೆ ಓಡಿದರೂ ಈ ಮಂಜಿನಲ್ಲಿ ನಿನಗೆ ಮನುಷ್ಯ ಸಂಚಾರ ಕಾಣಿಸದು. ಅಷ್ಟು ದೂರ ಬಂದಿದ್ದೇವೆ. ಕೇದಾರ ಗೌರಿಯಲ್ಲಿ ಅಷ್ಟಾವಕ್ರ ಹುಟ್ಟಲು ನಡೆಸಬೇಕಾದ ಎಲ್ಲಾ ಕಾರ್ಯಗಳನ್ನೂ ಮಾಡಿದ್ದಕ್ಕಾಗಿ ಉಸ್ನೋಕ್ ಪರವಾಗಿ ನನ್ನ ಕೃತಜ್ಞತೆಗಳು" ಎನ್ನುತ್ತಾ ಪಿಸ್ತೂಲ್ ಗುರಿ ಇಟ್ಟು ಸಿದ್ಧಾರ್ಥನ ಕಡೆ ತಿರುಗಿ "ನಿನ್ನನ್ನು ಇಲ್ಲಿಗೆ ಕರೆದುಕೊಂಡು ಬರುವುದಕ್ಕಾಗಿಯೇ ಮಹಾದ್ರಷ್ಟ ಸಿದ್ಧನ ರೂಪದಲ್ಲಿ ನಿನ್ನ ಮನೆಗೆ ಬಂದು ಭಿಕ್ಷೆ ಕೇಳಿದ. ನಮ್ಮ ಬಲೆಗೆ ಸಿಕ್ಕಿ ನೀನು ಇಷ್ಟು ದೂರ ಬಂದೆ. ಸಿದ್ಧಾರ್ಥ ನಿನ್ನನ್ನು ರಕ್ಷಿಸಬಲ್ಲ ಶಿವಾನಂದ ಸತ್ತು ಎಷ್ಟೋ ಕಾಲವಾಗಿದೆ. ಅಷ್ಟಾವಕ್ರನ ಹುಟ್ಟನ್ನು ಇನ್ಯಾರೂ ತಡೆಯಲಾರರು. ನೀನೂ ನಿನ್ನ ಸಾವನ್ನು ಕಾಯುತ್ತಾ ನಿಲ್ಲು" ಎಂದ.

ಸಿದ್ಧಾರ್ಥ ರಾಕೇಶನತ್ತ ನೋಡಿದ.

ಈ ಷಾಕ್‌ನಿಂದ ಎಚ್ಚರಗೊಳ್ಳಲಾರದಂತೆ ಮುಖವೆಲ್ಲಾ ಬಿಳಿಚಿಕೊಂಡಿದೆ. ತಾನಿಷ್ಟು ಕಾಲವೂ ನಡೆಸಿದ ವ್ಯವಹಾರ ಸಿದ್ಧಾರ್ಥನಿಗೆ ಗೊತ್ತಾ

ಸಿದ್ಧಾರ್ಥ ಕಣ್ಮುಚ್ಚಿದ-ಅವನ ಒಳಗಣ್ಣಿಗೆ ಕೇದಾರಗೌರಿ ಕಾಣಿಸಿದಳು. ಏಕೋ ಏನೋ ಹಣ್ಣಿನ ಗೊನೆಯ ಬಾರಕ್ಕೆ ಬಗ್ಗಿದ್ದ ಬಾಳೆಯ ಮರದ ನೆನ ಪಾಯಿತು.

ಇದ್ದಕ್ಕಿದ್ದಂತೆಯೇ ಗಾಳಿಯು ಘೋರ್ಗರೆತೆ ಮತ್ತೂ ಹೆಚ್ಚಿತು. ಮುಚ್ಚಿದ್ದ ಕಣ್ಣಿಂದಲೂ ಆ ಗಾಳಿಯು ವೇಗಕ್ಕೆ ನೀರು ಮುಖದ ಮೇಲೆ ಸುರಿಯುತ್ತಿದೆ. ಕೈಯೆತ್ತಲು ಹೋದ.

ಅಷ್ಟರಲ್ಲಿ ರಿವಾಲ್ವಾರ್ ಢಮ್ಮನೆ ಸದ್ದು ಮಾಡಿತು.

ಅಡಿಯ ನೆಲವೇ ಚಲಿಸುತ್ತಿದ್ದಂತೆನಿಸಿ ಕಣ್ತೆರೆದ. ಮತ್ತೆ ಘನ ಹಿಮ ಪ್ರಪಾತ.

ಆ ದೃಶ್ಯ ನೋಡಿ ದಿಗ್ಭ್ರಮೆಗೊಂಡ. ಎಂದೂ ಊಹಿಸಲಾರದ ದೃಶ್ಯ. ಭೂಮಿ ಎರಡಾಗಿ ಸೀಳುತ್ತಿರುವಂತೆ ಮಂಜು ಮಧ್ಯದಲ್ಲಿ ಬಾಯ್ಬಿಡು ತ್ತಿದೆ.

ಮತ್ತೆ ರಿವಾಲ್ವರ್‌ನಿಂದ ಗುಂಡು ಹಾರಿಸಿದ ಸದ್ದು. ಸಿದ್ಧಾರ್ಥ ತಲೆ ತಿರುಗಿಸಿ ನೋಡಿದ.

ಷೆರ್ಪಾ ಕೈ ಮಾತ್ರವೇ ಕಾಣಿಸುತ್ತಿದೆ. ಕೈಯಲ್ಲಿ ಕಪ್ಪು ರಿವಾಲ್ವರ್ ಇದೆ. ಬಿಳಿದಾದ ಮಂಜಿನಲ್ಲಿ ಅದು ಮತ್ತಷ್ಟು ಕಪ್ಪಾಗಿದೆ. ಷೆರ್ಪಾ ಮಾತ್ರ ನೊಸಲಿನವರೆಗೂ ಮಂಜಿನಲ್ಲಿ ಹೂತುಹೋಗಿದ್ದಾನೆ. ಸಾವು ಅನಿವಾರ್ಯವೆಂದು ತಿಳಿದ ನಂತರ ತೋರು ಬೆರಳು ಮಾತ್ರ ಟ್ರಿಗರ್‌ನ್ನು ಒತ್ತುತ್ತಿದೆ. ಆರು ಸಾರಿ ಗುಂಡು ಹಾರಿಸಿ ಸುಮ್ಮನಾಯಿತು.

ಅಷ್ಟರಲ್ಲಿ ಮಂಜು ಅವನ ಕೈಯನ್ನೂ ಆವರಿಸಿತ್ತು.

ಸಾಯುವಾಗ ಹಾವು ಆಡುವಂತೆ ಕೈ ಮಂಜಿನ ಹಿಂದೆ ಸ್ವಲ್ಪ ಚಲಿಸಿ ಸುಮ್ಮನಾಯಿತು. ಆತನಿದ್ದ ಸ್ಥಳದ ಮೇಲೆ ಮತ್ತಷ್ಟು ಮಂಜು ಸೇರಿತ್ತು.

ಸಿದ್ಧಾರ್ಥ ಇನ್ನೂ ಈ ಷಾಕ್‌ನಿಂದ ಎಚ್ಚರಗೊಳ್ಳಲಿಲ್ಲ. ತನ್ನಿಂದ ಐದು ಅಡಿಗಳ ದೂರದಲ್ಲಿ ಒಬ್ಬ ಮನುಷ್ಯನ ಸಜೀವ ಸಮಾಧಿಯನ್ನು ತನ್ನ ಕಣ್ಣಿಂದ ನೋಡಿ ನಂಬಲು ಸಾಧ್ಯವಿಲ್ಲದಂತೆ ನಿಂತಿದ್ದ.

ಮತ್ತೆ ಕಾಲ್ಕೆಳಗಿನ ಭೂಮಿ ಕಂಪಿಸಿತು.

ದೂರದಲ್ಲಿ ಎತ್ತರವಾದ ಶಿಖರವೊಂದರ ಮೇಲಿಂದ ಒಂದು ಹಿಮದ ಚಕ್ಕೆ ಜಾರುತ್ತಾ ಕೆಳಕ್ಕೆ ಬರುತ್ತಿದೆ.

ಸಿದ್ಧಾರ್ಥ ಸುತ್ತಲೂ ನೋಡಿದ—ರಾಕೇಶ್ ಮಂಜಿನಲ್ಲಿ ಚುಚ್ಚಿದ್ದ ಏಕ್ಸ್ ಹಿಡಿದು ಗಾಳಿಯಲ್ಲಿ ನೇತಾಡುತ್ತಿದ್ದಾನೆ!

ಅವನ ಭಾರವನ್ನು ಹೊತ್ತು ಹೊರಲಾರದೆ, ಚಲಿಸುತ್ತಿರುವ ಭೂಮಿಯ ಓಟಕ್ಕೆ ಆ ಏಕ್ಸ್ ಯಾವ ಕ್ಷಣವಾದರೂ ಬೀಳುವಂತಿದೆ. ಅದು ಸ್ವಲ್ಪ ಚಲಿಸಿದರೂ ರಾಕೇಶ್ ಹಲವು ನೂರು ಅಡಿಗಳ ಪ್ರಪಾತದಲ್ಲಿ ಬೀಳುವುದು ನಿಶ್ಚಿತ.

ಕ್ಷಣಗಳಲ್ಲಿ ನಡೆಯುತ್ತಿರುವ ಈ ವಿಪರೀತಗಳು ಸಿದ್ಧಾರ್ಥನನ್ನು ಕರ್ತವ್ಯ ವಿಮುಖನನ್ನಾಗಿಸುತ್ತಿವೆ. ಬೇರೆ ಯಾರಾಗಿದ್ದರೂ ಆ ಕ್ಷಣದಲ್ಲಿ ದಿಕ್ಕು ಕಾಣದೆ ಕಂಗೆಡುತ್ತಿದ್ದರು. ಕೆಳಗೆ ಚಲಿಸುವ ಭೂಮಿ, ಮೇಲೆ ಕುಸಿಯುತ್ತಿತ್ತಿರುವ ಆಕಾಶ, ಮಂಜಿನ ಹೆಂಟೆಗಳು....ಒಂದೊಂದು ತಾಳೆಮರದಷ್ಟು ಎತ್ತರದ ಮಂಜಿನ ಹೆಂಟೆ....

ಅಲ್ಲಿಂದ ಬೇಗ ಹಿಂದಕ್ಕೆ ಓಡಿವರೆ, ಅದೃಷ್ಟ ಚೆನ್ನಾಗಿದ್ದರೆ ಶಿಖರದಿಂದ ಜಾರುತ್ತಿರುವ ಮಂಜಿನಿಂದ ತಪ್ಪಿಸಿಕೊಳ್ಳಬಹುದು.

ಸಿದ್ಧಾರ್ಥ ಷಾಕ್‌ನಿಂದ ಎಚ್ಚೆತ್ತುಕೊಳ್ಳುತ್ತಿದ್ದ. ಕ್ಷಣಗಳಲ್ಲಿ ಕಣ್ಮುಂದೆ ಬದಲಾದ ದೃಶ್ಯವನ್ನು ಅರ್ಥಮಾಡಿಕೊಂಡ.

ಷೆರ್ಪಾ ಇದ್ದಾಗ ನಾಲ್ಕು ಕಡೆ ಬೆಟ್ಟಗಳಿದ್ದುವು. ಈಗ ಒಂದು ಕಡೆ ಬೆಟ್ಟವೇ ಇಲ್ಲ. ಎಲ್ಲಾ ಜಾರಿ ವಿಶಾಲ ಪ್ರದೇಶವಾಗಿತ್ತು. ತಾನಿದ್ದ ಪ್ರದೇಶಕ್ಕೂ ಮಧ್ಯೆ ಹತ್ತು ಗಜಗಳ ಕಂದಕ. ಪುಡಿಪುಡಿಯಾಗಿ ಮಂಜು ಉರುಳುತ್ತಲೇ ಇದೆ. ಹಿಂದೆ ನೋಟಕ್ಕೆ ಎಟುಕದಷ್ಟು ಎತ್ತರದಲ್ಲಿ ಪರ್ವತಶಿಖರ. ಅದರ ತುದಿಯಿಂದ ಯಾವುದೇ ಕ್ಷಣದಲ್ಲಿ ಅದರ ಅಂಚು ಮುರಿದು ಬೀಳಬಹುದು. ಆ ಕಂದಕವನ್ನು ದಾಟಿ ಅತ್ತ ಹೋದರೆ ಜೀವ ಉಳಿಸಿಕೊಳ್ಳಬಹುದು. ಆದರೆ ಹೋಗುವುದು ಹೇಗೆ?

ಸಿದ್ಧಾರ್ಥನ ದೃಷ್ಟಿ ಕಾಲಿನ ಬಳಿ ಇದ್ದ ಹಗ್ಗದ ಮೇಲೆ ಬಿತ್ತು. ಬೆನ್ನಿಗೆ ಸಿಕ್ಕಿಸಿಕೊಳ್ಳುವ ಎರಡು ಚೀಲಗಳೂ, ಹಗ್ಗ, ಇಷ್ಟೇ ಉಳಿದಿದ್ದು. ಬಗ್ಗಿ ಅದನ್ನು ತೆಗೆದುಕೊಳ್ಳಲು ಹೋದ. ಆಗ ಕೇಳಿಸಿತು. ರಾಕೇಶನ ಕೂಗು.

ಯಾವುದೋ ಬಾವಿಯೊಳಗಿಂದ ಕೂಗುತ್ತಿರುವಂತೆ ಕೇಳಿಸಿತು. ಸಿದ್ಧಾರ್ಥ ತಲೆ ತಿರುಗಿಸಿ ನೋಡಿದ. ಮತ್ತೊಂದು ಕೂಗು–ಸಾವಿನ ದವಡೆಯಲ್ಲಿ ಜೀವ ಉಳಿಸಿಕೊಳ್ಳಲು ಭಯದಿಂದ ಕಿರುಚುವಂತೆ ಇದ್ದ ಆ ಕೂಗು ಎದೆ ನಡುಗಿಸುವಂತಿತ್ತು.

ಹತ್ತು ಅಡಿ ಇರಿಸಿ ಸಿದ್ಧಾರ್ಥ ಕಂದರಲ್ಲಿ ಇಣುಕಿ ನೋಡಿದ. ಏಕ್ಸ್ ಹಿಡಿದು ಇನ್ನೂ ಜೋತಾಡುತ್ತಿದ್ದಾನೆ ಅವನು. ಯಾವ ಕ್ಷಣವಾದರೂ ಹಿಡಿತ ಬಿಡುವಂತಿದೆ ಆ ಏಕ್ಸ್.

ಸಿದ್ಧಾರ್ಥ ಹಿಂದಕ್ಕೆ ಬಂದು ಹಗ್ಗವನ್ನು ಎತ್ತಿಕೊಂಡ.

ಗಾಳಿ ಇನ್ನೂ ಬೀಸುತ್ತಲೇ ಇತ್ತು. ಮತ್ತೊಂದು ಉತ್ಪಾತ ಯಾವ ಕ್ಷಣದಲ್ಲಾದರೂ ನಡೆಯುವಂತಿದೆ. ಮೊಳೆಯನ್ನು ಮಂಜಿನಲ್ಲಿ ಹೊಡೆದ. ಒಂದು ಅಂಚನ್ನು ಅದಕ್ಕೆ ಬಿಗಿದು ಹಗ್ಗವನ್ನು ಒಳಕ್ಕೆ ಬಿಟ್ಟ. ಇನ್ನೊಂದು ಕಡೆ ತಾನು ಹಿಡಿದ. ರಾಕೇಶನಿಗೆ ಆ ಹಗ್ಗವನ್ನು ಹಿಡಿಯಲು ಸನ್ನೆಮಾಡಿದ.

ಹಗ್ಗ ಪಕ್ಕದಲ್ಲಿ ಬಂದು ಇಳಿದಿದ್ದು ರಾಕೇಶ್ ನೋಡಿದ. ಇಬ್ಬರ ನೋಟಗಳೂ ಬೆರೆತವು. ರಾಕೇಶನ ಕಣ್ಣಲ್ಲಿ ಕೃತಜ್ಞತೆ ಕಾಣಿಸಿತು. "ನಿನ್ನೊಂದಿಗೆ ಏಕ್ಸ್ ಕೂಡ ತೆಗೆದುಕೊಂಡು ಬಾ" ಎಂದು ಗಟ್ಟಿಯಾಗಿ ಅರಚಿ ಹೇಳಿದ ಸಿದ್ಧಾರ್ಥ. ಹತ್ತು ಅಡಿ ಮೇಲಕ್ಕೇರಿ ಬರಲು ಅರ್ಧ ಗಂಟೆ ಬೇಕಾಯಿತು. ಕೈಗೆ ಗ್ಲೋವ್ಸ್ ಹಾಕಿದ್ದರೂ ಬೆರಳುಗಳು ಸೆಟೆಯುತ್ತಿದ್ದವು. ಹಗ್ಗದ ಉಜ್ಜಾಟದಲ್ಲಿ ಚರ್ಮ ಅಲ್ಲಲ್ಲಿ ಕಿತ್ತುಹೋಗಿತ್ತು. ಮೇಲಕ್ಕೆ ಬರುತ್ತಿದ್ದ ರಾಕೇಶನ ಕೈಯನ್ನು ಹಿಡಿದು ಮೇಲಕ್ಕೆ ಎಳೆದುಕೊಂಡ ಸಿದ್ಧಾರ್ಥ. ಬುಸುಗುಟ್ಟುವಂತೆ ಉಸಿರಾಡುತ್ತಾ ನಿಂತ ರಾಕೇಶ್‌ಗೆ ಸಿದ್ಧಾರ್ಥನನ್ನು ನೋಡಲು ಭಯವಾಗುತ್ತಿದೆ. ಷೆರ್ಪಾನ ಪ್ರತಿಯೊಂದು ಮಾತೂ ಸಿದ್ಧಾರ್ಥನಿಗೆ ಅರ್ಥವಾಗಿದೆ ಎಂಬುದು ಗೊತ್ತು. ಸಿದ್ಧಾರ್ಥ ತನ್ನನ್ನು ಕಂದರದಿಂದ ಹಾಗೆ ಮೇಲೆ ತಂದದ್ದೇ ವಿಚಿತ್ರವಾಗಿ ಕಾಣಿಸುತ್ತಿತ್ತು.

ಆದರೆ ಸಿದ್ಧಾರ್ಥನಿಗೆ ಇದರ ಪರಿವೇ ಇರಲಿಲ್ಲ. ರಾಕೇಶ್ ಮೇಲೆ ಬರುತ್ತಲೇ ಹಗ್ಗ ಮತ್ತು ಏಕ್ಸ್‌ನ್ನು ಕಂದರದ ಅತ್ತಕಡೆಗೆ ಎಸೆದ. ನಾಲ್ಕಾರು ಬಾರಿಯ ಪ್ರಯತ್ನದ ನಂತರ ಅದು ಬಲವಾಗಿ ಒಂದೆಡೆ ಕೂಡಿಕೊಂಡಿದ್ದನ್ನು ನಿಶ್ಚಯಿಸಿಕೊಂಡು ಉಯ್ಯಾಲೆಯಂತೆ ಹಗ್ಗದ ಮೇಲೆ ಅತ್ತಕಡೆಗೆ ಹೋದ. ಅತ್ಯಂತ ಪ್ರಮಾದಕರವಾದ ಹಾರಾಟವದು. ಅನ್ಯಥಾ ಮಾರ್ಗವೇ ಇರಲಿಲ್ಲ.

ಅತ್ತಕಡೆ ಸೇರಿಕೊಳ್ಳುತ್ತಲೇ ಸಿದ್ಧಾರ್ಥ ರಾಕೇಶನತ್ತ ಹಗ್ಗ ಎಸೆದ.

"ಸಿದ್ಧಾರ್ಥನಿಂದ ಬೇರೆಯಾಗಲು ಇದೇ ಸಮಯ. ಎಲ್ಲಾ ತಿಳಿದವನ ಕಣ್ಣಿಂದ ದೂರವಾಗಿರಲು ಒಂದೇ ಅವಕಾಶ" ಎಂದುಕೊಳ್ಳುತ್ತಿದ್ದ ರಾಕೇಶ.

"ಯೂ ಫೂಲ್, ಕ್ವಿಕ್" ಎಂದು ಕಿರುಚಿದ ಸಿದ್ಧಾರ್ಥ. ಅನ್ಯಮಾರ್ಗ ಕಾಣದೆ ನಿರಾಲೋಚನೆಯಿಂದ ಅವನೂ ಹಗ್ಗವನ್ನು ಹಿಡಿದು ಅತ್ತ ನಡೆದ. ಅವನ ಕೈಯಲ್ಲಿ ಬ್ಯಾಗ್ ಇರಿಸಿ "ಕ್ವಿಕ್-ರನ್" ಎಂದ ಸಿದ್ಧಾರ್ಥ.

ಹಿಂದಕ್ಕೆ ನೋಡದೆ ಕೋವಿಯಿಂದ ಹೊರಬಂದ ಗುಂಡುಗಳಂತೆ ಓಡಿದರು.

ಆಗ ಕೇಳಿಸಿತು ಮಂಜಿನ ಹೆಂಟೆ ಬಿರಿಯುವ ಸದ್ದು.

ಐದಾರು ತಾಳೆಯ ಮರಗಳ ಎತ್ತರದ ಶಿಖರ ಭಾಗ ಬಿರಿದು ಐದಾರು ನಿಮಿಷಗಳ ಹಿಂದೆ ಅವರಿದ್ದ ಪ್ರದೇಶವನ್ನು ಸಂಪೂರ್ಣವಾಗಿ ಮುಚ್ಚಿತ್ತು. ಈಗ ಕಂದರ ಇರಲಿಲ್ಲ.

ಅವರ ಕಣ್ಣನ್ನು ಅವರೇ ನಂಬುವಂತಿರಲಿಲ್ಲ. ಹತ್ತು ನಿಮಿಷಗಳಲ್ಲಿ ಇಲ್ಲದ ಕಂದರ ಏರ್ಪಟ್ಟಿದ್ದು ನಂತರ ಒಂದು ಶಿಖರ ಬಿರಿದು ಅದು ಮುಚ್ಚಲ್ಪಟ್ಟು ಮತ್ತೆ ಮೈದಾನವಾದದ್ದು ಇದೆಲ್ಲಾ ಅವರು ನೋಡುತ್ತಿದ್ದಂತೆಯೇ ನಡೆಯಿತು.

ಮೇಲಣ ಕಪ್ಪು ಆಕಾಶ, ಕೆಳಗಿದ್ದ ಬಿಳಿ ಮಂಜು ಅದನ್ನು ನೋಡುತ್ತಾ ನಿಶ್ಚೇಷ್ಟಿತರಾದ ಅವರು ಬಹುಕಾಲ ಹಾಗೇ ನಿಂತರು. ಇಬ್ಬರಲ್ಲೂ ಒಂದೇ ಪ್ರಶ್ನೆ. ಯಾವ ಕಡೆ ಹೋಗಬೇಕು? ಮೇಘಾವೃತ್ತ ಆಕಾಶ ಯಾವುದು ಪೂರ್ವ ಎಂಬುದನ್ನು ತೋರಿಸುವಂತಿರಲಿಲ್ಲ.

ಐದಾರು ನಿಮಿಷಗಳ ನಂತರ ಕಾರ್ಮೋಡದ ಮಧ್ಯೆ ಬೆಳಕಿನ ರೇಖೆ ಕಾಣಿಸಿಕೊಂಡಿತು. ಸೂರ್ಯ ಅಸ್ಪಷ್ಟವಾಗಿ ಕಾಣಿಸಿಕೊಂಡ. ಅವರಿಗೆ ಸಂತೋಷವಾಯಿತು. ದಕ್ಷಿಣ ದಿಕ್ಕಿಗೆ ನಡೆದರು. ರಸ್ತೆ ದೊರೆತರೂ ಅಥವಾ ನೀರ್ಗಲ್ಲ ನದಿ (ಎತ್ತರವಾದ ಪ್ರದೇಶದಿಂದ ಮಂಜು ಸೇರಿಕೊಂಡು ಪ್ರವಾಹದಂತೆ ಹರಿಯುವುದನ್ನು ನೀರ್ಗಲ್ಲ ನದಿ ಎನ್ನುತ್ತಾರೆ. ಅದೇ ನದಿ ಕೊನೆಗೆ ಅಲಕ್‌ನಂದ, ಗಂಗಾ ನದಿಗಳಾಗುತ್ತವೆ.) ಕಾಣಿಸಿದರೂ ಅಲ್ಲಿಂದ ಸುಲಭವಾಗಿ ಮನುಷ್ಯರಿರುವ ಎಡೆ ಸೇರಬಹುದು.

ಸುಮಾರು ನಾಲ್ಕು ಗಂಟೆಗಳ ಕಾಲ ನಡೆದರು. ಇಬ್ಬರೂ ಹೆಚ್ಚಾಗಿ ಮಾತನಾಡಲಿಲ್ಲ. ಇಬ್ಬರಲ್ಲೂ ಒಂದೇ ಯೋಚನೆ ಎಷ್ಟು ಬೇಗ ಹಿಂದಕ್ಕೆ ಹೋಗಬಹುದು ಎಂಬ ಕಾತರ. ರಾಕೇಶ್ ಇನ್ನೂ ಆಶ್ಚರ್ಯದಿಂದ ಎಚ್ಚೆತ್ತಿಲ್ಲ. ಆದರೂ ಆಗಾಗ ಆ ಗಾಳಿಯ ಭೋರ್ಗರೆತದಲ್ಲಿ ಸಿದ್ಧಾರ್ಥನಿಗೆ ಸರ್ಪಾ ಮಾತುಗಳು ಕೇಳಿಸಲಿಲ್ಲವೇನೋ ಎಂದು ಅನುಮಾನವಾಗುತ್ತದೆ. ಅವನ ಅನುಮಾನವೇ ನಿಜವೇನೋ ಎನಿಸುವಂತೆ ಸಿದ್ಧಾರ್ಥ ಹೇಳಿದ: "ಇನ್ನೂ ಬೇಗ ಬೇಗ ನಡೆಯಬೇಕು. ಸಂಜೆಯೊಳಗಾಗಿ ಆ ಶಿಖರವನ್ನು ದಾಟಿಕೊಂಡು ಆ ಕಡೆ ಸೇರಬೇಕು. ಇಲ್ಲದಿದ್ದರೆ ಮಂಜಿನಲ್ಲಿ ರಾತ್ರಿ ಕಳೆಯುವುದು ಕಷ್ಟ."

ರಾಕೇಶ್ ಅಷ್ಟು ದೂರ ಯೋಚಿಸಿರಲಿಲ್ಲ. ಸಂಜೆಯ ವೇಳೆಗೆ ರಸ್ತೆ ಸೇರಬಹುದು ಎಂದುಕೊಂಡಿದ್ದ. ಬಿಸಿ ಟೀ ಕುಡಿದು ಬಸ್ಸಿನಲ್ಲಿ ಹಿಂದಕ್ಕೆ ಹೋಗುತ್ತೇವೆ ಎಂದು ತೀರ್ಮಾನಿಸಿದ್ದ! ಈಗ ಎದುರಿನಲ್ಲಿ ಇನ್ನೊಂದು ಶಿಖರ ಕಾಣಿಸುತ್ತಲೇ ನಿರ್ಬಲತೆಯಾವರಿಸಿತು. ಮುಂದಿನ ಹಾದಿ ಕಾಣದೆ ಸಿದ್ಧಾರ್ಥ

ನೊಂದಿಗೆ ತಾನು ಆ ಶಿಖರವನ್ನು ಏರಲು ಅಡಿಯಿರಿಸುತ್ತಿದ್ದ.

ಸಿದ್ಧಾರ್ಥನನ್ನು ನೋಡುತ್ತಿದ್ದಂತೆಲ್ಲಾ ಅವನ ಆಶ್ಚರ್ಯ ಹೆಚ್ಚುತ್ತಿದೆ. ಆಪತ್ತಿನ ದವಡೆಯಲ್ಲಿರುವಾಗಲೂ ಅವನ ಮುಖದಲ್ಲಿ ಯಾವ ಬದಲಾವಣೆಯೂ ಇಲ್ಲ. ಮುಂದೊದಗುವ ತೊಂದರೆಯನ್ನು ಮೊದಲೇ ಕಂಡುಕೊಳ್ಳುವುದು ಅವನ ಇನ್ನೊಂದು ವಿಶೇಷ ಶಕ್ತಿ.

ಇದ್ದಕ್ಕಿದ್ದಂತೆಯೇ ರಾಕೇಶನ ಮೈ ಕಂಪಿಸಿತು. ಈ ಕಂಪನಕ್ಕೆ ಚಳಿ ಕಾರಣವಾಗಿರಲಿಲ್ಲ. ಅಡಿಯಿರಿಸಿ ಮುಂದೆ ಸಾಗುತ್ತಿದ್ದವನು ನಿಲ್ಲಬೇಕಾಯಿತು. ಅವನ ಕಾಲು ಮುಂದೆ ಹೋಗಲು ನಿರಾಕರಿಸಿತ್ತು.

"ಸ್ವಲ್ಪ ರೆಸ್ಟ್ ತಗೊಂಡು ನಂತರ ಮುಂದೆ ಹೋಗೋಣ" ಎಂದ ರಾಕೇಶ್.

ಮುಂದೆ ಹೋಗುತ್ತಿದ್ದ ಸಿದ್ಧಾರ್ಥ ನಿಂತು 'ಏಕೆ?' ಎನ್ನುವಂತೆ ನೋಡಿದ.

ರಾಕೇಶ್ ಅದನ್ನು ಅರ್ಥಮಾಡಿಕೊಂಡವನಂತೆ "ಕಾಲು ಜೋಮು ಹತ್ತಿದೆ" ಎಂದ.

ಸಿದ್ಧಾರ್ಥನ ಮುಖ ಅನಿರೀಕ್ಷಿತವಾಗಿ ಬದಲಾಯಿತು. ಬೇಗ ಹಿಂದಕ್ಕೆ ಬಂದು ಅವನ ಕಾಲ ಬಳಿ ಕುಳಿತು "ಬೂಡ್ಸ್ ಬಿಚ್ಚು... ಬೇಗ...." ಎಂದ.

ಅವನ ಅನುಮಾನ ನಿಜವಾಯಿತು.

ರಾಕೇಶನ ಪಾದಗಳು ಬಿಳಿಚಿಕೊಂಡಿದ್ದವು. ಬೆರಳಿನ ತುದಿ ಮೂಳೆಗಳು ಹೊರಕ್ಕೆ ಬಂದಂತೆ ಕಾಣಿಸುತ್ತಿದ್ದವು.

"ಹಿಮವ್ರಣ (ವಿಪರೀತ ಶೀತಕ್ಕೆ ತುತ್ತಾಗಿ ಹಿಮದ ಮೇಲೆ ಚರ್ಮದ ಅಡಿಭಾಗ ಊತ ಬಂದು ಕೊಳೆಯಲು ಪ್ರಾರಂಭವಾಗುವ ಒಂದು ರೀತಿಯ ಗಾಯ. ಇದನ್ನು ಇಂಗ್ಲಿಷಿನಲ್ಲಿ 'ಫ್ರಾಸ್ಟ್ ಬೈಟ್' ಎನ್ನುತ್ತಾರೆ)..." ಎಂದ ಸಿದ್ಧಾರ್ಥ. "...ಉಜ್ಜು ಚೆನ್ನಾಗಿ ಉಜ್ಜು!" ಎಂದು ಒಂದು ಪಾದವನ್ನು ತನ್ನ ಕೈಗೆ ತೆಗೆದುಕೊಂಡು ಉಜ್ಜತೊಡಗಿದ. ಈ ರೀತಿ ಅರ್ಧ ಗಂಟೆಯ ಕಾಲ ಉಜ್ಜಿದ ನಂತರ ರಕ್ತದ ಪ್ರವಾಹ ಪ್ರಾರಂಭವಾಯಿತು. ಬಿಳಿಚಿಕೊಂಡಿದ್ದ ಬೆರಳುಗಳ ಅಂಚಿಗೆ ರಕ್ತ ಪ್ರವಾಹ ಬರುತ್ತಲೇ ಸಾವಿರ ಸೂಜಿಗಳು ಒಂದೇ ಬಾರಿಗೆ ಚುಚ್ಚಿದಂತಾಗಿ ಆ ನೋವಿಗೆ ಕಿರುಚಿದ ರಾಕೇಶ.

ಸಿದ್ಧಾರ್ಥ ಅದನ್ನು ಗಮನಿಸಲಿಲ್ಲ. ವೇಗವಾಗಿ ಅವನ ಕಾಲುಗಳನ್ನು ಉಜ್ಜುತ್ತಲೇ ಇದ್ದ. ಇನ್ನು ಪರವಾಗಿಲ್ಲ ಎನಿಸಿದಾಗ ಎದ್ದುನಿಂತು ಹೇಳಿದ: "ಪಾದಗಳನ್ನು ಊರಿ ನಡೆಯಬೇಡ. ಈ ಮಾತು ಹೇಳಲು ಮರೆತೆ. ಮಂಜಿನ

ಮೇಲೆ ನಡೆಯುವಾಗ ಮುಂದಿನ ಬೆರಳುಗಳ ಮೇಲೆ ನಡೆಯಬೇಕು. ಬೆರಳುಗಳು ಮೂಗಿನ ತುದಿ, ಕಿವಿಯ ಅಂಚು ಇವನ್ನು ಜಾಗರೂಕತೆಯಿಂದ ಗಮನಿಸಬೇಕು. ಇಲ್ಲದಿದ್ದರೆ ನಾವು ಇಲ್ಲಿಂದ ಹೊರಬೀಳುವಷ್ಟರಲ್ಲಿ ಅವು ಸಾಯುತ್ತವೆ. ಮಾಂಸ ಕೊಳೆತರೂ ಈ ಚಳಿಯಲ್ಲಿ ಅದು ನಮಗೆ ಗೊತ್ತಾಗುವುದಿಲ್ಲ..."

ರಾಕೇಶ್ ಬೂಟು ತೊಟ್ಟು ಮತ್ತೆ ನಡೆಯಲು ಪ್ರಾರಂಭಿಸಿದ. ಇಬ್ಬರೂ ಮತ್ತೆ ಪ್ರಯಾಣ ಕೈಗೊಂಡರು. ಸಂಜೆಯಾದಂತಿದೆ. ಮೇಘಗಳ ಹಿಂದೆ ಸೂರ್ಯ ಕಾಣಿಸುತ್ತಿಲ್ಲ. ಆದರೂ ಅದನ್ನು ಅವರು ಗಮನಿಸಲಿಲ್ಲ. ಇನ್ನು ಹತ್ತು-ಹದಿನೈದು ನಿಮಿಷಗಳಲ್ಲಿ ಶಿಖರ ಸೇರುವ ನಂಬಿಕೆ ಮೂಡಿತ್ತು. ಅಲ್ಲಿಂದ ಕೆಳಗಿನ ರಸ್ತೆ ಸೇರುವುದು ಕಷ್ಟವಿರದು.

ಮತ್ತಷ್ಟು ಕತ್ತಲಾಯಿತು.

ಇನ್ನೊಂದು ಹತ್ತು ಗಜ ದೂರದಲ್ಲಿ ಶಿಖರವಿರುವಾಗ ತೀರ ಆತುರದಿಂದ ಸಿದ್ಧಾರ್ಥನನ್ನು ದಾಟಿ ರಾಕೇಶ್ ಅಲ್ಲಿ ಸೇರಿದ. ಹತ್ತು ನಿಮಿಷಗಳ ನಂತರ ಸಿದ್ಧಾರ್ಥನೂ ಅಲ್ಲಿಗೆ ಬಂದ. ಅದೇ ಸಮಯಕ್ಕೆ ಪಶ್ಚಿಮಾಚಲದಲ್ಲಿ ಮರೆಯಾಗುತ್ತಿದ್ದ ಭಾಸ್ಕರ ಕೊನೆಯ ಬಾರಿಗೆ ದರ್ಶನ ನೀಡಿದ. ಸುತ್ತಲಿದ್ದ ಪರಿಸರವನ್ನು ಕೆಳಗೆ ಕಾಣಿಸುತ್ತಿದ್ದ ದೃಶ್ಯಗಳನ್ನೂ ನೋಡಿ ಇಬ್ಬರ ಮುಖದಲ್ಲೂ ನೆತ್ತರಿನ ಕಣವೇ ಇಲ್ಲದಂತಾಯಿತು.

ಮುಳುಗುತ್ತಿದ್ದ ಸೂರ್ಯನನ್ನು ನೋಡಿದ ನಂತರವೇ ಅವರಿಗೆ ತಮ್ಮ ತಪ್ಪು ಮನವರಿಕೆಯಾಗಿದ್ದು ಮಂಜು ತುಂಬಿದ ಪರ್ವತಗಳಲ್ಲಿ ಬೆಳಕು ವಿರುದ್ಧ ದಿಕ್ಕಿನಿಂದಲೇ ಕಾಣಿಸುತ್ತದೆ. ಆದ್ದರಿಂದಲೇ ಪಶ್ಚಿಮವನ್ನು ಪೂರ್ವ ಎಂದುಕೊಂಡಿದ್ದು, ದಕ್ಷಿಣವೆಂದು ಭಾವಿಸಿ ಉತ್ತರ ದಿಕ್ಕಿನಲ್ಲಿ ಸಾಗಿಬಂದಿದ್ದರು.

ಸುತ್ತಲೂ ಬೆಟ್ಟಗಳು. ಮಂಜು ಹೊತ್ತ ಶಿಖರಗಳು.

ಎತ್ತ ಹೋಗಬೇಕೆಂಬುದನ್ನೇ ಅರಿಯಲಾರದಂತೆ ದಾರಿ ತಪ್ಪಿದರು. ಎಲ್ಲಕ್ಕಿಂತಲೂ ಹೆಚ್ಚಾಗಿ ಆವರಿಸಿಕೊಂಡು ಬರುತ್ತಿದ್ದ ಕತ್ತಲೆ, ಅದರೊಂದಿಗೆ ಚಳಿ.

ಅವರು ನೋಡುತ್ತಿದ್ದಂತೆಯೇ ಕತ್ತಲೆಯಾವರಿಸಿತು. ಅಲ್ಲಿಯ ರುದ್ರ ಮೌನ ಭಯಂಕರವಾಗಿತ್ತು. ಹಿಮದಲ್ಲಿ ವಾಸಿಸುವ ಯಾವುದೋ ಪ್ರಾಣಿ ಅರಚಲು ಪ್ರಾರಂಭಿಸಿತು. ಆ ಸದ್ದು ಹೆಬ್ಬಾಗಿಲ ಬಳಿ ನಿಂತು ಮೃತ್ಯುಬಾಗಿಲು ಬಡಿಯುವಂತಿತ್ತು!

ಅದೇ ಸಮಯಕ್ಕೆ ಸರಿಯಾಗಿ ಕೃಷ್ಣಾಪುರದ ನರ್ಸಿಂಗ್‌ಹೋಂನಲ್ಲಿ ಹಾಸಿಗೆಯಲಿ ಮಲಗಿ ಮೇಲೆ ಸೂರನ್ನೇ ನೋಡುತ್ತಾ ಯೋಚಿಸುತ್ತಿದ್ದಾಳೆ

ಕೇದಾರಗೌರಿ. ಅವಳ ಯೋಚನೆಯೆಲ್ಲಾ ಗಂಡನ ಬಗ್ಗೆಯೇ. ಏನೋ ಅರಿಯಲಾರದ, ಬಿಡಿಸಿ ಹೇಳಲಾರದ ತಳಮಳ, ಮನದಲ್ಲೆಲ್ಲಾ ಅದೇ ಕಳವಳ. ತನ್ನ ಸುತ್ತಲೂ ಇರುವ ಎಲ್ಲಾ ಮನುಷ್ಯರಲ್ಲೂ ಒಂದು ರೀತಿಯ ಭಯವನ್ನು ಆಕೆ ಗಮನಿಸಿದ್ದಳು. ಏಕೆ ಎಂಬುದೂ ಸೂಕ್ಷ್ಮವಾಗಿ ಗೊತ್ತು. ತುಂಬಾ ಕಡಿಮೆ ಸಮಯದಲ್ಲೇ ಪಾಡೋನಲ್ಲಿಯ ಬಿಸಿಯನ್ನು ಗಮನಿಸಿದ್ದಳು.

ಆಕೆಯ ಯೋಚನೆಗೆ ಅಡ್ಡಿಯನ್ನು ಒಡ್ಡುತ್ತಾ, ಡಾ|| ರಂಗಪ್ರಸಾದ್ ಒಳಕ್ಕೆ ಬರುತ್ತಾ "ಗುಡ್ ಈವಿನಿಂಗ್" ಎಂದ.

ಗೌರಿ ತಲೆ ಎತ್ತಿ "ಅವರ ಬಗ್ಗೆ ಏನಾದರೂ ಗೊತ್ತಾಯಿತೇ?" ಎಂದು ಕೇಳಿದಳು.

ಇಲ್ಲವೆನ್ನುವಂತೆ ತಲೆಯಾಡಿಸಿ"ಬಹುಶಃ ಇಂದೋ ನಾಳೆಯೋ ಬರಬಹುದು. ಅದಕ್ಕೇ ಏನೂ ಹೇಳಿಲ್ಲ" ಎಂದ. ಆಕೆ ಮೌನವಾಗಿದ್ದಳು. ಡಾಕ್ಟರ್ ಮಾತು ಬದಲಿಸಲೆಂದು "ಏನೋ ಓದುತ್ತಿದ್ದೀರಲ್ಲಾ?" ಎಂದು ಕೇಳಿದ. ಆಕೆ ಪುಸ್ತಕ ತೋರಿಸಿದಳು. ಅದನ್ನು ನೋಡಿ "ಭಯವನ್ನು ಹುಟ್ಟಿಸುವಂಥಾ ಪುಸ್ತಕಗಳನ್ನು ಓದಬೇಡಿ" ಎಂದು ಹಿತನುಡಿದ.

"ಏಕೆ?" ಅವಳ ಪ್ರಶ್ನೆ. ಮಾತಿನಲ್ಲಿ ಅಚ್ಚರಿಯಿತ್ತು.

"ಗರ್ಭಿಣಿ ಯಾವ ರೀತಿಯ ವಾತಾವರಣದಲ್ಲಿದ್ದರೆ ಆ ರೀತಿ ಮಕ್ಕಳಾಗುವುದು ಎನ್ನುತ್ತಾರೆ ಹಿರಿಯರು. ಅದಕ್ಕಾಗಿ."

"ಡಾಕ್ಟರಾಗಿದ್ದೂ ನೀವು ಈ ರೀತಿ ಮಾತು ಹೇಳುತ್ತೀರಾ?" ಎಂದು ಪ್ರಶ್ನೆ ಕೇಳಿದಳು.

"ನಾನು ಹೇಳಿದ್ದು ನಿಜವಲ್ಲ ಎನ್ನುತ್ತೀರೇನು?" ಎಂದು ಕೇಳಿದ ರಂಗಪ್ರಸಾದ್.

"ಹೌದು" ಧ್ವನಿಯಲ್ಲಿ ಸ್ಥಿರತೆ ಇತ್ತು. "ಕೋಣೆಯಲ್ಲಿ ನೀಗ್ರೋ ಫೋಟೋ ಇದ್ದರೆ ಕಪ್ಪು ಮಗು ಹುಟ್ಟುತ್ತದೆ ಎನ್ನುವುದು ಪುರಾಣ ಕಥೆ. ಭಯಂಕರವಾದ ಪುಸ್ತಕಗಳನ್ನು ಓದಿದರೆ ಭಯಂಕರ ಆಕಾರದ ಮಗು ಹುಟ್ಟುತ್ತದೆ ಎನ್ನುವುದು ಹಾಸ್ಯಾಸ್ಪದವಲ್ಲವೇ? ಭಯದಿಂದ ತಾಯಿಯಲ್ಲಿ ರಕ್ತ ಪ್ರಸಾರ ಹೆಚ್ಚಬಹುದು ಅಷ್ಟೇ ಹೊರತು ಮಗುವಿನ ರೂಪಕ್ಕೂ ಅದಕ್ಕೂ ಏನು ಸಂಬಂಧ? ಒಮ್ಮೆ ಅಂಡ ಫಲೀಕೃತವಾದ ಮೇಲೆ ಬೆಳವಣಿಗೆ ಕ್ರೋಮೋಜೋಮ್ಸ್ ಮೇಲೆ ಆಧಾರಗೊಂಡಿದೆಯೇ ಹೊರತು ತಾಯಿಯ ಮಾನಸಿಕ ಸ್ಥಿತಿಯ ಮೇಲಲ್ಲ. ಇದು ಗೊತ್ತಿಲ್ಲದ ಅನೇಕ ವಿದ್ಯಾವಂತರೂ ನಾನಾ ಮಾತುಗಳನ್ನು ಹರಡುವುದು ವಿಷಾದದ ಸಂಗತಿ."

ತನ್ನ ಅಭಿಪ್ರಾಯವನ್ನು ನಿಖರವಾದ ಮಾತಿನಲ್ಲಿ ಹೇಳಿದ್ದನ್ನು ಆಕೆಯ ಮಾತಿನಲ್ಲಿದ್ದ ದೃಢತೆಯನ್ನು ಕಂಡು ಬೆರಗಾದ. ತನ್ನ ಆಶ್ಚರ್ಯವನ್ನು ತೋರಗೊಡದೆ "ಆ ಪುಸ್ತಕದಲ್ಲಿ ಹೀಗೆ ಬರೆಸಿದ್ದಾರೇನು?" ಎಂದು ಕೇಳಿದ.

ಗೌರಿ ನಗುತ್ತಾ "ಇಲ್ಲಾ ಇದು ಮಾಮೂಲಿ ಕಥೆ ಪುಸ್ತಕ!" ಎಂದಳು.

"ಇಂಥಾ ಕಥೆಗಳನ್ನು ಓದುವುದರಿಂದ ಏನು ಪ್ರಯೋಜನ? ಕಾಲಕ್ಷೇಪಕ್ಕೆ ಪರವಾಗಿಲ್ಲ ಎನ್ನಿ" ಎಂದು ನಿರಾಸಕ್ತ ಕಂಠದಲ್ಲಿ ಹೇಳಿದ.

ಕೇದಾರಗೌರಿ ಈ ಮಾತಿಗೆ ಉತ್ತರ ಹೇಳದೆ "ನನ್ನ ಕೇಸಿನ ಬಗ್ಗೆ ನಿಮ್ಮ ಅಭಿಪ್ರಾಯವೇನು ಡಾಕ್ಟರ್? ಸಾಧಾರಣ ಹರಿಗೆಯೇ ನಡೆಯುತ್ತದೆಯೇ?" ಎಂದು ಕೇಳಿದಳು.

"ನಿಮಗೇಕೆ ಅನುಮಾನ ಬಂತು?"

"ದಿನ ದಿನವೂ ಬೆಳೆಯುತ್ತಿರುವ ತೂಕದಿಂದ ಹಾಗೆನಿಸುತ್ತಿದೆ"

"ಗರ್ಭಿಣಿ ಸ್ತ್ರೀಯ ತೂಕ ದಿನದಿನಕ್ಕೂ ಹೆಚ್ಚುವುದು ಮಾಮೂಲೇ."

ಕೇದಾರಗೌರಿ ಡಾಕ್ಟರನ್ನೇ ನೇರವಾಗಿ ನೋಡುತ್ತಾ "ನಾವು ನೇರವಾಗಿ ಮಾತಾಡೋಣ ಡಾಕ್ಟರ್..." ಎಂದಳು.

ರಂಗಪ್ರಸಾದ್‌ಗೆ ಮುಜುಗರವೆನಿಸಿತು. "ಮಗುವನ್ನು ಟಿ. ವಿ. ಯಲ್ಲಿ ಗಮನಿಸುತ್ತಿದ್ದೇವೆ. ಸಾಧಾರಣವಾಗಿರಬೇಕಾದುದಕ್ಕಿಂತಲೂ ಹೆಚ್ಚು ಭಾರವಿದ್ದಾನೆ" ಎಂದ. ಸತ್ಯವೆಂದರೆ ಆ ಆಕಾರವನ್ನು ಗಮನಿಸಿ ಏನೂ ಅರ್ಥವಾಗದೆ ತಾನೇ ಅಚ್ಚರಿಗೊಂಡಿದ್ದಾನೆ. ಆದರೆ ಅದನ್ನು ಹೇಳಲಿಲ್ಲ.

ಆ ಮಾತಿನಿಂದ ಆಕೆ ಸ್ವಲ್ಪ ಕಳವಳಗೊಂಡಂತೆ ತೋರಿತು, "ಸಿಜೇರಿಯನ್ ಕೇಸಾಗುತ್ತೇ ಅಂತಿರಾ?"

"ನನ್ನ ಅಭಿಪ್ರಾಯ ಅದಲ್ಲ, ನೀವು ಆರೋಗ್ಯವಾಗಿದ್ದೀರಿ. ಆದ್ದರಿಂದ ಶಿಶುವಿನ ತೂಕದ ಬಗ್ಗೆ ನಾವು ಯಾವ ನಿರ್ಧಾರಕ್ಕೂ ಬರಲಾಗುವುದಿಲ್ಲ..."

"ಸಿಜೇರಿಯನ್ ಅಲ್ಲವೆಂದರೆ ಎಪಿಸಿಯಾಟಮಿ...?" ಎಂದಳು ಯೋಚನೆಯಲ್ಲಿದ್ದುಕೊಂಡೇ.

"ಎಪಿಸಿಯಾಟಮಿ ಏನು ಈಗ ತೀರಾ ಸಾಧಾರಣ. ಎಲ್ಲಾ ಡಾಕ್ಟರ್‌ಗಳೂ ಮಾಡುತ್ತಿರುತ್ತಾರೆ" ಎಂದ ರಂಗಪ್ರಸಾದ್ ಅದು ತೀರ ಸಾಧಾರಣ ಸಂಗತಿ ಎನ್ನುವಂತೆ.

"ಅದೇಕೆ ಮಾಡ್ತಾರೆ ಡಾಕ್ಟರ್?"

ಈ ಪ್ರಶ್ನೆಯಿಂದ ಸಾಧಾರಣವಾಗಿ ಮಾತನಾಡುತ್ತಿದ್ದ ರಂಗಪ್ರಸಾದ್ ನಿರ್ವಿಣ್ಣನಾದ. ಬೇಗ ಎಚ್ಚತ್ತುಕೊಂಡು "ಶಿಶು ಗರ್ಭದಿಂದ ಹೊರಬರುವಾಗ ಯೋನಿಮಾರ್ಗ ಸಣ್ಣದಾಗಿ ಹರಿಯುವ ಅವಕಾಶವಿದೆ. ಆದ್ದರಿಂದ ಕತ್ತರಿ

ಯಿಂದ ಮೊದಲೇ ಅದನ್ನು ಸ್ವಲ್ಪ ಕತ್ತರಿಸಿ ನಂತರ ಅದನ್ನು ಹೊಲಿದರೆ ಯಾವ ಅಪಾಯವೂ ಇಲ್ಲವೆಂದು ನನ್ನ ಅಭಿಪ್ರಾಯ" ಎಂದು ಹೇಳಿದ.

"....ಆದರೆ ಅದು ಅಷ್ಟು ಪ್ರಶಸ್ತವಾದುದಲ್ಲ ಎಂದು ಪ್ರಯೋಗಗಳು ನಿರೂಪಿಸಿವೆ" ಎಂದು ಗೌರಿ ಮಾತನ್ನು ಪೂರ್ಣಗೊಳಿಸಿದಾಗ ಏನೂ ಅರಿಯ ದಂತೆ ತಾನು ಕೇಳಿದ್ದರೂ 'ಅದೆಲ್ಲಾ ನನಗೂ ಗೊತ್ತು' ಎಂದು ಹೇಳುವ ಭಾವನೆ ಧ್ವನಿಸುತ್ತಿತ್ತು.

ರಂಗಪ್ರಸಾದ್ ಆಕೆಯತ್ತ ನೋಡಿದ. ಮಾತಿನಲ್ಲಿ ಸೋಲುವ ಇಷ್ಟವಿಲ್ಲದೆ "ಎಪಿಸಿಯಾಟಮಿಯಿಂದ ಬೇರೆ ಲಾಭವೂ ಇದೆ. ಹೆರಿಗೆಯ ನಂತರ ತೊಡೆ, ಕಾಲುಗಳನ್ನು ಬಳಸಿ ಮಾಡುವ ವ್ಯಾಯಾಮದಿಂದ ಹೆಣ್ಣಿಗೆ ಯೋನಿಯ ಬಿಗಿ ಕಳೆದುಹೋಗುವುದಿಲ್ಲ. ಪ್ರಸವದಲ್ಲಿ ಯೋನಿ ತುಂಬಾ ಹಿಗ್ಗಿದ್ದರೂ ಕೃತ್ರಿಮ ವಾಗಿ ಹಾಕಿದ ಹೊಲಿಗೆಗಳು ಬೇಗ ಗುಣವಾಗಿ ಆಸ್ಪತ್ರೆಯಿಂದ ಮನೆ ಸೇರು ತ್ತಲೇ ವ್ಯಾಯಾಮ ಪ್ರಾರಂಭಿಸಬಹುದು... ಈ ಲಾಭವೇನು ಸಾಧಾರಣ ವಾದುದಲ್ಲ!"

"ಹೆಣ್ಣು ಒಮ್ಮೆ ತಾಯಿಯಾದ ನಂತರ ಅವಳು ತನ್ನ ಗಂಡನಿಗೆ ಮೊದ ಲಿನ ರತಿ ಸುಖ ಕೊಡಲು ಸಾಧ್ಯವಿಲ್ಲ. ಯೋನಿಯ ಬಿಗಿ ಯಾವುದೇ ಕಾರಣ ದಿಂದ ಮೊದಲಿನಂತಿರಲು ಸಾಧ್ಯವಿಲ್ಲ. ಮದುವೆಯಾದಂದಿನಿಂದ ಮೊದಲ ಮಗುವಿನ ಜನನಕ್ಕೆ ಮೊದಲು ಎಷ್ಟು ಕಾಲವಿರುವುದೋ ಅಷ್ಟು ಕಾಲ ಮಾತ್ರವೇ ಗಂಡನಿಗೆ ಆ ರೀತಿ ಸುಖ ದೊರೆಯುತ್ತದೆ. ನಂತರದಲ್ಲಿ ಯಾವುದೇ ರೀತಿಯಿಂದಲೂ ಅಂತಹ ಸುಖ ದೊರೆಯುವುದಿಲ್ಲ. ಇದು ಎಲ್ಲರಿಗೂ ಗೊತ್ತಿ ರುವ ವಿಷಯವೇ. ಆದರೆ ಪ್ರಸವದ ನಂತರ ಮನೆಗೆ ಬಂದ ಮೇಲೆ ದಿನಕ್ಕೆ ಐದು ನಿಮಿಷಗಳಂತೆ ಎರಡು ತಿಂಗಳ ಕಾಲ ತಾಯಿ ತನ್ನ ಸೊಂಟದ ಕೆಳ ಭಾಗವನ್ನು ಬಳಸಿ 'ಪೆಲ್ವಿಕ್ ಎಕ್ಸರ್‌ಸೈಜ್' ಮಾಡುವುದರಿಂದ ಯೋನಿಯ ಮಾಂಸಖಂಡಗಳನ್ನು ಪ್ರಸವಕ್ಕೆ ಮೊದಲಿನಂತೆ ಬಿಗಿಗೊಳಿಸಬಹುದೆಂಬುದು ಎಷ್ಟು ಮಂದಿಗೆ ಗೊತ್ತು? ಅಷ್ಟರತನಕ ಏಕೆ. ನಿಮ್ಮ ನರ್ಸಿಂಗ್ ಹೋಂ ನಿಂದ ಚೊಚ್ಚಲ ಹೆರಿಗೆ ಮುಗಿಸಿಕೊಂಡು ಹೋಗುವ ಎಷ್ಟು ಮಂದಿಗೆ ನೀವು ಈ ಬಗ್ಗೆ ತಿಳಿವು ಕೊಡುತ್ತಿದ್ದೀರಿ?" ಗೌರಿ ಗಂಭೀರವಾಗಿ ಕೇಳಿದಳು.

"ಸೊಂಟ, ಹೊಟ್ಟೆ ಬೆಳೆಯಬಾರದು ಎಂದು ನಾವು ಹೇಳುತ್ತಲೇ ಇರುತ್ತೇವೆ..." ರಂಗಪ್ರಸಾದ್ ತನ್ನ ಅಸಹಾಯಕತೆ ತೋಡಿಕೊಳ್ಳುವಂತೆ ನುಡಿದ.

"ನನ್ನ ಮಾತು ಅದಲ್ಲ ಡಾಕ್ಟರ್, ನಾನು ಕೇಳುತ್ತಿರುವುದು ವೆಜಿನಾ-ಪೆಲ್ವಿಕ್ ಎಕ್ಸರ್‌ಸೈಜ್ ಬಗ್ಗೆ..." ಅವಳ ಮಾತಿನಲ್ಲಿ ನಿಷ್ಠುರತೆ ಇತ್ತು.

ಡಾಕ್ಟರ್ ಏನೂ ಮಾತನಾಡದೆ ತಲೆತಗ್ಗಿಸಿದ. ಶಾಂತಳಾಗಿಯೇ ಆಕೆ ಹೇಳಿದಳು: "ವರದಕ್ಷಿಣೆ, ನಿರುದ್ಯೋಗ ಮುಂತಾದ ವಿಷಯಗಳ ಬಗ್ಗೆ ಬರೆದರೆ ಎಲ್ಲರೂ ಓದುತ್ತಾರೆ. ಏಕೆಂದರೆ ಆ ವಿಷಯಗಳ ಬಗ್ಗೆ ತಾವೇನೂ ಮಾಡ ಬೇಕಾಗಿಲ್ಲವೆಂಬುದು ಅವರಿಗೆಲ್ಲಾ ಚೆನ್ನಾಗಿ ಗೊತ್ತು. ಅದನ್ನು ಬಿಟ್ಟು ತಾವೇ ಸ್ವತಃ ಸ್ವಲ್ಪ ಶ್ರಮದಿಂದ ತಮ್ಮ ಬಾಳನ್ನು ಹೆಚ್ಚು ಆನಂದಗೊಳಿಸಿಕೊಳ್ಳು ವಂತಹವಿಷಯಗಳ ಬಗ್ಗೆ ಬರೆಯುವುದೇ ಆಧುನಿಕ ಕಥೆಗಳಲ್ಲಿ ಬಂದಿರುವ ವಿಶೇಷ ಬದಲಾವಣೆ. ಇಷ್ಟೆಲ್ಲಾ ನಾನು ಹೇಳಿದ ಕಾರಣ ನೀವು ಹೇಳಿದಿರಲ್ಲಾ 'ಕಾಲ ಕ್ಷೇಪಕ್ಕೆ ಪರವಾಗಿಲ್ಲ' ಎಂದು ಅದಕ್ಕಾಗಿ. ಇಪ್ಪತ್ತು ವರ್ಷಗಳ ಹಿಂದೆ ಒಬ್ಬ ಲೇಖಕ ಬರೆದಿರುವ ಪುಸ್ತಕ 'ಸ್ಪ್ರಾಂಗ್ ಮೆಡಿಸನ್' ಇದು. ಇದನ್ನು ಓದಿದ ನಂತರ ಯಾವ ಹೆಣ್ಣಾದರೂ ತನ್ನ ಚೊಚ್ಚಲ ಹೆರಿಗೆಯ ಮೊದಲ ದಿನಗಳಲ್ಲಿ ಡಾಕ್ಟರನ್ನು 'ಮನೆಗೆ ಹೋದ ನಂತರ ತನ್ನ ಅಂಗಾಂಗಗಳಲ್ಲಿ ಬದಲಾವಣೆ ನನ್ನ ಗಂಡನಿಗೆ ಗೊತ್ತಾಗದಂತಿರಲು ಏನು ಮಾಡಬೇಕು?' ಎಂದು ಕೇಳುವ ಸಾಹಸವನ್ನು, ಮನಃಸ್ಥೈರ್ಯವನ್ನೂ ಪಡೆದರೆ ಸಾಕು. ಅದಕ್ಕಿಂತಲೂ ದೊಡ್ಡ ದಾದ ಸಾಮಾಜಿಕ ಪ್ರಯೋಜನ ಬೇರೇನು ಬೇಕು?"

ವಿಜ್ಞಾನದ ಬಗ್ಗೆ ಡಾಕ್ಟರಿಗಿಂತಲೂ ಹೆಚ್ಚು ಅಧಿಕಾರಯುತವಾಗಿ ಒಂದು ರೀತಿಯ ಆವೇಶದಲ್ಲಿ ಮಾತನಾಡಿದ ಆಕೆಯ ಮಾತುಗಳಲ್ಲಿ ಆವೇಶ ಕ್ಕಿಂತಲೂ ಬಾಳಿನ ಬಗ್ಗೆ ಆಕೆಗಿದ್ದ ಆತ್ಮವಿಶ್ವಾಸವೇ ಹೆಚ್ಚಾಗಿ ಕಾಣಿಸುತ್ತಿತ್ತು. ಇದನ್ನು ಎಲ್ಲರೂ ಯೋಚಿಸುವಂತಾದರೆ ಅದಕ್ಕಿಂತಲೂ ದೊಡ್ಡ ಸಾಧನೆ ಬೇರೇನು? ಇದೇ ಸಾಧಿತವಾದರೆ ರಾತ್ರಿಗಳಲ್ಲಿ ಹೆಣ್ಣು ಸೀರೆಯಲ್ಲಿ ಬಂಧಿತ ವಾದ ಕುರುಡು ಹಸುವಾಗಿ ಬದುಕುವುದಿಲ್ಲ.

ಆದರೆ ಯೋಚನೆಯೇ ಬೇರೆ, ಆಚರಣೆಯೇ ಬೇರೆ. ತುಂಬಾ ಮಂದಿಯ ಆಚರಣೆ ಆಲೋಚನೆಯ ಬಳಿಗೆ ಬಂದು ಅಲ್ಲಿಯೇ ಸಲ್ಲುತ್ತದೆ.

ಡಾಕ್ಟರ್ ಮೌನವನ್ನು ಬೇರೊಂದು ರೀತಿಯಾಗಿ ಅರ್ಥಮಾಡಿಕೊಂಡು ಕೇದಾರಗೌರಿ ತನ್ನ ಮಾತಿಗೆ ತಾನೇ ನಾಚಿಕೊಂಡು "ನನ್ನ ಮಾತು ತುಂಬಾ ಹೆಚ್ಚಾಯಿತೇನೋ!" ಎಂದು ಸಂಶಯ ವ್ಯಕ್ತಪಡಿಸಿದಳು.

"ಅಂಥಾದ್ದೇನೂ ಇಲ್ಲ."

ನಾನು ಕೇಳಬೇಕೆಂದಿದ್ದು ಇದಲ್ಲ ಡಾಕ್ಟರ್. ಅಸಾಧಾರಣವಾಗಿ ತೂಕ ಹೆಚ್ಚುತ್ತಿರುವ ಈ ಮಗುವಿನಿಂದ ಸಿಜೇರಿಯನ್ ಆಗಬೇಕೇ ಎಂದು. ಮಾತು ಎಲ್ಲಿಗೋ ಹೋಯಿತು."

"ಇಲ್ಲ, ಮಗುವಿನ ತೂಕಕ್ಕೂ ಅದಕ್ಕೂ ಸಂಬಂಧವಿಲ್ಲ."

ಇವರಿಂದ ಆಕೆಗೆ ಏನೋ ತೃಪ್ತಿಯಾದಂತೆ ಸಂತೋಷ ಕಾಣಿಸಿ

ಕೊಂಡಿತು. "ಹಾಗಿದ್ದರೆ ನನಗೊಂದು ಮಾತು ಕೊಡಿ."

"ಏನು?"

"ಸಿಜೇರಿಯನ್ ಮಾಡದಿದ್ದರೆ ನನಗೆ ಮತ್ತು ಕೊಡ್ತೀರಲ್ಲ ಹುಟ್ಟಿದ ಮಗುವನ್ನು ಅದು ಹುಟ್ಟುತ್ತಲೇ ನನ್ನ ಪಕ್ಕದಲ್ಲೇ ಮಲಗಿ ...ಕು."

"ಆದರೆ ಅದರಿಂದ..."

"ಅದರಿಂದ ವೈಜ್ಞಾನಿಕವಾಗಿ ನಷ್ಟವೇ ಕಾಣಿಸಿದರೂ ಮಾನಸಿಕವಾಗಿ ತಾಯಿಗೆ ಅದರಿಂದ ದೊರೆಯುವ ತೃಪ್ತಿ ತೀರಾ ಹೆಚ್ಚು. ಆ ಲಾಭದ ಮುಂದೆ ನಷ್ಟವು ತೀರಾ ಗೌಣ, ಹೌದು ತಾನೆ?"

ರಂಗಪ್ರಸಾದ್ ಮಾತನಾಡಲಿಲ್ಲ. ಆದರೂ 'ಈಕೆಗೆ ತುಂಬಾ ಹೆಚ್ಚು ಸಂಗತಿಗಳು ಗೊತ್ತಿವೆ' ಎಂದುಕೊಂಡ ತನ್ನಲ್ಲೇ.

"ಹುಟ್ಟುತ್ತಲೇ ತೊಟ್ಟಿಲಿನಲ್ಲಿ ಮಲಗುವ ಶಿಶುವಿಗಿಂತಲೂ ಹುಟ್ಟಿದ ಕ್ಷಣ ದಿಂದ ತನ್ನ ಪಕ್ಕದಲ್ಲಿಯೇ ಇರುವ ಮಗುವಿನ ಬಗ್ಗೆ ಹೆಚ್ಚು ಪ್ರೇಮ ಮೂಡು ತ್ತದೆ ಎಂದು ಒಬ್ಬ ಮನಶ್ಶಾಸ್ತ್ರಜ್ಞ ಬರೆದಿದ್ದುದನ್ನು ಓದಿದ್ದೆ. ಅದೇ ನಿಜ ವಾದರೆ ನೀವು ನನಗೆ ಆ ಸಹಾಯ ಮಾಡಬೇಕು. ಇದಕ್ಕೆಅಡ್ಡಿ ಹೇಳಬಾರದು.

"ಸಾಧ್ಯವಿದ್ದರೆ ಖಂಡಿತ ಮಾಡುತ್ತೇನೆ" ಎಂದು ಹೇಳಿ ರಂಗಪ್ರಸಾದ್ ಅಲ್ಲಿಂದ ಹೊರಕ್ಕೆ ಬಂದ.

ಮತ್ತೆ ಆಕೆ ಪಕ್ಕದಲ್ಲಿದ್ದ ಪುಸ್ತಕ ಕೈಗೆತ್ತಿಕೊಂಡಳು. ಓದುತ್ತಿದ್ದಂತೆಲ್ಲಾ ಆ ಪುಸ್ತಕ ಅವಳಿಗೆ ತುಂಬಾ ಹಿಡಿಸಿತು.

ಹೊರಗೆ ನಿಂತು ಕಂಭಕ್ಕೆ ಒರಗಿಕೊಂಡು ಕತ್ತಲನ್ನು ನೋಡುತ್ತಿದ್ದ ರಂಗಪ್ರಸಾದ್. ಮನಸ್ಸು ಮಾತ್ರ ವ್ಯಾಕುಲಗೊಂಡಿತ್ತು. ಆಕೆಯ ತೃಪ್ತಿಗಾಗಿ ಟಿ.ವಿ. ಸ್ಕ್ರೀನ್ ಬಗ್ಗೆ ಹೇಳಿದ್ದ. ಎಕ್ಸ್-ರೇ ಬಗ್ಗೆ ಆತನಿಗೆ ದೃಢವಾದ ಕೆಲವು ಅಭಿಪ್ರಾಯಗಳಿದ್ದವು. ಇಷ್ಟು ದಿನ ತಡೆದಿದ್ದಾಯಿತು. 'ಇನ್ನೆರಡು ಮೂರು ದಿನಗಳಿಗಾಗಿ ಏಕೆ ಆತುರ? ಏನು ನಡೆಯಬೇಕಾಗಿದೆಯೋ ನಡೆಯಲಿ' ಎಂದುಕೊಂಡ.

ಕಳೆದ ಹತ್ತು ದಿನಗಳಿಂದ ವಿಪರೀತವಾಗಿ ಬೆಳೆಯುತ್ತಿರುವ ತೂಕ ಮಾತ್ರ ಆತನನ್ನು ಕಳವಳಗೊಳಿಸಿತ್ತು.

* * * *

ಮಾಂಸದ ಮುದ್ದೆಯಂತೆ ಒಳಕ್ಕೆ ಬಿದ್ದ ಪಾಡೋ ಬಳಿಗೆ ರಂಜಿತ ಒಂದೇ ಹೆಜ್ಜೆಗೆ ಹಾರಿಬಂದಳು. ಪಾಡೋ ಬಲವಾಗಿ ಉಸಿರಾಡುತ್ತಿದ್ದ. ಮೈ ಮೇಲೆ ಯಾವ ಗಾಯಗಳೂ ಇಲ್ಲ. ಆದರೆ ಬಲವೆಲ್ಲಾ ಕಳೆದುಕೊಂಡಿರು ವಂತೆ ಆತನ ಮುಖ ನೋಡುತ್ತಲೇ ಗೊತ್ತಾಗುತ್ತಿತ್ತು. ಕೂದಲೆಲ್ಲಾ ಕೆದ

ರಿತ್ತು. ನೊಸಲೆಲ್ಲಾ ಬೆವರಿನಿಂದ ತುಂಬಿತ್ತು.

ಅವರನ್ನು ಆ ಕೋಣೆಯಲ್ಲಿ ಕೂಡಿಹಾಕಿ ಮೂವತ್ತಾರು ಗಂಟೆಯಾಗುತ್ತಾ ಬಂದಿತ್ತು. ಮೊದಲ ದಿನವೂ ಅದೇ ಸಮಯಕ್ಕೇ ಹೊರಕ್ಕೆ ಕರೆದುಕೊಂಡು ಹೋಗಿ ಅರ್ಧಗಂಟೆಯ ನಂತರ ಕರೆತಂದು ಬಿಸುಟು ಹೋಗಿದ್ದರು. ಈ ದಿನ ಒಂದು ಗಂಟೆ....

ರಂಜಿತಾಳಿಗೆ ಭಯವಾಯಿತು. ಏನು ನಡೆಯುತ್ತದೋ—ಅವರೇನು ಮಾಡುತ್ತಾರೋ ಗೊತ್ತಾಗುತ್ತಿಲ್ಲ.

ಅಷ್ಟರಲ್ಲಿ ಷಾಡೋ ಚಲಿಸಿದ್ದು ಕಾಣಿಸಿತು. ರಂಜಿತಾ ಅವನ ಮುಖದ ಮೇಲಣ ಬೆವರನ್ನು ಒರೆಸಿದಳು. ನಿಶ್ಶಕ್ತನಾಗಿ ನೀರು ಬೇಕೆನ್ನುವಂತೆ ಸನ್ನೆ ಮಾಡಿದ. ಆ ಕೋಣೆಯ ಒಂದು ಮೂಲೆಯಲ್ಲಿ ಹೂಜಿಯೊಂದಿತ್ತು. ಎರಡು ದಿನಗಳಿಂದ ಆ ನೀರನ್ನೂ ಅವರು ಬದಲಿಸಿರಲಿಲ್ಲ. ಆದರೂ ಆ ಸಮಯದಲ್ಲಿ ಅಷ್ಟಾದರೂ ಇರುವುದಕ್ಕಾಗಿ ಆಕೆ ಸಂತೋಷಗೊಂಡು ನೀರು ತಂದುಕೊಟ್ಟಳು.

ಅರ್ಧಗಂಟೆಯ ನಂತರ ಸ್ವಲ್ಪ ಎಚ್ಚತ್ತ. ನಿಧಾನವಾಗಿ ಕಣ್ತೆರೆದ. ಅವನ ಕಣ್ಣೆಲ್ಲಾ ಕೆಂಪಾಗಿತ್ತು. ಕಣ್ರೆಪ್ಪೆಗಳು ಬೆಳ್ಳಗೆ ಬಿಳಿಚಿಕೊಂಡಿದ್ದವು. ತುಂಬಾ ಕ್ಷೀಣವಾದ ಕಂಠದಲ್ಲಿ "ಅವರು....ಅವರು ಬ್ರೈಯಿನ್‌ವಾಷ್ ಮಾಡ್ತಿದಾರೆ...." ಎಂದ.

ಆ ಮಾತು ಪೂರ್ಣ ಮಾಡುತ್ತಿದ್ದಂತೆಯೇ ತಲೆ ಪಕ್ಕಕ್ಕೆ ವಾಲಿತು.

* * * *

ಕಂಭಕ್ಕೆ ಒರಗಿ ನಿಂತಿದ್ದ ರಂಗಪ್ರಸಾದ್ ಹೆಜ್ಜೆಯ ಸಪ್ಪಳವಾಗುತ್ತಲೇ ತಿರುಗಿನೋಡಿದ. ಪಾರ್ವತಮ್ಮ—ಸಿದ್ಧಾರ್ಥನ ತಾಯಿ-ಹೋಗುತ್ತಿದ್ದಳು. ಈ ಸಮಯದಲ್ಲಿ ಹೋಗುವುದೆಲ್ಲಿಗೆ? ಅದನ್ನೇ ಡಾಕ್ಟರ್ ಕೇಳಿದರು "ಎಲ್ಲಿಗೆ ಹೋಗ್ತಿದೀರಮ್ಮಾ?"

ಆಕೆ ನಿಂತು ಒಂದು ಕ್ಷಣಕಾಲ ದಿಟ್ಟಿಸಿ ನೋಡಿ "ಓ ನೀವಾ ಡಾಕ್ಟರೇ... ಬಟ್ಟೆ ತರೋದು ಮರ್‍ತಿದ್ದೆ. ಮನೆಗೆ ಹೋಗಿ ತಂದ್ಬಿಡ್ತೀನಿ...." ಎನ್ನುತ್ತಾ ಎರಡಡಿ ಮುಂದಿರಿಸಿದಳು. ಡಾಕ್ಟರೂ ಮೆಟ್ಟಲಿಳಿಯುತ್ತಿದ್ದುದನ್ನು ಗಮನಿಸಿ "ಇಷ್ಟು ಹೊತ್ತಿನಲ್ಲಿ ನೀವ್ಯಾಕೆ ಡಾಕ್ಟ್ರೇ?...." ಎಂದು ಕೇಳಿದಳು.

"ತುಂಬಾ ಕತ್ತಲಾಗಿದೆ. ನಡೀರಿ ಹೋಗೋಣ...." ಎನ್ನುತ್ತಾ ಆಕೆಯೊಡನೆ ಹೆಜ್ಜೆ ಹಾಕಿದರು.

ಐದು ನಿಮಿಷಗಳಲ್ಲಿ ಅವರು ಮನೆ ತಲುಪಿದರು.

"ಕೂತುಕೊಳ್ಳಿ ಡಾಕ್ಟರೇ, ಐದು ನಿಮಿಷದಲ್ಲಿ ಬರ್‍ತೀನಿ" ಎನ್ನುತ್ತಾ ಒಳಕ್ಕೆ ಹೋದಳು ಆಕೆ. ಡಾಕ್ಟರ್ ಕುಳಿತುಕೊಳ್ಳದೆ ಹೊರಗಿನ ಬಳ್ಳಿಯನ್ನು

ನೋಡುತ್ತಿದ್ದ.

"ಸ್ವಲ್ಪ ಮಜ್ಜಿಗೆ ಕುಡೀತೀರಾ ಡಾಕ್ಟರೇ?"ಎಂದು ಒಳಗಿನಿಂದ ಕೇಳಿಸಿದ ಮಾತಿಗೆ "ಬೇಡಮ್ಮಾ" ಎಂದು ಉತ್ತರಿಸಿದ. ಆಗ ಡಾಕ್ಟರ್ ದೃಷ್ಟಿಗೆ ಬಾಗಿಲ ಬಳಿ ಇದ್ದ ದೊಡ್ಡ ಫೋಟೋ ಮೇಲೆ ಬಿತ್ತು. ಮೊದಲು ಏನೋ ಅನುಮಾನವಾಯಿತು. ಕ್ಷಣಗಳಲ್ಲಿ ಅದು ವೃದ್ಧಿಸಿತು. ಬಳಿಗೆ ಹೋಗಿ ಆ ಫೋಟೋವನ್ನು ಪರೀಕ್ಷಾ ದೃಷ್ಟಿಯಿಂದ ನೋಡಿದ.

ಆ ಫೋಟೋ—ವಿಲಿಯಮ್ಸ್‌ದು!

ಅಂತಹ ಅಚ್ಚರಿಯನ್ನು ತನ್ನ ಜೀವನದಲ್ಲಿ ಆತ ಅನುಭವಿಸಿಯೇ ಇರಲಿಲ್ಲ. ರಂಗಪ್ರಸಾದ್ ಮನಃ ಪಟಲದಲ್ಲಿ ವಾಕಿಂಗ್ ಸ್ಟಿಕ್ ಹಿಡಿದು ಕುಂಟುತ್ತಾ ತನ್ನ ಬಳಿಗೆ ಬಂದು 'ನಾನೇ ನಿನ್ನ ತಂದೆ' ಎಂದು ಹೇಳಿದ ವಿಲಿಯಮ್ಸ್ ಕಾಣಿಸಿಕೊಂಡ. ಅದೇ ಮುಖ. ಆತನದೇ ಫೋಟೋ.... ಇಲ್ಲಿಗೆ ಹೇಗೆ ಬಂತು?

ಅಷ್ಟರಲ್ಲಿ ಒಳಗಿಂದ ಹೊರಕ್ಕೆ ಬಂದ ಪಾರ್ವತಮ್ಮನನ್ನು ನೋಡಿ, ಆಕೆಗೆ ಫೋಟೋ ತೋರಿಸುತ್ತಾ "ಇದ್ಯಾರ ಫೋಟೋ?" ಎಂದು ಕೇಳಿದ ಡಾಕ್ಟರ್.

ನನ್ನ ಸೊಸೆಯ ತಂದೆಯವರು ಡಾಕ್ಟರ್ ಭವಾನಿಶಂಕರ್ ಅಂತ. ಇತ್ತೀಚೆಗೆ ತೀರಿಕೊಂಡರು...."

ಭವಾನಿಶಂಕರ್ ಕುಂಟನಲ್ಲ, ಡಾಕ್ಟರಂತೂ ಅಲ್ಲವೇ ಅಲ್ಲ. ಇದು 'ಅಸಾಧ್ಯ' ಎಂದುಕೊಂಡ. ರಂಗಪ್ರಸಾದ್ ಮಿದುಳನ್ನು ಯಾರೋ ಅದುಮಿ ಹಿಡಿದಂತೆ ಭಾಸವಾಯಿತು. ಆಸ್ಪತ್ರೆಗೆ ಹೋಗುತ್ತಲೇ ಗೌರೀ ಇದ್ದ ಕೋಣೆಗೆ ಹೋದ.

ಆಗ್ಗೆ ಆಕೆ ನಿದ್ರಿಸುತ್ತಿದ್ದಳು. ಆಕೆಯನ್ನು ಎಚ್ಚರಿಸಿ ಕೇಳುವುದು ಸರಿಯಲ್ಲ ಎನಿಸಿತು. ಆದರೆ ಉತ್ಸುಕತೆ ಬೆಳಗಿನವರೆಗೂ ಕಾಯುವಂತಿಲ್ಲ.

ಅಷ್ಟರಲ್ಲಿ ಡಾಕ್ಟರರ ಮನದ ಮಾತನ್ನು ಕೇಳಿದವಳಂತೆ ಗೌರೀ ಚಲಿಸಿ, ಕಣ್ತೆರೆದಳು. ಬಾಗಿಲ ಬಳಿ ನಿಂತಿದ್ದ ಡಾಕ್ಟರನ್ನು ಗುರ್ತಿಸಲಾರದೆ "ಯಾರದು"? ಎಂದು ಕೇಳಿದಳು.

"ನಾನೇ"

ಎದ್ದು ಹಾಸಿಗೆಯಲ್ಲಿ ಕುಳಿತುಕೊಳ್ಳಲು ಪ್ರಯತ್ನಿಸುತ್ತಿದ್ದರೆ ಅದನ್ನು ತಡೆಯುತ್ತಾ "ನಿಮ್ಮ ನಿದ್ರೆ ಕೆಡಿಸಿದೆನೆ?" ಎಂದು ಕೇಳಿದ.

"ಇಲ್ಲ ಡಾಕ್ಟರೇ ಏನು ಹೇಳಿ" ಎಂದು ಕೇಳಿದಳು. ಡಾಕ್ಟರ್ ಇಷ್ಟು ಹೊತ್ತಿನಲ್ಲಿ ಬಂದದ್ದು ನೋಡಿ ಆಶ್ಚರ್ಯವಾಗಿತ್ತು.

"ಈಗ ತಾನೇ ನಿಮ್ಮ ಮನೆಗೆ ಹೋಗಿದ್ದೆ. ಅಲ್ಲಿ ನಿಮ್ಮ ತಂದೆಯ

ಫೋಟೋ ನೋಡಿದೆ. ನಮ್ಮ ತಂದೆಯ ಬಳಿ ಅಸಿಸ್ಟೆಂಟಾಗಿ ಒಬ್ಬ ಡಾಕ್ಟರ್ ಇದ್ದರು....ವಿಲಿಯವ್ಸ್ ಅಂತ ಅವರ ಹೆಸರು. ಅವರಿಗೂ ನಿಮ್ಮ ತಂದೆಯವರಿಗೂ ತುಂಬಾ ಹತ್ತಿರದ ಹೋಲಿಕೆಗಳಿವೆ. ಆ ಫೋಟೋ ನೋಡಿ ಇಬ್ಬರೂ ಒಂದೇ ಎಂದುಕೊಂಡಿದ್ದೆ! ಇದು ಹೇಗೆ ಸಾಧ್ಯವೋ ಅರ್ಥನಾಗಲಿಲ್ಲ."

"....ವಿಲಿಯವ್ಸ್?"

"ಹೌದು"

"ಅವರು ನಮ್ಮ ದೊಡ್ಡಪ್ಪ" ಎಂದಳು ಕೇದಾರಗೌರೀ.

ರಂಗಪ್ರಸಾದ್ ನಿಶ್ಚೇಷ್ಟಿತನಾದ. ಅಷ್ಟರಲ್ಲಿ ಇನ್ನೊಂದು ಅನುಮಾನ "ನೀವೇನು ಕ್ರೈಸ್ತರೇ?"

"ಅಲ್ಲ"

"ಹಾಗಿದ್ದರೆ..."

"ನಮ್ಮ ತಾತನಿಗೆ ಒಂದು ರೀತಿಯ ಹುಚ್ಚು. ತುಂಬಾ ಹಣವಿದ್ದ ಕಮ್ಯುನಿಸ್ಟರು ಆಚರಣೆ ಮಾತ್ರವೇ ಇಲ್ಲ. ಹಣದ ಸಂಪಾದನೆಗೆ ಬಿಡಲೇ ಇಲ್ಲ. ಆದರೂ ತಮ್ಮ ಮಕ್ಕಳಿಗೆ ವಿಲಿಯವ್ಸ್ ಮತ್ತು ಶಂಕರಶಾಸ್ತ್ರೀ ಎಂದು ನಾಮಕರಣ ಮಾಡಿ ತಮ್ಮ ಜಾತ್ಯತೀತತೆಯನ್ನು ಪ್ರಕಟಿಸಿಕೊಂಡರು. ಆದರೆ ನಂತರದಲ್ಲಿ ನಮ್ಮ ತಂದೆ ತಮ್ಮ ಹೆಸರನ್ನು ಭವಾನಿಶಂಕರ್ ಎಂದು ಬದಲಿಸಿಕೊಂಡರು" ಎಂದು ತನ್ನ ಮಾತು ನಿಲ್ಲಿಸಿದಳು ಗೌರೀ.

ರಂಗಪ್ರಸಾದ್ ಅವಳು ಮಾತು ನಿಲ್ಲಿಸಿದರೂ ಅವಳತ್ತಲೇ ನೋಡುತ್ತಾ ನಿಂತಿದ್ದ. ಗೌರಿ ತನ್ನ ತಂಗಿ—ಚಿಕ್ಕಪ್ಪನ ಮಗಳು.

ಎಂಥಾ ಮಧುರ ಬಾಂಧವ್ಯ, ಆದರೆ ಇದನ್ನು ಹೊರಕ್ಕೆ ಹೇಳಲು ಸಾಧ್ಯವಿಲ್ಲದ ಸತ್ಯ!

ಯಾರೋ ಮಾಡಿದ ಮೋಸದಿಂದ ಹೆಣ್ಣಿಗೆ ಅಕ್ರಮ ಸಂತಾನ ಉಂಟಾಗುವುದು....ಆ ಹೆಣ್ಣು ಅದನ್ನು ಹೇಳಿಕೊಳ್ಳಲಾರದೆ ತನ್ನಲ್ಲಿ ತಾನೇ ಬೆಂದು ಹೋಗುವುದು—ಇವೆಲ್ಲಾ ಚರಿತ್ರೆಯಲ್ಲಿ ತೀರಾ ಸಾಮಾನ್ಯವಾಗಿ ನಡೆಯುವ ಮಾಮೂಲಿ ಸಂಗತಿಗಳು. ಆದರೆ ಒಬ್ಬ ಗಂಡಸು ತನ್ನ ತಂದೆ ಯಾರೆಂಬುದನ್ನು ಹೇಳಲಾರದೆ ನೋವನ್ನು ಅನುಭವಿಸುವುದು ತಾನೇ ಮೊದಲಿನವನೇನೋ? ಆರ್ಟಿಫಿಷಿಯಲ್ ಇನ್‌ಸೆಮಿನೇಷನ್—ಹೆಲ್ ವಿತ್ ಇಟ್ (ಕೃತಕ ಗರ್ಭಧಾರಣೆ ಹಾಳಾಗಿ ಹೋಗಲಿ).

"ಯಾಕೆ ಡಾಕ್ಟರೇ ಹಾಗಿದ್ದೀರಿ?"

"ಏನೂ ಇಲ್ಲಮ್ಮ...."

ಡಾಕ್ಟರ್ ಮೌನವನ್ನು ಬೇರೊಂದು ಬಗೆಯಾಗಿ ಅರ್ಥಮಾಡಿಕೊಳ್ಳುತ್ತಾ "ಅದು ನನ್ನ ತಂದೆಯವರ ಹಿಂದಿನ ಫೋಟೋ. ಅದನ್ನೇ ಎನ್‌ಲಾರ್ಜ್ ಮಾಡಿಸಿದೆ. ಅದೇ ನಿಮಗೆ ಹಾಗೆ ಕಾಣಿಸಿರಬೇಕು. ನನ್ನ ತಂದೆ, ದೊಡ್ಡಪ್ಪ ಇಬ್ಬರಿಗೂ ತುಂಬಾ ಹೋಲಿಕೆ ಇತ್ತು."

"ನಿಮ್ಮ ದೊಡ್ಡಪ್ಪನವರಿಗೆ ಒಂದು ಕಾಲು ಇರಲಿಲ್ಲ ಅಲ್ಲವೇ?"

"ಹೌದು, ಒಂದು ಆಕ್ಸಿಡೆಂಟಿನಲ್ಲಿ ಹೋಯಿತು. ಬೆನ್ನು ಮೂಳೆಗೂ ಪೆಟ್ಟಾಗಿತ್ತು. ಅಂದಿನಿಂದ ಏನೋ ಕಳೆದುಕೊಂಡವರಂತೆ ಇರುತ್ತಿದ್ದರು. ಕೊನೆಯ ತನಕ ನಮ್ಮ ಮನೆಯಲ್ಲೇ ಇದ್ದರು.

"ಕೊನೆಯ ತನಕ....ಎಂದರೆ ಅವರೂ ತೀರಿಕೊಂಡರೇನು?" ಎಷ್ಟು ನಿರ್ಲಿಪ್ತನಾಗಿರಲು ಪ್ರಯತ್ನಿಸಿದರೂ ವಿಷಾದದ ಛಾಯೆ ದೂರವಾಗಲಿಲ್ಲ.

ಹೌದು. ಹುಚ್ಚು ನಾಯಿಯೊಂದು ಕಚ್ಚಿ ಸತ್ತರು"

ರಂಗಪ್ರಸಾದ್‌ಗೆ ವಿದ್ಯುತ್ ಆಘಾತವಾದುದಂತಾಯಿತು—ಹುಚ್ಚು ನಾಯಿ ಕಚ್ಚಿತು! ಅಪ್ರಯತ್ನವಾಗಿ ಹಣೆಯ ಮೇಲಿಂದ ಎರಡು ಬೆವರ ಹನಿಗಳು ಕೆಳಗುರುಳಿದವು.

ಡಾಕ್ಟರ್ ವಿಲಿಯಮ್ಸ್ ನಾಯಿ ಕಚ್ಚಿ ಸತ್ತ.

ರಂಗಪ್ರಸಾದ್ ಮನಃಪಟಲದಲ್ಲಿ ಕೆಲವು ಜೋಡಿ ನಾಯಿಗಳು ಕಾಣಿಸಿಕೊಂಡವು. ಬಲವಾಗಿ, ಎತ್ತರವಾಗಿದ್ದ ಬೇಟೆ ನಾಯಿಗಳು....ತಾನು ಅವನ್ನು ನೋಡಿರುವುದೆಲ್ಲಿ?

ಇಕ್ಕಟ್ಟಾದ ಸಣ್ಣ ರಸ್ತೆ, ಎರಡೂ ಕಡೆ ಎತ್ತರವಾದ ಗೋಡೆ ಬಚ್ಚಲ ನೀರಿನಿಂದ ಒದ್ದೆಯಾದ ಸಿಮೆಂಟ್ ರಸ್ತೆ...ಹಸುರಾದ ಗಿಡಗಳ ರಾಶಿ. ಅದರ ಮಧ್ಯೆ ಜೊಲ್ಲು ಸುರಿಸುತ್ತಾ ಓಡಾಡುತ್ತಿರುವ ನಾಯಿಗಳು...ತಾನೆಲ್ಲಿಯೋ ನೋಡಿದ್ದೇನೆ. ಎಲ್ಲಿ?....ಎಲ್ಲಿ?

## ೩೪

ಅವರಿಬ್ಬರೂ ಚಲಿಸುತ್ತಿರುವ ಅಸ್ಥಿಪಂಜರಗಳಂತೆ ಕಾಣಿಸುತ್ತಿದ್ದಾರೆ. ತಲೆಯ ಮೇಲೆ ಸಂಗ್ರಹವಾಗುತ್ತಿದ್ದ ಮಂಜನ್ನು ಒರೆಸಿಕೊಳ್ಳಲು ಸಾಧ್ಯವಿಲ್ಲದವರಂತೆ ನಡೆಯುತ್ತಿದ್ದಾರೆ. ಚಳಿಯ ರಾತ್ರಿ ಅವರಲ್ಲಿ ಶಕ್ತಿಯನ್ನು ಸೆಳೆದು

ನುಂಗಿದೆ. ಅವರ ಊಟದ ಸಂಗ್ರಹ ಮುಗಿದಿದೆ. ಉಳಿದಿರುವುದು ಹಗ್ಗ, ಏಕ್ಸ್ ಮಾತ್ರವೇ.

ದೂರದಲ್ಲಿ ಚಿಕ್ಕ ಶಿಖರವೊಂದು ಕಾಣಿಸಿತು. ಅದನ್ನು ದಾಟಿದರೆ ನಂತರದಲ್ಲಿ ಜನಸಂಚಾರ ಕಾಣಿಸಬಹುದೇನೋ ಎಂಬ ಆಸೆಯೇ ಅವರನ್ನು ಅಲ್ಲಿಯ ತನಕ ನಡೆಸಿತ್ತು. ಅದುವರೆಗೂ ಅದೇ ರೀತಿ ಹಲವು ಶಿಖರಗಳನ್ನು ಆಸೆಯಿಂದ ಏರಿ ಮತ್ತೆ ಬಿಳಿಯ ಮಂಜನ್ನು ಹೊತ್ತ ಶಿಖರಗಳನ್ನೇ ನೋಡುತ್ತಿದ್ದರು. ಕಣ್ಣಿನ ದೃಷ್ಟಿ ಹರಿಯುವಷ್ಟು ದೂರ ಆವರಿಸಿರುವ, ಅಂತ್ಯವೇ ಇಲ್ಲದಂತೆ ಕಾಣುವ ಮಂಜು. ಅದನ್ನು ಕಾಣುತ್ತಲೇ ನಿರಾಸೆಯಿಂದ ದುಃಖ ಒತ್ತರಿಸಿ ಬರುತ್ತಿತ್ತು. ಮತ್ತೆ ನಡೆಯುವುದು–ಸಣ್ಣ ಗುಡ್ಡಗಳೂ ಹತ್ತಿಯ ಗುಡ್ಡಗಳಂತೆ ಕಾಣಿಸುತ್ತಿದ್ದವು. ಈ ರೀತಿ ದಾಟಿ ನಡೆಯುತ್ತಾ ಮುಂದೆ ಸಾಗಿಬರುತ್ತಿದ್ದಾಗ ಅಕಸ್ಮಾತ್ತಾಗಿ ಒಂದು ಕಡೆ ನಿಂತರು. ಅದನ್ನು ಮನೋಹರ ಎನ್ನಬೇಕೋ ಭಯಂಕರ ಎನ್ನಬೇಕೋ ಅವರ ಮನಸ್ಸು ಮಾತ್ರ ಗಡಗಡನೆ ನಡುಗಿತು. ಅಷ್ಟೊಂದು ದೊಡ್ಡದಾದ ಹಿಮಪ್ರವಾಹವನ್ನು ಅವರು ಊಹಿಸುವ ಸ್ಥಿತಿಯಲ್ಲೂ ಇರಲಿಲ್ಲ. ಒಂದು ಅಗ್ನಿಪರ್ವತದಿಂದ ಅರೆ ಕರಗಿದ ಲಾವಾ ಸಾಗಿ ಬರುವಂತೆ, ಮಂಜು ಮುಂದೆ ಸಾಗುತ್ತಿದೆ. ಘನಪದಾರ್ಥ ಉಂಡೆ ಉಂಡೆಯಾಗಿ ಹಾಗೆ ಹೋಗುತ್ತಿರುವುದು ಭರ್ಜರಿ ಆಹಾರವನ್ನು ನುಂಗಿದ ಹೆಬ್ಬಾವು ಮತ್ತಿನಿಂದ ನಿಧಾನವಾಗಿ ಸಾಗುತ್ತಿರುವಂತೆ ಕಾಣಿಸುತ್ತಿತ್ತು. ಗಮನಿಸಿ ನೋಡದಿದ್ದರೆ ಅಲ್ಲಿ ಪ್ರವಾಹವಿದೆ ಎಂದು ಗೊತ್ತಾಗುತ್ತಿರಲಿಲ್ಲ. ಮಂಜು ಎಂದುಕೊಳ್ಳುತ್ತಿದ್ದರು. ಮುಂದೆ ಹೋಗಿ ಜಲಪಾತವಾಗಿ ಧುಮುಕುತ್ತದೆ ಆ ವೇಗಕ್ಕೆ ಮಂಜು ನೀರಾಗಿ ನದಿಯಾಗಿ ಮುಂದೆ ಸಾಗುತ್ತದೆ. ಅದೇ ಬಹುಶಃ ಅಲಕನಂದಾ. ಅದರೊಂದಿಗೇ ಮುಂದೆ ಹೋದರೆ ಜನರನ್ನು ತಲುಪಬಹುದು. ಆದರೆ ಜಲಪಾತವಿರುವೆಡೆ ಹೋಗುವುದು ಹೇಗೆ? ಎರಡು ನೂರು ಅಡಿಗಳಿಗಿಂತಲೂ ಹೆಚ್ಚು ಆಳ ಇಳಿಯಬೇಕು. ಶಿಖರವೂ ಎತ್ತರವಾದದ್ದು.

.ಮಂಜು ನದಿಗೆ ಅತ್ತಕಡೆ ನೆಲ ಪರವಾಗಿಲ್ಲ ಎನಿಸುವಂತಿದೆ. ಆದರೆ ಅದಕ್ಕೆ 'ಹಿಮನದಿ' ದಾಟಬೇಕು.

'ದಾಟೋಣವೇ?' ಎನ್ನುವಂತೆ ರಾಕೇಶ್ ನೋಡಿದ.

ಸಿದ್ಧಾರ್ಥ ಬೇಡವೆಂದು ತಲೆಯಾಡಿಸಿ "ಹೊರಕ್ಕೆ,ಇದು ಹೀಗೆ ಕಾಣಿಸಿದರೂ ಇದರ ಅಂತರ್ವಾಹಿನಿ ತುಂಬಾ ವೇಗವಾಗಿ ಪ್ರವಹಿಸುತ್ತದೆ.ಆನೆಗಳನ್ನೇ ಸೆಳೆದುಕೊಂಡು ಹೋಗುವಷ್ಟು ಬಲವಾದದ್ದು ಈ ಪ್ರವಾಹ" ಎಂದ.

"ಮುಂದಿನ ಹಾದಿ?"

"ತುಂಬಾ ಹಿಂದಕ್ಕೆ ನಡೆದು ನದಿ ಸಾಕಷ್ಟು ಘನೀಭವಿಸಿರುವ ಸ್ಥಳದಲ್ಲಿ ಈ ನದಿಯನ್ನು ದಾಟಬೇಕು. ಅದೂ ಅಪಾಯಕ್ಕೆ ದೂರವೇನಲ್ಲ!"

"ಹಾಗೆ ಎಷ್ಟು ದೂರ ಹಿಂದೆ ಹೋಗಬೇಕು?"

"ಕನಿಷ್ಟ ಹತ್ತು ಮೈಲಿಯಾದರೂ ಹೋಗಬೇಕು."

"ಅಷ್ಟರಲ್ಲಿ ನಾವು ಸಾಯುವುದು ಖಂಡಿತ!"

"ಅದಕ್ಕೆ ಆ ಮಾರ್ಗ ಪ್ರಯೋಜನವಿಲ್ಲ. ನಮ್ಮ ಅದೃಷ್ಟವನ್ನು ಬೇರೊಂದು ರೀತಿಯಾಗಿ ಪರೀಕ್ಷಿಸಬೇಕು...."

"ಹೇಗೆ?"

"ಇತ್ತ ಕಡೆಯಿಂದಲೇ ಇಳಿದು, ನದಿಯನ್ನು ಈ ಕಡೆಯಿಂದಲೇ ಅನು ಸರಿಸುವುದು!"

"ರಾಕೇಶ್ ಆಳವನ್ನು ನೋಡುತ್ತಾ "ಇಷ್ಟೊಂದು ಆಳಕ್ಕೆ ಇಳಿಯು ವುದೇ? ಹೇಗೆ?" ಎಂದ.

"ಸಾಯುವ ಮೊದಲು ಒಂದು ಪ್ರಯತ್ನ ಮಾಡುವುದು ಒಳ್ಳೆಯದು."

ರಾಕೇಶ್ ಥಟ್ಟನೆ ತಲೆ ಎತ್ತಿ ನೋಡಿದ. ಆದರೆ ಸಿದ್ಧಾರ್ಥನ ಮುಖ ನಿರ್ವಿಕಾರವಾಗಿತ್ತು. ಸಾವು ಅನಿವಾರ್ಯವೆಂಬುದನ್ನು ಅರಿತ ನಂತರವೂ ಕೊನೆಯ ತನಕ ಪ್ರಯತ್ನ ಮಾಡಿದರೂ ಕೊನೆಗೆ ಸಾವನ್ನೂ ನಗುತ್ತಾ ಸ್ವಾಗತಿಸುವುದು ಧೀರರ ಲಕ್ಷಣ.

"ನದಿಯನ್ನು ದಾಟಿದರೆ ಒಳ್ಳೆಯದೇನೋ?...." ಎನ್ನುತ್ತಾ ರಾಕೇಶ್ ಯೋಚಿಸಿದ. ಇಂಥಾ ಅವಕಾಶವನ್ನು ಕಳೆದುಕೊಳ್ಳುವುದು ಸೂಕ್ತವೆನಿಸ ಲಿಲ್ಲ. ಸಿದ್ಧಾರ್ಥ ಬರದಿದ್ದರೆ ತಾನೇ ಹೋಗೋಣವೆಂದುಕೊಂಡ. ಅಷ್ಟರಲ್ಲಿ ಸಿದ್ಧಾರ್ಥ ತನ್ನ ಕಾಲಿನ ಬೂಟು ತೆಗೆಯತೊಡಗಿದ. ರಾಕೇಶನಿಗೆ ಏಕೆಂಬುದು ಅರ್ಥವಾಗಲಿಲ್ಲ. ಅದಕ್ಕೆ ಹಗ್ಗವನ್ನು ಕಟ್ಟಿ ನದಿಯಮೇಲೆ ಎಸೆದ. ಬೂಟು, ಮೆಲ್ಲನೆ ಚಲಿಸುತ್ತಿದ್ದ ಮಂಜಿನ ಮೇಲೆ ಬಿತ್ತು. ಒಂದು ಕ್ಷಣಕಾಲ ಮಂಜಿನ ಮೇಲೇ ಇದ್ದು ಕ್ರಮವಾಗಿ ಒಳಕ್ಕೆ ಇಳಿಯಿತು. ಆಷ್ಟೇ ನಂತರ ಅದರ ವೇಗ ವನ್ನು ಸಿದ್ಧಾರ್ಥನ ಕಾಲ ಬಳಿ ಇದ್ದ ಹಗ್ಗವೇ ಹೇಳಿತು. ಮಿಂಚಿನ ವೇಗದಲ್ಲಿ ಅದನ್ನು ಸಿದ್ಧಾರ್ಥ ಹಿಡಿಯದಿದ್ದಿದ್ದರೆ ಹಗ್ಗವೂ ಪ್ರವಾಹದಲ್ಲಿ ಸೇರಿಕೊಳ್ಳು ತ್ತಿತ್ತು.

ರಾಕೇಶ್ ಬೆಪ್ಪಾದ. ತನ್ನ ತೀರ್ಮಾನದಿಂದ ಎಂತಹ ಅಪಾಯದಲ್ಲಿ ಸಿಲುಕುತ್ತಿದ್ದನೆಂಬುದು ಅರ್ಥವಾಯಿತು.

"ಈ ಹಿಮನದಿಗಳ ಬಗ್ಗೆ ಓದಿದ್ದೆ" ಎಂದ ಸಿದ್ಧಾರ್ಥ ಹಗ್ಗವನ್ನೆಳೆದು

ಬೂಟನ್ನು ಹಿಂದಕ್ಕೆ ತೆಗೆದುಕೊಳ್ಳಲು ಮೂರು ನಿಮಿಷವಾಯಿತು.

"ಈಗೇನು ಮಾಡೋಣ?"

"ಒಮ್ಮೆ ಪ್ರಪಾತದ ಬಳಿಗೆ ಹೋಗಿ ನೋಡೋಣ. ಅಲ್ಲಿಂದ ಇಳಿಯಲು ಯಾವುದೇ ರೀತಿಯ ಅವಕಾಶವಾದರೂ ನಾವು ಅದೃಷ್ಟವಂತರೇ" ಎಂದ ರಾಕೇಶ್ ಏಕ್ಸ್ ಹಿಡಿದು, ಹಗ್ಗವನ್ನು ಕೈಗೆ ತೆಗೆದುಕೊಂಡ. ಅವರಲ್ಲಿ ಉಳಿದಿದ್ದು ಅವೆರಡೇ.

ಇಬ್ಬರೂ ಹತ್ತು ಹೆಜ್ಜೆ ನಡೆದರು. ಸಿದ್ಧಾರ್ಥ ನಿಂತ. ಅಲ್ಲಿಂದಲೇ ಹಳ್ಳ ಮೊದಲಾಗಿತ್ತು. ಇನ್ನೊಂದು ನೂರು ಗಜ ನಡೆಯುದೆ ಪ್ರಪಾತದ ಬಳಿಯ ಶಿಖರದ ಆಳ ಎಷ್ಟೆಂಬುದು ಗೊತ್ತಾಗುವಂತಿರಲಿಲ್ಲ.

ಸಿದ್ಧಾರ್ಥನು ರಾಕೇಶನ ಸೊಂಟಕ್ಕೆ ಹಗ್ಗವನ್ನು ಬಿಗಿದು ಇನ್ನೊಂದು ಅಂಚನ್ನು ತನ್ನ ಸೊಂಟಕ್ಕೆ ಕಟ್ಟಿಕೊಂಡ. ಮಂಜಿನ ಮೇಲೆ ನಡೆಯುವಾಗ ಅದು ತುಂಬಾ ಒಳ್ಳೆಯ ಪದ್ಧತಿ.

ಏಕ್ಸನ್ನು ಮಂಜಿನಲ್ಲಿ ಚುಚ್ಚುತ್ತಾ ಒಂದೊಂದೇ ಅಡಿ ಇರಿಸುತ್ತಾ ಸಾಗುತ್ತಿದ್ದರು. ಶಿಖರದ ಕೊನೆಯ ತನಕ ಹೋದಮೇಲೆ ಅದು ತೀರಾ ಕಡಿದಾಗಿ ಇಳಿದಿದ್ದರೆ ಮತ್ತೆ ಅಷ್ಟು ದೂರ ಹಿಂತಿರುಗಬೇಕಾದ್ದೇ. ಪಕ್ಕದಲ್ಲಿದ್ದ ಜಲಪಾತದ ಭೋರ್ಗರೆತ ಕಿವುಡು ಮಾಡುತ್ತಿದೆ. ನದಿಯ ವೇಗ ಗಮನಿಸಿದರೆ ಅಲ್ಲಿಂದ ಪಾರಾಗುವ ಆಸೆ ಸ್ವಲ್ಪವೂ ಇರಲಿಲ್ಲ.

ರಾಕೇಶ್ ಸ್ವಲ್ಪ ಮುಂದೆ ನಡೆಯುತ್ತಿದ್ದ. ಅವನಲ್ಲಿ ಹೆಚ್ಚು ಆತುರ ಕಾಣಿಸುತ್ತಿತ್ತು. ಬೇಗ ತನ್ನ ಅದೃಷ್ಟ ಪರೀಕ್ಷಿಸಬೇಕೆಂಬ ಬಯಕೆ. ಸಿದ್ಧಾರ್ಥ ಅವನನ್ನು ಎಚ್ಚರಿಸಬೇಕೆಂದಿದ್ದ. ಅಷ್ಟರಲ್ಲಿ ಪ್ರಮಾದ ನಡದೇ ಹೋಯಿತು!

ಮೊದಲು ರಾಕೇಶನ ಕಾಲು ಜಾರಿತು. ಮೊದಲೇ ಹಿಮವ್ರಣದಿಂದ ಸ್ಪರ್ಶಶಕ್ತಿಯನ್ನು ಕಳೆದುಕೊಂಡಿದ್ದ ಕಾಲು, ಕಾಲ್ಬೆರಳುಗಳು ಅವನಿಗೆ ಸಹಕರಿಸುತ್ತಿರಲಿಲ್ಲ. ನೋಡುತ್ತಿದ್ದಂತೆಯೇ ಶಿಖರದ ಅಂಚಿನ ತನಕ ಜಾರಿ ಅಲ್ಲಿಂದ ಪ್ರಪಾತದೊಳಕ್ಕೆ ಮುದ್ದೆಯಂತೆ ಉರುಳಿದ.

ಸಿದ್ಧಾರ್ಥ ಏನು ನಡೆಯುತ್ತದೆಂಬುದನ್ನು ಅರ್ಥಮಾಡಿಕೊಳ್ಳುವುದರ ಒಳಗಾಗಿಯೇ ಇಬ್ಬರ ಮಧ್ಯೆ ಬಂಧನವಾಗಿದ್ದ ಹಗ್ಗ ಅವನನ್ನು ಕೂಡ ಪ್ರಪಾತಕ್ಕೆ ಸೆಳೆಯಿತು.

ಗಾಳಿಯಲ್ಲಿ ಕೆಳಕ್ಕೆ ಬೀಳುತ್ತಿದ್ದ ರಾಕೇಶ್ ಮೈ ಭಾರವು ಅಕಸ್ಮಾತ್ತಾಗಿ ಹಗ್ಗದ ಮುಖಾಂತರ ತನ್ನನ್ನೂ ಸೆಳೆದಿದ್ದರಿಂದ ಸಿದ್ಧಾರ್ಥನ ಸೊಂಟ ಕಳಕ್ ಎಂದಿತು. ಅಪ್ರಯತ್ನವಾಗಿ ಹಿಂದಕ್ಕೆ ಬಗ್ಗಿದ. ಅದೇ ಆತನು ಮಾಡಿದ

ತಪ್ಪು. ಅದರಿಂದ ಕಾಲು ಜಾರಿ, ಹಗ್ಗದೊಂದಿಗೆ ಶಿಖರದ ಅಂಚಿನತ್ತ ವೇಗವಾಗಿ ಸಾಗಿಹೋದ. ಹಗ್ಗದ ಇನ್ನೊಂದು ಕಡೆ ಇದ್ದ ರಾಕೇಶನ ನೂರರವತ್ತು ಪೌಂಡ್ ತೂಕದ ಮೈ ಊಹೆಗೂ ಮೀರಿದ ವೇಗದಲ್ಲಿ ಸಿದ್ಧಾರ್ಥನನ್ನು ಸೆಳೆಯಿತು.

ಬೋರಲಾಗಿ ಬಿದ್ದವನು ಅದೇ ರೀತಿ ಸಾಗತೊಡಗಿದ್ದ. ಯಾವ ಸಣ್ಣ ಆಧಾರವಾದರೂ ತಡೆದು ನಿಲ್ಲಿಸಲು ದೊರಕೀತೇನೋ ಎಂದು ಅವನ ಕೈ ತಡಕುತ್ತಿತ್ತು. ಆದರೆ ಮಂಜಿನಿಂದ ಆವೃತ್ತವಾಗಿದ್ದ ಆ ಮೇಲ್ಮೈಯಲ್ಲಿ ಏನೂ ದೊರೆಯುವಂತಿರಲಿಲ್ಲ. ಸಿದ್ಧಾರ್ಥನು ಶಿಖರದ ಅಂಚಿಗೇ ಜಾರಿಕೊಂಡು ಬಂದ. ಅಷ್ಟರಲ್ಲಿ ರಾಕೇಶನು ಜಲಪಾತದ ಭೋರ್ಗರೆತವನ್ನೂ ಮೀರಿಸಿದ ಭಯಂಕರ ಆರ್ತನಾದದಿಂದ ಚೀರಿದ.

ಸಾವಿರ ಅಡಿಗಳಿಗಿಂತಲೂ ಹೆಚ್ಚು ಆಳವಾಗಿದ್ದ ಕಂದರ ಅವನನ್ನು ಆಹ್ವಾನಿಸುತ್ತಿತ್ತು.

* * * *

ಷಾಡೋ ಕಡೆ ಭಯ, ಕಳವಳಗಳೊಂದಿಗೆ ನೋಡಿದಳು ರಂಜಿತಾ. ಸುಮಾರು ಒಂದು ಗಂಟೆಯಿಂದ ಹಾಗೆ ನೋಡುತ್ತಲೇ ಇದ್ದಾಳೆ. ಏನಾದರೂ ಮಾಡಲೇ ಬೇಕು. ಚೈನಾದೇಶದ ಬ್ರೈನ್ ವಾಷಿಂಗ್ ಬಗ್ಗೆ ಆಕೆ ಎಲ್ಲಿಯೋ ಓದಿದ್ದಳು. ಇದೇ ರೀತಿ ಇನ್ನು ಮೂರು ನಾಲ್ಕು ದಿನಗಳು ಮಾಡಿದರೆ ಅವನು ಎಲ್ಲವನ್ನೂ ಮರೆಯುತ್ತಾನೆ. ಉಸ್ಲೋಕ್‌ನ ಪೂರ್ಣ ಸದಸ್ಯನಾಗಿ ಮುಂದುವರಿಯಬಹುದು.

ಅಚೇತನನಾಗಿ ಷಾಡೋ ಬಿದ್ದಿದ್ದಾನೆ. ಕಣ್ಣು ತೆರೆದೇ ಇದೆ. ಆದರೆ ಕಣ್ಗುಡ್ಡೆಯ ಚಲನೆ ಇಲ್ಲ. ಕಣ್ಣೇ ಏನು, ಯಾವ ಅಂಗವೂ ಕ್ರಿಯಾಶೀಲವಾಗಿರುವಂತೆ ತೋರುತ್ತಿಲ್ಲ.

ಅವನನ್ನು ನೋಡುತ್ತಿದ್ದಷ್ಟು ಕಾಲವೂ ಅವಳಿಗೆ ಕಣ್ಣೀರು ಉಕ್ಕುತ್ತಿದೆ. ಬೇಯಿಸಿದ ಮಾಂಸದ ಮುದ್ದೆಯಂತೆ ಕಾಣುತ್ತಿದ್ದಾನೆ ಷಾಡೋ. ಒಂದು ಗಂಟೆಯಿಂದಲೂ ಪರಿಸ್ಥಿತಿಯಲ್ಲಿ ವ್ಯತ್ಯಾಸ ಕಾಣಿಸುತ್ತಿಲ್ಲ.

ಆ ಕೋಣೆಯಲ್ಲಿ ಅವರನ್ನು ಇರಿಸಿ ಎಷ್ಟು ಸಮಯವಾಗಿದೆ ಎಂಬುದರ ಕಲ್ಪನೆಯೂ ಅವಳಿಗಿಲ್ಲ. ಅವಳಿಗೆ ಗೊತ್ತಾದದ್ದು ಒಂದೇ; ಅವನನ್ನು ಇದೇ ರೀತಿ ಇನ್ನೆರಡು ಸಾರಿ ಕರೆದೊಯ್ದು ಬ್ರೈನ್ ವಾಷ್ ಮಾಡಿದರೆಂದರೆ ಅವನು ತನಗೆ ನಿಲುಕುವುದಿಲ್ಲ. ಅವನ ಬಾಳಿನ ಶೇಷವನ್ನೆಲ್ಲಾ ಓಡಾಡುವ ಗೊಂಬೆಯಂತೆ, ಅವರು ಹೇಳಿದ್ದನ್ನು ಮಾಡುವ ರೋಬೋನಂತೆ ಕಳೆಯ

ಬೇಕಾಗುತ್ತದೆ.

ಅಷ್ಟರಲ್ಲಿ ಏನಾದರೂ ಮಾಡಬೇಕು. ನಿಜ, ಏನು ಮಾಡುವುದು?.... ನಿರಾಸೆಯಿಂದ ಗೋಡೆಗೆ ಒರಗಿ ಮೇಲ್ಛಾವಣಿಯನ್ನು ನೋಡುತ್ತಾ ಇದ್ದಳು. ಅವಳ ನೋಟಕ್ಕೆ ಎಲೆಕ್ಟ್ರಿಕ್ ಬಲ್ಬ್ ಸಿಲುಕಿತು. ಸ್ವಿಚ್ ಪಕ್ಕದಲ್ಲಿಯೇ ಪ್ಲಗ್ ಇತ್ತು. ಥಟ್ಟನೆ ಏನೋ ಯೋಚನೆ ಹೊಳೆಯಿತು. ತಡಮಾಡಲಿಲ್ಲ.

ಬಲ್ಬ್‌ಗಿದ್ದ ವೈರನ್ನು ಹಿಡಿದು ಬಲವಾಗಿ ಜಗ್ಗಿದಳು. ಅದು ಕಿತ್ತು ಕೈಗೆಬಂತು. ಅದರಲ್ಲಿಯ ಎರಡು ವೈರ್‌ಗಳನ್ನು ಬೇರೆ ಮಾಡಿ ಒಂದನ್ನು ಪ್ಲಗ್‌ನ ರಂಧ್ರದಲ್ಲಿ ತೂರಿಸಿದಳು.

ತಾನು ಮಾಡುತ್ತಿರುವುದು ತುಂಬಾ ಅಪಾಯಕಾರಿ ಕೆಲಸವೆಂದು, ಜೀವಕ್ಕೆ ಅಪಾಯವನ್ನು ಒಡ್ಡಬಹುದಾದ ಕಾರ್ಯವೆಂಬುದು ಆಕೆಗೂ ಗೊತ್ತಿತ್ತು. ಆದರೆ ಅವನನ್ನು ರಕ್ಷಿಸಿಕೊಳ್ಳಲು ಅದಕ್ಕಿಂತಲೂ ಉತ್ತಮವಾದ ಮಾರ್ಗ ಬೇರ್‍ಯಾವುದೂ ಕಾಣಲಿಲ್ಲ.

ಆಸ್ಪತ್ರೆಗಳಲ್ಲಿ ಹುಚ್ಚು ಗುಣವಾಗಲು ೧೦/೧೫ ವೋಲ್ಟ್ ಷಾಕ್ ಕೊಡುತ್ತಾರೆ. ಇದೇ ಪದ್ಧತಿಯನ್ನು ಉಸ್ಲೋಕ್‌ನವರು ಮಾಡುತ್ತಿರುವ ಬ್ರೈನ್ ವಾಷ್ ಪ್ರಭಾವವನ್ನು ದೂರಗೊಳಿಸಲು ಉಪಯೋಗಿಸಬೇಕೆಂದು ಕೊಂಡಳು. ಆದರೆ ತಾನು ಬಳಸಲಿರುವ ಎರಡುನೂರು ವೋಲ್ಟ್ ಅತ್ಯಂತ ಅಪಾಯಕಾರಿ ವಿದ್ಯುತ್ತೆಂದು ಆಕೆಗೆ ಗೊತ್ತಿತ್ತು. ಇದರಿಂದ ಅವನ ಪ್ರಾಣಕ್ಕೇ ಕುತ್ತೊದಗುವ ಅಪಾಯವೂ ಇಲ್ಲದೆ ಇರಲಿಲ್ಲ.

ಉಸ್ಲೋಕ್‌ನ ಅಧೀನದಲ್ಲಿ ಜೀವಚ್ಛವದಂತೆ ಬದುಕುವುದಕ್ಕಿಂತಲೂ ಈ ರೀತಿ ಸಾವು ಅಪ್ಪುವುದೇ ಒಳ್ಳೆಯದು.

ವೈರನ್ನು ಒಂದು ಕಡೆ ಹಿಡಿದು ತೋರು ಬೆರಳಿನಿಂದ ಮೆಲ್ಲನೆ ಮೀಟಿ ದಳು – ಷಾಕ್!

ಒಂದೇ ನೆಗೆತಕ್ಕೆ ಹಿಂದಕ್ಕೆ ಹಾರಿದಳು. ಕೈಯಲ್ಲಿದ್ದ ವೈರ್ ಅಪ್ರಯತ್ನ ವಾಗಿ ಕೆಳಕ್ಕೆ ಜಾರಿತು. ನೀರಿನಿಂದ ಹೊರಬಿದ್ದ ಮೀನಿನಂತೆ ಆಕೆ ನಡುಗಿ ದಳು. ಗುಂಡಿಗೆಯ ಸದ್ದು ಸ್ಪಷ್ಟವಾಗಿ ಕೇಳಿಸಿತು. ಸುಮಾರು ಐದು ನಿಮಿಷಗಳ ಕಾಲ ಗೋಡೆಗೆ ಒರಗಿ ನಿಶ್ಚಲವಾಗಿ ಕುಳಿತಳು. ಮೈಯೆಲ್ಲಾ ಬೆವರಿತು.

ಸ್ವಲ್ಪ ಹೊತ್ತಿನ ನಂತರ ಸ್ಥಿಮಿತಕ್ಕೆ ಬಂದಳು.

ಅಚೇತನನಾಗಿ ಎದುರಿನಲ್ಲಿ ಬಿದ್ದಿದ್ದ ತನ್ನ ಪ್ರಿಯನತ್ತ ಕರುಣಾರ್ದ್ರ ದೃಷ್ಟಿಯಿಂದ ನೋಡಿದಳು. ತೇಜೋವಿಹೀನನಾಗಿ ಗಾಢವಾದ ಮತ್ತಿನ ನಿದ್ರೆ

ಯಲ್ಲಿ ಮಲಗಿದ್ದಾನೆ, ತಾನು ಕೊಡಲಿರುವ ಷಾಕ್‌ನಿಂದ ತುಂಬಾ ನೋವು ಅನುಭವಿಸುತ್ತಾನೆ ಎಂಬುದು ಅವಳಿಗೆ ಸ್ಪಷ್ಟವಾಗಿ ಗೊತ್ತಿತ್ತು. ಆದರೆ ಬೇರೆ ಹಾದಿಯೇ ಇರಲಿಲ್ಲ.

ಬ್ರೈನ್‌ವಾಷ್ ಮಾಡಿ ಮಿದುಳನ್ನು ಕೆಲಸ ಮಾಡದೆ ಮೊದ್ದುಗೊಳಿಸುವ ಪದ್ಧತಿ ಎರಡು ರೀತಿಗಳಲ್ಲಿ ನಡೆಯುತ್ತದೆ: ಪೂರ್ಣವಾಗಿ ಹುಚ್ಚನನ್ನಾಗಿಸುವುದು ಒಂದನೆಯ ಪದ್ಧತಿ. ತಮಗೆ ಬೇಕೆನಿಸಿದಂತೆ ಆ ಮನುಷ್ಯನನ್ನು ಬದಲಿಸಿಕೊಳ್ಳುವುದು ಎರಡನೆಯ ಪದ್ಧತಿ. ಮೊದಲಿನದನ್ನು ನೊಸಲಿನ ಬಳಿಯ ನರಗಳನ್ನು ನಾಶ ಮಾಡುವ ಜಪಾನ್ ಪದ್ಧತಿಯ ಪ್ರಕಾರ ಮಾಡಬಹುದು. ಇದು ತೀರಾ ಸುಲಭದ ಕಾರ್ಯ. ಎರಡನೆಯದು ಚೀನಾ ದೇಶೀಯರ ಪದ್ಧತಿ. ಇದು ತುಂಬಾ ಕಷ್ಟವಾದದ್ದು. ಒಂದು ತಿಂಗಳ ತನಕ ಒಂದೇ ಸಮನೆ ನಡೆಸಬೇಕಾದ ಕಾರ್ಯ. ಸ್ವಲ್ಪ ಸ್ವಲ್ಪವಾಗಿ ಆ ವ್ಯಕ್ತಿಯನ್ನು ಸ್ವಾಧೀನಕ್ಕೆ ಪೂರ್ಣವಾಗಿ ತೆಗೆದುಕೊಳ್ಳುವುದು ಈ ಪದ್ಧತಿಯಲ್ಲಿ ನಡೆಯುತ್ತದೆ.

ರಂಜಿತಾಗೆ ಇಷ್ಟು ಮಾತ್ರವೇ ಗೊತ್ತಿತ್ತು. ಇಷ್ಟೇ ಓದಿದ್ದದ್ದು ಕೂಡ. ಅವರು ಯಾವ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ ಎಂಬುದನ್ನೂ ಅವಳು ತಿಳಿಯುವ ಅವಕಾಶವಿರಲಿಲ್ಲ. ಇವ್ಯಾವುದೂ ನೇರವಾಗಿ ಪ್ರಯೋಗಿಸಿದ ಜ್ಞಾನವಿಲ್ಲ. ಆದರೆ ರವಿಯು ಮೊದಲ ದಿನವೇ ಅರ್ಧ ಜ್ಞಾಪಕಶಕ್ತಿ ಕಳೆದುಕೊಂಡವನಂತೆ ಕಾಣುತ್ತಿದ್ದ.

ಸುಮ್ಮನೆ ಯೋಚನೆಯಲ್ಲಿಯೇ ಕಾಲ ಕಳೆಯುವುದು ಅರ್ಥಹೀನ. ಹಾಗೆಂದೇ ಒಂದು ನಿರ್ಣಯಕ್ಕೆ ಬಂದಳು.

ಷಾಡೋ ಸಮೀಪಕ್ಕೆ ಹೋಗಿ ನಡುಗುತ್ತಿದ್ದ ಕೈಗಳಿಂದ ವೈರನ್ನು ಹಿಡಿದು ಅವನ ನೊಸಲಿಗೆ ಸೋಂಕಿಸಿದಂತೆ ಹಿಡಿದು ತೆಗೆದಳು: ಅವನಲ್ಲಿ ಯಾವ ಬದಲಾವಣೆಯೂ ಇಲ್ಲ!

ಅವಳಿಗೆ ಕಣ್ಣೀರು ಬಂತು. ತನ್ನಿಂದ ಆ ಕೆಲಸ ಸಾಧ್ಯವಾಗುತ್ತಿಲ್ಲ. ಅಷ್ಟೊಂದು ನೋವನ್ನು ಅನುಭವಿಸುವುದನ್ನು ನೋಡಲು ಹಿಂಜರಿಯುತ್ತಿದ್ದಾಳೆ. ತುಟಿ ಕಚ್ಚಿಕೊಂಡು ಒಂದು ಕ್ಷಣ ಮೌನವಾಗಿದ್ದಳು. ಕೊನೆಗೂ ಧೈರ್ಯ ತಂದುಕೊಂಡು ಈ ಬಾರಿ ವೈರನ್ನು ಬಲವಾಗಿ ನೊಸಲಿಗೆ ತಾಕಿಸಿ ಕ್ಷಣಕಾಲದಲ್ಲಿ ತೆಗೆದಳು. ಆದರೆ ಅದೇ ಹೆಚ್ಚಾದಂತೆ ಕಾಣಿಸಿತು.

ಕಾಲ್ಚೆಂಡನ್ನು ಒದ್ದರೆ ಮೇಲೇರುವಂತೆ ರವಿಯ ಶರೀರ ಗಾಳಿಯಲ್ಲಿ ಹಾರಿ ಕೆಳಗುರುಳಿತು. ಹಿಡಿ ತೆರೆದುಕೊಂಡು ಒಡನೆಯೇ ಬಿಗಿಯಿತು. ನೆಲದ

ಮೇಲೆ ಕೈಗಳು ಬಡಿಯತೊಡಗಿದುವು. ಭಯದಿಂದ ಅವನನ್ನೇ ನೋಡುತ್ತಿದ್ದಳು. ನಾಲಿಗೆ ಕಚ್ಚಿಕೊಂಡಿದ್ದರಿಂದೇನೋ ಬಾಯಿಂದ ರಕ್ತ ಸುರಿಯುತ್ತಿತ್ತು.

ತಾನೆಂತಹ ತಪ್ಪು ಮಾಡಿದಳೆಂಬುದು ಆಕೆಗೆ ಅರ್ಥವಾಗಿತ್ತು. ಆಸ್ಪತ್ರೆಗಳಲ್ಲಿ ಕೊಡುವ ಷಾಕ್‌ಗಿಂತಲೂ ಇಪ್ಪತ್ತು ಪಟ್ಟು ಹೆಚ್ಚಾಗಿ ಶರೀರದಲ್ಲಿ (ಅದೂ ನೊಸಲಮೇಲೆ!) ಪ್ರಯೋಗವಾಗಿತ್ತು. ದುಃಖ ಒತ್ತರಿಸಿ ಬಂತು. ಮೊಣಕಾಲಮೇಲೆ ತಲೆ ಇರಿಸಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಇದ್ದಕ್ಕಿದ್ದಂತೆಯೇ ಅವಳಿಗೆ ಪರಿಚಿತವಾದ ಕಂಠ ಕೇಳಿಸಿತು: "ರಂಜಿತಾ".

ಧಿಗ್ಭ್ರಮೆಯಿಂದ ತಲೆಎತ್ತಿ ನೋಡಿದಳು: ರವಿ ಅವಳನ್ನೇ ನೋಡುತ್ತಿದ್ದಾನೆ. ಕಂಠದಲ್ಲಿ ನೀರಸ ಧ್ವನಿಸುತ್ತದೆ. ಆದರೆ ಕಣ್ಣಲ್ಲಿ ಮಾತ್ರ ಹಿಂದಿನ ಚೈತನ್ಯ ಕಾಣಿಸುತ್ತಿತ್ತು. ಸಂತೋಷ-ದುಃಖ ಎರಡು ಒಮ್ಮೆಗೇ ಆವಳನ್ನು ಆವರಿಸಿದ್ದರಿಂದ ಮಾತೇ ಹೊರಡದೆ ಅವನ ಮೇಲೆ ಬಿದ್ದಳು.

ಈ ಸ್ಥಿತಿಯಲ್ಲಿ ಸುಮಾರು ಐದುನಿಮಿಷ ಕಳೆಯಿತು. ಮೊದಲು ಎಚ್ಚೆತ್ತವನು ರವಿಯೇ. ಆಕೆಯಿಂದ ಬೇರೆಯಾಗುತ್ತಾ ಪಕ್ಕದಲ್ಲಿದ್ದ ವೈರನ್ನು ನೋಡುತ್ತಿದ್ದ. ಆಕೆ ಏನು ಮಾಡಿದಳೆಂಬುದು ಅವನಿಗೆ ಅರ್ಥವಾಯಿತು.

"ಏನು ಮಾಡಬೇಕೋ ಗೊತ್ತಾಗಲಿಲ್ಲ... ಅದಕ್ಕೆ...ಹೀಗೆ... ಷಾಕ್..." ಎಂದು ಅರ್ಥದಲ್ಲೇ ನಿಲ್ಲಿಸಿದಳು.

ಎದ್ದು ಕೂರಲು ಪ್ರಯತ್ನಿಸಿದ. ಅವನ ಕೈ ಹಿಡಿದು ನೆರವಾದಳು ರಂಜಿತಾ. ತುಂಬಾ ದುರ್ಬಲನಾಗಿದ್ದ. "ತುಂಬಾ ಒಳ್ಳೆ ಕೆಲಸ ಮಾಡಿದೆ. ಅವರು ಚೀನೀ ಪದ್ಧತಿಯಲ್ಲಿ ಬ್ರೈನ್‌ವಾಷ್ ಮಾಡುತ್ತಿದ್ದಾರೆ..."

"ಕೊರಳಿನ ಬಳಿ ಇಂಜಕ್ಷನ್ ಮಾಡುವುದರಿಂದ ಮಿದುಳಿನಲ್ಲಿಯ ನೆನಪಿನ ಕಣಗಳನ್ನು ನಿರ್ವೀರ್ಯಗೊಳಿಸಲಾಗುತ್ತದೆ. ಅದೇ ಅವರು ಮಾಡುತ್ತಿರುವುದು. ಒಳ್ಳೆಯ ಸಮಯದಲ್ಲಿ ಉಪಕಾರ ಮಾಡಿದೆ. ನೀನು ಈ ತೀರ್ಮಾನ ಕೈಕೊಂಡು ಉಪಕರಿಸದಿದ್ದರೆ ಬಾಳೆಲ್ಲಾ ಜೀವಚ್ಛವವಾಗಿ ಇರುತ್ತಿದ್ದೆ...." ಎಂದ ಪಾಡೋ ರಂಜಿತಾಳನ್ನು ಪ್ರೇಮದಿಂದ ನೋಡುತ್ತಾ.

"ಅದಿರಲಿ ಈಗ ಇಲ್ಲಿಂದ ನಾವು ತಪ್ಪಿಸಿಕೊಳ್ಳಲು ಹಾದಿ ಯಾವುದಿದೆ?"

"ನನ್ನನ್ನು ಅವರು ಕೊಲ್ಲುವುದಿಲ್ಲ. ಈ ಇಂಜೆಕ್ಷನ್ ಮಾಡಿದ ನಂತರ ಎರಡು-ಮೂರು ಗಂಟೆಗೆ ಆಪರೇಷನ್ ಮಾಡುತ್ತಾರೇನೋ ಆಗ್ಗ ನನ್ನ ಮಿದುಳು ಅವರೇನು ಹೇಳಿದರೆ ಅದನ್ನು ಸ್ವೀಕರಿಸಿ ಹಾಗೆಯೇ ನಡೆಯಲು ಸಿದ್ಧವಾಗುತ್ತದೆ. ಹಿಂದಣದನ್ನೆಲ್ಲಾ ಮರೆಯುತ್ತದೆ. ಬಹುಶಃ ನನ್ನನ್ನು

ತಮ್ಮ ಪರಿಚಾರಕನನ್ನಾಗಿ ಮಾಡಿಕೊಳ್ಳುವುದು ಅವರ ಉದ್ದೇಶ್ಯವಿರಬೇಕು..."

"ಹಾಗಿದ್ದರೆ ನನ್ನನ್ನು..."?

ಷಾಡೋ ಮಾತನಾಡಲಿಲ್ಲ. ಈ ಪ್ರಶ್ನೆ ಅವನನ್ನು ಮೊದಲಿನಿಂದ ಕಾಡುತ್ತಲೇ ಇತ್ತು. ರಂಜಿತಾಳಿಗೆ ಬ್ರೈನ್‌ವಾಷ್ ಮಾಡುತ್ತಿಲ್ಲವೆಂದರೆ.... ಮುಂದೆ ಆಲೋಚಿಸಲಾರದಾದ.

"ಇನ್ನೇನು ನಡೆಯಲಿದೆ?"

ಈ ಪ್ರಶ್ನೆಗೂ ಅವನ ಬಳಿ ಉತ್ತರವಿರಲಿಲ್ಲ. ಏನಾಗುತ್ತದೆ? ಮತ್ತೆ ಎರಡು-ಮೂರು ಗಂಟೆಗಳಲ್ಲಿ ತನ್ನನ್ನು ಕರೆದೊಯ್ಯುತ್ತಾರೆ. ಎರಡನೆಯ ಸ್ಟೇಜ್ ಪ್ರಾರಂಭವಾದ ನಂತರದ ಐದಾರು ನಿಮಿಷಗಳಿಗೆ ಆ ಇಂಜಕ್ಷನ್ ಕೆಲಸ ಮಾಡುತ್ತಿಲ್ಲವೆಂಬುದು ಗೊತ್ತಾಗುತ್ತದೆ. ಮತ್ತೆ ಇನ್ನೊಂದು ಇಂಜಕ್ಷನ್ ಚುಚ್ಚುತ್ತಾರೆ. ನಂತರದಲ್ಲಿ ಮತ್ತೊಂದು ಷಾಕ್ ಟ್ರೀಟ್‌ಮೆಂಟ್ ಕೊಡಲು ರಂಜಿತಾ ಇಲ್ಲಿ ಇರುವುದಿಲ್ಲ. ಇಲ್ಲೇ ಏನು ಈ ಲೋಕದಲ್ಲಿಯೇ ಇರುವುದಿಲ್ಲವೇನೋ?...

ಈ ಯೋಚನೆ ಬರುತ್ತಲೇ ನೈ ನಡುಗಿತು. ಅವಳನ್ನೇ ರೆಪ್ಪೆಹಾಕದೆ ನೋಡಿದ.

ಪರಿಸ್ಥಿತಿಯ ಪ್ರಭಾವದಿಂದ ಬಳಲಿಕೆ ಇದ್ದರೂ, ಭಯ ಆಕೆಯನ್ನು ಆವರಿಸಿದ್ದರೂ ಆಕೆಯ ಮುಖದ ತೇಜಸ್ಸು ಕುಂದಿರಲಿಲ್ಲ. ಆ ಕಣ್ಣು, ಪುಟ್ಟದಾದ ಮುದ್ದು ಬಾಯಿ, ಅಂದವಾಗಿದ್ದ ಗದ್ದ, ಜಾಣತನ-ಮುಗ್ಧತೆಯ ಮಿಶ್ರಿತ ನೋಟ....ಓದನ್ನು ಪೂರ್ಣಗೊಳಿಸಿ ಮದುವೆ ಮಾಡಿಕೊಂಡು ಹಾಯಾಗಿ ಸಂಸಾರ ನಿರ್ವಹಿಸಬೇಕಾಗಿದ್ದ ಹೆಣ್ಣನ್ನು ಅನಾವಶ್ಯಕವಾಗಿ ತಾನು ಈ ವಿಷಯದಲ್ಲಿ ಇರುಕಿಸಿದ್ದ. ನೂರು ವರ್ಷಗಳ ಅವಳ ಬಾಳನ್ನು ತಾನೇ ಹಾಳು ಮಾಡಿದ್ದ.

ಹೆಜ್ಜೆಯ ಸಪ್ಪಳ ಹತ್ತಿರಕ್ಕೆ ಬಂದಂತೆಲ್ಲಾ ರವಿ-ರಂಜಿತಾ ಒಬ್ಬರನ್ನೊಬ್ಬರು ನೋಡಿದರು. ಎರಡನೆಯ ಬ್ರೈನ್ ವಾಷ್‌ಗೆ ಅಷ್ಟುಬೇಗ ರವಿಯನ್ನು ಕರೆದುಕೊಂಡು ಹೋಗುವುದು ಸಾಧ್ಯವಿರಲಿಲ್ಲ. ಷಾಡೋ ನೆಲದ ಮೇಲೆ ಬಿದ್ದುಕೊಂಡ. ರಂಜಿತಾ ವೈರನ್ನು ಒಂದು ಮೂಲೆಗೆಸೆದು ಗೋಡೆಗೆ ಒರಗಿ ಮೊಣಕಾಲ ಮೇಲೆ ತಲೆ ಇರಿಸಿಕೊಂಡಳು.

ಷಾಡೋ ಮನದಲ್ಲಿ ಏನೇನೋ ಯೋಚನೆಗಳು—ಎರಡನೆಯ ಬಾರಿ ನಡೆಸುವ ಬ್ರೈನ್‌ವಾಷ್‌ನಲ್ಲಿ ತನ್ನ ಸ್ಥಿತಿ ಅವರಿಗೆ ಗೊತ್ತಾಗುತ್ತದೆ. ಅದನ್ನು

ರಕ್ಷಿಸುವುದು ಹೇಗೆ?

ಹೆಜ್ಜೆಯ ಸಪ್ಪಳ ಮತ್ತಷ್ಟು ಹತ್ತಿರವಾಯಿತು.

ಪಾಡೋ ಉಸಿರು ಬಿಗಿಹಿಡಿದ. ಹೆಜ್ಜೆಯ ಸದ್ದು ಕೋಣೆಯ ಬಳಿಗೆ ಬಂದು ನಿಂತಿತು. ಕಾಲ ಸಪ್ಪಳದಿಂದ ಬಂದಿದ್ದವರು ಇಬ್ಬರು ಎಂಬುದು ಗೊತ್ತಾಗುತ್ತಿತ್ತು. ಈಗೇನು ಮಾಡುತ್ತಾರೆ? ಮುಖದಮೇಲೆ ಬೆಳಕಿನ ಸ್ಪಾಟ್‌ಗಳನ್ನು ಫೋಕಸ್ ಮಾಡಿ, ಕಣ್ಣಲ್ಲಿ ಕಾಂತಿಕಿರಣಗಳನ್ನು ಚುಚ್ಚಿ ಮೆಲ್ಲನೆ ಕಿವಿಯ ಪಕ್ಕದಲ್ಲಿ ನಿಂತು ಕ್ರಮಕ್ರಮವಾಗಿ ಮಿದುಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ.

ಅವರು ಒಳಕ್ಕೆ ಬಂದರು. ಪಾಡೋ ಭಾವಿಸಿದ್ದಂತೆ ಅವನ ಬಳಿಗೆ ಬರಲಿಲ್ಲ ರಂಜಿತಾ ಬಳಿಗೆ ಹೋದರು. ಅವಳ ತೋಳು ಹಿಡಿದೆತ್ತಿ ನಿಲ್ಲಿಸಿದರು. ರಂಜಿತಾಳ ಮುಖ ಇದನ್ನು ವಿರೋಧಿಸಿತು. ಪಾಡೋ ಮನದಲ್ಲಿ ಏನೋ ಭಯ. ಅವರು ತನಗಾಗಿ ಬಂದಿಲ್ಲ ಎಂಬ ಊಹೆ ನಿಜವೇ ಆಯಿತು.

ರಂಜಿತಾಳನ್ನು ಮಧ್ಯದಲ್ಲಿ ನಿಲ್ಲಿಸಿಕೊಂಡು ಇಬ್ಬರೂ ಎರಡೂ ಕಡೆ ಅವಳನ್ನು ಹಿಡಿದಿದ್ದರು. ಹಾಗೆ ಕರೆದೊಯ್ಯುತ್ತಿದ್ದಾಗ ಅವರ ಮೇಲೆ ಬೀಳೋಣ ಎಂದುಕೊಂಡ. ಆದರೆ ಅದರಿಂದ ಲಾಭವಿಲ್ಲ ಎಂಬುದು ಗೊತ್ತು. ಅದು ಒಳ್ಳೆಯ ಮಾರ್ಗವೂ ಅಲ್ಲ. ಹೊರಗೆ ಯಾರಿದ್ದಾರೋ ಗೊತ್ತಿಲ್ಲ. ಅಷ್ಟೇಕೆ ಎಷ್ಟು ಮಂದಿ ಇರುವರೆಂಬುದೂ ತಿಳಿಯದು. ರಂಜಿತಾಳಿಗಿಂತಲೂ ಪ್ರಪಂಚ ಮುಖ್ಯ. ಉಸ್ಕೋಕ್ ಸರ್ವನಾಶ ಅತಿ ಮುಖ್ಯ.

ಅಷ್ಟರಲ್ಲಿ ಬಾಗಿಲನ್ನು ಹಾಕಿದ ಧ್ವನಿ.

ರಂಜಿತಾಳನ್ನು ಬ್ರೈನ್ ವಾಷಿಗಾಗಿ ಕರೆದೊಯ್ಯದಿದ್ದರೆ ಇದೇ ಅವಳನ್ನು ಕೊನೆಯ ಬಾರಿಗೆ ಕಾಣುವ ಅವಕಾಶ—ಅದೂ ಕಣ್ಮುಚ್ಚಿಯೇ ನೋಡಬೇಕು!

ಅವರು ಹೋದರೆಂಬುದು ಖಾತ್ರಿಯಾದ ನಂತರ ಕಣ್ತೆರೆದು ಎದ್ದು ಕುಳಿತ.

ಸ್ವಲ್ಪ ಹೊತ್ತಿಗೆ ರಂಜಿತಾ ಅವರ ಹಿಡಿತದಿಂದ ತನ್ನ ತೋಳುಗಳನ್ನು ಬಿಡಿಸಿಕೊಳ್ಳುವ ಪ್ರಯತ್ನವನ್ನು ನಿಲ್ಲಿಸಿದಳು. ಅವರೊಂದಿಗೆ ಹೆಜ್ಜೆ ಹಾಕ ತೊಡಗಿದಳು. ವಿಶಾಲವಾದ ಒಂದು ಹಾಲ್ ಪ್ರವೇಶಿಸಿದರು. ಕುರ್ಚಿಗಳೆಲ್ಲಾ ಖಾಲಿಯಾಗಿದ್ದು ಅಲ್ಲಿ ಯಾರೂ ಇರಲಿಲ್ಲ. ಎತ್ತರವಾದ ಪೀಠವೊಂದು ಇತ್ತು. ಪಕ್ಕದಲ್ಲಿ ನಾಯಿಯ ಆಕಾರದ ದೀಪ. ಅದರ ಕೆಂಪು ಕಾಂತಿ ಆ ಪ್ರದೇಶವನ್ನೆಲ್ಲ ರಕ್ತವರ್ಣದ ಕಾಂತಿಯಲ್ಲಿ ಮಿಂದಂತೆ ಮಾಡಿತ್ತು.

ತನ್ನನ್ನು ಎಲ್ಲಿ ಕರೆದೊಯ್ಯುತ್ತಿದ್ದಾರೆಂಬುದು ಗೊತ್ತಾಗಲಿಲ್ಲ.ಆ ಹಾಲ್ ದಾಟಿಕೊಂಡು ಒಂದು ಸಣ್ಣ ಕೋಣೆ ಪ್ರವೇಶಿಸಿದರು.

ಅಲ್ಲಿ ಮಹಾದ್ರಷ್ಟನಿದ್ದ. ಕಣ್ಣು ಕೆಂಪಾಗಿದೆ. ಆಕಾರವೇ ಭಯಂಕರ ವಾಗಿದೆ. ಹಾಗೆಂದರೆ ದಪ್ಪವಾಗಿದ್ದಾನೆ ಎಂದು ಅರ್ಥವಲ್ಲ. ಜಗತ್ತಿನ ಬಗ್ಗೆ ಒಂದು ತೆರನಾದ ದ್ವೇಷ ಹೊಗೆಯಾಡುತ್ತಿದೆ. ಅದೇ ಅವಳನ್ನು ಹೆದರಿಸಿತ್ತು. ಒಂದು ಕಥೆಯ ಅಂತ್ಯ ಸಮಾಪಿಸಿದಾಗ, ಒಂದು ಬದುಕಿನ ಗುರಿ ಅಂತಿಮ ಘಟ್ಟದಲ್ಲಿ ಇರುವಾಗ ಇರುವ ಕಾತರ ಆತನ ಕಣ್ಣಲ್ಲೂ ಕಾಣಿಸುತ್ತಿತ್ತು.

ರಂಜಿತಾಳನ್ನು ಕ್ರೂರವಾಗಿ ನೋಡಿದ. ಪ್ರಪಂಚದ ಜನವನ್ನೆಲ್ಲಾ ಸೈತಾನನತ್ತ ಒಲಿಸುತ್ತಿರುವ ಸಂದರ್ಭದಲ್ಲಿ,ಹಲವು ಸಾವಿರ ಮಂದಿ ಉಸ್ಸೋಕ್ ಸದಸ್ಯರು ತಮ್ಮ ಪ್ರಯತ್ನವನ್ನು ಯಶಸ್ಸಿನ ಹಾದಿಗೆ ಹಚ್ಚುತ್ತಿರುವ ಸಂದರ್ಭ ದಲ್ಲಿ ಈ ಪ್ರಯತ್ನಕ್ಕೆ ಅಡ್ಡಿಯಾಗಿ ಬಂದ ಈ ಬಾಲೆ ಮತ್ತು ಆಕೆಯ ಪ್ರಿಯ!

ಮಹಾದ್ರಷ್ಟ ನಕ್ಕ. ಎತ್ತಕಡೆಗೂ ತಪ್ಪಿಸಿಕೊಂಡು ಹೋಗಲಾರದೆ ಬೆದರುಗಣ್ಣುಗಳಿಂದ ನೋಡುತ್ತಿದ್ದ ಮೊಲವನ್ನು ಕಬಳಿಸುವ ಮೊದಲು ಹುಲಿ ನೋಡುವಂತಿತ್ತು ಆತನ ನೋಟ.

"ನಿನ್ನೆಯೇ ನಿನ್ನನ್ನು ಕೊಲ್ಲಬೇಕಾಗಿತ್ತು. ಆದರೆ ಅವತಾರ್ ಬಾಬಾ ಹೇಳಿದ್ದರಿಂದ ಈವರೆಗೆ ಕಾಯಬೇಕಾಯಿತು. ನಿನ್ನ ಪ್ರಿಯಕರ ಪಾಡೋ ನಮ್ಮ ಸಂಸ್ಥೆಯಲ್ಲಿ ಸೇರಲು ಯೋಜಿಸಿರುವ ಈ ವಿಷಯ ಇನ್ಯಾರಿಗೆ ಗೊತ್ತಿದೆ? ನಿಜ ಹೇಳಬೇಕು."

ಆಕೆ ಮಾತನಾಡಲಿಲ್ಲ.

ಮತ್ತೆ ಆ ಪ್ರಶ್ನೆಯನ್ನು ಆತನೂ ಕೇಳಲಿಲ್ಲ. ಬಳಿಗೆ ಬಂದು ಕೆನ್ನೆಯ ಮೇಲೆ ಬಲವಾಗಿ ಬಡಿದ. ಕಣ್ಣಲ್ಲಿ ನೀರು ಚಿಮ್ಮಿತು. "ಯಾರಿಗೂ ಗೊತ್ತಿಲ್ಲ" ಎಂದಳು.

ಮಹಾದ್ರಷ್ಟ ಪಕ್ಕದಲ್ಲಿದ್ದ ಸ್ಕೆಲಿಟನ್ ಕಡೆ ನೋಡಿದ. ಪಾದರಸದಂತೆ ಕಾಣುತ್ತಿದ್ದ ಪದಾರ್ಥವನ್ನು ಹೊಂದಿದ್ದ ಮೀಟರೊಂದನ್ನು ನೋಡಿ ಆಕೆ ನಿಜವನ್ನೇ ಮಾತನಾಡುತ್ತಿರುವಂತೆ ತೀರ್ಮಾನಿಸಿದ.

ದ್ರಷ್ಟನ ಮುಖದ ಬಿಗಿ ಸ್ವಲ್ಪ ಸಡಿಲಗೊಂಡಿತು.

ಅಂತಹ ಭಯಂಕರ ಸ್ಥಿತಿಯಲ್ಲೂ ಅವರ ಆಧುನಿಕ ಪರಿಕರಣಗಳನ್ನು ಕಂಡು ರಂಜಿತಾ ಅಚ್ಚರಿಗೊಂಡಳು.

ಅವಳ ಅಚ್ಚರಿಯನ್ನು ಗ್ರಹಿಸಿದಂತೆ ಮಹಾದ್ರಷ್ಟ ನಕ್ಕ ನಿನ್ನ ಮನದ ಅನುಮಾನ ನನಗೆ ಗೊತ್ತಾಗಿದೆ ಎನ್ನುವಂತಿತ್ತು ಆ ನಗೆ. "ಅಷ್ಟಾವಕ್ರ ಹುಟ್ಟಿ

ಸೈತಾನನ ರಾಜ್ಯ ಸ್ಥಾಪನೆ ಆಗುವ ಮೊದಲೇ ಎಷ್ಟೋ ಮಂದಿ ಹಿರಿಯರು, ಮೇಧಾವಿಗಳು, ವಿಜ್ಞಾನಿಗಳೂ ಉಸ್ಲೋಕಿನಲ್ಲಿ ಸೇರಿದ್ದಾರೆ. ನೀನು ಹೇಳುತ್ತಿರುವುದು ನಿಜವೋ ಸುಳ್ಳೋ ಎಂಬುದನ್ನು ಕಂಡುಹಿಡಿಯುವ ಯಂತ್ರ ಇದು. ಅವರು ತಯಾರಿಸಿರುವುದೇ!" ಎಂದು ಲೈ ಡಿಟೆಕ್ಟರ್ ತೋರಿಸುತ್ತಾ ಅಷ್ಟಾವಕ್ರನೇ ಚಕ್ರವರ್ತಿಯಾದ ಮೇಲೆ ಇವರೆಲ್ಲರೂ ಆತನ ಪ್ರತಿನಿಧಿಗಳಾಗಿ ಆಳ್ವಿಕೆ ನಡೆಸುತ್ತಾರೆ."

'ಇದೆಲ್ಲಾ ನನಗೇಕೆ ಹೇಳುತ್ತಿದ್ದಾನೆ?' ಎಂದುಕೊಂಡಳು ತನ್ನಲ್ಲಿಯೇ ರಂಜಿತಾ.

"ಇದೆಲ್ಲಾ ಏಕೆ ಹೇಳುತ್ತಿದ್ದೇನೆ ಎಂಬುದೂ ಹೇಳಬೇಕೆ?" ಎಂದು ಮಹಾದ್ರಷ್ಟ ಕೇಳಿದಾಗ ನಡುಗಿದಳು. ಟೆಲಿಪತಿ ಬಗ್ಗೆ ರಂಜಿತಾ ಎಂದೂ ನಂಬಿರಲಿಲ್ಲ. ಆದರೆ ತನ್ನ ಮನಸ್ಸಿನ ಮಾತನ್ನು ಆತ ಸ್ಪಷ್ಟವಾಗಿ ಅರಿಯುತ್ತಿದ್ದಾನೆ ಎಂಬುದು ನಿಸ್ಸಂಶಯವಾಗಿ ಸಾಬೀತಾಗಿತ್ತು. ಆಗ ಹೇಗೆ ತಿಳಿಯುತ್ತಿದ್ದಾನೆ?

"ನಿನ್ನಂತೆ ಬಿಸಿರಕ್ತ ಇರುವವರಿಗೆ ಮಾನವಾತೀತ ಶಕ್ತಿಗಳ ಬಗ್ಗೆಯಾಗಲಿ ದೇವರು–ದೆವ್ವಗಳ ಮೇಲಾಗಲಿ ನಂಬಿಕೆ ಇರುವುದಿಲ್ಲ. ಅನುಭವದೊಂದಿಗೆ ಮಾತ್ರವೇ ನೀವು ಬದಲಾಗುತ್ತೀರಿ" ಎಂದು ಮಹಾದ್ರಷ್ಟ ನಿಲ್ಲಿಸಿದ. ನಂತರದಲ್ಲಿ ಆತನ ಕಂಠ ಕಂಚಿನ ಧ್ವನಿಯಾಗಿ ಆ ಕೋಣೆಯಲ್ಲಿ ಪ್ರತಿಧ್ವನಿಸಿತು: "ನಾಳೆ ರಾತ್ರಿ ಹನ್ನೆರಡುಗಂಟೆಗೆ ಸ್ಮಶಾನದ ಮಧ್ಯೆ ಅಷ್ಟಾವಕ್ರ ಹುಟ್ಟಲಿದ್ದಾನೆ. ಹರಿಹರ ಬ್ರಹ್ಮಾದಿಗಳಿಂದಲೂ ಅದನ್ನು ತಡೆಯುವುದು ಸಾಧ್ಯವಿಲ್ಲ. ಕೇದಾರಗೌರಿ ಸಾಯುತ್ತಾಳೆ. ಸಿದ್ಧಾರ್ಥನನ್ನು ಕೊಲ್ಲಲಾಗುತ್ತದೆ."

ಧೈರ್ಯಸ್ಥೆಯಾದ ರಂಜಿತಾ ಕೂಡ ಆ ಕಂಠದ ಅನುಕರಣಕ್ಕೆ ನಡುಗಿದಳು.

"ರಂಜಿತಾ, ಅವತಾರ್ ಬಾಬಾಗೆ ನೀನು ಬೇಕಂತೆ. ಅದಕ್ಕಾಗಿ ನಿನಗೆ ಸಾವು ಬರಲಿಲ್ಲ. ಆತನ ಮಾತಿಗೆ ಒಪ್ಪಿಕೊಂಡು ನೀನು ಉಸ್ಲೋಕ್ ಸೇರುವುದೊಂದೇ ನೀನು ಬದುಕಲು ಇರುವ ಏಕೈಕ ಮಾರ್ಗ. ಅದಕ್ಕಾಗಿ ನೀನು ಸುಳ್ಳು ಹೇಳಿ ನಮ್ಮನ್ನು ಮೋಸಗೊಳಿಸುವುದು ಸಾಧ್ಯ ಎಂದು ಭಾವಿಸಬೇಡ. ಹಾಗೇನಾದೂ ಮಾಡಿದರೆ ನಮಗೆ ಒಡನೆಯೇ ಗೊತ್ತಾಗುತ್ತದೆ."

"ಓಹೋ, ಇದೋ ರಹಸ್ಯ" ಎಂದುಕೊಂಡಳು ತನ್ನಲ್ಲಿಯೇ.

"ಯಾಕೆ ಮಾತನಾಡುತ್ತಿಲ್ಲ?"

"ಎದುರಿಗಿರುವವರ ಮನಸ್ಸಿನ ಮಾತು ತಿಳಿಯುವ ಶಕ್ತಿ ಇರುವ ನೀವು ಅದನ್ನೂ ತಿಳಿದುಕೊಳ್ಳಬಹುದಲ್ಲಾ!" ಎಂದಳು ಹಂಗಿಸುವಳಂತೆ.

ಮಹಾದ್ರಷ್ಟನ ಮುಖ ಕಠಿಣವಾಯಿತು. "ಹಾಗಿದ್ದರೆ ಆ ಸಂಗತಿ

ನೀನೂ ಅವತಾರ್ ಬಾಬಾ ಸೇರಿ ತೀರ್ಮಾನಿಸಿಕೊಳ್ಳಿ. ವ್ಯಕ್ತಿಗತ ವಿಷಯ ಗಳಲ್ಲಿ ನಾನು ಕೈ ಹಾಕುವದಿಲ್ಲ" ಎನ್ನುತ್ತಾ ಅನುಚರರಿಗೆ "ಇವಳನ್ನ ಬಾಬಾ ಬಳಿಗೆ ಕರೆದೊಯ್ಯಿರಿ. ಅರ್ಧಗಂಟೆಯೊಳಗಾಗಿ ಬದುಕಿಸಿರಬೇಕೆ ಸಾಯಿಸ ಬೇಕೆ ಎಂಬುದನ್ನು ತೀರ್ಮಾನಿಸಬೇಕೆಂದೂ ಹೇಳು. ಈ ರೀತಿಯ ಸಣ್ಣ ವಿಷಯದಲ್ಲಿ ಕಾಲವನ್ನು ವೃಥಾ ಮಾಡಲು ನಾನು ಸರ್ವಥಾ ಬಯಸುವುದಿಲ್ಲ."

ಇದೆಲ್ಲವನ್ನೂ ನೋಡುತ್ತಿದ್ದ ರಂಜಿತಾಳಿಗೆ ಅನುಮಾನವಾಯಿತು. ಇದೇನೋ ಜೇಡರಬಲೆಯಂತಿದೆ. ಅವತಾರ್‌ಬಾಬಾ ತನ್ನನ್ನು ಕೇಳಿದ ಎಂದು ತನ್ನನ್ನು ಕೊಲ್ಲದೆ ಉಳಿಸುವುದು ತೀರಾ ಅಗ್ಗದ ಸಿನಿಮಾವಂತೆ ತೋರಿಬರು ತ್ತಿದ್ದರೂ ಸತ್ಯಸಂಗತಿ ಅದಲ್ಲ. ಬೇರಿನ್ನೇನೋ ಇದೆ. ತನ್ನಿಂದ ಇವರಿಗೆ ಬೇಕಾಗಿರುವದಾದರೂ ಏನು?

ಇಬ್ಬರು ಅನುಚರರು ಅವಳನ್ನು ವಿಶಾಲವಾದ ವರಾಂಡದ ಮೂಲಕ ಬೇರೊಂದು ಕೋಣೆಗೆ ಕರೆದೊಯ್ದರು. ಅಲ್ಲಿಯ ಅಲಂಕರಣ ಅತ್ಯಾಧುನಿಕ ವಾಗಿತ್ತು. ಡ್ರೆಸಿಂಗ್ ಟೇಬಲ್, ಮಂಚ, ಬೆಲೆ ಬಾಳುವ ಪದಾರ್ಥಗಳು....

ಅಷ್ಟರಲ್ಲಿ ಬಾಗಿಲು ತೆರೆದುಕೊಂಡು ಅದರಿಂದ ಅವತಾರ್‌ಬಾಬಾ ಪ್ರವೇ ಶಿಸಿ, "ಹಲೋ ರಂಜಿತಾ, ತುಂಬಾ ದಿನಗಳ ನಂತರ ನಾವು ಭೇಟಿಯಾಗುತ್ತಿ ದ್ದೇವೆ" ಎಂದ ನಗುತ್ತಾ.

ಆಕೆ ಮಾತನಾಡಲಿಲ್ಲ.

"ಮಹಾದ್ರಷ್ಟ ಎಲ್ಲಾ ತಿಳಿಸಿರಬೇಕು. ನಿನ್ನ ತೀರ್ಮಾನ ಏನು?"

"ನಿನ್ನನ್ನ ನಾಶ. ಏನು ಬೇರ್ಯಾವ ಹೆಣ್ಣೂ ಕೋರುತ್ತದೆ ಎಂದು ನಾನು ಒಪ್ಪೋದಿಲ್ಲ" ಎಂದಳು ಕೋಪದಿಂದ.

ಅವನ ಮುಖದಲ್ಲಿದ್ದ ನಗು ಸ್ವಲ್ಪವೂ ಕುಂದಲಿಲ್ಲ. ಗಡ್ಡವನ್ನು ಉಜ್ಜುತ್ತಾ ಮೀಸೆಯನ್ನು ತಿರುವುತ್ತಾ ಎರಡು ಮೂರು ನಿಮಿಷ ಕಳೆದು ಹೇಳಿದ: "ನಾನು ಬಾಬಾ ಅಲ್ಲವೆಂದು ಉಸ್ನೋಕ್‌ನ ಪ್ರತಿಯೊಬ್ಬರಿಗೂ ಗೊತ್ತು. ಬಾಬಾನನ್ನು ಸೈತಾನ ಮೊದಲೇ ಕೊಂದು ಹಾಕಿದೆ. ಅದಕ್ಕೆ ಹಿಂದಿನ ರಾತ್ರಿ ನನಗೆ ಬಾಬಾ ಸ್ಥಾನವನ್ನು ಸೇರಲು ಅಶರೀರವಾಣಿಯ ಆಜ್ಞೆಯಾ ಯಿತು. ಅಂದಿನಿಂದಲೇ ನಾನು ಬಾಬಾ ಆದೆ. ನನ್ನ ಮಹಿಮೆಯಿಂದ ಅನೇಕರನ್ನು ಉಸ್ನೋಕ್‌ಗೆ ಸೇರಿಸಿ ಸೈತಾನನ ಸಾಮ್ರಾಜ್ಯವನ್ನು ಇಲ್ಲಿ ಸ್ಥಾಪಿಸುವುದೇ ನನ್ನ ಇಲ್ಲಿಯ ಕೆಲಸ."

"ಹಾಗಿದ್ದರೆ ನೀನು ಯಾರು?"

"ನಿಜವಾಗಿಯೂ ನೀನು ಇದನ್ನು ತಿಳಿಯಬೇಕೆಂದು ಆಶಿಸುತ್ತೀಯಾ"?

ಎಂದು ಕೇಳಿದಾಗ ಅವನ ಕಂಠದಲ್ಲಿ ಒಡನೆಯೇ ಮಾರ್ಪಾಟು ಬಂದಿತು. ಅದುವರೆವಿಗೂ ಮಾತನಾಡಿದ ಕಂಠಕ್ಕೂ ಇದಕ್ಕೂ ಸಂಬಂಧವಿರಲಿಲ್ಲ. ಬಾಬಾನೇ ಮಾತನಾಡಿದಂತಿತ್ತು. ಅದುವರೆಗಿನ ಈ ಮಾತು. ಅದುವರೆಗೂ ನಿಯಂತ್ರಣದಲ್ಲಿ ಇರಿಸಿದ್ದ ಕಂಠವು ಅದರಿಂದ ಹೊರ ಬಂದು ಮಾಮೂಲಾದಂತೆ ಧ್ವನಿಸುತ್ತಿತ್ತು.

ಯಾವುದೋ ದೊಡ್ಡ ಶಕ್ತಿಯ ನೆರವಿಲ್ಲದೆ ಇದು ಸಾಧ್ಯವಾಗದು ಎನ್ನುವ ತನ್ನ ಭಾವನೆಯನ್ನು ಅಡಗಿಸಿಕೊಂಡು "ಸೈತಾನನ ರಾಜ್ಯ ಸ್ಥಾಪನೆ, ಅದಕ್ಕಾಗಿ ಉಸ್ಸೋಕ್‌ನ ವೃದ್ಧಿ. ಇದೆಲ್ಲಾ ನೋಡುತ್ತಿದ್ದರೆ ಅಳಬೇಕೋ- ನಗಬೇಕೋ ಗೊತ್ತಾಗುತ್ತಿಲ್ಲ. ನೀವೆಲ್ಲಾ ತೀರಾ ದೊಡ್ಡ ಭ್ರಾಂತಿಯಲ್ಲಿದ್ದೀರಿ ಎಂಬುದೇ ನನ್ನ ಅನಿಸಿಕೆ" ಎಂದಳು ರಂಜಿತಾ.

ಗಹಗಹಿಸಿ ನಗುತ್ತಾ "ನಾನೂ ಅದೇ ರೀತಿ ಭ್ರಾಂತಿಯಲ್ಲಿದ್ದೇನೆ ಎಂದೇ ಹೇಳುತ್ತೀಯಾ?" ಎಂದು ಕೇಳಿದ ಅವನು.

"ಎಲ್ಲರಿಗಿಂತಲೂ ನೀನೇ ಅತ್ಯಂತ ಹೆಚ್ಚಿನ ಭ್ರಾಂತಿಯಲ್ಲಿದ್ದೀಯೇ ಎಂಬುದೇ ನನ್ನ ತೀರ್ಮಾನ."

ಒಡನೆಯೇ ಅವಳ ಮುಂದೆ ತನ್ನ ಮುಖವನ್ನು ಒಡ್ಡಿ. "ಈಗ ಹೇಳು ನಾನೂ ಅದೇ ರೀತಿಯ ಭ್ರಾಂತಿಯಲ್ಲಿದ್ದೇನೆ ಎನ್ನುತ್ತೀಯಾ?"ಎಂದು ಕೇಳಿದ.

ಉಸಿರಾಟವನ್ನು ಮರೆತಳು. ಕಂಠದಿಂದ ಸ್ವರವೇ ಹೊರಡಲಿಲ್ಲ. "ನೀನೇ!" ಎಂದು ಮಾತ್ರವೇ ಕೇಳಲು ಸಾಧ್ಯವಾಯಿತು.

ಅವನು ಕಿರುನಗೆ ಬೀರುತ್ತಾ, "ಹೌದು ನಾನೇ ರಂಜಿತಾ! ಈಗ ಹೇಳು. ಅಷ್ಟಾವಕ್ರನು ಹುಟ್ಟುವುದರಲ್ಲಿ ಏನಾದರೂ ಸಂಶಯವಿದೆಯೇ?"

ಷಾಕ್‌ನಿಂದ ಎಚ್ಚರಗೊಳ್ಳಲಿಲ್ಲ. ಭಯದಿಂದ ಗಡಗಡನೆ ನಡುಗಿದಳು. ಅಲ್ಲಿಂದ ದೂರವಾಗಲು ತಕ್ಷಣವೇ ಓಡಿಹೋಗಬೇಕೆನಿಸಿತು, ಎಲ್ಲವೂ ಸ್ಪಷ್ಟವಾಗಿ ಅರ್ಥವಾಯಿತು ಎನಿಸಿತು.

ರಾಕೇಶ್, ಪುಟ್ಟಣ್ಣ ಮುಂತಾದವರೆಲ್ಲಾ ಏಕೆ ಉಸ್ಸೋಕ್‌ನಲ್ಲಿ ಸೇರುತ್ತಿದ್ದಾರೆ ಎಂಬುದು ಅರ್ಥವಾಯಿತು. ಮಹಾದ್ರಷ್ಟನು ಅಷ್ಟಾವಕ್ರನ ಆಗಮನದ ಬಗ್ಗೆ ಇಷ್ಟೊಂದು ನಂಬಿಕೆ ಹೇಗೆ ಪಡೆದಿದ್ದಾನೆ ಎಂಬುದೂ ಅರ್ಥವಾಯಿತು. ಸಿದ್ಧಾರ್ಥನನ್ನು ನೆನಪು ಮಾಡಿಕೊಂಡರೆ ಕರುಣೆ ಉಕ್ಕಿ 'ಅಯ್ಯೋ' ಎನಿಸುತ್ತಿತ್ತು. ಕೇದಾರಗೌರಿಯ ಮರಣ ಚಿರಸತ್ಯ ಎನಿಸುತ್ತಿತ್ತು. ಹೇಗೋ ತನ್ನ ಶಕ್ತಿಯನ್ನೆಲ್ಲಾ ಏಕತ್ರಗೊಳಿಸಿಕೊಂಡು ನಡಗುವ ಧ್ವನಿಯಲ್ಲಿ "ನೀನೇ ಬಾಬಾ ಎಂದು ರಾಕೇಶ್‌ಗಾಗಲಿ, ರಂಗಪ್ರಸಾದ್‌ಗಾಗಲಿ ಗೊತ್ತೆ?" ಎಂದು ಕೇಳಿದಳು.

"ಅವರಿಗೆ ತಿಳಿಯುವ ಅವಕಾಶವೇ ಇಲ್ಲ ರಂಜಿತಾ! ಅಷ್ಟೇ ಅಲ್ಲ ಇನ್ನು ಒಂದೆರಡು ದಿನಗಳಲ್ಲಿ ಷಾಡೋ ಕೂಡ ಎಲ್ಲವನ್ನೂ ಪೂರ್ತಿಯಾಗಿ ಮರೆಯುತ್ತಾನೆ. ಉಸ್ಸೋಕಿನಲ್ಲಿ ನಿನ್ನನ್ನು ಮರಣದಿಂದ ಪಾರು ಮಾಡುವ ಶಕ್ತಿ ನನಗೊಬ್ಬನಿಗೆ ಮಾತ್ರವೇ ಇದೆ. ಮೂರ್ಖಳಂತೆ ಯೋಚಿಸಿ ಹಾಳಾಗಬೇಡ. ನಿನ್ನಂತಹ ಜಾಣೆಯರ ಅಗತ್ಯ ಉಸ್ಸೋಕ್‌ಗೆ ಬಹುವಾಗಿದೆ.

"ನಾನು ಉಸ್ಸೋಕ್‌ನಲ್ಲಿ ಸೇರಿದರೆ ಷಾಡೋನನ್ನು ಬಿಡುತ್ತಾರೇನು?" ಎಂದು ಆಶಾಭಾವದಿಂದ ಕೇಳಿದಳು.

ಅವನೂ ನಗುತ್ತಾ "ಷಾಡೋ ಉಸ್ಸೋಕ್‌ನಲ್ಲಿ ಎಂದೋ ಸೇರಿಕೊಂಡಿದ್ದಾನೆ. ಇನ್ನೊಂದೆರಡು ಇಂಜೆಕ್ಷನ್ ಮಾತ್ರವೇ ಉಳಿದಿದೆ ಅಷ್ಟೆ..."

"ನನ್ನನ್ನೂ ಹಾಗೆಯೇ ಸೇರಿಸಿಕೊಳ್ಳಬಹುದಲ್ಲ. ಅದಕ್ಕೆ ನನ್ನನ್ನು ಇಷ್ಟು ಕೇಳುವಂತಹ ಅಗತ್ಯವಾದರೂ ಏನು?" ರಂಜಿತಾಳ ಸವಾಲು.

ಬ್ರೈನ್‌ವಾಷ್‌ಗೆ ಒಳಪಟ್ಟ ವ್ಯಕ್ತಿ ಯಂತ್ರಮಾನವನಂತೆ. ನಾವು ಹೇಳಿದ ಮಾತನ್ನು ಕೇಳುತ್ತಾನೆಯೇ ವಿನಾ ಸ್ವತಃ ಯೋಚಿಸುವುದಿಲ್ಲ. ನನಗೆ ನೀನು ಬೇಕು–ನಿನ್ನಂತಹ ಯಾಂತ್ರಿಕ ಪುತ್ಥಳಿಯಲ್ಲ. ಉಸ್ಸೋಕ್ ಬೇಡವೆಂದರೂ ನಿನ್ನನ್ನು ಜೀವಂತವಾಗಿ ಉಳಿಸಲು ಪ್ರಯತ್ನಿಸುತ್ತಿರುವುದು ಇದಕ್ಕಾಗಿಯೇ."

ಅವನತ್ತ ಅಸಹ್ಯದಿಂದ ನೋಡುತ್ತಾ. ಷಾಡೋ–ತಾನು ಇಬ್ಬರೂ ಅವತಾರ್ ಬಾಬಾ ಬಳಿಗೆ ಹೋದಾಗಲೇ ಅವನ ನಿಜರೂಪ ಗೊತ್ತಿದ್ದಿದ್ದರೆ ಅಲ್ಲಿಯೇ ಇವನನ್ನು ಬಯಲಿಗೆಳೆಯಬಹುದಾಗಿತ್ತು. ಈಗ ಅಂದುಕೊಂಡು ಏನು ಲಾಭ?

ಅವನು ಅಸಹನೆಯಿಂದ ಕೈಗಡಿಯಾರವನ್ನು ನೋಡಿಕೊಂಡು, "ಹೇಳು ರಂಜಿತಾ, ನನಗೆ ಟೈಂ ಆಗುತ್ತಿದೆ" ಎಂದ.

"ನನಗೆ ಒಪ್ಪಿಗೆ..." ಎಂದಳು. ಆಶ್ಚರ್ಯದಿಂದ ಅವಳನ್ನು ನೋಡಿದ ಅವನು. "ಪ್ರಾಣ ಹೋಗುವ ಸಂದರ್ಭದಲ್ಲಿ ನಾನೇನು ತಾನೇ ಮಾಡಲು ಸಾಧ್ಯ?" ಎಂದಳು ತಲೆ ತಗ್ಗಿಸಿಕೊಂಡು.

"ಗುಡ್" ಎಂದ.

ಅಷ್ಟರಲ್ಲಿ ಇಬ್ಬರು ವ್ಯಕ್ತಿಗಳು ಅಲ್ಲಿಗೆ ಬಂದರು. ಬಾಬಾ ಮುಂದೆ ನಮ್ರತೆಯಿಂದ ಸೊಂಟ ಬಗ್ಗಿಸಿ "ಆಕೆಯನ್ನು ಕರೆತಂದಿದ್ದೇವೆ" ಎಂದರು.

ಆತ ಎದ್ದುನಿಂತು "ನನ್ನೊಂದಿಗೆ ಬಾ ರಂಜಿತಾ" ಎಂದ.

ಎಲ್ಲರೂ ಉದ್ದವಾಗಿದ್ದ ವರಾಂಡದ ಮೂಲಕ ಬಂದು ಬಾಲ್ಕನಿ

ಪ್ರವೇಶಿಸಿದರು. ಕೆಳಗೆ ಹತ್ತು ಅಡಿಗಳ ಆಳದಲ್ಲಿ ನೆಲಮಾಳಿಗೆಯಂತಹ ಪ್ರದೇಶದಲ್ಲಿ ಅಖಾಡಾ ಒಂದು ಏರ್ಪಡಿಸಿದ್ದಾರೆ.

ರಂಜಿತಾ ಆಶ್ಚರ್ಯದಿಂದ ನೋಡುತ್ತಿದ್ದಂತೆಯೇ ಅಖಾಡಾದ ಒಳಗಿನಿಂದ ಚೀರಾಟ ಕೇಳಿಸಿತು. ಒಂದು ಹೆಣ್ಣು ನಿಸ್ಸಾಹಾಯಕಳಾಗಿ ಗೋಳಾಡುತ್ತಿದ್ದಾಳೆ. ಇಬ್ಬರು ಬಲವಾದ ಆಳುಗಳು ಆಕೆಯನ್ನು ಅಖಾಡಾದಲ್ಲಿ ತಳ್ಳುತ್ತಿದ್ದಾರೆ. ರಂಜಿತಾ ಅವಳನ್ನೇ ದಿಟ್ಟಿಸಿ ನೋಡಿದಳು. ಯಾರೋ ಕೂಲಿ ಮಾಡುತ್ತಾ ಜೀವಿಸುವ ಹೆಣ್ಣು, ಜೀವಭಯದಿಂದ ದಿಕ್ಕುಗಳೇ ಪ್ರತಿಧ್ವನಿಸುವಂತೆ ಚೀರುತ್ತಿದ್ದಾಳೆ. ರಂಜಿತಾ ಏನೋ ಹೇಳಲು ಬಾಯ್ತೆರೆಯುತ್ತಿದ್ದಂತೆ ಬಾಬಾ ಕಂಠ ಕೇಳಿಸಿತು.

ಉಸ್ಪೋಕ್ ಬಗ್ಗೆ ಸಣ್ಣ ರಹಸ್ಯವೂ ಬಹಿರಂಗವಾಗುವುದನ್ನು ನಾನು ಸಹಿಸುವುದಿಲ್ಲ ರಂಜಿತಾ! ಪಾಪ ಇವಳಿಗೂ ಉಸ್ಪೋಕ್‌ಗೂ ಯಾವ ಸಂಬಂಧವೂ ಇಲ್ಲ. ಆದರೆ ತನಗೆ ಗೊತ್ತಾದ ಒಂದು ಸಣ್ಣ ವಿಷಯವನ್ನು ಅವಳು ನಾಲ್ಕಾರು ಮಂದಿಗೆ ಹೇಳಿ ಬಹಿರಂಗಗೊಳಿಸಲು ಪ್ರಯತ್ನಿಸಿದಳು. ಅದು ನಮಗೆ ಅಪಾಯಕಾರಿಯಾಗಬಹುದು ಎಂದು...." ಇನ್ನೂ ಆತನ ಮಾತು ಪೂರ್ಣಗೊಳ್ಳಲಿಲ್ಲ. ಅಖಾಡಾದ ಅರಚಾಟ ಉಚ್ಚಸ್ಥಾಯಿಕ್ಕೇರಿತು. ರಂಜಿತಾ ಕೆಳಕ್ಕೆ ನೋಡಿದಳು.

ಆ ದೃಶ್ಯವನ್ನು ಕಾಣುತ್ತಲೇ ಹೊಟ್ಟೆಯೆಲ್ಲಾ ತಿರುವಿದಂತಾಗಿ, ತಲೆ ಸುತ್ತಿ ಮುಂದಕ್ಕೆ ಮುಗ್ಗರಿಸುವಂತಾಗಲು, ತೀರಾ ನಿಗ್ರಹದಿಂದ ಪ್ರಯತ್ನಿಸಿ ನಿಂತಳು.

ಒಂದು ನಾಯಿ ಆಗ್ಗೇ ಆ ಹೆಣ್ಣಿನ ಸೀರೆಯನ್ನು ಹರಿದು ಚಿಂದಿ ಮಾಡಿತ್ತು. ಮತ್ತೊಂದು ನಾಯಿ ಅವಳ ಸ್ತನಗಳನ್ನು ಕಚ್ಚಿ ಹೊರಗೆ ಹಾಕಿತ್ತು ಮತ್ತೊಂದು ಆಕೆಯ ಕಂಠವನ್ನು ಬಿಗಿಯಾಗಿ ಹಿಡಿದಿತ್ತು. ನಾಲ್ಕೈದು ನಿಮಿಷಗಳಲ್ಲಿ ಚೀರಾಟ ನಿಂತಿತು. ಅಲ್ಲಿ ಉಳಿದಿದ್ದು ಮೂಳೆ ಮಾತ್ರವೇ. ತಮ್ಮ ಕೆಲಸ ಮುಗಿಸಿದ ಬೇಟೆಯ ನಾಯಿಗಳು ಒಳಕ್ಕೆ ಹೋದವು.

"ನಡೆಯಿರಿ ಹೋಗೋಣ" ಎಂದ ಹಿಂದಕ್ಕೆ ತಿರುಗುತ್ತಾ, ರಂಜಿತಾ ಹೇಗೆ ನಡೆದಳೆಂಬುದೇ ಗೊತ್ತಾಗಲಿಲ್ಲ.

ಆಕೆ ಯಾರು?...ಆಕೆ ಮಾಡಿದ ತಪ್ಪೇನು?....ಇವರ ಕೈಗೆ ಆಕೆ ಸಿಕ್ಕಿದ್ದು ಹೇಗೆ?...ನೋಡಿದ ದೃಶ್ಯ, ಯೋಚನೆಯ ಸರಮಾಲೆಯಾಗಿ ರಂಜಿತಾಳ ತಲೆಯ ಸಿಡಿತ ಬಲವಾಗಿತ್ತು. ಅಷ್ಟರಲ್ಲಿ ಅವಳ ಭುಜದ ಮೇಲೆ ಕೈ ಹಾಕುತ್ತಾ ಬಾಬಾ ನಕ್ಕು "ಹಾಗಿದ್ದರೆ ಪಾಡೋನನ್ನು ಮರೆತು ನನ್ನೊಂದಿಗೆ

ಇರಲು ತೀರ್ಮಾನಿಸಿದ್ದೀಯೇ ಹೌದೇ?"

ರಂಜಿತಾ ತಲೆದೂಗಿದಳು.

"ಇದರ ಮೇಲೆ ಕೈಯಿಡು."

ಆಗ ರಂಜಿತಾ ಗುರ್ತಿಸಿದಳು. ತಾನು ಇರುವುದೇ ಪ್ರತ್ಯೇಕವಾದ ಕೋಣೆಯಲ್ಲಿ ಎಂದು. ಸುತ್ತಲೂ ಅನೇಕ ಪರಿಕರಗಳಿವೆ. ರಂಜಿತಾಳ ಮುಖ ಕಂದಿತು.

"ಅದು ಲೈ ಡಿಟೆಕ್ಟರ್. ಸುಳ್ಳು ಹೇಳಿದೊಡನೆಯೇ ಗುರ್ತಿಸುತ್ತದೆ."

ರಂಜಿತಾಳ ಮುಖದಲ್ಲಿ ನಡೆಯುತ್ತಿದ್ದ ಬದಲಾವಣೆಗಳನ್ನು ಗಮನಿಸಿ ಗಟ್ಟಿಯಾಗಿ ನಗುತ್ತಾ "ಸುಮ್ಮನೆ ನಾಟಕವಾಡಿ ತಪ್ಪಿಸಿಕೊಳ್ಳೋಣವೆಂದು ಕೊಂಡೆಯೇನೋ?" ಎಂದ. ಅವನ ಮುಖ ವಿಕೃತವಾಗಿ ಬದಲುಗೊಂಡಿತು. ಕೆನ್ನೆಯ ಮೇಲೆ ಛಳೀರನೆ ಬಿಗಿದ. "ಜಾಣೆ ಪರಿಸ್ಥಿತಿಯನ್ನು ಅನುಸರಿಸಿ ಬದಲಾಗುವವಳು ಎಂದು ಭಾವಿಸಿದ್ದೆ. ಈ ರೀತಿ ಚೀಪ್‌ಟ್ರಿಕ್ ಮಾಡ್ತೀಯಾ ಎಂದುಕೊಂಡಿರಲಿಲ್ಲ. ಉಸ್ಮೋಕನ್ನು ತೀರಾ ಸಾಧಾರಣವೆಂದು ತೀರ್ಮಾನಿಸಿದ್ದರೆ ಅದರ ಫಲ ಅನುಭವಿಸಲೇಬೇಕು."

ಭಯಂಕರವಾದ ನಿಶ್ಶಬ್ದದಲ್ಲಿ ಆಕೆಯೊಬ್ಬಳೇ ಉಳಿದಳು. ತಾನೂ ಕೊನೆಯ ಘಟ್ಟ ಮುಟ್ಟಿದ್ದಾಯಿತು ಎಂದುಕೊಂಡಳು. ಅವನ ಮಾತೂ ನಿಜವೇ. ಯಾವುದೋ ಜಾನಪದ ಚಿತ್ರದಲ್ಲಿ ಖಳನಾಯಕನನ್ನು ಕಪಟವಾಗಿ ಪ್ರೇಮಿಸುವ ನಾಯಕಿಯಂತೆ ತಾನು ಅಲ್ಲಿ ವರ್ತಿಸಿದ್ದು ನಿಜವೇ, ಇಷ್ಟೊಂದು ಆಧುನಿಕವೂ ಪ್ರಮಾಣಬದ್ಧವೂ ಆದ ಪರಿಕರಗಳು, ಡಿಟೆಕ್ಟರ್‌ಗಳು ಇರುವ ಎಡೆಯಲ್ಲಿ ಈ ರೀತಿಯ 'ಜಾಣ'ತನ ನಿರುಪಯೋಗಿ ಎಂದೂ, ಇಲ್ಲಿಯವರು ಶತ್ರುಗಳ ಮನವನ್ನು ತೆರೆದ ಪುಸ್ತಕವನ್ನು ಓದುವಂತೆ ನೇರವಾಗಿ ಓದಬಲ್ಲರೆಂಬುದರ ಬಗ್ಗೆ ಆಕೆ ಚಿಂತಿಸಲಿಲ್ಲ. ಮೊದಲಬಾರಿಗೆ ಅವಳಿಗೆ ಉಸ್ಮೋಕ್ ಬಗ್ಗೆ ಬೇರೊಂದು ಅನುಮಾನ ತಲೆ ಎತ್ತಿತು—

ಇಲ್ಲಿರುವ ಎಲೆಕ್ಟ್ರಾನಿಕ್ ಪರಿಕರಗಳೊಂದೊಂದೂ ಕನಿಷ್ಟ ಲಕ್ಷ ರೂಪಾಯಿಯಾದರೂ ಆಗುತ್ತದ. ಈ ಕಟ್ಟಡ, ಅದರಲ್ಲಿಯ ಈ ನಿಖರ ಸಾಮಗ್ರಿಗಳು,ಇವೆಲ್ಲದರ ಖರ್ಚು ಯಾರದು?....ಇದರ ನಿರ್ವಹಣೆ ನಡೆಸುತ್ತಿರುವವರು ಯಾರು?

ಈಗ ಅವತಾರ್‌ಬಾಬಾಗೆ ಜನರು ಲಕ್ಷಗಟ್ಟಲೆ ಹಣ ಕೊಡುತ್ತಿದ್ದಾರೆ. ಆದರೆ ಮೊದಲಿನಿಂದಲೂ ಉಸ್ಮೋಕ್ ಹಿಂದೆ ನಿಂತಿದ್ದನರು ಯಾರು? ಇಷ್ಟೊಂದು ಹಣ ಉಸ್ಮೋಕ್‌ಗೆ ಎಲ್ಲಿಯದು?

ಉಸ್ಸ್ನೋ‌ಕ್....ಉಸ್ಸ್ನೋಕ್....

ಎಲ್ಲರೂ ಭಾವಿಸಿರುವಂತೆ ಕ್ಷುದ್ರಗಣಗಳನ್ನಾರಾಧಿಸುವ ಸಂಸ್ಥೆ ಯಲ್ಲವೇ?

ದಟ್ಟವಾದ ಕಾರ್ಮೋಡಗಳು ಆವರಿಸಿದಾಗ ಇದ್ದಕ್ಕಿದ್ದಂತೆಯೇ ಕಾಣಿಸುವ ಮಿಂಚಿನಂತೆ ರಂಜಿತಾಳ ನೆನಪಿನಂಗಳದಿಂದ ಒಂದೆಳೆ ಹೊರಬಿತ್ತು– ಬೇಟೆಯ ನಾಯಿಗಳ ಬಾಯಿಗೆ ತುತ್ತಾದದ್ದು ಯಾರೆಂಬುದು ಈಗ ಗುರ್ತಿಗೆ ಬಂತು.

ವಿಕೃತ ಶಿಶುಗಳನ್ನು ಹೆತ್ತ ಆರು ಮಂದಿಯಲ್ಲಿ ಒಬ್ಬಳು.

ಆಕೆಯನ್ನು ಏಕೆ ಕೊಂದರೋ ಅರ್ಥವಾಗಲಿಲ್ಲ. ಅವರೆಲ್ಲರನ್ನೂ ಎಷ್ಟೋ ಮಂದಿ ಡಾಕ್ಟರುಗಳೂ, ರಿಪೋರ್ಟರ್‌ಗಳು ಪ್ರಶ್ನಿಸಿದ ನಂತರವೂ ಏನೂ ಗೊತ್ತಾಗಿರಲಿಲ್ಲ. ಹಾಗಿದ್ದರೂ ಈಗ ಹೀಗೇಕೆ?

ಅಷ್ಟರಲ್ಲಿ ತನ್ನ ಸರದಿ ಬಂದಂತೆ ಇಬ್ಬರೂ ಬಂದು ಇಕ್ಕೆಲಗಳಲ್ಲಿ ನಿಂತು ತೋಳನ್ನು ಹಿಡಿದರು. ಈ ಬಾರಿ ತನ್ನನ್ನು ಎಲ್ಲಿಗೆ ಕರೆದೊಯ್ಯುತ್ತಿದ್ದಾರೆ ಎಂಬುದನ್ನೂ ಕೇಳಲಿಲ್ಲ. ಅದನ್ನು ಕೇಳಿಯೂ ಉಪಯೋಗವಿಲ್ಲ ಎಂಬುದನ್ನು ಅರಿತಿದ್ದಳು.

ಎದುರಾಗಿ ಬಾಬಾ ಬರುತ್ತಿದ್ದ. ಈಗ ತನ್ನ ಮಾಮೂಲು ಉಡುಪಿನಲ್ಲಿ ಯುವಕನಂತೆ ಕಾಣುತ್ತಿದ್ದ. ರಂಜಿತಾಳನ್ನು ನೋಡಿ, ತಲೆ ಬೇರೊಂದು ಕಡೆಗೆ ತಿರುಗಿಸಿಕೊಂಡು ಹೊರಟುಹೋದ. 'ಕೊನೆಯ ಅವಕಾಶ ಕೊಟ್ಟೆ. ಅದನ್ನು ನೀನು ಉಪಯೋಗಿಸಿಕೊಳ್ಳಲಿಲ್ಲ' ಎನ್ನುವಂತಿತ್ತು ಆ ನೋಟ. ಬಾಬಾ ಯಾರೆಂಬುದನ್ನು ಪ್ರಪಂಚಕ್ಕೆಲ್ಲಾ ಹೇಳಲು ಅವಕಾಶವಾಗದಿದ್ದರೂ ಹೋಗಲಿ ಷಾಡೋಗಾದರೂ ತಿಳಿಸುವ ಅವಕಾಶ ದೊರೆತರೆ ಎಷ್ಟು ಚೆನ್ನ! ತನ್ನ ಈ ಯೋಚನೆಗಳಿಂದ ಹೊರಬಂದು ಸುತ್ತಲೂ ನೋಡುವ ವೇಳೆಗೆ ಪಕ್ಕದಲ್ಲಿದ್ದ ಆ ಇಬ್ಬರೂ ಇಲ್ಲ!

ತಾನು ಅಖಾಡದಲ್ಲಿದ್ದಳು.

ಪ್ರಸ್ತುತವನ್ನು ಅರಿಯುವಷ್ಟರಲ್ಲಿ ದೂರದಲ್ಲಿ ಎಲ್ಲೋ ಮೋಟಾರ್ ಚಲಿಸುವ ಸದ್ದು. ನಾಲ್ಕು ಕಡೆಯಿಂದ ಬಾಗಿಲುಗಳು ಮೇಲೇರುತ್ತಿರುವ ಧ್ವನಿ.

ಈ ಎರಡೂ ಧ್ವನಿಗಳ ಹಿಂದೆಯೇ ತೀರಾ ಮೆದುವಾಗಿ ಬೇಟೆ ನಾಯಿಗಳ ಬುಸುಗುಟ್ಟುತ್ತಾ ಉಸಿರಾಡುತ್ತಿರುವುದರ ಶಬ್ದ. ಒಳಗಣ ಕತ್ತಲಲ್ಲಿ ಅವುಗಳ ಕಣ್ಣು ಭಯಂಕರವಾಗಿ ಹೊಳೆಯುತ್ತಿದ್ದವು.

ಮರುಗಳಿಗೆಯೇ ಅವು ಹೊರಬಂದವು.

ಬಲಗೈಯಿಂದ ಮಂಜನ್ನು ತಡವುತ್ತಾ, ಎಡಗೈಯಿಂದ ಏಕ್ಸನ್ನು ಭೂಮಿಯೊಳಕ್ಕೆ ಚುಚ್ಚಲು ಪ್ರಯತ್ನಿಸುತ್ತಾ ಸಿದ್ಧಾರ್ಥ ಇಳಿಜಾರಿನಲ್ಲಿ ಜಾರುತ್ತಾ ಸಾಗಿಹೋಗುತ್ತಿದ್ದಾಗ ಕೊನೆಯ ಕ್ಷಣದಲ್ಲಿ ಏಕ್ಸ್ ಒಂದು ಕಡೆ ಸಿಕ್ಕಿಕೊಂಡಂತೆ ನಿಂತುಹೋಯಿತು. ಹಾರೆಯಿಂದ ಭೂಮಿಯನ್ನು ಅಗೆಯುತ್ತಿದ್ದರೆ ಪುರಾತನ ಕಾಲದ ಮರದ ಕಾಂಡ ಮೇಲೆ ತೇಲಿಬಂದಂತೆ ಏಕ್ಸ್‌ಗೆ ಮಂಜಿನ ಕೆಳಗೆ ಏನೋ ಸಿಕ್ಕಿಕೊಂಡಿತು. ಅಷ್ಟು ಮಾತ್ರದ ಆಧಾರ ಮೇಲೆ ದೊರೆತೊಡನೆಯೇ ಸಿದ್ಧಾರ್ಥ ತಡಮಾಡದೆಯೇ ಕಾಲನ್ನು ಒತ್ತಿಹಿಡಿದು ಪಾದಗಳಿಗೆ ಮಂಜಿನ ಹಳ್ಳದಲ್ಲಿ ಎಡೆಮಾಡಿಕೊಂಡ. ಆದರೂ ರಾಕೇಶ್ ತೂಕವು ಅವನನ್ನು ಕೆಳಕ್ಕೆ ಸೆಳೆಯುತ್ತಿತ್ತು.

ಪಕ್ಕದಲ್ಲಿಯೇ ದೊಡ್ಡದಾದ ಮಂಜುಮುದ್ದೆಯೊಂದು ಕಾಣಿಸಿತು. ಅದು ಮಂಜಿನ ಉಂಡೆಯೋ, ಕಲ್ಲೋ ಎಂಬುದನ್ನು ಪರೀಕ್ಷಿಸಿ ಸಂತೃಪ್ತಿಗೊಂಡು ಇದ್ದ ಅದರ ಸುತ್ತಲೂ ಒಮ್ಮೆ ತಿರುಗಿದ. ಹಗ್ಗ ಬಿಗಿದು ಕಲ್ಲಿನ ಸುತ್ತಲೂ ಮಂಜಿನ ಪೊರೆ ಒಡೆಯಿತು.

ರಾಕೇಶನ ಭಾರವೆಲ್ಲಾ ಕಲ್ಲಿಗೆ ಬದಲಾಗುತ್ತಲೇ ಸಿದ್ಧಾರ್ಥನಿಗೆ ಸ್ವಲ್ಪ ಸರಾಗವಾಯಿತು. ಅಂಚಿನೆಡೆಗೆ ಹೋಗಿ "ರಾಕೇಶ್" ಎಂದು ಕಿರುಚಿದ.

ಕೆಳಗಿನಿಂದ ಸದ್ದೇ ಇಲ್ಲ.

ಸೊಂಟಕ್ಕೆ ಬಿಗಿದಿದ್ದ ಹಗ್ಗ ಬೆನ್ನು ಮೂಳೆಯನ್ನೇ ಮುರಿಯಿತೇನೋ ಎಂಬ ಅನುಮಾನ ಸಿದ್ಧಾರ್ಥನಲ್ಲಿ ತಲೆ ಎತ್ತಿತು. ಕೆಳಗಿನಿಂದ ಸಣ್ಣದಾಗಿ ಮುಲುಕು ಕೇಳಿಸಿತು.

"ರಾಕೇಶ್, ಚೆನ್ನಾಗಿದ್ದೀಯಾ? ಎಂದು ಕೇಳಿದ.

"ಹೌದು" ಎಂದ ಕಿರುಧ್ವನಿಯಲ್ಲಿ.

"ಕೆಳಗೆ ನೋಡಬೇಡ—ವರ್ಟಿಗೋ (ಕಣ್ಣಿಗೆ ಸಂಬಂಧಿಸಿದ ತೀರಾ ಭಯಂಕರವಾದ ಮಾನಸಿಕ ವ್ಯಾಧಿ) ಬರುತ್ತೆ" ಎಂದು ಮೇಲಿನಿಂದ ಎಚ್ಚರಿಸಿದ ಸಿದ್ಧಾರ್ಥ.

ಶಿಖರದ ಅಂಚಿನೊಂದಿಗೆ ಹಗ್ಗ ಉಜ್ಜದಂತೆ ಮತ್ತೊಂದು ಕೋನದಲ್ಲಿ

ಮುಡಿಹಾಕಿ ಅದನ್ನು ಹಿಡಿದು ಎಚ್ಚರಿಕೆಯಿಂದ ಬಗ್ಗಿ ನೋಡಿದ.

ಕೆಳಗೆ ಗಾಳಿಯಲ್ಲಿ ತೂಗಾಡುತ್ತಿದ್ದ ರಾಕೇಶ್.

ಬಲವಾಗಿ ಹಗ್ಗವನ್ನು ಮೇಲಕ್ಕೆ ಸೆಳೆದುಕೊಳ್ಳಲಾರಂಭಿಸಿದ. ಚಳಿಗೆ ಸೆಟೆದುಕೊಂಡಿದ್ದ ಮೈ ಆ ಕೆಲಸಕ್ಕೆ ನಿರಾಕರಿಸುತ್ತಿದ್ದರೂ ತನ್ನೆಲ್ಲಾ ಬಲವನ್ನೂ ಕೈಗಳಲ್ಲಿ ಕ್ರೋಢೀಕರಿಸಿಕೊಂಡು ಕಾರ್ಯೋನ್ಮುಖನಾದ. ಅಂಗೈ ಕೊಯ್ದು ರಕ್ತ ಸುರಿಯಿತು.

ರಾಕೇಶ್ ಮೇಲೆ ಬರಲು ಹದಿನೈದು ನಿಮಿಷಗಳು ಬೇಕಾಯಿತು. ಅಚೇತನಾವಸ್ಥೆಯಲ್ಲಿದ್ದ ರಾಕೇಶ್ ಮೇಲ್ಭಾಗಕ್ಕೆ ಬರುತ್ತಲೇ ಮೂರ್ಛೆಹೋದ.

ನೊಸಲಿನಿಂದ ಜಾರಿಬರುತ್ತಿದ್ದ ಬೆವರಿನ ಹನಿ ಕೆನ್ನೆಯ ಮೇಲೆ ಬರುವ ವೇಳೆಗೇ ಘನೀಭವಿಸಿ ಮಂಜಾಗುತ್ತಿತ್ತು. ಶೀತಲಗಾಳಿಯ ಪ್ರಭಾವ ಅಷ್ಟಿತ್ತು. ಆದರೂ ಮೈ ಬೆವರುತ್ತಲೇ ಇತ್ತು.

ಎರಡು ನಿಮಿಷಗಳ ನಂತರ ರಾಕೇಶ್ ಕಣ್ತೆರೆದ.

"ಹೇಗಿದ್ದೀ?"

ನಿಶ್ಶಕ್ತನಾಗಿದ್ದಂತೆ ಮೆಲ್ಲನೆ ತಲೆದೂಗಿದ. ಷಾಕ್‌ನಿಂದ ಇನ್ನೂ ಎಚ್ಚರಗೊಂಡಿರಲಿಲ್ಲ.

"ಇನ್ನೊಂದು ಹಿಮಬಿರುಗಾಳಿ ಪ್ರಾರಂಭವಾಗುವ ಸೂಚನೆಗಳಿವೆ. ಬೇಗ ನಾವು ಹೊರಡಬೇಕು" ಎಂದ ಸಿದ್ಧಾರ್ಥ ದಕ್ಷಿಣ ದಿಕ್ಕನ್ನು ನೋಡುತ್ತಾ, ಹಿಮಾಲಯದಲ್ಲಿ ಹಿಮಬಿರುಗಾಳಿ ಬರುವ ಸೂಚನೆಗಳು ಕಂಡುಬಂದಾಗ ಆ ಶಿಬಿರವನ್ನೇ 'ಕೊಡೆ'ಯನ್ನಾಗಿಸಿಕೊಳ್ಳುವಂತೆ ವಿರೋಧ ದಿಕ್ಕನ್ನು ಸೇರಿಕೊಳ್ಳುವುದು ಒಳ್ಳೆಯದು. ಅನ್ಯಥಾ ಶಿಖರದೊಂದಿಗೆ ಹತ್ತು ನಿಮಿಷಗಳಲ್ಲಿ ಮಂಜಿನಿಂದ ಮುಚ್ಚಿಹೋಗುವ ಅಪಾಯವಿದೆ.

"ನನ್ನಿಂದ ಏಳಲು ಸಾಧ್ಯವಿಲ್ಲ.... ಇಲ್ಲೇ ಸಾಯ್ತೀನಿ" ಎಂದ ರಾಕೇಶ್.

"ರಾಕೇಶ್!" ಸಿದ್ಧಾರ್ಥನ ಧ್ವನಿ ಗಂಭೀರವಾಗಿ ಕೇಳಿಸಿತು. "ಇಂಥಾ ಪರಿಸ್ಥಿತಿಯಲ್ಲಿ ಮಾನಸಿಕವಾಗಿ ಯಾವ ದೌರ್ಬಲ್ಯವೂ ಇರಕೂಡದು. ಸ್ವಲ್ಪ ದುರ್ಬಲರಾದರೂ ಹುಚ್ಚರಾಗುತ್ತೇವೆ. ಸುತ್ತಲೂ ನೋಡು ಸ್ವಚ್ಛ ಬಿಳುಪು. ಇಷ್ಟು ಬಿಳಿ ಬಣ್ಣ ಈ ನಿಶ್ಶಬ್ದಕ್ಕೆ ಸ್ವಲ್ಪ ಭಯಗೊಂಡರೂ ಸಾಕು ಹಿಸ್ಟೀರಿಯಾ ಆವರಿಸುತ್ತದೆ. ಮನಸ್ಸನ್ನು ದೃಢಪಡಿಸಿಕೋ."

ರಾಕೇಶ್ ಆಶ್ಚರ್ಯದಿಂದ ಸಿದ್ಧಾರ್ಥನತ್ತ ನೋಡಿದ. ಸಿದ್ಧಾರ್ಥ ಮಾಮೂಲಿಯಾಗಿಯೇ ಇದ್ದಾನೆ. ಆಗ ಆನಂದವಲ್ಲೂ ಈಗ ಪ್ರಾಣಾಂತಕ

ಸ್ಥಿತಿಯಲ್ಲೂ ಒಂದೇ ರೀತಿಯಾಗಿದ್ದಾನೆ. ಅಷ್ಟರಲ್ಲಿ ರಾಕೇಶ್‌ನ ದೃಷ್ಟಿ ಅವನ ಅಂಗೈಗಳ ಮೇಲೆ ಬಿತ್ತು. ಕೆಂಪು ಬಣ್ಣದಲ್ಲಿ ಅದ್ದಿದಂತೆ ಕಾಣುತ್ತಿತ್ತು. ಹಗ್ಗ ಅಂಗೈ ಚರ್ಮವನ್ನು ಕತ್ತರಿಸಿತ್ತು. ಅದನ್ನು ನೋಡಲಾರದೆ ರಾಕೇಶ್ ಮುಖವನ್ನು ಬೇರೊಂದು ದಿಕ್ಕಿಗೆ ತಿರುಗಿಸಿದ.

"ಹೆಚ್ಚು ಕಾಲವಿಲ್ಲ ನಡಿ" ಎಂದು ಸಿದ್ಧಾರ್ಥ ಎದ್ದು ರಾಕೇಶ್‌ನನ್ನು ಎಬ್ಬಿಸಲು ಮತ್ತೆ ಪ್ರಯತ್ನ ನಡೆಸಿದ.

ನೋಡುತ್ತಿದ್ದಂತೆಯೇ ಕತ್ತಲೆಯಾವರಿಸಿತು. ಗಾಳಿ ಒಂದು ತೆರನಾದ ಸದ್ದು ಮಾಡುತ್ತಲೇ ಇದೆ. ಗಾಳಿಯೊಂದಿಗೆ ಮಂಜಿನ ಹುಡಿ ಹಾರಿಬರುತ್ತಾ ಭಯಂಕರ ವಾಗಿ ಕಾಣಿಸುತ್ತಿದೆ. ವಿಪರೀತವಾದ ಚಳಿ. ಕಣ್ಮುಚ್ಚಿದರೂ ಮುಂದೇನಿದೆ ಎಂಬುದು ಗೊತ್ತಾಗುತ್ತಿರಲಿಲ್ಲ. ಸಾಧಾರಣ ರೀತಿಯಲ್ಲಿ ಮಾತನಾಡಲೂ ಕೂಡ ಕಂಠ ಹರಿಯುವಂತೆ ಅರಚಿಯೇ ಮಾತನಾಡಬೇಕಾಗಿತ್ತು.

"ಇದೇ ನಮ್ಮ ಕೊನೆಯ ರಾತ್ರಿಯಾಗಬಹುದು. ನಾಳೆ ಸಂಜೆಯ ಒಳಗಾಗಿ ನಾವು ಇಲ್ಲಿಂದ ಹೊರಕ್ಕೆ ಹೋಗದಿದ್ದರೆ ಖಂಡಿತವಾಗಿ ಈ ರಾತ್ರಿಗೇ ಸಾಯುತ್ತೇವೆ...." ಎಂದ ಸಿದ್ಧಾರ್ಥ.

ರಾಕೇಶ್‌ಗೆ ಈ ಮಾತು ಅರ್ಧ ಮಾತ್ರವೇ ಕೇಳಿಸಿತು. ಕಣ್ಣು ಮುಚ್ಚಿ ಕೊಂಡು ಹೋಗುತ್ತಿತ್ತು. ಆಗ್ಗೆ ಅವರು ಶಿಖರದ ಪಕ್ಕಕ್ಕೆ ಬಂದಿದ್ದರಿಂದ ಬಿರುಗಾಳಿಯ ಭೀಕರ ಪರಿಣಾಮ ಇನ್ನೂ ಅವರ ಅನುಭವಕ್ಕೆ ಬಂದಿರಲಿಲ್ಲ. ಚಳಿಮಾತ್ರ ಅವರ ಮೂಳೆಗಳನ್ನು ಕರಕರನೆ ಕೊರೆಯುತ್ತಿತ್ತು. ಗುಹೆ ಯಂತಹುದು ಯಾವುದಾದರೂ ಕಾಣಿಸುತ್ತದೆಯೇನೋ ಎಂದು ನೋಡಿದ ಸಿದ್ಧಾರ್ಥ. ಅಂತಹುದು ಕಾಣಿಸಲಿಲ್ಲ. ಏಕ್ಸ್‌ನೊಂದಿಗೆ ಅರ್ಧಗಂಟೆಯ ಶ್ರಮದೊಂದಿಗೆ ಒಂದು ಗುಹೆ ಸಿದ್ಧಗೊಳಿಸಿದ.

"ಅರ್ಧ ಗಂಟೆಗಿಂತಲೂ ಹೆಚ್ಚು ವಿಶ್ರಾಂತಿ ಕೂಡದು. ಸರದಿ ಪ್ರಕಾರ ನಾವು ಎಚ್ಚರಗೊಂಡಿರಬೇಕು. ಕಾಲಿನ ಬೆರಳುಗಳು, ಕಿವಿ ಮತ್ತು ಮೂಗಿನ ಅಂಚು ಗಳು ಉಜ್ಜುತ್ತಾ ಸ್ವಲ್ಪ ಕಾಲ ಓಡಾಡುತ್ತಾ ರಾತ್ರಿ ಕಳೆಯಬೇಕು. ಇಲ್ಲದಿದ್ದರೆ ಬೆಳಗ್ಗೆ ಏಳುವ ವೇಳೆಗೆ ಮಾಂಸ ಕೊಳೆತುಹೋಗಿರುತ್ತದೆ" ಎಂದ ಸಿದ್ಧಾರ್ಥ.

ಏಕ್ಸ್‌ಗೆ ಏನೋ ತಗುಲಿತು. ಇಬ್ಬರೂ ಪರಸ್ಪರ ಮುಖಗಳನ್ನು ನೋಡಿಕೊಂಡರು. ರಾಕೇಶ್ ಅದನ್ನು ಮಂಜಿನಿಂದ ಹೊರಕ್ಕೆ ತೆಗೆಯಲು ಪ್ರಯತ್ನಿಸಿದ. ಬೇಗ ಅದು ಹೊರಬರಲಿಲ್ಲ. ಕೈ ಮತ್ತಷ್ಟು ಒಳಕ್ಕೆ ಹಾಕಿ ಅದನ್ನು ಹೊರಕ್ಕೆ ಸೆಳೆಯಲು ಪ್ರಯತ್ನಿಸಿದ. ಒಳಗಿನಿಂದ ಹೊರಬಂದುದನ್ನು ನೋಡಿ ರಾಕೇಶ್ ಎದೆಯೊಡೆಯುವಂತೆ ಚೀರಿದ.

ಬಂದದ್ದು ಒಂದು ಕೈ!

ಸಿದ್ಧಾರ್ಥನೂ ನಿಶ್ಚೇತನನಾದ. ನಿರ್ಮಾನುಷ್ಯವಾದ ಆ ಪ್ರದೇಶದಲ್ಲಿ ಹಿಮ ಶಿಖರಗಳ ಮಧ್ಯೆ ಬಿಳಿಯ ಮಂಜಿನ ತೆರೆಗಳ ಅಡಿಯಿಂದ ಹೊರಕ್ಕೆ ಕಾಣಿಸಿಕೊಂಡ ಕೈ ಎಂಥಾ ಧೈರ್ಯವಂತನನ್ನೂ ಭಯಕಂಪಿತನನ್ನಾಗಿ ಮಾಡುತ್ತದೆ.

ಸಿದ್ಧಾರ್ಥ ಬಹುಬೇಗ ಈ ಸ್ಥಿತಿಯಿಂದ ಎಚ್ಚರಗೊಂಡ.

ಸುತ್ತಲೂ ಇದ್ದ ಮಂಜನ್ನು ದೂರಮಾಡಿ ಒಂದು ದೇಹವನ್ನು ಹೊರತೆಗೆದರು. ಅದನ್ನು ನೋಡಿದೊಡನೆಯೇ ಇಬ್ಬರ ಮುಖವು ರಕ್ತಹೀನವಾದಂತೆ ಬಿಳಿಚಿಕೊಂಡವು—ಆ ಮೃತದೇಹ ಷೆರ್ಪಾನದು. ಅವರೊಂದಿಗೆ ಬಂದು ಹಿಮಪಾತದಲ್ಲಿ ಸಿಕ್ಕಿ ಸತ್ತ ಷೆರ್ಪಾನದು.

ಹಿಮದಲ್ಲಿ ಸ್ಥಾಪಿತಗೊಂಡಿದ್ದರಿಂದ ದೇಹ ಯಾವ ರೀತಿಯ ಬದಲಾವಣೆಯೂ ಹೊಂದದೆ ಹಾಗೇ ಇತ್ತು. ಕಣ್ಣಲ್ಲಿಯ ಜೀವಕಳೆಯೂ ನಾಶವಾಗಿಲ್ಲ. ಮೈಮಾತ್ರ ಕಬ್ಬಿಣದ ಕಂಬಿಯಂತೆ ಸೆಟೆದುಕೊಂಡು ತಣ್ಣಗೆ ಕೊರೆಯುತ್ತಿತ್ತು.

ಅವರನ್ನು ಆವರಿಸಿದ್ದ ಚಿಂತೆ ಷೆರ್ಪಾ ಬಗ್ಗೆಯಲ್ಲ. ತಾವು ಎಲ್ಲಿಂದ ಪ್ರಯಾಣ ಪ್ರಾರಂಭಿಸಿದರೋ ಅಲ್ಲಿಗೆ ಬಂದಿದ್ದರು ಎಂಬುದು! ಎಂದರೆ ಜನನಿಬಿಡ ಪ್ರದೇಶವನ್ನು ಅವರು ಸೇರುವುದು ಅಸಾಧ್ಯವೇ?...

ಇದರಿಂದ ರಾಕೇಶ್ ಹುಚ್ಚನಂತಾದ. ಮೊಣಕಾಲಿನ ಮೇಲೆ ಕುಸಿದು ಕುಳಿತು ದುಃಖಿಸಿದ. ಸಿದ್ಧಾರ್ಥ ಮಾತ್ರ ಷೆರ್ಪಾನ ಉಡುಪನ್ನು ಬಿಚ್ಚತೊಡಗಿದ. ಐದು ನಿಮಿಷದಲ್ಲಿ ಅವನ ಬಟ್ಟೆಗಳನ್ನು ತೆಗೆದು ರಾಕೇಶನಿಗೆ ಹೊದಿಸಿ ಮತ್ತೆ ಹುಡುಕತೊಡಗಿದ. ಷೆರ್ಪಾನ ಬಟ್ಟೆಗಳು ಹೊದಿಕೆಯಾಗುತ್ತಲೇ ಹೊಸ ಬಿಸಿ ಮೂಡಿತು. ಸಿದ್ಧಾರ್ಥನತ್ತ ಕೃತಜ್ಞತೆಯಿಂದ ನೋಡಿದ.

ಈ ಜಗತ್ತಿನಲ್ಲಿ ಮೇಲ್ನೋಟಕ್ಕೆ ತುಂಬಾ ಧೈರ್ಯವಂತರಾಗಿ ಕಾಣುವವರೂ ಇಂತಹ ಪರಿಸ್ಥಿತಿಗಳಲ್ಲಿ ಮನೋಸ್ಥೈರ್ಯವನ್ನು ಕಳೆದುಕೊಳ್ಳುತ್ತಾರೆ. ಸಿದ್ಧಾರ್ಥ ಪಕ್ಕದಲ್ಲಿಲ್ಲದಿದ್ದರೆ ರಾಕೇಶ್ ತನ್ನ ಹೋರಾಟವನ್ನು ನಿಲ್ಲಿಸಿ ಮಂಜಿನಲ್ಲಿ ಸಜೀವ ಸಮಾಧಿಯಾಗುತ್ತಿದ್ದ.

ಸಿದ್ಧಾರ್ಥ ಮಂಜಿನಲ್ಲಿ ಇನ್ನೂ ಏನೋ ಹುಡುಕುತ್ತಿದ್ದುದನ್ನು ಕಂಡು ಏನು ಎಂದು ಕೇಳುತ್ತಿದ್ದಂತೆಯೇ ಮಂಜಿನೊಳಗಿಂದ ಬ್ಯಾಗ್‌ಅನ್ನು ಹೊರತೆಗೆದ. ಷೆರ್ಪಾನ ಬ್ಯಾಗ್ ಅದು. ಟೀ ತಯಾರುಮಾಡಲು ಸಾಮಗ್ರಿ, ಲೈಟರ್ ಇತ್ಯಾದಿ ವಸ್ತುಗಳಿದ್ದವು.

"ಅದೃಷ್ಟ ಇನ್ನೂ ಅಲ್ಪಸ್ವಲ್ಪ ಉಳಿದಿದೆ!" ಎಂದ ಸಿದ್ಧಾರ್ಥ ಲೈಟರ್ ಬೆಳಗಿಸುತ್ತಾ. ಹತ್ತು ನಿಮಿಷದಲ್ಲಿ ಟೀ ತಯಾರಾಯಿತು. ಸುಮಾರು

ಮೂವ್ವತ್ತಾರು ಗಂಟೆಗಳ ಕಾಲ ಏನೂ ಇಲ್ಲದೆ ಇದ್ದುದರಿಂದ ಅದು ಅಮೃತ ದಂತೆ ರುಚಿಯಾಯಿತು.

"ಟೈಮೆಷ್ಟಾಯಿತು?"

"ಹನ್ನೊಂದೂವರೆ."

ಸೂರ್ಯೋದಯಕ್ಕೆ ಇನ್ನೂ ಆರು ಗಂಟೆ ಬೇಕು. ಆರು ಸುದೀರ್ಘ ಗಂಟೆಗಳು.

ನಂತರ ತಾನೇ ಇರುವುದೇನು? ಗುರಿ ಕಾಣದೆ ಮತ್ತೆ ಮಂಜಿನ ಮೇಲೆ ಸುತ್ತುವುದೇ!

ಗಾಳಿಯ ಸದ್ದು ತುಂಬಾ ಭಯಂಕರವಾಗಿ ಕೇಳಿಸುತ್ತಿತ್ತು.

ರಾಕೇಶ್ ಕಣ್ಣು ಎಳೆಯುತ್ತಿತ್ತು. ಪೆಪರ್ ಬಟ್ಟೆಗಳು ಅವನ ಮೈ ಆವರಿಸಿದ್ದರಿಂದ ಬಿಸಿ ಈಗ ಹೆಚ್ಚಿತ್ತು. ತೂಕಡಿಸುತ್ತಿದ್ದಂತೆ ಎದೆ ನಡುಗಿಸುವ ದೊಡ್ಡ ಸದ್ದು. ಆ ಸದ್ದಿಗೆ ಗುಹೆ ಕಂಪಿಸಿತು. ಕಾಲ ಕೆಳಗಿನ ನೆಲ ಚಲಿಸಿತು.

ರಾಕೇಶ್ ನಡುಗಿದ. ಹೊರಕ್ಕೆ ಓಡಲು ಎದ್ದ.

"ಬೇಡ....ಬೇಡ...." ಎಂದು ಕಿರುಚುತ್ತಾ ಸಿದ್ಧಾರ್ಥ ರಾಕೇಶನನ್ನು ಹಿಡಿದ. ಅವನ ಹಿಡಿತಕ್ಕೆ ಸಿಕ್ಕಿದ ರಾಕೇಶ್ ಹಿಂತಿರುಗಿದ. ಅಷ್ಟರಲ್ಲಿ ಮಂಜು ಅವರ ಗುಹೆಯ ಮೇಲಿಂದ ಕೆಳಕ್ಕೆ ಸುರಿಯಿತು.

ಹಿಮಪಾತ ಪ್ರಾರಂಭವಾಗಿತ್ತು.

ಐದಾರು ನಿಮಿಷಗಳ ಕಾಲ ಮೇಲಿಂದ ಮಂಜು ಒಂದೇ ಸಮನೆ ಬೀಳುತ್ತಿತ್ತು. ಮಂಜೆಲ್ಲಾ ಜಾರಿ ಕೆಳಕ್ಕೆ ಹೋಗಿದ್ದರಿಂದ ಅವರ ಗುಹೆ ಮುಚ್ಚಲಿಲ್ಲ. ಅದು ಅವರ ಅದೃಷ್ಟ. ಆದರಿಂದ ಅವರು ಹೊರಬಂದಿದ್ದರೆ ಖಂಡಿತವಾಗಿ ಜೀವಸಮಾಧಿಯಾಗುತ್ತಿದ್ದರು.

ರಾಕೇಶ್ ಮೊಣಕಾಲ ಮೇಲೆ ಕುಳಿತಿದ್ದ. ಅವನ ಹೃದಯಬಡಿತದ ವೇಗ ಸ್ಪಷ್ಟವಾಗಿ ಕೇಳಿಸುತ್ತಿತ್ತು.

ಸಿದ್ಧಾರ್ಥ ಅವನ ಕಾಲನ್ನು ನೋಡುತ್ತಾ "ಅರೆರೆ... ಇದೇನು?" ಎಂದು ಕಿರುಚಿದ.

ರಾಕೇಶನ ಕಾಲಿನಿಂದ ರಕ್ತ ಸುರಿಯುತ್ತಿತ್ತು. ಹೊರಗಿನಿಂದ ಒಳಕ್ಕೆ ಬಂದಾಗ ಆದ ಗಾಯ. ರಾಕೇಶನೂ ಆಗತಾನೇ ಅದನ್ನು ಗಮನಿಸಿದ್ದ.

"ನೋವಾಗುತ್ತಿಲ್ಲವೇ?"

ಇಲ್ಲವೆನ್ನುವಂತೆ ರಾಕೇಶ್ ತಲೆಯಾಡಿಸಿದ.

ಏನೋ ಅನುಮಾನ ಬಂದವನಂತೆ ಕತ್ತಿಯನ್ನು ಮೊಣಕಾಲ ಬಳಿ

ಚುಚ್ಚಿ "ಈಗ ನೋವಾಗುತ್ತಿದೆಯೇ?" ಎಂದು ಕೇಳಿದ.

ರಾಕೇಶ್ ಇಲ್ಲವೆಂದ.

ಸೂಕ್ಷ್ಮವಾಗಿ ಪರೀಕ್ಷಿಸಿದ.

"ಏನಾಗಿದೆ?" ಎಂದು ರಾಕೇಶ್ ಆತುರದಿಂದ ಕೇಳಿದ. ಆದರೆ ಸಿದ್ಧಾರ್ಥ ಉತ್ತರಿಸಲಿಲ್ಲ.

"ನನಗೆ ಗೊತ್ತು....ಗೊತ್ತು...ಇದು ಹಿಮವ್ರಣ..." ಎಂದು ಹುಚ್ಚನಂತೆ ಅರಚಿದ.

ಸಿದ್ಧಾರ್ಥ ಅಲ್ಲವೆಂದು ಹೇಳಲಿಲ್ಲ. ಸುಳ್ಳು ಹೇಳಿ ಪ್ರಯೋಜನವೇನು? ಒಂದು ವೇಳೆ ನಾಗರಿಕ ಪ್ರಪಂಚವನ್ನು ಸೇರಿದ್ದಾದರೆ ತಡಮಾಡದೆ ಅವನ ಕಾಲು ತೊಡೆಯತನಕ ತೆಗೆಯಬೇಕು. ಮಂಜಿನಿಂದ ಅವನ ಕಾಲಿನ ಮಾಂಸ ಸತ್ತುಹೋಗಿತ್ತು. (ಅದನ್ನೇ ಹಿಮವ್ರಣ ಎನ್ನುತ್ತಾರೆ). ಅದು ಸೊಂಟವನ್ನು ಆವರಿಸುವುದಕ್ಕೂ ಮೊದಲೇ ಅದನ್ನು ತಡೆಯಬೇಕು. ಈ ವಿಷಯ ರಾಕೇಶನಿಗೂ ಗೊತ್ತು. ಅವನು ಕಣ್ಣೀರು ಸುರಿಸುತ್ತಿದ್ದ.

ಸಿದ್ಧಾರ್ಥ ಅವನನ್ನು ಬಳಿಗೆ ಸೆಳೆದುಕೊಂಡ. ಒಡನೆಯೇ ಚಿಕ್ಕ ಮಗುವಿನಂತೆ ಗೋಳೋ ಎಂದು ಅತ್ತ ರಾಕೇಶ್. ಯುಗಯುಗಗಳಿಂದ ಹೆಪ್ಪುಗಟ್ಟಿದ್ದ ದುಃಖ ಒಂದೇ ಸಾರಿಗೆ ಕರಗಿ ಪ್ರವಹಿಸಿದಂತಿತ್ತು. ತಾಯಿಯ ಮಡಿಲಲ್ಲಿ ಅಳುವ ಮಗುವಿನಂತೆ ವಿಲಪಿಸುತ್ತಿದ್ದ.

ಅವನ ಅಳುವನ್ನು ಸಿದ್ಧಾರ್ಥನೂ ತಡೆಯಲಿಲ್ಲ. ಕಣ್ಣೀರು ಪೂರ್ತಿಯಾಗಿ ಹರಿಯಲೆಂದುಬಿಟ್ಟ. ಅವನ ದುಃಖಾವೇಶ, ಕಣ್ಣೀರು ಕಡಿಮೆಯಾಗುತ್ತಲೇ "ಹೆದರಬೇಡ. ನಾವು ಖಂಡಿತವಾಗಿ ಈ ಪರಿಸ್ಥಿತಿಯಿಂದ ಉಳಿದುಕೊಳ್ಳುತ್ತೇವೆ ಎಂದೇ ನನ್ನ ಮನಸ್ಸು ಹೇಳುತ್ತಿದೆ" ಎಂದ.

ರಾಕೇಶ್ ಮಾತನಾಡಲಿಲ್ಲ.

"ಕಾಲಿನ ಬಗ್ಗೆ ಚಿಂತಿಸುತ್ತಿದ್ದೀಯಾ?..."

"ಅಲ್ಲ...ಅಲ್ಲ...." ಎಂದು ಅರಚಿದ ರಾಕೇಶ್. ಅವನ ಮುಖ ತುಂಬಾ ಆವೇಶಪೂರ್ಣವಾಗಿತ್ತು! ಅಂತಹ ಆವೇಶ ಇದುವರೆವಿಗೂ ಸಿದ್ಧಾರ್ಥ ಕಂಡಿರಲಿಲ್ಲ. "ನಾನೆಷ್ಟು ಕಟ್ಟವನೋ ನಿನಗೆ ಗೊತ್ತೇ ಸಿದ್ಧಾರ್ಥ!...ಕೇದಾರಗೌರಿಯಲ್ಲಿ ಅಷ್ಟಾವಕ್ರ ಹುಟ್ಟಲು ನೆರವಾದೆ, ನನ್ನನ್ನು ಗೌರಿ ಮದುವೆಯಾಗಲಿಲ್ಲವೆಂದು ಸೇಡು ತೀರಿಸಿಕೊಂಡೆ...ನಿನಗೆ ಇವೆಲ್ಲಾ ಗೊತ್ತೇ?"

ಸಿದ್ಧಾರ್ಥ ಗಂಭೀರವಾಗಿ "ಗೊತ್ತು" ಎಂದ. ಮುಖ ನಿರುದ್ವಿಗ್ನವಾಗಿದ್ದಂತೆಯೇ ಕಂಠದಲ್ಲೂ ಯಾವುದೇ ತೆರನಾದ ಭಾವಾವೇಶವೂ ಇರಲಿಲ್ಲ.

ನಮ್ಮ ಮದುವೆಯ ದಿನ ಮಂಗಳಸೂತ್ರಕ್ಕೆ ಮೆತ್ತಿದ್ದ ರಕ್ತ. ಆಗತಾನೇ ಕತ್ತರಿಸಿದ್ದ ನಿನ್ನ ಕೈಬೆರಳು, ಕೇದಾರಗೌರಿಗೆ ನೀನು ಕೊಟ್ಟ ಉಂಗುರ ಸೊಪ್ಪಿನ ಹಸಿರು ಇವೆಲ್ಲಾ ನನ್ನಲ್ಲಿ ಅನುಮಾನ ಮೂಡಿಸಿತ್ತು. ಹಳೆಯ ಪುಸ್ತಕಗಳಲ್ಲಿ ಇವುಗಳಿಗಾಗಿ ಶೋಧಿಸಿದೆ. ಅವುಗಳಲ್ಲಿಯೂ ಇದೇ ಉಲ್ಲೇಖ ನನ್ನ ಅನುಮಾನ ಭದ್ರಪಡಿಸಿತು. ಆದರೆ ಇವೆಲ್ಲಾ ಅಷ್ಟಾವಕ್ರನಿಗಾಗಿ ಎಂಬುದು ಆಗ ನನಗೆ ಗೊತ್ತಿರಲಿಲ್ಲ. ಕೇದಾರಗೌರಿಗೆ ಏನೋ ಮಾಟ ಮಾಡಿ ಸುತ್ತಿದ್ದೀ ಎಂದುಕೊಂಡೆ. ಸ್ವಲ್ಪ ದಿನಗಳ ಹಿಂದೆ ಮಾತ್ರವೇ ಎಲ್ಲಾ ವಿವರಗಳೂ ಗೊತ್ತಾದದ್ದು. ಅಷ್ಟಾವಕ್ರನು ಹುಟ್ಟುತ್ತಲೇ ತಂದೆ ತಾಯಿಗಳಿಬ್ಬರನ್ನೂ ಕೊಲ್ಲುತ್ತಾನೆಂದೂ, ನೀನು ಮತ್ತೂ ಹಲವರು ಅಷ್ಟಾವಕ್ರನ ಆಗಮನಕ್ಕಾಗಿ ಸಿದ್ಧತೆ ನಡೆಸುತ್ತಿದ್ದೀರಿ ಎಂಬುದೂ ಗೊತ್ತಾಯಿತು. ನನ್ನೊಂದಿಗೆ ಹಿಮಾಲಯಕ್ಕೆ ನೀನು ಬಂದಾಗಲೂ ನಾನು ಬೇಡವೆನ್ನಲಿಲ್ಲ. ಗೌರಿಯಿಂದ ನೀನು ದೂರವಾಗಿರಬೇಕಾದುದೇ ನನಗೆ ಬೇಕಾಗಿದ್ದು. ನನ್ನ ಶಕ್ತಿಯ ಬಗ್ಗೆ ನನಗೆ ನಂಬಿಕೆ ಇತ್ತು. ಅದಕ್ಕೆಂದೇ ನಿನ್ನನ್ನೂ ಕರೆತಂದೆ."

ರಾಕೇಶ್ ಅಪ್ರತಿಭನಾದ. ತಾನು ಕೇಳುತ್ತಿರುವುದು ಕನಸೋ ನನಸೋ ಅವನಿಗೆ ಅರ್ಥವಾಗಲಿಲ್ಲ. ಶಿಖರವನ್ನು ಆವರಿಸಿದ ಮಂಜೆಲ್ಲವೂ ಜಾರಿ ಅವನನ್ನು ಆವರಿಸಿದಂತೆ ಭಾಸವಾಯಿತು. "ನನಗೆ ಗೊತ್ತು... ಗೊತ್ತು..." ಎನ್ನುತ್ತಿದ್ದ ಸಿದ್ಧಾರ್ಥನ ಕಂಠ ಆ ಶಿಖರಗಳ ಮಧ್ಯೆ ಪ್ರತಿಧ್ವನಿತವಾಗುತ್ತಿತ್ತು.

ಸಿದ್ಧಾರ್ಥನಿಗೆ ಎಲ್ಲಾ ಮೊದಲೇ ಗೊತ್ತಾಗಿತ್ತು. ಆದರೂ ಅಕ್ಕರೆಯಿಂದ ತನ್ನನ್ನು ರಕ್ಷಿಸಿದ್ದ. ಏಕೆ? ಅದೇ ಪ್ರಶ್ನೆ ಸಿದ್ಧಾರ್ಥನನ್ನು ಕೇಳಿದಾಗ ರಾಕೇಶನ ಕಂಠ ನಡುಗುತ್ತಿತ್ತು.

ಸಿದ್ಧಾರ್ಥ ನಕ್ಕು ನುಡಿದ: "ನನಗೆ ಈ ಸಂಗತಿಯೆಲ್ಲಾ ಗೊತ್ತಾಗುವ ವೇಳೆಗೆ, ನಿನ್ನ ಬಗ್ಗೆ ಅನುಮಾನ ನಿಖರವಾಗುವ ವೇಳೆಗೆ ಕೇದಾರಗೌರಿಗೆ ಆರು ತಿಂಗಳಾಗಿತ್ತು. ನನಗೆ ಪ್ರಧಾನವಾದುದು ಗೌರಿಯ ರಕ್ಷಣೆ. ನಿನ್ನನ್ನು ಶಿಕ್ಷಿಸುವುದು ನನಗೆ ಮುಖ್ಯವಾದುದಲ್ಲ. ತಾವು ಮಾಡಿದ ಕರ್ಮಕ್ಕೆ ಫಲ ತಾವೇ ಅನುಭವಿಸುತ್ತಾರೆ ಎಂದೇ ನಂಬಿರುವವನು ನಾನು. ಅದಕ್ಕೆ ನನ್ನ ವಿರೋಧಿಗಳನ್ನು, ನನ್ನನ್ನು ಟೀಕಿಸುವವರನ್ನು, ನನಗೆ ಹಾನಿ ಬಯಸುವವರನ್ನು ನಾನು ಅಷ್ಟಾಗಿ ಗಣನೆಗೆ ತೆಗೆದುಕೊಳ್ಳಲಿಲ್ಲ. ನನ್ನ ಸಮಸ್ಯೆ ಕೇದಾರ ಗೌರಿಯನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂಬುದೇ, ದುರಾದೃಷ್ಟವಶಾತ್ ಗೌರಿಗೆ ಇವುಗಳ ಮೇಲೆ ನಂಬಿಕೆ ಇಲ್ಲ. ಕೈಗೆ ಒಂದು ತಾಯಿತ ಕೂಡ ಕಟ್ಟಿಸಿಕೊಳ್ಳುವುದಿಲ್ಲ ಅವಳು...."

ರಾಕೇಶ್ ಅರ್ಧ ಕೇಳಿಯೇ ತುಂಬಾ ದೊಡ್ಡ ಷಾಕ್ ಅನುಭವಿಸುತ್ತಿದ್ದ. ಉಳಿದ ಮಾತು ಅವನು ಕೇಳಲೇ ಇಲ್ಲ.

ಮೇರುಪರ್ವತದ ಮುಂದೆ ನಿಂತ ಇರುವೆಯಂತೆ ಸಿದ್ಧಾರ್ಥನ ವ್ಯಕ್ತಿತ್ವದ ಮುಂದೆ ರಾಕೇಶ್ ಭೂಮಿಗೆ ಇಳಿದುಹೋದ. ಸಿದ್ಧಾರ್ಥನ ಪಾದಗಳಿಗೆ ನಮಸ್ಕರಿಸಬೇಕೆಂಬ ತನ್ನ ಬಲವಾದ ಬಯಕೆಯನ್ನು ತುಂಬಾ ಪ್ರಯತ್ನದಿಂದ ತಡೆದ. ಬಿಕ್ಕಿಬಿಕ್ಕಿ ಅಳಬೇಕೆನಿಸಿತು. ಬಾಲ್ಯದಲ್ಲಿ ತಾಯಿಯ ಪ್ರೇಮದ ಮಡಿಲು ದೊರೆತಿದ್ದಿದ್ದರೆ ಕಷ್ಟ ಬಂದಾಗ ಆ ಮಡಿಲಿನಲ್ಲಿ ಮುಖ ಹುದುಗಿಸಿ ಮನಸಾರೆ ಅತ್ತಿರುತ್ತಿದ್ದ. ಆದರೆ ಅಂತಹ ಸೌಭಾಗ್ಯ ತನಗೆ ದೊರೆತದ್ದೇ ಇಲ್ಲ. ಅಂದಿನಿಂದ ಹೆಪ್ಪುಕಟ್ಟಿಕೊಂಡಿದ್ದ ದುಃಖ ಈಗ ಒಮ್ಮೆಲೇ ಕರಗಿ ಅಷ್ಟು ಸುಲಭವಾಗಿ ಹೊರಬೀಳುವುದು ಸಾಧ್ಯವೇ?

ರಾಕೇಶ್ ಮಾತನಾಡಲಾರಂಭಿಸಿದ. ಉಸ್ನೋಕ್ ಬಗ್ಗೆ ಹೇಳತೊಡಗಿದ ಅವನ ಮಾತನ್ನು ಯಾವ ದುಷ್ಟ ಶಕ್ತಿಯಿಂದಲೂ ತಡೆಯಲು ಸಾಧ್ಯವಾಗಲಿಲ್ಲ. ಯಾವ ಕ್ಷುದ್ರ ಗಣಾಧಿಪತಿಯಿಂದಲೂ ಆ ತಪ್ಪೊಪ್ಪಿಗೆಯನ್ನು ಹತ್ತಿಕ್ಕಲು ಸಾಧ್ಯವಾಗಲಿಲ್ಲ.

ಎಲ್ಲವನ್ನೂ ಶಾಂತಚಿತ್ತನಾಗಿ ಕೇಳಿದ ಸಿದ್ಧಾರ್ಥ ಕೊನೆಗೆ ಹೇಳಿದ:

"ರಾಕೇಶ್ ದೇವರು ಎಂಬುವನಿದ್ದರೆ ಅದಕ್ಕೆ ವಿರೋಧವಾದ ಶಕ್ತಿ ದೆವ್ವ ಕೂಡ 'ಇದೆ ಎಂದು ನಂಬಿರುವವನು ನಾನು. ನಾಳಿದ್ದು ಬೆಳಗಾಗುವ ಮೊದಲೇ ನಾನು ಕಾಪ್ಸೋರಾವನ್ನು ತಡೆಯದಿದ್ದರೆ ಕೇದಾರಗೌರಿಗೆ ಅಷ್ಟಾವಕ್ರನು ಜನಿಸಿ ಅವಳ ಮರಣ ಹೆರಿಗೆಯ ಸಂದರ್ಭದಲ್ಲಿಯೇ ನಡೆಯಬಹುದು. ಆ ಸಮಯಕ್ಕೆ ಸರಿಯಾಗಿ ಯಾವುದೋ ದುಷ್ಟಶಕ್ತಿ ನಿನ್ನನ್ನು ಆವರಿಸಿ ನನ್ನನ್ನೂ ಕೊಲ್ಲಬಹುದು. ಆದರೆ...ಆದರೆ....ಮನೋರೂಪ ವಿದ್ಯೆಗಳೆಂಬುವು ನಿಜವಾಗಿಯೂ ಇದ್ದರೆ, ಉಸ್ನೋಕ್ ಸದಸ್ಯರಿಗೆ ಆ ವಿದ್ಯೆ ಕರಗತವಾಗಿದ್ದರೆ. ನನಗೆ ಈ ವಿಷಯವೆಲ್ಲಾ ಗೊತ್ತು ಎಂಬುದನ್ನು ನೀನು ಮೊದಲೇ ಏಕೆ ಗ್ರಹಿಸಲಾರದಾದೇ?"....ನನ್ನ ವಿಷಯ ಹಾಗಿರಲಿ. ನಿನ್ನ ಜೊತೆಗೆ ಬಂದ ಷೆರ್ಪಾಕೂಡ ಉಸ್ನೋಕ್ ಸದಸ್ಯ. ಅವನು ನಮ್ಮನ್ನು ಕೊಲ್ಲಲೆಂದೇ ಬಂದಿದ್ದಾನೆ ಎಂಬುದನ್ನು ಏಕೆ ಗ್ರಹಿಸಲಾರದಾದೆ?"

ರಾಕೇಶ್ ಉತ್ತರಿಸಲಾರದಾದ.

ಕರಗುತ್ತಿದ್ದ ಮಂಜು ಗುಹೆಯ ಮೇಲ್ಭಾಗದಿಂದ ಹನಿಹನಿಯಾಗಿ ಕೆಳಗೆ ಸುರಿಯುತ್ತಿತ್ತು.

"ನಾಳೆ ಈ ಹೊತ್ತಿಗೆ ಹೆರಿಗೆಯಾದೀತು..." ಎಂದುಕೊಂಡ ರಂಗ ಪ್ರಸಾದ್ ತನ್ನ ಕೈಯಲ್ಲಿದ್ದ ರಿಪೋರ್ಟ್ ಪರಿಶೀಲಿಸುತ್ತಾ. ಆತನಿಗೆ ಆ ಅನುಮಾನ ಹಾಗೇ ಇತ್ತು. ಎಕ್ಸ್-ರೇ ಉಪಯೋಗಿಸಬಹುದು. ಆದರೆ ಕೊನೆಯ ಗಳಿಗೆಯಲ್ಲಿ ತಿಳಿದುಕೊಂಡು ಏನು ಲಾಭ? ನಾಳೆ ಹೇಗಾದರೂ ಗೊತ್ತಾಗುತ್ತದೆ ಈಗಲೇ ಗೊತ್ತಾದರೆ ತಾನೇ ಏನು ಮಾಡಬಲ್ಲೆವು? ಅನಗತ್ಯವಾಗಿ ಕೊನೆಯ ಗಳಿಗೆಯಲ್ಲಿ ಆ ಕಿರಣಗಳನ್ನು ಬಳಸಿ ಒಳಗಿರುವ ಆ ಶಿಶುವಿಗೇಕೆ (ಒಂದು ವೇಳೆ ಆರೋಗ್ಯವಾಗಿದ್ದರೆ) ಹಾನಿಯುಂಟುಮಾಡಬೇಕು?

ನಗರದಿಂದ ಪರಿಚಿತ ಗೈನಕಾಲಜಿಸ್ಟ್‌ನನ್ನು ಕರೆಸಿದರೆ ಹೇಗೆ? ಎಂದು ಯೋಚಿಸಿದ. ಅದೂ ಒಳ್ಳೆಯದೇ, ತನ್ನ ಸ್ಟಾಫ್ ಎಷ್ಟೇ ಕೆಲಸ ಮಾಡಿದರೂ ಆ ರಂಗದಲ್ಲಿ ಪರಿಣತಿ ಪಡೆದಾಕೆ ಒಬ್ಬಳಿದ್ದರೆ ಮನಸ್ಸಿಗೆ ತುಂಬಾ ಧೈರ್ಯವೇ ಬರುತ್ತದೆ.

ಗೌರಿಗಿಂತಲೂ ಹೆಚ್ಚಾಗಿ ಅವರು ಭಯಪಡುತ್ತಿದ್ದದ್ದು ಸಿದ್ಧಾರ್ಥನ ಬಗ್ಗೆ. ಅವನೇನಾದ? ಇದ್ದಕ್ಕಿದ್ದಂತೆಯೇ ಎಲ್ಲಿ ಮಾಯವಾದ?...

ಹೊರಗೆ ಕಾರು ಬಂದ ಸಪ್ಪಳವಾಯಿತು. ರಂಗಪ್ರಸಾದ್ ಕಿಟಕಿಯಿಂದ ಹೊರಕ್ಕೆ ನೋಡಿದ. ಉದ್ದವಾದ ಕಾರೊಂದು ಅಲ್ಲಿ ನಿಂತಿತ್ತು. ಹಿಂದಾಗಿದ್ದರೆ ಅಂತಹ ಕಾರೊಂದು ಗ್ರಾಮವನ್ನು ಪ್ರವೇಶಿಸಿದ್ದೇ ಆದರೆ ಅದರ ಸುತ್ತಲೂ ಹುಡುಗರು ನೊಣಗಳಂತೆ ಮುತ್ತುತ್ತಿದ್ದರು. ಅವತಾರ್‌ಬಾಬಾ ಕೃಷ್ಣಾಪುರದಲ್ಲಿ ನೆಲೆಸಿದಂದಿನಿಂದ ಈ ರೀತಿಯ ಕಾರುಗಳು ಬರುವುದು ತೀರಾ ಸಾಮಾನ್ಯವಾಯಿತು. ಆ ಮಕ್ಕಳಿಗೂ ಇವು ತೀರಾ ಸಾಧಾರಣ ಎನಿಸಿತು.

ರಂಗಪ್ರಸಾದ್ ಎದ್ದು ಹೊರಗೆ ಬರುತ್ತಿದ್ದಂತೆಯೇ ಆ ಕಾರಿನಿಂದ ಇಳಿದ ವ್ಯಕ್ತಿಯೇ ನೇರವಾಗಿ ಒಳಕ್ಕೆ ಬಂದ. ಕೆಂಪಾಗಿದ್ದ ಆತನ ಎತ್ತರ ಹೆಚ್ಚೇನೂ ಇಲ್ಲ. ಕೆಂಪು ಬಣ್ಣವೂ ತೀರಾ ಎನಿಸಿ ಆಕರ್ಷಣೆಯನ್ನೂ ಕಳೆದುಕೊಂಡಿತ್ತು. ಕೈಯಲ್ಲಿದ್ದ ಬೆಲೆಬಾಳುವ ವಜ್ರಗಳ ವಾಚು ಆತನ ಅಂತಸ್ತನ್ನು ಸಾರಿ ಹೇಳುತ್ತಿತ್ತು.

"ನೀವೇನಾ ರಂಗಪ್ರಸಾದ್?" ಎಂದು ಕೇಳಿದ ಪರೀಕ್ಷಾ ದೃಷ್ಟಿ ಬೀರುತ್ತಾ.

"ಹೌದು"

"ನನ್ನ ಹೆಸರು ಅಗರ್‌ವಾಲ್—ಸರೋಜ್‌ಕುಮಾರ್ ಅಗರ್‌ವಾಲ್."

ರಂಗಪ್ರಸಾದ್‌ಗೆ ಅಚ್ಚರಿ ಎನಿಸಿತು. ಅಗರ್‌ವಾಲ್ ಇಷ್ಟು ದೂರ ತನ್ನನ್ನು ಹುಡುಕುತ್ತಾ ಬರುವುದು ವಿಚಿತ್ರವೆನಿಸಿತು. ತನ್ನ ಭಾವಗಳನ್ನು ಅದುಮಿರಿಸಿಕೊಂಡು "ಕುಳಿತುಕೊಳ್ಳಿ" ಎಂದ.

"ನೀವು ಕಳುಹಿಸಿದ ಸುದ್ದಿ ತಲುಪಿದೆ. ನಾನೂ ಪೋಲೀಸ್, ಕೋರ್ಟು ಗಳಿಂದ ಹೊರಗೇ ಈ ವಿಷಯವನ್ನು ತೀರ್ಮಾನಿಸಿಕೊಳ್ಳೋಣ ಎಂದುಕೊಳ್ಳು ತ್ತಿದ್ದೇನೆ."

ಈ ಮಾತಿಗೆ ರಂಗಪ್ರಸಾದ್ ನಿಜವಾಗಿಯೇ ತನ್ನ ಅಚ್ಚರಿಯನ್ನು ಮರೆ ಮಾಚಲಾರದೆ "ಪೋಲೀಸರ್ಯಾಕೆ?"

"ಇನ್ನೂ ನೀವು ನಟಿಸುವ ಅವಶ್ಯಕತೆ ಇಲ್ಲ ಡಾಕ್ಟರ್ ನೀವು ಡಾಕ್ಟರ್ ವೇಷದಲ್ಲಿರುವ ಸಿಬಿಐ ಆಫೀಸರ್ ಎಂದು ನನಗೆ ಗೊತ್ತಾಯಿತು. ನಾವೇ ನೇರವಾಗಿ ಮಾತನಾಡಿಕೊಳ್ಳಬಹುದು.

ಆಶ್ಚರ್ಯದಿಂದ ರಂಗಪ್ರಸಾದ್ ಅಗರ್‌ವಾಲ್ ಕಡೆ ನೋಡುತ್ತಿದ್ದ. ತಾನು ಕೇಳುತ್ತಿರುವುದು ಸುಳ್ಳಾದರೂ ಆಗಿರಬೇಕು ಅಥವಾ ಹೆಂಡತಿಯ ಸಾವಿನಿಂದ ಅಗರ್‌ವಾಲ್ ಹುಚ್ಚನಾಗಿರಬೇಕು. ಡಾಕ್ಟರ್ ಅಚ್ಚರಿಯನ್ನು ಬೇರೊಂದು ತೆರನಾಗಿ ಅರ್ಥೈಸಿ, "ನಾನು ಭಯಪಡುವಂತಹ ವಿಷಯ ಇದಲ್ಲ. ಅದೇನು ಹತ್ಯೆಯಲ್ಲ, ಕಳ್ಳತನವಲ್ಲ, ಸುಮಾರು ಮೂರು ಲಕ್ಷ ರೂಪಾಯಿ 'ಬ್ಲಾಕ್‌ಮನಿ' ಖರ್ಚು ಮಾಡಿದ್ದೇನೆ. ಅದು ಹತ್ಯೆಯಲ್ಲ ಕಳ್ಳತನವೂ ಅಲ್ಲ. ಆ ಹಣ ಎಂಬುದಷ್ಟೇ ಶೋಧಿಸಬೇಕಾದದ್ದು. ಅಷ್ಟಕ್ಕೇ ನಾನು ಬ್ಲಾಕ್‌ಮನಿ ಉತ್ತರಿಸ ಬೇಕಾದದ್ದು. ಅದಕ್ಕಿಂತಲೂ ದೊಡ್ಡ ಅಪರಾಧವೇನೂ ಇಲ್ಲ."

ರಂಗಪ್ರಸಾದ್ ಈ ಮಾತು ಕೇಳುತ್ತಿದ್ದಂತೆಯೇ ಹುಚ್ಚು ಹಿಡಿದಂತಾ ಯಿತು. ಅದೇ ಸಮಯಕ್ಕೆ ಸರಿಯಾಗಿ ಫೋನ್ ಕರೆಯಿತು.

"ನಾನು ನಿವೇದಿತ...." ಅತ್ತ ಕಡೆಯ ಧ್ವನಿ ಹೇಳಿತು. "ತುಂಬಾ ಹೊತ್ತಿನಿಂದ ಪ್ರಯತ್ನಿಸುತ್ತಿದ್ದೇನೆ. ಈಗ ತಾನೇ ಲೈನ್ ಸಿಕ್ಕಿದೆ...ಆ... ಅಗರ್‌ವಾಲ್ ಅಲ್ಲಿಗೆ ಬಂದನೇ?"

"ಹೌದು. ಇದೇನೋ ತುಂಬಾ ಕಸಿವಿಸಿಯಾಗಿದೆ."

ಅತ್ತಕಡೆಯಿಂದ ಕಿಲಕಿಲನೆ ನಗು "ಕತ್ತಲಲ್ಲಿ ಒಂದು ಬಾಣ ಎಸೆದೆ, ಗುರಿಮುಟ್ಟಿದೆ ಎಂಬುದು ಈಗ ಗೊತ್ತಾಯಿತು!" ಎಂದು ಕೇಳಿಸಿತು.

"ಏನದು?"

ಸರೋಜ್‌ಕುಮಾರನಿಗೆ ಅವರ ಮಾತು ಕೇಳುತ್ತಿದೆ. ಆದರೂ ಭಾಷೆ ಅರ್ಥವಾಗುತ್ತಿಲ್ಲ.

"ನಮಗೆ ಗೊತ್ತಿರೋದು ಒಂದೇ ಪದ ಎಸ್ಸೆಸ್ಸೇ. ಅದಕ್ಕೆ ಅವನು ಎರಡು ಲಕ್ಷಕ್ಕಿಂತಲೂ ಹೆಚ್ಚು ಹಣ ಕೊಟ್ಟಿದ್ದಾನೆ. ಅದು ಬ್ಲಾಕ್‌ಮನಿ ಎಂದು ಬೇರೆ ಹೇಳಬೇಕಾಗಿಲ್ಲ ಆದ್ದರಿಂದ ಎಸ್‌ಎಸ್‌ಎ ಸಿಬಿಐಗೆ ಸಿಕ್ಕಿಬಿದ್ದಿದೆ. ಅಲ್ಲಿ ಸಿಕ್ಕ ರಶೀದಿ ಪುಸ್ತಕದಲ್ಲಿ ಅಗರ್‌ವಾಲ್ ಹೆಸರಿದೆ ಎಂದು ಹೇಳುತ್ತಲೇ ಗಾಬರಿಯಾದ. ಅದಕ್ಕಿಂತಲೂ ಹೆಚ್ಚು ನಾನು ಹೇಳಲಿಲ್ಲ. ಸಿಬಿಐನವರೆ ಉಳಿದ ಸಂಗತಿ ಮಾತನಾಡುತ್ತಾರೆ ಎಂದು ಮಾತ್ರ ಸೂಚಿಸಿದೆ. ಕೃಷ್ಣಾಪುರ ದಲ್ಲಿ ಒಬ್ಬ ಸಿಬಿಐ ಆಫೀಸರ್ ಡಾಕ್ಟರ್ ವೇಷದಲ್ಲಿದ್ದಾರೆ. ಅವರನ್ನು ಭೇಟಿ ಯಾದರೆ ಏನಾದರೂ ಕೆಲಸವಾಗಬಹುದು ಎಂದೂ ಹೇಳಿದೆ. ಎಲ್ಲಾ ಇಂಗ್ಲಿಷ್ ಸಿನಿಮಾಗಳ ಪ್ರಭಾವ. ಅವನು ಬಂದಿದಾನೇ ತಾನೇ?"

"ಮುಂದೆಯೇ ಕೂತಿದಾನೆ. ನಿನ್ನ ಫೋನ್ ಸ್ವಲ್ಪ ತಡವಾಗಿದ್ದರೆ ನನಗೆ ಹುಚ್ಚು ಹಿಡಿಯುತ್ತಿತ್ತು."

"ಬೆಸ್ಟ್ ಆಫ್ ಲಕ್."

"ಥ್ಯಾಂಕ್ಸ್" ಎಂದು ರಿಸೀವರ್ ಕೆಳಗಿರಿಸಿದ.

"ಯಾರು?" ಎಂದು ಫೋನ್ ಕಡೆ ನೋಡುತ್ತಾ ಅನುಮಾನದಿಂದ ಪ್ರಶ್ನಿಸಿದ ಅಗರ್‌ವಾಲ್.

"ಡೆಲ್ಲಿಯಿಂದ ನಮ್ಮ ಬಾಸ್."

ಅವನ ಮುಖ ಕಂದಿತು. "ನಾನು ಮಾಡಿದ್ದೇನು ಅಂಥಾ ತಪ್ಪೆ? ಬೇಕಾದರೆ ನಮ್ಮ ಛಾರ್ಟರ್ಡ್ ಅಕೌಂಟೆಂಟ್..."

"ಅಗರ್‌ವಾಲ್ ನಿಜವಾದ ಸಂಗತಿ ಏನು ತಿಳಿಸಿ. ಎಸ್‌ಎಸ್‌ಎಗೆ ಎರಡು ಲಕ್ಷ ಕೊಟ್ಟಿದ್ದು ನಿಜವೇ? ಏಕೆ ಹಣ ಕೊಟ್ಟಿರಿ?"

ಅಗರ್‌ವಾಲ್ ಉತ್ತರಿಸಲು ಅನುಮಾನಿಸಿದ. ಅವನನ್ನು ಮತ್ತಷ್ಟು ಭಯಕ್ಕೆ ತುತ್ತುಮಾಡಲು ಮನಸ್ಸಿಲ್ಲದೆ ರಂಗಪ್ರಸಾದ್ ತುಂಬಾ ಸೌಮ್ಯವಾಗಿ ನೋಡಿ "ಅಗರ್‌ವಾಲ್, ನಾವು ಎಸ್‌ಎಸ್‌ಎ ಭವನವನ್ನು ಶೋಧಿಸಿದಾಗ ತುಂಬಾ ಹಣ, ಕಾಗದ ಪತ್ರಗಳು ಸಿಕ್ಕಿವೆ. ಅದರಲ್ಲಿ ತುಂಬಾ ದೊಡ್ಡವರೂ ಇದ್ದಾರೆ. ನೀವು ಹೇಳಿದಂತೆ ಅದೇನು ದೊಡ್ಡ ಅಪರಾಧವಲ್ಲ. ನಿಮ್ಮ ಹೆಸರು ಎಲ್ಲೂ ಹೊರಬೀಳದಂತೆ ನಾನು ನೋಡಿಕೊಳ್ಳುತ್ತೇನೆ, ಸರಿತಾನೇ? ನೀವೇಕೆ ಅಷ್ಟೊಂದು ಹಣವನ್ನು ಕೊಟ್ಟಿರಿ ಎಂಬುದನ್ನು ಹೇಳಿ...." ಎಂದರು.

"ಅದೆಲ್ಲಾ ನನ್ನ ಹೆಂಡತಿಗಾಗಿ...." ಎಂದ ಅಗರ್‌ವಾಲ್ ತಲೆತಗ್ಗಿಸಿ.

"ಅದೇಕೆ ಎಂಬುದನ್ನು ವಿವರಿಸದಿದ್ದರೆ ಅರ್ಥವಾಗದು."

ತಲೆತಗ್ಗಿಸಿಕೊಂಡೇ "ನಮಗೆ ಮಕ್ಕಳಿಲ್ಲ ..." ಎಂದ.

"ಅದು ನಮಗೂ ಗೊತ್ತಿದೆ."

"ಆ ಬಗ್ಗೆ ನಮಗೆ ಕೆಲವು ಪತ್ರಗಳು ದೊರಕಿವೆ" ಎಂದ ಡಾಕ್ಟರನ್ನೇ ಅಗರ್‌ವಾಲ್ ನೋಡುತ್ತಿದ್ದ.

"ನನ್ನ ಹೆಂಡತಿ ಪ್ರತಿಮಾ ಒಂದು ರೀತಿಯ ಹೆಂಗಸು. ಜೀವನದಲ್ಲಿ ಕೆಲವು ನಿರ್ದಿಷ್ಟ ತೀರ್ಮಾನಗಳನ್ನು ಮಾಡಿದ್ದಳು ..." ಎಂದು ಅಗರ್‌ವಾಲ್ ತಡೆದ.

ಅವನ ಮಾತು ಮುಂದುವರಿಸಲು ಪ್ರೋತ್ಸಾಹಿಸುವಂತೆ ರಂಗಪ್ರಸಾದ್ "ಹೇಳಿ" ಎಂದು ತಲೆದೂಗಿದರು.

"ಆಕೆಯನ್ನು ಮೊದಲ ಬಾರಿಗೆ ಕಂಡಾಗ ನಾನು ತುಂಬಾ ಆಕರ್ಷಿತ ನಾದೆ. ಮದುವೆಯನ್ನೂ ಮಾಡಿಕೊಂಡೆ. ಆದರೆ ನಮಗೆ ಮಕ್ಕಳಾಗಲಿಲ್ಲ, ಕಾರಣ ಗೊತ್ತಾಗಲಿಲ್ಲ. ಎಷ್ಟು ಮಂದಿ ಡಾಕ್ಟರನ್ನು ಕಂಡರೂ ಫಲವಿಲ್ಲ ದಾಯಿತು. ಆಗಲೇ ಎಸ್‌ಎಸ್‌ಎ ಬಗ್ಗೆ ಗೊತ್ತಾಯಿತು. ಪ್ರತಿಮಾ ಗರ್ಭಿಣಿ ಯಾಗುತ್ತಲೇ ಹಣವನ್ನು ಕೊಡಬೇಕೆಂಬ ಕರಾರಿನ ಮೇಲೆ ಪ್ರತಿಮಾಳನ್ನು ಗರ್ಭಿಣಿಯನ್ನಾಗಿ ಮಾಡುತ್ತೇವೆ ಎಂದರು ಅವರು. ಅನೇಕ ಡಾಕ್ಟರುಗಳನ್ನು ಕಂಡ ನಾನು ಅದಕ್ಕೆ ಒಪ್ಪಿದೆ ಇದರಿಂದ ನನಗೆ ನಷ್ಟವೇನೂ ಇರಲಿಲ್ಲ. ಎರಡು ಲಕ್ಷವೇನೂ ದೊಡ್ಡ ಮೊತ್ತವಾಗಿರಲಿಲ್ಲ. ಎಸ್‌ಎಸ್‌ಎ ಪ್ರತಿಮಾ ಳನ್ನು ಟ್ರೀಟ್‌ಮಾಡಿದರು. ಅವಳು ಗರ್ಭಿಣಿಯಾಗುತ್ತಲೇ ಹಣವನ್ನು ಸಂತೋಷದಿಂದ ಕೊಟ್ಟೆ. ಕೊಟ್ಟದ್ದು ಬ್ಲಾಕ್‌ಮನಿ ಎಂಬುದರ ವಿನಾ ಬೇರೇನು ತಪ್ಪೂ ಮಾಡಿಲ್ಲ!"

ರಂಗಪ್ರಸಾದ್ ಒಡನೆಯೇ ಮಾತನಾಡಲಿಲ್ಲ ಕುರ್ಚಿ ಹಿಂದಕ್ಕೆ ಒರಗಿ ಕುಳಿತುಕೊಂಡು "ನೀವು ತುಂಬಾ ಸುಳ್ಳು ಹೇಳುತ್ತೀರಿ ಅಗರ್‌ವಾಲ್" ಎಂದ.

"ನಾನೇ?...ಏನು ಸುಳ್ಳು?..."

"ನಿಮಗೆ ಮಕ್ಕಳಾಗುವುದಿಲ್ಲವೆಂಬುದು ನಿಮಗೆ ಮೊದಲೇ ಗೊತ್ತು. ಪ್ರತಿಮಾಳಿಗೆ ಒಳ್ಳೆಯ ಚರಿತ್ರೆ ಇಲ್ಲವೆಂಬುದೂ ನಿಮಗೆ ಗೊತ್ತು. ಬೇರೆಯವ ರಿಂದ ಪ್ರತಿಮಾ ಗರ್ಭಿಣಿಯಾಗಲು ನಿಮ್ಮ ಒಪ್ಪಿಗೆಯೂ ಒಮ್ಮೆ ದೊರಕಿತ್ತು. ಆದರೆ ಆಕೆ ಒಪ್ಪಲಿಲ್ಲ. ಆಕೆಗೆ ಗೊತ್ತಿಲ್ಲದೆ ನೀವು ಪ್ರಯತ್ನಿಸಿದ್ದಕ್ಕಾಗಿ ಆಕೆ ತುಂಬಾ ಗಲಾಟೆಯೂ ಮಾಡಿದ್ದಳು. ನಿಮ್ಮ ವ್ಯವಹಾರವನ್ನು ಹೊರಹಾಕು

ತ್ತೇನೆ ಎಂದು ಬೆದರಿಸಿದ್ದಳು...."

ಅಗರ್ವಾಲ್ ಮುಖ ತುಂಬಾ ಬಿಳಿಚಿಕೊಂಡಿತು. "ಇದೆಲ್ಲಾ ನಿಮಗೆ ಹೇಗೆ ಗೊತ್ತು?" ಎಂದು ಕೇಳಿದ.

"ನೀವು ಸಿಬಿಐಯನ್ನು ತೀರಾ ಹಗುರವಾಗಿ ಭಾವಿಸಿದ್ದೀರಿ."

ಅಗರ್‌ವಾಲ್ ಮೆಲ್ಲನೆ "ನಿಮ್ಮ ಮಾತು ನಿಜವೇ. ಪ್ರತಿಮಾ ಒಂದು ರೀತಿಯಾಗಿ ತುಂಬಾ ನಿಯಮ ಇಟ್ಟುಕೊಂಡವಳು. ಶೀಲ ಎನ್ನುವುದನ್ನು ನಂಬಿದವನು ನಾನಲ್ಲ. ನನ್ನ ದೌರ್ಬಲ್ಯದ ಕಾರಣದಿಂದ ಪ್ರತಿಮಾ ಬೇರೊಬ್ಬರಿಂದ ಗರ್ಭ ಧರಿಸಬಹುದಲ್ಲ ಎಂದುಕೊಂಡೆ. ಅದನ್ನು ಅವಳು ಒಪ್ಪಲೇ ಇಲ್ಲ. ನನಗೆ ಇದರಿಂದ ಕೋಪವೂ ಬಂತು. 'ಮದುವೆಗೆ ಮೊದಲೇ ಸೆರಗು ಹಾಸಿದ್ದು ತಪ್ಪಲ್ಲವೇ?' ಎಂದೂ ಕೇಳಿದೆ. ಆಗ ಅವಳಿಗಿದ್ದ ಗುರಿ ಕೇವಲ ಓದು. ಅದೇ ತನ್ನ ಜೀವನ ಸಾಧನೆಯಾದ್ದರಿಂದ ಹಾಗೆ ವರ್ತಿಸಬೇಕಾಯಿತಂತೆ. ನಂತರ ತಾನು ಯಾರೊಂದಿಗೂ ಸೇರಿಲ್ಲ ಎಂದಳು. ಅವಳನ್ನು ಹುಚ್ಚಿ ಎಂದುಕೊಂಡೆ...." ಎಂದ.

'ನಿಜ, ಅವಳು ಹುಚ್ಚಿಯಾದರೂ ಆಗಿರಬೇಕು ಅಥವಾ ನಿನ್ನಂಥವರಿಗೆ ಅರ್ಥವಾಗದಂತಹ ದೊಡ್ಡ ವ್ಯಕ್ತಿತ್ವವನ್ನು ಪಡೆದವಳಾದರೂ ಆಗಿರಬೇಕು' ಎಂದುಕೊಂಡ ಡಾಕ್ಟರ್ ರಂಗಪ್ರಸಾದ್ ತನ್ನಲ್ಲಿಯೇ.

ಅಗರ್ವಾಲ್ ತನ್ನ ಮಾತು ಮುಂದುವರಿಸಿದ:

"ಅವಳೇನು ಎಂಬುದೇ ನನಗೆ ಅರ್ಥವಾಗಲಿಲ್ಲ. ಮದುವೆಗೆ ಮೊದಲೇ ಶೀಲ ಕಳೆದುಕೊಂಡಿದ್ದವಳು ನಂತರ ಗಂಡನೇ ಹೇಳಿದರೂ ಬೇರೊಬ್ಬನೊಂದಿಗೆ ಬೆರೆಯಲಿಲ್ಲ. ನನ್ನ ಸಂತೋಷಕ್ಕಾದರೂ ಗರ್ಭ ಧರಿಸು ಎಂದರೂ ಒಪ್ಪಲಿಲ್ಲ. ಅನಾಥಾಶ್ರಮದಿಂದ ಮಗು ತರುವುದೇ ಒಳ್ಳೆಯದು ಎಂದು ಅವಳ ವಾದ. ರಹಸ್ಯವಾಗಿ ಹೀಗೆ ಮಗು ಪಡೆಯುವುದೇ ಸರಿ ಎಂದು ನನ್ನ ಮಾತು. ಕೊನೆಗೆ ನಾನೇ ಕೃತಕ ಗರ್ಭಧಾರಣೆ ಬಗ್ಗೆ ಯೋಚಿಸಿದೆ. ರಹಸ್ಯವಾಗಿ ಇನ್‌ಸ್ಟಿಟ್ಯೂಟ್‌ಗೆ ಕರೆತಂದೆ. ಅಲ್ಲೂ ಗಲಾಟೆ ಮಾಡಿದಳು. 'ಇಷ್ಟು ಕಷ್ಟಪಟ್ಟು ಬೇರೆ ಯಾರ ಮಗುವನ್ನೋ ತನ್ನ ಹೊಟ್ಟೆಯಲ್ಲಿ ಬೆಳೆಸಬೇಕೆ' ಎಂಬುದು ಅವಳ ವಾದ! ಅದಕ್ಕೆ ಕೊನೆಗೂ ಹುಚ್ಚಳೇ ಆದಳು."

'ಹುಚ್ಚಿ ಅವಳಲ್ಲ. ಅವಳನ್ನು ಅರ್ಥಮಾಡಿಕೊಳ್ಳದ ನೀವು. 'ಬೇರೆ ಯಾರ ಮಗುವನ್ನೋ ತನ್ನ ಹೊಟ್ಟೆಯಲ್ಲಿ ಬೆಳೆಸಬೇಕೆ' ಎಂಬುದು ಎಂತಹ ನಿರ್ದಿಷ್ಟವಾದ ವಿಚಾರ! ಇದನ್ನೆಲ್ಲಾ ಅನುಭವಿಸಿದ ತನ್ನಂತಹವರಿಗೆ ವಿನಾ ಬೇರೆಯವರಿಗೆ ಈ ಮಾತುಗಳ ಅರ್ಥ ಗೊತ್ತಾಗುವುದಾದರೂ ಹೇಗೆ? ತನ್ನ

ಭಾವನೆಗಳನ್ನು ಒಂದು ಕಥೆಯಾಗಿಯೋ, ಕಾದಂಬರಿಯಾಗಿಯೋ ಬರೆದರೆ ಇಪ್ಪತ್ತು ವರ್ಷಗಳ ನಂತರ (ಆಗ್ಗೆ ಕೃತಕ ಗರ್ಭಧಾರಣೆ ತೀರಾ ಸಾಮಾನ್ಯವಾಗಿರುತ್ತದೆ) ಯುಗ ಸಂಧಿಯಲ್ಲಿ ಇಂಥಾ ಸಣ್ಣ ವಿಷಯದ ಬಗ್ಗೆ ಇಷ್ಟೆಲ್ಲಾ ಯೋಚಿಸುತ್ತಿದ್ದರೆ ಎಂದು ಆಶ್ಚರ್ಯಗೊಳ್ಳುತ್ತಾರೇನೋ? ಅಂಥಾ ಪರಿಸ್ಥಿತಿಯಲ್ಲಿ ತನ್ನ ಅಭಿಪ್ರಾಯವನ್ನು ಒಪ್ಪಿದವರು ಕನಿಷ್ಟ ಒಬ್ಬರಾದರೂ ಇದ್ದರು ಎಂಬುದೇ ಸಂತೋಷ!' ಎಂದುಕೊಂಡರು ತಮ್ಮಲ್ಲೇ ಡಾಕ್ಟರ್.

ಮಾತು ಮುಂದುವರಿಸುವಂತೆ ಅಗರ್‌ವಾಲ್‌ನತ್ತ ನೋಡಿದರು. ಆತ ಗಂಟಲು ಸರಿಪಡಿಸಿಕೊಂಡು ಮಾತು ಮುಂದುವರಿಸಿದ:

"ಇನ್ನು ಇವಳಿಂದ ಪ್ರಯೋಜನವಾಗದು ಎಂದುಕೊಂಡೆ. ಡೈವೋರ್ಸ್ ಮಾಡಿದರೆ ಏನು ಅಪಪ್ರಚಾರ ಪ್ರಾರಂಭಿಸುತ್ತಾಳೋ ಎಂಬ ಭಯ. ಮುಂದೇನು ಎಂಬುದು ಗೊತ್ತಾಗಲಿಲ್ಲ. ಆಗಲೇ ಎಸ್‌ಎಸ್‌ಎ ನನ್ನ ನೆರವಿಗೆ ಬಂತು. ತಾನು ಪ್ರೇಮಿಸಿದ್ದ ಸಿನಿಮಾ ಸ್ಟಾರೊಬ್ಬನಿಂದ ಗರ್ಭಧರಿಸಲು ಪ್ರತಿಮಾ ಒಪ್ಪಿದ್ದಳು...."

"ಆದರೆ ಆಗ ಜಗದೀಶ್‌ಚಂದ್ರ ಸತ್ತಿದ್ದನಲ್ಲಾ?"

"ಹೌದು. ಆದರೆ ಆತನ ವೀರ್ಯವನ್ನು ಭದ್ರವಾಗಿರಿಸಿದ್ದಂತೆ ಎಸ್‌ಎಸ್‌ಎ ಸೂಕ್ತ ಪತ್ರಗಳನ್ನು ತೋರಿಸಿತು. ನಾನು ಆ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ನನ್ನ ಹೆಂಡತಿ ಗರ್ಭವತಿಯಾಗುವುದು ಮಾತ್ರವೇ ನನಗೆ ಬೇಕಾದದ್ದು. ಅದಕ್ಕೆ ಯಾರಾದರೆ ನನಗೇನು? ಪ್ರತಿಮಾಳಿಗೂ ಸಂತೋಷವಾಯಿತು. ಎರಡು ತಿಂಗಳ ನಂತರ ಪ್ರತಿಮಾ ಗರ್ಭಿಣಿಯಾದಳು. ನಂತರ ಎಸ್‌ಎಸ್‌ಎಗೆ ಎರಡು ಲಕ್ಷ ಕೊಟ್ಟೆ. ಪ್ರತಿಮಾ ಹಾಗೆ ಮೂರ್ಖಳಂತೆ ಹಠ ಹಿಡಿಯದಿದ್ದರೆ ಎರಡು ಸಾವಿರದಲ್ಲಿ ಕೆಲಸ ಮುಗಿಯುತ್ತಿತ್ತು. ಸೂಜಿ ಮೊನೆಯ ಕಾಲುಭಾಗವೂ ಇರದ ಆ ಒಂದು ಕಣಕ್ಕೆ ಎರಡು ಲಕ್ಷ ಸುರಿಯ ಬೇಕಾಯಿತು!...." ಎಂದ ಅಗರ್‌ವಾಲ್ ತೆಳುವಾಗಿ ನಗುತ್ತಾ.

"ಎಸ್‌ಎಸ್‌ಎ ಅಂದ ಏನೂ ಎಂದೇ ಹೇಳಲಿಲ್ಲ." ಅಗರ್‌ವಾಲ್‌ನ ಮುಖದಲ್ಲಿ ನಗು ಮಾಯವಾಯಿತು. 'ಎಸ್‌ಎಸ್‌ಎ ಎಂಬುದೇ ಗೊತ್ತಿಲ್ಲದ ರೈಡ್ ಮಾಡಿದರೆ?' ಎಂದುಕೊಳ್ಳುತ್ತಾ ಅನುಮಾನದಿಂದ ನೋಡುತ್ತಾ "ಹಾಗಂದ್ರೆ ಸ್ಪರ್ಮ್ ಸೆಲ್ಲಿಂಗ್ ಏಜೆನ್ಸಿ."

ದಕ್ಷಿಣದಿಂದ ಬೀಸುತ್ತಾ ಬರುತ್ತಿದ್ದ ಗಾಳಿ ಹಠಾತ್ತಾಗಿ ಸ್ಥಂಭಿಸಿದಂತೆ, ಶರತ್ಕಾಲದ ಮೇಘ ಇದ್ದಕ್ಕಿದ್ದಂತೆಯೇ ಘರ್ಜಿಸಿದಂತೆ, ಅನಿರೀಕ್ಷಿತವಾಗಿ

ಭೂಮಿ ಕಂಪಿಸಿದಂತೆ ಚರಾಚರಗಳೆಲ್ಲವೂ ಚಲಿಸಿ ಕಂಪಿಸುತ್ತಿರುವಂತೆ ಭಾಸವಾಯಿತು.

'ಸ್ಪೆರ್ಮ್ ಸೆಲ್ಲಿಂಗ್ ಏಜೆನ್ಸೀ....ಸ್ಪೆರ್ಮ್ ಸೆಲ್ಲಿಂಗ್ ಏಜೆನ್ಸೀ....' ಎಂದು ಹಲವು ಬಾರಿ ಗೊಣಗಿಕೊಂಡರು ರಂಗಪ್ರಸಾದ್ ಮನಸ್ಸಿನಲ್ಲಿಯೆ...

*　　*　　*　　*

ರಂಜಿತಾಳನ್ನು ಅವರು ಕರೆದೊಯ್ಯುತ್ತಲೇ ಕಣ್ತೆರೆದ ಷಾಡೋ ಅವರು ಮುಚ್ಚಿದ ಬಾಗಿಲ ಬಳಿಗೆ ಹೋಗಿ ನಿಂತ. ತನ್ನ ಬಗ್ಗೆ ಯಾವ ಅನುಮಾನವೂ ಇಲ್ಲದ ಅವರು ಬಾಗಿಲನ್ನು ಭದ್ರಗೊಳಿಸಿರಲಿಲ್ಲ. ಅಲ್ಲಿಂದ ಎಲ್ಲಿಗೆ ಹೋಗಬೇಕೆಂಬುದೇ ಸಮಸ್ಯೆ. ವರಾಂಡದಲ್ಲಿ ಯಾರೂ ಇರಲಿಲ್ಲ. ಚಲಿಸುತ್ತಿದ್ದ ಬಾಗಿಲನ್ನು ನೋಡಿ ಅವರು ಆ ಕಡೆ ಹೋಗಿರಬಹುದು ಎಂದುಕೊಂಡ. ಅತ್ತ ಹೋಗಿ ನೋಡಿದರೆ ಅಲ್ಲಿಂದ ಮುಂದೆ ದಾರಿಯಿಲ್ಲ. ತನ್ನ ಕೋಣೆಯನ್ನು ಅಷ್ಟು ನಿರ್ಲಕ್ಷ್ಯವಾಗಿ ಬಿಟ್ಟು ಅವರು ಏಕೆ ಹೋದರು ಎಂಬುದು ಈಗ ಅರ್ಥವಾಯಿತು. ಹೊರಕ್ಕೆ ತೀರಾ ಹಳೆಯದಾಗಿ ಕಂಡುಬರುವ ಈ ಕಟ್ಟಡ ಸಂಪೂರ್ಣವಾಗಿ ಎಲೆಕ್ಟ್ರಾನಿಕ್ ಸಿಸ್ಟಂನಿಂದ ಕೆಲಸ ಮಾಡುತ್ತಿದೆ.

ಏನು ಮಾಡಲೂ ತೋಚದೆ ವರಾಂಡದಲ್ಲಿ ನಿಂತ. ಎರಡೂ ಕಡೆ ದಾರಿಗಳು ಸ್ಟೀಲ್ ಬಾಗಿಲುಗಳಿಂದ ಮುಚ್ಚಲ್ಪಟ್ಟಿದ್ದವು.

*　　*　　*　　*

ಇದೇ ಕೊನೆ ಎಂದುಕೊಂಡಳು ರಂಜಿತಾ. ಬಾಗಿಲ ಹಿಂದಿನ ಕತ್ತಲೆಯ ಗುಹೆಯಲ್ಲಿ ಭಯಂಕರವಾಗಿ ನಡೆದು ಬರುತ್ತಿದ್ದ ಬೇಟೆ ನಾಯಿಯನ್ನು ನೋಡುತ್ತಲೇ ಅರ್ಧಪ್ರಾಣ ಹಾರಿಹೋಗಿತ್ತು. ಅದರ ಬಾಯಿಂದ ಬರುವ ಉಸುರಿನ ಸದ್ದಿನ ವಿನಾ ಬೇರಾವ ಸದ್ದೂ ಅಲ್ಲಿ ಕೇಳಿಸುತ್ತಿರಲಿಲ್ಲ. ತಲೆ ಎತ್ತಿ ನೋಡಿದಳು. ಅನೇಕ ಜೋಡಿ ಕಣ್ಣುಗಳು ಅವಳ ಸಾವನ್ನು ನಿರ್ವಿಕಾರವಾಗಿ ನೋಡುತ್ತಿದ್ದವು. ಅಪ್ರಯತ್ನವಾಗಿ ಅವಳು ಕಿರುಚಿದಳು. "ನಾನೂ ಉಸ್ಪೋಕ್‌ನಲ್ಲಿ ಸೇರುತ್ತೇನೆ."

ಅವತಾರ್ ಬಾಬಾ ಕೈ ಎತ್ತಿದ. ಇದ್ದಕ್ಕಿದ್ದಂತೆಯೇ ನಾಯಿ ಹಿಂದಕ್ಕೆ ಅಡಿ ಸರಿಯಿತು. ಎರಡು ನಿಮಿಷಗಳಲ್ಲಿ ಯಾರೋ ಬಂದು ಅವಳನ್ನು ಬಾಬಾ ಬಳಿಗೆ ಕರೆದೊಯ್ದರು. ಆತನಿಂದ ನಾಲ್ಕು ಅಡಿ ದೂರದಲ್ಲಿ ರಂಜಿತಾ ನಿಂತಿದ್ದಳು.

"ನಾಯಿಗಳಿಂದ ಕಚ್ಚಿಸಿಕೊಂಡು ಸಾಯುವುದೇ ಅದೃಷ್ಟ ರಂಜಿತಾ. ಒಂದು ವೇಳೆ ಆ ಮರಣವನ್ನು ತಪ್ಪಿಸಿಕೊಳ್ಳಲೆಂದೋ ಅಥವಾ ಆ ರೀತಿಯ

ಸಾವಿನಿಂದ ಸ್ವಲ್ಪಮಟ್ಟಿಗಾದರೂ ಹೊತ್ತುಗಳಿಸಲೆಂದು ಬಯಸಿದ್ದರೆ ನೀನು ತುಂಬಾ ನಷ್ಟ ಅನುಭವಿಸುತ್ತೀ.ಈ ಸಾರಿ ಪ್ರಾಣ ತೆಗೆಯಲು ಬ್ಲಡ್ ಡ್ರೈನ್ ಪದ್ಧತಿ ಅನುಸರಿಸುತ್ತೇವೆ" ಎಂದು ಬಾಬಾ ತುಂಬಾ ಶಾಂತವಾದ ಕಂಠದಲ್ಲಿ ಹೇಳಿದ.

ಈ ಮಾತು ಕೇಳುತ್ತಲೇ ರಂಜಿತಾ ನಡುಗಿದಳು. ಒಂದೊಂದೇ ತೊಟ್ಟು ರಕ್ತವನ್ನು ಹೊರಕ್ಕೆ ತೆಗೆಯುತ್ತಾ ಎರಡು ದಿನಗಳ ಕಾಲ ಚಿತ್ರಹಿಂಸೆ ನೀಡಿ ಸಾಯಿಸುವುದನ್ನು ಬ್ಲಡ್ ಡ್ರೈನ್ ಎನ್ನಲಾಗುತ್ತದೆ. ಸೂಜಿಗಳನ್ನು ಮೈಯೆಲ್ಲಾ ಚುಚ್ಚಿದ ನೋವು. ಶತ್ರುವಿಗೂ ಬೇಡ ಎಂದು ಹೇಳುವಂಥಾ ಚಿತ್ರಹಿಂಸೆ.

"ಸರಿ ತಾನೇ?"

ರಂಜಿತಾ ಅಪ್ರಯತ್ನವಾಗಿ ತಲೆದೂಗಿದಳು. ಬಾಬಾ ತನ್ನವರಿಗೆ ಸನ್ನೆ ಮಾಡಿದ. ಆಕೆಯನ್ನು ಕರೆದೊಯ್ಯುತ್ತಿದ್ದಾಗ ಬಾಬಾ ಹೇಳಿದ: "ಅವಳು ಸುಳ್ಳು ಹೇಳುತ್ತಿದ್ದಾಳೆ ಎಂದು ಲೈ ಡಿಟೆಕ್ಟರ್ ಹೇಳಿದರೆ ಮತ್ತೆ ನನ್ನ ಬಳಿಗೆ ತರುವ ಅವಶ್ಯಕತೆಯೇ ಇಲ್ಲ. ನಾನು ಹೇಳಿದ್ದನ್ನು ಜಾರಿಗೆ ತನ್ನಿ."

ಅವರು ತಲೆದೂಗುತ್ತಾ ಮುಂದೆ ನಡೆದರು.

* * * *

ವರಾಂಡ ಬಳಿ ಬಾಗಿಲು ತೆರೆದ ಸದ್ದಾಗುತ್ತಲೇ ಷಾಡೋ ತನ್ನ ಕೋಣೆಯೊಳಕ್ಕೆ ಓಡಿದ. ಆಗ ಬಂದವರು ಯಾರೂ ಅವನ ಬಳಿಗೆ ಬರಲಿಲ್ಲ. ಅವರು ವರಾಂಡದಿಂದ ಮುಂದೆ ಸಾಗಿದರು.

ಷಾಡೋ ಮತ್ತೆ ಬಾಗಿಲ ಬಳಿಗೆ ಬಂದು ಬಗ್ಗಿ ನೋಡಿದ. ಇದ್ದಕ್ಕಿದ್ದಂತೆಯೇ ಅವನ ಗುಂಡಿಗೆ ತನ್ನ ಬಡಿತ ನಿಲ್ಲಿಸಿದಂತಾಯಿತು–ಅವರ ಮುಂದೆ ರಂಜಿತಾ ನಡೆಯುತ್ತಿದ್ದಾಳೆ. ಕನಸಿನಲ್ಲಿ ಅಡಿಯಿರಿಸಿ ಮುಂದೆ ಹೋಗುತ್ತಿರುವಂತಿದೆ ಆಕೆಯ ನಡಿಗೆ. ಒಡನೆಯೇ ಆ ಬಾಗಿಲ ಬಳಿಗೆ ನಡೆದ. ಷಾಡೋ ಅಲ್ಲಿಗೆ ಸೇರುವ ವೇಳೆಗೆ ಬಾಗಿಲು ಮುಚ್ಚಿತು.

ಬಲವಾದ ಉಕ್ಕಿನ ಬಾಗಿಲು. ಎಲೆಕ್ಟ್ರಾನಿಕ್ ಬಟನ್‌ಗಳಿಂದ ಮಾತ್ರವೇ ತೆರೆದುಕೊಳ್ಳುವ ಅತ್ಯಾಧುನಿಕವಾದದ್ದು. ಮನುಷ್ಯ ಸುಳ್ಳು ಹೇಳುತ್ತಿದ್ದಾನೆಯೋ ನಿಜ ಹೇಳುತ್ತಿದ್ದಾನೆಯೋ ತಿಳಿದುಕೊಳ್ಳುವುದು (ರಕ್ತ ಪ್ರಸರಣದ ವೇಗವನ್ನು ಅನುಸರಿಸಿ ಇದನ್ನು ಗುರ್ತಿಸುತ್ತದೆ) ಈ ಯಂತ್ರದ ಮೂಲಕ ಸಾಧ್ಯವಾಗುತ್ತದೆ. ಆದರೆ ತೀರಾ ಒತ್ತಡಕ್ಕೆ ಸಿಕ್ಕಿಬಿದ್ದ ವ್ಯಕ್ತಿಯೊಬ್ಬನು ನಿಜ ಹೇಳುತ್ತಿದ್ದರೂ ಅವನ ರಕ್ತದ ಒತ್ತಡ ಹೆಚ್ಚಾಗಿದ್ದರೆ ಅವನು ಸುಳ್ಳು ಹೇಳುತ್ತಿದ್ದಾನೆ ಎಂದೇ ಈ ಯಂತ್ರ ಸೂಚಿಸುವ ಸಾಧ್ಯತೆ ಇರುವುದರಿಂದ

ನ್ಯಾಯಸ್ಥಾನ ಇದನ್ನು ಒಪ್ಪಿಕೊಂಡಿಲ್ಲ. ಸುಳ್ಳು ಹೇಳಿದರೆ ಹೇಗಿದ್ದರೂ ಗೊತ್ತಾಗುತ್ತದೆ. ನಿಜ ಹೇಳಿದರೆ ಅಪಾಯ ಸ್ವಲ್ಪವರಲ್ಲ ತಪ್ಪುತ್ತದೆ.

ತಾನು ಹೇಗಿದ್ದರೂ ನಿಜ ಹೇಳುವುದು ಸಾಧ್ಯವಿಲ್ಲ. ಆದ್ದರಿಂದ ಸಾವು ಕಟ್ಟಿಟ್ಟ ಬುತ್ತಿ. ಆದರಲ್ಲೂ ರಕ್ತ ಪ್ರಸರಣವನ್ನು ನಾಡೀ ಬಡಿತದಿಂದ ಗ್ರಹಿಸುವ ಯಂತ್ರವಾದ್ದರಿಂದ ಬದುಕುವ ಆಸೆಯನ್ನೇ ಕೈಬಿಡಬೇಕು.

ರಂಜಿತಾ ಆ ಯಂತ್ರದ ಮೇಲೆ ಕೈಯಿರಿಸಿ "ನಾನು ಉಸ್ಪೋಕ್‌ನಲ್ಲಿ ಸೇರಬೇಕೆಂದು ಮನಸಾ ಬಯಸುತ್ತಿದ್ದೇನೆ." ಅದನ್ನು ಹೊರವಾತಿಗೆ ನುಡಿದಳೇ ಹೊರತು ಅಂತರಂಗ ಅದನ್ನು ಹೇಳಬಲ್ಲುದೆ? ಅದು 'ಇಲ್ಲ ಇಲ್ಲ' ಎಂದೇ ನುಡಿಯುತ್ತಿದೆ.

ಎಲ್ಲರ ನೋಟವೂ ಅದರ ಮೇಲೆ ಕೇಂದ್ರೀಕೃತವಾಗಿದೆ.

ರಂಜಿತಾ ಸುಳ್ಳು ಹೇಳುತ್ತಿದ್ದಾಳೆ ಎಂದು ಹೇಳಲು ಪಾದರಸದ ಮಟ್ಟ ಏರತೊಡಗಿತು.

ಕಬ್ಬಿಣದ ಬಾಗಿಲ ಬಳಿ ಹತ್ತು ಗುಂಡಿಗಳಿವೆ. ಇಂಥಾ ಬಾಗಿಲ ಬಗ್ಗೆ ಅವನಿಗೆ ಗೊತ್ತಿತ್ತು. ಹತ್ತರಲ್ಲಿ ಮೂರು ಗುಂಡಿ ಒತ್ತಿದರೆ ಬಾಗಿಲು ತೆರೆದುಕೊಳ್ಳುತ್ತದೆ. ಆದರೆ ಆ ಮೂರು ಗುಂಡಿಗಳು ಯಾವುವು? ಒಳಗೆ ಏನು ಮಾಡುತ್ತಿದ್ದಾರೋ ಗೊತ್ತಿಲ್ಲ. ಆದರೂ ಘೋರವಾದುದೇನೋ ನಡೆಸುತ್ತಿದ್ದಾರೆ ಎಂಬುದು ಮಾತ್ರವೇ ಗೊತ್ತಿತ್ತು.

ಇದ್ದಕ್ಕಿದ್ದಂತೆಯೇ ಒಂದು ಉಪಾಯ ಹೊಳೆಯಿತು. ಒಂದು ಮೂಲೆಗೆ ಹೋಗಿ ಅಲ್ಲಿಂದ ಸ್ವಲ್ಪ ಧೂಳು ತೆಗೆದುಕೊಂಡು ಬಂದು ಆ ಗುಂಡಿಗಳ ಮೇಲೆ ಊದಿದ. ಮೂರರ ಮೇಲೆ ಸ್ವಲ್ಪ ಹೆಚ್ಚು ಧೂಳು ಅಂಟಿತು. ಅವನಿಗಿಂತ ಮೊದಲು ಹೋದವನು ಅದುಮಿದ ಆ ಗುಂಡಿಯ ಮೇಲೆ ಅವನ ತೋರುಬೆರಳು ಮೇಲಿನ ಬೆವರು ಇನ್ನೂ ಪೂರ್ಣವಾಗಿ ಒಣಗಿರಲಿಲ್ಲ.

ಅದು ಸಂಪೂರ್ಣವಾಗಿ ತಾನೇ ಸ್ವಾತಂತ್ರ್ಯವಹಿಸಿ ಸ್ವೀಕರಿಸಿದ ಅಪಾಯದ ಆಹ್ವಾನ ಎಂಬುದು ಅವನಿಗೆ ಗೊತ್ತಿತ್ತು. ಯಾವುದೇ ರೀತಿಯಾಗಿ ತಪ್ಪು ಗುಂಡಿಯನ್ನು ತಾಕಿದರೂ, ತಪ್ಪು ಕ್ರಮದಲ್ಲಿ ಗುಂಡಿ ಅದುಮಿದರೂ ಅಲಾರಾಂ ಬಡಿಯುತ್ತದೆ ಎಂಬುದು ಗೊತ್ತು. ಆದರೆ ರಂಜಿತಾ ಪ್ರಾಣ ಅಪಾಯದಲ್ಲಿ ಸಿಲುಕಿದೆ ಎಂಬ ಭಾವನೆ ಅವನಿಗೆ ಈ ಬಗ್ಗೆ ಯೋಚಿಸುವ ಅವಕಾಶವೇ ಕೊಡಲಿಲ್ಲ.

ಹೆಚ್ಚು ಧೂಳು ಮೆತ್ತಿಕೊಂಡಿದ್ದ ಮೂರೂ ಗುಂಡಿಗಳನ್ನು ಅದುಮಿದ. ಬಾಗಿಲು ಮೆಲ್ಲನೆ ತೆರೆದುಕೊಳ್ಳಲಾರಂಭಿಸಿತು.

ಅದೃಷ್ಟವಶಾತ್ ಒಳಗಿದ್ದವರ್‍ಯಾರೂ ಷಾಡೋನನ್ನು ಗಮನಿಸಲಿಲ್ಲ. ಅವರೆಲ್ಲರ ದೃಷ್ಟಿ ರಂಜಿತಾಳ ಮೇಲೆ ಕೇಂದ್ರಿಕೃತವಾಗಿತ್ತು.

ಷಾಡೋ ಬೆಕ್ಕಿನಂತೆ ಹೆಜ್ಜೆ ಹಾಕಿ ಮೆಷಿನ್ನಿನ ಹಿಂದೆ ಸೇರಿದ. ಅಲ್ಲಿಂದ ರಂಜಿತಾ ಕಾಣಿಸುತ್ತಿದ್ದಳು. ಆಗಲೇ ಅವರು ಆಕೆಯನ್ನು ಪ್ರಶ್ನಿಸಿದ್ದು. ಲೈ-ಡಿಟೆಕ್ಟರ್ ಸುಳ್ಳು ಹೇಳಿದರೆ ಹಿಡಿದುಕೊಳ್ಳುತ್ತದೆ. ಮೆಷಿನ್ನಿಗೆ ಒಂದು ವೈರನ್ನು ಗೋಡೆಯಲ್ಲಿದ್ದ ಪ್ಲಗ್‌ಗೆ ಸಿಲುಕಿಸಿದ್ದರು. ಏನೂ ಯೋಚಿಸದೇ ಷಾಡೋ ಅದನ್ನು ಕಿತ್ತೆಸೆದ.

ರಂಜಿತಾಳನ್ನೇ ನೋಡುತ್ತಿದ್ದ ಉಸ್ಕೋಕ್ ಸದಸ್ಯರು ಮೆಷಿನ್ನಿನ ತಳ ಭಾಗದಲ್ಲಿದ್ದ ಸಣ್ಣ ಕೆಂಪು ದೀಪ ಆರಿದ್ದು ಗಮನಿಸಲಿಲ್ಲ.

ರಂಜಿತಾಳ ನಾಡಿಯನ್ನು ಗ್ರಹಿಸುತ್ತಿದ್ದ ಯಂತ್ರ ತನ್ನ ಕಾರ್ಯವನ್ನು ನಿಲ್ಲಿಸುತ್ತಲೇ ಅದರ ಪಾದರಸದ ಮಟ್ಟ ಏರುವುದು ನಿಂತಿತು.

ಅವಳನ್ನು ಮತ್ತೆ ಎರಡು ಮೂರು ಪ್ರಶ್ನೆಗಳನ್ನು ಕೇಳಿ ಸಂತೃಪ್ತಿಗೊಂಡು, ಬಾಬಾ ಬಳಿಗೆ ಕರೆದೊಯ್ಯಲು ಹಿಂತಿರುಗಿದರು ಆ ಸ್ವಾಮಿಭಕ್ತರು.

ಆ ಯಂತ್ರ ಎಂತಹ ಪರಿಸ್ಥಿತಿಯಲ್ಲೂ ಸುಳ್ಳು ಹೇಳುವುದಿಲ್ಲ. ಅದು ನೂರಕ್ಕೆ ನೂರುಪಾಲು ಸರಿಯಾದದ್ದನ್ನೇ ಹೇಳುತ್ತದೆ ಎಂಬುದು ಗೊತ್ತಿದ್ದ ರಂಜಿತಾ ತುಂಬಾ ಆಶ್ಚರ್ಯದಿಂದ ಕಣ್ತೆರೆದಳು. ತನ್ನ ಉತ್ತರದಿಂದ ತೃಪ್ತರಾದ ಅವರನ್ನು ಕಂಡು ಅಚ್ಚರಿಗೊಂಡಳು.

ಅಲ್ಲಿಂದ ಹೊರಗೆ ಹೋಗುತ್ತಾ ಹಿಂತಿರುಗಿ ನೋಡಿದಳು. ಅವಳಿಗೆ ಇನ್ನೂ ನಂಬಿಕೆ ಮೂಡಿರಲಿಲ್ಲ. ಮುಚ್ಚಿಕೊಳ್ಳುತ್ತಿದ್ದ ಬಾಗಿಲಿನಿಂದ ಮೆಷಿನ್ನಿನ ಹಿಂದೆ ಒಂದು ಆಕೃತಿ ಎದ್ದದ್ದು ಕಾಣಿಸಿತು.

ನೆರಳಾದರೂ ರಂಜಿತಾ ಚೆನ್ನಾಗಿ ಗುರುತಿಸಬಲ್ಲಳು ಷಾಡೋ.

## ೩೭

ಇದ್ದಕ್ಕಿದ್ದಂತೆಯೇ ಮತ್ತಿನಿಂದ ತೇರ್ಗಡೆ ಹೊಂದಿದವನಂತೆ ಕಣ್ತೆರೆದ ಸಿದ್ಧಾರ್ಥ. ಸ್ವಲ್ಪಕಾಲ ತಾನಿರುವುದೆಲ್ಲಿ ಎಂಬುದೇ ಅರ್ಥವಾಗಲಿಲ್ಲ. ಬೆಚ್ಚನೆಯ ಡ್ರಾಯಿಂಗ್ ರೂಂನಲ್ಲಿರುವಂತಿತ್ತು. ತುಂಬಾ ಹಾಯಾಗಿತ್ತು. ಮೂರು ದಿನಗಳಿಂದ ಮೈಯನ್ನು ಸೂಜಿಗಳಿಂದ ಇರಿಯುತ್ತಿದ್ದಂತೆ ನೋವು ಕೊಡುತ್ತಿದ್ದ ಚಳಿ ಈಗ ಇರಲಿಲ್ಲ.

ತಲೆ ತಿರುಗಿಸಿ ನೋಡಿದ. ಪಕ್ಕದಲ್ಲಿಯೇ ರಾಕೇಶ್ ಗಾಢ ನಿದ್ರೆಯಲ್ಲಿ ಮೈಮರೆತು ನಿದ್ರಿಸುತ್ತಿದ್ದ. ಗುಹೆಯೊಳಗೆ ಏಕೆ ಈ ಬಿಸಿ ವಾತಾವರಣವಿದೆ ಎಂಬುದು ಗೊತ್ತಾಯಿತು. ಗುಹೆಯ ಮೇಲ್ಭಾಗದಿಂದ ಸುರಿದ ನೀರು ಕೆಳಕ್ಕೆ ಪೂರ್ಣವಾಗಿ ಸುರಿಯುವ ಮೊದಲೇ ಘನೀಭವಿಸಿ ಬಾಗಿಲಂತಾಗಿ ಹೊರಗಿನ ಗಾಳಿಯನ್ನು ಒಳಕ್ಕೆ ಬಿಡುತ್ತಿಲ್ಲ. ಈ ಸ್ಥಿತಿ ವಿಚಿತ್ರವಾಗಿ ತೋರಿತು. ಸುತ್ತಲಿನ ಗೋಡೆ ಮಂಜು, ಮೇಲಿನ ಛಾವಣಿ ಮಂಜು. ಆದರೂ ಒಳಗೆ ಬೆಚ್ಚನೆಯ ವಾತಾವರಣ. ಗಾಳಿ ಇಲ್ಲದೆ ಇರುವಷ್ಟು ಕಾಲವೂ ಮಂಜೂ ಕೂಡ ಚಳಿಯನ್ನು ಕೊಡುವುದಿಲ್ಲ. ಮಂಜಿನ ಮೇಲಿಂದ ಬೀಸುವ ಗಾಳಿ ಮಾತ್ರವೇ ಮೈಯನ್ನು ನಡುಗಿಸುತ್ತದೆ.

ಎದ್ದು ಗುಹೆಯ ಬಾಗಿಲ ಬಳಿಗೆ ಬಂದು ತಲೆಯನ್ನು ತೀರಾ ಬಗ್ಗಿಸಿ ಗುಹೆಯಿಂದ ಹೊರಕ್ಕೆ ನೋಡಿದ. ಹೊರಗಿನ ದೃಶ್ಯ ತುಂಬಾ ಮನೋಹರವಾಗಿ ಕಂಡುಬಂದಿತು. ಅದು ಬೆಳದಿಂಗಳಿನ ದಿನವಲ್ಲ. ಆದರೂ ನೂರಾರು ಮೈಲಿ ದೂರ ಹತ್ತಿಯನ್ನು ಹಾಸಿದಂತೆ ಬಿಳುಪು, ಸ್ವಚ್ಛವಾಗಿ ಹೊಳೆಯುತ್ತಿದೆ.

ಹಲವು ದಿನಗಳಿಂದ ಊಟವಿಲ್ಲದೆ ಇದ್ದುದರಿಂದ ಉಂಟಾಗಿದ್ದ ನಿಶ್ಯಕ್ತಿ. ಸಾವು ಅನಿವಾರ್ಯವೆಂಬುದು ಗೊತ್ತಾದ್ದರಿಂದ ಮೂಡಿದ್ದ ನಿರಾಸೆ, ಪರಿಸ್ಥಿತಿಗಳ ಒತ್ತಡದಿಂದ ಅನುಭವಿಸಿದ್ದ ದೈಹಿಕ ಬಳಲಿಕೆ ಇವೆಲ್ಲವನ್ನೂ ಆ ಕ್ಷಣದಲ್ಲಿ ಅವನು ಮರೆತ. ದೂರದಲ್ಲಿ ಮೆಲುಗಾಳಿ ಬೀಸಿದಾಗಲೆಲ್ಲಾ ಒಂದು ಬಿಳಿಯ ಜಿಂಕೆ ಮೇಲೆ ಹಾರಿ ಧುಮುಕಿ ಮತ್ತೆ ಹುಲ್ಲಿನ ಮೆತ್ತೆಯ ಮೇಲೆ ಮಲಗಿದಂತೆ ಸ್ವಲ್ಪ ಮಂಜು ಮೇಲೆದ್ದು ಬೀಳುತ್ತಿತ್ತು.

ಗಡಿಯಾರ ನೋಡಿಕೊಂಡು "ರಾಕೇಶ್" ಎಂದು ಕರೆದ.

ಇಬ್ಬರೂ ಒಂದು ಗಂಟೆಯ ಕಾಲ ನಿದ್ರಿಸಿದ್ದರು. ಅದು ರಾಕೇಶ್ ಎಚ್ಚರವಾಗಿರಬೇಕಾಗಿದ್ದ ಸಮಯ. ಆದರೆ ಆ ಬೆಚ್ಚಗಿನ ವಾತಾವರಣಕ್ಕೆ ಅವನೂ ನಿದ್ರೆಯನ್ನು ದೂರಮಾಡಲಾರದೆ ನಿದ್ರೆಯ ಮಡಲಿಗೆ ಬಿದ್ದಿದ್ದಾನೆ.

ತಾನೇ ಎಚ್ಚರವಾಗಬೇಕಿತ್ತು ತನ್ನದೇ ತಪ್ಪು.

ತನ್ನ ಅಂಗೈಗಳನ್ನು, ಕಾಲಿನ ಬೆರಳುಗಳನ್ನು, ಕಿವಿಗಳನ್ನು ಚೆನ್ನಾಗಿ ಉಜ್ಜುತ್ತಿದ್ದಾನೆ. (ಈ ಕೆಲಸಕ್ಕಾಗಿಯೇ ಒಬ್ಬರು ನಿದ್ರಿಸದೆ ಎಚ್ಚರವಾಗಿರಬೇಕೆಂದು ಹೇಳುವುದು.)

"ರಾಕೇಶ್" ಎಂದು ಮತ್ತೆ ಕರೆದ. ರಾಕೇಶ್ ಎಚ್ಚರಗೊಳ್ಳಲಿಲ್ಲ. ಸಿದ್ಧಾರ್ಥ ತಾನೇ ಅವನ ಕೈಗಳನ್ನು ತನ್ನ ಕೈಗಳಲ್ಲಿ ತೆಗೆದುಕೊಂಡು ಉಜ್ಜತೊಡಗಿದ. ಮೊದಲು ಸ್ವಲ್ಪ ಚಲಿಸಿದ ರಾಕೇಶ್ ನಿದ್ರೆಯಲ್ಲಿ ಹಾಗೇ ಸುಮ್ಮ

ನಿದ್ದ. ತುಂಬಾ ದಿನಗಳಿಂದ ನಿದ್ರೆ ಇಲ್ಲದೆ ಹೋಗಿದ್ದರಿಂದ ಪ್ರಾಣ ಹೋದರೂ ಚಿಂತೆಯಿಲ್ಲ ಎನ್ನುವಂತೆ ಮಲಗಿದ್ದ.

ಅವನ ಮುಖ ನಿರ್ಮಲವಾಗಿತ್ತು. ತನ್ನ ಮನದ ಮಾಲಿನ್ಯವನ್ನೆಲ್ಲಾ ಬೇರೊಬ್ಬನ ಮುಂದೆ ರಾಶಿ ಹಾಕಿದ ಮೇಲೆ ಬರಬಹುದಾದ ನಿರ್ಮಲತ್ವ ಅದು.

ಸಿದ್ಧಾರ್ಥ ಅವನ ಕೈಗಳನ್ನು, ಕೈಬೆರಳುಗಳನ್ನೂ, ಉಜ್ಜಿದ ನಂತರ ಕಾಲಿನ ಬಳಿಗೆ ಬಂದ. ಕಾಲನ್ನು ಕೈಗೆತ್ತಿಕೊಳ್ಳುತ್ತಿದ್ದಾಗ ಅವನ ಕಣ್ಣಲ್ಲಿ ನೀರು ಮಿಡಿಯಿತು. ಒಂದು ಕಾಲನ್ನು ಉಜ್ಜುವ ಅವಶ್ಯಕತೆ ಇರಲಿಲ್ಲ. ರಕ್ತ ಚಲನೆ ನಿಂತು ಕೊರಡಾಗಿತ್ತು.

ಎರಡನೆಯ ಕಾಲನ್ನು ಹೆಬ್ಬೆರಳಿನಿಂದ ಉಜ್ಜಲು ಮೊದಲಿಟ್ಟ. ಏನೋ ಅನುಮಾನವಾಗಿ ಮೊಣಕಾಲಿನ ಬಳಿ ಮೆತ್ತಗೆ ಬಡಿದು ನೋಡಿದ. ಆ ಕಾಲೂ ಹಿಮವ್ರಣದಿಂದ ಶಿಥಿಲವಾಗಲು ಪ್ರಾರಂಭವಾಗಿತ್ತು.

ರಾಕೇಶನಲ್ಲಿ ಚಲನೆ ಇಲ್ಲ.

ಪಿನ್ನಿನಿಂದ ಅವನ ಕಾಲನ್ನು, ಮೊಣಕಾಲಿನ ಬಳಿಗೆ ಚುಚ್ಚಿದ. ನೋವಿನಿಂದ ರಾಕೇಶ್ ಮಗ್ಗಲು ಬದಲಿಸಿದ. ಸಿದ್ಧಾರ್ಥ ಪಿನ್ನನ್ನು ಮೀನಖಂಡದ ಬಳಿ ಚುಚ್ಚಿದ. ರಾಕೇಶನಿಗೆ ನೋವಾದಂತಿಲ್ಲ. ಎಂದರೆ ಆ ಭಾಗ ಸ್ಪರ್ಶ ಜ್ಞಾನವನ್ನು ಕಳೆದುಕೊಂಡಿದೆ.

"ರಾಕೇಶ್......ರಾಕೇಶ್......" ಎನ್ನುತ್ತಾ ಬಲವಾಗಿ ತಟ್ಟುತ್ತಾ ಎಚ್ಚರಿಸಿದ.

ನಿದ್ರೆಯಿಂದ ಎದ್ದ ರಾಕೇಶ್ ಅದೇ ಮಂಪರಿನಲ್ಲಿ "ಏನು?" ಎಂದು ಕೇಳಿದ.

"ನಾವು ಈ ಕೂಡಲೇ ಹೊರಡಬೇಕು."

"ಈಗ ಟೈಂ ಎಷ್ಟು?"

"ಅರ್ಧರಾತ್ರಿಯಾಗಿದೆ, ಈಗ ಅದಲ್ಲ ಮುಖ್ಯ. ನಾವು ಕೂಡಲೇ ಹೋಗಬೇಕು..."

"ಏಕೆ?"

"ನಂತರ ಹೇಳ್ತೀನೆ. ಮೊದಲು ಹೊರಡಲು ಸನ್ನದ್ಧನಾಗು."

ರಾಕೇಶ್ ಸುತ್ತಲೂ ನೋಡಿ "ಇಲ್ಲಿ ಇಷ್ಟು ಬೆಚ್ಚಗಿದೆ. ಇದನ್ನು ಬಿಟ್ಟು ರಾತ್ರಿ ಹೊರಗೇಕೆ ಪ್ರಯಾಣ?" ಎಂದು ಕೇಳಿದ.

ಸಿದ್ಧಾರ್ಥ ಬೇಸರದಿಂದ "ಹೇಳ್ತೀನೆ ಎಂದೆನಲ್ಲಾ. ಮೊದಲು

ಏಳು" ಎಂದ.

"ನಾವು ಸಾಯುವುದು ಖಂಡಿತ. ನಮಗೆ ಜನರಿರುವ ಪ್ರದೇಶ ಯಾವ ಕಡೆಗಿದೆಯೋ ಅದೇ ಗೊತ್ತಿಲ್ಲ. ಇನ್ನೆಷ್ಟು ದಿನ ಪ್ರಯಾಣ ಮಾಡ ಬೇಕೆಂಬುದೂ ಗೊತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಜೀವಂತವಾಗಿರುವಷ್ಟು ಕಾಲವು-ಅದೇನೂ ಎರಡು ದಿನಗಳಿಗಿಂತ ಹೆಚ್ಚಾಗಿರಲಾರದು-ಇದೇ ಗುಹೆ ಯಲ್ಲಿಯೇ ಇದ್ದರೆ ಒಳ್ಳೆಯದು" ಎಂದ ರಾಕೇಶ್ ಮೆಲ್ಲನೆ ಅವನ ಕಣ್ಣಲ್ಲಿ ಸಾವಿಗೆ ಮೊದಲು ಕಾಣಿಸುವ ಧೈರ್ಯ ತೋರಿಬರುತ್ತಿತ್ತು.

ಸಿದ್ಧಾರ್ಥ ಯಾವುದನ್ನೂ ವಿವರಿಸಲಿಲ್ಲ. "ಏಳು ರಾಕೇಶ್" ಎಂದ. ಅವನ ಕಂಠ ಧ್ವನಿಸುತ್ತಿದ್ದ ಸ್ಥಿರತೆಗೆ ರಾಕೇಶ್ ಮರುಮಾತಿಲ್ಲದೆ ಎದ್ದ. ಸಿದ್ಧಾರ್ಥ ಷೆರ್ಪಾ ಬಳಿ ಸಿಕ್ಕಿದ ಬ್ಯಾಗ್ ತೆಗೆದುಕೊಂಡ. ಅದರಲ್ಲಿದ್ದ ವಸ್ತ್ರ ಗಳನ್ನು ಪರಿಶೀಲಿಸಿದ. ಸಣ್ಣ ದೀಪ, ಡೈರಿ ಪೆನ್ಸಿಲ್, ಲೈಟರ್....

ಇಬ್ಬರೂ ತೆವಳುತ್ತಾ ಹೊರಕ್ಕೆ ಬಂದರು.

ಚಳಿಗಾಳಿ ಅವರನ್ನು ಒಮ್ಮೆಲೆಗೇ ಆವರಿಸಿತು. "ನಾನು ಹೇಳಲಿಲ್ಲವೇ" ಎನ್ನುವಂತೆ ನೋಡಿದ ರಾಕೇಶ್. ಸಿದ್ಧಾರ್ಥ ಏನೂ ಹೇಳದೆ "ನಡೆಯೋಣ" ಎನ್ನುತ್ತಾ ಭುಜಕ್ಕೆ ಚೀಲವನ್ನು ತೂಗುಹಾಕಿದ.

ರಾಕೇಶ್ ತನ್ನ ಮೈ ನೋಡಿಕೊಂಡ. ಷೆರ್ಪಾ ಬಟ್ಟೆಗಳೂ ತನ್ನ ಮೇಲೆ ಇದ್ದುದರಿಂದ ಮೊದಲಿಗಿಂತಲೂ ಈಗೇಕೆ ಹೆಚ್ಚು ಬೆಚ್ಚಗಿದೆ ಎನ್ನುವುದು ಗೊತ್ತಾಯಿತು. ಸಿದ್ಧಾರ್ಥನೆಡೆಗೆ ಕೃತಜ್ಞತೆಯಿಂದ ನೋಡುತ್ತಾ, "ನೀನೊಂದು ತೆಗೆದುಕೋ" ಎಂದ.

"ಬೇಡ" ಎಂದ ಸಿದ್ಧಾರ್ಥ. ಅವನೇಕೆ ಅಷ್ಟೊಂದು ಗಂಭೀರವಾಗಿದ್ದಾನೆ ಎಂಬುದು ಅರ್ಥವಾಗದೆ ಹೆಜ್ಜೆ ಮುಂದಿಟ್ಟ ರಾಕೇಶ್.

ಅಷ್ಟೇ! ಪಾದದ ಬಳಿ ಸಂತುಲನ ತಪ್ಪಿ ಮುಂದಕ್ಕೆ ಮುಗ್ಗರಿಸಿದ. ಸಿದ್ಧಾರ್ಥ ಒಡನೆಯೇ ಅವನನ್ನು ಹಿಡಿಯುತ್ತಾ "ನಾನೇನಾಗುವುದೆಂದು ಭಯಗೊಂಡಿದ್ದೆನೋ ಅದೇ ನಡೆದಿದೆ." ಎಂದು ತನ್ನಲ್ಲಿಯೇ ಗೊಣಗಿದ. ರಾಕೇಶ್‌ಗೆ ಅರ್ಥ ಕೇಳಿಸಿತು; ಅರ್ಥ ಕೇಳಿಸಲಿಲ್ಲ.

"ಏನು?"

ಸಿದ್ಧಾರ್ಥ ಉತ್ತರಿಸದೆ "ಎಚ್ಚರಿಕೆ, ನಡೆಯಲು ಪ್ರಯತ್ನಿಸು" ಎಂದ.

"ಅದೇನೋ ಭಯವೆಂದೆಯಲ್ಲಾ ಏನದು?" ಮತ್ತೆ ಕೇಳಿದ ರಾಕೇಶ್.

ಸಿದ್ಧಾರ್ಥ ಹೇಳದೆ ಸುಮ್ಮನಿರುವುದು ಸಾಧ್ಯವಿರಲಿಲ್ಲ.

"ಪಾದದ ಬಳಿ ಪ್ರಾರಂಭವಾದ ಹಿಮವ್ರಣ ಕ್ರಮವಾಗಿ ಮೇಲಕ್ಕೆ ಹರಡು

ತ್ತಿದೆ. ಈಗ ನಿನ್ನನ್ನು ಎಚ್ಚರಿಸಿದಾಗ ಅದನ್ನೇ ಗುರ್ತಿಸಿದೆ. ಅದಕ್ಕೆ ಈಗಲೇ ಹೊರಡೋಣ ಎಂದಿದ್ದು."

ಇಷ್ಟೆಲ್ಲಾ ಹೇಳುವುದು ಅವನಿಗೆ ಇಷ್ಟವಿರಲಿಲ್ಲ. ಆದರೆ ಸುಮ್ಮನಿರುವುದೂ ಸಾಧ್ಯವಿರಲಿಲ್ಲ.

ರಾಕೇಶ್ ದಡ್ಡನಲ್ಲ. ತನ್ನಲ್ಲಿ ತಾನೇ ಯೋಚಿಸುತ್ತಿರುವವನಂತೆ "ಅಂದ್ರೆ....ಅಂದ್ರೆ....ನಿನ್ನೆ ಪಾದದ ಬಳಿಯ ಮಾಂಸ ಮರಗಟ್ಟಿತ್ತು. ಈವೊತ್ತು ಅದು ಮೊಣಕಾಲು ತನಕ ಬೆಳೆದಿದೆ! ನಾಲ್ಕೈದು ದಿನಗಳಲ್ಲಿ ಕಾಲು ತೆಗೆಯದಿದ್ದರೆ ತೊಡೆ ಹಾಗೆ ಸೋಂಟ..." ಎಂದು ಹೇಳಿದ.

ಸಿದ್ಧಾರ್ಥ ಮಾತನಾಡಲಿಲ್ಲ. ಅಷ್ಟರಲ್ಲಿ ಏನೋ ಹೊಳೆದವನಂತೆ "...ಇನ್ನೊಂದು ನಾಲ್ಕೈದು ಗಂಟೆಗಳಲ್ಲಿ ಮೊಣಕಾಲತನಕ ವ್ಯಾಪಿಸುತ್ತದೆ. ಆಗ ನಾನು ನಡೆಯಬಲ್ಲೆನೇ?"

"ರಾಕೇಶ್"

"ಅದಕ್ಕೇ ತಾನೆ ಅರ್ಧರಾತ್ರಿಯಲ್ಲೇ ಹೊರಡೋಣವೆಂದು ಸಿದ್ಧವಾಗಿರೋದು. ನನಗೋಸ್ಕರ ಈ ಚಳಿಯಲ್ಲೂ ನೀನು...."

"ರಾಕೇಶ್, ಚಿಂತೆ ಬಿಟ್ಟು ನಡಿ. ನಾವು ತುಂಬಾ ದೂರ ಹೋಗಬೇಕು" ಎಂದ ಸಿದ್ಧಾರ್ಥ.

"ಎಲ್ಲಿಗೆ ಹೋಗ್ತೀವಿ?" ಎಂದು ನಕ್ಕ ರಾಕೇಶ್ "ಎಲ್ಲಿಂದ ಹೊರಟೆವೋ ಈಗ ಅಲ್ಲಿಗೇ ಬಂದಿದ್ದೇವೆ. ನಾಲ್ಕು ದಿನ ಪ್ರಯಾಣ ಮಾಡಿದರೂ ಇಲ್ಲೇ ಇರುತ್ತೇವೆ. ನನಗೆ ಹುಚ್ಚು ಹಿಡಿದಿದೆ ಎಂದುಕೊಳ್ಳಬೇಡ. ಈ ರಾಕೇಶ್ ಉಸ್ಸೋಕ್ ಸದಸ್ಯ. ರಕ್ತವನ್ನು ಗಟಗಟನೆ ಕುಡಿಯುವ ಗಣಗಳಲ್ಲಿ ಕೆಂಪು ಸ್ಕೆಲಿಟನ್. ಇವನಿಗೆ ಏನೂ ಆಗೋಲ್ಲ....ಹ್ಹಹ್ಹಹ್ಹಾ..."

ಇಬ್ಬರೂ ನಡೆಯಲು ಪ್ರಾರಂಭಿಸಿದರು. ದಾರಿಯ ಮಧ್ಯದಲ್ಲಿ ತನ್ನ ಮೈಮೇಲಿದ್ದ ಒಂದು ಜತೆ ಬಟ್ಟೆಯನ್ನು ಸಿದ್ಧಾರ್ಥನಿಗೆ ಕೊಡಲು ಪ್ರಯತ್ನಿಸಿದ. ಸಿದ್ಧಾರ್ಥ ಒಪ್ಪಲಿಲ್ಲ. ಹಿಮವ್ರಣದ ಇತರ ಪ್ರಭಾವಗಳು ಹೇಗಿರುತ್ತವೆಯೋ ಗೊತ್ತಿಲ್ಲ.

ಅರ್ಧರಾತ್ರಿ ದಾಟಿತು.

ದಿಕ್ಕು ಕಾಣದೆ ಅವರು ಮುಂದೆ ಸಾಗುತ್ತಿದ್ದಾರೆ. ಅಲ್ಲಿಯ ಕಲ್ಲು–ಗುಂಡುಗಳು ಮರೆಯಲ್ಲಿ ಸೇರಿಕೊಂಡಿರುವ ಯಾವುದೋ ಮೃಗ ಅಳುತ್ತಿರುವಂತೆ ಗಾಳಿ ಸದ್ದು ಮಾಡುತ್ತಿದೆ. ಎಲ್ಲಿ ನೀರ್ಗಲ್ಲ ಪ್ರವಾಹವಿದೆ, ಎಲ್ಲಿ ಪ್ರಪಾತವಿದೆ ಏನೊಂದು ಕಾಣದೆ ನಡೆಯುತ್ತಿದ್ದಾರೆ...ನಡೆಯುತ್ತಲೇ ಇದ್ದಾರೆ.

ತಾವು ನಿರೀಕ್ಷಿಸಿದ್ದಕ್ಕಿಂತಲೂ ಮೊದಲೇ ನಿರೀಕ್ಷಿಸಿದ್ದ ಅಪಾಯ ನಡೆಯಿತು. ರಾಕೇಶ್ ಮಂಜಿನಲ್ಲಿ ಕುಸಿದು ಕುಳಿತ.

ಹಿಮವ್ರಣ ಮೊಣಕಾಲಿನ ತನಕ ವ್ಯಾಪಿಸಿತ್ತು. ಕಾಲು ತನ್ನ ಕೆಲಸ ನಿಲ್ಲಿಸಿತ್ತು. ಆ ಕಾಲು ನಿರ್ಜೀವ ವಸ್ತುವಾಗಿ ತೂಗಾಡಲು ಪ್ರಾರಂಭಿಸಿತ್ತು. ಬಲವಾದ ದೊಣ್ಣೆಯ ನೆರವಿನಿಂದ ಪ್ರಯತ್ನಪೂರ್ವಕವಾಗಿ ಅಡಿ ಇರಿಸುವುದು ಸಾಧ್ಯವಿತ್ತು. ಆದರೆ ಆ ಮಂಜಿನಲ್ಲಿ ದೊಣ್ಣೆ ಸಿಗುವುದಾದರೂ ಎಲ್ಲಿ? ಒಂದು ವೇಳೆ ಸಿಕ್ಕರೂ ಸಾಧಾರಣ ನೆಲದ ಮೇಲೆ ಹಾಗೆ ನಡಿಯ ಬಹುದಾದರೂ ಮಂಜಿನ ಮೇಲೆ ಹಾಗೆ ಒಂದು ಕಾಲಿನಿಂದ ಅಡಿ ಇರಿಸುವುದು ಕಷ್ಟ.

"ಸಿದ್ಧಾರ್ಥ ಆಯಿತು. ಇನ್ನು ನೀನು ಹೋಗ ಬಹುದು. ಗುಡ್ ಬೈ" ಎಂದು ಕೈಗಳಿಂದ ಮುಖ ಮುಚ್ಚಿಕೊಂಡ. ಸಿದ್ಧಾರ್ಥ ಮಾತಿಲ್ಲದೆ ರಾಕೇಶ್‌ನನ್ನು ದಿಟ್ಟಿಸಿದ. ಚೀಲವನ್ನು ಸರಿಯಾಗಿರಿಸಿಕೊಂಡು ಯುದ್ಧರಂಗದಲ್ಲಿ ಗಾಯಗೊಂಡ ಇನ್ನೊಬ್ಬ ಸೈನಿಕನನ್ನು ಭುಜದ ಮೇಲೆ ಸೈನಿಕ ಎತ್ತಿಕೊಂಡಂತೆ ಎತ್ತಿಕೊಂಡು ಮುಂದೆ ಸಾಗಿದ ಸಿದ್ಧಾರ್ಥ.

"ಇದೇನು ಸಿದ್ಧಾರ್ಥ ಬಿಡು...."

"ಮಾತುಗಳಿಂದ ವಾದಗಳಿಂದ ನಾನು ಮತ್ತಷ್ಟು ಬೇಗ ಬಳಲುವಂತೆ ಮಾಡಬೇಡ ರಾಕೇಶ್" ಎಂದ ಸಿದ್ಧಾರ್ಥ ಮಂಜಿನಲ್ಲಿ ಒಂದು ಹೆಜ್ಜೆ ತೆಗೆದು ಮತ್ತೊಂದು ಹೆಜ್ಜೆಯನ್ನು ಇರಿಸುತ್ತಾ. ಹಾಗೆ ಒಬ್ಬ ಮನುಷ್ಯನನ್ನು ಹೊತ್ತು ಪಾದಗಳನ್ನೇ ಮುಳುಗಿಸುವ ಮಂಜಿನಲ್ಲಿ ತುಂಬಾ ದೂರ ನಡೆಯುವುದು ಸಾಧ್ಯವಿಲ್ಲ ಎಂಬುದು ಗೊತ್ತು. ಷೆರ್ಪಾ ಸತ್ತ ಸ್ಥಳದಿಂದ (ಈಗಿನ ಪ್ರದೇಶದಿಂದ) ಅವರು ಗುರಿಮುಟ್ಟಲು ಕನಿಷ್ಟ ಎರಡು ದಿನಗಳು ತಪ್ಪದೆ ನಡೆಯ ಬೇಕಾಗಿರುತ್ತದೆ. ಅಷ್ಟು ದೂರವನ್ನು ಹೀಗೆ ನಡೆಯುವುದು ಸಾಧ್ಯವೇ?

"ನಾನು ನಡೆಯುತ್ತೇನೆ... ಯಾಕೆ ನಡೆಯಲು ಸಾಧ್ಯವಿಲ್ಲ? ನನ್ನ ಭುಜದ ಮೇಲೇನೂ ಭಾರವಿಲ್ಲ. ಇದೋ ಬಲಗಾಲು ಮುಂದೆ ಇರಿಸುತ್ತಿದ್ದೇನೆ, ನಂತರ ಎಡಗಾಲು... ನನ್ನಲ್ಲಿ ಹೊಸ ಚೈತನ್ಯವಿದೆ. ಕೊನೆಯತನಕ ನಡೆಯುತ್ತೇನೆ. ಖಂಡಿತ ಗುರಿಮುಟ್ಟುತ್ತೇನೆ..."

–ಈ ರೀತಿ ತನ್ನನ್ನು ತಾನೇ ವಶೀಕರಣಕ್ಕೆ ಒಳಪಡಿಸಿಕೊಂಡವನಂತೆ ಕರ್ತವ್ಯವನ್ನು ಮನನ ಮಾಡುತ್ತಾ ಹೆಜ್ಜೆ ಹಾಕುತ್ತಿದ್ದ ಸಿದ್ಧಾರ್ಥ.

ಒಂದು ಗಂಟೆ... ಎರಡು ಗಂಟೆ.... ಮೂರು ಗಂಟೆ.... ಅದುವರೆಗೂ ಅವನ ಶಕ್ತಿ ಇತ್ತು. ಬೇರೆಯವರಾಗಿದ್ದರೂ ಹತ್ತು–ಇಪ್ಪತ್ತು ಹೆಜ್ಜೆಗಳಿಗೆ ಕುಸಿದು ಬೀಳುತ್ತಿದ್ದರು. ಅವರನ್ನು ಕಂಡವರ್ಯಾರು ಮನುಷ್ಯರು ಎನ್ನುತ್ತಿರಲಿಲ್ಲ.

ತಲೆಗೂದಲು ಸೂಜಿಗಳಂತೆ ನಿಮಿರಿತ್ತು. ಗಡ್ಡ ಬಿಳಿಚಿಕೊಂಡಿತ್ತು. ಚಲಿಸುವ ಅಸ್ಥಿಪಂಜರಗಳಂತೆ ಇದ್ದ ಅವರ ಕಣ್ಣೂ ಬಳಲಿತ್ತು. ಅದೂ ಹಸಿವಿಗೆ ಕಂಗೆಟ್ಟು ಒಳಕ್ಕೆ ಸೇರಿತ್ತು. ಮಂಜಿಗೆ ಒಡೆದು ತುಟಿ ಬಿಳಿಚಿಕೊಂಡಿತ್ತು. ಶಕ್ತಿ ಮಾಯವಾಗಿತ್ತು. ಪಾದಗಳ ಬಳಿ ಪ್ಯಾಂಟು ಚಿಂದಿಯಾಗಿತ್ತು. ಬೂಟಿನ ಮೇಲೆ ಕೆಳಗೆ ಮಂಜಿನ ಪೊರೆ ಕಟ್ಟಿತ್ತು. ಪಾದವನ್ನಿಟ್ಟು ಮತ್ತೆ ಪಾದ ಮೇಲೆತ್ತಲು ಕಾಲನ್ನು ಎಳೆಯಬೇಕಾಗಿತ್ತು. ಮೈಯನ್ನು ಸೂಜಿಯಂತೆ ಚುಚ್ಚುವ ಗಾಳಿಯ ಅಬ್ಬರ ಒಂದುಕಡೆ. ದಾರಿಯೇ ಕಾಣದ ಬಿಳಿಪೊರೆ ಇನ್ನೊಂದು ಕಡೆ. ಮೂರು ಗಂಟೆಯ ಕಾಲ ಒಂದೇ ಸಮನೆ ನಡೆದ ನಂತರ ರಾಕೇಶನನ್ನು ಕೆಳಕ್ಕೆ ಇಳಿಸಿದ್ದ. ಅವನ ಬಟ್ಟೆಗಳು ಬೆವರಿನಿಂದ ತೊಯ್ದು ಹೋಗಿದ್ದುವು. ಏದುಸಿರಿಡುತ್ತಾ ಸುಧಾರಿಸಿಕೊಂಡ ನಂತರ ಮಾತನಾಡಲು ಸಾಧ್ಯವಾಯಿತು.

"ಮೊದಲ ಬಾರಿ ನಾವು ತಪ್ಪು ಮಾಡಿದೆವು. ಮಂಜಿನ ಬೆಟ್ಟಗಳಲ್ಲಿ ದಿಕ್ಕನ್ನು ತಪ್ಪಾಗಿ ಗುರ್ತಿಸಿ ಅತ್ತಕಡೆ ಹೋದೆವು. ಈ ಬಾರಿ ತಪ್ಪುಮಾಡಿಲ್ಲ ಎಂದು ಭಾವಿಸುತ್ತೇನೆ" ಎಂದ ಸಿದ್ಧಾರ್ಥ.

"ಒಂದು ವೇಳೆ ಸರಿಯಾದ ದಿಕ್ಕಿನಲ್ಲೇ ಪ್ರಯಾಣ ಮಾಡಿದ್ದೇವೆ ಎಂದುಕೊಂಡರೂ ಬಸ್ಸು ಇಳಿದ ಸ್ಥಳ ಸೇರಿಕೊಳ್ಳಲು ಎರಡು ದಿನಗಳಾದರೂ ಬೇಕು."

"ನೋಡು, ಇತ್ತಕಡೆ ಒಂದು ಶಿಖರ, ಅತ್ತಕಡೆ ಒಂದು ಶಿಖರ ಹೀಗೆ ಎರಡು ಶಿಖರಗಳಿವೆ. ಮಧ್ಯದಲ್ಲಿ ದೊಡ್ಡದಾದ ಇಳಿತ. ಇದರಲ್ಲಿ ನಾವೆಷ್ಟು ದೂರ ನಡೆದರೂ ಗುರಿಮುಟ್ಟುವುದು ಸಾಧ್ಯವಿಲ್ಲ...."

"ಹಾಗಿದ್ದರೆ ಈಗ ನಾವೇನು ಮಾಡಬೇಕು?" ರಾಕೇಶ್ ಸಂದೇಹದಿಂದ ಕೇಳಿದ.

"ಎರಡರಲ್ಲಿ ಯಾವುದಾದರೂ ಒಂದನ್ನು ಹತ್ತಬೇಕು."

"ಹತ್ತಿ...."

"ಇರುವ ಸಂಗತಿಗಳನ್ನು ಇರುವಂತೆಯೇ ಮಾತನಾಡಿ ಅರ್ಥಮಾಡಿಕೊಳ್ಳುವುದು ಒಳ್ಳೆಯದು. ಈ ಚಳಿಯಲ್ಲಿ ಈಗ ನಾವಿರುವ ಸ್ಥಿತಿಯಲ್ಲಿ ಇನ್ನೊಂದು ದಿನಕ್ಕಿಂತಲೂ ಹೆಚ್ಚು ಬದುಕುವ ಸಾಧ್ಯತೆ ಇಲ್ಲವೆನಿಸುತ್ತದೆ. ಅದಕ್ಕೂ ಹೆಚ್ಚು ಎಂದರೆ ಇನ್ನೊಂದು ನಾಲ್ಕುಗಂಟೆ" ಎಂದ ಸಿದ್ಧಾರ್ಥ.

ರಾಕೇಶ್ ನಕ್ಕ. ಆ ನಗುವಿನಲ್ಲಿ ಜೀವವಿರಲಿಲ್ಲ. "ನನ್ನ ಮೈಮೇಲೆ ಹೆಚ್ಚು ಬಟ್ಟೆ ಇರುವುದರಿಂದ ನಾನು ಇನ್ನೂ ಐದಾರು ಗಂಟೆಗಳು ಹೆಚ್ಚಾಗಿ ಬದುಕಬಹುದು" ಎಂದ ರಾಕೇಶ್.

ತಮ್ಮ ಇಕ್ಕೆಲಗಳಲ್ಲೂ ಇದ್ದ ಶಿಖರಗಳನ್ನು ಪರೀಕ್ಷಿಸಿ ನೋಡುತ್ತಿದ್ದ

ಸಿದ್ಧಾರ್ಥ. "ಇವುಗಳಲ್ಲಿ ಯಾವುದನ್ನು ನಾವು ಹತ್ತಬೇಕೆಂದರೂ ಪೂರ್ಣವಾಗಿ ಒಂದು ದಿನ ಹಿಡಿಸುತ್ತದೆ." ಎಂದ ಸಿದ್ಧಾರ್ಥ.

"ಒಬ್ಬರೇ ಆದರೆ ಆ ಲೆಕ್ಕ. ನನ್ನನ್ನೂ ಹೊತ್ತು ನಡೆಯಬೇಕೆಂದರೆ ಅದರ ಎರಡರಷ್ಟು ಕಾಲಬೇಕು." ರಾಕೇಶ್ ಹೇಳಿದ.

ಆ ಮಾತೇ ಕೇಳಿದವನಂತೆ ಸಿದ್ಧಾರ್ಥ "ನಮ್ಮ ಅದೃಷ್ಟವನ್ನು ಈ ಶಿಖರಗಳೇ ನಿರ್ಣಯಿಸುತ್ತವೆ. ಅದೃಷ್ಟವೇ ಏನು ಸಾವು-ಬದುಕು ಇದರಲ್ಲೆ ನಿರ್ಣಯವಾಗುತ್ತದೆ...." ಎಂದು ಹೇಳಿದ.

"ಹೇಗೆ?"

"ಎರಡರಲ್ಲಿ ಯಾವುದನ್ನು ಹತ್ತಿದರೂ ಅತ್ತಕಡೆಯ ಪ್ರದೇಶ ಕೆಲವು ಮೈಲಿಗಳ ದೂರದ ತನಕ ಕಾಣಿಸುತ್ತದೆ. ಅಲ್ಲಿ ಮನುಷ್ಯ ಸಂಚಾರವೇನಾದರೂ ಇದ್ದರೆ ಅದು ನಮ್ಮ ಅದೃಷ್ಟ. ಅಲ್ಲಿಂದ ಇಳಿಯುವುದೇನು ಹೆಚ್ಚು ಕಷ್ಟದ ಕೆಲಸವಾಗಿರಲಾರದು."

"ಅತ್ತಕಡೆಗೆ ಏನೂ ಇಲ್ಲದಿದ್ದರೆ?"

ಸಿದ್ಧಾರ್ಥ ಸ್ವಲ್ಪ ಹೊತ್ತು ಸುಮ್ಮನಿದ್ದ. ಮತ್ತೆ ಹಿಂತಿರುಗಿ ಈ ಕಡೆ ಶಿಖರವನ್ನು ಹತ್ತಬೇಕು. ಆದರೆ ಹಾಗೆ ಹತ್ತುವತನಕ ನಾವು ಬದುಕಿರುವುದಿಲ್ಲ. ಆದಕ್ಕೆಂದೇ ಲಾಟರಿ ಹಾಕಬೇಕು."

ಆ ಎರಡು ಶಿಖರಗಳ ಮಧ್ಯೆ ಅವರು ನಿಂತಿದ್ದರು. ಶಿಖರವನ್ನು ಹತ್ತೋಣ ಎಂದು ಹೇಳಲೆಂದೇ "ಈಗೇನು ಮಾಡೋಣ?" ಎಂದ ಸಿದ್ಧಾರ್ಥ.

"ಈಗ ಮಲಗೋಣ" ಎಂದ ರಾಕೇಶ್. ಅವನು ಎದ್ದು ಮೊಣಕಾಲಿನ ಮೇಲೆ ಕೈಹಾಕಿ ನೋವನ್ನು ಅಡಗಿಸಿಕೊಂಡು ತುಂಬಾ ತ್ರಾಸದಿಂದ ಅಡಿ ಇರಿಸುತ್ತಾ ಸಿದ್ಧಾರ್ಥನ ಬಳಿಗೆ ಬಂದ. "ಈಗಿನ ಪರಿಸ್ಥಿತಿ ಪ್ರಯಾಣಕ್ಕೆ ಸರಿಯಾದ್ದಲ್ಲ. ಆದರೆ ತಾಳ್ಮೆ ನಮ್ಮಲಿಲ್ಲ. ಹೇಗಿದ್ದರೂ ಒಂದೆರಡು ಗಂಟೆಗಳಲ್ಲಿ ಬೆಳಗಾಗುತ್ತದೆ. ಎರಡು ಗಂಟೆಯ ನಿದ್ರೆಯಿಂದ ಸ್ವಲ್ಪವಾದರೂ ಶಕ್ತಿಬರುತ್ತದೆ."

ಸಿದ್ಧಾರ್ಥನಿಗೂ ಅವನ ವಾದದಲ್ಲಿ ಸತ್ಯವಿದೆ ಎಂದು ಮನವರಿಕೆಯಾಯಿತು. ಬೆಳಗಾದರೆ ಪೂರ್ವ ಎತ್ತಕಡೆ ಎಂಬುದೂ ಗೊತ್ತಾಗುತ್ತದೆ. ಅದರಿಂದ ದಕ್ಷಿಣದ ಕಡೆಯ ಶಿಖರ ಏರಿದರೆ ಬದುಕುವ ಅವಕಾಶ ತುಂಬಾ ಹೆಚ್ಚು. ಅದನ್ನು ಗಮನಿಸಿ "ಸರಿ" ಎಂದು ಹೇಳಿದ.

ಈ ತೀರ್ಮಾನಕ್ಕೆ ಬರುತ್ತಲೇ ಇಬ್ಬರೂ ಒಂದು ಕಲ್ಲಿನ ಮರೆಯಲ್ಲಿ ವಿಶ್ರಾಂತಿಗಾಗಿ ಮಲಗಿದರು. ಸಿದ್ಧಾರ್ಥ ತುಂಬಾ ಬಳಲಿದ್ದ. ಹಾಗೆ ಮಲಗಿ ಕಣ್ಮುಚ್ಚುತ್ತಲೇ ನಿದ್ರೆಯಾವರಿಸಿತ್ತು. ಮೈಮರೆತು ನಿದ್ರಿಸಿದ. ಮೈನೋವು

ಚಳಿಯಿಂದ ಬದುಕಿ ಉಳಿಯಲು ವಹಿಸಬೇಕಾದ ಎಚ್ಚರಿಕೆ ಇತ್ಯಾದಿಗಳನ್ನು ಮರೆತು ನಿದ್ರಿಸಿದ. ತುಂಬಾ ಗಾಢವಾದ ನಿದ್ರೆ.

ಸೂರ್ಯಕಿರಣಗಳು ಮುಖದ ಮೇಲೆ ಬಿದ್ದು ಚುಚ್ಚಿದಾಗಲೇ ಎಚ್ಚರ. ಸಿದ್ಧಾರ್ಥ ಬೆಚ್ಚಿ ಎದ್ದು ಟೈಂ ನೋಡಿಕೊಂಡ, ಹನ್ನೊಂದು ಗಂಟೆ. ಎಷ್ಟೋ ದಿನಗಳಿಂದ ಇಲ್ಲದಿದ್ದ ನಿದ್ರೆಯಂತೆ ಬಳಲಿದ್ದ ಮೈಯನ್ನು ಆವರಿಸಿದಂತೆ ನಿದ್ರೆ ಆವರಿಸಿತ್ತು. ಭಾವಿಸಿದ್ದಕ್ಕಿಂತಲೂ ಐದು ಗಂಟೆ ಹೆಚ್ಚಾಗಿತ್ತು. ಬಿಸಿಲು ಹಾಗೇ ಇದೆ. ತಂಗಾಳಿಯು ಬೀಸುತ್ತಿದೆ. ಸೂರ್ಯಕಾಂತಿಯಿಂದ ಆ ಪ್ರದೇಶವೆಲ್ಲಾ ಮತ್ತಷ್ಟು ಬಿಳಿಚಿಕೊಂಡಿದೆ.

ಕಣ್ಣು ಬಹುವಾಗಿ ಸೆಳೆಯುತ್ತಿದೆ. ಸೊಂಟದ ನೋವಿನಿಂದ ಎದ್ದು ಕೂರಲು ಸಾಧ್ಯವಾಗಲಿಲ್ಲ. ಹಾಗೇ ಮಲಗಿಕೊಂಡು ಮೇಲಿನ ಆಕಾಶವನ್ನು ನೋಡುತ್ತಾ "ಏನಾಗುತ್ತದೆ. ಹಾಗೇ ಇದ್ದರೆ ಕೆಲವು ಗಂಟೆಗಳಲ್ಲಿ ಪ್ರಾಣ ಹೋಗುತ್ತದೆ. ಪ್ರಾಣ ಪೂರ್ಣವಾಗಿ ಹೋಗಬೇಕಾಗಿಲ್ಲ. ಮಂಜಿನಲ್ಲಿರುವ ಪಕ್ಷಿಯೋ ಪ್ರಾಣಿಯೋ ನೋಡಿದರೆ ಸಾಕು. ಬಳಲಿ ಬಿದ್ದಿದ್ದವನ್ನು ಅವು ಬಿಡುವುದೇ ಇಲ್ಲ. ಆಯಾಸಗೊಂಡು ಸೋತಿರುವ ಕಾಲುಗಳು, ಬಲವೇ ಇಲ್ಲದಿರುವ ಮೈ ಇವುಗಳಿಂದ ತೆವಳುತ್ತಾ ಶಿಖರವನ್ನು ಹತ್ತುವುದಕ್ಕಿಂತಲೂ ಹೀಗೆ ಬಿದ್ದು ಸಾಯುವುದೇ ವಾಸಿ..."

ಯೋಚನೆ ಕ್ಷಣಕಾಲದ್ದೇ! ಎದ್ದು ಕುಳಿತ. ಆಗ್ಗೆ ತಡವಾಗಿತ್ತು. ಹೊರಡಲೇಬೇಕು. ಕಿವಿಯ ಅಂಚು ಉಜ್ಜಿಕೊಳ್ಳುತ್ತಾ ಪಕ್ಕಕ್ಕೆ ನೋಡಿದ. ಪಕ್ಕದಲ್ಲಿ ರಾಕೇಶ್ ಇಲ್ಲ!

ಅತ್ತಿತ್ತ ನೋಡಿದ ಸುತ್ತಲೂ ಮಂಜು ತುಂಬಿಕೊಂಡ ಪರ್ವತಗಳು ಮೌನ. ರಾಕೇಶ್ ಇಲ್ಲ.

"ರಾಕೇಶ್" ಎಂದು ಕರೆದ. ಆ ಪರ್ವತಗಳ ಮಧ್ಯೆ ಈ ಸದ್ದು ಕರಗಿತು. ಬೆದರಿ ಎದ್ದು ನಿಂತ. "ರಾಕೇಶ್" ಉತ್ತರ ಬರಲಿಲ್ಲ.

"ರಾಕೇಶ್" ಎಂದು ಕಂಠ ಕೀರಲಾಗುವಂತೆ ಅರಚಿದ. ಅದೇ ಕರೆ ಪರ್ವತಗಳಿಂದ ಪ್ರತಿಧ್ವನಿಗೊಂಡಿತು. ಮುಂದಡಿ ಇಡಲಿದ್ದ ಸಿದ್ಧಾರ್ಥನ ಕಾಲಿಗೆ ಏನೋ ತಗುಲಿದ್ದರಿಂದ ನಿಂತ.

ಬಟ್ಟೆಗಳು—ಪೆಪರ್ ತೊಟ್ಟಿದ್ದ ಬಟ್ಟೆಗಳು. ಅಷ್ಟೇ ಅಲ್ಲ ರಾಕೇಶನ ಬಟ್ಟೆಗಳೂ ಇವೆ. ಅವೆಲ್ಲವೂ ತನ್ನ ಮೇಲೆ ಹೊದಿಸಿದ್ದರಿಂದಲೇ ಅಷ್ಟುಹೊತ್ತು ತಾನು ನಿದ್ರಿಸಬೇಕಾಯಿತು!

ಸಿದ್ಧಾರ್ಥ ನಿಶ್ಚೇಷ್ಟಿತನಾದ.

ಬಳಿಯೇ ಒಂದು ಕಾಗದ-ರಾಕೇಶ್ ಬರೆದಿದ್ದ. ಆಶ್ಚರ್ಯದಿಂದ ಅದನ್ನು ಬಿಡಿಸಿ ಓದಿದ–

'ಸಿದ್ಧಾರ್ಥ'

'ಈ ಕಾಗದವನ್ನು ನೀನು ಓದುವ ವೇಳೆಗೆ ನಿನ್ನ ಬಲಭಾಗದ ಶಿಖರವನ್ನು ನಾನು ಹತ್ತುತ್ತಿರುತ್ತೇನೆ. ಹತ್ತುತ್ತೇನೆ ಎಂಬ ಪದ ಸರಿಯಾದ್ದಲ್ಲ, ತೆವಳಿಕೊಂಡು ಸಾಗುತ್ತಿರುತ್ತೇನೆ ಎನ್ನಬಹುದು. ಒಂದೇ ಕಾಲಿನಿಂದ ಶಿಖರದ ಮೇಲೆ ಹೋಗಲು ಸಾಕಷ್ಟು ಸಮಯ ಬೇಕಾಗುತ್ತದೆ. ನೀನು ಕೆಳಗಿದ್ದು ನಿನ್ನ ಶಕ್ತಿಯನ್ನು ಪಡೆದು ಬಲಶಾಲಿಯಾಗು. ಮೇಲೆ ಸೇರಿದ ಮೇಲೆ ಇದೇ ದಾರಿ ಸರಿಯೋ ಇಲ್ಲವೋ ನಾನೇ ತಿಳಿಸುತ್ತೇನೆ.

'ಮತ್ತೆ ನಾವು ಭೇಟಿಯಾಗುವೆವೋ ಇಲ್ಲವೋ. ಆದ್ದರಿಂದ ನಿನಗೆ ಒಂದು ಮಾತು ನಾನು ಹೇಳಲೇಬೇಕು. ನಾನು ಕೆಟ್ಟವನಲ್ಲ. ಈ ಜಗತ್ತಿನಲ್ಲಿ ಕೆಟ್ಟವರು ಯಾರೂ ಅಲ್ಲ. ಪರಿಸ್ಥಿತಿಗಳೇ ಮನುಷ್ಯನನ್ನು ರಾಕ್ಷಸನನ್ನಾಗಿ ಮಾರ್ಪಡಿಸುತ್ತವೆ. ಈ ಮಂಜು ತುಂಬಿಕೊಂಡ ಪರ್ವತಗಳ ಮಧ್ಯೆ, ನಿನ್ನ ಶತ್ರುವೆಂದು ತಿಳಿದಿದ್ದೂ, ನೀನು ನನ್ನ ಮೇಲೆ ತೋರಿದ ಕರುಣೆ, ದಯೆ, ಪ್ರೇಮಗಳಲ್ಲಿ ಸಾವಿರದ ಒಂದು ಭಾಗವಾದರೂ ನನ್ನ ತಂದೆಯಾಗಲಿ, ತಾಯಿಯಾಗಲಿ, ಚಿಕ್ಕಮ್ಮನಾಗಲಿ ತೋರಿದ್ದರೆ ನಾನು ಹೀಗೆ ರೂಪುಗೊಳ್ಳುತ್ತಿರಲಿಲ್ಲ. ನಿನಗೆ ಗೊತ್ತೆ, ಮಾವನನ್ನು ಕೊಂದವನು ನಾನು. ಡಾಕ್ಟರ್ ರಂಗಪ್ರಸಾದ್ ನನ್ನು ಕೊಲ್ಲಲು ಪ್ರಯತ್ನಿಸಿದ್ದು ನಾನೇ! ಈ ನರರಾಕ್ಷಸನನ್ನು ನೋಡಿ ನಿನಗೇಕೆ ಅಸಹ್ಯವೆನಿಸಲಿಲ್ಲ?

'ನನ್ನ ಬಾಳಿನ ಇನ್ನೂ ಹಲವು ರಹಸ್ಯಗಳನ್ನು ಹೇಳಿದರೆ ನನ್ನ ಮುಖದ ಮೇಲೆ ಖಂಡಿತ ಉಗುಳುತ್ತೀ. ಆದರೆ ಟೊಂಗೆ ಚಿಗುರೊಡೆಯುವಾಗ ಮೊದಲಿನ ಗಡಸುತನ ಒಣಗಿ ಉರುಳುವಂತೆ ನಿನ್ನ ಸ್ಥೈರ್ಯದ ಮುಂದೆ ನನ್ನ ಕೆಡಕು ಕರಕಾಗಿ ದೂರವಾಯಿತು. ಇಷ್ಟೆಲ್ಲಾ ತಿಳಿದ ನಂತರವೂ ನಿನ್ನ ಹೆಂಡತಿಯ ರಕ್ಷಣಾ ಮಾರ್ಗವನ್ನು ಹುಡುಕಿದೆಯೇ ಹೊರತು ನನ್ನ ಶಿಕ್ಷೆಯಲ್ಲ. ಇಷ್ಟು ಸಾಲದೆ ನನ್ನನ್ನು ಬದುಕಿಸಲು ಶ್ರಮಿಸಿದೆ! ನಿನ್ನ ಒಳ್ಳೆಯ ತನದಿಂದ ನನ್ನ ಹೃದಯವನ್ನೆಲ್ಲ ಚೂರುಚೂರಾಗಿ ಕೊಯ್ದು ರಾಶಿಹಾಕಿದ್ದೀ, ಇಷ್ಟೊಂದು ಒಳ್ಳೆಯತನವನ್ನು ನಾನು ಭರಿಸಲು ಸಾಧ್ಯವಾಗುತ್ತಿಲ್ಲ.... ನಾನೇನು ಮಾಡಲಿ?

'ನೀನು ನಿದ್ರಿಸಿದ ಮೇಲೆ ನಾನು ಯೋಚಿಸಿದೆ. ಬೆಳಗಾಗುತ್ತಲೇ ಎದ್ದು ನನ್ನನ್ನು ಭುಜದ ಮೇಲೆ ಹಾಕಿಕೊಂಡು ಶಿಖರವನ್ನು ಏರಲು ತೊಡಗುವೆ. ಈ ಪ್ರಯತ್ನವೇ ಭಯಂಕರ. ಶಿಖರದ ಮೇಲೆ ಸೇರಿದ ನಂತರ ದುರ್ವಿಧಿ

ನಮ್ಮನ್ನು ಹಂಗಿಸಿದರೆ- ಶಿಖರಕ್ಕೆ ಅತ್ತಕಡೆ ಏನೂ ಇಲ್ಲದಿದ್ದರೆ ಇಬ್ಬರಿಗೂ ಮರಣವೇ ಶರಣು.

'ಆದ್ದರಿಂದ ಆ ಅಪಾಯವನ್ನು ನಾನೇ ಎದುರಿಸಲು ತೀರ್ಮಾನಿಸಿದ್ದೇನೆ. ಈಗಾಗಲೇ ಮೊಣಕಾಲನ್ನು ಆಕ್ರಮಿಸಿರುವ ಹಿಮವ್ರಣ ನಾನು ನಡೆಯಲು ಸಹಕರಿಸುತ್ತಿಲ್ಲ. ಅದಕ್ಕೆಂದೇ ತೆವಳಿಕೊಂಡು ಹೋಗಲು ನಿರ್ಧರಿಸಿದ್ದೇನೆ. ಈ ಮೈ ಮಂಜಿನ ಮೇಲೆ ಮತ್ತೆ ಉಜ್ಜಲ್ಪಡುವುದರಿಂದ ಮಾಂಸ ಮತ್ತೂ ಬೇಗ ಮರಗಟ್ಟುತ್ತದೆ ಎಂಬುದು ಗೊತ್ತು. ಆದರೆ ನನ್ನ ಮನಸ್ಸು ಹೃದಯವೇ ಕೊಳೆತು ನಾರಲು ಪ್ರಾರಂಭಿಸಿ ಬಹುದಿನವಾಯಿತು. ಈಗ ಅದರ ಸುತ್ತಣ ಮಾಂಸ ಹಾಗೆ ಕೊಳೆತರೆ ಆಗುವ ನಷ್ಟವೇನು?

'ಹೊರಡುವ ಮೊದಲು ಮತ್ತೊಂದು ಯೋಚನೆ ಬಂತು. ನನ್ನ ಮೈಮೇಲೆ ಇಷ್ಟೊಂದು ಬಟ್ಟೆಗಳು ಏಕೆ? ನನ್ನವೂ ನಿನಗೆ ಕೊಟ್ಟರೆ? (ಉಸ್ಲೋಕ್ ಸದಸ್ಯರು ಸಾಯುವಾಗ ದಿಗಂಬರರಾಗಿರಬೇಕೆಂದು ನಿಯಮವೇನೋ!) ಇಂಥಾ ಒಳ್ಳೆಯ ಯೋಚನೆ ಬಂದದ್ದಕ್ಕಾಗಿ ನನಗೇ ಸಂತೋಷವಾಯಿತು. ಷೆರ್ಪಾ ಬಟ್ಟೆಗಳ ಮೇಲೆ ನನ್ನ ಬಟ್ಟೆಗಳನ್ನು ತೊಡು. ನನ್ನ ಬಟ್ಟೆಗಳಿಂದ ಒಂದು ನಾಲ್ಕು ಗಂಟೆ ಹೆಚ್ಚು ಬದುಕಿದರೆ ಅದಕ್ಕಿಂತ ಹೆಚ್ಚು ಲಾಭ ನನಗೇನು ಬೇಕು? ನಗ್ನನಾಗಿ ಮಂಜಿನ ಮೇಲೆ ತೆವಳುವ ನನ್ನನ್ನು ನೋಡಿ ನಗುವವರಾದರು ಯಾರು? ಚಳಿಗೆ ನಾನು ಸಾಯುತ್ತೇನೆ ಎನ್ನುವೆಯಾ? ಇಲ್ಲ ಅದು ಸಾಧ್ಯವಿಲ್ಲ. ಯಾವ ಶಕ್ತಿ ನಿನ್ನ ಭುಜಗಳ ಮೇಲೆ ನನ್ನನ್ನು ಹೊತ್ತು ನಡೆಯಲು ಸಾಧ್ಯಮಾಡಿತೋ ಅದೇ ಶಕ್ತಿ ನನ್ನನ್ನೂ ಮುಂದಕ್ಕೆ ಕರೆದೊಯ್ಯುತ್ತದೆ. ನನ್ನ ಬಾಳಿನಲ್ಲಿ ಮೊದಲ ಬಾರಿಗೆ ನಾನು ಮಾಡುತ್ತಿರುವ ಒಳ್ಳೆಯ ಕೆಲಸವಿದು. ನಿನ್ನ ನೆರವಿಗೆ ಬರಲೆಂದೇ ಶಿಖರದ ತುದಿ ಸೇರುವ ತನಕ ಖಂಡಿತ ನಾನು ಬದುಕುತ್ತೇನೆ.

'ಶಿಖರದ ತುದಿ ಸೇರಿದ ಮೇಲೆ ಪಿಸ್ತೂಲಿನ ಗುಂಡು ಹಾರಿಸುತ್ತೇನೆ. (ನಿನ್ನನ್ನು ಕೊಲ್ಲಲೆಂದು ಉಸ್ಲೋಕ್ ನನಗೆ ಕೊಟ್ಟಿದ್ದು. ಹೇಗಾದರೂ ಉಪಯೋಗವಾಗಲಿದೆ!). ಒಮ್ಮೆ ಗುಂಡು ಹಾರಿಸಿದರೆ ನಾಗರಿಕ ಪ್ರಪಂಚ ಇತ್ತ ಕಡೆಗೆ ಕಾಣಿಸುತ್ತಿದೆ ಹೀಗೆ ನೀನೂ ಬರಬರಬಹುದು. ಗುಂಡು ಹಾರಿಸಿದ ಸದ್ದು ಮೂರು ಬಾರಿ ಕೇಳಿಸಿದರೆ ನೀನು ಹೀಗೆ ಬರುವ ಅವಶ್ಯಕತೆ ಇಲ್ಲ. ಅತ್ತಕಡೆಯ ಶಿಖರವನ್ನು ಹತ್ತಿ ನಿನ್ನ ಅದೃಷ್ಟ ಪರೀಕ್ಷೆ ನಡೆಸು.

'ಇನ್ನೊಂದು ಮುಖ್ಯ ಸಂಗತಿ...

'ಅಷ್ಟಾವಕ್ರನ ಹುಟ್ಟಿನ ಬಗ್ಗೆ ವಿವರಗಳನ್ನು ಕೊಡುವ ಬೇರೊಂದು

ಪತ್ರ ನನ್ನ ಜೇಬಿನಲ್ಲಿದೆ. ಅದನ್ನು ಓದು.

'ಸಾಧ್ಯವಿರುವಷ್ಟು ಬೇಗ ನಾನು ಶಿಖರವನ್ನು ಏರಲು ಪ್ರಯತ್ನಿಸುತ್ತೇನೆ. ನೀನು ಮಾತ್ರ ಇತ್ತ ಬರುವುದಕ್ಕೆ, ನನ್ನನ್ನು ರಕ್ಷಿಸುವುದಕ್ಕಾಗಿ ಖಂಡಿತಾ ಪ್ರಯತ್ನಿಸಬೇಡ. ನನ್ನನ್ನು ಹೊತ್ತು ಶಿಖರ ಹತ್ತುವುದು ಅಸಾಧ್ಯ. ತಡವಾದರೂ ಇದು ಒಳ್ಳೆಯ ಮಾರ್ಗ. ಪಿಸ್ತೂಲು ಒಂದೇ ಗುಂಡು ಹಾರಿಸಿ ನೀನು ಇದೇ ಕಡೆ ಬರುವಂತಾದರೆ, ಅದುವರೆವಿಗೂ ಈ ಶಿಖರದ ಮೇಲೆ ಇನ್ನೊಂದು ನಾಲ್ಕೈದು ಗಂಟೆಗಳ ಕಾಲ ನಿನ್ನ ಆಗಮನಕ್ಕಾಗಿ ಕಾಯುತ್ತಾ ನಾನು ಬದುಕುವುದು ಸಾಧ್ಯವಿದ್ದರೆ ಸರಿ. ಅನ್ಯಥಾ ಇದೇ ಅಂತಿಮ ಬೀಳ್ಕೊಡುಗೆ...ಕೊನೆಯದಾಗಿ ನಿನ್ನ ಕುಟುಂಬಕ್ಕೆ, ನಿನಗೆ ನಾನು ಮಾಡಿರುವ ದ್ರೋಹಕ್ಕಾಗಿ ನನ್ನನ್ನು ಕ್ಷಮಿಸು.

'ಇನ್ನೊಂದು ಬೇಡಿಕೆ ಸಿದ್ಧಾರ್ಥ. ಯಾವ ಸಂಗತಿಗಳೂ ಕೇದಾರಗೌರಿಗೆ ಹೇಳದಿರು. ನಾನು ಸತ್ತೆನೆಂದು ಮಾತ್ರವೇ ಹೇಳು. ಈ ಜಗತ್ತಿನಲ್ಲಿ ನನಗಾಗಿ ಕನಿಷ್ಟ ಒಂದೆರಡು ಕಂಬನಿ ಮಿಡಿಯುವಳೆಂದರೆ ಆಕೆಯೇ. ಅದೇ ನನ್ನ ಆತ್ಮಕ್ಕೆ ಸಂತೃಪ್ತಿ ನೀಡುತ್ತದೆ. ಇದೊಂದಾದರೂ ನನಗೆ ದೊರೆಯಲಿ. ಈ ಪ್ರಪಂಚದಲ್ಲಿ ಕನಿಷ್ಟ ಒಬ್ಬರಿಗಾದರೂ ನಾನು ಒಳ್ಳೆಯವನು ಎನ್ನುವ ಭ್ರಮೆ ಇರಲಿ. ನನಗೇ ನಗು ಬರುತ್ತದೆ. ಪ್ರಪಂಚವನ್ನೆಲ್ಲಾ ಆಳುತ್ತೇವೆ ಎಂದು ದೊಡ್ಡದಾದ ಆಸೆಯನ್ನು ಹೊತ್ತವರು, ಎಂಥಾ ಸಣ್ಣ ಆಸೆಯಿಂದ ಸಾಯಬೇಕಾಗುತ್ತದೆ ನೋಡು ಸಿದ್ಧಾರ್ಥ!

'ಪೂರ್ವದಲ್ಲಿ ಬೆಳಕು ಮೂಡಿ ನನ್ನನ್ನು ಕರೆಯುತ್ತಿದೆ. ಬದುಕಿದ್ದರೆ ಮತ್ತೆ ಭೇಟಿ ಅನ್ಯಥಾ ಇದೇ ಕೊನೆಯ ನಮಸ್ಕಾರ....'

ರಾಕೇಶ್.

ಹನಿ ತುಂಬಿನ ಕಣ್ಣಿಂದ ಸಿದ್ಧಾರ್ಥ ಎದುರಿದ್ದ ಶಿಖರವನ್ನು ದಿಟ್ಟಿಸಿದ. ರಾಕೇಶನ ತ್ಯಾಗವೇ ಸಾಕಾರಗೊಂಡಂತೆ ಕಾಣಿಸುತ್ತಿತ್ತು ಅದು. ಅವನೆಷ್ಟೇ ದುಷ್ಟನಾಗಿದ್ದರೂ ಆ ಕ್ಷಣದಲ್ಲಿ ಅವನು ಮಾಡಿದ್ದ ಕೆಲಸ ಮಾನವ ಮಾತ್ರದವರ ಊಹೆಗೂ ನಿಲುಕುವಂತಿರಲಿಲ್ಲ. ಎಷ್ಟು ದೂರ ಯೋಚಿಸಿದ್ದ. ಅವನನ್ನು ಹೆಗಲ ಮೇಲೆ ಹೊತ್ತು ಶಿಖರವನ್ನು ಏರುವುದು ಸಾಧ್ಯವಿರಲಿಲ್ಲ. ಅಷ್ಟಕ್ಕೇ ತನ್ನ ಬಟ್ಟೆಗಳನ್ನು ಕೊಟ್ಟು ರಕ್ಷಿಸಿದನಲ್ಲಾ! ಕೊಳೆಯುತ್ತಿದ್ದ ಕಾಲಿನೊಂದಿಗೆ ಒಣಗುತ್ತಿದ್ದ ಮೈಯಲ್ಲಿ ಗುರಿ ತಡಕುತ್ತಾ, ತೆವಳುತ್ತಿದ್ದಾನೆ. ತನಗೆ ದಾರಿ ತೋರಲೆಂದು ಮಾತ್ರವೇ ಬಲಿಯಾಗಿದ್ದಾನೆ.

ಈಗ್ಗೆ ಅವನ ಮೈಯಿಂದ ರಕ್ತಸುರಿಯುತ್ತಿರಬೇಕು. ಇಲ್ಲವೇ ಚಳಿಗಾಗಿ

ವ್ಯೆ ಮರಗಟ್ಟಿರಬೇಕು. ಸಿದ್ಧಾರ್ಥನ ಕಣ್ಣಿನಲ್ಲಿ ನೀರು ಚಿಮ್ಮಿತು.

ಈ ಪ್ರಪಂಚದಲ್ಲಿ ಬಹುಮಂದಿ ದುರ್ಮಾರ್ಗಿಗಳಿದ್ದಾರೆ. ಪ್ರತಿಯೊಬ್ಬನಲ್ಲೂ ಸ್ವಲ್ಪವಾದರೂ ಕೆಟ್ಟ ಗುಣವಿದ್ದೇ ಇರುತ್ತದೆ. ಎಂದರೆ ಅದರ ಪ್ರಮಾಣದ ಅಂತರವೇ ನಮಗೆ ಗೋಚರವಾಗುವುದು. ಒಳ್ಳೆಯದು ಯಾವಾಗ ಹೊರಬೀಳುತ್ತದೆ ಎಂಬುದೇ ನಾವು ನೋಡುವುದು. ಅದು ಬೀಳುವ ಸಮಯ ಸಂದರ್ಭ ಕಂಡು ವ್ಯಕ್ತಿತ್ವದ ಮೌಲ್ಯವೂ ನಿರ್ಣಯವಾಗುತ್ತದೆ.

ನಿರ್ಜನವಾದ ಈ ಮಂಜು ತುಂಬಿಕೊಂಡ ಪರ್ವತಗಳಲ್ಲಿ ರಾಕೇಶ್ ಮಾಡಿದ ತ್ಯಾಗ, ಅವನ ನಿರ್ಣಯ ತೋರಿದ ಧೈರ್ಯ ಯಾವ ಇತಿಹಾಸಕಾರನೂ ತನ್ನ ಚರಿತ್ರೆಯಲ್ಲಿ ಬರೆಯದೆ ಹೋಗಬಹುದು. ಆದರೆ ಇದು ಮಾತ್ರ ಸಾಧಾರಣವಾದುದಲ್ಲ.

ಸಿದ್ಧಾರ್ಥ ಅದನ್ನು ನೋಡಲೆಂದು ಶಿಖರವನ್ನು ಹತ್ತಬೇಕೆಂದುಕೊಂಡ. ಅಷ್ಟರಲ್ಲಿ ಒಂದು ಸಂಶಯ ಬಂತು. ಮಂಜುರಾಶಿಯಿಂದ ದೂರವಾಗುವ ಹಾದಿ ಇನ್ನೊಂದು ಶಿಖರದಲ್ಲಿದ್ದರೆ ಮತ್ತೆ ಇಳಿದು ಬಂದು ಬೇರೆ ಶಿಖರವನ್ನು ಹತ್ತುವುದು ಅಸಾಧ್ಯದ ಕೆಲಸ. ಆದ್ದರಿಂದ ಪ್ರಾಣ ಹೋಗುವ ತನಕ ಅವನು ಅಲ್ಲೇ ಬಿದ್ದಿರಬೇಕು. ಹಾಗೇ ಪ್ರಾಣ ಹೋಗುವ ತನಕ ಇರಬೇಕು- ಅಲ್ಲಿ ತಾನು ಹೋಗಿಯೂ ಏನೂ ಮಾಡಲಾರದ ಅಸಹಾಯಕ. ತುಂಬಾ ಸಾಹಸವೆಂದರೆ ಮತ್ತೆ ಇಲ್ಲಿಗೆ ಬರುವುದು. ಈ ಮಂಜಿನ ರಾಶಿಯಲ್ಲಿ ಹುಚ್ಚರಂತೆ ಅಲೆ ಅಲೆಯುತ್ತಾ ಸಾಯುವುದೇ ತಮ್ಮ ಭವಿಷ್ಯವೇನು?

ಆದರೂ ಸರಿಯೇ ಸತ್ತರೂ ಇಬ್ಬರೂ ಸಾಯಬೇಕು. ಎಷ್ಟು ಕಡಿಮೆ ಅವಕಾಶವಿದ್ದರೂ ಸರಿಯೇ ನಾನು ಅವನನ್ನು ಬದುಕಿಸಬೇಕು. ಒಂದು ವೇಳೆ ತಾನು ಅತ್ತ ಕಡೆಗೇ ಹೋಗುವಂತಿದ್ದರೆ ಅವನನ್ನು ಭುಜಗಳ ಮೇಲೆ ಹಾಕಿಕೊಂಡು ಓಡಬೇಕು. ಇದೇ ಯೋಚನೆಯಲ್ಲಿ ಸಿದ್ಧಾರ್ಥ ಮುಳುಗಿದ್ದ.

ಅಷ್ಟರಲ್ಲಿ ಪಿಸ್ತೂಲಿನ ಗುಂಡು ಹಾರಿದ ಸದ್ದು.

ಸಿದ್ಧಾರ್ಥನಿಗೆ ಸಂತೋಷವಾಯಿತು. ಮುಖ ಒಮ್ಮೆಲೇ ಅರಳಿತು, ರಾಕೇಶ್ ತನ್ನೆಲ್ಲಾ ಶಕ್ತಿಯನ್ನೂ ಕೇಂದ್ರೀಕರಿಸಿಕೊಂಡು ಶಿಖರ ಏರಿದ್ದಾನೆ. ತಾನೂ ಹಾಗೇ ಶಿಖರವನ್ನೇರಿದರೆ ತುಂಬಾ ಬೇಗ ಅಲ್ಲಿ ಸೇರಲು ಸಾಧ್ಯವಿದೆ. ಅದೂವರೆವಿಗೂ ರಾಕೇಶ್ ಬದುಕಿದ್ದರೆ ಶಿಖರವನ್ನು ಇಳಿಯುವುದು ಎಷ್ಟರ ಕೆಲಸ? ರಾಕೇಶನನ್ನು ಹೊತ್ತು ಇಳಿಯುವುದು ಸಾಧ್ಯವಿದೆ....

ಮತ್ತೆ ಪಿಸ್ತೂಲಿನ ಗುಂಡು ಹಾರಿಸಿದ ಸದ್ದು.

ಸಿದ್ಧಾರ್ಥ ಪ್ರತಿಮೆಯಂತೆ ನಿಂತ. ಅದು ಕನಸೋ ಅಥವ ಭ್ರಮೆಯೋ ಅರ್ಥವಾಗಲಿಲ್ಲ. ಇದು ಕನಸೇ ಆಗಿದ್ದರೆ ಎಷ್ಟು ಚೆನ್ನಾಗಿರುತ್ತದೆ. ಅದು ಬೇರೆ ಯಾವುದರ ಸದ್ದೋ ಆಗಿರಬೇಕು ಅಷ್ಟೆ....

ಅವನು ಹಾಗೆ ಹೇಳಿಕೊಳ್ಳುತ್ತಿದ್ದಂತೆಯೇ ಪಿಸ್ತೂಲು ಮೂರನೆಯ ಗುಂಡನ್ನೂ ಹಾರಿಸಿದ ಧ್ವನಿ ಕೇಳಿಸಿತು. ನಂತರ ಗಾಢವಾದ ಮೌನ.

## ೩೮

ಕಾರು ವೇಗವಾಗಿ ಹೋಗುತ್ತಿದೆ.

ಅಗರ್‌ವಾಲ್ ಈ ರಹಸ್ಯವನ್ನು ಸಹಿಸಲಾರದೆ ರಂಗಪ್ರಸಾದ್ ಕಡೆ ತಿರುಗಿ, "ನಾವು ಎಲ್ಲಿಗೆ ಹೋಗುತ್ತಿದ್ದೇವೆ?" ಎಂದು ಕೇಳಿದ.

"ಕ್ಷಮಿಸಿ, ನೀವು ಭಾವಿಸಿರುವಂತೆ ನಾನು ಸಿಬಿಐ ಆಫೀಸರಲ್ಲ. ಸಾಧಾರಣ ಡಾಕ್ಟರ್" ಎಂದ ರಂಗಪ್ರಸಾದ್.

ಅಗರ್‌ವಾಲ್ ಬೆಚ್ಚಿಬಿದ್ದು ರಂಗಪ್ರಸಾದ್ ಕಡೆ ನೋಡಿದ.

"ನನ್ನನ್ನು ಕ್ಷಮಿಸಬೇಕು. ಒಂದು ದೊಡ್ಡ ರಹಸ್ಯವನ್ನು ಹೊರಗೆಳೆಯಲು ಈ ನಾಟಕ ಅನಿವಾರ್ಯವಾಯಿತು." ಕೃಷ್ಣಾಪುರದಲ್ಲಿ ವಿಕೃತ ಶಿಶುಗಳು ಜನಿಸಿದ್ದು, ತಾನು ನಡೆಸಿದ ಸಂಶೋಧನೆ ಎಲ್ಲವನ್ನೂ ವಿವರಿಸಿದ. ಕೊನೆಗೆ ನಿವೇದಿತಾ ಆಡಿದ ನಾಟಕದ ಬಗ್ಗೆಯೂ ಹೇಳಿದ.

ಕೇಳುತ್ತಿದ್ದಂತೆ ಅಗರ್‌ವಾಲ್ ಮುಖ ಕೆಂಪಡರಿತು. ಆ ಕೋಪ ಗಮನಿಸಿದರೆ ಒಡನೆಯೇ ಪೋಲಿಸರಿಗೆ ಹೇಳಿ ತನ್ನನ್ನು ಅರೆಸ್ಟ್ ಮಾಡಿಸುತ್ತಾನೇನೋ ಎಂಬ ಅನುಮಾನ ಉಂಟಾಗುತ್ತಿತ್ತು. ಆದರೆ ಪೂರ್ಣವಾಗಿ ಕೇಳಿ ಆತನೂ ಭಾರವಾದ ನಿಟ್ಟುಸಿರುಬಿಟ್ಟ. ಅಗರ್‌ವಾಲ್ ವ್ಯಾಪಾರಿ. ಅವನ ದೌರ್ಬಲ್ಯಗಳು ಹಲವಿರಬಹುದು. ಆದರೂ ಸಂಕ್ಷಿಪ್ತವಾಗಿ ಹೇಳಿದರೂ ವಿಷಯವನ್ನೆಲ್ಲಾ ಪೂರ್ಣವಾಗಿ ಗ್ರಹಿಸಿದ. ಆದರೂ ನಂಬಲಾರದವನಂತೆ "ದೂರದ ಬೊಂಬಾಯಲ್ಲಿ ಎರಡು ವರ್ಷಗಳ ಹಿಂದೆ ನನ್ನ ಹೆಂಡತಿಗೆ ಹುಟ್ಟಿದ ವಿಕೃತ ಶಿಶುವಿಗೂ, ಇಲ್ಲಿ ಕೃಷ್ಣಾಪುರದಲ್ಲಿ ಹುಟ್ಟಿದ ಏಳು ಶಿಶುಗಳಿಗೂ ಸಂಬಂಧವಿದೆಯೆಂದು ನಾನು ಒಪ್ಪುವುದಿಲ್ಲ. ಈ ಮಧ್ಯದ ಅವಧಿಯಲ್ಲೂ ದೇಶದ ನಾನಾ ಭಾಗಗಳಲ್ಲಿ ಅಲ್ಲಲ್ಲಿ ವಿಕೃತ ಶಿಶುಗಳು ಹುಟ್ಟಿರಬೇಕಲ್ಲವೇ?" ಎಂದು ಕೇಳಿದ.

"ಅವುಗಳೊಂದಿಗೂ ಎಸ್. ಎಸ್. ಎ. ಸಂಬಂಧ ಇದ್ದಿರಬಹುದು!"

ಎಂದು ರಂಗಪ್ರಸಾದ್ ಹೇಳಿದ್ದೇನೋ ಸರಿಯೇ ಆದರೆ ತನ್ನ ವಾದದಲ್ಲಿ ಅಷ್ಟೊಂದು ಬಲವಿಲ್ಲವೆಂಬುದನ್ನು ಆತನೂ ಗುರ್ತಿಸಿದ್ದ.

ಅಷ್ಟರಲ್ಲಿ ಅಗರ್‌ವಾಲ್, "ಹಾಗಿಲ್ಲ. ಆ ಬಗ್ಗೆ ನಾನು ಖಚಿತವಾಗಿ ಹೇಳಬಲ್ಲೆ" ಎಂದ.

"ಹೇಗೆ?"

"ಆ ಕಾರ್ಯಾಲಯಕ್ಕೆ ರಹಸ್ಯವಾಗಿ ಹೋಗಿದ್ದು ನಿಜವೇ. ಆದರೆ ಈ ರಹಸ್ಯಕ್ಕೆ ಕಾನೂನು ಅಥವಾ ಸರ್ಕಾರಕ್ಕೆ ಹೆದರಿ ಹೋದದ್ದಲ್ಲ, ಇಂಥಾ ವಿಷಯ ಗಳು ಎಲ್ಲರಿಗೂ ತಿಳಿಯದೆ ಇರಲಿ ಎನ್ನುವ ಉದ್ದೇಶದಿಂದ ಇನ್ನೂ ಸ್ಪೆರ್ಮ್ ಸೆಲ್ಲಿಂಗ್ ಎಜೆನ್ಸಿ ವ್ಯವಹಾರವೇನೂ ತೀರಾ ರಹಸ್ಯವಾಗಿ ನಡೆಯುತ್ತಿರುವ ವ್ಯವಹಾರವೇನಲ್ಲ. ಸೊಸೈಟಿ ಸರ್ಕಲ್‌ಗಳಲ್ಲಿ ಈ ಬಗ್ಗೆ ಮಾತು ನಡೆಯುತ್ತಲೇ ಇರುತ್ತವೆ ಈಗ ಗಲ್ಲಿಗೊಂದರಂತೆ ಬ್ಯೂಟಿ ಪಾರ್ಲರ್‌ಗಳು ಹರಡಿರುವಂತೆ ಇನ್ನು ಸ್ವಲ್ಪಕಾಲಕ್ಕೆ ಊರಿಗೊಂದು ಎಸ್‌ಎಸ್‌ಎ ಇದ್ದರೂ ಹೇಳ್ಬಲ್ಲ" ಅಗರ್‌ವಾಲ್ ಹೇಳಿದ.

"ಎಂದರೆ ಅಷ್ಟೊಂದು ಮಂದಿ ನಪುಂಸಕರು ನಮ್ಮಲ್ಲಿದ್ದಾರೆ ಎಂದು ಅರ್ಥವೇನು?"

ರಂಗಪ್ರಸಾದರ ಪ್ರಶ್ನೆಗೆ ಅಗರ್‌ವಾಲ್ ನಕ್ಕ. ಆ ನಗುವಿನಲ್ಲಿ ಜೀವ ವಿರಲಿಲ್ಲ. "ಎಲ್ಲರೂ ನಮ್ಮಂತೆ ನಿಜವಾಗಿಯೂ ಅವಶ್ಯಕವಿರುವ ದಂಪತಿಗಳೇ ಆಗಬೇಕಾಗಿಲ್ಲ. ಕೇವಲ ಫ್ಯಾಷನ್‌ಗಾಗಿ, ಒಬ್ಬ ದೊಡ್ಡ ವ್ಯಕ್ತಿಯ ಮಗು ವನ್ನು ತಾನು ಹಡೆಯುವುದು ತೀರಾ ಸಾಧಾರಣವಾಗುತ್ತದೆ ಎಂದು ನೀವೇಕೆ ಭಾವಿಸಬಾರದು?"

ರಂಗಪ್ರಸಾದ್ ಮನಸ್ಸಿನಲ್ಲಿಯೇ 'ಅಬ್ಬಾ, ನಾಗರಿಕತೆಯೇ!' ಎಂದು ಕೊಂಡನಾದರೂ ಹೊರಕ್ಕೆ ಏನೂ ಮಾತನಾಡಲಿಲ್ಲ.

ಅದನ್ನು ಗ್ರಹಿಸಿದವನಂತೆ ಅಗರ್‌ವಾಲ್ ತನ್ನ ಅಭಿಪ್ರಾಯವನ್ನು ಸಕಾರಣವಾಗಿ ಹೀಗೆ ವಿವರಿಸಿದ:

"ಇದರಲ್ಲಿ ವಿಚಿತ್ರವೇನೂ ಇಲ್ಲ ಡಾಕ್ಟರ್. ಐವತ್ತು ವರ್ಷಗಳಿಂದ ಮನುಷ್ಯನ ಪ್ರವೃತ್ತಿಯಲ್ಲಿ ಬರುತ್ತಿರುವ ವಿಚಿತ್ರ ಮಾನಸಿಕ ಬದಲಾವಣೆಯನ್ನು ಗುರ್ತಿಸಿದರೆ ಇದು ವಿಚಿತ್ರವಾಗಿ ಕಾಣಿಸದು. ಐವತ್ತು ವರ್ಷಗಳ ಹಿಂದೆ—ಎಂದರೆ ಸುಮಾರು ೧೯೫೦ರಲ್ಲಿ—ಮದುವೆಯಾಗದ ಹೆಣ್ಣು ಪರಪುರುಷನನ್ನು ನೋಡಲೂ ಹೆದರುತ್ತಿದ್ದಳಂತೆ. ಇಪ್ಪತ್ತೈದು ವರ್ಷಗಳ ಹಿಂದೆ—ಎಂದರೆ ೧೯೭೫ರಲ್ಲಿ—ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಪಠ್ಯ ಗ್ರಂಥಗಳಲ್ಲಿ ಸಿನಿಮಾ

ತಾರೆಗಳ ಚಿತ್ರವನ್ನು ಇರಿಸಿಕೊಂಡು ಮುತ್ತಿಡುತ್ತಿದ್ದರಂತೆ. ಅಂತಹುದರಲ್ಲಿ ಈಗಿನ ಸ್ಥಿತಿಯಲ್ಲಿ ತನ್ನ ಹುಚ್ಚಿಗೆ ರೂಪಕೊಡುವುದು ದೂರವೇ? ಒಬ್ಬ ಕೋಟ್ಯಧೀಶರ ಹೆಂಡತಿ ತಾನು ಬಹುವಾಗಿ ಮೆಚ್ಚಿದ ಸಿನಿಮಾ ನಟನೋ ಅಥವ ಕ್ರಿಕೆಟ್ ಆಟಗಾರನೋ ಅವನ ಅಂಶವನ್ನು ತನ್ನ ಗರ್ಭದಲ್ಲಿ ಬೆಳೆಯಲು ಕೊಡುತ್ತಾನೆ ಎಂದು ಅದಕ್ಕಾಗಿ ಆಕೆ ಆಶಿಸಿದರೆ ಅದರಲ್ಲಿ ವಿಚಿತ್ರವೇನು? ಈಗ ಹಿಂದೀ ಚಿತ್ರದಲ್ಲಿ ಅನಭಿಷಿಕ್ತ ಚಕ್ರಾಧಿಪತಿಯಾಗಿರುವ ರೋಮನ್ ಕಪೂರ್ ತನ್ನ ವೀರ್ಯವನ್ನು ಹದಿನೈದು ಲಕ್ಷಕ್ಕೆ ಮಾರಿರುವದಾಗಿ ಒಂದು ಪಾರ್ಟಿಯಲ್ಲಿ ತಾನೇ ನನಗೆ ಹೇಳಿದ."

ಈ ಮನುಷ್ಯ ಜಾತಿ ಎಲ್ಲಿಗೆ ಸಾಗುತ್ತಿದೆ? ಅಗರ್‌ವಾಲ್ ಹೇಳಿದ್ದು ನಿಜವೇ. ರೋಮನ್ ಕಪೂರ್ ರಾಜಧಾನಿಗೆ ಬಂದಿದ್ದಾಗ ತಾನೇ ನೋಡಿದ್ದ– ಅವನನ್ನು ಸ್ಪರ್ಶಿಸಿದರೂ ಸಾಕೆಂದು ತವಕಿಸುವ ಮಂದಿಯನ್ನು! ಇದನ್ನೇ ಭವಿಷ್ಯದ ಗರ್ಭದಲ್ಲಿ ರೂಪುಗೊಳ್ಳಬಹುದಾದ ಪರಿಸ್ಥಿತಿ ಎಂದರೆ ಅತಿಯಾಗಿ ಕಾಣಿಸದು. ರಂಗಪ್ರಸಾದ್‌ಗೆ ಡಾಕ್ಟರ್ ವಂಶೀಕೃಷ್ಣ ನೆನಪಾದ. ಇನ್‌ಸ್ಟಿಟ್ಯೂಟಿನ ಪ್ರಾರಂಭೋತ್ಸವಕ್ಕೆ ಹೋಗಿದ್ದಾಗ ಇದೇ ವಿಷಯದ ಬಗ್ಗೆ ಚರ್ಚಿಸಿದ್ದು ಇನ್ನೂ ನೆನಪಿತ್ತು.

ಇನ್‌ಸ್ಟಿಟ್ಯೂಟಿನ ಲೈಬ್ರರಿಯಲ್ಲಿ ಸುಮಾರು ಇಪ್ಪತ್ತೈದು ವರ್ಷಗಳ ಹಿಂದಿನ 'ವಾರಪತ್ರಿಕೆ'ಯಲ್ಲಿಯ 'ಸುದ್ದಿಯಲ್ಲದ ಸುದ್ದಿ'ಯಾಗಿ ಪ್ರಕಟವಾಗಿದ್ದ ಒಂದು ಸುದ್ದಿಯನ್ನು ಅಂಟಿಸಲಾಗಿತ್ತು.

'ಇಷ್ಟು ಹಳೆಯ ಪತ್ರಿಕೆಯ ಹಾಳೆ ಹಿಗೇಕೆ ಭದ್ರಪಡಿಸಿದ್ದೀರಿ' ಎಂದು ಕೇಳಿದ್ದ. ತುಂಬಾ ಹಳೆಯ ಪತ್ರಿಕೆಯ ಹಾಳೆಯಾದ್ದರಿಂದ ಸ್ವಲ್ಪ ಹಳದಿ ಬಣ್ಣ ಬಂದಿತ್ತು.

## ವೀರ್ಯದ ಬ್ಯಾಂಕ್

ಕ್ಯಾಲಿಫೋರ್ನಿಯಾದ ಎಸ್ಕೊಂಡಿಡೋದಲ್ಲಿ ಈಗಾಗಲೇ ವಿಶ್ವವಿಖ್ಯಾತ ವಿಜ್ಞಾನಿಗಳ ಹಾಗೂ ನೊಬೆಲ್ ಬಹುಮಾನವನ್ನು ಪಡೆದಿರುವವರ ವೀರ್ಯವನ್ನು ಕೃತಕ ಗರ್ಭಧಾರಣೆಗಾಗಿ ಭದ್ರಪಡಿಸಿರುವ ರಾಬರ್ಟ್ ಗ್ರಾಹಾಂ ಇನ್ನು ಮುಂದೆ ಅಂತರರಾಷ್ಟ್ರೀಯ ಖ್ಯಾತಿಗಳಿಸಿರುವ ಕ್ರೀಡಾಪಟುಗಳ ವೀರ್ಯವನ್ನೂ ಭದ್ರಗೊಳಿಸುವುದಾಗಿ ಪ್ರಕಟಿಸಿದ್ದಾರೆ.

ಇದುವರೆವಿಗೂ ಸುಮಾರು ಐವತ್ತು ಮಂದಿ ವಿಜ್ಞಾನಿಗಳು ತಮ್ಮ ವೀರ್ಯವನ್ನು ತನ್ನ ಬ್ಯಾಂಕಿಗೆ ಕೊಟ್ಟಿದ್ದಾರೆ ಎಂದೂ ಅವರು ಹೇಳಿದರು. ಇವರಲ್ಲಿ ನೋಬೆಲ್ ಪ್ರಶಸ್ತಿ ವಿಜೇತರೂ ಸೇರಿದ್ದಾರೆಂದು ವಿವರಿಸಿದರು.

ಗ್ರಾಹಾಂ ಅವರು ವೀರ್ಯ ಬ್ಯಾಂಕನ್ನು ಪ್ರಾರಂಭಿಸಿ ಎರಡು ವರ್ಷ ಗಳಾದುವು.

೧೯೫೬ರಲ್ಲಿ ಭೌತಶಾಸ್ತ್ರದಲ್ಲಿ ತಮ್ಮ ಸಂಶೋಧನೆಗೆ ನೋಬೆಲ್ ಪ್ರಶಸ್ತಿ ಪಡೆದ ವಿಲಿಯಂ ಷಾಕ್ಲೀ ಒಬ್ಬರೇ ವೀರ್ಯದಾನ ಮಾಡಿರುವುದಾಗಿ ಬಹಿರಂಗ ವಾಗಿ ಒಪ್ಪಿಕೊಂಡಿರುವುದು.

"ಹಿರಿಯರು ತಮ್ಮ ಸಂತತಿಯನ್ನು ಸ್ಟೋರ್ ಮಾಡಬೇಕೆಂಬ ಚಿಂತನೆ ಇಪ್ಪತ್ತೈದು ವರ್ಷಗಳಿಗೂ ಹಿಂದೆಯೇ ಮೊದಲಾಗಿತ್ತು ಎಂಬುದನ್ನು ಹೇಳಲು ಇದನ್ನು ಇರಿಸಿಕೊಂಡಿದ್ದೇನೆ..." ಎಂದು ವಂಶೀಕೃಷ್ಣ ಹೇಳಿದ್ದ.

ಅದೆಲ್ಲಾ ರಂಗಪ್ರಸಾದನ ಮನಃಪಟಲದಲ್ಲಿ ಸ್ಪಷ್ಟವಾಗಿ ಮೂಡಿತು.

೧೯೬೦ರಲ್ಲಿ ಸೆಕ್ಸ್ ರೋಮಾನ್ಸ್‌ಗಾಗಿಯೇ ಪ್ರತ್ಯೇಕವಾದ ಪತ್ರಿಕೆಗಳು ಇರುತ್ತಿದ್ದವಂತೆ. ಇತರ ಪತ್ರಿಕೆಗಳಲ್ಲಿ ಅವಕ್ಕೆ ಎಡೆಯೇ ಇರುತ್ತಿರಲಿಲ್ಲವಂತೆ ೧೯೮೦ರ ಸುಮಾರಿಗೆ ಎಲ್ಲಾ ಪತ್ರಿಕೆಗಳು ಸೆಕ್ಸನ್ನು ತೀರಾ ಸಾಮಾನ್ಯ ವಿಷಯ ವೆನ್ನುವಂತೆ ಪ್ರಕಟಿಸಲು ಪ್ರಾರಂಭಿಸಿದುವು. ಇದು ಪ್ರಾರಂಭವಾಗುತ್ತಲೇ ಪ್ರತ್ಯೇಕವಾದ ಪತ್ರಿಕೆಗಳು ಮಾರುಕಟ್ಟೆಯಿಂದ ದೂರವಾಯಿತಂತೆ. ಕ್ರಿಕೆಟ್ ಆಟಗಾರರ, ಸಿನಿಮಾ ನಟರ ಲಾಕೆಟ್ಟುಗಳು ಫ್ಯಾಷನ್ನಾಗಿ ೧೯೯೦ರ ವೇಳೆಗೆ ಮದುವೆಯಾಗದ ಹೆಣ್ಣು ಮಕ್ಕಳೂ ಕೂಡ ತಮ್ಮ ಬೆಡ್‌ರೂಂಗಳಲ್ಲಿ ಅವರ ಫೋಟೋಗಳನ್ನು ಬಹಿರಂಗವಾಗಿ ತೂಗಿಹಾಕುವುದು ತೀರಾ ಸಾಧಾರಣ ವಾಗುತ್ತದೆ.

ಇದೆಲ್ಲಾ ಕೇವಲ ಅಭಿಮಾನವೇ ಇರಬಹುದು. ಆದರೆ ಅಭಿಮಾನದ ಸ್ಥಾಯಿಯು ಜೀವನದೊಂದಿಗೆ ಬದಲಿಸುತ್ತಾ ಬರುತ್ತದೆ.

ಎಸ್‌ಎಸ್‌ಎ ಈ ದೌರ್ಬಲ್ಯವನ್ನೇ ಕ್ಯಾಷ್ ಮಾಡಿಕೊಂಡಿದ್ದು. ಬಟ್ಟೆ ಗಳ ಮೇಲೆ ಸಿನಿಮಾ ನಟರ ಚಿತ್ರಗಳನ್ನು ಪ್ರಿಂಟ್ ಮಾಡುವ ಕಾರ್ಖಾನೆಗಳೇ ಹೇಗೆ ನಾಯಿಕೊಡೆಗಳಂತೆ ಹರಡಿದವೋ ಅದೇ ರೀತಿ ಎಸ್‌ಎಸ್‌ಎ ಆವರಿಸಿತು.

ಸೊಸೈಟಿ ಸರ್ಕಲ್‌ಗಳಲ್ಲಿ—ಎಲ್ಲಿ ನೈತಿಕ ಮೌಲ್ಯಗಳಿಗೆ ಹೆಚ್ಚು ಪ್ರಾಮುಖ್ಯತೆ ಇರುವುದಿಲ್ಲವೋ ಅಲ್ಲಿ—ಕೊಬ್ಬಿದ ಒಂದು ಹೆಣ್ಣು ತನ್ನ ಗಂಡ ನೊಡನೆ ಇದ್ದು ತಾನು ಅಭಿಮಾನದಿಂದ ಕಾಣುವ ಸಿನಿಮಾ ನಟನೊಂದಿಗೆ ಮಾನಸಿಕ ವ್ಯಭಿಚಾರ ನಡೆಸುತ್ತಾಳೋ ಆಕೆ ಅವನ ಅಂಶವನ್ನೂ ಕೊಂಡು ಕೊಳ್ಳಬಹುದು. ತನ್ನ ಬಯಕೆಯನ್ನು ಹಾಗಾದರೂ ಪೂರೈಸಿಕೊಳ್ಳ ಬಹುದು.

ಎಸ್ಸೆಸ್ಸೆ ರಹಸ್ಯವಾಗಿ ಇಂದು ಮಾಡುತ್ತಿರುವುದೇ ಈ ಕೆಲಸ. ಮರಿಜು

ನಾನಾ, ಹಷೀಷ್ ಮುಂತಾದ ಮಾದಕ ಪದಾರ್ಥಗಳು ಹೇಗೆ ಕಳ್ಳ ಸಾಗಣಿಕೆ ನಡೆಯುತ್ತಿವೆಯೋ ಅದೇ ರೀತಿ ವೀರ್ಯವು ಕಳ್ಳತನವಾಗಿ ಮಾರಾಟವಾಗುತ್ತಿದೆ.

ಪತ್ರಿಕೆಗಳಲ್ಲಿ ಸಾಕಷ್ಟು ನಗ್ನವಾಗಿ ಪೋಸ್ ಕೊಡುವ ರೋಮುನ್ ಕಪೂರನ ಮುಖ ಕಣ್ಮುಂದೆ ಮೂಡಿತು. ಹಣಕ್ಕಾಗಿ ಯಾವ ಕೆಲಸವನ್ನಾದರೂ ಮಾಡುವ ಕ್ರಿಕೆಟ್ ಆಟಗಾರ ಅನಿಲ್ ಸಾವೇದ್ಕರ್ ನೆನಪಾದ.

ಇವರೆಲ್ಲರೂ ಈ ವೇಳೆಗಾಗಲೇ ಎಸ್‌ಎಸ್‌ಎಗೆ ಮಾರಾಟವಾಗಿರಬೇಕು. ಆದರೆ ನೈತಿಕ ಮೌಲ್ಯಗಳಲ್ಲಿ ನಂಬಿಕೆ ಇರಿಸಿಕೊಂಡಿದ್ದ ಹಿರಿಯರು ಇನ್ನೂ ತುಂಬಾ ಮಂದಿ ಇದ್ದರು. ಅವರು ಕೇವಲ ಹಣಕ್ಕೆ ತಮ್ಮ ವಂಶವನ್ನು ಮಾರುವವರಲ್ಲ. ಹಾಗಿದ್ದರೆ ಅವರ ವೀರ್ಯವನ್ನು ಎಸ್‌ಎಸ್‌ಎ ಹೇಗೆ ಸಂಪಾದಿಸುತ್ತದೆ? ಒಮ್ಮೆ ಅವರು ಮಾರಿದ್ದರೂ ಅವರಿಂದ ಗ್ಯಾರಂಟೀ ಪತ್ರ ಎಸ್‌ಎಸ್‌ಎ ಹೇಗೆ ಪಡೆಯುತ್ತದೆ? ಎಸ್‌ಎಸ್‌ಎ ಕೊಡುವ ವೀರ್ಯಕಣವು ಇಂಥಾ ವ್ಯಕ್ತಿಯದೇ ಎನ್ನಲು ಆಧಾರ ನೀಡಿ ಸ್ವೀಕರಿಸುವವರನ್ನು ಒಪ್ಪಿಸಬೇಕಾದದ್ದು ತುಂಬಾ ಮುಖ್ಯ.

ರಂಗಪ್ರಸಾದ್ ಯೋಚನೆಯದ್ದಾಲ್ಲಿದ್ದಾಗಲೇ ಕಾರು ಒಮ್ಮೆ ತಿರುವನ್ನು ದಾಟಿ ವಿಶಾಲವಾದ ಕಾಂಪೌಂಡ್ ಪ್ರವೇಶಿಸಿತು. ಆಗ ಆಕಾಶವು ಮೇಘಾವೃತ್ತವಾಗಿದ್ದು ಕಾಳರಾತ್ರಿಯಾಗಿ ಮಾರ್ಪಡುವ ಸೂಚನೆಗಳಿವೆ.

"ನನಗೆ ತಿಳಿದಿರುವಂತೆ ಈ ಸಮಸ್ಯೆಗೆ ಉತ್ತರ ಹೇಳಬಲ್ಲ ವ್ಯಕ್ತಿ ಡಾಕ್ಟರ್ ವಂಶೀಕೃಷ್ಣ ಒಬ್ಬರೇ. ಅವರ ಬಳಿಗೇ ಹೋಗೋಣ" ಎಂದು ರಂಗಪ್ರಸಾದ್ ಹೇಳುತ್ತಿದ್ದಂತೆಯೇ ಕಾರು ಇನ್ಸ್ಟಿಟ್ಯೂಟ್ ಮುಂದೆ ನಿಂತಿತು.

ಕಾರಿನಿಂದ ಇಳಿಯುತ್ತಾ "ಅವರು ನಿಮಗೆ ಗೊತ್ತುತಾನೇ?" ಎಂದು ಕೇಳಿದ.

"ಗೊತ್ತು. ನಾನೂ ನನ್ನ ಹೆಂಡತಿ ಇಬ್ಬರೂ ಇಲ್ಲಿಗೆ ಬಂದಿದ್ದೆವಲ್ಲಾ! ಆದರೆ ಇಲ್ಲಿಯ ಕೃಷ್ಣಾಪುರದಲ್ಲಿ ಹುಟ್ಟುತ್ತಿರುವ ವಿಕೃತ ಶಿಶುಗಳಿಗೂ ಎರಡು ವರ್ಷಗಳ ಹಿಂದೆ ಬೊಂಬಾಯಿಯಲ್ಲಿ ನನ್ನ ಹೆಂಡತಿಗೆ ಹುಟ್ಟಿದ ವಿಕೃತ ಶಿಶುವಿಗೂ ಯಾವ ಸಂಬಂಧ ಇರಲು ಸಾಧ್ಯ ಎಂಬುದೇ ನನ್ನ ಅನುಮಾನ."

* * * *

ಕುರ್ಚಿಯಲ್ಲಿ ಹಿಂದಕ್ಕೆ ಒರಗುತ್ತಾ "ನಾನೂ ಅಗರ್‌ವಾಲ್ ಹೇಳುವುದನ್ನು ಒಪ್ಪುತ್ತೇನೆ" ಎಂದ ಡಾಕ್ಟರ್ ವಂಶೀಕೃಷ್ಣ.

"ಅಷ್ಟೇನೇ?" ಎಂದ ರಂಗಪ್ರಸಾದ್ ನಿರಾಸೆಯಿಂದ.

"ಹೋಗಲಿ, ನಿಮ್ಮ ಅಭಿಪ್ರಾಯವನ್ನೇ ಹೇಳಿ."

"ನನಗೆ ನಿರ್ದಿಷ್ಟವಾದ ಅಭಿಪ್ರಾಯವೇನೂ ಇಲ್ಲ. ಈ ವಿಷಯದಲ್ಲಿ ಆಳವಾದ ಅಧ್ಯಯನ ಬೇಕೆಂದರೆ ಕಳೆದ ಎರಡು ವರ್ಷಗಳಲ್ಲಿ ಈ ದೇಶದಲ್ಲಿ ಹುಟ್ಟಿರುವ ಎಲ್ಲಾ ವಿಕೃತ ಶಿಶುಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕು. ಅದರ ತಾಯಿ-ತಂದೆಗಳನ್ನು ಇಂಟರ್‌ವ್ಯೂ ಮಾಡಬೇಕು...."

ರಂಗಪ್ರಸಾದ್ ಹೇಳುತ್ತಿದ್ದುದನ್ನು ತಡೆಯುವಂತೆ "...ಇಂಟರ್‌ವ್ಯೂ ಮಾಡಿದರೆ ಏನು ಗೊತ್ತಾಗುತ್ತೆ?" ಎಂದು ಕೇಳಿದ ವಂಶೀಕೃಷ್ಣ.

"ಎಸ್‌ಎಸ್‌ಎಗೂ ಅವರಿಗೂ ಏನಾದರೂ ಸಂಬಂಧವಿದೆಯೇನೋ ಗೊತ್ತಾಗುತ್ತೆ."

ತನ್ನ ನಗುವನ್ನು ತಡೆದುಕೊಂಡು "....ಹಲವು ಕೋಟಿಗಳ ವ್ಯವಹಾರವನ್ನು ನಡೆಸುತ್ತಿರುವ ಎಸ್‌ಎಸ್‌ಎ ಕೃಷ್ಣಾಪುರದಲ್ಲಿ ಈ ರೀತಿ ವ್ಯವಹಾರವನ್ನು ಯಾವ ಸಾಧನೆಗಾಗಿ ನಡೆಸುತ್ತಿದೆ ಎಂದು ಹೇಳಲು ಸಾಧ್ಯವಿದೆ?" ಎಂದು ಕೇಳಿದ ವಂಶೀಕೃಷ್ಣ.

"ನಾನು ಹೇಳಿದ್ದೂ ಅದೇ" ಎಂದ ಅಗರ್‌ವಾಲ್ "ನನಗೆ ಗೊತ್ತಿರುವಂತೆಯೇ ಒಬ್ಬ ಶ್ರೀಮಂತನ ಹೆಂಡತಿ ಆಕೆಯ ಅಭಿಮಾನದ ಸಿನಿಮಾಸ್ಟಾರ್ ವೀರ್ಯಕಣದಿಂದ ಒಂದು ಗಂಡು ಮಗುವನ್ನು ಹೆತ್ತಳು. ಇದು ಎರಡು ವರ್ಷಗಳ ಹಿಂದಿನ ಮಾತು!"

"ಎಸ್‌ಎಸ್‌ಎ ಮೇಲೆ ಯಾವ ರೀತಿಯಾದ ಕ್ರಮವನ್ನೂ ಕಾನೂನಿನ ಆಶ್ರಯದಿಂದ ನಡೆಸಲು ಸಾಧ್ಯವಿಲ್ಲ. ಪಾರ್ಲಿಮೆಂಟ್ ವೀರ್ಯ ಮಾರಾಟವನ್ನು ನಿಷೇಧಿಸುತ್ತಾ ಕಾನೂನು ಮಾಡಿದರೆ ಮಾತ್ರವೇ ನಾವು ಅವರ ಮೇಲೆ ಕ್ರಮ ಕೈಗೊಳ್ಳಬಹುದು" ಎಂದ ವಂಶೀಕೃಷ್ಣ.

ರಂಗಪ್ರಸಾದ್ ಯೋಚಿಸುತ್ತಿದ್ದ. ಇಲ್ಲೇ ಏನೋ ಅಡಗಿದೆ ಎಂದು ಮನಸ್ಸು ಹೇಳುತ್ತಲೇ ಇತ್ತು.

ಅಗರ್‌ವಾಲ್ ಎದ್ದುನಿಂತು "ಹೊತ್ತಾಯಿತು, ಇನ್ನೂ ಏರ್‌ಪೋರ್ಟಿಗೆ ಹೋಗಬೇಕು..." ಎಂದ.

ರಂಗಪ್ರಸಾದ್ ಎದ್ದು ಕೈ ಕುಲುಕುತ್ತಾ "ಥ್ಯಾಂಕ್ಸ್...ಅಷ್ಟೇ ಅಲ್ಲ ನೀವು ಕ್ಷಮಿಸಬೇಕು. ಸಣ್ಣ ವಿಷಯಕ್ಕಾಗಿ ಈ ರೀತಿ ದೊಡ್ಡ ನಾಟಕವನ್ನೇ ಆಡಬೇಕಾಯಿತು. ನಿಮಗೆ ಸಮಯ ಹಣ ಎರಡೂ ವ್ಯಯವಾಗಿದೆ...." ಎಂದ.

"ಆಗಲಿ ಚಿಂತೆಯಿಲ್ಲ,ಒಂದು ವೇಳೆ ಈ ಕೇಸು ಬಹಿರಂಗವಾದರೂ ನಮ್ಮ ಸ್ವವಿಷಯಗಳು ಎಲ್ಲೂ ಬಹಿರಂಗವಾಗದಂತೆ ನೋಡಿ. ಪ್ರೆಸ್ ಅಂದರೆ ನನಗೆ

ತುಂಬಾ ಭಯ..."

ಅಗರ್‌ವಾಲ್ ಹೊರಬಂದ. ಆತನೊಂದಿಗೆ ರಂಗಪ್ರಸಾದ್ ಕೂಡ ಹೊರ ಬಂದ. ಗಾಳಿ ಬೀಸುತ್ತಿದೆ. ಆಕಾಶದಲ್ಲಿ ಒಂದು ನಕ್ಷತ್ರವೂ ಕಾಣಿಸುತ್ತಿಲ್ಲ. ಕಪ್ಪು ಟಾರು ಬಳಿದಂತೆ ಕಾಣುತ್ತಿದೆ. ಆಗಾಗ ಮಿಂಚು.

"ನನಗೆ ಫೋನ್ ಮಾಡಿದ್ದಾಕೆ ಯಾರು?"

"ಡಾಕ್ಟರ್ ನಿವೇದಿತ."

"ತುಂಬಾ ಜಾಣೆಯಂತೆ ತೋರುತ್ತಾಳೆ ಆಕೆ."

"ಇಬ್ಬರೂ ಬೇಗ ಮದುವೆ ಮಾಡಿಕೊಳ್ಳಲಿದ್ದೇವೆ."

"ಹೌದೇ?....ಕಂಗ್ರಾಟ್ಸ್, ಇನ್ವಿಟೇಷನ್ ತಪ್ಪಿಸಬೇಡಿ."

"ಖಂಡಿತಾ ಕಳುಹಿಸುತ್ತೇನೆ."

"ನಾನು ಬೊಂಬಾಯಿಗೆ ಹೋದನಂತರ ಪೊಲೀಸ್ ಕಮೀಷನರ್‌ಗೆ ಫೋನ್ ಮಾಡಿ ಎಸ್‌ಎಸ್‌ಎ ಬಗ್ಗೆ ವಿಚಾರಿಸಲು ಹೇಳುತ್ತೇನೆ."

"ಥ್ಯಾಂಕ್ಸ್, ನೀವು ಅಷ್ಟು ಸಹಾಯ ಮಾಡಿದರೆ ಈ ರಹಸ್ಯವನ್ನು ತಿಳಿಯಲು ನೆರವಾಗುತ್ತದೆ" ಎಂದ ರಂಗಪ್ರಸಾದ್. ಕಾರು ಹೊರಟ ನಂತರವೂ ಅಲ್ಲೇ ನಿಂತಿದ್ದ.

ಮೇಘಾವೃತ್ತವಾಗಿದ್ದ ಬಾನಿನಿಂದ ಒಂದು ಹನಿ ಮಳೆ ಉದುರಿತು.

ಹದಿನೈದು ನಿಮಿಷಗಳಲ್ಲಿ ಅಗರ್‌ವಾಲ್ ವಿಮಾನ ನಿಲ್ದಾಣವನ್ನು ಸೇರಿದ. ಕೌಂಟರ್ ಮುಚ್ಚುವ ಸಿದ್ಧತೆಯಲ್ಲಿದ್ದರು. ಆತುರದಿಂದ ತನ್ನ ಸ್ಲಿಪ್ ತೆಗೆದುಕೊಂಡು ವಿಮಾನದತ್ತ ನಡೆದ. ಆತನೇ ಕೊನೆಯ ಪ್ರಯಾಣಿಕ.

ಬೊಂಬಾಯಿಗೆ ಹೊರಡುವ ಏರ್‌ಬಸ್ ನಿಂತಿತ್ತು.

ಪಕ್ಕದಲ್ಲಿಯೇ ಇನ್ನೊಂದು ಚಿಕ್ಕವಿಮಾನ ಹೊರಡಲು ಸಿದ್ಧವಾಗುತ್ತಿತ್ತು. ಲೈಟ್‌ಮನ್ ಅದಕ್ಕೆ ಸಿಗ್ನಲ್ ಕೊಡುತ್ತಿದ್ದಾನೆ.

ರಾತ್ರಿ ಎಂಟುಗಂಟೆ, ಎಲ್ಲವೂ ಖಾಲಿ. ಗಾಳಿ ಸದ್ದು ಮಾಡುತ್ತಾ ಬೀಸುತ್ತಿದೆ. ಆತನೇ ಕೊನೆಯ ಪ್ರಯಾಣಿಕನಾದ್ದರಿಂದ ವಿಮಾನದ ತನಕ ಇದ್ದ ಸುಮಾರು ಒಂದು ಸಾವಿರ ಗಜಗಳ ದೂರ ನಿರ್ಮಾನುಷ್ಯವಾಗಿದೆ. ರನ್‌ವೇ ಲೈಟ್‌ಗಳು ಬೆಳಗುತ್ತಿವೆ. ಮಳೆ ತುಂತುರು ಪ್ರಾರಂಭವಾಗಿದೆ.

ಅದುವರೆವಿಗೂ ಒಂದೇ ದಿಕ್ಕಿನಲ್ಲಿ ಗಾಳಿ ಬೀಸುತ್ತಿದ್ದುದು ಸುಳಿಗಾಳಿಯಾಗಿ ಬದಲಾಗಿದ್ದರಿಂದ ಧೂಳು ಮುಖಕ್ಕೆ ತಗಲದಂತೆ ಬ್ರೀಫ್‌ಕೇಸ್ ಮುಖಕ್ಕೆ ಮರೆಯಾಗಿಸಿಕೊಂಡ ಅಗರ್‌ವಾಲ್. ಗಾಳಿಯ ವೇಗ ಹೆಚ್ಚಾಯಿತು. ವಿಮಾನದ ಪ್ರೊಫೆಲ್ಲರ್ ಸದ್ದು ಕಿವಿಯನ್ನು ಹಾಳುಮಾಡುವಂತಿತ್ತು.

ಅದೇ ಸಮಯಕ್ಕೆ ಚಲಿಸುತ್ತಿದ್ದ ವಿಮಾನಕ್ಕೆ ಸಿಗ್ನಲ್ ಕೊಡುತ್ತಿದ್ದ ವ್ಯಕ್ತಿ ಇದ್ದಕ್ಕಿದ್ದಂತೆಯೇ ಅದರ ಗಮನದಲ್ಲಿ ಏನೋ ಬದಲಾವಣೆ ಕಂಡು ಕೊಂಡ. ಡೆಡ್‌ಲೈನ್ ದಾಟಿ ಮುಂದಕ್ಕೆ ಬಂದಿದೆ. ಇದೇನು ಎಂದು ಗಾಬರಿ ಯಿಂದ ನೋಡುತ್ತಿದ್ದಂತೆ ವಿಮಾನದ ರೆಕ್ಕೆಗಳ ಬಳಿಯ ದೀಪಗಳು ದೂರದಲ್ಲಿ ಗುಡುಗಿದ ಸದ್ದು.

ಅಗರ್‌ವಾಲ್‌ನನ್ನು ಗಾಳಿಯ ಒಂದು ಅಲೆ ಪಕ್ಕಕ್ಕೆ ತಳ್ಳಿತು. ಒಂದೇ ಧ್ವನಿ, ಕಣ್ಣು ಕಾಣಿಸುತ್ತಿಲ್ಲ. ಗಾಳಿ ಅವನ ಸುತ್ತಲೂ ತಿರುಗುತ್ತಿದೆ. ಇಳಿ ಯಲು ಬರುತ್ತಿದ್ದ ಮತ್ತೊಂದು ವಿಮಾನದ ದೀಪ ಅವನ ಕಣ್ಣನ್ನು ಕೋರೈಸು ವಂತೆ ಮಾಡಿತು. ಚಲಿಸುತ್ತಿದ್ದ ಚಿಕ್ಕ ವಿಮಾನ ಮತ್ತಷ್ಟು ಹತ್ತಿರವಾಯಿತು.

ಮೊದಲು ಗಮನಿಸಿದವನು ಏರ್‌ಬಸ್ಸಿನ ಸಿಬ್ಬಂದಿ ವರ್ಗದವನು "ಏಯ್ ಹೀಗೆ" ಎಂದು ಅರಚಿದ. ಗಾಳಿಯಲ್ಲಿ ಅದು 'ಬೇಗ' ಎಂದು ಕೇಳಿಸಿತು. ಪ್ರೊಫೆಲ್ಲರ್ ಸದ್ದು ಮತ್ತಷ್ಟು ಹತ್ತಿರವಾಯಿತು. ಗಾಳಿ ಹೆಚ್ಚಿ ಮತ್ತಷ್ಟು ಸದ್ದುಮಾಡಿತು. ಮತ್ತೆ ನಾಲ್ಕು ಹೆಜ್ಜೆಗಳನ್ನು ಹಾಕಿದ.

ಕಿರುಚಿಕೊಳ್ಳಲೂ ಕೂಡ ಅವಕಾಶವಿರಲಿಲ್ಲ. ತೋಳು ಗಾಳಿಯಲ್ಲಿ ಹಾರಿತು. ನಂತರ ಕೊರಳು ಛಿದ್ರವಾಯಿತು. ಸೊಂಟ ಮಾಂಸದ ಮುದ್ದೆ ಯಾಗಿ ಕೆಳಕ್ಕೆ ಜಾರಿತು.

ತಪ್ಪು ಪೈಲೆಟ್‌ದೇ ಅಥವಾ ಅಗರ್‌ವಾಲ್‌ನದೇ ಎಂದು ಸಾಕ್ಷ್ಯ ಹೇಳ ಬೇಕಾಗಿದ್ದ ಲೈನ್‌ಮನ್ ಅಷ್ಟು ರಕ್ತವನ್ನು ನೋಡಿ ಪ್ರಜ್ಞಾಶೂನ್ಯವಾಗಿ ಕೆಳಗೆ ಬಿದ್ದಿದ್ದ.

ಚಿಕ್ಕವಿಮಾನದ ಪೈಲೆಟ್‌ಗೆ ಉಸ್ಲೋಕ್ ನೀಡಿದ ಆಜ್ಞೆಯು ಅದೇ? ಅಥವಾ ಪಂಚಭೂತಗಳಲ್ಲಿ ಒಂದಾದ ವಾಯುವಿಗೆ ಕ್ಷುದ್ರಗಣಾಧಿಪತಿಯಾದ ಕಾಪೊಮ್ರೋರಾ ಕೊಟ್ಟ ಸೂಚನೆಯೇ?

ಅಗರ್‌ವಾಲ್‌ನ ಸಾವಿಗೆ ಅರ್ಧಗಂಟೆ ಮೊದಲು ರಂಜಿತಾಳನ್ನು ಲೈ ಡಿಟೆಕ್ಟರ್ ಬಳಿಗೆ ಕರೆದೊಯ್ದು ಪರೀಕ್ಷಿಸಿದ್ದಾಗಿತ್ತು. ಅವರಿಗೆಲ್ಲಾ ಈ ಪರೀಕ್ಷೆ ತೃಪ್ತಿಕೊಟ್ಟಿತ್ತು. ಆಕೆಯನ್ನು ಮತ್ತೆ ಬಾಬಾ ಬಳಿಗೆ ಕರೆದೊಯ್ಯುತ್ತಿದ್ದಂತೆ ಷಾಡೋ ಅಲ್ಲಿಂದ ಹೊರಬಿದ್ದ.

ಮುಂದೇನು ಮಾಡಬೇಕೆಂಬುದು ಗೊತ್ತಾಗಲಿಲ್ಲ, ಗಡಿಯಾರವೂ ಇಲ್ಲ. ಹಗಲೋ ರಾತ್ರಿಯೋ ಗೊತ್ತಾಗುತ್ತಿಲ್ಲ. ಎಷ್ಟು ನಡೆದರೂ ಕೊನೆಯೇ ಇಲ್ಲ ದಂತಿದೆ ಆ ಭವನ, ಅದಕ್ಕೆ ಕಿಟಕಿಗಳೇ ಇಲ್ಲ! ಗೋಡೆಯ ಹೊರಗಿನಿಂದ ಬರು ತ್ತಿದ್ದ ಸದ್ದು ಕೇಳುತ್ತಿದ್ದರೆ ಮಳೆ ಸುರಿಯುತ್ತಿದೆ ಎನಿಸುತ್ತದೆ.

ಬಾಬಾಗೆ ಅನುಮಾನ ಬಂದು ಮತ್ತೊಮ್ಮೆ ಪರೀಕ್ಷೆ ಮಾಡಿದರೆ ಮಾತ್ರವೇ ರಂಜಿತಾಳಿಗೆ ಅಪಾಯ, ಈಗ ಸದ್ಯಕ್ಕೆ ಅದು ಸಾಧ್ಯವಾಗದು. ತನ್ನ ಬಗ್ಗೆ ಚಿಂತಿಸಬೇಕು. ತಾನು ತಪ್ಪಿಸಿಕೊಂಡಿದ್ದೇನೆ ಎಂಬುದು ಗೊತ್ತಾಗುವ ಮೊದಲೇ ಏನಾದರೂ ಮಾಡಬೇಕು.

ಹೀಗೆ ಷಾಡೋ ಯೋಚಿಸುತ್ತಿರುವ ವೇಳೆಗೆ ರಂಜಿತಾಳನ್ನು ಕರೆದೊಯ್ದ ಅನುಚರರು ಆಕೆ ತನ್ನ ಮನಸ್ಸನ್ನು ಬದಲಿಸಿ ಉಸ್ನೋಕ್‌ನಲ್ಲಿ ಸೇರಲು ತೀರ್ಮಾನಿಸಿದ್ದು ನಿಜವೆಂದು ದೃಢಪಡಿಸಿದರು.

ಬಾಬಾ ಅವಳತ್ತ ಅನುಮಾನದ ನೋಟ ಬೀರುತ್ತಾ "ಕೈಗಡಿಯಾರ ದಂತೆ ಬೇರೇನಾದರೂ ಇಟ್ಟುಕೊಂಡಿದ್ದು ನಮ್ಮ ಮೆಷಿನ್ನುಗಳನ್ನು ತಪ್ಪು ಹಾದಿಗೆ ಎಳೆಯುತ್ತಿದ್ದೀಯಾ?" ಎಂದು ನಕ್ಕ.

ಲೈ ಡಿಟೆಕ್ಟರನ್ನು ತಪ್ಪು ದಾರಿಗೆಳೆದ ಷಾಡೋವನ್ನು ಕಂಡನಂತರ ತುಂಬಾ ಧೈರ್ಯವನ್ನು ಪಡೆದಿದ್ದ ರಂಜಿತಾ "ನಿಮ್ಮನ್ನು ನಂಬಿಸಲು ಇನ್ನೇನು ಮಾಡಬೇಕು?" ಎಂದು ಕೇಳಿದಳು.

ಅವಳನ್ನೇ ದೃಷ್ಟಿಸುತ್ತಾ "ನಾನೇ ಹೇಳಬೇಕೇನು?" ಎಂದು ಕೇಳಿದ. ರಂಜಿತಾಳ ಮುಖದ ಮೇಲಿದ್ದ ನಗು ಮಾಯವಾಯಿತು. ಮನಸ್ಸು ಏನೋ ಕೇಡನ್ನು ನಿರೀಕ್ಷಿಸುತ್ತಿತ್ತು. ಆದರೂ ಹೇಗೋ ಬಾಯ್ತೆರೆದು "ಏನು?" ಎಂದು ಕೇಳಿದಳು. ತಾನು ಯಾವ ಬಯಕೆ ತೀರಿಸಬೇಕೆಂಬುದನ್ನು ಆತ ಕೇಳಿದ್ದನೋ ಅದು ಅವಳು ಮರೆತಿರಲಿಲ್ಲ. ಲೈ ಡಿಟೆಕ್ಟರ್‌ನಿಂದ ಹೇಗೋ ತಪ್ಪಿಸಿಕೊಂಡಿದ್ದಾಯಿತು. ಆದರೆ ಇದರಿಂದ ತಪ್ಪಿಸಿಕೊಳ್ಳುವುದು ಹೇಗೆ? ತನ್ನ ಶರೀರವನ್ನು ಅರ್ಪಿಸುವುದರ ವಿನಾ ಬೇರೆಯ ದಾರಿಯೇ ಇಲ್ಲವೇ?

ಅವಳ ಚಿಂತನೆಯನ್ನು ಗಮನಿಸಿದವನಂತೆ ಗಹಗಹಿಸಿ ನಗುತ್ತಾ "ಅಗ್ಗದ ಸಿನಿಮಾಗಳ ಮುಗ್ಗಿದ ವಿಲನ್ ಸೊಕ್ಕಿದ ಹೀರೋಯಿನ್ನನ್ನು ಕೇಳಿ ದಂತೆ ನಾನು ಕೇಳುತ್ತೇನೆ ಎಂದುಕೊಂಡಿದ್ದೀಯೇನು?" ಎಂದ ಅವನ ಮಾತಿಗೆ ರಂಜಿತಾ ದಿಗ್ಭ್ರಮೆಗೊಂಡಳು. ಟೆಲಿಪತಿ (ಎಂದರೆ ಇನ್ನೊಬ್ಬರ ಮನಸ್ಸಿನ ಮಾತುಗಳನ್ನು ಮನಸ್ಸಿನ ಮುಖಾಂತರವೇ ತಿಳಿಯುವ ವಿದ್ಯೆ) ಎಂದರೆ ಅವಳಿಗೆ ನಂಬಿಕೆ ಇರಲಿಲ್ಲ. ಆದರೆ ತನ್ನ ಮನಸ್ಸಿನ ಮಾತನ್ನು ಇಷ್ಟು ನಿಖರವಾಗಿ ಹೇಗೆ ಹೇಳುತ್ತಿದ್ದಾನೆ? ಅವನು ತನ್ನನ್ನು ಬಯಸಿದಾಗಲೂ ಇದೇ ರೀತಿಯೇ ಆಶ್ಚರ್ಯಗೊಂಡಿದ್ದಳು.

ಅಷ್ಟರಲ್ಲಿ ಅವನೇ ಮಾತು ಮುಂದುವರಿಸಿದ–"ನಿನ್ನ ಅಗತ್ಯ ನನಗೆ ಆ ರೀತಿ ಬೇಕಾಗಿಲ್ಲ ರಂಜಿತಾ. ಬೇರೊಂದು ರೀತಿ ನಿನ್ನ ಅವಶ್ಯಕತೆ ಇದೆ" ಎಂದು

ಸ್ವಲ್ಪ ತಡೆದು ಗಂಭೀರ ಧ್ವನಿಯಲ್ಲಿ "ಉಸ್ನೋಕ್‌ನಲ್ಲಿ ಪ್ರವೇಶಿಸಿದ ಮೇಲೆ ನಿನ್ನ ಶರೀರದ ಮೇಲೆ ನಿನಗೆ ಸ್ವಾಮ್ಯವಿರದು. ನೀನು ಭಾವಿಸಿದ್ದು ನಿಜವೇ, ನಾನು ಕೇಳಿದ್ದೂ ನಿಜವೇ, ನಾನು ಕೇಳುವುದು ನನಗಾಗಿಯಲ್ಲ ಉಸ್ನೋಕ್‌ಗಾಗಿ...."

ರಂಜಿತಾ ಉಸಿರು ಬಿಗಿಹಿಡಿದಳು. ಈತನೇನು ಹೇಳುತ್ತಾನೆ? ನೀಚ ಗಣಗಳನ್ನು ಪೂಜಿಸುವ ಮಾಂತ್ರಿಕರ ಕ್ರಿಯೆಗಳನ್ನು ಆಕೆ ಕೆಲವು ಪುಸ್ತಕಗಳಲ್ಲಿ ಓದಿದ್ದಳು. ತನ್ನನ್ನು ಹಾಗೆ ಉಪಯೋಗಿಸ ಬಯಸುತ್ತಾನೇನೋ?... ಭಯದಿಂದ ಅವಳ ಮೈ ಕಂಪಿಸಿತು. ಅವೆಲ್ಲಾ ತೀರಾ ಭಯಂಕರ ಕ್ರಿಯೆಗಳು. ಕನ್ಯೆಯರ ಪಾಲಿಗೆ ಅದಕ್ಕಿಂತಲೂ ಮಿಗಿಲಾದ ನರಕ ಬೇರಿಲ್ಲ. ಅದಕ್ಕಿಂತಲೂ ಉಸ್ನೋಕ್‌ನಲ್ಲಿ ಸೇರುವುದಿಲ್ಲವೆಂದು ಹೇಳಿ ಸಾವನ್ನು ಅಪ್ಪುವುದೇ ಸುಖ.

"ನೀನು ಬೇಕೆಂದು ನಾನು ಕೇಳಿದ್ದೇಕೆ ಗೊತ್ತೇ ರಂಜಿತಾ? ಒಮ್ಮೆ ಕನ್ಯತ್ವ ಕಳೆದುಕೊಂಡರೆ ಇದನ್ನು ನಿನ್ನ ಭವಿಷ್ಯದ ಬಗ್ಗೆ ಯಾವ ಅನುಮಾನವೂ ಇರದು. ಇನ್ನೊಂದು ತೆರನಾಗಿ ಹೇಳಬೇಕೆಂದರೆ ನಿನಗೆ ಭವಿಷ್ಯದ ಬಗ್ಗೆ ಯಾವ ಆಸೆಯೂ ಇರದು. ಒಮ್ಮೆ ಕಳೆದುಕೊಂಡ ಶೀಲದ ಬಗ್ಗೆ ಮತ್ತೆ ಯೋಚಿಸುವುದಿಲ್ಲ. ನಿನ್ನಂತಹ ಸುಂದರಿ, ಜಾಣೆ ಉಸ್ನೋಕ್‌ಗೆ ತುಂಬಾ ನೆರವಾಗುವ ಸಾಧ್ಯತೆ ಇದೆ. ಅದಕ್ಕಾಗಿಯೇ ನಿನ್ನನ್ನು ಕೊಲ್ಲದೆ ನೋಡಿಕೊಂಡಿದ್ದು."

ರಂಜಿತಾಳಿಗೆ ಏನೂ ಅರ್ಥವಾಗುತ್ತಿಲ್ಲ. ಎಲ್ಲಾ ಗೊಂದಲಮಯ. ಒಮ್ಮೆ ಶರೀರ ಎನ್ನುತ್ತಾನೆ, ಮತ್ತೊಮ್ಮೆ ಅದು ತನಗೆ ಬೇಡ ಎನ್ನುತ್ತಾನೆ....

ಅವಳ ಮನದ ಸಂಶಯ ಗ್ರಹಿಸಿದವನಂತೆ "ರಂಜಿತಾ ಇನ್ನು ಆರೇಳು ಗಂಟೆಗಳಲ್ಲಿ ಅಷ್ಟಾವಕ್ರನ ಜನನ ನಡೆಯಲಿದೆ. ಉಸ್ನೋಕ್‌ನ ಪ್ರತಿಯೊಬ್ಬ ಸದಸ್ಯನೂ ಆ ಸಂಭ್ರಮದಲ್ಲಿ ಮಗ್ನನಾಗಿದ್ದಾನೆ. ನೀನು ಮಾಡಬೇಕಾಗಿರುವ ಕೆಲಸದ ಬಗ್ಗೆ ನಂತರ ಹೇಳುತ್ತೇನೆ, ನನ್ನೊಂದಿಗೆ ಬಾ...." ಎಂದ ಅವನು.

ಮೌನವಾಗಿ ಅವನ ಹಿಂದೆ ಹೊರಟಳು. ಅವರಿಬ್ಬರೂ ವರಾಂಡಾ ದಾಟಿ ಮೆಟ್ಟಿಲು ಇಳಿಯುತ್ತಿದ್ದರೆ ಹಿಂದಿನ ಕತ್ತಲಿಂದ ಷಾಡೋ ಹೊರಕ್ಕೆ ಬಂದ. ಅವರು ನೆಲಮಾಳಿಗೆ ಪ್ರವೇಶಿಸುತ್ತಿದ್ದಾರೆ. ಹಿಂದುಮುಂದೆ ನೋಡದೆ ಅವರನ್ನೇ ಅನುಸರಿಸಿದ ಷಾಡೋ. ಒಮ್ಮೆ ಅವನೂ ಉಸ್ನೋಕ್ ಸದಸ್ಯನೇ ಆಗಿದ್ದುದರಿಂದ ಆ ಕ್ರಿಯೆಯೆಲ್ಲಾ ಅವನಿಗೆ ಗೊತ್ತು. ಎಲ್ಲರಂತೆ ಅವನೂ ರಕ್ತ ಕುಂಕುಮ ಧರಿಸಿ ಒಂದು ಪಂಜನ್ನು ತೆಗೆದುಕೊಂಡು ಒಳಗೋಡೆಗೆ ಸಿಲುಕಿಸಿದ ನಂತರ ಹೋಗಿ ಕೊನೆಯ ಸಾಲಿನಲ್ಲಿ ಕುಳಿತ. ಅವನ ಎದೆ ಡವ

ಡವನೆ ಬಡಿಯುತ್ತಿತ್ತು. ತಾನು ತನ್ನ ಕೋಣೆಯಲ್ಲಿಲ್ಲ ಎಂಬುದು ಅವರಿಗೆ ಗೊತ್ತಾಗುವ ಮೊದಲೇ ಏನಾದರೂ ತೀರ್ಮಾನಿಸಬೇಕು.

## ೩೯

"ಉಸ್ಸೋಕ್ ಮಹಾಸದಸ್ಸಿಗೆ ನಮಸ್ಕಾರ" ಮಹಾದ್ರಷ್ಟನ ಕಂಠ ಸಭಾಂಗಣದಲ್ಲಿ ಗಂಭೀರವಾಗಿ ಕೇಳಿಸಿತು. "ಪ್ರತಿ ಸದಸ್ಯನೂ ಯಾವ ಶುಭ ಘಳಿಗೆಗಾಗಿ ಕಾಯುತ್ತಿದ್ದನೋ ಆ ಘಳಿಗೆ ಈಗ ಹತ್ತಿರವಾಗಿದೆ. ಅಷ್ಟಾವಕ್ರನು ಇನ್ನೇನು ಅವತರಿಸಲಿದ್ದಾನೆ. ಕಾಷ್ಮೋರಾ ಅಂಶದಿಂದ ಕುಟ್ಟಿಸೈತಾನ್ ಪ್ರಪಂಚವನ್ನು ಆಳಲು ಬರುತ್ತಿದ್ದಾನೆ. ಈ ರಾತ್ರಿ ಹನ್ನೆರಡು ಗಂಟೆಗೆ ಇದು ನಡೆಯಲಿದೆ!"

ಸಭೆಯಲ್ಲಿ ಹರ್ಷೋದ್ಗಾರಗಳು.

"ಇಷ್ಟು ಕಾಲವು ನಾವೆಲ್ಲ ತುಂಬಾ ನಿಷ್ಠರಾಗಿ ಸೇವೆ ಸಲ್ಲಿಸಿದ್ದಕ್ಕೆ ಪ್ರತಿಫಲವಾಗಿ ನಮ್ಮೆಲ್ಲರಿಗೂ ಅದ್ಭುತ ಶಕ್ತಿಗಳನ್ನು ದಯಪಾಲಿಸುತ್ತಾನೆ. ತನ್ನನ್ನು ನಂಬದವರನ್ನೂ, ದೇವರನ್ನು ಪೂಜಿಸುವವರನ್ನೂ ದಮನ ಮಾಡುತ್ತಾನೆ. ನಮ್ಮ ಚಿನ್ನದ ಕನಸುಗಳೆಲ್ಲಾ ನಿಜವಾಗಲಿವೆ.

"ಹಲವಾರು ವರ್ಷಗಳು ನಾನು ಹಿಮಾಲಯದಲ್ಲಿ ಸಂಚರಿಸಿದ್ದು ಈ ದಿನದ ಪ್ರತೀಕ್ಷೆಯಲ್ಲಿಯೇ! ನನ್ನ ಬಾಳಿನ ಅನೇಕ ಕಷ್ಟಗಳನ್ನು ಎದುರಿಸಿದ್ದು ಈ ಘಳಿಗೆಗಾಗಿಯೇ! ಕಾಷ್ಮೋರಾದ ಅಂಶವು ಭೂಮಿಯ ಮೇಲೆ ಬರಲಿದೆ ಎಂಬುದು ಗೊತ್ತಾಗುತ್ತಲೇ ಒಬ್ಬೊಬ್ಬರನ್ನೇ ಕೂಡಿಸತೊಡಗಿದೆ. ಸೈತಾನನ ಕೃಪೆಯಿಂದ ಈ ಸಂಸ್ಥೆ ಇಷ್ಟು ದೊಡ್ಡದಾಗಿದೆ. ಉಸ್ಸೋಕ್‌ನಲ್ಲಿ ಸೇರಿದವನು ತನ್ನ ಪ್ರಾಣವನ್ನೂ ಅರ್ಪಿಸಲು ಸಿದ್ಧನಾಗಿರುತ್ತಾನೆ ಎಂಬುದು ನನಗೆ ಗೊತ್ತು. ಆದ್ದರಿಂದಲೇ ಇದುವರೆವಿಗೂ ಮೂರನೆಯವರಿಗೆ ಈ ರಹಸ್ಯ ತಿಳಿಯದಂತೆ ಉಳಿದು ಬಂದಿದೆ. ಇನ್ನು ಮುಂದೆ ಈ ರೀತಿ ರಹಸ್ಯವಾಗಿ ನಾವು ಬದುಕಬೇಕಾಗಿಲ್ಲ. ಅಷ್ಟಾವಕ್ರನು ನಮ್ಮ ಮಾರ್ಗದರ್ಶಿಯಾಗಿರುತ್ತಾನೆ. ಪ್ರಪಂಚಕ್ಕೇ ಒಡೆಯನಾಗುತ್ತಾನೆ... ಇಷ್ಟು ಕಾಲವೂ ಭಕ್ತಿಯಿಂದ ಶ್ರಮಿಸಿದ ಪ್ರತಿಯೊಬ್ಬರಿಗೂ ಸೂಕ್ತ ಪ್ರತಿಫಲವನ್ನು ಕಾಷ್ಮೋರಾ ನೀಡುತ್ತದೆ.

ಸಭೆಯಲ್ಲಿ ಮತ್ತೆ ಹರ್ಷಧ್ವನಿ.

"ಇನ್ನು ಕೇವಲ ನಾಲ್ಕು ಗಂಟೆ ಮಾತ್ರವೇ. ಅಷ್ಟರಲ್ಲಿ ಕೆಲವು ಕೆಲಸ

ಗಳನ್ನು ಮಾಡಬೇಕು. ಅವುಗಳ ಬಗ್ಗೆ ಅವತಾರ್ ಬಾಬಾ ಹೇಳುತ್ತಾರೆ."

ಅವತಾರ್ ಬಾಬಾ ರಂಜಿತಾ ಕಡೆ ಕುಳಿತಿರುವಂತೆ ಸನ್ನೆಮಾಡಿ ತಾನು ವೇದಿಕೆಗೆ ಹೋದ. ಹಿಂದಿನ ಸಾಲಿನಲ್ಲಿದ್ದ ಷಾಡೋನನ್ನು ರಂಜಿತಾ ಗಮನಿಸಿದಳು. ಬಾಬಾ ಯಾರೆಂಬುದು ತನಗೆ ಗೊತ್ತಿರುವ ರಹಸ್ಯವನ್ನು ಅವನಿಗೆ ತಿಳಿಸುವುದು ಹೇಗೆ ಎಂಬುದು ಅವಳಿಗೆ ಗೊತ್ತಾಗಲಿಲ್ಲ. ಅಷ್ಟರಲ್ಲಿ ಬಾಬಾ ಮಾತನಾಡಲಾರಂಭಿಸಿದ,

"ಸ್ನೇಹಿತರೇ, ಕಾಷ್ಮೋರಾ ನೀಡಿದ ಸೂಚನೆಗಳನ್ನೆಲ್ಲಾ ಸ್ವಲ್ಪವೂ ವ್ಯತ್ಯಾಸವಾಗದಂತೆ ನಾವು ಅನುಸರಿಸುತ್ತಿರುವುದರಿಂದ ಸಂತುಷ್ಟನಾದ ಗಣಾಧಿಪತಿ ಇನ್ನು ನಾಲ್ಕು ಗಂಟೆಗಳಲ್ಲಿ ತನ್ನ ಅಂಶಾವತಾರಿಯಾದ ಅಷ್ಟಾವಕ್ರನನ್ನು ಪ್ರಸಾದಿಸಲಿದ್ದಾನೆ. ಸಿಂಹಳದ ಪ್ರಧಾನಮಂತ್ರಿಯನ್ನು ಕೊಲ್ಲುವುದರಲ್ಲಿ ನಮ್ಮ ಇಬ್ಬರು ಸದಸ್ಯರು ತಮ್ಮ ಪ್ರಾಣವನ್ನು ಅರ್ಪಿಸಿದ್ದಾರೆ. ಅವರನ್ನು ಬದುಕಿಸಬೇಕೆಂದು ನಾವು ಅಷ್ಟಾವಕ್ರನಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇವೆ. ನಮ್ಮ ಪ್ರಾರ್ಥನೆಗೆ ಕಾಷ್ಮೋರಾದ ಅಂಗೀಕಾರವೂ ದೊರೆತಿದೆ."

ಕರತಾಡನ.

"ನಾನು ರಾಜ್ಯ ಸರ್ಕಾರದಲ್ಲಿ ಯೋಗಶಾಸ್ತ್ರ ಸಂಬಂಧಿ ಇಲಾಖೆಯ ಗೌರವ ಮುಖ್ಯಾಧಿಕಾರಿಯಾಗಿ ನಿಯಮಿಸಿರುವುದು ತಮಗೆ ಗೊತ್ತಿದೆ. ಭಾರತ ದೇಶದಿಂದ ನಮ್ಮ ರಾಜ್ಯವು ಬೇರೆಯಾದರೆ ಉಜ್ವಲ ಭವಿಷ್ಯವಿದೆ ಎಂದು ಮುಖ್ಯಮಂತ್ರಿಗೆ ಈಗಾಗಲೇ ಹೇಳಿದ್ದೇನೆ. ಅವರ ಫಲ ತಾವೆಲ್ಲಾ ನೋಡುತ್ತಿದ್ದೀರಿ..."

ಸಭೆಯಲ್ಲಿ ಮೊದಲ ಸಾಲಿನಲ್ಲಿದ್ದ ರಂಜಿತಾ ಕೊನೆಯ ಸಾಲಿನಲ್ಲಿದ್ದ ಷಾಡೋ ಇಬ್ಬರೂ ದಿಗ್ಭ್ರಾಂತಿಗೊಂಡರು.

"ಭಾರತದ ಸೇನಾ ದಂಡನಾಯಕನು ತನ್ನ ಹೊಟ್ಟೆಯಲ್ಲಿ ಹುಣ್ಣಿದೆ ಎಂದು ನನ್ನಲ್ಲಿಗೆ ಬಂದಿದ್ದು ತಮಗೆ ಗೊತ್ತು. ಆ ಹುಣ್ಣನ್ನು ಗುಣಪಡಿಸಿದ್ದಕ್ಕಾಗಿ ಆತ ಕೃತಜ್ಞನಾಗಿದ್ದಾನೆ. ಅವಶ್ಯಕತೆ ಬಿದ್ದಾಗ ಸ್ವಲ್ಪ ಸೈನ್ಯವೂ ನಮಗೆ ನೆರವಾಗುತ್ತದೆ."

ರಂಜಿತಾ ನಿರ್ವಿಣ್ಣಳಾದಳು.

"ಸಿಂಹಳದ ಪ್ರಧಾನಿಯ ಕೊಲೆಯಿಂದ ಅಂತರರಾಷ್ಟ್ರೀಯ ಬಾಂಧವ್ಯ ತಲೆಕೆಳಗಾಗಿದೆ. ದೇಶ ನಿಂದೆಗೆ ತುತ್ತಾಗಿದೆ. ಇದಕ್ಕೆ ನೆರವಾಗುವ ಮುಖ್ಯಮಂತ್ರಿ, ಸೈನ್ಯದಲ್ಲಿಯ ಒಡಕು ಇವುಗಳ ಫಲವಾಗಿ ರಾಜ್ಯವು ಸ್ವತಂತ್ರವೆಂದು ಘೋಷಣೆಯಾದ ಕೂಡಲೇ ಅಂತರ್ಯುದ್ಧ ಪ್ರಾರಂಭವಾಗುತ್ತದೆ. ಅಮೆರಿಕಾ

ಅಥವಾ ಚೈನಾ ನಮ್ಮ ರಾಜ್ಯದಲ್ಲಿ, ಎಂದರೆ ರಾಷ್ಟ್ರದ ಮಧ್ಯದಲ್ಲಿ **ತನ್ನ ವಿಮಾನ** ಗಳನ್ನು ಇಳಿಸುತ್ತದೆ!

ಸಿಂಹಳದ ಪ್ರಧಾನಿ ಕಾಷ್ಮೋರಾಕ್ಕೆ ವಿರೋಧಿಯಾಗಿದ್ದುದರಿಂದಲೇ ಅವನನ್ನು ನಡುರಸ್ತೆಯಲ್ಲಿ ಕೊಲ್ಲಲಾಯಿತು. ಕೊಂದ ಇಬ್ಬರೂ ಕಾಷ್ಮೋರಾಕ್ಕಾಗಿ ತ್ಯಾಗ ಮಾಡುತ್ತಿದ್ದೇವೆ ಎಂಬ ಮೂಢನಂಬಿಕೆಯಿಂದ ತಮ್ಮ ಪ್ರಾಣವನ್ನು ಬಿಟ್ಟಿದ್ದರು.

ಒಮ್ಮೆ ಸಮೀಪಿಸಿದರೆ ಸಾಕು. ಉಸ್ಲೋಕ್ ಓದಿದವರನ್ನು, ಓದದವರನ್ನು ಎಲ್ಲರನ್ನೂ ಮೂರ್ಖರನ್ನಾಗಿಸುತ್ತದೆ. ಜನರಲ್ಲಿ ವ್ಯಾಪಕವಾಗಿರುವ ಮೂಢನಂಬಿಕೆಗಳನ್ನು ಉಸ್ಲೋಕ್ ಕ್ಯಾಷ್ ಮಾಡಿಕೊಳ್ಳುತ್ತಿದೆ. ಅದೆಲ್ಲಾ ಬೇರೆ... ಆದರೆ... ನಿಜವಾಗಿಯೂ ಕ್ಷುದ್ರಶಕ್ತಿಗಳಿವೆಯೇ?

ಇದಕ್ಕೆ ಉತ್ತರವೆಂಬಂತೆ ಬಾಬಾ ಮಾತು ಕೇಳಿಸಿತು:

"ಇಂದಿನ ಅರ್ಧರಾತ್ರಿಗೆ ಸರಿಯಾಗಿ ಅಷ್ಟಾವಕ್ರನ ಜನನವಾಗುತ್ತದೆ. ಸಮಯಕ್ಕೆ ಸರಿಯಾಗಿ ಅಲ್ಲಿದ್ದು ಅವಶ್ಯಕ ಕಾರ್ಯಗಳನ್ನು ನಿರ್ವಹಿಸುವವನು ಅಷ್ಟಾವಕ್ರನ ಬಲಭುಜವಾಗುತ್ತಾನೆ ಎಂದು ಬಿಸ್ತಾದಲ್ಲಿ ದೊರೆತ ತಾಳೆಗರಿಯಲ್ಲಿ ನಿರ್ದೇಶಿತವಾಗಿದೆ. ಆದ್ದರಿಂದ ಮಹಾದ್ರಷ್ಟ ಅಲ್ಲಿಗೆ ಸಮಯಕ್ಕೆ ಸರಿಯಾಗಿ ಸೇರಿಕೊಳ್ಳುತ್ತಾರೆ. ಸಿದ್ಧಾರ್ಥ ಹಿಮಾಲಯದಲ್ಲಿ ಸತ್ತ. ಕೇದಾರ ಗೌರಿ ಈ ಪ್ರಸವದಲ್ಲಿ ಸಾಯುತ್ತಾಳೆ. ಅಷ್ಟಾವಕ್ರನನ್ನು ಇಲ್ಲಿಗೆ ಮಹಾದ್ರಷ್ಟರೇ ಕರೆದುಕೊಂಡು ಬರುತ್ತಾರೆ. ಉಸ್ಲೋಕಿನಲ್ಲಿ ಭವಿಷ್ಯದ ಚಕ್ರವರ್ತಿ ಬೆಳೆಯುತ್ತಾನೆ. ಇದು ಈ ರಾತ್ರಿ ನಡೆಯಲಿರುವ ಕಾರ್ಯಕ್ರಮ."

ಬಾಬಾ ಕಂಠದಲ್ಲಿ ಸಂಪೂರ್ಣ ಬದಲಾವಣೆ ಕಾಣಿಸಿತು.

"...ಇಷ್ಟು ಕಾಲದ ನಮ್ಮ ಪ್ರಯತ್ನ ಫಲಿಸಿದೆ. ಫಲ ಇನ್ನೇನು ದೊರೆಯಲಿದೆ. ಈಗಲೇ ನಾವು ತುಂಬಾ ಜಾಗರೂಕತೆಯಿಂದ ಇರಬೇಕಾದುದು ಅಗತ್ಯ. ಅಷ್ಟಾವಕ್ರನ ಆಗಮನ ವಾರ್ತೆಯು ಶಾಂತಿಪ್ರಿಯರ ಹೃದಯದಲ್ಲಿ ಅಶಾಂತಿಯ ದಾವಾನಲ ಹಬ್ಬಿಸುವುದರ ಮೂಲಕ ಹರಡಬೇಕು, ರುಧಿರ ನದಿಯ ಪ್ರವಾಹ ಹರಿಯಬೇಕು. ಕಂಕಾಳಗಳ ನೃತ್ಯ ನಡೆಯಬೇಕು ಆರ್ತನಾದಗಳ ಮಧ್ಯೆ ವಿಕಟಾಟ್ಟಹಾಸ ಕೇಳಿಸಬೇಕು. ಇದೇ ನಾವು ಅಷ್ಟಾವಕ್ರನಿಗೆ ಹಾಡುವ ಸ್ವಾಗತ ಗೀತೆ..."

ಬಾಬಾ ಹೇಳುತ್ತಲೇ ಇದ್ದ. ಕೇಳುತ್ತಿದ್ದ ಷಾಡೋ ರಕ್ತ ಕುದಿಯುತ್ತಿದೆ. ಅಷ್ಟರಲ್ಲಿ ಮಹಾದ್ರಷ್ಟ ಎದ್ದು ಹೊರಟ. ಆತನೊಂದಿಗೆ ಮತ್ತಿಬ್ಬರು ಎದ್ದು ಹೊರಟರು. ಸಭೆ ಮುಂದುವರಿಯಿತು. ಬಹುಶಃ ಅರ್ಧರಾತ್ರಿಯ ತನಕ ಸಭೆ

ನಡೆಯುತ್ತಲೇ ಇರುತ್ತದೆ-ಎಂದರೆ ಮಹಾದ್ರಷ್ಟ ಅಷ್ಟಾವಕ್ರನನ್ನು ತನ್ನೊಂದಿಗೆ ಕರೆತರುವ ತನಕ ನಡೆಯುತ್ತದೆ.

ಅಷ್ಟಾವಕ್ರನನ್ನು ಕರೆತರುವುದು...ಎಂದರೆ ತನ್ನ ತಂಗಿಯ ಸಾವು ಎಂದು.

ಷಾಡೋ ಕಣ್ಣಲ್ಲಿ ನೀರು ಗೆರೆ ಕಟ್ಟಿತು. ಕ್ಷುದ್ರ ಶಕ್ತಿಗಳು ಇರುವುದೇ ನಿಜವಾಗಿದ್ದರೆ ತನ್ನ ತಂಗಿಗೆ ಸಾವು ಖಾತ್ರಿಯೇ. ಈ ವಿಷ ವಲಯದಿಂದ ತಾನು ತಪ್ಪಿಸಿಕೊಂಡು ಕೇದಾರಗೌರಿಯ ಬಳಿಗೆ ಹೋಗುವುದು ಹೇಗೆ? ಹೋದರೂ ತಾನು ಏನು ಮಾಡಬಲ್ಲೆ?

....ಮಹಾದ್ರಷ್ಟನ ಹಿಂದೆಯೇ ನಡೆಯುವುದು, ಹಾಗೆ ನಡೆಯುತ್ತಾ ಹೊರಬೀಳುವುದು ಸಾಧ್ಯವಿದ್ದರೆ...

ಬಾಗಿಲ ಬಳಿ ಯಾರಾದರೂ ಗುರ್ತಿಸಿದರೆ?

ಯೋಚನೆಯಲ್ಲಿ ಕಾಲಕ್ಷೇಪ ಸರಿಯಲ್ಲ ಎಂದು ಎದ್ದ.

ಅಷ್ಟರಲ್ಲಿ ಒಬ್ಬ ವ್ಯಕ್ತಿ ತೀರಾ ಗಾಬರಿಯಿಂದ ಪ್ರವೇಶಿಸಿದ. ಆಯಾಸದಿಂದ ಏದುಸಿರಿಡುತ್ತಿದ್ದ. ಮುಖವೆಲ್ಲಾ ಸಂತೋಷದಿಂದ ಬೆಳಗುತ್ತಿತ್ತು. ಆತನನ್ನು ಷಾಡೋ ಒಡನೆಯೇ ಗುರ್ತಿಸಿದ—ಪ್ರೊಫೆಸರ್ ಪುಟ್ಟಣ್ಣ.

ಒಳಕ್ಕೆ ಬರುತ್ತಲೇ ಬಾಬಾ ಪಾದಗಳನ್ನು ಮುಟ್ಟಿ ನಮಸ್ಕರಿಸಿದ."ನನ್ನ ಆಸೆ ಪೂರೈಸಿದಿರಿ. ಅದಕ್ಕಾಗಿ ಕೃತಜ್ಞತೆಗಳು" ಎಂದ.

ಕಿರುನಗೆಯಿಂದ ಬಾಬಾ "ಏನಾಯಿತು?" ಎಂದು ಕೇಳಿದ.

"ಈ ರಾತ್ರಿಯೇ ಕೇದಾರಗೌರೀ ಗರ್ಭದಲ್ಲಿ ಅಷ್ಟಾವಕ್ರನು ಜನಿಸಿದ್ದಾನೆ ಎಂದು ಈ ಸಂಜೆ ನೀವು ಜನರ ಮುಂದೆ ಹೇಳಿದ್ದರಿಂದ ಅದು ಕಾಳ್ಗಿಚ್ಚಿನಂತೆ ಹರಡಿ ಊರನ್ನೆಲ್ಲಾ ವ್ಯಾಪಿಸಿದೆ. ಜನರು ರೊಚ್ಚಿಗೆದ್ದಿದ್ದಾರೆ. ಒಂದು ಗಂಟೆಯ ಮೊದಲು ರಂಗಪ್ರಸಾದನ ನರ್ಸಿಂಗ್‌ಹೋಮ್ ಜನರ ಕೈಯಲ್ಲಿದ್ದ ಪಂಜುಗಳಿಂದ ಬೆಂಕಿಗೆ ತುತ್ತಾಯಿತು. ವಿರೋಧಿಸಿದ ನರ್ಸ್, ಕಾಂಪೌಂಡರನ್ನು ಕೊಂದರು. ಫರ್ನಿಚರ್ ಕೂಡ ಭಸ್ಮವಾಯಿತು...."

ಅದೇ ಕಿರುನಗೆಯಲ್ಲಿ ಬಾಬಾ "ಎಲ್ಲಾ ಅವನ ಲೀಲೆ....ಕೇದಾರಗೌರಿ ಎಲ್ಲಿ?" ಎಂದು ಕೇಳಿದ.

ಪುಟ್ಟಣ್ಣ ಉತ್ತರಿಸುತ್ತಿದ್ದ—ಷಾಡೋ ಮುಷ್ಠಿ ಬಿಗಿಯುತ್ತಿತ್ತು.

* * * *

ಆ ಘಟನೆ ಅನಿರೀಕ್ಷಿತವಾಗಿ ನಡೆಯಿತು.

ಆಗ ತಾನೇ ಕೇದಾರಗೌರಿ ಸ್ವಲ್ಪ ಕಣ್ಮುಚ್ಚಿದ್ದಳು.

ಇದ್ದಕ್ಕಿದ್ದಂತೆಯೇ ಜನಜಂಗುಳಿಯ ಕಲರವ. ಕಣ್ತೆರೆದು ಕಿಟಕಿಯಿಂದ

ಹೊರಕ್ಕೆ ನೋಡಿದಳು. ಅಪಾರ ಜನಸ್ತೋಮ. ಮೈ ಗಡಗಡನೆ ನಡುಗಿತು. ಎಲ್ಲರ ಕೈಯಲ್ಲೂ ಪಂಜುಗಳಿವೆ. ದೊಣ್ಣೆಗಳಿವೆ. ಯಾರೋ 'ಬಾಬಾಕಿ ಜೈ' ಎನ್ನುತ್ತಿದ್ದಾರೆ. ಮತ್ಯಾರೋ ಆಂಜನೇಯಸ್ವಾಮಿ ದಂಡಕ ಹೇಳುತ್ತಿದ್ದಾರೆ. ಕೆಲವರು ಮೈಮೇಲೆ ಬಂದವರಂತೆ ತೂಗುತ್ತಿದ್ದಾರೆ. ಮೊದಲು ಇದೇನೆಂದು ಅರ್ಥವಾಗಲಿಲ್ಲ. ಎದ್ದು ಹೊರಬಂದಳು. ಅವಳು ಜನಕ್ಕೆ ಕಾಣಿಸುತ್ತಿರಲಿಲ್ಲ. ಆದರೆ ಕಾಂಪೌಂಡರ್ ಮಾತು ಅಸ್ಪಷ್ಟವಾಗಿ ಕೇಳಿಸುತ್ತಿತ್ತು. ಅವರನ್ನು ತಡೆಯುತ್ತಾ ಆತ ಏನೋ ಹೇಳುತ್ತಿದ್ದಾನೆ "ಸಾಧ್ಯವಿಲ್ಲ....ಅಷ್ಟಾವಕ್ರನ ಜನ್ಮಕ್ಕೆ ನಾವು ಅವಕಾಶ ಕೊಡುವುದಿಲ್ಲ...." ಎಂದು ಯಾರೋ ಅರಚುತ್ತಿದ್ದಾನೆ.

ಈ ಮಾತಿನಿಂದ ವಿಷಯ ಪೂರ್ಣವಾಗಿ ಅರ್ಥವಾಯಿತು.

"ಈಗ ನಾನೇನು ಮಾಡಬೇಕು?" ಕೌಂಪೌಂಡರ್ ಕೇಳುತ್ತಿದ್ದಾನೆ.

"ಗೌರೀನ ನಮಗೊಪ್ಪಿಸಿ..."

"ಡಾಕ್ಟರ್ ಇಲ್ಲ"

"ನಮಗೆ ಡಾಕ್ಟರ್ ಬೇಕಾಗಿಲ್ಲ. ಮರ್‍ಯಾದೆಯಿಂದ ಗೌರೀನ ನಮಗೆ ಒಪ್ಪಿಸು" ಎಂದು ಕೇಳಿದ ಒಬ್ಬ. ಅಷ್ಟರಲ್ಲಿ ಮತ್ತೊಬ್ಬ "ಇವನ ಜೊತೆ ನಮಗ್ಯಾಕೆ ಮಾತು ತಳ್ಳು ಪಕ್ಕಕ್ಕೆ ಎಂದ.

ಕೇದಾರಗೌರಿ ತಲೆಬಗ್ಗಿಸಿಯೇ ಆ ಜನರನ್ನು ಪರೀಕ್ಷಾ ದೃಷ್ಟಿಯಿಂದ ನೋಡಿದಳು. ಮಾರಿ ಹಬ್ಬದ ಜಾತ್ರೆಯಂತಿದೆ. ಯಾರೋ ಗಂಗಮ್ಮನ ವಿಗ್ರಹವನ್ನು ಎತ್ತಿಕೊಂಡು ಆವೇಶ ಬಂದವನಂತೆ ಕುಣಿಯುತ್ತಿದ್ದ. ಇನ್ನೊಬ್ಬ ಬೇವಿನಸೊಪ್ಪನ್ನು ಗಾಳಿಯಲ್ಲಿ ತಿರುವುತ್ತಿದ್ದ. ಮತ್ತೆ ಕೆಲವು ಭಕ್ತರು ಸ್ನಾನ ಮಾಡಿ ಒದ್ದೆಯ ಬಟ್ಟೆಯ ಮಡಿಯಲ್ಲಿ ಬಂದಿದ್ದಾರೆ...

"ಯಾಕೆ? ಆಕೆಯನ್ನೇನು ಮಾಡ್ತೀರಿ?" ಕೌಂಪೌಂಡರ್ ಕಂಠದಲ್ಲಿ ಈ ಬಾರಿ ಪೂರ್ಣವಾಗಿ ಭಯವಿತ್ತು. ಅಷ್ಟು ಮಂದಿಯನ್ನು ನೋಡಿದ ಬೇರೆ ಯಾರಾದರೂ ಮಾತೂ ಆಡದೆ ದಾರಿ ಬಿಡುತ್ತಿದ್ದರು. ಕಾಂಪೌಂಡರ್ ಯುವಕ ಧೈರ್ಯಶಾಲಿ.

"ಏನಾದ್ರೂ ಮಾಡ್ಕೊಳ್ತೀನಿ ನಿನಗ್ಯಾಕಯ್ಯಾ? ಮರ್ಯಾದೆಯಿಂದ ದಾರಿ ಬಿಡ್ತೀಯಾ ಇಲ್ವಾ?" ಎನ್ನುತ್ತಾ ಒಬ್ಬ ಮುಂದೆ ಬಂದ.

"ಅವನೇನಾದ್ರೂ ಹುಟ್ಟಿದ್ರೆ ಪ್ರಪಂಚಕ್ಕೇ ಕೇಡು. ಇನ್ನು ಇಲ್ಲಿ ಯಾಕೆ ಅಂತ ಕೇಳ್ತಾ ನಿಂತವ್ನೆ."

"ಉಸಿರಾಡೋಕೂ ಟೇಮಿಲ್ಲದೆ ಮಳೆ ಜಡಿತಾಯಿದ್ರೆ ನಂಗೆ ಅನುಮಾನವಾಯ್ತು. ಇನ್ನು ಪ್ರಳಯದ ಮೊದಲಾಯ್ತು..."

"ಈರಬ್ರಹ್ಮೇಂದ್ರಸ್ವಾಮಿ ಕಾಲಜ್ಞಾನದಾಗೆ ಇದೆಲ್ಲಾ ಸುಮ್ನೆ ಹೇಳಿಲ್ಲ! ದೆವ್ವಾನೇ ದೊರೆಯಾಗ್ತೈತೆ ಅಂತ ಇರೋದು ಗೊತ್ತಿಲ್ವಾ ನಿಂಗೆ?"

ಇದೆಲ್ಲಾ ಕೇಳುತ್ತಿದ್ದ ಕೇದಾರಗೌರಿಗೆ ಕೋಪ ಬರಲಿಲ್ಲ. ಆ ಜನರನ್ನು ನೋಡಿ ಅಯ್ಯೋ ಎನಿಸಿತ್ತು. ಇವರು ಹೇಗೆ ಬದಲಾಗುತ್ತಾರೆ. ಗರ್ಭದಲ್ಲಿ ಹಾಯಾಗಿ ನಿದ್ರಿಸುತ್ತಿರುವ ಆ ಎಳೆ ಕಂದನ ಬಗ್ಗೆ, ಇನ್ನೂ ಜಗತ್ತಿನ ಬೆಳಕು ನೋಡದವನ ಬಗ್ಗೆ, ಸರಿ–ತಪ್ಪುಗಳೆಂದೂ ಗೊತ್ತಿಲ್ಲದವನ ಬಗ್ಗೆ ವಿರೋಧವಾಗಿ ರುವ ಇವರು ತಮ್ಮ ಅಜ್ಞಾನದ ಮುಸುಕಿನಿಂದ ಯಾವಾಗ ಹೊರಬರುತ್ತಾರೆ? ಇವರನ್ನು ಯಾವ ಕ್ರಾಂತಿಕಾರಿ, ಯಾವ ಪ್ರಜಾಸೇವಕ, ಯಾವ 'ವಾದಿ' ಬದಲಿಸಬಲ್ಲ?

ನೆರೆಮನೆಯಾಕೆಯ ಗಂಡ ಸತ್ತರೆ ತಮ್ಮ ಕೊರಳಿಗೆ ಅರಿಸಿನಕೊಂಬು ಬಿಗಿದುಕೊಳ್ಳುವ ಹೆಂಗಸರು, ಹಲ್ಲಿ ಮೇಲೆ ಬಿದ್ದರೆ ಭಯಗೊಳ್ಳುವವರು, ಸೀನಿಗೇ ಭಯಗೊಳ್ಳುವವರು ಹೇಗೆ ಬದಲಾಗುತ್ತಾರೆ? ಯಾವುದಾದರೂ ಅಣುಬಾಂಬೇ ಇವರನ್ನು ನಾಶಗೊಳಿಸಬೇಕು. ನಂತರ ಹೊಸದಾಗಿ ಹುಟ್ಟಿ ದವರೇ ಇವುಗಳಿಂದ ದೂರವಾಗಿರುತ್ತಾರೋ ಏನೋ...?

ಗಲಾಟೆ ಹೆಚ್ಚಾಯಿತು. ಕಾಂಪೌಂಡರನ್ನು ಯಾರೋ ಹಿಂದಕ್ಕೆ ತಳ್ಳಿ ದರು. ಆತ ಹಿಂದಕ್ಕೆ ಬೀಳುತ್ತಲೇ "ಬನ್ರೋ...ಬನ್ನಿ..." ಎನ್ನುತ್ತಾ ಜನ ಮುನ್ನುಗ್ಗುತ್ತಿದ್ದಾರೆ. "ಎಲ್ಲಿದ್ರೂ ಹೊರಕ್ಕೆ ಎಳ್ಕೊಂಡು ಬನ್ನಿ" ಎಂದು ಯಾರೋ ಅರಚುತ್ತಿದ್ದಾರೆ. ಇನ್ನೊಬ್ಬ "ಮಗು ಹುಟ್ಟೋಕ್ಮೊದ್ಲೇ ಅವಳನ್ನ ಸಾಯ್ಸಿ...." ಸಲಹೆ ನೀಡುತ್ತಿದ್ದ.

ನಾಗರಿಕತೆಯ ಮನುಷ್ಯನ ಮೇಲೆ ಯಾವ ರೀತಿಯ ಪ್ರಭಾವವೂ ಮಾಡಿಯೇ ಇಲ್ಲವೇನೋ ಎನಿಸುತ್ತಿತ್ತು ಗೌರಿಗೆ. ಸಾಕ್ರಟೀಸನಿಗೆ ವಿಷ ಕುಡಿಸಿ ದವರು, ಕೊಪರ್ನಿಕಸ್ಸನ್ನು ಮರಣಕ್ಕೆ ತುತ್ತು ಮಾಡಿದವರು ಇನ್ನೂ ನಮ್ಮ ಮಧ್ಯೆಯೇ ಇದ್ದಾರಲ್ಲಾ ಎಂದು ಅರಚಿಕೊಂಡಳು.

ಅಪ್ರಯತ್ನವಾಗಿ ಅವಳ ಕೈ ಹೊಟ್ಟೆಯ ಮೇಲೆ ಹೋಯಿತು. ಹುಟ್ಟುವು ದಕ್ಕೂ ಮೊದಲೇ ಇಷ್ಟೊಂದು ವಿರೋಧವನ್ನು ಎದುರಿಸುತ್ತಿರುವ ಈ ಮಗು ಭವಿಷ್ಯದಲ್ಲಿ ಎಷ್ಟು ಕಷ್ಟಗಳನ್ನು ಎದುರಿಸಬೇಕಾಗಿದೆಯೋ? ಕೃಷ್ಣಾಪುರದ ಗಾಳಿಯಲ್ಲೋ ನೀರಿನಲ್ಲೋ ಏನಾದರೂ ಅಪಸವ್ಯವಿದ್ದು ಸ್ವಲ್ಪ ವಿಕೃತವಾಗಿ ಹುಟ್ಟಿದರೆ ಇನ್ನೂ...

ಮುಂದೆ ಯೋಚಿಸಲಾರದಾದಳು. ಹೊರಗೆ ಜನಸಂದಣಿ ಹೆಚ್ಚಿತು. ನರ್ಸ್ ಭಯದಿಂದ ಕಿರುಚುತ್ತಿದ್ದಳು. ಕಾಂಪೌಂಡರ್ ನರಳುತ್ತಿದ್ದಾನೆ.

ದುರ್ಬಲವಾದ ವನ್ಯಮೃಗವನ್ನು ಹಿಂಬಾಲಿಸುವಂತೆ ಜನ ಬರುತ್ತಿದ್ದಾರೆ.

ಮಗುವನ್ನು ಕಾಪಾಡಬೇಕು.

ಹೇಗಾದರೂ ತನ್ನ ಮಗುವನ್ನು ರಕ್ಷಿಸಿಕೊಳ್ಳಲೇಬೇಕು! ಅವನು ವಿಕೃತರೂಪನಾಗಿರಲಿ, ಅಷ್ಟಾವಕ್ರನೇ ಆಗಿರಲಿ, ತನ್ನ ಮರಣಕ್ಕೆ ಕಾರಣನೇ ಆಗಲಿ, ಆದರೂ ಅವನನ್ನು ರಕ್ಷಿಸಿಕೊಳ್ಳಲೇಬೇಕು.

ಹಿಂಬಾಗಿಲನ್ನು ತೆರೆದಳು, ಹೊರಗೆಲ್ಲಾ ಕಗ್ಗತ್ತಲೆ. ಹನಿಯೂ ಉದುರುತ್ತಿದೆ. ಆಕಾಶದಲ್ಲೆಲ್ಲಾ ಮೋಡಗಳು.

ಕತ್ತಲಲ್ಲಿಯೇ ಹೆಜ್ಜೆ ಹಾಕಿದಳು. ದೂರದಲ್ಲಿ ಕೋಲಾಹಲ ಕೇಳಿಸುತ್ತಿದೆ. ಕೇದಾರಗೌರಿ ಸಾಗಿ ಹೋಗುತ್ತಿದ್ದಾಳೆ. ತುಂಬಿದ ಬಸಿರನ್ನು, ಆಗುತ್ತಿದ್ದ ಆಯಾಸವನ್ನೂ ಗಮನಿಸಲಿಲ್ಲ. ಹಿಂದೆ ದೊಡ್ಡದಾದ ಉರಿ. ಗೌರಿ ನಿಂತಳು, ನರ್ಸಿಂಗ್‌ಹೋಂ ಬೆಂಕಿಗೆ ತುತ್ತಾಗಿದೆ. ಇಷ್ಟು ಕಾಲ ಯಾವುದು ಬಡವರಿಗೆ, ಶೋಷಿತರಿಗೆ ತಾಣವಾಗಿ ಅವರ ಬೇನೆಗಳಿಗೆ ನಿವಾರಣಾ ಕೇಂದ್ರವಾಗಿತ್ತೋ ಅದು ಉರಿದು ಹೋಗುತ್ತಿದೆ.

ಗೌರಿಗೆ ಕಣ್ಣೀರು ನಗು ಎರಡೂ ಬಂತು.

ಈಗ ಯಾವುದಕ್ಕೂ ಸೂಕ್ತ ಸಮಯವಲ್ಲ. ಆಕೆ ಮುಂದಡಿ ಇರಿಸಿದಳು. ಯಾರ ಮನೆಗೆಂದು ಹೋಗುವುದು? ಯಾರನ್ನು ನಂಬಲು ಸಾಧ್ಯ? ಈಗಾಗಲೇ ರೊಚ್ಚಿಗೆದ್ದವರಿಗೆ ಸ್ವಲ್ಪ ಸುಳಿವು ದೊರೆತರೂ ತನಗೆ ಆಶ್ರಯ ನೀಡುವವರೂ ಇದೇ ಹಿಂಸೆ ಅನುಭವಿಸಬೇಕಾಗುತ್ತದೆ.

ಮಳೆ ಸ್ವಲ್ಪ ಬಲಗೊಂಡಿತು.

ಕೇದಾರಗೌರಿ ನಡೆಯುತ್ತಲೇ ಇದ್ದಳು.

ಸುಮಾರು ಅರ್ಧ ಗಂಟೆಯ ಕಾಲ ನಡೆದ ನಂತರ ಬಳಲಿಕೆಯಿಂದ ನಿಂತಳು. ತುಂಬು ಗರ್ಭಿಣಿ, ಕತ್ತಲೆ, ಮಳೆ ಇನ್ನೂ ಹೆಚ್ಚುವ ಸೂಚನೆ ಕೊಡುತ್ತಿದೆ. ದೂರದಲ್ಲಿ ರಾಕ್ಷಸರಾಗಿರುವ ಮನುಷ್ಯರು.

ಆಯಾಸದಿಂದ ಬುಸುಗುಟ್ಟುತ್ತಾ ಸುತ್ತಲೂ ನೋಡಿದಳು–ಅರ್ಧ ಸುಟ್ಟಿರುವ ಚಿತೆ. ದೂರದಲ್ಲಿ ಉರಿ ಕಾಣಿಸುತ್ತಿದೆ. ಅವಳು ಸ್ಮಶಾನದ ಮಧ್ಯೆ ಇದ್ದಾಳೆ! ಅವಳಿಗೇನೂ ಭಯವಾಗಲಿಲ್ಲ. ಬದುಕಿದ್ದೂ ಸತ್ತಿರುವಂತಿರುವ ಮಾನವತೆಯನ್ನು ಎಂದೋ ಕಳೆದುಕೊಂಡಿರುವವರ ಮಧ್ಯೆ ಇರುವುದಕ್ಕಿಂತಲೂ ಬದುಕೇ ಇಲ್ಲದೆ ಸತ್ತವರು ಹೆಚ್ಚು ಒಳ್ಳೆಯವರಾಗಿ ಕಾಣಿಸಿದರು. ಬೆಳಗಾಗುವ ತನಕ ಅಲ್ಲಿಯೇ ಇರುವುದು ಸರಿ ಎಂದು ತೀರ್ಮಾನಿಸಿದಳು.

ಆದರೆ ಆದುವರೆವಿಗೂ ಅಲ್ಲಿಯೇ ಇರುವುದು ತನಗೆ ಇಷ್ಟವಿಲ್ಲ ಎಂದು ಗರ್ಭದಲ್ಲಿಯ ಶಿಶು ಚಲಿಸಿತು. ನೋವಿಗೆ ಕೆಳಕ್ಕೆ ಬಗ್ಗುತ್ತಾ ನೆರವಿಗೆ ಸಿಕ್ಕಿದ

ಕಲ್ಲನ್ನು ಹಿಡಿದಳು. ಮಿಂಚು. ಆ ಬೆಳಕಿನಲ್ಲಿ ತಾನಿದ್ದ ಪ್ರದೇಶ ನೋಡಿದಳು. ತಾನು ಹಿಡಿದಿದ್ದು ಸಮಾಧಿಯೊಂದರ ಬಳಿ ಇದ್ದ ಕಲ್ಲು. ಅದರ ಮೇಲೊಂದು ನಾಯಿಯನ್ನು ಬರೆದಿದ್ದಾರೆ. ಮೈ ಗಡಗಡ ನಡುಗಿತು. ತನ್ನ ಕೈಯನ್ನು ಹಿಂದಕ್ಕೆ ಸೆಳೆದುಕೊಳ್ಳಬಯಸಿದಳು.

ತಾನು ಹೊರಗೆ ಬರುವ ಸಮಯ ಹತ್ತಿರಕ್ಕೆ ಬಂತೆಂದು ಶಿಶು ಮತ್ತೊಮ್ಮೆ ಚಲಿಸಿತು. ಹೆರಿಗೆಯ ನೋವು ಪ್ರಾರಂಭವಾಗಿತ್ತು. ಗೌರಿ ಸಮಾಧಿಗಳ ಮಧ್ಯೆ ಕುಸಿದಳು. ಅವಳ ತೂಕಕ್ಕೆ ಕೆಳಗಿದ್ದ ಮೂಳೆಯೊಂದು ಮುರಿದ ಸದ್ದು...ಆಕಾಶವನ್ನು ಸೀಳಿಕೊಂಡು ಮೋಡವನ್ನು ಕರಗಿಸಿಕೊಂಡು ಬಂದ ಮಳೆಯ ಹನಿ ಅವಳ ಮೇಲೆ ಬಿತ್ತು. ಬರಲಿರುವ ಪ್ರಳಯವನ್ನು ಸೂಚಿಸುವಂತಿತ್ತು ಆ ರಾತ್ರಿ.

## ೪೦

"ಬಿಸ್ತಾ ಗ್ರಾಮದಲ್ಲಿ ವಿಷಾಚಿ ಎಂಬ ಮಹಾಮಾಂತ್ರಿಕ ಹಿಂದಿನ ಕಾಲದಲ್ಲಿದ್ದ. ಆತನ ಮನೆಯ ಅಂಗಳವನ್ನು ಗುರ್ತಿಸಿ ನಾವು ಅಲ್ಲಿ ಅಗೆತ ನಡೆಸಿದೆವು. ಅಲ್ಲಿಯೇ ಅಷ್ಟಾವಕ್ರನ ಆಗಮನಕ್ಕೆ ಬೇಕಾಗುವ ಐದು ಸೂತ್ರಗಳು ನಮಗೆ ಲಭಿಸಿದ್ದು. ಅವನ್ನು ಓದಿದ ನಂತರ ಕೈತಪ್ಪಿ ನೀರಿಗೆ ಬಿದ್ದಂತೆ ನಟಿಸಿ ಅದನ್ನು ನಾನೇ ನಾಶಗೊಳಿಸಿದೆ. ಅಷ್ಟಾವಕ್ರನ ಬಲಭುಜ ನಾನೇ ಆಗಬೇಕೆಂಬ ಸ್ವಾರ್ಥಕ್ಕಾಗಿ ನಡೆಸಿದ ಕಾರ್ಯ ಇದು. ಆದ್ದರಿಂದ ಆ ಐದೂ ಸೂತ್ರಗಳು ನನಗೊಬ್ಬನಿಗೇ ಗೊತ್ತು. ಆ ಸೂತ್ರಗಳು ಹೀಗಿವೆ:

೧. ಮದುವೆಯ ಶುಭ ಮುಹೂರ್ತವನ್ನು ನೀಚಗಣಾಧಿಪತಿಗಳು ಉಚ್ಚ ದೆಸೆಯಲ್ಲಿರುವ ಕಾಲಕ್ಕೆ ಬದಲಿಸುವುದು (ನಾನೇ ಲಗ್ನಪತ್ರಿಕೆಯಲ್ಲಿ ಈ ಬದಲಾವಣೆ ಮಾಡಿದ್ದೇನೆ).

೨. ಮಂಗಳಸೂತ್ರಧಾರಣೆಗೆ ಮೊದಲು ಅದಕ್ಕೆ ಮನುಷ್ಯನ ರಕ್ತ ಸೋಕುವಂತೆ ಮಾಡುವುದು. (ಇದನ್ನು ನೀನೆ ನೋಡಿದ್ದೀ).

೩. ದಂಪತಿಗಳ ಮೊದಲ ಕೂಟ ಅಮವಾಸ್ಯೆಯ ರಾತ್ರಿ ಬಯಲಿನಲ್ಲಿ ನಡೆಯಬೇಕು. (ಇದನ್ನು ಏರ್ಪಡಿಸಿದವನೂ ನಾನೇ. ಬೆಕ್ಕನ್ನು ಕೊಂದು ಹಾಸಿಗೆ ಮೇಲೆ ಹಾಕಿ ನಿಮ್ಮ ಪ್ರಥಮ ರಾತ್ರಿಗೆ ಅಡ್ಡಿಯುಂಟು ಮಾಡಿದೆ)

೪. ...............

೫. ಮೇಲಣ ಮೂರೂ ಕಾರ್ಯಗಳನ್ನು ಯಾರು ಬಳಿ ಇದ್ದು ನಿರ್ವಹಿಸುತ್ತಾರೋ ಅವರು ಅಷ್ಟಾವಕ್ರನ ಬಲಭುಜನಾಗುತ್ತಾರೆ.

“ಸಿದ್ಧಾರ್ಥ, ಅಷ್ಟಾವಕ್ರನ ಹುಟ್ಟು ಸ್ಮಶಾನದಲ್ಲಿ ಸಮಾಧಿಗಳ ಮಧ್ಯೆ ನಡೆಯುತ್ತದೆಯಂತೆ. ತಾಯಿಯು ಗರ್ಭವನ್ನು ಸೀಳಿಕೊಂಡು ಬರುವುದರಿಂದ ಆಕೆಯ ಮರಣಕ್ಕೆ ಅವನು ಕಾರಣನಾಗುತ್ತಾನೆ. ಆಗಲೇ ತಂದೆಯೂ ಸಾಯುತ್ತಾನಂತೆ. ಈ ಬಗ್ಗೆ ಮಹಾದ್ರಷ್ಟ ಉಸ್ನೋಕ್ ಸದಸ್ಯರಿಗೆ ಎರಡುಬಾರಿ ಸುಳ್ಳುಹೇಳಿದ್ದ. ಮೊದಲು ಹೇಳಿದ್ದು ಅಷ್ಟಾವಕ್ರನು ಹುಟ್ಟುತ್ತಲೇ ಜನರು ರೊಚ್ಚಿಗೆದ್ದು ನಿನ್ನನ್ನು ಕೊಲ್ಲುತ್ತಾರೆಎಂದು. ಅದೇ ಕಾರಣವೆಂದೂ ಹೇಳಿದ್ದ. ಎರಡನೆಯ ಬಾರಿ ಇಲ್ಲಿ ಅಷ್ಟಾನಕ್ರನು ಹುಟ್ಟುತ್ತಿದ್ದಂತೆಯೇ ಹಿಮಾಲಯದ ಮೇಲೆ ನಾನು ನಿನ್ನನ್ನು ಕೊಲ್ಲುತ್ತೇನೆ ಎಂದು ಹೇಳಿದ. ಈ ಎರಡೂ ತಪ್ಪೇ. ಮಹಾದ್ರಷ್ಟ ತನ್ನನ್ನು ಉಳಿಸಿಕೊಳ್ಳಲು ನನ್ನನ್ನು ಕೊಲ್ಲಲು ಸೃಷ್ಟಿಸಿದ ಸುಳ್ಳು.

“ಸಿದ್ಧಾರ್ಥ, ಅಷ್ಟಾವಕ್ರನು ಹುಟ್ಟುವ ವೇಳೆಗೆ ತಂದೆಯೂ ಅಲ್ಲಿಯೇ ಇರುತ್ತಾನೆ ಇದು ಸತ್ಯ. ಸಮಾಧಿಗಳಿಂದ ಎದ್ದ ಪ್ರೇತಗಣಗಳು ತಮ್ಮ ಸಂತೋಷಾರ್ಥವಾಗಿ ತಂದೆಯನ್ನು ಕಚ್ಚಿ ತಿನ್ನುತ್ತವೆ ಎಂದೇ ಮಂತ್ರಶಾಸ್ತ್ರದಲ್ಲಿ ವಿವರಿಸಲಾಗಿದೆ. ನಿನ್ನ ಹೆಂಡತಿಯನ್ನು ರಕ್ಷಿಸಕೊಳ್ಳಬೇಕೆಂದಿದ್ದರೆ ನೀನು ಅಲ್ಲಿಗೇ ಹೋಗಬೇಕು. ಅದೃಶ್ಯರೂಪವಾದ ಪ್ರಮಥಗಳೊಂದಿಗೆ ನೀನು ಹೋರಾಡಬೇಕು. ಶಿಶುವನ್ನು ಕಾಷ್ಮೋರಾ ಆವರಿಸದಂತೆ ಎಚ್ಚರ ವಹಿಸಬೇಕು. ಈ ಹೋರಾಟದಲ್ಲಿ ಜೀವಂತನಾಗಿ ನೀನು ಉಳಿಯುವುದೇ ದೊಡ್ಡದು. ನಿನ್ನ ಹೆಂಡತಿಯನ್ನೇ ಬಿಡುತ್ತೀಯೋ ಅಥವಾ ನೀನೂ ಅಪಾಯದ ಬಾಯಿಗೆ ಸಿಕ್ಕಿಕೊಂಡು ಹೋರಾಡುತ್ತೀಯೋ ನೀನೇ ನಿರ್ಧರಿಸು. ಕಾಷ್ಮೋರಾ ಆಗಮನವನ್ನು ವಿರೋಧಿಸುವವನನ್ನು ರಾಕ್ಷಸ ಗಣಗಳು ಅಷ್ಟು ಸುಲಭವಾಗಿ ಬಿಡುವುದಿಲ್ಲ. ಆದರೂ ಕೇದಾರಗೌರಿಗಾಗಿ ನೀನು ಏನಾದರೂ ಮಾಡಲು ಸಿದ್ಧವಾಗಿರುತ್ತೀಯೇ ಎಂಬುದು ನನಗೆ ಗೊತ್ತು. ಆದ್ದರಿಂದ ಇದನ್ನು ನಿಲ್ಲಿಸಬಹುದಾದ ಮಾರ್ಗವನ್ನು ಹೇಳುತ್ತೇನೆ. ನಿನಗೆ, ನಿನ್ನ ಕುಟುಂಬಕ್ಕೆ ನಾನು ಮಾಡಿರುವ ಅಪಾರ ಅನ್ಯಾಯಕ್ಕಾಗಿ ಈ ನೆರವನ್ನಾದರೂ ನಾನು ಮಾಡುವ ಅವಕಾಶವನ್ನು ಕೊಡು.

“ಬಿಸ್ತಾದಲ್ಲಿ ನಮಗೆ ದೊರೆತಿದ್ದ ತಾಳೆಗರಿಯಲ್ಲಿದ್ದ ಅಂಶಗಳನ್ನು ಈ ಮೊದಲೇ ತಿಳಿಸಿದ್ದೇನೆ. ಅದರಲ್ಲಿ ನಾಲ್ಕನೆಯದು ತುಂಬಾ ಚಿಕ್ಕ ವಾಕ್ಯ. ಅದಕ್ಕೆ ಆಗ ಅಷ್ಟು ಪ್ರಾಮುಖ್ಯ ನೀಡಲಿಲ್ಲ. ಅದು ನಮಗೆ ಅಷ್ಟು ಪ್ರಧಾನವಾದದ್ದು ಆಗಿರಲಿಲ್ಲ. ಆ ನಾಲ್ಕನೆಯ ಅಂಶ ಇದು—

೪. ಕಾಷ್ಮೋರಾ ಭಯಪಡುವುದು ಸೂಫೀ ಮಂತ್ರಾಕ್ಷರಗಳಿಗೆ ಮಾತ್ರವೇ. ಇವನ್ನು ಬರೆಯುವುದಿಲ್ಲ. ಇವಕ್ಕೆ ಬರೆಯುವ ಫಲಕವಾಗಲಿ, ಲೇಖನಿಯಾಗಲಿ ಇರುವುದಿಲ್ಲ.

"ಮೊದಲು ಓದಿದಾಗ ಮರೆತು ಸುಮ್ಮನಾದೆನಾದರೂ ನಂತರದಲ್ಲಿ 'ಸೂಫೀ' ಎಂದರೇನೋ ತಿಳಿದುಕೊಳ್ಳಬೇಕೆನಿಸಿತು. ಚಾರ್ಮಿನಾರ್ ಹೊರಗೆ ಇರುವ ಕತ್ತಲೆಯ ಮಾರುಕಟ್ಟೆಯ ಬಳಿ ಇರುವ ಕೆಲವು ರಸ್ತೆಗಳಲ್ಲಿ ಸಾಧಾರಣ ಮನುಷ್ಯರಾರೂ ಪ್ರವೇಶಿಸುವುದು ಸಾಧ್ಯವೇ ಇಲ್ಲ. ಮೌನ, ಕತ್ತಲೆ, ದುರ್ಗಂಧ ತುಂಬಿರುವ ಆ ಇಕ್ಕಟ್ಟಾದ ಗಲ್ಲಿಗಳಲ್ಲಿ ಹೊಸಬ ಪ್ರವೇಶಿಸಿದರೆ ಮೃತ್ಯು ಮುಖವನ್ನು ಹೊಕ್ಕಂತೆಯೇ, ಅದರ ಆಚೆ 'ಬಾರ್‌ಕೋಸ್' ಇದೆ. ಷೇಖ್‌ಗಳು, ಪರ್ಷಿಯಾದವರು, ಅರಬ್ಬಿಯವರು ಇಲ್ಲಿ ಕಾಣಿಸುತ್ತಾರೆ. ಅಲ್ಲಿರುವ ದರ್ಗಾದ ಅಂಗಳದಲ್ಲಿ ಒಬ್ಬ ವೃದ್ಧೆ ಇದ್ದಾಳೆ. ಭಿಕ್ಷುಕಿಯಂತೆ ಕಾಣಿಸುವ ಆಕೆ 'ಮುರ್ಷಿದ್'. ಹಾಗೆಂದರೆ ಗುರು. ಸ್ತ್ರೀಯರಿಗೆ ನಿಷೇಧಿಸಲಾಗಿರುವ 'ಮುರ್ಷಿದಾಯರೀ' ಸ್ಥಾನವನ್ನು ಜಗತ್ತಿನಲ್ಲೆಲ್ಲಾ ಆಕೆ ಒಬ್ಬಳಿಗೆ ಮಾತ್ರವೇ ಕೊಡಲಾಗಿದೆ. ಎಂದು ಹೇಳಲಾಗುತ್ತದೆ. ಆಕೆಯಿಂದ ಬರಕಾ (ಆಶೀರ್ವಾದ) ಹೊಂದು, ಮಂತ್ರಾಕ್ಷತೆಗಳನ್ನು ಪಡೆ.

"ಸೂಫೀ ಮುರ್ಷಿದಳನ್ನು ನಾನು ನೋಡಿದ್ದೇನೆ. ಅಷ್ಟಾವಕ್ರನ ಜನ್ಮವನ್ನು ನಿರೋಧಿಸಬಲ್ಲ ಯಾವ ಅವಕಾಶವೂ ಇರಬಾರದೆಂದು ಆಕೆಯನ್ನು ಕೊಲ್ಲಬೇಕೆಂದೇ ಹೋಗಿದ್ದೆ. ಆದರೆ ಅಲ್ಲಿ ಭಿಕ್ಷುಕರಂತೆ ಕಾಣಿಸುವವರೂ ಅತ್ಯಂತ ಪ್ರತಿಭಾ ಸಂಪನ್ನರಾದ ಆಷಿಕ್ (ಭಕ್ತರು), ಮುಹೀಬ್‌ಗಳು, ಬಾಬಾಗಳು, ಖಾಲಿಫಾಗಳು (ಕಾಲಜ್ಞಾನಿಗಳು) ಆಗಿರುವುದರಿಂದ ನನ್ನ ಪ್ರಾಣಕ್ಕೆ ಸಂಚಕಾರವೆಂದು ಅರಿತು ಅಲ್ಲಿಂದ ಹಿಂತಿರುಗಿದೆ. ಆಕೆಯನ್ನು ನೀನು ಭೇಟಿಯಾಗು ನಂತರ ನಿನ್ನ ಅದೃಷ್ಟ–ಗೌರಿಯ ಅದೃಷ್ಟ...."

ಮೈ ಕುಲುಕುತ್ತಿದೆ. ತಲೆಯು ಗಾಡಿಯ ಹಿಂದಿನ ಅಂಚಿಗೆ ಬಡಿದುಕೊಳ್ಳುತ್ತಿದೆ. ಹಳ್ಳದಲ್ಲಿ ಇಳಿದಾಗಲೆಲ್ಲಾ ಗಾಡಿ ಹಾರುತ್ತದೆ. ಸಿದ್ಧಾರ್ಥನ ಮೈಮೇಲೆ ಹೆಚ್ಚು ಬಟ್ಟೆಗಳಿಲ್ಲ. ಅದರ ಬಗ್ಗೆ ಅವನ ಗಮನವೂ ಇಲ್ಲ. ರಾಕೇಶನ ಪತ್ರದ ಪ್ರತಿ ವಾಕ್ಯವೂ ಅವನಿಗೆ ಕಂಠಸ್ಥವಾಗಿತ್ತು. ಶಿಖರವನ್ನೇರುವಾಗ ಎಷ್ಟೋ ಬಾರಿ ಓದಿದ್ದ. ಇಳಿಯುತ್ತಾ ಅತ್ತಕಡೆಯ ರಸ್ತೆ ನೋಡಿ ಆನಂದದಿಂದ ಕೇಕೆ ಹಾಕಿದಾಗಲೂ ಅದನ್ನು ಮರೆತಿರಲಿಲ್ಲ. ರಸ್ತೆಯಲ್ಲಿ ಪ್ರಜ್ಞೆ ತಪ್ಪಿ ಬಿದ್ದಾಗಲೂ ಅವನ ಮನಸ್ಸಿನಲ್ಲಿ ಇದ್ದ ಯೋಚನೆ ಅದೇ. ಸಮಯ ಮೀರದ ಮುನ್ನ ತಾನು ಅಲ್ಲಿರಬಲ್ಲನೇ?

ಅಚ್ಚರಿಯಿಂದ ಮಾತನಾಡಿಕೊಳ್ಳುತ್ತಿದ್ದ ಬಸ್ ಪ್ರಯಾಣಿಕರನ್ನು, ಡೆಹ್ರಾಡೂನಿನಲ್ಲಿ ಹೆಲಿಕಾಪ್ಟರ್ ಪೈಲೆಟ್‌ನನ್ನು ಕಂಡಾಗಲೂ ಇದೇ ಚಿಂತೆ ಇತ್ತು. ತನಗಾಗಿ ಹೆಲಿಕಾಪ್ಟರ್ ಇಷ್ಟು ಕಾಲ ಕಾಯುತ್ತಿದ್ದುದು ತನ್ನ ಅದೃಷ್ಟ ಎಂದುಕೊಂಡ. ಅದುವರೆವಿಗೂ ಎಲ್ಲಿಯೋ ಅಡಗಿದ್ದ ಹಸಿವು, ಬಳಲಿಕೆ, ನಿರ್ಬಲತೆ, ಮಂಜಿನ ಬೆಟ್ಟಗಳ ಚಳಿ, ಆಗ ಮೈಮೇಲೆ ತಮ್ಮ ಪ್ರತಾಪ ತೋರಿಸಲಾರಂಭಿಸಿದವು. ಬೇರೆಯವರಾಗಿದ್ದರೆ ನಾಲ್ಕೈದು ದಿನಗಳಾದರೂ ಬಳಲಿಕೆಯಿಂದ ದೂರವಾಗಲು ವಿಶ್ರಾಂತಿ ಪಡೆಯುತ್ತಿದ್ದರು. ಆದರೆ ತನಗೆ ಉಳಿದಿರುವುದು ಕೇವಲ ಹಲವು ಗಂಟೆಗಳ ಸಮಯ ಎಂಬುದನ್ನು ಸಿದ್ಧಾರ್ಥ ಮರೆಯಲಿಲ್ಲ.

ಒಂದು ಸಾವಿರ ಮೈಲಿಯನ್ನು ಎರಡು ಗಂಟೆಯಲ್ಲಿ ಪ್ರಯಾಣ ಮಾಡಿ ಬಂದ. ಬಾರ್‌ಕೋಸ್ ಸೇರುವ ವೇಳೆಗೆ ಹತ್ತೂವರೆಯಾಗಿತ್ತು. ಅವನಿಗಾಗಿ ದರ್ಗಾ ಬಳಿ ಒಬ್ಬ ಮುಹೀಬ್ ಕಾಯುತ್ತಾ ನಿಂತಿದ್ದ. [ತುರ್ಕಿ ದೇಶದಲ್ಲಿ ಜಾನೀಸ್ಸಾರ್ ಪ್ರಾರಂಭಿಸಿದ ಬಕ್‌ಟೇಷೀ ನಿಯಮದ ಪ್ರಕಾರ ಸೂಫೀ ಸದಸ್ಯರು ಆಷಿಕ್(ಭಕ್ತ)ರಾಗಿ ಸೇರಿ, ಮುಹೀಬಾಗಿ ಬೆಳೆದು, ಬಾಬಾ ಆಗಿ ನಂತರ ಖಾಲೀಫಾ ಆಗುತ್ತಾರೆ. ವಿವರಣೆಗಳಿಗೆ ನೋಡಿ-ಅಫ್ರೋನ್ ದರೋಲ್ ಬರೆದಿರುವ 'ಎ ಹಿಸ್ಟರಿ ಆಫ್ ಸಿಕ್ರೆಟ್ ಸೊಸೈಟೀಸ್' ಪುಸ್ತಕದ ಐದನೆಯ ಅಧ್ಯಾಯ ] ಅವರ ಮಧ್ಯೆ ಹೆಚ್ಚು ಸಂಭಾಷಣೆಯೂ ನಡೆಯಲಿಲ್ಲ. "ನಿನ್ನ ಹೆಂಡತಿ ಇನ್ನು ಸ್ವಲ್ಪ ಹೊತ್ತಿನಲ್ಲಿ ಮಗುವನ್ನು ಹೆರಲಿದ್ದಾಳೇನು?" ಎಂದು ಮಾತ್ರವೇ ಕೇಳಿದ್ದ. ಚಕಿತನಾಗಿ ಸಿದ್ಧಾರ್ಥ ತಲೆದೂಗಿದ್ದ. ಅದುವರೆವಿಗೂ ಅವನ ಮುಖವನ್ನಾವರಿಸಿದ್ದ ಒಂದು ಮೋಡ ಈಗ ಚದುರಿತ್ತು. ಅದರ ಸ್ಥಾನವನ್ನು ಕಾತರ ಆಕ್ರಮಿಸಿತ್ತು. "ನಡಿ, ಹೋಗೋಣ, ಹೆಚ್ಚು ಸಮಯವಿಲ್ಲ" ಎಂದ ಆತ.

ಪಕ್ಕದಲ್ಲಿ ಹಳೆಯ ಕುದುರೆ ಗಾಡಿ ಇತ್ತು. ಅದರಲ್ಲಿ ಇಬ್ಬರೂ ಕುಳಿತು ಚಾಟಿಯಾಡಿಸುತ್ತಲೇ ರೇಸ್ ಕುದುರೆಗೂ ಮಿಗಿಲು ವೇಗದಿಂದ ಓಡುತ್ತಿತ್ತು. ಸಿದ್ಧಾರ್ಥನಿಗೆ ಅತ್ಯಾಶ್ಚರ್ಯಕರವಾಗಿತ್ತು. "ನಾವೆಲ್ಲಿಗೆ ಹೋಗುತ್ತಿದ್ದೇವೆ?" ಎಂದು ಕೇಳಿದ.

"ಮುರ್ಷಿದ್ ಬಳಿಗೆ."

ಸಿದ್ಧಾರ್ಥ ಮತ್ತೂ ಆಶ್ಚರ್ಯದಿಂದ "ನಾನು ಬರುವುದು ನಿಮಗೆ ಗೊತ್ತೇ?"

ಇಕ್ಕಟ್ಟಾದ ಸಂದಿಗಳಲ್ಲಿ ಕುದುರೆಗಾಡಿ ಪ್ರಯಾಣ ಸಾಗಿಸುತ್ತಿದೆ. ಆ

ಪ್ರದೇಶವೆಲ್ಲಾ ಸಿದ್ಧಾರ್ಥನಿಗೆ ಹೊಸದು. ಆ ಮಹಾನಗರದಲ್ಲಿ ಇಂತಹ ಪ್ರದೇಶ ವಿದೆ ಎಂಬುದೂ ಅವನಿಗೆ ಗೊತ್ತಿರಲಿಲ್ಲ. ಆ ಸಂದಿಯಲ್ಲಿ ಎದುರಾಗಿ ಬೇರೊಂದು ಗಾಡಿ ಬಂದರೆ ಎರಡೂ ನಿಲ್ಲಬೇಕಾದ್ದೇ! ರಸ್ತೆಯ ಅರ್ಧಭಾಗ ಚರಂಡಿ ಆಕ್ರಮಿಸಿದೆ. ಎರಡೂ ಕಡೆ ಹಳೆಯ ಕಟ್ಟಡಗಳು. ಅಲ್ಲಿನ ಬಾಗಿಲು ಕಿಟಕಿಗಳಿಗೆ ಪ್ರಾಚೀನ ಕಾಲದ ಬಟ್ಟೆಗಳಂತೆ ತೋರುತ್ತಿದ್ದ ತೆರೆಗಳು, ಹಳ್ಳದಲ್ಲಿ ಗಾಡಿ ಇಳಿದಾಗಲೆಲ್ಲಾ ತಲೆ ಹಿಂಬಾಗಕ್ಕೆ ಬಡಿದುಕೊಳ್ಳುತ್ತಿದೆ.

"ನಾನು ಬರುತ್ತೇನೆಂಬುದು ಗೊತ್ತಿತ್ತೇ?" ಮತ್ತೆ ಕೇಳಿದ ಸಿದ್ಧಾರ್ಥ.

ಕುದುರೆಯನ್ನು ಮತ್ತಷ್ಟು ವೇಗವಾಗಿ ಓಡಿಸುತ್ತಾ "ಮಾಗೆ ಗೊತ್ತು" ಎಂದ.

"ಮಾ ಎಂದರೆ ಮುರ್ಷಿದೇನೇ?"

"ಹೌದು."

"ಈಗ ಅಲ್ಲಿಗೇ ಹೋಗುತ್ತಿದ್ದೇವೆಯೇ?"

"ಹೌದು."

"ಆಕೆ ಎಲ್ಲಿದ್ದಾರೆ?"

"ಶ್ರೀಚಕ್ರದ ಮಧ್ಯೆ."

ಸಿದ್ಧಾರ್ಥ ವಿಭ್ರಾಂತವಾಗಿ "ಶ್ರೀಚಕ್ರವೇ!" ಎಂದು ಕೇಳಿದ.

ಆಗ ಯುವಕ ಹೇಳಲು ಪ್ರಾರಂಭಿಸಿದ :

"ಈ ದಿನ ರಾತ್ರಿ ಹನ್ನೆರಡು ಗಂಟೆಗೆ ಸರಿಯಾಗಿ ಕಾಷ್ಮೋರಾ ಭೂಮಿಯಲ್ಲಿ ಹುಟ್ಟುತ್ತದೆ ಎಂಬುದು ನಮಗೆ ಗೊತ್ತು. ಮೂವತ್ತಾರು ವರ್ಷಗಳ ಹಿಂದೆ ಕಾದ್ರಾ ಎಂಬ ಮಾಂತ್ರಿಕ ಕಾಷ್ಮೋರಾನನ್ನು ಎಚ್ಚರಿಸಿದ. ಆಗ ಬೀಜಾಕ್ಷರಗಳು ಬರೆದಿರುವ ಆಯುಧದಿಂದ ಕಾದ್ರಾನನ್ನು ಕೊಂದು ಆದರಿಂದ ಕಾಷ್ಮೋರಾವನ್ನು ಸಂತಾನ್ ಫಕೀರ್ ಬಂಧಿಸಿದ. ಫಕೀರರು ಆಂಜನೇಯನನ್ನು ಅಲ್ಲಾನನ್ನೂ ಒಂದೇ ಎಂದು ಪೂಜಿಸುವ ಜನ. ಹೊರನೋಟಕ್ಕೆ ಶೀರಾ ಸಾಧಾರಣ ಫಕೀರನಂತೆ ಹುಚ್ಚನಂತೆ ತಿರುಗುತ್ತಾ ಕಾಣಿಸಿಕೊಂಡರೂ ಸೂಫೀ ಸಂತತಿಯಲ್ಲಿ ಅತ್ಯುನ್ನತ ಖಾಲೀಫಾರಲ್ಲಿ ಒಬ್ಬನಾದ ಮುರ್ಷಿದ್. ಆಗ ಕಾದ್ರಾನನ್ನು ಕೊಂದ ಕಾಷ್ಮೋರಾದ ಮೇಲೆ ವಿಜಯವನ್ನು ಸಾಧಿಸಿದನಾದರೂ, ಹನ್ನೊಂದು ವರ್ಷಗಳ ತರುವಾಯ ಮತ್ತೊಮ್ಮೆ ಎಚ್ಚರವಾದ ಕಾಷ್ಮೋರಾವನ್ನು ಬಂಧಿಸಲೆಂದು ಬಿಸ್ತಾಕ್ಕೆ ಹೋಗಿ ಸಂತಾನ್ ಫಕೀರ್ ಕೊನೆಯ ಮೊಳೆಯನ್ನು ಹೊಡೆಯುವಾಗ ರಕ್ತವನ್ನು ಕಾರಿಕೊಂಡು ಸತ್ತರು. ಆ ಸಮಯದಲ್ಲಿ ಅಲ್ಲಿದ್ದ ಮಾಂತ್ರಿಕರ ವಂಶದ ಕೊನೆಯವನಾದ ದಾರ್ಕಾ ಎಂಬ

ಮಹಾಮಾಂತ್ರಿಕ ಈ ಶಕ್ತಿಯನ್ನು ಬಂಧಿಸಿ ಆ ಪ್ರಯತ್ನದಲ್ಲಿ ತನ್ನ ಪ್ರಾಣವನ್ನೂ ಕಳೆದುಕೊಂಡ. ಇಪ್ಪತ್ತೈದು ವರ್ಷಗಳ ನಂತರ ಈಗ ಮತ್ತೆ ಕಾಷ್ಮೀರಾ ಎಚ್ಚರಗೊಳ್ಳುತ್ತಿದೆ. ಅದಕ್ಕೆ ಯಾವುದೋ ರಹಸ್ಯ ಸಂಸ್ಥೆಯೊಂದು ನೆರವಾಗಿ ನಿಂತಿದೆ. ಆದರೆ ಈ ಜನನ ಎಲ್ಲಿ ನಡೆಯುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಸೂಫೀ ರಹಸ್ಯ ಪತ್ರಗಳಲ್ಲಿ ದೇವರೇ ಕಾರ್ಯನಿರ್ವಾಹಕನನ್ನು ನಮ್ಮಲ್ಲಿಗೆ ಕಳುಹಿಸುತ್ತಾನೆ ಎಂದು ಬರೆದಿದೆ. ಅದಕ್ಕಾಗಿ ಕಾಯುತ್ತ ಇದ್ದೆವು. ಕೊನೆಯ ಘಳಿಗೆಯಲ್ಲಿ ನೀನು ಬಂದೆ."

ಸಿದ್ಧಾರ್ಥ ಮತ್ತೆ ಪ್ರಶ್ನೆ ಕೇಳಲಿಲ್ಲ. ತಲೆ ಹಿಂದಕ್ಕೆ ಒರಗಿಸಿ ಕಣ್ಮುಚ್ಚಿದ. ಬಿರುಗಾಳಿಯಲ್ಲಿ ಯಾತ್ರಿಕನಂತೆ ಎಲ್ಲಿಂದ ಎಲ್ಲಿಗೆ ಬಂದ! ಹಿಮಾಲಯಗಳ ಮೇಲೆ ಅನಂತವಾದ ಪಾದಯಾತ್ರೆ. ಗಾಳಿಯಲ್ಲಿ ಹಾರಿ ಬಂದ ಈಗ ಈ ಗಾಡಿ, ಇಲ್ಲಿಂದ ಪಾದಯಾತ್ರೆಯೇನೋ?

ಅಷ್ಟರಲ್ಲಿ ಗಾಡಿ ನಿಂತಿತು "ಎಲ್ಲಿಗೆ ಬಂದೆವು?" ಸಿದ್ಧಾರ್ಥ ಕೇಳಿದ.

"ನಕ್ಷ್‌ಬಂದೀಗೆ."

ಇಬ್ಬರೂ ಕುದುರೆಗಾಡಿ ಇಳಿದು ಒಳಕ್ಕೆ ನಡೆದರು. ಆ ಪ್ರದೇಶ ನೋಡುತ್ತಿದ್ದರೆ ಸಿದ್ಧಾರ್ಥನಿಗೆ ರಾಕೇಶ್ ಮಾತು ಗುರ್ತಿಗೆ ಬಂತು. ಕಾಷ್ಮೀರಾಗೆ ಪಂಚಭೂತಗಳೂ ನೆರವಾಗಿ ಸೂಫೀಯನ್ನು ಅಂತ್ಯಗೊಳಿಸಲಾರದಂತೆ ಸಾಕಷ್ಟು ಎಚ್ಚರಿಕೆ ವಹಿಸಲಾಗಿತ್ತು. ಅಲ್ಲಿ ಬೆಳಕಿತ್ತು;ಸೂರ್ಯನಿರಲಿಲ್ಲ, ಎಡೆಯಿತ್ತು; ಭೂಮಿ ಇರಲಿಲ್ಲ, ತೇವವಿತ್ತು;ನೀರಿರಲಿಲ್ಲ, ಬಿಸಿಯಿತ್ತು; ಬೆಂಕಿಯಿರಲಿಲ್ಲ. ಉಸಿರು ಮಾತ್ರವಿತ್ತು; ವಾಯುವಿರಲಿಲ್ಲ. ಹಿಂದೂ ಸಂಪ್ರದಾಯದಂತೆ ಚಕ್ರವಿತ್ತು ಮಧ್ಯದಲ್ಲಿ ಮುರ್ಷಿದ್ ಇದ್ದಳು. ಚಿಂದಿ ಬಟ್ಟೆಗಳನ್ನು ಧರಿಸಿದ್ದಾಳೆ. ಆಕೆಗೆ ನೂರಕ್ಕೂ ಹೆಚ್ಚು ವರ್ಷವಾಗಿರಬಹುದು ಎನಿಸುತ್ತದೆ.

ಅರಬ್ಬೀ ಭಾಷೆಯಲ್ಲಿ ಸೂಫೀ ಎಂದರೆ ಚಿಂದಿ ಎಂದು. ಗ್ರೀಕ್ ಭಾಷೆಯಲ್ಲಿ ಸೋಫಿಯಾ ಎಂದರೆ ತಿಳಿವು.

"ಯಾ ಹಫೀಜ್ (ರಕ್ಷಕನೇ) ! ಯಾ ಮುಗ್ನೀ (ವೃದ್ಧಿಗೊಳಿಸುವವನೇ)! ಇಷ್ಕ್ ಯಾಹೂ! ಯಾಹದೀ!!

"ಬರ್ಕಾ ಬಾಷಾದ್ (ನನ್ನ ಆಶೀರ್ವಾದ ನಿನಗೆ.)"

ನಂತರ ಆ ಯುವಕನಿಗೂ ಆಕೆಗೂ ಅರಬ್ಬೀ ಭಾಷೆಯಲ್ಲಿ ಮಾತು ನಡೆಯಿತು. ಸಿದ್ಧಾರ್ಥನಿಗೆ ಅರ್ಥವಾಗಲಿಲ್ಲ. ನಂತರ ಆಕೆ ಸಿದ್ಧಾರ್ಥನತ್ತ ತಿರುಗಿ, "ಈ ಚಕ್ರದಿಂದ ನಾನು ಹೊರಬರಲು ಸಾಧ್ಯವಿಲ್ಲ" ಎಂದಳು.

"ಅಷ್ಟಾವಕ್ರನು ನನ್ನ ಹೆಂಡತಿಯ ಗರ್ಭಪ್ರವೇಶ ಮಾಡದಂತೆ ತಡೆಯು

ವುದು ಹೇಗೆ?"

"ಸೂಫೀ ಮಂತ್ರಾಕ್ಷರಗಳಿಂದ ಅದು ಸಾಧ್ಯವಾಗುತ್ತದೆ."

ಸಿದ್ಧಾರ್ಥ ಕಾತರನಾಗಿ "ಬೇಗ ಬರೆದುಕೊಟ್ಟರೆ ನಾನು ಬೇಗ ಹೋಗುತ್ತೇನೆ. ಇನ್ನು ಹೆಚ್ಚು ಸಮಯವೂ ಇಲ್ಲ...." ಎಂದ.

"ಆ ಅಕ್ಷರಗಳಿಗೆ ಲಿಪಿಯಿಲ್ಲ. ಅವನ್ನು ನೆಲದ ಮೇಲಾಗಲಿ, ಕಾಗದದ ಮೇಲಾಗಲಿ ಬರೆಯಲು ಸಾಧ್ಯವಿಲ್ಲ. ಅದನ್ನು ಲೇಖನಿಯಲ್ಲಾಗಲಿ, ಬೆರಳಿನಿಂದಾಗಲಿ ಬರೆಯಬಾರದು. ಅದಕ್ಕೆ ಶಾಶ್ವತವಾದ ಸ್ಥಾನವನ್ನು ಕಲ್ಪಿಸಬಾರದು."

ಸಿದ್ಧಾರ್ಥನಿಗೆ ರಾಕೇಶ್ ಬರೆದಿದ್ದ ಮಾತು ನೆನಪಾಯಿತು—

ಕಾಷ್ಮೀರ ಭಯಪಡುವುದು ಸೂಫೀ ಮಂತ್ರಾಕ್ಷರಗಳಿಗೆ ಮಾತ್ರವೇ. ಇವನ್ನು ಬರೆಯುವುದಿಲ್ಲ. ಇವಕ್ಕೆ ಬರೆಯುವ ಫಲಕವಾಗಲಿ, ಲೇಖನಿಯಾಗಲಿ ಇರುವುದಿಲ್ಲ.

ಸಿದ್ಧಾರ್ಥ ಏನೂ ಗೊತ್ತಾಗದವನಂತೆ ಅವರನ್ನೇ ನೋಡುತ್ತಾ ನಿಂತ. ಏನು ಮಾಡಬೇಕೆಂಬುದು ಷಾಡೋಗೆ ಹೊಳೆಯಲೇ ಇಲ್ಲ. ತನ್ನನ್ನು ಬಂಧಿಸಿದ್ದ ಎಡೆಗೆ ಯಾರಾದರೂ ಹೋದರೆ ತಾನಿಲ್ಲದಿರುವುದು ಒಂದೇ ನಿಮಿಷದಲ್ಲಿ ಎಲ್ಲರಿಗೂ ಗೊತ್ತಾಗುತ್ತದೆ. ಒಡನೆಯೇ ಏನೋ ಒಂದು ಮಾಡಬೇಕು. ರಂಜಿತಾ ಬಗ್ಗೆ ಏನಾದರೂ ಒಂದು ಮಾಡಲೇಬೇಕು. ತನಗಿಂತಲೂ ಅವಳಿಗೆ ಆಪತ್ತು ಹೆಚ್ಚಾಗಿದೆ. ಅವಳು ನಿಜವೇ ನುಡಿಯುತ್ತಿದ್ದಾಳೆ ಎಂದು ಅವರು ತಮ್ಮ ರಹಸ್ಯವನ್ನು ಸ್ವಲ್ಪವಾದರೂ ಹೇಳಿದ ನಂತರ ಮತ್ತೆ ಅವಳನ್ನು ಬದುಕಲು ಬಿಡುವುದೇ ಇಲ್ಲ.

ಅವನಿಗೆ ಎಲ್ಲಕ್ಕಿಂತಲೂ ಆಶ್ಚರ್ಯಕರವಾಗಿದ್ದದ್ದು ಆ ಭವನ. ಅದಕ್ಕೆ ಕಿಟಕಿಗಳೇ ಇಲ್ಲದೆ ಇದ್ದದ್ದು. ಎಷ್ಟು ಓಡಾಡಿದರೂ ಕೊನೆಯೇ ಇಲ್ಲದಂತೆ ಮತ್ತೆ ಪ್ರಾರಂಭಕ್ಕೆ ಬರುತ್ತಿದ್ದ ವಲಯಾಕೃತಿ. ಮಧ್ಯದಲ್ಲಿ ದೊಡ್ಡ ಸಭಾಂಗಣ, ಹೋಮಕುಂಡದ ಕೋಣೆ ವೆರಂಡಾ ಎಲ್ಲವೂ 'ಪ್ಯಾನಲಿಂಗ್' ಆಗಿತ್ತು.

ಹಾಲ್‌ನಲ್ಲಿ ಪ್ರಾರ್ಥನೆಗಳು ನಡೆಯುತ್ತಿವೆ. ಬಹುಶಃ ಅರ್ಧರಾತ್ರಿಯ ತನಕ–ಅಷ್ಟಾವಕ್ರನು ಹುಟ್ಟುವವರೆಗೂ, ಈ ಪ್ರಾರ್ಥನೆಗಳು ನಡೆಯಬಹುದು. ಇದರಿಂದ ಒಳ್ಳೆಯದೇ ಆಯಿತು, ಉಸ್ಸೋಕ್ ಸದಸ್ಯರಾರೂ ವೆರಂಡಾದಲ್ಲಿ ಓಡಾಡುತ್ತಿಲ್ಲ.

ಮುಂದೆ ಹೋಗುತ್ತಿದ್ದವನು ಹಿಂದಿನ ಸಪ್ಪಳ ಗಮನಿಸಿ ಕತ್ತಲಲ್ಲಿ ಮರೆಯಾದ. ಎದುರಾಗಿ ಮತ್ತೆ ಬಾಬಾ ಮತ್ತು ರಂಜಿತಾ ಬರುತ್ತಿದ್ದಾರೆ. ಬಳಿ

ಯಲ್ಲಿ ಬಾಬಾ ನಿಂತು ಯಾರಿಗೋ ಏನೋ ಹೇಳಿದ್ದನ್ನು ಆಲಿಸಿದ. ಷಾಡೋ ಗುಂಡಿಗೆಯ ಬಡಿತ ತೀವ್ರಗೊಂಡಿತು. ಸಾಧಾರಣವಾಗಿ ತಪ್ಪಿಸಿಕೊಂಡಲ್ಲಿ ತಾನು ಕಾಣದೆ ಹೋಗುವುದು ಸಾಧ್ಯವೇ. ಆದರೆ ಕತ್ತಲೆ ಎಷ್ಟೇ ಇರಲಿ ಮಾರುದ್ದ ದೂರದಲ್ಲಿ ನಿಂತು ಮಾತನಾಡಲಾರಂಭಿಸಿದರೆ ತಾನು ರಹಸ್ಯವಾಗಿ ಉಳಿಯುವುದಾದರೂ ಹೇಗೆ? ಉಸಿರ ಸದ್ದೂ ಕೇಳಿರಬಾರದೆಂದು ಅದನ್ನೂ ಬಿ\ಹಿಡಿದ.

"ಬರ್‍ತಿದೀನಿ. ಕುಳಿತುಕೊಳ್ಳಲು ಹೇಳು" ಎಂದು ಬಾಬಾ ಹೇಳಿದ್ದು ಕೇಳಿಸಿತು, ನಂತರ ಬೇರೆಯಾರನ್ನೊ ಕರೆದು ಅವರಿಗೆ ರಂಜಿತಾಳನ್ನು ಒಪ್ಪಿಸಿ, ಬಾಬಾ ಹೊರಟ.

ಬಾಬಾ ತನ್ನನ್ನು ದಾಟಿ ಹೋಗುವ ತನಕ ಷಾಡೋ ಚಲಿಸಲಿಲ್ಲ. ನಂತರ ಆತನನ್ನು ಅನುಸರಿಸಿದ. ಅದುವರೆವಿಗೂ ತಾನು ಮಾಡುತ್ತಿದ್ದ ತಪ್ಪು ಈಗ ಅರಿವಾಯಿತು. ಕತ್ತಲಲ್ಲಿ ಮತ್ತೊಂದು ಬಾಗಿಲು ಇರುವುದು ಸಾಧ್ಯ ಎಂಬುದು ತಾನು ಗಮನಿಸಿರಲಿಲ್ಲ. ಅವನೂ ಕತ್ತಲಲ್ಲಿ ಅನುಸರಿಸಿದ.

ಇದ್ದಕ್ಕಿದ್ದಂತೆ ತಣ್ಣನೆಯ ಗಾಳಿ ಬೀಸುತ್ತಿದೆ. ತಲೆ ಎತ್ತಿ ನೋಡಿದ ವೆಂಟಿಲೇಟರ್! ಬಲವಾದ ಸಿಮೆಂಟ್ ಕಿಟಕಿ. ಹೊರಗೆ ಮಳೆ ಜೋರಾಗಿದೆ ಅಥವಾ ಆಕಾಶ ಮೇಘಗಳಿಂದ ತುಂಬಿದೆ. ಅಷ್ಟೇ; ಬದಲಾವಣೆಯಲ್ಲ ಇಲ್ಲಿ ನಾಗರಿಕತೆಯೂ-ಇದೆ!– ರಟ್ಟಿನ ಪೆಟ್ಟಿಗೆಗಳು, ಪ್ಲಾಸ್ಟಿಕ್ ಚೀಲಗಳು ಎಲ್ಲಾ ಇವೆ.

ಮುಂದೆ ಸಾಗುತ್ತಿದ್ದ ಷಾಡೋ ಮತ್ತೆ ನಿಲ್ಲಬೇಕಾಯಿತು. ಎದುರಲ್ಲಿ ಬೆಳಕು ಕಾಣಿಸುತ್ತಿದೆ. ಮಧ್ಯದಲ್ಲಿ ಅಂಗಳದಂತೆ ಕಾಣುತ್ತಿರುವ ಅಲ್ಲಿ ಮೂವರು ಕುಳಿತು ಪ್ಲಾಸ್ಟಿಕ್ ಚೀಲಗಳಲ್ಲಿ ಏನೋ ತುಂಬುತ್ತಿದ್ದಾರೆ. ಬಾಬಾ ಅವರನ್ನು ದಾಟಿಕೊಂಡು ಇದ್ದ ನಾಲ್ಕು ಬಾಗಿಲುಗಳಲ್ಲಿ ಒಂದರ ಒಳಗೆ ಹೋದ. ಆ ಕೋಣೆಯ ಮೇಲೆ 'ಒಳಗೆ ಪ್ರವೇಶ ನಿಷಿದ್ಧ' ಎಂದು ಬರೆದಿದ್ದುದನ್ನೂ ಗಮನಿಸಿದ.

ಅದುವರೆಗೂ ಬಂದ ಷಾಡೋ ಅಲ್ಲಿ ನಿಲ್ಲಬೇಕಾಯಿತು.

ಐದು ನಿಮಿಷವಾಯಿತು.

ಷಾಡೋ ಮನಸ್ಸು ನಾನಾ ರೀತಿಗಳಲ್ಲಿ ಚಿಂತಿಸುತ್ತಿತ್ತು. ಬಾಬಾ ಒಳಗೆ ಏನು ಮಾಡುತ್ತಿದ್ದಾನೆ? ಅತ್ತಕಡೆಯಿಂದ ದಾರಿ ಇದೆಯೇ?

ಹೆಚ್ಚು ಹೊತ್ತು ಕಾಯುವುದು ಸಾಧ್ಯವಿಲ್ಲ. ಕಾಯುತ್ತಾ ಕುಳಿತರೆ ತನಗೆ–ರಂಜಿತಾಳಿಗೆ ಅಪಾಯವೇ. ಅರ್ಧರಾತ್ರಿಯಾಗಲು ನಾಲ್ಕೈದು ಗಂಟೆ

ಗಳಿಗಿಂತಲೂ ಹೆಚ್ಚು ಸಮಯವಿದ್ದಂತೆ ಕಾಣಲಿಲ್ಲ.

ಏನು ಮಾಡುವುದು?

ಅಲ್ಲಿ ಕುಳಿತಿದ್ದ ಮೂವರ ಮೇಲೂ ಅವನ ನೋಟ ಬಿತ್ತು. ಒಂದೇ ಬಾರಿಗೆ ಆ ಮೂವರನ್ನೂ ಎದುರಿಸಲು ತಾನು ಜೇಮ್ಸ್ ಬಾಂಡ್ ಅಲ್ಲ. ಅದರಲ್ಲೂ ಬಾಬಾ ಒಳಗೆ ಬೇರೆ ಯಾರೊಂದಿಗಾದರೂ ಮಾತನಾಡುತ್ತಿದ್ದರೆ ಈ ಸಪ್ಪಳಕ್ಕೆ ಹೊರಕ್ಕೆ ಬಂದರೂ ಬರಬಹುದು. ಆದರೂ ಅಪಾಯವನ್ನು ನಿರೀಕ್ಷಿಸಿಯೇ ಕಾರ್ಯಪ್ರವರ್ತನಾಗಬೇಕು. ಇಲ್ಲಿಂದ ಹೊರಬೀಳಲು ಒಂದೇ ಮಾರ್ಗ ಎನಿಸುತ್ತದೆ. ಏನಾದರೂ ಮೂವರನ್ನು ಎದುರಿಸಬೇಕೆಂದು ತೀರ್ಮಾನಿಸಿದ.

ಮನುಷ್ಯನು ಆಡುವ ಮಾತಿಗಿಂತಲೂ ಅವನ ಭಂಗಿ ಅವನ ಅಂತರಂಗವನ್ನು ತಿಳಿಸುವ ಸಾಧನಗಳು, ಅವನ ಚಲನ, ಕೈಬೆರಳುಗಳು, ಬಾಚಿದ ಕೂದಲಿನ ಬಣ್ಣ ಇವು ಅವನ ಮನಸ್ಸಿನ ಪಾಠವನ್ನು ತಿಳಿಸುತ್ತವೆ; ಅದರಿಂದ ರೂಪಿಸಿರುವ ಶಾಸ್ತ್ರ ಕೈನೆಸಿಕ್ಸ್.

ತನ್ನ ಮುಂದೆಯೇ ಕುಳಿತು ತನ್ನನ್ನು ಹೊಗಳುವವರ ಮನದಲ್ಲಿ ನಿಜವಾಗಿಯೂ ಏನು ಅಡಗಿದೆ ಎಂಬುದನ್ನು ಷಾಡೋ ಕ್ಷಣಗಳಲ್ಲಿ ಈ ಶಾಸ್ತ್ರರೀತ್ಯ ಕಂಡುಹಿಡಿಯುತ್ತಿದ್ದ. ಹುಡುಗಿಯರ ಬಳಿ ಮಾತನಾಡುವಾಗ ಅವರು ಕುಳಿತ ಭಂಗಿ, ಬೆರಳುಗಳ ಚಲನೆ ಇವುಗಳಿಂದ ಅವಳಿಗೆ ತಾನು ಇಷ್ಟವೇ ಇಲ್ಲವೇ ಎಂಬುದನ್ನು ತಿಳಿಯುತ್ತಿದ್ದ. ಮಾತು ಮನಸ್ಸನ್ನು ಮರೆಮಾಡಿ ಏನೋ ಹೇಳಬಹುದಾದರೂ ಮೆದುಳು ಮಾತ್ರ ನನ್ನ ಅನಿಸಿಕೆಯನ್ನು ದೇಹದ ಮುಖಾಂತರ ವ್ಯಕ್ತಗೊಳಿಸುತ್ತಲೇ ಇರುತ್ತದೆ. ಅದನ್ನು 'ದೈಹಿಕ ಭಾಷೆ' ಎಂದು ಬೇಕಾದರೂ ಕರೆಯಬಹುದು.

ಎಂದೊ ಕಾಲಕ್ಷೇಪಕ್ಕೆ ತಿಳಿದುಕೊಂಡಿದ್ದು ಈಗ ಪ್ರಾಣದ ಉಳಿವಿಗೆ ಪ್ರಯೋಗಿಸಿದ. ಇದರೊಂದಿಗೆ ಅವನು ಅಭ್ಯಸಿಸಿದ್ದ ಇನ್ನೊಂದು ಶಾಸ್ತ್ರ ಫಿಜಿಯಾಲಜಿ. ಅದರ ಪ್ರಕಾರ ಮನುಷ್ಯರು ಮೂರು ವಿಧ ಇರುತ್ತಾರೆ. ಪ್ರೇರಕ (ಮೋಟೀವ್), ಬೌದ್ಧಿಕ (ಮೆಂಟಲ್) ಮತ್ತು ದೈಹಿಕ (ವೈಟಲ್).

ಇದ್ದಕ್ಕಿದ್ದಂತೆಯೇ ಅವರ ಮುಂದೆ ಹೋಗುತ್ತಲೇ ಅವರು ಅಚ್ಚರಿಗೊಳ್ಳುತ್ತಾರೆ. ಅದು ಎಷ್ಟು ಹೊತ್ತು ಹಾಗಿರುತ್ತಾರೆ ಎಂಬುದು ಅವರ ಮನಸ್ಸು, ಮುಂತಾದವುಗಳ ಮೇಲೆ ಆಧರಿಸಿರುತ್ತದೆ. ಎದುರಿನಲ್ಲಿರುವವನಿಗೆ ಎಲೆಕ್ಟ್ರಿಕ್ ಷಾಕ್ ಹೊಡೆದರೆ ಅವನನ್ನು ಒಡನೆಯೇ ಹಿಡಿಯಲು

ಬರದೆ ಒಂದು ಕ್ಷಣದಲ್ಲಿ ಮ್ಯಾಸ್ ಬಳಿಗೆ ಹೋಗಿ ಅದನ್ನು ಆರಿಸಿ ಕಾರ್ಯೋನ್ಮುಖನಾಗುವವನು ಪ್ರೇರಕ (ಮೋಟೀವ್); ಇವನ ಲಕ್ಷಣ ಉದ್ದನೆಯ ಮುಖ, ಬಲವಾದ ದವಡೆ. ಕೈಮೇಲೆ ರೋಮ ಇತ್ಯಾದಿಗಳು.

ಆ ಮೂವರಲ್ಲಿ ಇಂಥಾ ಪ್ರೇರಕ ಮೂವರಿಗಿಂತ ಹೆಚ್ಚಾಗಿದ್ದರೆ ತನಗೆ ತೊಂದರೆ ತಪ್ಪಿದ್ದಲ್ಲ.

ಅವರನ್ನು ಗಮನಿಸಿದ. ಅದೃಷ್ಟವಶಾತ್ ಅವರಲ್ಲಿ ಅಂಥವನು ಒಬ್ಬನೇ. ಅವರಲ್ಲಿ ಒಬ್ಬನ ದೇಹ ಮಾಂಸದಿಂದಲೇ ತುಂಬಿತ್ತು. ಗುಂಡಾದ ಮುಖ, ಅಗಲವಾದ ಬಾಯಿ, ಕೆಲಸಕ್ಕಿಂತಲೂ ವಿಶ್ರಾಂತಿಯ ಬಗ್ಗೆಯೇ ಹೆಚ್ಚು ಆಸೆ. ಇದು ದೈಹಿಕ ಗುಂಪಿಗೆ ಸೇರಿದವನ ಲಕ್ಷಣ. ಇಬ್ಬರಲ್ಲಿ ಒಬ್ಬ ಈ ದೈಹಿಕ ಗುಂಪಿನಲ್ಲಿಯೇ ಸ್ವಲ್ಪ ಬುದ್ಧಿ ಇರುವವನು. ವಿಶಾಲವಾದ ಹಣೆ, ಹಿಂದಕ್ಕೆ ಬಾಚಿದ ಕೂದಲು, ಸೀಳವಾದ ತೋಳುಗಳು ಹೆಚ್ಚು ತೊಂದರೆಗೆ ಸಿಗಬಾರದೆಂಬ ಅಭಿಲಾಷೆ. ಸೌಕುಮಾರ್ಯ ಆ ಮೂರನೆಯವನಲ್ಲಿ ಕಾಣಿಸುತ್ತಿತ್ತು.

ಹೋಗುತ್ತಲೇ ಮೊದಲನೆಯವನನ್ನು ಎದುರಿಸಬೇಕು. ಹೇಗಿದ್ದರೂ ಉಳಿದಿಬ್ಬರು ಎಚ್ಚರಗೊಳ್ಳಲು ಸ್ವಲ್ಪ ಸಮಯ ಬೇಕೇ ಬೇಕು. ಆ ಅಲ್ಪ ಸಮಯದಲ್ಲೇ ಉಳಿದಿಬ್ಬರನ್ನೂ ಮುಗಿಸಬೇಕು. ಎಲ್ಲವೂ ಒಂದೇ ಪಟ್ಟಿಗೆ ನಡೆಯಬೇಕು. ಕರಾಟೆ, ಕುಂಗ್‌ಫೂನಲ್ಲೂ ಮೊದಲ ಪಟ್ಟಿಗೆ ಹೆಚ್ಚು ಪ್ರಾಧಾನ್ಯ, ಸಾಧ್ಯವಿರುವಷ್ಟು ಮಂದಿಯನ್ನು ಮೊದಲ ಪಟ್ಟಿನಲ್ಲಿಯೇ ಮಲಗಿಸಬೇಕು.

ತಾನು ತುಂಬಾ ದೊಡ್ಡ ಅಪಾಯವನ್ನು ಎದುರಿಸುತ್ತಿದ್ದೇನೆ ಎಂಬುದು ಷಾಡೋ ಮರೆತಿರಲಿಲ್ಲ. ಮೂವರಲ್ಲಿ ಯಾರೊಬ್ಬರಾದರೂ ಕಿರುಚಿದರೆ ಈ ಕಡೆಯಿಂದ ಬಾಬಾ, ಅತ್ತಕಡೆಯಿಂದ ಸದಸ್ಯವರ್ಗದವರು ಯಾರಾದರೂ ಬರುವ ಸಾಧ್ಯತೆ ತುಂಬಾ ಇತ್ತು. ಆಗ ಇದುವರೆಗಿನ ಎಲ್ಲಾ ಪ್ರಯತ್ನವೂ ನಿಷ್ಫಲವಾಗುತ್ತದೆ.

ಅವರ ಬಗ್ಗೆ ತೀರ್ಮಾನಕ್ಕೆ ಬರುತ್ತಲೇ ಷಾಡೋ ತಡಮಾಡಲಿಲ್ಲ. ಗಾಳಿಗಿಂತಲೂ ವೇಗವಾಗಿ ನಡೆದ. ಯಕ್ಷಿಣಿಯಲ್ಲಿ ಮೊದಲ ಪಾಠ ಎದುರಿನವನ ಕಣ್ಣಿಗಿಂತಲೂ ಹೆಚ್ಚು ವೇಗವಾಗಿ ಯಕ್ಷಿಣಿ ನಡೆಸುವವನ ಕೈ ಚಲಿಸಬೇಕು. ಅದೇ ರೀತಿ ಚಲಿಸಿದ ಷಾಡೋ. ಮೊದಲಿನವನ ಕಣ್ಣು ಮೂಗುಗಳ ಮೇಲೆ ಬಲವಾದ ಗುದ್ದು ಕೊಟ್ಟ. ಉಳಿದಿಬ್ಬರು ಎಚ್ಚರಗೊಳ್ಳುವ ಮೊದಲೇ ಎರಡನೆಯವನ ಕಿಬ್ಬೊಟ್ಟೆಗೆ ಪೆಟ್ಟು ಬಿತ್ತು. ಮೂರನೆಯವನ ಕಾಲು ಅವನು ಬಾಯ್ತೆರೆಯುವ ಮೊದಲೇ....

ಆ ಕ್ಷಣದಲ್ಲಿ ಮಾನವತ್ವದ ಬಗ್ಗೆ ಯೋಚನೆ ಇರಲಿಲ್ಲ. ತನ್ನ ತಂದೆಯ ಕೊಲೆಮಾಡಿ, ತಂಗಿಯ ಜೀವ ತೆಗೆಯುತ್ತಿರುವವರು, ಅವರನ್ನು ಏನು ಮಾಡಿದರೂ ಪಾಪವಿಲ್ಲ ಎಂದು ಕಾರ್ಯೋನ್ಮುಖನಾಗಿದ್ದ. ಒಂದೆರಡು ನಿಮಿಷ ಗಳಲ್ಲಿ ಅಲ್ಲಿಯ ದೃಶ್ಯ ಬದಲಾಗಿತ್ತು. ಮೂವರೂ ಸಾವನ್ನು ಅಪ್ಪಿದ್ದರು. ಅವರನ್ನು ಕತ್ತಲೆಯ ಮೂಲೆಗೆ ಎಳೆದು ಹಾಕಿ ಬಾಬಾ ಹೊರಟ ಕೋಣೆ ಯೊಳಕ್ಕೆ ಹೋದ.

ಆ ಕೋಣೆಯಲ್ಲೇನೂ ಇಲ್ಲ. ಒಂದೇ ಒಂದು ಅಲ್ಮೈರಾ ಇದೆ. ಇನ್ನು ಬಾಬಾ ಹೋದದ್ದು ಎಲ್ಲಿಗೆ? ಕೋಣೆಯಲ್ಲಿ ಬೇರೆ ಹಾದಿಯೇ ಇಲ್ಲ. ಅಲ್ಮೈರಾ ಬೀಗ ಹಾಕಿದ್ದರು. ಕೈಯನ್ನು ಸಂಕೋಲೆಯಿಂದ ಬಂಧಿಸಿ ಪೆಟ್ಟಿಗೆಯಲ್ಲಿ ಮುಚ್ಚಿಟ್ಟು ಹೊರಗೆ ಬೀಗ ಹಾಕಿದ್ದರೂ ತಪ್ಪಿಸಿಕೊಂಡು ಬರುವ ವಿದ್ಯೆಯನ್ನು ಕಲಿತಿದ್ದ ಯಕ್ಷಿಣಿಗಾರನಿಗೆ ಆ ಬೀಗ ತೆಗೆಯಲು ಅರ್ಧ ನಿಮಿಷ ಸಾಕಾಯಿತು.

ಅಲ್ಮೈರಾ ತೆಗೆಯುತ್ತಲೇ ಆಶ್ಚರ್ಯವಾಯಿತು. ಅಚ್ಚರಿಗೆ ಕಾರಣ ಅಲ್ಲಿದ್ದ ವಸ್ತುಗಳಲ್ಲಿ– ಒಂದೆರಡು ಪಿಸ್ತೂಲುಗಳು, ರಟ್ಟಿನ ಪೆಟ್ಟಿಗೆಯೊಂದು ಮಾತ್ರವಿತ್ತು. ಆದರೆ ಅಲ್ಮೈರಾ ತೆಗೆಯುತ್ತಿದ್ದಂತೆ ಅದಕ್ಕೆ ಸೇರಿದಂತಿದ್ದ ಪಕ್ಕದ ಗೋಡೆಯಲ್ಲಿ ಒಂದು ದಾರಿ ಕಾಣಿಸಿಕೊಂಡಿತು. ಅಲ್ಮೈರಾದ ಬಾಗಿ ಲಿಗೆ ಬಳಸಿದ್ದ ಮರವು ಗೋಡೆಯೊಳಕ್ಕೆ ಮುಂದುವರಿದಿತ್ತು. ಚಿಕ್ಕ ಕಿಂಡಿ ಯಲ್ಲಿ ಒಳಕ್ಕೆ ಹೋದರೆ ಕತ್ತಲೆ. ಎಂಟು ಅಡಿಯ ಎತ್ತರದಲ್ಲಿ ವೆಂಟಿಲೇಟರ್, ಅಲ್ಲಿಂದ ಬರುತ್ತಿದ್ದ ಗಾಳಿಯನ್ನು ಗಮನಿಸಿ ಅದೇ ಹೊರಕ್ಕೆ ಹೋಗಲು ಇರುವ ದಾರಿ ಎನಿಸಿತು. ಆದರೆ ಮಹಾದ್ರಷ್ಟ ಹೋಗಲು ಆ ದಾರಿ ಬಳಸ ಲಿಲ್ಲ ಎಂಬುದು ಥಟ್ಟನೆ ನೆನಪಾಯಿತು. ಇಕ್ಕಟ್ಟಾದ ಆ ಸಣ್ಣ ಹಾದಿ ಹೊರ ಗಿನ ಹಾದಿ ಎಂದು ಹೇಳಲು ಸಾಧ್ಯವಿರಲಿಲ್ಲ.

ಮತ್ತೆ ಅಲ್ಮೈರಾದೊಳಕ್ಕೆ ಹಿಂತಿರುಗಿದ. ಕುರ್ಚಿ ಅಥವಾ ಸ್ಟೂಲೊಂದನ್ನು ಹಾಕಿಕೊಂಡು ವೆಂಟಿಲೇಟರಿನ ಮುಖಾಂತರ ಹೊರಗೆ ಏನಿದೆ ಎಂಬುದನ್ನು ನೋಡಬೇಕೆಂದುಕೊಂಡಿದ್ದ. ಅಷ್ಟರಲ್ಲಿ ಅಲ್ಲಿದ್ದ ರಟ್ಟಿನ ಪೆಟ್ಟಿ ಗೆಯ ಮೇಲೆ ದೃಷ್ಟಿ ಬಿತ್ತು. ಕುತೂಹಲದಿಂದ ಅದನ್ನು ತೆರೆಯಲು ಮುಂದಾದ. ಅದು ರಟ್ಟಲ್ಲ. ಪ್ಲಾಸ್ಟಿಕ್‌ನಂತೆ ಇದ್ದರೂ ಕಬ್ಬಿಣಕ್ಕಿಂತಲೂ ಗಟ್ಟಿಯಾಗಿದೆ. ಡೇಂಜರ್ (ಅಪಾಯ) ಎಂದು ಅದರ ಮೇಲೆ ಬರೆದಿದ್ದು ಅವನ ಕುತೂಹಲ ವನ್ನು ಮತ್ತಷ್ಟು ಕೆರಳಿಸಿತು. ಕಾರಿನ ಬ್ಯಾಟರಿ ಸೈಜಿನಲ್ಲಿ ಅರ್ಧವಿದ್ದ ಎರಡು ಸೆಲ್‌ಗಳು ಅದರಲ್ಲಿತ್ತು. ಅವುಗಳಲ್ಲಿ ಒಂದನ್ನು ಹೊರಕ್ಕೆ ತೆಗೆದ.

ಮೊದಲೇನೂ ಕಾಣಿಸಲಿಲ್ಲ. ಜಾಗರೂಕತೆಯಿಂದ ನೋಡಿದರೆ ತಿಳು

ವಾದ ಅಕ್ಷರಗಳಲ್ಲಿ ೨೩೫|೯೨u ಎಂದು ಕೊರೆಯಲಾಗಿತ್ತು. ಏನೋ ಸಂಶಯದಿಂದ ಇನ್ನೊಂದನ್ನೂ ತೆರೆದು ನೋಡಿದ. ಅವನ ಅನುಮಾನ ನಿಜವಾಗಿತ್ತು. ಅದರ ಮೇಲೆ ೨೩೯|೯೪pu ಎಂದಿತ್ತು.

ಭಯದಿಂದ ಅವನ ಮೈ ಕಂಪಿಸಿತು. ಆ ಭಯಕ್ಕೆ ಕಾಲು ತನ್ನ ಸಮತೋಲವನ್ನು ಕಳೆದುಕೊಂಡು ಅವನು ಕೆಳಕ್ಕೆ ಕುಸಿಯುವುದರಲ್ಲಿದ್ದ. ಕೈಯಲ್ಲಿದ್ದವುಗಳನ್ನು ಮತ್ತೆ ಆ ಪೆಟ್ಟಿಗೆಯಲ್ಲಿರಿಸುವಾಗ ಸ್ವಲ್ಪ ಸದ್ದಾಯಿತು. ಮತ್ತೆ ನಿಶ್ಶಬ್ದ. ಅವನಿಗೆ ಮುಂದೇನು ಎಂಬುದೇ ತೋಚಲಿಲ್ಲ. ಪ್ರತಿಮೆಯಂತೆ ನಿಂತ. ಮುಂದೆ ಹೋಗಲು ಧೈರ್ಯ ಸಾಲದು. ಹಿಂದಕ್ಕೆ ಹಾರಲು ಶಕ್ತಿಯಿಲ್ಲ. ತುಂಬಾ ಧೈರ್ಯಶಾಲಿ, ಸಾಹಸಿಯಾದ ಷಾಡೋ ದಿಕ್ಕುಕಾಣದೆ ನಿಂತಿದ್ದ. ಅವನ ಮುಂದೆಯೇ ಭಯಂಕರ ಪ್ರಳಯ ರಾಕ್ಷಸಿಯಂತೆ ಆ ಪೆಟ್ಟಿಗೆ ತನ್ನ ಬಾಯ್ತೆರೆದು ಕುಳಿತಿತ್ತು.

ಒಂದರಲ್ಲಿ ಯುರೇನಿಯಂ, ಇನ್ನೊಂದರಲ್ಲಿ ಪ್ಲುಟೋನಿಯಂ. ಅದು ಸಾಲದೆಂಬಂತೆ ಅದರ ಸುತ್ತಲೂ ಲೀಥಿಯಂ ಡಯುಟೆರೈಟಿನ ಒಂದು ಪೊರೆ. ಹೈಡ್ರೋಜನ್ನನ್ನು ಹೀಲಿಯಂ ನ್ಯೂಕ್ಲಿಯಸ್ಸಾಗಿಸಿ ಅಗ್ನಿಪರ್ವತದಂತೆ ಅನಂತ ಸ್ಫೋಟನೆಗೆ ಕಾರಣವಾಗಬಲ್ಲ ಎರಡು ವೈರ್‌ಗಳು–ಇವೆಲ್ಲಾ ಸೇರಿಸಿದರೆ ಆ ಪ್ರಳಯ ರಾಕ್ಷಸಿಯ ಹೆಸರು–ಥರ್ಮೊ ನ್ಯೂಕ್ಲಿಯರ್ ಬಾಂಬ್.

ಸಾಮಾನ್ಯ ಅಣುಬಾಂಬಿಗಿಂತಲೂ ಸಾವಿರಪಟ್ಟು ಹೆಚ್ಚು ವಿನಾಶಕಾರಿ.

ಪೆಟ್ಟಿಗೆಯಲ್ಲಿದ್ದ ಮಿಶ್ರಣದಿಂದ ರೇಡಿಯೋ ಆಕ್ಟೀವ್ ಕಿರಣಗಳು ತನ್ನ ಶರೀರವನ್ನು ಸೋಂಕಿದರೆ (ಈ ವೇಳೆಗಾಗಲೇ ಅವು ಸೋಂಕಿದ್ದರೆ) ತನ್ನ ಚರ್ಮ ಸ್ವಲ್ಪ ಸ್ವಲ್ಪವಾಗಿ ಸುಡುವಂತಾಗಿ ಮಾಂಸ ಉಂಡೆ ಕಟ್ಟಿಕೊಂಡು ಮೂಳೆಗಳಿಂದ ಬೇರೆಯಾಗಿ ಉದುರಲು ಪ್ರಾರಂಭವಾಗುತ್ತದೆ.

ಇಷ್ಟೆಲ್ಲಾ ಅಪಾಯವಾಗುವಂತಿದ್ದರೆ ಅದನ್ನು ಹೀಗೆ ಇಡುತ್ತಿರಲಿಲ್ಲ. ಒಂದು ವೇಳೆ ಅಪಾಯವಾಗುವಂತಿದ್ದರೆ ಈ ವೇಳೆಗಾಗಲೇ ಆಗಿರುತ್ತದೆ ಎಂದು ಮೊಂಡು ಧೈರ್ಯದಿಂದ ಮತ್ತೆ ಜಾಗರೂಕನಾಗಿ ಆ ಪೆಟ್ಟಿಗೆ ಪರೀಕ್ಷಿಸಿದ. ಅದರ ಮೇಲೆ ಒಂದು ಮೂಲೆಯಲ್ಲಿ ನಕ್ಷತ್ರ, ಕೆಳಗೆ ಎರಡು ಗೆರೆಗಳು. ಇದು ಯಾವುದೋ ಗೂಢಚರ್ಯೆ ಸಂಸ್ಥೆಯದೆಂದು ಹೇಳುತ್ತಿತ್ತು. ಪ್ಲಾಸ್ಟಿಕ್ ಚೀಲದ ಮೇಲೆ ಸಣ್ಣ ಅಕ್ಷರಗಳಲ್ಲಿ ಅಚ್ಚು ಮಾಡಿದ್ದರು.

Tropospheric fall-out Totally Restricted Local fall-out Minimised to 1/100

ಇದೇನೋ ಸರಿಯಾಗಿ ಅರ್ಥವಾಗಲಿಲ್ಲ. ಅವನ್ನು ತನ್ನ ಸ್ಥಳದಲ್ಲಿ ಇರಿ

ಸಿದ. ಈ ಬಗ್ಗೆ ಸರ್ಕಾರಕ್ಕೆ ತಿಳಿಸಬೇಕೆಂದರೂ ಮೊದಲು ಅಲ್ಲಿಂದ ಹೊರಕ್ಕೆ ಹೋಗಬೇಕು.

ಷಾಡೋ ಎದ್ದು ಕುರ್ಚಿಯೊಂದಿಗೆ ಒಳಗಣ ಕತ್ತಲ ವೆರಂಡಾ ದಾರಿಯೊಳಕ್ಕೆ ಹೋದ. ಕುರ್ಚಿಯ ಮೇಲೆ ಹತ್ತಿನಿಂತು ಹೊರಕ್ಕೆ ನೋಡಿದ. ಚಳಿಗೆ ಮುಖದ ಮೇಲೆ ಸೂಜಿ ಚುಚ್ಚಿದಂತಾಯಿತು. ಹೊರಗಡೆ ಕತ್ತಲೆ. ಆಗಾಗ ಮಿಂಚು ಕೆಳಗುರುಳಲು ಸಿದ್ಧವಾಗುವಂತೆ ತೂಗಾಡುತ್ತಿರುವ ಮರಗಳು ಕಾಣಿಸುತ್ತಿವೆ. ಒಳಕ್ಕೆ ಬರುತ್ತಿದ್ದ ಗಾಳಿಯ ವೇಗದಿಂದ ಅದು ಚಂಡ ಮಾರುತವಿರಬೇಕೆಂದು ಊಹಿಸಿದ ಷಾಡೋ.

ಆ ರಾತ್ರಿ ಕಾಳರಾತ್ರಿಯಾಗಲಿದೆ. ಜಗತ್ತಿಗೆ ಮಾತ್ರವಲ್ಲ ತಮ್ಮ ಬಾಳಿಗೂ ಕೂಡ. ಹೇಗಾದರೂ ಇಲ್ಲಿಂದ ಹೊರಕ್ಕೆ ತಪ್ಪಿಸಿಕೊಳ್ಳಬೇಕು. ಆ ಕಡೆಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಈ ಗೋಡೆ ತುಂಬಾ ಬಲವಾಗಿದೆ.

ಕುರ್ಚಿಯಿಂದ ಇಳಿದು ಆ ಸಂದಿಯಲ್ಲಿ ಮುಂದುವರಿದ. ಭರಿಸಲಸಾಧ್ಯವಾದ ದುರ್ಗಂಧ. ತುಂಬಾ ಕಾಲದಿಂದ ನೀರು ನಿಂತ ವಾಸನೆ. ಆ ದಾರಿಯನ್ನು ಯಾರೂ ಉಪಯೋಗಿಸುತ್ತಿರುವಂತೆ ತೋರುತ್ತಿಲ್ಲ. ಆದರೆ ಬಾಬಾ ಖಂಡಿತವಾಗಿಯೂ ಅದೇ ದಾರಿಯಲ್ಲಿ ಹೋಗಿದ್ದಾನೆ. ಅದೃಷ್ಟ ಚೆನ್ನಾಗಿದ್ದರೆ ತಾನೂ ಅಲ್ಲಿಂದ ಹೊರಕ್ಕೆ ಹೋಗಲು ಸಾಧ್ಯವಾಗಬಹುದು.

ಷಾಡೋನ ಈ ಆಸೆ ಪೂರ್ಣಗೊಳ್ಳಲಿಲ್ಲ. ಇದ್ದಕ್ಕಿದ್ದಂತೆಯೇ ಆ ಗಲ್ಲಿ ಒಂದು ಕಡೆ ಕೊನೆಗೊಂಡಿತು.

ತಡವಿ ನೋಡಿದ. ಎರಡು ಕಡೆ ಗೋಡೆ. ಒಂದು ಕಡೆ ಮರ. ಎಂದರೆ ಅದು ಬಾಗಿಲಾಗಿರಬೇಕು. ಚಿಲುಕ ಅಥವಾ ಹಿಡಿ ಏನಾದರೂ ಇದೆಯೇನೋ ಎಂದು ನೋಡಿದ. ಅಂಥಾದ್ದೇನೂ ಇಲ್ಲ. ಅತ್ತ ಕಡೆಯಿಂದ ಯಾರೋ ಮಾತನಾಡುತ್ತಿರುವ ಧ್ವನಿ ಕೇಳಿಸಿತು. ಹಲಿಗೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದ. ಅದರ ರಂಧ್ರಗಳಿಂದ ಬೆಳಕು ಕಾಣಿಸುತ್ತಿದೆ. ಒಂದು ರಂಧ್ರಕ್ಕೆ ಕಣ್ಣನ್ನು ಹತ್ತಿರವಿರಿಸಿ ನೋಡಿದ. ತಾನಿದುವರೆಗೂ ಇದ್ದ ವಾತಾವರಣಕ್ಕೂ, ಇದಕ್ಕೂ ತೀರಾ ವಿರೋಧ ವಾತಾವರಣ. ಪುಸ್ತಕಗಳನ್ನು ತುಂಬಿಕೊಂಡ ರ್ಯಾಕ್‌ಗಳು, ಕನ್ನಡಿಯ ಬೀರುಗಳು, ಒಂದು ಟೇಬಲ್, ಎರಡು ಕುರ್ಚಿಗಳು. ಒಂದು ಕುರ್ಚಿಯಲ್ಲಿ ತನ್ನ ಮುಂದೆಯೇ ಹದಿನೈದು ನಿಮಿಷಗಳ ಹಿಂದೆ ಹಾದು ಹೋದ ಬಾಬಾ ಸ್ವಲ್ಪ ಉಡುಪಿನ ಬದಲಾವಣೆಯಲ್ಲಿ ಆಕಾರದ ಬದಲಾವಣೆಯಿಂದ ಕುಳಿತಿದ್ದ. ಅಷ್ಟರಲ್ಲಿ ಯಾವುದೋ ಕೆಲಸಕ್ಕೆ

ಎದ್ದು ಒಂದು ಪುಸ್ತಕವನ್ನು ತೆರೆದು ವಿವರಣೆ ಕೊಟ್ಟನಂತರ ಪುಸ್ತಕವನ್ನು ಇರಿಸಲು ಇತ್ತ ತಿರುಗಿದ.

ನೋಡುತ್ತಿದ್ದ ಪಾಡೋ ಮುಖದ ಮೇಲೆ ಯಾರೋ ರಪರಪನೆ ಬಡಿದಂತಾಯಿತು. ಅಲ್ಲಿ ನಿಂತಿದ್ದವನು ಡಾಕ್ಟರ್ ವಂಶೀಕೃಷ್ಣ!

ಅವತಾರ್ ಬಾಬಾ!!

## ೪೧

"ಇಷ್ಟು ಭಾರಿ ಮಳೆಯಲ್ಲಿ ನೀವು ಕೃಷ್ಣಾಪುರಕ್ಕೆ ಹೋಗುತ್ತೀರಾ?" ಎಂದು ಕೇಳಿದ ವಂಶೀಕೃಷ್ಣ.

"ಇಲ್ಲ. ಹೋಗಲೇಬೇಕು. ಈ ರಾತ್ರಿ ಗೌರಿಯ ಹೆರಿಗೆ ಇದೆ."

"ಆ ಹಳ್ಳಿಯಲ್ಲೇಕೆ? ಇಲ್ಲಿಗೆ ಕರೆದುಕೊಂಡು ಬರಬಹುದಾಗಿತ್ತಲ್ಲವೇ?"

"ನಾನೂ ಹಾಗೇ ಯೋಚಿಸಿದ್ದೆ. ಆದರೆ ಗೌರಿ ಒಪ್ಪಲಿಲ್ಲ. ಒಂದೇ ಹಠ ಅವಳದು."

"ಅಂಥಾ ಹಠವೇನು?"

"ವಿಕೃತ ಶಿಶುಗಳು ಕ್ಷುದ್ರದೇವತೆಗಳಿಂದ ನಡೆಯುತ್ತವೆ ಎಂಬ ಜನಸಾಮಾನ್ಯರ ನಂಬಿಕೆಯನ್ನು ವಿರೋಧಿಸುತ್ತಾಳೆ. ಪ್ರತಿಯೊಂದು ಕಾರ್ಯ ಕಾರಣ ಸಂಬಂಧದಂತೆಯೇ ನಡೆಯುತ್ತದೆ ಎಂಬುದು ಆಕೆಯ ನಂಬಿಕೆ."

ವಂಶೀಕೃಷ್ಣ ನಗುತ್ತಾ, "ಪ್ರತಿಯೊಂದಕ್ಕೂ ಕಾರಣ ಕಂಡುಕೊಳ್ಳಬೇಕೆನ್ನುವುದು ಕೆಲವು ಸಾರಿ ಜೀವಕ್ಕೆ ಮುಪ್ಪು ತರಬಹುದು...." ಎಂದ.

ಗಡಿಯಾರವನ್ನು ನೋಡಿ ರಂಗಪ್ರಸಾದ್ ಎದ್ದು ನಿಂತು ಹೇಳಿದ: "ತುಂಬಾ ರಾತ್ರಿಯಾಗಿದೆ. ಈ ಚಂಡಮಾರುತ ನಿಲ್ಲುವಂತಿಲ್ಲ. ನಾನು ಹೊರಡುತ್ತೇನೆ."

"ವಿಮಾನ ನಿಲ್ದಾಣಕ್ಕೆ ಹೋದ ಕಾರು ಇನ್ನೂ ಬಂದಿಲ್ಲ....ಏಕೋ ಗೊತ್ತಾಗಲಿಲ್ಲ....ಅಗೋ ಬಂತು..."

ಹತ್ತು ಎಕರೆಗಳ ವಿಸ್ತೀರ್ಣದ ಬಯಲಲ್ಲಿ ಆ ಇನ್ಸ್‌ಟಿಟ್ಯೂಟ್ ಇದೆ. ದೂರದಿಂದ ಬರುತ್ತಿರುವ ಕಾರ್ ಲೈಟು ಮಿನುಗುತ್ತಿದೆ. ಡ್ರೈವರ್ ಓಡುತ್ತಾ ಒಳಗೆ ಬಂದು "ಸರ್, ಅಗರ್‌ವಾಲ್ ಸೇಠ್ ಸತ್ತುಹೋದರು.

ರಂಗಪ್ರಸಾದ್ ಬೆಚ್ಚಿದ. ಡ್ರೈವರ್ ಹೇಳುತ್ತಿದ್ದಾನೆ, "ತಪ್ಪಾಗಿ ಬೇರೆ ವಿಮಾನದತ್ತ ಅಗರ್‌ವಾಲ್ ಹೋದ. ಚಕ್ರಗಳ ಮಧ್ಯೆ ಸಿಕ್ಕಿಕೊಂಡು ಮೈ ಪುಡಿ ಪುಡಿಯಾಯಿತು. ಪೊಲೀಸರಿಂದ ಬಿಡಿಸಿಕೊಂಡು ಬರುವುದು ತಡ ವಾಯಿತು..."

ಡ್ರೈವರ್‌ನ ಮುಂದಿನ ಮಾತು ಕೇಳಿಸುತ್ತಿಲ್ಲ. ಮನಸ್ಸು ನಾನಾ ಕೋನ ಗಳಿಂದ ಚಿಂತಿಸುತ್ತಿದೆ. ಎರಡು ಗಂಟೆಯ ಹಿಂದೆ ನಗುನಗುತ್ತಾ ಮಾತಾಡು ತ್ತಿದ್ದವನು ಈಗ ಈ ಲೋಕದಲ್ಲಿಲ್ಲ.

"ಆಕ್ಸಿಡೆಂಟ್‌ಗಳು ಹೇಗೆ ಆಗುತ್ತವೆ ಎಂಬುದು ಯಾರೂ ಹೇಳಲು ಸಾಧ್ಯವಿಲ್ಲ. ಇಲ್ಲದಿದ್ದರೆ ಯಾರೂ ಊಹಿಸದ ರೀತಿಯಲ್ಲಿ ಹೀಗೆ ನಡೆಯುವುದು ಎಂದರೇನು?" ವಂಶೀಕೃಷ್ಣ ಹೇಳಿದ.

ರಂಗಪ್ರಸಾದ್ ಆವೇಶದಿಂದ "ಇದು ಆಕ್ಸಿಡೆಂಟ್ ಅಲ್ಲ. ಬೇರೆಯವರ ಕಣ್ಣಿಗೆ ತಿಳಿಯದಂತೆ ಮಾಡಿರುವ ಕೊಲೆ" ಎಂದು ಕಿರುಚಿದ.

ವಂಶೀಕೃಷ್ಣ ಮತ್ತು ಡ್ರೈವರ್ ಇಬ್ಬರೂ ಆತನನ್ನು ಆಶ್ಚರ್ಯದಿಂದ ನೋಡಿದರು. ರಂಗಪ್ರಸಾದ್ ತನ್ನನ್ನು ತಾನು ಸಂತೈಸಿಕೊಂಡು "ಇವೆಲ್ಲಾ ಯೋಜನಾಬದ್ಧವಾಗಿ ನಡೆಯುತ್ತಿವೆ ವಂಶೀಕೃಷ್ಣ. ಬೇರೆ ಯಾರಿಗೂ ಅನು ಮಾನಕ್ಕೆ ಅವಕಾಶವೇ ಇಲ್ಲದಂತೆ ಮಾಡಿರುವ ಕೊಲೆ. ನನ್ನ ಮೇಲೆ ಇದೇ ರೀತಿ ಪ್ರಯತ್ನ ನಡೆದಿತ್ತು. ಪ್ರತಿಮಾಳನ್ನು ಇದೇ ರೀತಿ ಕೊಂದಿದ್ದಾರೆ. ಕೇದಾರಗೌರಿ ದೊಡ್ಡಪ್ಪ ಡಾ|| ವಿಲಿಯಮ್ಸ್ ಕೊಲೆಯಾದದ್ದೂ ಹೀಗೆ..."

ವಂಶೀಕೃಷ್ಣನ ಮುಖದಲ್ಲಿ ಒಂದು ರೀತಿಯ ಭಾವ ಕಾಣಿಸಿಕೊಂಡಿತು. "ನೀವು ತುಂಬ ತಿಳಿದಿದ್ದೀರಲ್ಲಾ?" ಎಂದ.

"ಅಗರ್‌ವಾಲ್ ಸಾವಿನಿಂದ ನನ್ನ ಅನುಮಾನ ದೃಢವಾಯಿತು. ವಿಕೃತ ಶಿಶುಗಳ ಹುಟ್ಟಿಗೂ ಎಸ್‌ಎಸ್‌ಏಗೂ ಏನೋ ಸಂಬಂಧವಿದೆ ಎನಿಸುತ್ತದೆ.

"ಅದನ್ನು ಹೇಗೆ ಹೇಳುತ್ತೀರಿ?"

ರಂಗಪ್ರಸಾದ್ ಒಡನೆಯೇ ಉತ್ತರಿಸಲಿಲ್ಲ, ಕಡಲಿನ ತರಂಗಗಳಂತೆ ಬಾನನ್ನು ಮುಟ್ಟುವಂತೆ ಸಾಗಿ ಬರುತ್ತಿದ್ದ ಭಾವನೆಗಳನ್ನು ನಿಯಂತ್ರಿಸಿ ಅವಕ್ಕೆ ಒಂದು ರೂಪ ಕೊಡಲು ಸ್ವಲ್ಪ ಹೊತ್ತು ಕಾಯಬೇಕಾಯಿತು. ಸ್ವಲ್ಪ ಹೊತ್ತು ಕುಳಿತು ತನ್ನಲ್ಲಿ ತಾನೇ ಚಿಂತಿಸುತ್ತಾ, ಎಲ್ಲಿಂದಲೊ ವಿಷಯವನ್ನು ಪ್ರಾರಂಭಿಸದಿದ್ದರೆ ಕೊಂಡಿ ದೊರೆಯುವುದಿಲ್ಲವೆಂದು ಹೇಳಿದ. "ಜೆನೆಟಿಕ್ಸ್ ಓದುವ ಹುಡುಗರಿಗೆ ಅವರ ಮಾಸ್ಟರ್ ಒಂದು ಕಥೆ ಹೇಳುತ್ತಾರೆ. ಒಂದು ಕ್ರೋಮೋಜೋಂನಲ್ಲಿ ಐದುನೂರು ಜೀನ್‌ಗಳಿವೆ ಎಂದುಕೊಳ್ಳೋಣ. ಜೀನ್

ನಂಬರ್ ೨೩ ಕಣ್ಣಿನ ಬಣ್ಣಕ್ಕೆ ಸಂಬಂಧಿಸಿದ್ದು. ಜೀನ್ ೩೩೬ ಕಿವಿಯ ಆಕಾರಕ್ಕೆ ಸಂಬಂಧಿಸಿದ್ದು. ಜೀನ್ ೪೬೦ ಬಲಗೈಯ ತೋರುಬೆರಳಿಗೆ ಸಂಬಂಧಿಸಿದ್ದು. ಹೀಗೇ ಜೀನ್ ಜೋಡಣೆ ನಡೆದಿರುತ್ತದೆ. ಗಂಡಸಿನ ಕ್ರೋಮೋಜೋಮ್‌ನಲ್ಲೂ ಇದೇ ರೀತಿಯ ಐನೂರು ಜೀನ್‌ಗಳಿರುತ್ತವೆ. ಆದ್ದರಿಂದಲೇ ತಂದೆಯ ಕಣ್ಣಿನ ಬಣ್ಣವೇ ಮಗುವಿಗೂ ಆಗಾಗ ಬರುವ ಸಾಧ್ಯತೆ ಇರುವುದು. ತಂದೆಯಲ್ಲಿಯ ಪ್ರತಿಯೊಂದು ಅಂಶವನ್ನೂ ಜೀನ್ ತಾಯಿಯೊಳಕ್ಕೆ ತೆಗೆದುಕೊಂಡು ಹೋಗುತ್ತದೆ...."

"ಚಿಕ್ಕ ಮಕ್ಕಳಿಗೆ ಹೇಳುವಂತೆ ಹೇಳ್ತಿದೀರಲ್ಲಾ?"

ಅದನ್ನು ಕೇಳದವನಂತೆಯೇ "ಒಂದು ವೇಳೆ ಹೆಂಡತಿಯ ಕಣ್ಣು ನೀಲಿಯಾಗಿದ್ದು, ಗಂಡನ ಕಣ್ಣು ಕಪ್ಪಾಗಿದ್ದರೆ ಪುರುಷನ ಜೀನ್ ನಂಬರ್ ೨೩, ಸ್ತ್ರೀಯ ಜೀನ್ ನಂಬರ್ ೨೩ ರೊಂದಿಗೆ ಸೇರಿದ ನಂತರ ಅವುಗಳಲ್ಲಿ ಯಾವ ಜೀನ್ ಹೆಚ್ಚು ಬಲವಾಗಿರುತ್ತದೆಯೋ ಅದರಂತೆ ನಿರ್ಣಯವಾಗುತ್ತದೆ" ಹೇಳಿದ.

"ಅದನ್ನೇ ಡಾಮಿನೇಂಟ್ ಜೀನ್ ಎನ್ನುತ್ತಾರೆ"

"ಕೃಷ್ಣಾಪುರದಲ್ಲಿ ಹುಟ್ಟಿದ ಆರು ಶಿಶುಗಳನ್ನೂ ಗಮನಿಸಿದರೂ ಆ ವಿಕೃತ ರೂಪಗಳೆಲ್ಲಾ ತಲೆಯಲ್ಲಿ, ಮುಖದಲ್ಲಿ ಮಾತ್ರ ವಕ್ರತೆ. ಅಂಗ ವೈಕಲ್ಯತೆ ಇಲ್ಲ. ಹಾಗೆಂದರೆ ಅವುಗಳಲ್ಲೆಲ್ಲಾ ಹೆಣ್ಣನ್ನು ಪ್ರವೇಶಿಸಿದ ವೀರ್ಯದಲ್ಲಿ ತಲೆಗೆ ಸಂಬಂಧಿಸಿದ ಕ್ರೋಮೋಜೋಮ್‌ಗಳಲ್ಲಿ ಸುಮಾರು ಎಲ್ಲಾ ಜೀನ್‌ಗಳೂ ಹಾಳಾಗಿದ್ದವು. ಅಥವಾ ಇದನ್ನೇ ಹೇಳಬೇಕೆಂದರೆ ಪ್ರತಿ ವೀರ್ಯ ಕಣದಲ್ಲೂ ಮ್ಯುಟೇಷನ್ ಒಂದೇ ಕ್ರೋಮೋಜೋಂನಲ್ಲಿ ನಡೆದಿದೆ...."

"ಇರಬಹುದು, ಅದಕ್ಕೂ ಎಸ್ಸೆಸ್ಸೆಗೂ ಏನು ಸಂಬಂಧ?"

"ಇಲ್ಲೇ ಮುಖ್ಯವಾದ ಅಂಶವಿರೋದು. ಎಸ್ಸೆಸ್ಸೆ ತನ್ನಲ್ಲಿ ವ್ಯಾಪಾರಕ್ಕಾಗಿ ವೀರ್ಯವನ್ನು ಸ್ಟೋರ್ ಮಾಡಿರಬೇಕು. ಉದಾಹರಣೆಗೆ ರೋಮನ್ ಕಪೂರ್‌ನಿಂದ ವೀರ್ಯವನ್ನು ಕೊಂಡರೆ ಗ್ರಾಂಗಳಲ್ಲಿ ಕೊಳ್ಳಬಹುದು. ಅದು ಒಂದೇ ಗ್ರಾಂ ಆಗಿದ್ದರೂ ಅದೇನಾದರೂ ಹಾಳಾದರೆ ಸುಮಾರು ಹತ್ತುಸಾವಿರ ವಿಕೃತ ಶಿಶುಗಳ ಜನನಕ್ಕೆ ಅದು ಸಾಕಾದೀತು."

"ಒಂದು ತೊಟ್ಟು ವೀರ್ಯದಲ್ಲೂ ಇರುವ ಪ್ರತಿ ಜೀವಕಣದಿಂದಲೂ ಗರ್ಭವನ್ನು ಸಾಧಿಸುವುದು ಸಾಧ್ಯವಿದ್ದರೆ...."

"ಅದನ್ನು ನಮ್ಮ ತಂದೆ ಈ ಮೊದಲೇ ಸಾಧಿಸಿ ತೋರಿಸಿದ್ದಾರೆ. ಮೂವತ್ತು ವರ್ಷಗಳ ಹಿಂದೆಯೇ ಪ್ರಯೋಗ ಬದ್ಧವಾಗಿ ಅದನ್ನು ಸಾಬೀತು

ಮಾಡಿದ್ದಾರೆ. ಹಾಗೆ ಹುಟ್ಟಿದ ನಾನು ಈ ಪ್ರಪಂಚದ ಮೊದಲ ಶಿಶು ಎಂಬುದು ನಿಮಗೂ ಗೊತ್ತು."

"ಹೌದು. ಈ ಮೊದಲೇ ಹೇಳಿದ್ದೀರಿ. ನೀವು ಹೇಳುತ್ತಿರುವಂತೆ ಎಸ್ಸೆಸ್ಸೆ ಅವರ ಸ್ಟೋರ್‌ನಲ್ಲಿ ವೀರ್ಯ ಹಾಳಾಗದಿದ್ದರೂ ಅದರಿಂದ ಕೃಷ್ಣಾಪುರದಲ್ಲಿ ವಿಕೃತ ಶಿಶುಗಳೇಕೆ ಹುಟ್ಟುತ್ತಾರೆ? ತರ್ಕಕ್ಕೆ ನಿಲುಕದ ಸಂಗತಿ ಇದು. ಪ್ರತಿಮಾ ಪ್ರಸವದ ನಂತರ ಅನೇಕರಿಗೆ ಸಾಧಾರಣ ಮಕ್ಕಳೇ ಹುಟ್ಟಿವೆಯಲ್ಲಾ? ಎಸ್ಸೆಸ್ಸೆ ಇದಕ್ಕೆ ಕಾರಣವೆಂದು ಹೇಳಲು ಇನ್ನೂ ಪ್ರಬಲವಾದ ಆಧಾರಗಳನ್ನು ನಾವು ಕಂಡುಹಿಡಿಯಬೇಕಾದದ್ದು ಅವಶ್ಯಕ." ಎನ್ನುತ್ತಾ ಗಡಿಯಾರವನ್ನು ನೋಡಿ, "ಮೈಗಾಡ್, ಆಗಲೇ ಹತ್ತೂವರೆ, ನಿಮಗೆ ಹೊತ್ತಾಯಿತು" ಎಂದ ಡಾ|| ವಂಶೀಕೃಷ್ಣ.

ರಂಗಪ್ರಸಾದ್ ಎದ್ದು "ಹೇಗೂ ಈ ರಾತ್ರಿ ನಿದ್ರೆ ಇರದು. ಬೆಳಗಾಗುವ ವೇಳೆಗೆ ಗೌರಿ ಪ್ರಸವಿಸುತ್ತಾಳೆ ಎಂದುಕೊಂಡಿದ್ದೇನೆ. ಯಾವುದೋ ಸಣ್ಣ ಕೊಂಡಿಯೊಂದು ದೊರೆಯಬೇಕು. ಅದು ಸಿಕ್ಕಿದರೆ ನಾಳೆಯೇ ಬರುತ್ತೇನೆ." ಎಂದ.

"ನೀವು ಈ ರಾತ್ರಿ ಬಂದರೂ ಸಂತೋಷವೇ"

"ಗುಡ್ ನೈಟ್."

"ಮಳೆ ತುಂಬಾ ಬರೋ ಹಾಗಿದೆ. ಎಚ್ಚರಿಕೆ. ನಮ್ಮ ಡ್ರೈವರ್ ತುಂಬಾ ಅನುಭವಸ್ಥ..."

ಇಬ್ಬರೂ ಹೊರಕ್ಕೆ ಬಂದರು. ಡ್ರೈವರ್ ಕಾರಿನ ಬಾಗಿಲನ್ನು ತೆರೆದು ನಿಂತಿದ್ದ. ರಂಗಪ್ರಸಾದ್ ಕುಳಿತುಕೊಳ್ಳುತ್ತಲೇ ಬಾಗಿಲು ಮುಚ್ಚಿದ.

ಗಾಳಿ ಮತ್ತಷ್ಟು ಹೆಚ್ಚಾಯಿತು.

ಕಾರನ್ನು ಸ್ಟಾರ್ಟ್‌ಮಾಡುತ್ತಾ ವಂಶೀಕೃಷ್ಣನತ್ತ ನೋಡಿದ ಡ್ರೈವರ್, ವಂಶೀಕೃಷ್ಣನ ಕಣ್ಣಿನಿಂದ ಒಂದು ಸಂದೇಶವನ್ನು ಸ್ವೀಕರಿಸಿದಂತೆ ತಲೆಯಾಡಿಸಿ ಕಾರನ್ನು ಮುಂದಕ್ಕೆ ಕೊಂಡೊಯ್ದ.

ಮಳೆ ಪ್ರಾರಂಭವಾಯಿತು.

ರಂಗಪ್ರಸಾದ್ ಹೋದ ಮೇಲೆ ವಂಶೀಕೃಷ್ಣ ತುಂಬಾ ಹೊತ್ತು ಹಾಗೇ ನಿಂತಿದ್ದ. ಹೊರಗೆ ಮಳೆ ಒಂದೇ ಸಮನೆ ಸುರಿಯುತ್ತಿತ್ತು. ಆಕಾಶದಲ್ಲಿ ಮಿಂಚಿದಾಗಲೆಲ್ಲಾ ವಿಶಾಲವಾದ ಬಯಲಿನಲ್ಲಿ ಮರಗಳು ತಲೆಗೂದಲು ಕೆದರಿಕೊಂಡ ದೆವ್ವಗಳಂತೆ ಕಾಣಿಸುತ್ತಿವೆ. ಇನ್‌ಸ್ಟಿಟ್ಯೂಟನಿಂದ ಉದ್ದವಾಗಿ ಹರಿದಿರುವ ದಾರಿ ಹಾಲಿನಂತೆ ಬಳಸಿ ಗಿಡಗಳ ಮಧ್ಯೆ ಅದೃಶ್ಯವಾಗಿದೆ.

ಹಿಂದೆ ಏನೋ ಸದ್ದಾದಂತೆ ಕೇಳಿಸಿತು. ವಂಶೀಕೃಷ್ಣ ಹಿಂತಿರುಗಿ ನೋಡಿದ. ಮಹಾದ್ರಷ್ಟ ನಿಂತಿದ್ದ.

ಕತ್ತಲಲ್ಲಿ ಕಾಲಸಪ್ಪಳವೂ ಅರಿವಾಗದಂತೆ ಬರುವುದು ಆತನ ವೈಶಿಷ್ಟ್ಯ. ಮತ್ತಷ್ಟು ಭಯಂಕರನಾಗಿ ಕಾಣಿಸುತ್ತಿದ್ದಾನೆ. ಇಬ್ಬರೂ ಒಡನೆಯೇ ಮಾತನಾಡಲಿಲ್ಲ. ಸುರಿಯುತ್ತಿದ್ದ ಮಳೆಯನ್ನೇ ನೋಡುತ್ತಾ ಸ್ವಲ್ಪ ಹೊತ್ತು ಮೌನವಾಗಿದ್ದರು. ನಿಶ್ಶಬ್ದವನ್ನು ಮುರಿಯುತ್ತಾ "ಅಷ್ಟಾವಕ್ರ ಜನಿಸಲು ಕೆಲವೇ ಗಂಟೆಗಳು ಉಳಿದಿವೆ.... ಕಾಷ್ಮೋರಾ ಅವತರಿಸಲಿದೆ...."

ವಂಶೀಕೃಷ್ಣ ಮಾತನಾಡಲಿಲ್ಲ.

"ಎಷ್ಟೋ ವರ್ಷಗಳು ಹಿಮಾಲಯದಲ್ಲಿ ಅಲೆದದ್ದು, ಶೋಧಿಸಿದ್ದು ಇನ್ನು ಕೆಲವು ನಿಮಿಷಗಳಲ್ಲಿ ಸಾಕಾರವಾದ ರೂಪವನ್ನು ಪಡೆಯಲಿದೆ. ಇಷ್ಟು ದಿನಗಳ ನನ್ನ ಹಗೆತನವೂ ಪೂರ್ಣಗೊಳ್ಳಲಿದೆ. ಸಿದ್ಧಾರ್ಥ ಸತ್ತ. ಕೇದಾರಗೌರಿ ಇನ್ನೇನು ಸಾಯುತ್ತಾಳೆ. ಷಾಡೋ ಮತಿಭ್ರಮಣಗೊಂಡಿದ್ದಾನೆ. ಆ ವಂಶ ನಿರ್ವಂಶವಾಗಲಿದೆ. ನನ್ನ ಬಯಕೆ ಫಲಿಸಿದೆ...."

ವಂಶೀಕೃಷ್ಣ ಮಳೆಯನ್ನೇ ನೋಡುತ್ತಾ "ನಾವು ಬಯಸಿದಂತೆ ಕೇದಾರಗೌರಿ ಸ್ಮಶಾನವನ್ನು ಸೇರಿದ್ದಾಳೆ. ನೀವು ಇಚ್ಛಿಸುವಂತೆ ಅಷ್ಟಾವಕ್ರನು ಹುಟ್ಟುತ್ತಾನೆ. ಶಿಶುವನ್ನು ನಾವು ಇಲ್ಲಿಗೆ ಕರೆತರುತ್ತೇವೆ. ಈ ಭೂಗರ್ಭಗಲ್ಲಿಯೇ ಅಷ್ಟಾವಕ್ರ ಬೆಳೆಯುತ್ತಾನೆ" ಎಂದ.

"ನಿನ್ನ ಸಹಾಯಕ್ಕೆ ಹೇಗೆ ಕೃತಜ್ಞತೆ ತಿಳಿಸಬೇಕೋ ಗೊತ್ತಾಗುತ್ತಿಲ್ಲ ಅವತಾರ್ ಬಾಬಾ"

"ನಾನು ಮಾಡಿದ್ದೇನು?"

"ನಿನ್ನ ಕಟ್ಟಡದಲ್ಲಿ ನಮಗೂ ಸ್ಥಾನಕೊಟ್ಟೆ. ನಮ್ಮ ಕಾರ್ಯಕ್ರಮಗಳಿಗೆ ಅವಕಾಶ ನೀಡಿದೆ. ಕ್ಷುದ್ರಗಣಗಳಿಗೆ ಯಾವ ಲೋಪವೂ ಬರದಂತೆ ನೋಡಿಕೊಂಡೆ. ಅಷ್ಟಾವಕ್ರನು ಆವಿರ್ಭವಿಸುವುದರಲ್ಲಿ ನಿನ್ನ ಪಾಲು ಕಡಿಮೆಯೇನೂ ಅಲ್ಲ."

"ಯಾರೇನೂ ಮಾಡಿದ್ದರೂ ಕಾಷ್ಮೋರಾಕ್ಕಾಗಿ ತಾನೇ?" ಎಂದ ವಂಶೀಕೃಷ್ಣ. ಆ ವಿಷಯದ ಚರ್ಚೆ ಅನಾವಶ್ಯಕ ಎಂಬ ಧೋರಣೆ ಧ್ವನಿಸುತ್ತಿತ್ತು ಅವನ ಮಾತಿನಲ್ಲಿ.

"ರಂಜಿತಾ ಒಬ್ಬಳೇ ಉಳಿದಿದ್ದಾಳೆ. ಅವಳನ್ನು ಏನು ಮಾಡಬೇಕೆಂದಿದ್ದೀಯೇ?"

"ಅವಳು ನನಗೆ ಬೇಕು. ಅವಳ ಚಿಂತೆ ಬಿಡಿ."

"ಹಾಗಿದ್ದರೆ ಸರಿ..."

ಮಹಾದ್ರಷ್ಟ ಹೋದ ಮೇಲೆ ವಂಶೀಕೃಷ್ಣ ಒಳಕ್ಕೆ ಹೋದ. ಕ್ಲೋಸ್ಡ್ ಸರ್ಕ್ಯೂಟ್ ಟಿ.ವಿ.ಯಲ್ಲಿ ಪ್ರಾರ್ಥನಾ ಮಂದಿರದಲ್ಲಿ ನಡೆಯುವ ಕಾರ್ಯಕ್ರಮ ಕಾಣಿಸುತ್ತಿದೆ. ಅಷ್ಟಾವಕ್ರನನ್ನು ತಾನೂ, ಅವತಾರ್ ಬಾಬಾ ಸ್ಮಶಾನದಿಂದ ಇಲ್ಲಿಗೆ ತರುವುದಾಗಿ ಹೇಳುತ್ತಿದ್ದಾನೆ. ಸಭಿಕರಲ್ಲಿ ಸಂತೋಷ ವ್ಯಕ್ತವಾಗುತ್ತಿದೆ. ಉತ್ಸಾಹ ಉಕ್ಕುತ್ತಿದೆ.

ತನಗಾದ ಅನ್ಯಾಯವನ್ನು ವಿರೋಧಿಸುತ್ತಾ ಜಗತ್ತನ್ನೇ ದ್ವೇಷಿಸುತ್ತಾ ಹಿಮಾಲಯವನ್ನು ಸೇರಿದ ಮಹಾದ್ರಷ್ಟನಿಗೆ ಅಕಸ್ಮಾತ್ತಾಗಿ ಒಂದು ರಹಸ್ಯ ಪತ್ರ ದೊರೆಯಿತು. ಅದರಿಂದ ಮತ್ತೆ ಆತ ನಾಗರಿಕ ಪ್ರಪಂಚವನ್ನು ಪ್ರವೇಶಿಸಿದ್ದು, ಹಳೆಯ ದ್ವೇಷವನ್ನು ಸಾವಿರಪಾಲು ಹೆಚ್ಚಿಸಿಕೊಂಡು ಉಸ್ಲೋಕ್ ಸ್ಥಾಪಿಸಿದ್ದು, ಕಾಷ್ಮೋರವನ್ನು ನಾನಾ ಕ್ರಿಯೆಗಳಿಂದ ಆರಾಧಿಸಿದ್ದು, ಕಾಷ್ಮೋರಾದ ಅಂಶಾವತಾರಕ್ಕಾಗಿ ಬಿಸ್ತಾದಿಂದ ಮಹಾಮಾಂತ್ರಿಕರ ನಿಧಿಯಿಂದ ಆವಶ್ಯಕ ರಹಸ್ಯಗಳನ್ನು ಶೇಖರಿಸಿದ್ದೂ ಎಲ್ಲಾ ವಂಶೀಕೃಷ್ಣನ ಕಣ್ಮುಂದೆ ಬಂತು. "ಪರಿಸ್ಥಿತಿಗಳ ಪ್ರಭಾವಕ್ಕೆ ತುತ್ತಾಗಿ ಎಂಥಾ ವ್ಯಕ್ತಿಗಳು ಹೇಗಾಗುತ್ತಾರೆ ಎಂದು ಹೇಳಲು ಮಹಾದ್ರಷ್ಟನ ಬಾಳೇ ಒಂದು ಉದಾಹರಣೆ" ಎಂದುಕೊಂಡ. ಯಾವುದು ಏನೇ ಆದರೂ ತನ್ನ ಕೆಲಸ ಮಾತ್ರ ನಿರ್ವಿಘ್ನವಾಗಿ ಮುಂದೆ ಸಾಗುತ್ತಿದೆ. ಅಷ್ಟೇ ಸಾಕು ತನಗೆ.

ಇದೇ ಯೋಚನೆಯಲ್ಲಿಯೇ ರಂಜಿತಾ ಇದ್ದ ಕಡೆಗೆ ಹೋದ. ಅವಳನ್ನು ನೋಡಿ ಕಿರುನಗೆ ಬೀರಿ "ಸಾರಿ, ಮಧ್ಯದಲ್ಲಿ ಬಿಟ್ಟು ಹೋಗಬೇಕಾಯಿತು. ಡಾಕ್ಟರ್ ರಂಗಪ್ರಸಾದ್ ಬಂದಿದ್ದ. ಅದಕ್ಕೇ ಹೋಗಿದ್ದೆ" ಎನ್ನುತ್ತಾ ಎದುರಿನಲ್ಲಿದ್ದ ಕುರ್ಚಿಯಲ್ಲಿ ಕುಳಿತು "ನನಗೆ ನಿನ್ನಿಂದ ಬೇಕಾಗಿರುವುದರ ಬಗ್ಗೆ ಮಾತನಾಡೋಣವೇ?" ಎಂದು ಕೇಳಿದ.

ಅವನು ಕೇಳಿದ ಪ್ರಶ್ನೆಗೆ ಉತ್ತರಿಸದೆ "ರಂಗಪ್ರಸಾದ್ ಏನು ಹೇಳುತ್ತಿದ್ದಾನೆ?" ಎಂದು ಕೇಳಿದಳು. ಈ ರೀತಿಯಾದರೂ ಗೌರಿಯ ಬಗ್ಗೆ ಏನಾದರೂ ವಿಷಯ ಗೊತ್ತಾಗುತ್ತದೆಯೇನೋ ಎಂಬ ಆಶೆಯಿಂದ.

"ನಿಜಕ್ಕೆ ತುಂಬಾ ಹತ್ತಿರ ಬಂದಿದ್ದಾನೆ. ಅದಕ್ಕೆ ಪಾಪ...." ಎನ್ನುತ್ತಾ ಗಡಿಯಾರ ನೋಡಿಕೊಂಡು "...ಈ ವೇಳೆಗೆ ಪ್ರಾಣ ಕಳೆದುಕೊಂಡಿರುತ್ತಾನೆ" ಎಂದು ನಕ್ಕ.

ರಂಜಿತಾ ನಿಶ್ಚೇಷ್ಟಿತಳಾದಳು. ಈ ಉತ್ತರವನ್ನು ಅವಳು ನಿರೀಕ್ಷಿಸಿಯೇ ಇರಲಿಲ್ಲ. ತನ್ನ ಮನದ ಭಾವನೆಗಳು ಮುಖದಲ್ಲಿ ಪ್ರಕಟವಾಗದಂತೆ ಇರಲು

ಆಕೆ ತುಂಬಾ ಎಚ್ಚರವಹಿಸಬೇಕಾಯಿತು. ಮಿತಭಾಷಿಯೂ, ಸೂಕ್ಷ್ಮ ಬುದ್ಧಿಯವನೂ ಆದ ರಂಗಪ್ರಸಾದ್ ಕೂಡ ಇವರ ಸಂಬಂಧ ಹಸ್ತಕ್ಕೆ ಸಿಕ್ಕಿಬಿದ್ದ ಸುದ್ದಿ ಅವಳ ಎದೆಯನ್ನು ಹಿಂಡುತ್ತಿತ್ತು.

"ಆತ ತಿಳಿದ ಸತ್ಯವೇನು?" ತುಂಬಾ ಸಂತೈಸಿಕೊಂಡು ಗಂಭೀರವಾಗಿ ಕೇಳಿದಳು.

"ಅದನ್ನು ಹೇಳಬೇಕೆಂದರೆ ಎಸ್ಸೆಸ್ಸೆ ಬಗ್ಗೆ ಮೊದಲು ಹೇಳಬೇಕು."

"ಹಾಗಂದರೆ?"

"ಸ್ಪರ್ಮ್ ಸೆಲ್ಲಿಂಗ್ ಏಜನ್ಸಿ"

ರಂಜಿತಾ ಬೆಚ್ಚಿದಳು. ಅದನ್ನು ಗಮನಿಸಿದ ವಂಶೀಕೃಷ್ಣ ನಕ್ಕ. "ಮೊದಲಲ್ಲಿ ಹಾಗೇ ಅನಿಸುತ್ತೆ ರಂಜಿತಾ. ನೀನು ಒಪ್ಪಿದರೆ ಎಸ್ಸೆಸ್ಸೆಗೆ ನಿನ್ನನ್ನು ಸೆಕ್ರೆಟರಿಯಾಗಿ ಮಾಡುತ್ತೇನೆ. ನಿನ್ನ ಸಂಬಳ ಸಾವಿರಗಳಲ್ಲಿರುತ್ತದೆ..."

"ನಾನೇನು ಮಾಡಬೇಕು?"

"ಅದನ್ನು ಹೇಳುವುದಕ್ಕೆ ಮುನ್ನ ಎಸ್ಸೆಸ್ಸೆ ಬಗ್ಗೆ ವಿವರ ತಿಳಿಸಬೇಕು" ಎಂದು ಅದರ ಬಗ್ಗೆ ತಿಳಿಸುತ್ತಾ ಬಂದ. ಎಲ್ಲಾ ವಿವರಿಸಿದ ಮೇಲೆ ಕೊನೆಯಲ್ಲಿ ಹೀಗೆ ಹೇಳಿದ: "ಹೊಸ ಹೊಸ ಫ್ಯಾಷನ್ನುಗಳನ್ನು ಆದರಿಸುವ ಮನುಷ್ಯರಿಂದ ಈ ಸಂಸ್ಥೆಗೆ ವಿಪರೀತವಾದ ಲಾಭ ಬರುತ್ತಿದೆ. ಆದರೆ ಇಲ್ಲಿ ಒಂದು ಸಮಸ್ಯೆ. ರೋಮನ್ ಕಪೂರ್ ಅಂಥಾ ಒಳ್ಳೆಯವರ ವೀರ್ಯವನ್ನು ಕೊಳ್ಳುವುದು ಎಸ್ಸೆಸ್ಸೆಗೆ ಕಷ್ಟವಾಗಿಲ್ಲ. ಆದರೆ ಪಾಪ–ಪುಣ್ಯ, ದೇವರು-ಕರ್ಮ ಇಂಥಾವನ್ನ ನಂಬಿರೋ ವಿದ್ವಾಂಸರು, ಶಾಸ್ತ್ರಜ್ಞರು, ಕ್ರೀಡಾಪಟುಗಳ ವೀರ್ಯ ಎಸ್ಸೆಸ್ಸೆಗೆ ಹಣಕ್ಕೆ ದೊರೆಯುತ್ತಿಲ್ಲ. ನೀನು ಅವರನ್ನು ಒಪ್ಪಿಸಬೇಕು."

ಈ ಮಾತು ಕೇಳುತ್ತಿದ್ದ ರಂಜಿತಾಳಿಗೆ ಮತಿಭ್ರಮಣೆಯಾದಂತೆ ಭಾಸವಾಯಿತು. ಎಸ್ಸೆಸ್ಸೆಯಂಥಾ ಒಂದು ಸಂಸ್ಥೆ ಇದೆ ಎಂಬುದೇ, ಅದರ ವಿವರ ಕೇಳುತ್ತಿದ್ದಾಗ ಅವಳಿಗೆ ಆಶ್ಚರ್ಯವಾಯಿತು. ಇಂಥಾದ್ದನ್ನು ಕನಸಿನಲ್ಲೂ ಆಕೆ ಕಲ್ಪಿಸಲು ಸಾಧ್ಯವಿರಲಿಲ್ಲ. ದಿಗ್ಭ್ರಮೆಯಿಂದ ಕೇಳುತ್ತಿದ್ದ ಅವಳು ಕೊನೆಯ ವಾಕ್ಯವನ್ನು ಕೇಳಿ "ನಾನೇ...ಒಪ್ಪಿಸಬೇಕೇ?....ಹೇಗೇ?" ಎಂದು ತಡಬಡಿಸಿದಳು.

ವಂಶೀಕೃಷ್ಣ ನಗುತ್ತಾ "ಮೊದಲೇ ನಿನ್ನಲ್ಲಿ ಒಂದು ಸಂಗತಿ ಹೇಳಿದ್ದೆ. ನನ್ನ ಬಯಕೆ ಪೂರೈಸು ಎಂದರೆ ನೀನೇನು ಅರ್ಥ ಮಾಡಿಕೊಂಡೆಯೋ? ಸಿನಿಮಾಗಳಲ್ಲಿಯ ವಿಲನ್ ನಾನು ಎಂದು ಕೊಂಡೆಯೇನೋ? ಅದನ್ನೇ

ಆಧುನಿಕಗೊಳಿಸು ಅದೇ ನನಗೆ ಮಾಡಬೇಕಾದ ಸಹಾಯ...."

ರಂಜಿತಾಳಿಗೆ ಸ್ವಲ್ಪ ಅರ್ಥವಾಯಿತು. ಬಹುಭಾಗ ಅರ್ಥವಾಗಲಿಲ್ಲ. ಸಣ್ಣ ಹಾವಿನಿಂದ ತಪ್ಪಿಸಿಕೊಂಡು ಹೆಬ್ಬಾವಿನ ಬಾಯಿಗೆ ಸಿಕ್ಕಂತಾಗಿತ್ತು. ಅವತಾರ್‌ಬಾಬಾ ತನ್ನನ್ನು ಯಾವುದೋ ಸ್ವಾರ್ಥಕ್ಕಾಗಿ ಉಸ್ಮೋಕ್‌ನಿಂದ ತಪ್ಪಿಸಿದ ಎಂದಾಗ ಬೇರೊಂದು ತೆರನಾಗಿ ಯೋಚಿಸಿದ್ದಳು. ಈಗ ಅದಕ್ಕಿಂತಲೂ ಭಯಂಕರವಾದ ಈ ರೀತಿಯ ಬಯಕೆ ಮುಂದಿರಿಸುತ್ತಾನೆ ಎಂದು ಕೊಂಡಿರಲಿಲ್ಲ. ತನ್ನ ಊಹೆ ನಿಜವೇ ಆಗಿದ್ದರೆ ಆ ಪ್ರಮುಖರೊಂದಿಗೆ ಸಲಿಗೆ ಬೆಳಸಿ ಅದರಿಂದ ಈ ಕಾರ್ಯವನ್ನು ರೂಢಿಸಿಕೊಳ್ಳಬೇಕು.

ಅವಳ ಯೋಚನಾಗತಿಯನ್ನು ಬೇರೊಂದು ತೆರನಾಗಿ ಅರ್ಥಮಾಡಿಕೊಂಡು ಇನ್ನೂ ವಿವರವಾಗಿ ಹೇಳು ಎನ್ನುತ್ತೀಯಾ ರಂಜಿತಾ?" ಎಂದು ಹೇಳಿ ಆಕೆಯ ಉತ್ತರವನ್ನೂ ನಿರೀಕ್ಷಿಸದೆ "ನಮಗೆ ನಿನ್ನಂಥಾ ಅಂದವಾನ ಚುರುಕಾದ ತರುಣಿಯ ಅವಶ್ಯಕತೆ ತುಂಬಾ ಇದೆ. ನೀನು ಮಾಡಬೇಕಾಗಿರುವುದೆಲ್ಲಾ ನಮಗೆ ಸ್ವಲ್ಪ ಮುಜುಗರ ಉಂಟುಮಾಡುತ್ತಿರುವ ಪ್ರಮುಖರೊಂದಿಗೆ ಸ್ನೇಹ ಬೆಳೆಸಿಕೊಳ್ಳುವುದು. ನಿನ್ನಂಥಾ ತರುಣಿ ಸ್ವಲ್ಪ ಮುಂದಡಿ ಇರಿಸಿದರೆ ಎಂತಹವರಾದರೂ ಹಸ್ತಗತವಾಗುತ್ತಾರೆ. ಒಮ್ಮೆ ಬಲೆಗೆ ಬಿದ್ದವರನ್ನು ಹೆದರಿಸಿ ಬೆದರಿಸಿ ಈ ಕಾಂಟ್ರಾಕ್ಟ್‌ಗೆ ಒಪ್ಪಿಸಬಹುದು..."

"ಬ್ಲಾಕ್ ಮೈಲ್!" ಎಂದಳು ಅಪ್ರಯತ್ನವಾಗಿ.

"ಅಲ್ಲ, ಅವರಿಗೆ ಬೇಕಾಗಿದ್ದರೆ ನಾವೇ ಹಣ ಕೊಡ್ತೀವಿ. ನಮಗೆ ಬೇಕಾಗಿದ್ದು ಅವರು ಬಾಂಡ್ ಮೇಲೆ ಸಹಿ ಹಾಕುವುದು ಮಾತ್ರವೇ. ಅದು ನಮ್ಮಲ್ಲಿ ಅವರ ಅಂಶವನ್ನು ಕೊಳ್ಳಲು ಬರುವವರಿಗೆ ನಂಬಿಕೆ ಹುಟ್ಟಿಸಲು—ಆ ಅಂಶ ತಮ್ಮದೇ ಎನ್ನುವ ಸರ್ಟಿಫಿಕೇಟ್!"

"ಎಂದರೆ ಮಾರುವ ವಸ್ತು ಬೇರೆಯವರದೇನು?"

"ಅಲ್ಲ ರಂಜಿತಾ, ಮಾರುವುದೂ ಅವರದೇ ವೀರ್ಯ."

"ಅದು ಹೇಗೆ ಬರುತ್ತೆ?"

"ನಿನ್ನ ಮೂಲಕ."

ಸುಳಿಗಾಳಿಗೆ ತೂಗಾಡುವ ಎಲೆಯಂತೆ ನಡುಗಿದಳು. ಆವೇಶದಿಂದ ಕೊರಳ ನರಗಳು ಉಬ್ಬಿದವು. ತಾನು ಉಸ್ಮೋಕ್‌ಗೆ ಸೇರಿದವಳೆಂದು ನಿಜವನ್ನೇ ನುಡಿಯುವ ನಾಟಕ ನಡೆಸುತ್ತಿರುವುದು ಎಲ್ಲಾ ಮರೆತಳು. ಕೊನೆಯ ಮಾತು ಅವಳ ಯುಕ್ತಾಯುಕ್ತ ಜ್ಞಾನವನ್ನು ನಶಿಸುವಂತೆ ಮಾಡಿತ್ತು. ಅದುವರೆಗೂ ಅವನ ಮೇಲಿದ್ದ ಕೋಪ, ಅಸಹ್ಯ ಎಲ್ಲವೂ ಬೆರೆತು ಅವಳ ಆವೇಶ ಎಲ್ಲೆ

ಮೀರಿತ್ತು. ತಾನೇನು ಮಾಡುತ್ತಿರುವೆ ಎಂಬುದರ ಪ್ರಜ್ಞೆ, ಅದರ ಪರಿಣಾಮ ಎಲ್ಲವನ್ನೂ ಮರೆತು ಅವನ ಕೆನ್ನೆಗೆ ಬಲವಾಗಿ ಬಿಗಿದಳು. ನಂತರ ಸ್ತ್ರೀ ಸಹಜವಾದ ಉದ್ವೇಗ ಉಕ್ಕಿ ಮುಖವನ್ನು ಅಂಗೈಗಳಿಂದ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳಲು ಉಪಕ್ರಮಿಸಿದಳು.

ವಂಶೀಕೃಷ್ಣ ನಿಶ್ಚೇತನನಾದ, ತನ್ನ ಕಣ್ಣನ್ನು ತಾನೇ ನಂಬಲಾರದಾದ. ಕ್ರಮವಾಗಿ ಅವನ ಕಣ್ಣು ಕೆಂಪೇರಿತು. ಮುಖ ವಿಕೃತಗೊಂಡಿತು. ಒಳಗಣ ರಾಕ್ಷಸ ಇಣುಕು ಹಾಕಿದ. ತನ್ನ ಯಂತ್ರಗಳು ತನ್ನನ್ನೇ ಮೋಸಮಾಡಿದವೆ? ಈ ಕೋಪ ಛಲವಾಗಿ ಬದಲಿಸಿತ್ತು. ಇನ್ನೊಂದು ನಿಮಿಷವಾಗಿದ್ದರೆ ಏನಾಗುತ್ತಿತ್ತೊ ಅಷ್ಟರಲ್ಲಿ ಹೊರಗೆ ಯಾರೋ ಕರೆದರು.

ಎಂಥಾ ಸ್ಥಿತಿಯಲ್ಲಿದ್ದರೂ ಕ್ಷಣದಲ್ಲಿ ಸಾಧಾರಣವಾದ ಮನುಷ್ಯನಾಗಬಲ್ಲ ವಿದ್ಯೆ ಆತನಿಗೆ ಕರಗತವಾಗಿತ್ತು. ಬಾಗಿಲನ್ನು ಭದ್ರಗೊಳಿಸಿಕೊಂಡು ಹೊರಬಂದರು.

ಹೊರಗೆ ಕಾರು ಡ್ರೈವರ್ ನಿಂತಿದ್ದ. ವಂಶೀಕೃಷ್ಣನನ್ನು ನೋಡಿ ವಿಧೇಯತೆಯಿಂದ "ರಂಗಪ್ರಸಾದ್ ಹಿಂದಕ್ಕೆ ಬಂದಿದ್ದಾರೆ" ಎಂದ.

ವಂಶೀಕೃಷ್ಣನ ಹುಬ್ಬು ಗಂಟಿಕ್ಕಿತು "ಹಿಂದಕ್ಕೆ ಬಂದನೇ!" ಎಂದ.

"ಹೌದು ನಿಮ್ಮಲ್ಲಿ ಏನೋ ಮಾತನಾಡಬೇಕಂತೆ. ಪೆಟ್ರೋಲ್ ಹಾಕಿಸುತ್ತಿದ್ದೆ. ಏನೋ ಹೊಳೆದವನಂತೆ ಕಾರನ್ನು ಹಿಂದಕ್ಕೆ ತಿರುಗಿಸು ಎಂದ. ಹೇಗಾದರೂ ಊರ ಹೊರಕ್ಕೆ ಕರೆದುಕೊಂಡು ಹೋಗಲು ಪ್ರಯತ್ನಿಸಿದೆ ಸಾರ್. ಆದರೆ ಈಗಲೇ ಮಾತನಾಡಬೇಡ, ಎರಡೇ ನಿಮಿಷ, ನಡಿ ಎಂದ್ರು..."

ವಂಶೀಕೃಷ್ಣ ಪೂರ್ಣವಾಗಿ ಡ್ರೈವರ್ ಮಾತು ಕೇಳದೆಯೇ ವೆರಂಡಾದಲ್ಲಿ ನಡೆದು ಕತ್ತಲಹಾದಿ ದಾಟಿಕೊಂಡು ತನ್ನ ಇನ್ಸ್ಟಿಟ್ಯೂಟ್ ರೂಂನಲ್ಲಿ ಅಡಿಯಿರಿಸಿದ.

ರಂಗಪ್ರಸಾದ್ ಕುಳಿತಿದ್ದಾನೆ. ಹಿಂದೆ ಕೇಳಿಸಿದ ಸದ್ದಿಗೆ ತಲೆ ತಿರುಗಿಸಿ ವಂಶೀಕೃಷ್ಣನನ್ನು ನೋಡಿ "ನಿಮ್ಮೊಡನೆ ಒಡನೆಯೇ ಹೇಳದಿದ್ದರೆ ಮನಸ್ಸು ಸ್ಥಿಮಿತಗೊಳ್ಳುವಂತೆ ಕಾಣಲಿಲ್ಲ. ಅದಕ್ಕೆ ಕಾರನ್ನು ಹಿಂದಕ್ಕೆ ತಿರುಗಿಸಿ ಈಕಡೆ ಬಂದೆ" ಎಂದು ಹೇಳುತ್ತಾ ನಕ್ಕ.

"ಅದೇನು ವಿಶೇಷ ಹೇಳಿ ರಂಗಪ್ರಸಾದ್."

ದೊಡ್ಡ ವಿಷಯವನ್ನು ಕಂಡುಕೊಂಡ ಚಿಕ್ಕ ಹುಡುಗನಂತೆ ಸಂಭ್ರಮದಿಂದ "ಕೃಷ್ಣಾಪುರದಲ್ಲಿ ನಡೆದಿರುವ ವಿಕೃತ ಜನನಗಳಿಗೆ ಕಾರಣ ಗೊತ್ತಾಗಿದೆ" ಎಂದ.

* * * *

ಏಕಾದಶ ಭ್ರಾಮರಿ ಕುಂಭಯೋಗದಲ್ಲಿ ಒಂಭತ್ತನೆಯದು ಅನಾಹತ ನಾದಾವಸ್ಥೆ. ಕುಂಡಲಾಕೃತಿಯಲ್ಲಿ ಅಘೋರಮಂತ್ರವನ್ನು ಜಪಿಸುತ್ತಿರುವ ಮಹಾದ್ರಷ್ಟ ಕಣ್ತೆರೆದು ನೋಡಿದ. ಆತನ ಮುಂದೆ ಹೋಮಾಗ್ನಿ ಪ್ರಜ್ವಲ ಗೊಂಡಿತ್ತು. ಅರ್ಧರಾತ್ರಿಯಾಗಿರಲಿಲ್ಲ.

ಮಹಾದ್ರಷ್ಟ ಕಣ್ತೆರೆದರೂ ಚಲನೆಯಿಲ್ಲ. ಹೋಮಕುಂಡದಿಂದ ಸ್ಪಷ್ಟ ವಾದ ಅಗ್ನಿರೂಪವೊಂದು ಆತನಲ್ಲಿ ಐಕ್ಯವಾದುದನ್ನು ಅಲ್ಲಿದ್ದವರೆಲ್ಲಾ ಗಮ ನಿಸಿದರು. ಅದು ಅಷ್ಟಾವಕ್ರನ ಆಗಮನದ ಸಂಕೇತವೆಂದು ಭಾವಿಸಿ ಅವ ರೆಲ್ಲಾ ಹರ್ಷೋದ್ಗಾರ ಮಾಡಿದರು.

ಮಹಾದ್ರಷ್ಟ ಎದ್ದ.

ಹೋಮಕುಂಡದ ಪಕ್ಕದಲ್ಲಿದ್ದ ಕತ್ತಿಯನ್ನು ಕೈಗೆತ್ತಿಕೊಂಡು ಪಾಪಿ ಗಳನ್ನೇ ಸೈನಿಕರನ್ನಾಗಿ ಪಡೆದಿದ್ದು ಆನಂದೈಶ್ವರ್ಯಗಳನ್ನು ದಯಪಾಲಿಸುತ್ತಾ ರಾಜ್ಯಾಡಳಿತ ನಡೆಸಲು ಬರುವ ಸೈತಾನನ್ನು ತಾಯಿಯ ಕರುಳಿಂದ ಬೇರ್ಪಡಿ ಸಲು ಕ್ಷುದ್ರಾಕ್ಷರ ಫಲಯುಕ್ತವಾದ ಕತ್ತಿ ಅದು.

ಆತನೊಂದಿಗೆ ಮತ್ತಿಬ್ಬರು ರೆಡ್‌ಸ್ಕೆಲಿಟನ್‌ಗಳೂ ಹೊರಟರು. ಅಷ್ಟಾ ವಕ್ರನ ಜನನ ಸ್ಥಳ ಅವರಿಗೆ ಗೊತ್ತು.

ಎಲ್ಲಿದ್ದರೂ, ಯಾವುದೇ ಆಸ್ಪತ್ರೆಯ ಗೋಡೆಗಳ ಮಧ್ಯೆ ಬಂಧಿಸಲ್ಪಟ್ಟಿ ದ್ದರೂ, ತಾಯಿಯನ್ನು ಕಾಪೋರಾ ಸೂಕ್ತ ಸಮಯಕ್ಕೆ ಸರಿಯಾಗಿ ಸ್ಮಶಾ ನಕ್ಕೆ ಸೆಳೆದು ತರುತ್ತದೆ ಎಂಬುದು ಅವರ ನಂಬಿಕೆ. ಅದಕ್ಕಾಗಿಯೇ ಆ ಕತ್ತ ಲಲ್ಲಿಯೇ ನೆಲಮಾಳಿಗೆಯಿಂದ ಕೃಷ್ಣಾಪುರದ ಪಕ್ಕದಲ್ಲಿದ್ದ ಸ್ಮಶಾನಕ್ಕೆ ಹೊರಟರು.

ಅವರು ಹೋಗುತ್ತಲೇ ಉಳಿದವರು ಪೂಜೆಯಲ್ಲಿ ಮುಳುಗಿದರು. ಆ ಸಭೆಯಲ್ಲಿ ಉಸ್ಲೋಕ್ ಸಕಲ ಸದಸ್ಯರೂ ಸೇರಿದ್ದರು.

ಅವರ ಇಷ್ಟಾರ್ಥ ಪೂರೈಕೆಯಾಗುವ ದಿವ್ಯ ರಾತ್ರಿ. ಉಳಿದ ಜಗತ್ತಿಗೆ ಬಾನೆಲ್ಲಾ ನೀರಾಗಿ ಸುರಿವ ಕಾಳ ರಾತ್ರಿಯಾಗಿ ಕುಂಭ ದ್ರೋಣದಂತೆ ಮಳೆ ಸುರಿಯುತ್ತಿತ್ತು.

ಬರಲಿರುವ ಪ್ರಳಯವನ್ನು ಊಹಿಸದೆ ಪ್ರಪಂಚ ನಿದ್ರೆಯಲ್ಲಿ ಮುಳುಗಿತ್ತು.

* * * *

ಅನಿರೀಕ್ಷಿತವಾಗಿ ಆ ಯೋಚನೆ ಸ್ಫುರಿಸಿತ್ತು. ಮಳೆಯ ಫಲವಾಗಿ ಸ್ವಲ್ಪ ದೂರದಲ್ಲಿರುವುದೂ ಸ್ಪಷ್ಟವಾಗಿ ಕಾಣಿಸುತ್ತಿಲ್ಲ. ಕಾರಿನ ಗಾಜಿನ ಮೂಲಕ ಹೊರಗಿದ್ದವರ ಮಾತುಗಳು ಅಸ್ಪಷ್ಟವಾಗಿ ಕೇಳಿಸುತ್ತಿವೆ. ಸೀಟಿಗೆ

ಒರಗಿ ಕುಳಿತ ರಂಗಪ್ರಸಾದ್. ಡ್ರೈವರ್ ಪೆಟ್ರೋಲ್ ಹಾಕಿಸಿಕೊಳ್ಳು ತ್ತಿದ್ದಾನೆ.

ರಂಗಪ್ರಸಾದ್ ಶಾರೀರಿಕವಾಗಿ ಅಲ್ಲಿದ್ದ ಎನ್ನುವುದೇ ಹೊರತು ಮಾನಸಿಕವಾಗಿ ದೂರದಲ್ಲಿದ್ದ. ಸ್ವಲ್ಪಹೊತ್ತಿಗೆ ಮೊದಲು ವಂಶೀಕೃಷ್ಣನ ಬಳಿ ಆಡಿದ ಮಾತುಗಳೆಲ್ಲಾ ಮತ್ತೆ ಮತ್ತೆ ಕೇಳಿಸುತ್ತಿವೆ. ಇದೆಲ್ಲಕ್ಕೂ ಕಾರಣ ಎಸ್ಸೆಸ್ಸೇನೇನಾ? ಹಾಗಿದ್ದರೆ ಅದು ಹೇಗಾಯಿತು?

ಕಾರಿನ ಪಕ್ಕದಲ್ಲೇ ಯಾರೋ ಸ್ಕೂಟರಿನವನು ಪೆಟ್ರೋಲ್ ಸುರಿಯುವವನೊಂದಿಗೆ ಜಗಳವಾಡುತ್ತಿದ್ದಾನೆ. ಸ್ಕೂಟರಿಗೆ ಪೆಟ್ರೋಲ್‌ನೊಂದಿಗೆ ಆಯಿಲ್ ಕೂಡ ಬೆರೆಸುತ್ತಾರೆ. ಎರಡು ಚೆನ್ನಾಗಿ ಬೆರೆಯುವಂತೆ ಎಚ್ಚರಿಕೆ ವಹಿಸುತ್ತಾರೆ. ಹಾಗೆ ಮಾಡದೆ ಮೊದಲು ಆಯಿಲ್ ಸುರಿದು ನಂತರ ಪೆಟ್ರೋಲ್ ಸುರಿದನಂತೆ. ಅದೇ ಜಗಳಕ್ಕೆ ಕಾರಣ.

"ಮೊದಲೇ ಮಳೆ ಸಾರ್, ಒಳಗೆ ಎಲ್ಲಾ ಬೆರೆಯುತ್ತೆ ಬಿಡಿ" ಎಂದ ನಿರ್ಲಕ್ಷ್ಯದಿಂದ ಅವನು.

"ಅದಕ್ಕೇನಯ್ಯಾ ನಾನು ಹೇಳ್ತಾ ಇರೋದು. ಆಯಿಲ್ ಬೆರೆಯದೆ ಇಂಜಿನ್ನಿನೊಳಕ್ಕೆ ಹೋದರೆ, ಅದಕ್ಕೆ ಜತೆಯಾಗೆ ಒಂದು ಹನಿ ಮಳೆ ನೀರೂ ಸೇರಿದರೆ ನನ್ನ ಗತಿ ಏನು...?"

ಆಗಲೇ ರಂಗಪ್ರಸಾದ್‌ಗೆ ಆ ಯೋಚನೆ ಹೊಳೆದಿದ್ದು. ಅದುವರೆವಿಗೂ ಅಸ್ಫುಟವಾಗಿದ್ದದ್ದೂ ಪೂರೆಪೂರೆಯಾಗಿ ಈಗ ಬಿಡಿಸಿಕೊಂಡಿತು.

ಕೆಲವು ಘಟನೆಗಳಿಗೂ ಅವುಗಳಿಂದ ರೂಪುಗೊಳ್ಳುವ ಯೋಚನೆಗಳಿಗೂ ಸಂಬಂಧವಿರುವುದಿಲ್ಲ. ಅದೇ ರೀತಿಯ ಚಿಕ್ಕ ಘಟನೆ ಅದು. ತೀರಾ ಚಿಕ್ಕ ಸಂಘಟನೆ. ಆದರೆ ಅದರಿಂದ ಅವನ ಮನದಲ್ಲಿ ಮೂಡಿದ ಯೋಚನೆ ಮಾತ್ರ ಎಷ್ಟೋ ಮಂದಿಯನ್ನು ಅನೇಕ ತಿಂಗಳುಗಳಿಂದ ಯೋಚನಾಗ್ರಸ್ತರನ್ನಾಗಿ ಮಾಡಿತ್ತು. ಪ್ರಪಂಚದ ದೃಷ್ಟಿಯನ್ನೇ ಆ ಗ್ರಾಮ ಸೆಳೆಯುವಂತೆ ಮಾಡಿತ್ತು.

"ಡ್ರೈವರ್, ಕಾರು ಹಿಂದಕ್ಕೆ ತಿರುಗಿಸು. ಮತ್ತೆ ನಾವು ನಿಮ್ಮ ಇನ್ಸ್ಟಿಟ್ಯೂಟಿಗೆ ಹೋಗಬೇಕು" ಎಂದಾಗ ಮನಸ್ಸು ತೀರಾ ಸಂಭ್ರಮದಿಂದ, ಸಂತೋಷದಿಂದ, ಉದ್ವೇಗದಿಂದ ತೊನೆಯುತ್ತಿತ್ತು. ಆ ಆನಂದದಲ್ಲೂ ಡ್ರೈವರ್‌ನ ನೋಟದಲ್ಲಿದ್ದ ಸಂಶಯವನ್ನು ಗಮನಿಸಲಿಲ್ಲ. ತಾನು ಕಂಡುಕೊಂಡ ಸಂಗತಿಯನ್ನು ಇನ್ನೊಬ್ಬ ಡಾಕ್ಟರ್ ಬಳಿ ಹಂಚಿಕೊಳ್ಳಬೇಕೆಂಬ ಬಯಕೆ ಅವನನ್ನು ಕಾಡುತ್ತಿತ್ತು.

* * * *

"ಪ್ರತಿಮಾ ಅಗರ್‌ವಾಲಳ ಸಾವು ಅಸ್ವಾಭಾವಿಕ ಎಂದು ಮೊದಲೇ ಅನಿಸಿತ್ತು. ಅದಕ್ಕೆ ಕಾರಣ ಎಸ್ಸೆಸ್ಸೇ ಎಂದೂ ಅನಿಸಿತ್ತಾದರೂ ನಾವು ಮೊದಲೇ ಸಾಕಷ್ಟು ಸಾಕ್ಷಾಧಾರವಿಲ್ಲವೆಂದು ಹೇಳಿದ್ದೇವಲ್ಲಾ. ಏನೋ ಯೋಚಿಸುತ್ತಿದ್ದರೆ ಪೆಟ್ರೋಲ್ ಬಂಕಿನ ಹುಡುಗನ ಮಾತಿನಲ್ಲಿ ನನಗೆ 'ಲಿಂಕ್' ದೊರಕಿತು..." ಎಂದು ಹೇಳಲು ಉಪಕ್ರಮಿಸಿದ ರಂಗಪ್ರಸಾದ್.

"ಕೆಲವು ಮಂದಿ ಎಳೆ ಮಕ್ಕಳಿಗೆ ಹೊರಗೆ ಕತ್ತಲಾವರಿಸುತ್ತಲೇ ಶೀತವಾಗುತ್ತದೆ. ಇನ್ನು ಕೆಲವರು ಸ್ವಲ್ಪ ಕೆಲಸ ಮಾಡುತ್ತಲೇ ತುಂಬಾ ಆಯಾಸಗೊಂಡವರಂತೆ ದಣಿದು ಹೋಗುತ್ತಾರೆ. ಹೀಗೇಕಾಗುತ್ತದೆ? ಮನುಷ್ಯನಲ್ಲಿರುವ ಕೆಲವು ಕೋಟಿ ಜೀನ್‌ಗಳಲ್ಲಿ ಒಂದೇ ಒಂದು ಜೀನ್ ಹಾದಿ ತಪ್ಪಿದ್ದರಿಂದ ಈ ಫಲವುಂಟಾಗುತ್ತದೆ. ಸ್ವಲ್ಪ ಹಾಳಾದ ಜೀನ್ ಪೂರ್ಣವಾಗಿ ಸಾಯಲು (ಜೆನೆಟಿಕ್ ಡೆತ್) ಹಲವು ನೂರುವರ್ಷಗಳಾದರೂ ಬೇಕಾಗಬಹುದು. ಹಾಗೆ ಕೆಲವು ತಲೆಮಾರುಗಳ ನಂತರ ತಾತನಿಂದ ಮೊಮ್ಮಗನವರೆಗೆ ಈ ಪ್ರಭಾವ ಇರುತ್ತದೆ. ಜೀನ್ ಅಪಾಯಕರವಾದದ್ದಾದರೆ ಅದು ಬೇಗ ಸಾಯುತ್ತದೆ. ಎಂದರೆ ಮನುಷ್ಯ ಜಾತಿಗೆ ಈ ರೀತಿ ಜೀನ್‌ಗಳಿಗಿಂತಲೂ ಕಡಿಮೆ ಅಪಾಯವಿರುವ ಜೀನ್‌ಗಳಿಂದ ಹೆಚ್ಚು ಅಪಾಯವಿದೆ. ಇವು ಮನುಷ್ಯ ಜಾತಿಯನ್ನೇ ಹಿಡಿದು ನಾನಾ ಬಗೆಯ ಖಾಯಿಲೆಗಳನ್ನು ತಂದು ಅವನನ್ನು ಹಿಂಡಿ ಹಿಪ್ಪೆ ಮಾಡುತ್ತವೆ. ಒಂದು ಬಾರಿ ಜೆನೆಟಿಕ್ ಕೋಡ್ ಅರ್ಥಮಾಡಿಕೊಳ್ಳುವುದು ಸಾಧ್ಯವಾದರೆ ಮನುಷ್ಯನು ಪ್ರಪಂಚದ ಎಲ್ಲಾ ರೋಗಗಳಿಂದಲೂ ಮುಕ್ತಿ ಹೊಂದಿದಂತೆಯೇ!"

—ರಂಗಪ್ರಸಾದ್ ಇದನ್ನು ಹೇಳುತ್ತಿದ್ದಾಗಲೇ ಷಾಡೋ ಒಳಗಿನಿಂದ ಬಂದು ಬಾಗಿಲ ಕಿಂಡಿಯಿಂದ ಬಗ್ಗಿ ನೋಡಿದ.

ಅವನಿಗೆ ಮೊದಲು ಕಾಣಿಸಿದ್ದು ರಂಗಪ್ರಸಾದ್. ಒಂದು ಕ್ಷಣ ಆತನೇ ಇದೆಲ್ಲದಕ್ಕೂ ಕಾರಣ ಎಂದುಕೊಂಡ. ಅಷ್ಟರಲ್ಲಿ ವಂಶೀಕೃಷ್ಣ ಕಾಣಿಸಿದ. ತನ್ನಲ್ಲಿಯೇ ತರ್ಕಿಸಿ ವಂಶೀಕೃಷ್ಣನೇ ಈ ವ್ಯವಹಾರದ ಹಿಂದೆ ಇರುವ ವ್ಯಕ್ತಿ ಎಂಬುದನ್ನು ಗ್ರಹಿಸಿದ.

ಅಷ್ಟರಲ್ಲಿ ರಂಗಪ್ರಸಾದ್ ಮಾತು ಮತ್ತೆ ಕೇಳಿಸಿತು. "ಮನುಷ್ಯನ ಸಂತಾನೋತ್ಪತ್ತಿಯ ಶಕ್ತಿಯ ಮೇಲೆ ರೇಡಿಯೋ ಆಕ್ಟೀವ್ ವಿಕಿರಣದ ಪ್ರಭಾವ ಭಯಂಕರವಾದದ್ದು ಎಂಬುದು ಎಲ್ಲರಿಗೂ ಗೊತ್ತು. ಆದರೆ ಅದರ ಪ್ರಭಾವ ಅದನ್ನು ಪ್ರಯೋಗಿಸಿದ ಸಮಯವನ್ನು ಅನುಸರಿಸಿ ಇರುತ್ತದೆ ಎಂಬುದನ್ನು ಕ್ರಿಮಿಗಳ ಮೇಲೆ ಮುಲ್ಲರ್ ಪ್ರತ್ಯಕ್ಷವಾಗಿ ತೋರಿಸುವ ತನಕ ನಮಗೆ ಗೊತ್ತಿರಲಿಲ್ಲ. ಒಂದು ಪ್ರಾಣವನ್ನು 1000R ಬಳಿ ಸ್ವಲ್ಪಕಾಲ ಇರಿಸಿದರೆ

ಶೇಕಡ ೩ ರಷ್ಟು ವೀರ್ಯ ಹಾಳಾಗುತ್ತದೆ ಎಂಬುದನ್ನು ಆತ ನಿರೂಪಿಸಿದ. ಹಾಗೇ 2000R ಆದರೆ ಶೇಕಡ 6. 3000 ಆದರೆ ಶೇಕಡ 9. ಆದ್ದರಿಂದಲೇ ಡಾಕ್ಟರ್ ತೀರಾ ಅವಶ್ಯಕ ಎನ್ನುವ ಸಂದರ್ಭದಲ್ಲಿ ವಿನಾ ಎಕ್ಸ್‌ರೇ ಪರೀಕ್ಷೆಗೆ ರೋಗಿಗಳನ್ನು ತುತ್ತು ಮಾಡುವುದಿಲ್ಲ."

(ಎಕ್ಸ್‌ರೇ ಪ್ರಭಾವವನ್ನು R ಎಂದು ಅಳೆಯಲಾಗುತ್ತದೆ. R ಎಂದರೆ ರಾಂಟ್‌ಜನ್ ಎಂದು. ಎಕ್ಸ್‌ರೇ ಕಂಡುಹಿಡಿದ ವಿಜ್ಞಾನಿಯ ಹೆಸರು.)

"ಮುಲ್ಲರ್ ಇನ್ನೂ ಒಂದು ವಿಷಯವನ್ನು ಕಂಡುಕೊಂಡಿದ್ದಾನೆ" ಎಂದು ರಂಗಪ್ರಸಾದ್ ಮುಂದುವರಿಸಿದ. "2000R ನ್ನು ಮನುಷ್ಯನ ದೇಹದ ಮೇಲೆ ಹತ್ತು ನಿಮಿಷ ಪ್ರಯೋಗಿಸುವಾಗ ಎಷ್ಟು ದುಷ್ಪರಿಣಾಮಗಳುಂಟಾಗುತ್ತವೆಯೋ 200R ನ್ನು ನೂರು ನಿಮಿಷ ಪ್ರಯೋಗಿಸಿದರೂ (20R x 100). 20R ನ್ನು ಒಂದು ಸಾವಿರ ನಿಮಿಷ ಪ್ರಯೋಗಿಸಿದರೂ (20R x 1000). ಕೊನೆಗೆ 2R ನ್ನು ಹತ್ತು ಸಾವಿರ ನಿಮಿಷಗಳ ಕಾಲ ಪ್ರಯೋಗಿಸಿದರೂ ಅಷ್ಟೇ ದುಷ್ಪರಿಣಾಮವುಂಟಾಗುತ್ತದೆ" ಎಂದು ಕುರ್ಚಿಯಲ್ಲಿ ಮುಂದಕ್ಕೆ ಬಗ್ಗಿ ಹೇಳಿದ. "...ಎಸ್ಸೆಸ್ಸೇ ಮಾಡ್ತಿರೋದು ಏನು? ವೀರ್ಯವನ್ನು ಹಲವು ತಿಂಗಳು, ವರ್ಷಗಳು ರಕ್ಷಿಸುವ ಕೆಲಸ. ಇದನ್ನೇ ನಿಮಿಷಗಳಲ್ಲಿ ಹೇಳಿದರೆ ಸಾವಿರಾರು ನಿಮಿಷಗಳ ಕಾಲ ಎನ್ನಬಹುದಲ್ಲ. ಹಾಗೇ ಸ್ಟೋರ್ ಮಾಡುವ ಪದ್ಧತಿಯಲ್ಲಾಗಲಿ, ಸ್ಟೋರ್ ಮಾಡಲು ಬಳಸುವ ಪದಾರ್ಥದಲ್ಲಾಗಲ್ಲಿ ಕೇವಲ 2R ರೇಡಿಯೋ ವಿಕಿರಣವಿದ್ದರೂ ಸಾಕು ಪೂರ್ಣ ವೀರ್ಯವೆಲ್ಲಾ ನಾಶವಾಗುತ್ತದೆ..."

"ಸ್ವಲ್ಪ ನಿಲ್ಲಿ. ಆವೇಶಪಡುವ ಅವಶ್ಯಕತೆ ಇಲ್ಲ. ಶಾಸ್ತ್ರೀಯ ಪದ್ಧತಿಗಳನ್ನು ನಾನು ನಿರಾಕರಿಸುತ್ತಿಲ್ಲ. ಮಹತ್ತರ ವಿಷಯವೊಂದನ್ನು ಕಂಡುಕೊಳ್ಳಲು ಒಬ್ಬ ಶಾಸ್ತ್ರಜ್ಞ ಸಂಶೋಧನೆ ನಡೆಸುತ್ತಾನೆ. ಒಬ್ಬ ಪ್ರಮುಖನ ಅಂಶವು ಭವಿಷತ್ತಿನಲ್ಲಿ ಉಳಿಯಬೇಕೆಂದು ಅದಕ್ಕಾಗಿ ಈ ಸಂಶೋಧನೆಯು ನೆರವಾಗಬೇಕೆಂದು, ಮೇಧಾವಿಯ ಸಂತತಿ ಮಾನವ ಕುಲಕ್ಕೆ ಸದಾ ಕಾಲಕ್ಕೆ, ಲಭ್ಯವಾಗಲಿ ಎಂದು ಆಶಿಸುತ್ತಾನೆ.ಆದರೆ ಎಸ್ಸೆಸ್ಸೇ ಈಗ ನಡೆಸುತ್ತಿರುವುದೇನು? ಜಾರುತ್ತಿರುವ ಮನುಷ್ಯನ ನೈತಿಕ ಮೌಲ್ಯವನ್ನು ಬಳಸಿಕೊಂಡು ಹಣ ಮಾಡಿಕೊಳ್ಳುವುದು ಹಣ ಒಂದಿದ್ದರೆ ಯಾವುದನ್ನಾದರೂ ಕೊಳ್ಳಬಹುದೆಂದು ಬೀಗುತ್ತಿರುವ ಬಣ್ಣದ ಬೀಸಣಿಗೆಯ ಸಿಂಗಾರಿಗಳ ಹೊಸ ಫ್ಯಾಷನ್ ತೀರಿಸಲೆಂದು ಸಿನಿಮಾ ನಟರನ್ನು, ಕ್ರೀಡಾಪಟುಗಳನ್ನು, ಇತರ ಪ್ರಸಿದ್ಧರನ್ನೂ ಹಿಡಿದು ಬಳಸಿಕೊಳ್ಳುತ್ತಿದೆ. ಸ್ತ್ರೀ–ಪುರುಷರ ಸಂಬಂಧ ಮುಕ್ತವಾಗಿದ್ದು ಯಾವುದೇ

ಹಂತದಲ್ಲಿ ಅದು ಸುಖ ವ್ಯಾಧಿಗಳ ಸ್ತರವನ್ನು ದಾಟಿ ನಡುಕಟ್ಟಿನ ಆಯದಲ್ಲಿ ಕ್ಯಾನ್ಸರ್ ಇರುವ ಯಾವ ಪುರುಷನ ವೀರ್ಯವಾದರೂ ತಾನು ಪಡೆಯುವ ರೇಡಿಯೋ ಆಕ್ಟೀವ್ ಟ್ರೀಟ್‌ಮೆಂಟಿನ ಫಲವಾಗಿ ಕೆಟ್ಟು ಎಸ್ಸೆಸ್ಸೀ ಸ್ಟೋರ್ ಸೇರಿದ್ದರೆ ಅದರ ಫಲವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ."

"ಸಾಧಾರಣ ರತಿಯಲ್ಲಿಯಾದರೆ ತಾನಾಗಿಯೇ ಸಾವನ್ನು ಅಪ್ಪುತ್ತಿದ್ದ ಕ್ರೋಮೋಜೋಂ ನಮ್ಮ ತಂದೆಯವರು ಕಂಡುಹಿಡಿದ ದುರದೃಷ್ಟಕರ ಸಂಶೋಧನೆಯ ಫಲವಾಗಿ ಒಂದು ಆಕೃತಿಯಾಗಿ ರೂಪುಗೊಂಡಿತು. ಮಳೆ ಬೀಳುತ್ತಿರುವಾಗ ಸುರಿಯುತ್ತಿದ್ದ ಪೆಟ್ರೋಲ್ ಬೆರೆತ ಒಂದು ಹನಿ ಮಳೆಯ ನೀರು ಸಂಪೂರ್ಣ ಎಂಜಿನ್ನನ್ನೇ ಬ್ಲಾಕ್ ಮಾಡುವಂತೆ ಮುಲ್ಲರ್ ತನ್ನ ಸಂಶೋಧನೆಯಲ್ಲಿ ದೃಢೀಕರಿಸಿರುವ ವಾಸ್ತವ ಸಂಗತಿ ಭವಿಷ್ಯದ ಜಗತ್ತು ಜೀರ್ಣಿಸಿಕೊಳ್ಳಬೇಕಾದ ತೀರಾ ಕಹಿ ಅಂಶವಾಗಿ ಬದಲಾಗುತ್ತಿದೆ."

ಮರೆಯಿಂದ ಕೇಳುತ್ತಿದ್ದ ಷಾಡೋಗೆ ಕನಸಿನಲ್ಲಿ ಈ ದೃಶ್ಯ ಕಾಣುತ್ತಿರುವಂತೆ ತೋರಿತು. ಅವನು ಅಪ್ರತಿಭನಾದದ್ದು ರಂಗಪ್ರಸಾದ್ ವಿವರಿಸುತ್ತಿದ್ದ ಭಯಂಕರ ಪರಿಣಾಮವನ್ನು ಕಲ್ಪಿಸಿಕೊಂಡಲ್ಲ, ರಂಗಪ್ರಸಾದನನ್ನು ಕಂಡೇ!

ಒಂದು ಮೂಲೆಯಲ್ಲಿರುವ ಗ್ರಾಮದಲ್ಲಿ ತನ್ನ ಮನೆಯಲ್ಲೇ ಪ್ರಾಕ್ಟೀಸು ಮಾಡುತ್ತಿರುವ ಒಬ್ಬ ಡಾಕ್ಟರ್ ತಾನು ಕಂಡ ಒಂದು ಸಣ್ಣ ಘಟನೆಯಿಂದ ಎಷ್ಟು ಸಕಾರಣವಾಗಿ ಪರಿಸ್ಥಿತಿಯನ್ನು ಯೋಚಿಸಿ ವಿಮರ್ಶಿಸಬಲ್ಲ! ರಾಂಟ್‌ಜನ್ನನಿಂದ ಮುಲ್ಲರ್ ತನಕ ತಿಳಿದುಕೊಂಡು ತಾನು ತಿಳಿದಿರುವ ಜ್ಞಾನದೊಂದಿಗೆ ನಿರಂತರವೂ ತಪಿಸಿ, ಚಿಂತಿಸಿ ತನ್ನ ತಪಸ್ಸಿನ ಫಲವಾಗಿ ಒಂದು ನಿರ್ಣಯದೊಂದಿಗೆ ಬಂದಿದ್ದಾನೆ. ಇಂಥವನು ಭಾರತ ದೇಶದಲ್ಲಿ ಹುಟ್ಟಿದ್ದೇ ಆ ದೇಶದ ಸೌಭಾಗ್ಯವೋ? ಅಥವಾ ದೌರ್ಭಾಗ್ಯವೋ? ಇದನ್ನು ಕಂಡುಕೊಂಡಿದ್ದಕ್ಕಾಗಿ ಯಾವುದೇ ಸಂಸ್ಥೆ ಅವನಿಗೆ ಯಾವ ಗೌರವ ಸನ್ಮಾನವೂ ಮಾಡದೆ ಇರಬಹುದು; ಯಾವ ಯೂನಿವರ್ಸಿಟಿಯೂ ಡಾಕ್ಟರೇಟ್ ಕೂಡ ಬರದೆ ಇರಬಹುದು. ಕನಿಷ್ಟ ಸನ್ಮಾನ ಮಾಡಿಸಿಕೊಳ್ಳುವುದೂ ಕೂಡ ಆತನಿಗೆ ಇಷ್ಟವಿಲ್ಲದೆ ಇರಬಹುದು. ನಿಸ್ವಾರ್ಥವಾಗಿ ಹಳ್ಳಿಯಲ್ಲಿ ಸೇವೆ ಮಾಡುತ್ತಿರುವ ಡಾಕ್ಟರ್ ಆತ. ಆದರೆ ಆತನ ನಿರಂತರ ಜ್ಞಾನತೃಷೆಗೆ ಯಾವುದು ಮಾಪಕ? ಇದನ್ನು ಗುರ್ತಿಸುವವರು ಯಾರು?

ಅದಕ್ಕಿಂತಲೂ ಮುಖ್ಯವಾಗಿ ಈಗ ಈತನ ಪ್ರಾಣ ತೀರಾ ಅಪಾಯಕರವಾಗಿ ಸಿಕ್ಕಿಕೊಂಡಿದೆ. ಎದುರು ಕುಳಿತಿರುವವನು ನಾಗನಿಗಿಂತಲೂ ನಂಜು ಎಂಬುದನ್ನು ತಿಳಿಯದೆ ಎಲ್ಲಾ ಹೇಳುತ್ತಾ ಇದ್ದಾನೆ. ಆತನನ್ನು ರಕ್ಷಿಸುವುದು

ಹೇಗೆ? ರಹಸ್ಯವಾಗಿ ಆತನಿಗೆ ಇದನ್ನು ತಿಳಿಸುವುದಾದರೂ ಹೇಗೆ?

ತಾನಿಲ್ಲಿರುವುದು ಸ್ವಲ್ಪವಾದರೂ ವಂಶೀಕೃಷ್ಣನಿಗೆ ಗೊತ್ತಾದರೆ ಅದು ತನಗೂ, ರಂಗಪ್ರಸಾದ್‌ಗೂ, ರಂಜಿತಾಳಿಗೆ ದೊಡ್ಡ ಆಪತ್ತೇ.

ಅಷ್ಟರಲ್ಲಿ ರಂಗಪ್ರಸಾದ್ ಕೇಳಿದ: "ಪ್ರತಿಮಾ ಅಗರ್‌ವಾಲ್‌ಗೆ ವಿಕೃತ ಶಿಶು ಹುಟ್ಟಿದ್ದಕ್ಕೂ, ಕೃಷ್ಣಾಪುರದಲ್ಲಿ ವಿಕೃತ ಶಿಶುಗಳು ಹುಟ್ಟುವುದಕ್ಕೂ ಮಧ್ಯೆ ಒಂದು ವರ್ಷದ ಅಂತರವಿದೆ. ಎಂದರೆ ಪ್ರತಿಮಾ ಅಗರ್‌ವಾಲ್‌ಗೆ ವಿಕೃತ ಶಿಶು ಜನಿಸುತ್ತಲೇ ಎಸ್ಸೆಸ್ಸೇ ಗಾಬರಿಗೊಂಡು ಎಲ್ಲಿ ತಪ್ಪಾಗಿದೆ ಎಂಬುದನ್ನು ಕಂಡುಕೊಳ್ಳಲು ಕೃಷ್ಣಾಪುರದ ಹೆಂಗಸರ ಮೇಲೆ ಪ್ರಯೋಗ ನಡೆಸಲು ನಿಶ್ಚಯಿಸಿಕೊಂಡಿತು. ಪ್ರತಿಮಾ ಅಗರ್‌ವಾಲ್‌ನೊಂದಿಗೆ ಗರ್ಭಧರಿಸಿದ್ದ 'ಸೊಸೈಟಿ ಲೇಡೀಸ್' ಬೇರಿನ್ನ್ಯಾರಾದರೂ ಇದ್ದಾರೆಯೇ ಎಂಬುದನ್ನು ತಿಳಿದು ಕೊಳ್ಳುವುದು ಪೊಲೀಸರಿಗೆ ದೊಡ್ಡ ಸಮಸ್ಯೆಯಲ್ಲ. ಹುಚ್ಚನಿಂದ ಗುಣಮುಖ ವಾಗುತ್ತಿದ್ದ ಪ್ರತಿಮಾ ಈ ಬಗ್ಗೆ ಏನಾದರೂ ಹೇಳಬಹುದೆಂಬ ಭಯದಿಂದ ಆಕೆಯನ್ನು ಕೊಂದಿರಬೇಕು. ಕೃಷ್ಣಾಪುರದ ಸ್ತ್ರೀಯರು ಈ ಬಗ್ಗೆ ಹೇಳದೆ ಇರಲು ಕಾರಣ ಅವರಿಗೆ ಪ್ರಜ್ಞೆ ತಪ್ಪಿಸಿ ಇದನ್ನು ನಡೆಸುತ್ತಿರಬಹುದು. ಯಾವ ಹೆಣ್ಣಿಗೆ ವಿಕೃತ ಶಿಶುವಾಗುತ್ತದೆ ಎಂಬುದನ್ನು ಅವತಾರ್ ಬಾಬಾ ನಿಖರವಾಗಿ ಹೇಳಿದ ಎಂದರೆ ಆತನಿಗೂ ಎಸ್ಸೆಸ್ಸೆಗೂ ಸಂಬಂಧವಿದೆ ಎಂದಾಯಿತು..."

ವಂಶೀಕೃಷ್ಣನ ಮುಖದಲ್ಲಿ ಬದಲಾಗುತ್ತಿದ್ದ ಭಾವಗಳನ್ನು ದೂರದಿಂದ ಷಾಡೋ ಸ್ಪಷ್ಟವಾಗಿ ಗಮನಿಸುತ್ತಿದ್ದ. ರಂಗಪ್ರಸಾದ್ ಏನೂ ಗಮನಿಸುತ್ತಿಲ್ಲ. ಹೇಳುತ್ತಲೇ ಇದ್ದಾನೆ. ಹಿಂತಿರುಗಿ ನೋಡಿದ ವರೆಂಡಾ ನಿರ್ಜನವಾಗಿದೆ, ಕತ್ತಲೆ.

ಟೆಲಿಫೋನ್ ಕರೆಯಿತು.

ಫೋನಿನಲ್ಲಿ ಮಾತನಾಡಿ ಬಂದು "ಡಾಕ್ಟರ್ ನಿಮಗೆ ಕೆಟ್ಟ ಸುದ್ದಿ" ಎಂದ. "ನಿಮ್ಮ ನರ್ಸಿಂಗ್ ಹೋಂ ಮೇಲೆ ಆಕ್ರಮಣ ನಡೆದಿದೆಯಂತೆ. ನರ್ಸಿಂಗ್ ಹೋಂ ಪೂರ್ಣವಾಗಿ ನಾಶವಾಗಿದೆ ಎಂದು ಕೇಳಿದೆ."

ಎದುರಿನಲ್ಲಿದ್ದ ರಂಗಪ್ರಸಾದ್, ಮರೆಯಲ್ಲಿದ್ದ ಷಾಡೋ ಇಬ್ಬರೂ ಹತಾಶರಾದರು. ಷಾಡೋ ಕೋಪ ಎಲ್ಲೆ ದಾಟಿತ್ತು. ಮಹರ್ಷಿಯಂತಹ ರಂಗಪ್ರಸಾದ್‌ನ ಹಿರಿಮೆಯನ್ನು ಗುರ್ತಿಸಲು ಆಗದಿದ್ದರೆ ಬೇಡ. ಕನಿಷ್ಟ ಒಬ್ಬ ಮನುಷ್ಯನಾಗಿ ಅವನು ನಿಸ್ವಾರ್ಥಿಯಾಗಿ ತಮಗೆ ವೈದ್ಯ ನಡೆಸುತ್ತಿದ್ದ ವ್ಯಕ್ತಿಯನ್ನಾದರೂ ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲವೇ? ಯಾರೋ ಪ್ರಾರಂಭಿಸಿದ ಗಾಳಿಮಾತು ಕೇಳಿ ಈ ರೀತಿ ಮಾಡುವವರೇ? ಈ ಜನಕ್ಕೆ

ಯಾವಾಗ ಬುದ್ಧಿ ಬರುತ್ತದೆ?

ಇಬ್ಬರು ಎದ್ದರು.

"ಹೋಗೋಣ ಬನ್ನಿ ರಂಗಪ್ರಸಾದ್. ನಾನೂ ನಿಮ್ಮೊಂದಿಗೆ ಬರುತ್ತೇನೆ." ಎಂದ ವಂಶೀಕೃಷ್ಣ.

"ನೀವೂ ಬರುತ್ತೀರಾ?"

"ವಾತಾವರಣ ಏನೋ ಒಂದು ರೀತಿ ಇದೆ. ಅಲ್ಲಿ ಏನಾಗಿದೆಯೋ ಏನೋ! ಕಾರಿನಲ್ಲೇ ಹೋಗೋಣ ಬನ್ನಿ."

'ಬೇಡ ಬೇಡ' ಎಂದುಕೊಂಡ ಷಾಡೋ 'ರಂಗಪ್ರಸಾದ್ ಕಾರು ಬೇಡ. ನೀವಿರಿಸುವ ಪ್ರತಿ ಹೆಜ್ಜೆಯೂ ಸಾವಿನ ಬಾಯಿಗೇ ಸೆಳೆದೊಯ್ಯುತ್ತದೆ... ಬೇಡ... ಬೇಡ. ಇದನ್ನು ನಿಮಗೆ ಹೇಗೆ ಹೇಳಲಿ...?'

ಇಬ್ಬರೂ ಹೊರಕ್ಕೆ ನಡೆದರು.

ಷಾಡೋ ಹುಚ್ಚನಂತಾದ. ಗಟ್ಟಿಯಾಗಿ ಕಿರುಚೋಣವೆನಿಸಿತು. ಆದರೆ ವಿಚಕ್ಷಣ ಜ್ಞಾನ ಅವನನ್ನು ಎಚ್ಚರಿಸಿತು.

ಹೊರಗೆ ಗಾಳಿ ಬಲವಾಗಿ ಬೀಸುತ್ತಿತ್ತು. ಪೋರ್ಟಿಕೋನಲ್ಲಿ ಕಾರು ನಿಂತಿತ್ತು. ಡ್ರೈವರ್ ಒಂದು ಕಡೆ ಕೈಕಟ್ಟಿಕೊಂಡು ನಿಂತಿದ್ದಾನೆ. ವಂಶೀಕೃಷ್ಣ, ರಂಗಪ್ರಸಾದ್ ಪೋರ್ಟಿಕೋ ಬಳಿಗೆ ಬಂದರು.

ರಂಗಪ್ರಸಾದ್ ಅನ್ಯಮನಸ್ಕನಾಗಿದ್ದಾನೆ. ಜನ ತನ್ನ ನರ್ಸಿಂಗ್ ಹೋಂ ಹಾಳು ಮಾಡಿದ್ದಾರೆ. ಮುಖ್ಯವಾಗಿ ಕೇದಾರಗೌರಿ ಏನಾಗಿದ್ದಾಳೋ....? ಈ ಗಾಳಿ... ಈ ಮಳೆ...

ಇದೇ ಯೋಚನೆಯಲ್ಲಿ ಆತ ಮೊದಲ ಮೆಟ್ಟಿಲನ್ನು ಇಳಿದ.

ವಿಶಾಲವಾದ ಮೆಟ್ಟಿಲು. ನೂರು ಗಜಗಳ ದೂರದಲ್ಲಿ ಪ್ರಳಯ ತಾಂಡವ ನಡೆಸುತ್ತಿರುವ ಮರಗಳು.

ಇನ್ನೊಂದು ಮೆಟ್ಟಿಲಿಳಿದ.

ಆಗ ಕಾಣಿಸಿತು—ಅಪ್ರಯತ್ನವಾಗಿ ಅತ್ತ ನೋಡಿದ್ದ. ಗಾಳಿಯನ್ನು ತಡೆಯಲಾರದೆ ಎರಡು ಬೇಟೆ ನಾಯಿಗಳು ಓಡಿ ಬರುತ್ತಿದ್ದವು.

ಅದನ್ನು ಕಂಡೊಡನೆಯೇ ರಂಗಪ್ರಸಾದ್‌ನ ಮೈ ನಡುಗಿತು, ಆಳುದ್ದ ಎತ್ತರದ ನಾಯಿಗಳು.

ದೂರದಲ್ಲಿ ಮಿಂಚು, ಅದೇ ಮಿಂಚು ಆತನ ಮಿದುಳಲ್ಲೂ ಮಿಂಚಿತು. ಇಷ್ಟು ದಿನ ಬೇಟೆ ನಾಯಿಗಳನ್ನು ನೋಡಿದ್ದೆಲ್ಲಿ ಎಂದು ಯೋಚಿಸುತ್ತಿದ್ದ. ಕಳೆದ ಬಾರಿ ಬಂದಾಗ ಒಂದನ್ನು ನೋಡಿದ್ದ. ಇಷ್ಟು ಭಯಂಕರವಾಗಿದೆ

ಯಲ್ಲಾ ಎಂದುಕೊಂಡಿದ್ದ. ನಂತರ ಅದು ಮರೆಏಗೆ ತುತ್ತಾಯಿತು.

ಪಕ್ಕದಲ್ಲಿದ್ದ ವಂಶೀಕೃಷ್ಣನತ್ತ ನೋಡಿದ. ಅವನ ಮುಖದಲ್ಲಿ ಏನೋ ಭಾವನೆ ಕಾಣಿಸಿಕೊಂಡಿತು. ಅದನ್ನು ರಂಗಪ್ರಸಾದನ ಕಣ್ಣು ಗುರ್ತಿಸಿತು. ಮಿದುಳಿಗೆ ಚಾಲನೆ ಒಂದರ ಹಿಂದೆ ಒಂದರಂತೆ...

—ಸರೋಜ್‌ಕುಮಾರ್ ಅಗರ್‌ವಾಲ್ ಹೆಂಡತಿಯೊಂದಿಗೆ ಇಲ್ಲಿಗೆ ಬಂದು ನಿರಾಶನಾಗಿ ಹೋಗುತ್ತಿದ್ದರೆ, (ಹೇಗೆ ಗೊತ್ತಾಯಿತೋ) ಎಸ್ಸೆಸ್ಸೆ ಆತನ ಆಶೆ ಪೂರೈಸುವುದಾಗಿ ಹೇಳಿತು. ಎಸ್ಸೆಸ್ಸೇಗೆ ಈ ವಿಷಯ ಗೊತ್ತಾದ್ದು ಹೇಗೆ?

—ಎಲ್ಲೋ ದೂರದ ಬೊಂಬಾಯಲ್ಲಿ ಎಸ್ಸೆಸ್ಸೇ ನಡೆಸಬೇಕಾಗಿದ್ದ ಪ್ರಯೋಗ ಇಲ್ಲಿ ಕೃಷ್ಣಾಪುರದಲ್ಲಿಯ ಹೆಂಗಸರ ಮೇಲೆ ಪ್ರಭಾವ ತೋರುವುದು ಎಂದರೆ...? ಎಂದರೆ ಎಸ್ಸೆಸ್ಸೇ ಇರುವುದು ಬೊಂಬಾಯಲ್ಲಲ್ಲ ಕೃಷ್ಣಾಪುರಕ್ಕೆ ಹತ್ತಿರ (ಎಂದರೆ ಈ ಊರು) ಎಂದರ್ಥ!

ಇವೆರಡೂ ವಿಷಯಗಳನ್ನು ಬೆರೆಸಿದರೆ... ಬೆ... ರೆ... ಸಿ... ದ... ರೆ...

—ಈ ಇನ್‌ಸ್ಟಿಟ್ಯೂಟೇ ಎಸ್ಸೆಸ್ಸೇ!

ಬೆನ್ನು ಹುರಿಯಲ್ಲಿ ಚಳಿ ಏರಿದಂತೆ ಬರಿದಾದ ನೋಟವನ್ನು ವಂಶೀ ಕೃಷ್ಣನತ್ತ ಚೆಲ್ಲಿದ ರಂಗಪ್ರಸಾದ್. ರಂಗಪ್ರಸಾದನ ಮುಖದಲ್ಲಿ ನಡೆಯು ತ್ತಿದ್ದ ಬದಲಾವಣೆಗಳನ್ನು ಅರ್ಥಮಾಡಿಕೊಂಡವನಂತೆ ವಂಶೀಕೃಷ್ಣ ಎರಡು ಹೆಜ್ಜೆ ಹಿಂದಿಟ್ಟು ಒಂದು ಮೆಟ್ಟಿಲು ಮೇಲೇರಿ ಜೇಬಿಗೆ ಕೈಹಾಕಿದ. ಒಡೆಯನ ಉದ್ದೇಶವನ್ನು ಗಮನಿಸಿದಂತೆ ಡ್ರೈವರ್ ರಂಗಪ್ರಸಾದನ ಕಡೆಗೆ ಬೇಗ ಬೇಗ ನಡೆದ. ಬೇಟೆ ನಾಯಿಗಳು ಹತ್ತಿರವಾದವು.

ಮೂರು ಕಡೆಗಳಿಂದ ಆವರಿಸುತ್ತಾ ಬರುತ್ತಿದ್ದ ಅಪಾಯವನ್ನು ಗಮನಿಸಿ ರಂಗಪ್ರಸಾದ್ ನಾಲ್ಕನೆಯ ದಿಕ್ಕು ನೋಡಿದ—ಅಲ್ಲಿ ಮೆಟ್ಟಿಲ ಬಳಿ ಕಾರು ನಿಂತಿತ್ತು.

ತಡಮಾಡಲಿಲ್ಲ, ನಾಲ್ಕು ಮೆಟ್ಟಿಲನ್ನೂ ಒಂದೇ ನೆಗೆತಕ್ಕೆ ಹಾರಿ, ಕಾರಿನ ಬಾಗಿಲು ತೆರೆದುಕೊಂಡು ಕುಳಿತು ಕಾರು ಪಿಸ್ತೂಲಿನಿಂದ ಹಾರಿದ ಗುಂಡಿನಂತೆ ಕತ್ತಲಲ್ಲಿ ಸಾಗಿತು.

* * * *

ಮುರ್ಷಿದಾಯಿರೀ, ಆ ಯುವಕ ಇಬ್ಬರೂ ಏನೂ ತೋಚದವರಂತೆ ನೋಡುತ್ತಿದ್ದಾರೆ. ಸಿದ್ಧಾರ್ಥನೂ ಮಾತನಾಡಲಿಲ್ಲ. ಅವರವರ ಯೋಚನೆ ಯಲ್ಲಿ ಅವರಿದ್ದಾರೆ. ಮತ್ತೊಮ್ಮೆ ಆಕೆಯನ್ನು ಬರುವಂತೆ ಪ್ರಾರ್ಥಿಸೋಣ ಎಂದುಕೊಂಡ. ಆದರೆ ಅದು ಸಫಲವಾಗದು ಎನಿಸಿತು. ದುಷ್ಟಶಕ್ತಿಗಳಿಂದ ದೂರವಾಗಿ ನಿರ್ಮಿಸಿಕೊಂಡ ಕೋಟೆಯಿಂದ, ತಾನು ಏರ್ಪಡಿಸಿಕೊಂಡಿದ್ದ

ತಡೆಗಳಿಂದ ಆಕೆ ಹೊರಬರುವುದಿಲ್ಲ ಎಂಬುದು ಅರ್ಥವಾಗಿತ್ತು. ಏನೇ ಮಾಡಿದರೂ ತಾನೇ ಮಾಡಬೇಕಾಗಿತ್ತು. ಏನಿದ್ದರೂ ತಾನೇ ಯೋಚಿಸಬೇಕು.

ಸೂಫೀ ಮಂತ್ರಾಕ್ಷರಗಳನ್ನು ಹೇಗೆ ಕಲಿಯಲು ಸಾಧ್ಯ? ಯಾವ ಪತ್ರವೂ ಉಪಯೋಗಿಸದೆ, ಯಾವ ಲೇಖನಿಯೂ ಬಳಸದೆ ಹೇಗೆ ಪಠಿಸಲು ಸಾಧ್ಯ? ಅದನ್ನು ಕಲಿತು ಅದೃಶ್ಯ ಶಕ್ತಿಗಳೊಂದಿಗೆ ಹೋರಾಡುವುದು ಹೇಗೆ?


ಸಿದ್ಧಾರ್ಥ ಟೈಂ ನೋಡಿದ. ಇನ್ನು ಸಮಯ ಹೆಚ್ಚಿಲ್ಲ. ಒಂದೊಂದು ನಿಮಿಷ ಕಳೆದಂತೆಲ್ಲಾ ಕಳವಳ ಹೆಚ್ಚುತ್ತಿತ್ತು.

ಮುರ್ಷಿದಾಯಿರಿ ಶ್ರೀಚಕ್ರದ ಮಧ್ಯೆ ಕುಳಿತಿದ್ದಳು. ಆಕೆಯ ಮುಂದೆ ಮಂತ್ರಿಸಿದ ಕೆಂಪು ಹೂಗಳಿವೆ. ಆ ಕೆಂಪು ಹೂಗಳನ್ನು ನೋಡಿದಾಗ ಒಂದು ಯೋಚನೆ ಹೊಳೆಯಿತು. ಪಕ್ಕದಲ್ಲಿದ್ದ ಯುವಕನತ್ತ ತಿರುಗಿದ. ಅವನ ಸೊಂಟದಲ್ಲಿ ಅರಬ್ಬರು ಇರಿಸಿಕೊಳ್ಳುತ್ತಿದ್ದ ಹಿಡಿಯುಳ್ಳ ಚಾಕು ಇತ್ತು. ಅದನ್ನು ಹೊರಕ್ಕೆ ಸೆಳೆದುಕೊಂಡು ಮುರ್ಷಿದಾಯಿರಿ ಮುಂದೆ ಇರಿಸಿದ.

"ಲೇಖನಿ, ಪತ್ರವಿಲ್ಲದೆ, ಕಠಿಣವಾದ ಸೂಫೀ ಮಂತ್ರಾಕ್ಷರಗಳನ್ನು ನಾನು ಗ್ರಹಿಸಿ ಪಠಿಸುವ ಅವಶ್ಯಕತೆ ಇಲ್ಲದಂತೆ ಅವನ್ನು ನನ್ನ ಮೈಮೇಲೆ ಮುದ್ರಿಸಿ ಮುರ್ಷಿದಾಯಿರಿ. ಚರ್ಮ ಅಶಾಶ್ವತವಾದದ್ದು. ರಕ್ತವು ಮಳೆಗೆ ಸುರಿದು ಕಾಣದಾಗುತ್ತದೆ, ಕತ್ತಿ ಲೇಖನಿಯಲ್ಲ, ಅಕ್ಷರಗಳು ತುಂಬಾ ಬೇಗ ಮರೆಯಾಗುತ್ತವೆ. ಈ ವಿಧವಾಗಿ ದೈವ ನಿರ್ಣಯಕ್ಕೆ ವಿರೋಧವಿಲ್ಲ..."

ಮುರ್ಷಿದಾಯಿರಿಗೆ ತುಂಬಾ ಸಂತೋಷವಾಯಿತು. ಯುವಕನೂ ವಿಸ್ಮಿತನಾಗಿ ನೋಡಿದ-ಅವನು ಮನುಷ್ಯನೇ ಎಂಬ ಅನುಮಾನ. ಇದ್ಯಾವುದೂ ಸಿದ್ಧಾರ್ಥ ಗಮನಿಸುವಂತಿರಲಿಲ್ಲ. ಅವನ ಮುಂದಿದ್ದದ್ದು ಕೇವಲ ಕರ್ತವ್ಯ ಮಾತ್ರವೇ. "ತಡಮಾಡಬೇಡಿ, ಮುರ್ಷಿದಾಯಿರೀ," ಎಂದು ಪ್ರಾರ್ಥಿಸಿದ ಸಿದ್ಧಾರ್ಥ.

ಅವನ ಮಾತಿನಲ್ಲಿಯ ನಿಜವನ್ನು, ಶೀಘ್ರವಾಗಿ ಹೋಗಬೇಕಾಗಿದ್ದ ಅವನನ್ನು ಗಮನಿಸಿದ ಆಕೆ ತಡಮಾಡಲಿಲ್ಲ. ಒಂದು ನಿರ್ಣಯ ಕೈಗೊಂಡು ಒಡನೆಯೇ ಆ ಚಾಕಿನಿಂದ ಅವನ ಚರ್ಮದ ಮೇಲೆ ಮೊದಲ ಗೆರೆ ಎಳೆದಳು. ರಕ್ತ ಉಕ್ಕಿತು. ಸಿದ್ಧಾರ್ಥ ಹಲ್ಲು ಕಚ್ಚಿಕೊಂಡು ಸುಮ್ಮನಿದ್ದ. ಅವನ ಎದೆಯ ಮೇಲೆ ಸೂಫೀ ಫಲಕವನ್ನು ಹಾಗೇ ಚಿತ್ರಿಸಿದಳು ಆಕೆ.



ಇದನ್ನೆಲ್ಲಾ ಬರೆಯಲು ಮೂವ್ವತ್ತು ನಿಮಿಷಗಳಾದರೂ ಸಿದ್ಧಾರ್ಥ ಬಾಯ್ತೆರೆಯಲಿಲ್ಲ. ಮೈಯೆಲ್ಲಾ ರಕ್ತದಲ್ಲಿ ಸ್ನಾನ ಮಾಡಿದಂತೆ ಕಾಣಿಸುತ್ತಿತ್ತು.

ತುಂಬಾ ಶ್ರಮದಿಂದ ಅದನ್ನು ನಿರ್ವಹಿಸಿದ್ದ. ಮಂಜು ಪರ್ವತಗಳ ಮಧ್ಯೆ ನಿದ್ರೆಯಿಲ್ಲದೆ, ಊಟವಿಲ್ಲದೆ ಬಳಲಿದ್ದ. ಕಾಲಬಳಿ ರಕ್ತ ಮಡುಕಟ್ಟಿತ್ತು. ಬಂದಿದ್ದವನು ಮನುಷ್ಯನಲ್ಲ ಎಂದುಕೊಂಡ. ಸಾಧಾರಣ ಮನುಷ್ಯನಿಂದ ಇದು ಸಾಧ್ಯವಿಲ್ಲ. ಅಪ್ರಯತ್ನವಾಗಿ ಬಗ್ಗಿ ನಮಸ್ಕರಿಸಿದ ಅವನು.

ಗ್ರೀಕ್ ಶಿಲ್ಪದಂತೆ ಇದ್ದ ಸಿದ್ಧಾರ್ಥ. ಮಂತ್ರಾಕ್ಷರಗಳ ಬಲದಿಂದಲೋ ಅಥವಾ ಛಲದ ಕಾರಣದಿಂದಲೋ ಅವನ ಮುಖದಲ್ಲಿ ದಿವ್ಯ ಮಂಗಳ ತೇಜಸ್ಸು ಬೆಳಗುತ್ತಿತ್ತು. ಈ ಪ್ರಪಂಚದಲ್ಲಿ ಇನ್ನು ಯಾವ ದುಷ್ಟ ಶಕ್ತಿಯೂ ಏನೂ ಮಾಡಲಾರದು ಎಂಬ ಧೈರ್ಯ ಬೆಳಗುತ್ತಿತ್ತು.

ಮುರ್ಷಿದಾಯಿರಿ ಅವನ ಕೈಯಲ್ಲಿ ಚಾಕುವನ್ನು ಕೊಟ್ಟು "ಹೋಗಿ ಬಾ ಕಂದ. ಕಾಷ್ಮೋರದ ಪಾಪ ಹಸ್ತದಿಂದ ಪ್ರಪಂಚವನ್ನು ರಕ್ಷಿಸು. ಪ್ರಪಂಚದ ಸೂಫೀ ಸೋದರರೆಲ್ಲಾ ನೀನು ತರಲಿರುವ ವಿಜಯ ವಾರ್ತೆಗಾಗಿಯೇ ನಿರೀಕ್ಷಿಸುತ್ತಿರುತ್ತಾರೆ" ಎಂದಳು.

ಸಿದ್ಧಾರ್ಥ ಹೊರಕ್ಕೆ ನಡೆದ. ಹಿಂದೆಯೇ ಯುವಕನೂ ಹೊರಟ.

ಮುರ್ಷಿದಾಯಿರಿ ಅತ್ತ ಕಡೆಯೇ ಕಣ್ಣೆವೆ ಹಾಕದೆ ನೋಡುತ್ತಿದ್ದಳು.

ಕುದುರೆಗಾಡಿ ಏರಿದ. ಚಾವಟಿಯ ಸದ್ದಾಯಿತು. ಗಾಡಿ ಕೃಷ್ಣಾಪುರದತ್ತ ಓಡಿತು.

* * * *

ಹೊರಗೇನು ನಡೆಯಿತೆಂಬುದು ಷಾಡೋಗೆ ಗೊತ್ತಾಗಲಿಲ್ಲ. ವಂಶೀಕೃಷ್ಣ ಆತುರದಿಂದ ಒಳಕ್ಕೆ ಬಂದದ್ದು ಕಾಣಿಸಿತು. ಡ್ರೈವರ್ ಕೈಕೈ ಹಿಸುಕಿಕೊಳ್ಳುತ್ತಿದ್ದ. ಅವನ ಮುಖದಲ್ಲಿ ಆಂದೋಲನ ಸ್ಪಷ್ಟವಾಗಿ ಕಾಣಿಸುತ್ತಿತ್ತು.

ವಂಶೀಕೃಷ್ಣ ವೈರ್‌ಲೆಸ್‌ನಲ್ಲಿ ಯಾರೊಂದಿಗೋ ಮಾತನಾಡುತ್ತಿದ್ದುದು ಕೇಳಿಸಿತು. ಬೇಗ ಬೇಗ ಅದೇ ರೀತಿ ಮೂರುಕಡೆ ಮಾತನಾಡಿದ. "ನಮ್ಮ ಕಾರೇ. ಆತನನ್ನು ಹಿಡಿದು ತನ್ನಿ. ನಮ್ಮ ರಹಸ್ಯ ತಿಳಿದುಕೊಂಡಿದ್ದಾನೆ. ಎಚ್ಚರಿಕೆ" ಎಂದು ಹೇಳಿದ್ದು ಕೇಳಿಸಿತು.

ಷಾಡೋಗೆ ಸಂತೋಷವಾಯಿತು. ಕಾರಿನ ಶಬ್ದ ಕೇಳಿದ್ದು ರಂಗಪ್ರಸಾದ್ ಹೋಗುವಾಗ! ಇದೆಲ್ಲಾ ಹೇಗೆ ಅರ್ಥವಾಯಿತೋ ತಿಳಿಯಲಿಲ್ಲ. ಆದರೇನು ವಂಶೀಕೃಷ್ಣನ ಬಗ್ಗೆ ತಿಳಿದುಕೊಂಡ. ಅಷ್ಟೇ ಸಾಕು!

ಇಷ್ಟೆಲ್ಲಾ ಆದರೂ ವಂಶೀಕೃಷ್ಣನ ಮುಖದಲ್ಲಿ ಕಳವಳವಾಗಲಿ, ಆತುರವಾಗಲಿ ಕಾಣಿಸುತ್ತಿರಲಿಲ್ಲ. ಷಾಡೋಗೆ ಆಶ್ಚರ್ಯವಾಯಿತು. ಅವನು ತೀರಾ ಕುಶಾಗ್ರಮತಿಯಾಗಿರಬೇಕು. ಇಲ್ಲದಿದ್ದರೆ ಇಷ್ಟೊಂದು ನಿರ್ಲಿಪ್ತಭಾವ ಬರುವುದು ಸಾಧ್ಯವಿಲ್ಲ.

"ರಂಗಪ್ರಸಾದ್ ಬೆದರಿದ್ದಾನೆ. ಅವನ ಊಹೆಗೆ ನಿಲುಕದಿದ್ದ ಸತ್ಯ ಈಗ ತಿಳಿದಿದೆ. ಸಾಮಾನ್ಯ ಡಾಕ್ಟರ್. ಈ ರಾತ್ರಿಯಲ್ಲಿ ಪೋಲೀಸ್ ಸ್ಟೇಷನ್ನಿಗೆ ಹೋಗುತ್ತಾನೆ ಎಂದು ಭಾವಿಸಲಾರೆ. ಆಸ್ಪತ್ರೆ ನಾಶವಾಗಿದೆ. ಆದ್ದರಿಂದ ಕೇದಾರಗೌರಿಯನ್ನು ಹುಡುಕುತ್ತಾ ಅಲ್ಲಿಗೆ ಹೋಗುತ್ತಾನೆ ಅಥವಾ ಹೊಸದಾಗಿ ಪ್ರೇಮಕ್ಕೆ ಸಿಕ್ಕಿರುವುದರಿಂದ ಅವಳ ಮನೆಗಾದರೂ ಹೋಗಬಹುದು. ಅವಳನ್ನು ಪೋಲೀಸ್ ಸ್ಟೇಷನ್ನಿಗೆ ಕಳುಹಿಸಿ ತಾನು ಕೃಷ್ಣಾಪುರಕ್ಕೆ ಹೋಗಲೂಬಹುದು. ನಮ್ಮವರಲ್ಲಿ ಒಬ್ಬರನ್ನು ನಿವೇದಿತಾ ಮನೆಯ ಬಳಿ ಕಾವಲಿರಲು ತಿಳಿಸಿ. ನಿವೇದಿತಾಳನ್ನು ಕಾಣುವ ಮೊದಲೇ ನಾವು ಅವನನ್ನು ಹಿಡಿಯಬೇಕು. ಹಾಗಾದರೆ ಅನಾವಶ್ಯಕವಾಗಿ ನಿವೇದಿತಾಳನ್ನು ಕೊಲೆ ಮಾಡುವ ಅವಶ್ಯಕತೆ ಇರದು. ಮತ್ತೆ ಇಬ್ಬರನ್ನು ಕೃಷ್ಣಾಪುರದ ಹೊರವಲಯದಲ್ಲಿ ಇರಿಸಿ. ಜೀಪ್ ತೆಗೆದುಕೊಂಡು ಹೊರಡಿ. ಅವನು ಹೊರಟು ಎರಡು ನಿಮಿಷವಾಗಿದೆ ಅಷ್ಟೆ. ಅವನು ಹೋಗುವ ಎಡೆಯಲ್ಲಿ ಅವನಿಗಿಂತಲೂ ಮೊದಲೇ ನಾವಿರಬೇಕು. ಪೋಲೀಸ್ ಸ್ಟೇಷನ್ನಿನಲ್ಲಿ ನಮ್ಮವರಿಗೆ ಎಚ್ಚರಿಕೆ ಕೊಡಿ. ಏನಾದರೂ ಆಗಲಿ ಹತ್ತು ನಿಮಿಷಗಳಲ್ಲಿ ಅವನು ನನ್ನಲ್ಲಿಗೆ ಬರಬೇಕು–ಬದುಕಿರಲಿ, ಸತ್ತಿರಲಿ–ಬರಲೇಬೇಕು..."

ತೀರಾ ಗಂಭೀರವಾಗಿ, ಯಾವುದೇ ಉದ್ವೇಗಕ್ಕೆ ಒಳಗಾಗದಂತೆ ಅವನು

ನೀಡುತ್ತಿದ್ದ ಸೂಚನೆಗಳನ್ನು ಗಮನಿಸಿದರೆ ಅವನು ವಿಜ್ಞಾನಿ ಅಥವಾ ವೈದ್ಯ ಎನ್ನುವುದಕ್ಕಿಂತಲೂ ಹೆಚ್ಚಾಗಿ ಅಂತರರಾಷ್ಟ್ರೀಯ ಗೂಢಚಾರಿ ಸಂಸ್ಥೆಯ ದೊಡ್ಡ ಅಧಿಕಾರಿಯಾಗಿರುವಂತೆ ಕಾಣಿಸುತ್ತಿದ್ದ.

ಷಾಡೋಗೆ ಭಯವಾಯಿತು.

ಏಕೋ ಏನೋ, ರಂಗಪ್ರಸಾದ್ ಈ ಹುಲಿಯ ಪಂಜಾದಿಂದ ತಪ್ಪಿಸಿಕೊಳ್ಳಲಾರ ಎನಿಸಿತು.

* * * *

ರಂಗಪ್ರಸಾದ್ ಕೈ ನಡುಗುತ್ತಿತ್ತು.

ತಾನು ಅಪಾಯದ ದವಡೆಯಲ್ಲಿ ಸಿಕ್ಕಿಬಿದ್ದಿರುವುದು ಮನವರಿಕೆಯಾಗಿತ್ತು. ಯಾವುದೇ ಕಡೆಯಿಂದ ಅಪಾಯ ಮೇಲೆರಗಬಹುದಾಗಿತ್ತು. ತನ್ನ ಕಾರನ್ನು ಯಾರೂ ಹಿಂಬಾಲಿಸದೆ ಇರುವುದೇ ಆಶ್ಚರ್ಯವೆನಿಸಿತು. ವಂಶೀಕೃಷ್ಣನ ಮನುಷ್ಯರು ಎಲ್ಲಾ ದಿಕ್ಕುಗಳಲ್ಲೂ ತನಗಾಗಿ ಕಾಯುತ್ತಿದ್ದಾರೆ ಎಂಬುದರ ಕಲ್ಪನೆಯೂ ಆತನಲ್ಲಿರಲಿಲ್ಲ.

ಬೀದಿಗಳಲ್ಲಿ ಜನಸಂಚಾರವೇ ಇಲ್ಲ. ರಾತ್ರಿ ಹತ್ತೂವರೆ ಗಂಟೆಯಾಗಿದೆ. ಗಾಳಿಯ ವೇಗ ಹೆಚ್ಚಿದೆ. ಐದು ಅಡಿ ದೂರದಲ್ಲೇನಿದೆ ಎಂಬುದೂ ತಿಳಿಯುತ್ತಿಲ್ಲ. ಆದರೂ ಕಾರು ವೇಗವಾಗಿ ಮುಂದೆ ಸಾಗುತ್ತಿದೆ.

ನಡೆದಿದ್ದೆಲ್ಲಾ ಕನಸು ಎನಿಸುವಂತಿದೆ. ಇದೆಲ್ಲಾ ನಿಜ ಎನ್ನುವುದಾದರೂ ಹೇಗೆ. ಇನ್ನೂ ವಂಶೀಕೃಷ್ಣನ ನಗುಮುಖವೇ ಕಾಣಿಸುತ್ತಿದೆ ಈ ವಿಕೃತ ಶಿಶುಗಳ ಹುಟ್ಟಿನ ಹಿಂದೆ ಇಷ್ಟೊಂದು ಭೀಭತ್ಸಕಾಂಡ ಅಡಗಿದೆಯೆಂದುಕೊಳ್ಳಲು ತನಗೇ ಅಚ್ಚರಿ ಎನಿಸುತ್ತದೆ.

ನಿವೇದಿತಾಳನ್ನು ಈಗ ಎಚ್ಚರಿಸುವುದು ಸರಿಯಲ್ಲವೆಂದುಕೊಂಡು ಕಾರು ಊರಿಂದ ಹೊರಕ್ಕೆ ಬಂದು ಕೃಷ್ಣಾಪುರದ ಕಡೆ ನಡೆಸಿದ. ಅಲ್ಲಿ ತನ್ನ ಆಸ್ಪತ್ರೆ ನೋಡಬೇಕು. ಅಲ್ಲಿಯ ಎಸ್.ಐ. ಪರಿಚಿತ. ಆತನ ಮೂಲಕ ಕಂಪ್ಲೈಂಟ್ ಕೊಟ್ಟರಾಯಿತು.

ಕಾರು ಮುಂದೆ ಸಾಗುತ್ತಿತ್ತು. ರಂಗಪ್ರಸಾದ್‌ನ ಕೈ ನಡುಗುತ್ತಿತ್ತು. ಕಾರಿನ ಗಾಜಿನಿಂದ ನೀರು ಇಳಿದು ಹೋಗುತ್ತಿತ್ತು.

ಎರಡು ರಸ್ತೆಗಳು ಸೇರುವ ಸ್ಥಳ. ಪಕ್ಕದಿಂದ ಏನೋ ಬರುತ್ತಿರುವ ಅಸ್ಪಷ್ಟ ಆಕಾರ ಕಾಣಿಸಿತು. ಅದೂ ವೇಗವಾಗಿ ಬರುತ್ತಿದ್ದುದರಿಂದ ಒಡನೆಯೇ ಬ್ರೇಕ್ ಹಾಕಿದರೂ ಟೈರ್‌ಗಳು ತೇವವಾಗಿದ್ದರಿಂದ ಒಡನೆಯೇ ನಿಲ್ಲಲಿಲ್ಲ. ಆಗ್ಗೇ ತಡವಾಗಿತ್ತು. ಬ್ರೇಕಿನ ಸದ್ದು ಕೇಳಿಸುತ್ತಿದ್ದಂತೆಯೇ ಎರಡೂ ಡಿಕ್ಕಿ

ಹೊಡೆದ ಸದ್ದು.

ಆಘಾತದ ಮೇಲೊಂದು ಆಘಾತ ಎಂದು ಗಾಬರಿಗೊಂಡೇ ಕಾರಿನಿಂದ ಇಳಿದ. ಡಿಕ್ಕಿ ಹೊಡೆದದ್ದು ಕುದುರೆಗಾಡಿ.

ಅದರಲ್ಲಿ ಸಿದ್ಧಾರ್ಥ ಇದ್ದ!

ಈ ಅಪಘಾತದಲ್ಲಿ ಅವನು ಗಾಡಿಯಿಂದ ಹಾರಿ ಕೆಳಕ್ಕೆ ಬಿದ್ದ.

ನೀರಿನಲ್ಲಿ ನೆನೆದಿದ್ದ ಕೆಂಪು, ಧಾರೆಯಾಗಿ ಕೆಳಕ್ಕೆ ತೊಟ್ಟಿಡುತ್ತಿತ್ತು. ರಂಗಪ್ರಸಾದ್‌ಗೆ ಇದನ್ನು ನೋಡಿ ಎದೆಯೇ ನಿಂತಷ್ಟು ಭಯವಾಯಿತು! ಅದು ಸಿದ್ಧಾರ್ಥ ಎಂದು ಗುರ್ತಿಸುತ್ತಲೇ ಮಾತೇ ಬರಲಿಲ್ಲ.

ಸಿದ್ಧಾರ್ಥನೇ ಎದ್ದು ನಿಂತು "ನನ್ನದೇ ತಪ್ಪು ಕ್ಷಮಿಸಿ" ಎಂದ. ಆ ಬೆಳಕಿನಲ್ಲಿ ರಂಗಪ್ರಸಾದ್‌ನನ್ನು ಗುರ್ತಿಸಿ "ನೀವೇ?" ಎಂದ.

"ಇದೇನು ರಕ್ತ....?" ಎಂದು ರಂಗಪ್ರಸಾದ್, ಸಿದ್ಧಾರ್ಥ ಮೈ ನೋಡಿ ಕೊಂಡು "ನನಗೇನು ಪೆಟ್ಟು ಬಿದ್ದಿಲ್ಲ" ಎಂದ.

"ಹಾಗಿದ್ದರೆ ಈ ರಕ್ತ....?"

"ಅದೆಲ್ಲಾ ನಿಧಾನವಾಗಿ ನಂತರ ಮಾತನಾಡಬಹುದು. ಈಗ ಸಮಯ ವಿಲ್ಲ. ಹೋಗೋಣ ನಡೆಯಿರಿ. ಗೌರಿ ಅಪಾಯದಲ್ಲಿದ್ದಾಳೆ...." ಎಂದ ಸಿದ್ಧಾರ್ಥ ಕಾರಿನ ಕಡೆ ವೇಗವಾಗಿ ಹೆಜ್ಜೆ ಹಾಕುತ್ತಾ.

ರಂಗಪ್ರಸಾದ್‌ಗೆ ಗೌರಿ ಬಗ್ಗೆ ಏನು ಹೇಳಬೇಕೆಂಬುದು ಹೊಳೆಯದೆ, "ಸಿದ್ಧಾರ್ಥ, ನನ್ನ ನರ್ಸಿಂಗ್ ಹೋಂ ಅನ್ನು ಸುಟ್ಟುಹಾಕಿದ್ದಾರೆ. ಗೌರಿಯ ಸ್ಥಿತಿ ಹೇಗಿದೆಯೋ ನನಗೆ ಗೊತ್ತಿಲ್ಲ" ಎಂದು ಕ್ಷಮೆ ಕೋರುವ ಕಂಠದಲ್ಲಿ ನುಡಿದ.

ಸಿದ್ಧಾರ್ಥನ ಮುಖದಲ್ಲಿ ಯಾವ ಭಾವವೂ ಇಲ್ಲ. "ನನಗೆ ಗೊತ್ತು. ಕ್ಷುದ್ರಗಳು ಈ ಸಮಯದಲ್ಲಿ ಹೇಗಾದರೂ ಗೌರಿಯನ್ನು ಕರೆದುಕೊಳ್ಳು ತ್ತವೆ...." ಎಂದ.

"ಹಾಗಾದರೆ ಗೌರಿ?"

"ಈಗ ಸ್ಮಶಾನದಲ್ಲಿರುತ್ತಾಳೆ" ಎಂದ ಗಂಭೀರ ಕಂಠದಲ್ಲಿ.

ರಂಗಪ್ರಸಾದ್ ಅಚ್ಚರಿಯಿಂದ ಅವನತ್ತ ನೋಡಿದ. ಮಾತಿಲ್ಲ, ಸಿದ್ಧಾರ್ಥನ ಮಾತು ರಂಗಪ್ರಸಾದ್‌ಗೆ ಅರ್ಧ ಅರ್ಥವಾಯಿತು, ಅರ್ಧ ಅರ್ಥ ಆಗಲಿಲ್ಲ. ಏನೇ ಆದರೂ ಆತನಿಗೆ ದೊಡ್ಡ ಆಸರೆಯೇ ದೊರೆತಂತಾಯಿತು. ಸಿದ್ಧಾರ್ಥನನ್ನು ಕಂಡದ್ದು ಆತನ ಮನಸ್ಸಿಗೆ ಚೈತನ್ಯ ಲಭಿಸಿದಂತಾಗಿತ್ತು. ಕಾರು ಕೃಷ್ಣಾಪುರದತ್ತ ಸಾಗುತ್ತಿದ್ದಾಗ ವಂಶೀಕೃಷ್ಣನ ಬಗ್ಗೆ ಒಂದು ಕಥೆ

ಯಂತೆ ನಡೆದುದನ್ನು ವಿವರಿಸಿದ. ಬಳಲಿದ್ದರಿಂದ ಸೀಟಿಗೆ ತಲೆಯಾನಿಸಿ ಕಣ್ಮುಚ್ಚಿದ.

ರಂಗಪ್ರಸಾದ್ ಅಪರೂಪದ ಮೇಧಾವಿ. ಆದರೆ ವಾಸ್ತವ ಸ್ಥಿತಿಯಲ್ಲಿ ವಿರೋಧವಾದಾಗ ಸಿದ್ಧಾರ್ಥನಂತೆ ಅವನ್ನು ಎದುರಿಸುವ ಸಾಮರ್ಥ್ಯ ಆತ ನಲ್ಲಿರಲಿಲ್ಲ. ಚಿಕ್ಕಮಗುವಿನಂತೆ ಎಲ್ಲವನ್ನೂ ಸಿದ್ಧಾರ್ಥನಿಗೆ ಹೇಳಿ, ಇನ್ನು ನಿನ್ನದೇ ಹೊಣೆ ನನ್ನದೇನೂ ಇಲ್ಲ ಎನ್ನುವಂತೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ!

"ನೀವು ಹೇಳಿದ್ದೆಲ್ಲಾ ನಿಜವಾಗಿದ್ದಲ್ಲಿ ಆ ವಂಶೀಕೃಷ್ಣನನ್ನು ನಿಲುವಾಗಿ ಸೀಳಬೇಕು. ಆದರೆ ಅಷ್ಟಮ ಗರ್ಭನ ಜನ್ಮಕ್ಕೆ ಕಾರಣ ವಂಶೀಕೃಷ್ಣನಲ್ಲ. ಅತೀಂದ್ರಿಯ ಶಕ್ತಿಗಳು. ಆ ಅತೀತ ಶಕ್ತಿಯನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿ ಕೊಳ್ಳುತ್ತಿದ್ದಾನೆ ಅಷ್ಟೆ."

ರಂಗಪ್ರಸಾದ್ ಚಕಿತನಾಗಿ ತಲೆ ಪಕ್ಕಕ್ಕೆ ತಿರುಗಿಸಿ ನೋಡಿದ. ಒಂದೇ ಸಮನೆ ಸುರಿಯುತ್ತಿದ್ದ ಮಳೆಯಲ್ಲಿ ಕಾರು ವೇಗವಾಗಿ ಓಡುತ್ತಿದೆ. ರಂಗ ಪ್ರಸಾದ್ ಹೇಳಿದ ವಾಸ್ತವ ಸಂಗತಿಗಳು ಅವನ ಮೇಲಾವ ಪರಿಣಾಮವೂ ಬೀರಲಿಲ್ಲವೆಂಬುದನ್ನು ಗುರುತಿಸಿದ. ಇಬ್ಬರೂ ಬೇರೆ ಬೇರೆ ಸಿದ್ಧಾಂತಗಳನ್ನು ನಂಬಿಕೊಂಡು ಒಂದೇ ಗಮ್ಯದತ್ತ ಪಯಣಿಸುತ್ತಿದ್ದಾರೆ. ಆದರೆ ದುರದೃಷ್ಟ ವಶಾತ್ ಅವರು ತೀರಾ ಸಾಮಾನ್ಯವೆಂದು ಭಾವಿಸಿ ಮಾತನಾಡಿಕೊಳ್ಳು ತ್ತಿರುವ ವ್ಯಕ್ತಿ ಅಂತರರಾಷ್ಟ್ರೀಯ ಗೂಢಚಾರಿ ಸಂಸ್ಥೆಗಳೊಂದಿಗೆ, ಅನೇಕ ಅಪರಾಧಿಗಳೊಂದಿಗೆ ಸಂಬಂಧ ಇರಿಸಿಕೊಂಡಿರುವವನು ಎಂಬುದು ಅವರಿಗೆ ಗೊತ್ತಿಲ್ಲ. ಆ ರಾತ್ರಿ ರಂಗಪ್ರಸಾದ್‌ಗಾಗಿ, ಅವರು ಹೋಗುತ್ತಿದ್ದ ಕಾರ್‌ಗಾಗಿ ಬಲೆ ಹರಡಲಾಗಿದೆ ಎಂಬುದೂ ಗೊತ್ತಿರಲಿಲ್ಲ.

"ಪ್ರತಿಯೊಂದಕ್ಕೂ ಕಾರಣವನ್ನು ಹುಡುಕುವವರು ನೀವು. ಕಾರಣಾ ತೀತವಾದದ್ದೂ ಇದೆ ಎಂದು ನಂಬಿರುವವನು ನಾನು. ಯಾರ ಸಿದ್ಧಾಂತ ಸರಿ ಎಂಬುದನ್ನು ಈಗ ಚರ್ಚಿಸುವುದು ಬೇಡ. ನಾನು ಇಲ್ಲೇ ಇಳಿಯುತ್ತೇನೆ. ನನಗೆ ಗೊತ್ತು ಆಯಸ್ಕಾಂತವು ಕಬ್ಬಿಣವನ್ನು ಆಕರ್ಷಿಸುವಂತೆ ನನ್ನ ಹೆಂಡತಿ ಯನ್ನು ಕ್ಷುದ್ರಶಕ್ತಿಗಳು ಮತ್ತಳನ್ನಾಗಿಸಿ ಇಲ್ಲಿಗೇ ಕರೆದುಕೊಂಡು ಬಂದಿರು ತ್ತವೆ ಎಂದು ನಂಬಿದ್ದೇನೆ. ಅದಕ್ಕೆ ಇಲ್ಲೇ ಇಳಿಯುತ್ತೇನೆ" ಎಂದು ಸಿದ್ಧಾರ್ಥ ಹೇಳಿದ.

"ಒಂದು ನಿಮಿಷ" ಎಂದ ರಂಗಪ್ರಸಾದ್ ಗಾಬರಿಯಿಂದ, "ನೀನು ಹೇಳಿದ್ದು ನಿಜವೇ. ಈಗ ತರ್ಕ ಬೇಕಾಗಿಲ್ಲ ಆದರೆ ಕಾರು ನೀನೇ ತೆಗೆದು ಕೊಂಡು ಹೋಗು. ಗೌರಿಯನ್ನು ಹುಡುಕಲು ನನಗಿಂತಲೂ ನಿನಗೇ ಇದರ

ಅವಶ್ಯಕತೆ ಹೆಚ್ಚು. ಆದರೆ ಗೊತ್ತಿಲ್ಲ–ಇದು ವಂಶೀಕೃಷ್ಣನ ಕಾರು. ಜಾಗರೂಕತೆಯಿಂದ ಇರು"

ಮಾತು ಮುಗಿಯುವುದಕ್ಕೂ ಮೊದಲೇ ಸಿದ್ಧಾರ್ಥ ಕಾರಿನಿಂದ ಇಳಿದು ಸ್ಮಶಾನದೊಳಕ್ಕೆ ಓಡಿದ.

ಸ್ಮಶಾನ ಆ ವಾತಾವರಣದಲ್ಲಿ ಭಯಂಕರವಾಗಿತ್ತು. ಬೇರು ಕಿತ್ತು ಎರಡು ಮೂರು ಮರಗಳು ಉರುಳಿಕೊಂಡಿದ್ದವು. ಹರಿಯುತ್ತಿದ್ದ ನೀರಿನಲ್ಲಿ ಚಿತಾಭಸ್ಮ ತೇಲುತ್ತಿತ್ತು.

"ಗೌರಿ...." ಎಂದು ಅರಚಿದ. ಉತ್ತರವೋ ಎಂಬಂತೆ ದಕ್ಷಿಣ ದಿಕ್ಕಿನಲ್ಲಿ ಗಾಳಿ ಮತ್ತಷ್ಟು ಬಲಗೊಂಡಿತು.

"ಗೌರೀ..." ಮತ್ತೆ ಕೂಗಿದ.

ಮಿಂಚೊಂದು ಮಿಂಚಿ ಅಲ್ಲಿ ಗೌರಿಯ ಸುಳಿವಿಲ್ಲ ಎಂದು ತೋರಿತು. ಸಿದ್ಧಾರ್ಥ ದಿಕ್ಕುಗಾಣದವನಂತೆ ಮತ್ತೆ ಕಾರಿನತ್ತ ತಿರುಗಿದ. ರಂಗಪ್ರಸಾದ್ ಆ ವೇಳೆಗೆ ತನ್ನ ನರ್ಸಿಂಗ್ ಹೋಂ ಕಡೆಗೆ ಹೋಗಿದ್ದ. ಆತನಿಗಾಗಿ ನೋಡದೆ ಸಿದ್ಧಾರ್ಥ ಕಾರಿನಲ್ಲಿ ಕುಳಿತ. ಊರಿಗೆ ಉತ್ತರ ದಿಕ್ಕಿನಲ್ಲಿರುವ ಸ್ಮಶಾನದಲ್ಲಿ ನೋಡೋಣವೆಂದುಕೊಂಡು ಹೊರಟ.

ಇಗ್ನಿಷನ್ ತಿರುಗಿಸಿ ಗೇರ್ ಬದಲಿಸುವ ವೇಳೆಗೆ ಕೊರಳ ಬಳಿ ತಣ್ಣಗೆ ಏನೋ ತಗುಲಿತು. "ನಮ್ಮಿಂದ ಅಷ್ಟು ಸುಲಭವಾಗಿ ತಪ್ಪಿಸಿಕೊಳ್ಳಲಾರೆ ರಂಗಪ್ರಸಾದ್. ಕಾರು ಹಿಂದಕ್ಕೆ ತಿರುಗಿಸು ನಿನಗಾಗಿ ವಂಶೀಕೃಷ್ಣ ಕಾಯುತ್ತಿದ್ದಾರೆ" ಎಂಬ ಮಾತು ಗೊಗ್ಗರು ಧ್ವನಿಯಲ್ಲಿ ಕೇಳಿಸಿತು.

* * * *

ಮೊದಲ ಬಾರಿಗೆ ಷಾಡೋಗೆ ಭಯವುಂಟಾಯಿತು. ಉಸ್ಮೋಕ್‌ನ ಹುಲಿಬೋನಿನಲ್ಲಿ ಸಿಕ್ಕಿಕೊಂಡಾಗಲಿ, ಪ್ರಾಣವೇ ಹೋಗುವಂತಹ ಸಂದರ್ಭದಲ್ಲಾಗಲೀ ಅವನಿಗೆ ಭಯವಾಗಿರಲಿಲ್ಲ. ಆದರೆ ಈಗ ವಂಶೀಕೃಷ್ಣನನ್ನು ನೋಡುತ್ತಿದ್ದರೆ ಭಯವಾಗುತ್ತದೆ. ತನ್ನ ಬಗ್ಗೆ ಎಲ್ಲಾ ತಿಳಿದ ರಂಗಪ್ರಸಾದ್ ತಪ್ಪಿಸಿಕೊಂಡು ಹೊರಕ್ಕೆ ಹೋದಾಗ ಯಾವ ಕಳವಳಕ್ಕೂ ತುತ್ತಾಗದೆ ಬೇಟೆಗಾರ ಎಚ್ಚರಿಕೆಯಿಂದ ಬಲೆಯನ್ನು ಬಿಡಿಸಿ ಕಟ್ಟುವಂತೆ ತನ್ನ ಚಾರರಿಗೆ ಸೂಚನೆ ಕೊಟ್ಟ ವಿಧಾನ ಗಮನಿಸಿದ ಷಾಡೋಗೆ ಭಯವಾಯಿತು. ತಡ ಮಾಡದೆ ಅಲ್ಲಿಂದ ಹಿಂದಕ್ಕೆ ಓಡಿಬಂದ.

ಪ್ರಾರ್ಥನಾ ಮಂದಿರದಲ್ಲಿ ಪ್ರಾರ್ಥನೆ ನಡೆಯುತ್ತಿತ್ತು. ಅವರನ್ನು ಗಮನಿಸದವನಂತೆ ಓಡಿದ. ಯಾರಾದರೂ ನೋಡಿದರೆ ನಂತರ ಯೋಚಿಸಿದರಾಯಿತು ಎನ್ನುವ ಭಂಡ ಧೈರ್ಯ! ಈಗ ರಂಗಪ್ರಸಾದ್‌ನನ್ನು ಹಿಡಿಯುವುದರಲ್ಲಿ

ಇವರೆಲ್ಲರೂ ನಿರತರಾಗಿದ್ದಾರೆ. ಅಷ್ಟರಲ್ಲಿ ತಾವು ತಪ್ಪಿಸಿಕೊಂಡು ಹೊರಬಿದ್ದರೆ ಉಳಿಯುವ ಅವಕಾಶ. ಅಷ್ಟರಲ್ಲಿ ರಂಜಿತಾಳನ್ನು ಕರೆತರಬೇಕು.

ಬಾಗಿಲು ತೆರೆದುಕೊಂಡು ರಂಜಿತಾ ಇದ್ದ ಕೋಣೆಯೊಳಕ್ಕೆ ಪ್ರವೇಶಿಸಿದ ಷಾಡೋ. ಅವನನ್ನು ಕಂಡು ಸಂತೋಷದಿಂದ ಏನೋ ಹೇಳಲು ಮುಂದೆ ಬಂದಳು. "ಷ್... ಯಾವುದಕ್ಕೂ ಟೈಂ ಇಲ್ಲ.... ಬೇಗ ಸಿದ್ಧವಾಗು... ನಂತರ ಮಾತು..." ಎಂದ ಷಾಡೋ.

ಅಲ್ಲಿಂದಲೇ ಅವನ ಕಷ್ಟಗಳು ಪ್ರಾರಂಭವಾದವು. ಅವನಾದರೋ ಗಂಡಸು; ಹೇಗೋ ಉಸ್ನೋಕ್ ಸದಸ್ಯನೆಂದು ಹೊರಬೀಳಬಹುದು. ಆದರೆ ಉಸ್ನೋಕ್‌ನಲ್ಲಿ ಹೆಂಗಸರು ಕಾಣಿಸಲಿಲ್ಲ ಅವನಿಗೆ. ಆದ್ದರಿಂದ ರಂಜಿತಾಳನ್ನು ಕರೆದೊಯ್ಯುವುದು ಹೇಗೆ? ಅಲ್ಲಿ ಹೊರಗೆ ಹೋಗಲು ಯಾವ ಕಡೆ ಹೋಗ ಬೇಕೆಂಬುದು ಇದುವರೆವಿಗೂ ಗೊತ್ತಾಗಿರಲಿಲ್ಲ. ಕೋಣೆಯಿಂದ ಹೊರಗೆ ಬಂದು ಪ್ರಾರ್ಥನಾ ಸಭೆಯತ್ತ ಬರುತ್ತಿರುವಾಗ ಎದುರಿನಲ್ಲಿ ಯಾರೋ ಬರುತ್ತಿರುವಂತೆ ಸಪ್ಪಳ ಕೇಳಿಸಿತು. ಎದುರಾಗಿ ವಂಶೀಕೃಷ್ಣ ಬರುತ್ತಿದ್ದದ್ದು ಕಾಣಿಸಿತು. ಅವನು ಅವರನ್ನು ದಾಟಿ ಮುಂದುವರಿಯುತ್ತಲೇ ಅವನ ಹಿಂದೆಯೇ ಇವರೂ ಹೆಜ್ಜೆ ಹಾಕಿದರು. ವಂಶೀಕೃಷ್ಣನನ್ನು ಕಂಡು ಷಾಡೋ ಅಚ್ಚರಿಗೊಂಡ. ಅವನ ಮುಖದಲ್ಲಿ ಆಂದೋಲನವಾಗಲಿ, ಕಾತರವಾಗಲಿ ಇಲ್ಲ. ಸಾಧಾರಣವಾಗಿರು ವಂತೆಯೇ ಇದ್ದಾನೆ.

ಪ್ರಾರ್ಥನಾ ಮಂದಿರವನ್ನು ಪ್ರವೇಶಿಸುತ್ತಲೇ ಎಲ್ಲರೂ ಎದ್ದು ನಿಂತರು. "ಸದಸ್ಯರೇ ಇನ್ನು ಸ್ವಲ್ಪ ಕಾಲಕ್ಕೆ ಅಷ್ಟಾವಕ್ರನ ಜನನವಾಗಲಿದೆ. ಕರೆತರಲ್ಕು ಮಹಾದ್ರಷ್ಟ ಹೋಗಿದ್ದಾರೆ."

ಸಭೆಯು ಹರ್ಷಧ್ವನಿ.

"ಸಿದ್ಧಾರ್ಥ, ರಾಕೇಶ್ ಹಿಮಾಲಯಕ್ಕೆ ಹೋದರು. ಅವರನ್ನು ಕೊಲ್ಲಲು ನಮ್ಮ ಉಸ್ನೋಕ್ ಸದಸ್ಯನೂ ಅವರ ಹಿಂದೆಯೇ ಇದ್ದ. ಈ ರಾತ್ರಿ ಹನ್ನೆರಡಕ್ಕೆ ತಾಳೆಗರಿಯಲ್ಲಿ ಬರೆದಿದ್ದಂತೆ ಅವನ ಮರಣ ಖಂಡಿತವಾಗಿಯೂ ನಡೆಯುತ್ತದೆ. ಅಷ್ಟಾವಕ್ರನ ಬಗ್ಗೆ ಅಪನಂಬಿಕೆಯಿಂದ ವರ್ತಿಸಿದ್ದಕ್ಕಾಗಿ ರಾಕೇಶನಿಗೆ ಮರಣದಂಡನೆ ವಿಧಿಸಲಾಗಿದೆ. ಅದೂ ಹಿಮಾಲಯದಲ್ಲಿಯೇ ಜಾರಿಗೆ ತರಲಾಗುತ್ತದೆ. ಉಸ್ನೋಕ್‌ನ ಸರ್ವ ಸಾರ್ವಭೌಮಾಧಿಕಾರವನ್ನು ಕೋರಿದ್ದಕ್ಕಾಗಿ ರಾಕೇಶನಿಗೆ ಕಾಷ್ಮೋರಾ ಈ ಶಿಕ್ಷೆ ವಿಧಿಸಿದೆ. ಅವರನ್ನು ಕೊಲ್ಲಲು ಹೋಗಿದ್ದ ನಮ್ಮ ಸದಸ್ಯನನ್ನು ಪ್ರಮಥ ಗಣಗಳು ತಮ್ಮಲ್ಲಿ ಸೇರಿಸಿಕೊಂಡಿವೆ. ಉಸ್ನೋಕ್‌ಗೆ ಸಲ್ಲಿಸಿದ ಈ ಸೇವೆಗೆ ಪ್ರತಿಫಲವಾಗಿ ರೆಡ್‌ಸ್ಕೆಲಿಟನ್ ಆಗದೆಯೇ ಈ

ವಿಶೇಷ ಲಾಭ ಪ್ರಾಪ್ತವಾಗಿದೆ. ಅಷ್ಟಾವಕ್ರನಂತೆ ಆತನೂ ಮತ್ತೆ ಹುಟ್ಟಿ ಸಾಮಂತನಾಗಿ ಒಂದು ರಾಜ್ಯವಾಳುತ್ತಾನೆ...."

ಇದನ್ನು ಕೇಳಿದ ಸಭಿಕರು ಆನಂದದಿಂದ ಕುಣಿದರು. ಸ್ವಲ್ಪಕಾಲ ಅವರ ಪೈಶಾಚಿಕ ನೃತ್ಯ, ಹೇಷಾರವಗಳಿಂದ ತುಂಬಿಹೋಗಿತ್ತು.

ಷಾಡೋಗೆ ಅರ್ಥವಾಗಲಿಲ್ಲ—ತಾನು ಮೂರ್ಖನೊ, ಅವರು ಮೂರ್ಖರೋ ಎಂಬುದು. ಷಾಡೋ ಕಿವಿಯಲ್ಲಿ 'ಕಥೆ ಎಷ್ಟು ಚೆನ್ನಾಗಿ ಹೇಳ್ತಾನೆ ನೋಡಿದ್ರಾ?' ಎಂದಳು ರಂಜಿತಾ.

ಮತ್ತೆ ವಂಶೀಕೃಷ್ಣನ ಕಂಠ ಕೇಳಿಸಿತು. ಇಬ್ಬರು ಸದಸ್ಯರನ್ನು ಕರೆದು "ಅಷ್ಟಾವಕ್ರನು ಹುಟ್ಟಿದ ಸಂದರ್ಭದಲ್ಲಿ ಕಾಷ್ಮೋರಾ ನರಬಲಿ ಬಯಸುತ್ತದೆ. ಆದಕ್ಕೆ ಸಾವಿರ ಮಂದಿ ಬಲಿಯಾಗಬೇಕು" ಎಂದ.

ಸಭಿಕರಲ್ಲಿ ಕಲರವ ಮೊದಲಾಯಿತು. ಅಷ್ಟರಲ್ಲಿ ವಂಶೀಕೃಷ್ಣ ತನ್ನ ಕಂಠವನ್ನು ಏರಿಸಿ, "ಆ ಕಾರ್ಯವನ್ನು ನೀವಿಬ್ಬರೂ ನಿರ್ವಹಿಸಬೇಕು" ಎಂದ. "...ನಾಳೆ ಶುಕ್ರವಾರ. ಒಂದು ಮಾರಣಾಸ್ತ್ರವನ್ನು ತೆಗೆದುಕೊಂಡು ಇಬ್ಬರೂ ನಾಳೆ ಪ್ರಾರ್ಥನಾ ಮಂದಿರಕ್ಕೆ ಹೋಗಿ. ನಗರದ ದೊಡ್ಡ ಪ್ರಾರ್ಥನಾ ಮಂದಿರ ಅದು. ಸುಮಾರು ಐದು ಸಾವಿರ ಮಂದಿ ಅಲ್ಲಿ ಪ್ರಾರ್ಥನೆಗೆ ಸೇರುತ್ತಾರೆ. ಆ ಆಯುಧವು ಒಂದು ಮೈಲಿಯ ಸುತ್ತಮುತ್ತಲಿನ ಎಲ್ಲವನ್ನೂ ಭಸ್ಮಮಾಡುತ್ತದೆ. ಕಾಷ್ಮೋರಾದ ಬಯಕೆ ಈಡೇರುತ್ತದೆ...."

ಷಾಡೋ ರಕ್ತ ಕುದಿಯತೊಡಗಿತ್ತು. ಅವನು ಥರ್ಮೋನ್ಯೂಕ್ಲಿಯರ್ ಬಾಂಬ್ ಬಗ್ಗೆ ಹೇಳುತ್ತಿರುವುದು ಅರ್ಥವಾಯಿತು. ಉಸ್ಸೋಕ್ ಸದಸ್ಯರು ಅದು ಕಾಷ್ಮೋರಾ ಆಕಾಶದಿಂದ ಕಳುಹಿಸಿದೆ ಎಂದರೂ ನಂಬುವಷ್ಟು ಮೌಢ್ಯದಲ್ಲಿ ಸಿಲುಕಿದ್ದಾರೆ ಅವರು.ವಂಶೀಕೃಷ್ಣ ಅದಕ್ಕಿಂತಲೂ ಭಯಂಕರವಾದುದನ್ನು ಸೃಷ್ಟಿಸುತ್ತಿದ್ದಾನೆ. ಶುಕ್ರವಾರ ಪ್ರಾರ್ಥನಾ ಮಂದಿರದಲ್ಲಿ ಬಾಂಬ್... ಸಾವಿರಾರು ಮಂದಿಯ ಸಾವು...ಒಂದೇ ಮತದವರೆಲ್ಲಾ ನಾಶವಾಗುವ ಘಟನೆ ಅಲ್ಲಿಗೇ ನಿಲ್ಲುವುದಲ್ಲ. ಸೇನೆಯೇ ಬಂದರೂ ರಕ್ತಪಾತ ನಿಲ್ಲಿಸುವುದು ಸುಲಭವಲ್ಲ. ಮತಕಲಹಗಳು ದೊಡ್ಡ ಪ್ರಮಾಣದಲ್ಲಿ ಪ್ರಾರಂಭವಾಗುತ್ತವೆ. ಇಂಥಾ ಎರಡು—ಮೂರು ಘಟನೆಗಳು ನಡೆದರೆ ಅರಬ್‌ರಾಷ್ಟ್ರಗಳು ತೈಲವನ್ನು ಕೊಡುವುದನ್ನು ನಿಲ್ಲಿಸಬಹುದು.

ಅಷ್ಟರಲ್ಲಿ ವಂಶೀಕೃಷ್ಣ ವೃದ್ಧನೊಬ್ಬನನ್ನು ವೇದಿಕೆಗೆ ಕರೆದು "ನಾಳೆಯ ಮುಖ್ಯಮಂತ್ರಿ ಸಭೆಯಲ್ಲಿ ನೀವು ಆತ್ಮಾರ್ಪಣೆ ಮಾಡಿಕೊಳ್ಳಬೇಕೆಂದು ಕಾಷ್ಮೋರಾ ನನಗೆ ಹೇಳಿದೆ. ಇದರಿಂದ ಅಷ್ಟಾವಕ್ರನ ಸಹಚರನಾಗಿ ಹುಟ್ಟಲು

ನಿಮ್ಮ ಆತ್ಮಕ್ಕೆ ಬಿಡುಗಡೆ ದೊರೆಯುತ್ತದೆ" ಎಂದ.

ವೃದ್ಧ "ಮಹಾಭಾಗ್ಯ" ಎನ್ನುತ್ತಾ ಹೋದ.

ಅಷ್ಟರಲ್ಲಿ ಯಾರೋ ಬಂದು ಆತನ ಕಿವಿಯಲ್ಲಿ ಏನೋ ಹೇಳಿದರು, ಅವನೊಂದಿಗೆ ಹೋದ.

ಷಾಡೋ ಹಾಗೇ ನಿಂತಿದ್ದ. "ನಾವು ಹೊರಬೀಳುವ ಮಾರ್ಗ ಹುಡುಕಿದಿರಾ?" ಎಂದು ಕೇಳಿದಳು ರಂಜಿತಾ.

ಷಾಡೋ ಮಾತನಾಡಲಿಲ್ಲ. ದೀರ್ಘವಾದ ಆಲೋಚನೆಯಲ್ಲಿದ್ದ ಅವನು. ಸ್ವಲ್ಪ ಕಾಲದ ನಂತರ ಒಂದು ತೀರ್ಮಾನಕ್ಕೆ ಬಂದಂತೆ "ನಾವು ಈ ಕಟ್ಟಡ ನಾಶಮಾಡಬೇಕು. ಅದರೊಂದಿಗೆ ನಾವು ಸತ್ತರೂ ಚಿಂತೆಯಿಲ್ಲ" ಎಂದು ಹೇಳಿದ.

"ಒಳ್ಳೇ ಯೋಚನೆ. ಈ ಬುದ್ಧಿ ಸ್ಥಿಮಿತವಿಲ್ಲದವರೂ, ಪ್ರಪಂಚದ ಸದ್ಭಾವನೆಗಳು, ಸದಾಚಾರಗಳೆಲ್ಲವೂ ಕಪಟ ಎನ್ನುವ ಸಿನಿಕರೂ ತುಂಬಿರುವ ಈ ಗುಂಪು ಒಬ್ಬೊಬ್ಬರೂ ಒಂದೊಂದು ಬಾಂಬಿನಂತಹವರು. ಇವರಿಗೆ ಪೋಲೀಸು, ನ್ಯಾಯಾಲಯ ಇವುಗಳು ಸೂಕ್ತ ಸ್ಥಳಗಳಲ್ಲ. ಇವರನ್ನು ಕೊಲ್ಲುವುದೇ ಸರಿಯಾದ ಶಿಕ್ಷೆ" ಎಂದಳು ರಂಜಿತಾ.

ಅವಳ ಕೈಹಿಡಿದು "ಬಾ" ಎನ್ನುತ್ತಾ ಕರೆದೊಯ್ದ ಷಾಡೋ.

"ಈ ರಾತ್ರಿ ಇವರೆಲ್ಲಾ ಇಲ್ಲೇ ಪ್ರಾರ್ಥನೆ ಮಾಡುತ್ತಾ ಇರುತ್ತಾರೆ. ಇವರನ್ನೆಲ್ಲಾ ಒಂದೇ ಬಾರಿಗೆ ನಾಶ ಮಾಡಲು ಇದಕ್ಕಿಂತಲೂ ಒಳ್ಳೆಯ ಅವಕಾಶ ಬೇರೆ ದೊರೆಯದು. ಈ ಮಹಾಯಜ್ಞದಲ್ಲಿ ನಾವೇ ಆಹುತಿಯಾದರೂ ಸರಿಯೇ..."

ಇಬ್ಬರೂ ವಂಶೀಕೃಷ್ಣನ ಕೋಣೆಯ ದಾರಿಯಲ್ಲಿ ಬಂದರು. ಅಲ್ಲಿಯ ಪ್ಲಾಸ್ಟಿಕ್ ಪ್ಯಾಕೆಟ್‌ನಲ್ಲಿ ಸಿಲಿಂಡರ್‌ನಂತಿದೆ. ಅದಕ್ಕೆ ಸಣ್ಣ ಅಂಟೆನಾ. ರೇಡಾರ್ ಪರಿಕರ ಅದಕ್ಕೆ ಕೊಡಿಸಲಾಗಿತ್ತು. ಅದಕ್ಕೆ ಮೊದಲು ಷಾಡೋ ಓದಿದ್ದ ಅಕ್ಷರಗಳೇ.

Local Fall out Minimised to 1/100.

ಅವನ್ನು ಪರೀಕ್ಷಿಸಿ ಸಂತೃಪ್ತಿಯಿಂದ ನೋಡಿ, ರಂಜಿತಾಳನ್ನು ಕುರಿತು ಹೇಳಿದ:

"ರಂಜಿತಾ! ಎರಡು ವೈರ್‌ಗಳು ಬೆರೆಸಿದ ಮರುಕ್ಷಣದಲ್ಲಿಯೇ ಈ ಬಾಂಬ್ ಸಿಡಿಯುತ್ತದೆ. 1-1000ಕ್ಕೆ ಇದರ ವ್ಯಾಪ್ತಿಯನ್ನು ಮೊಟಕುಗೊಳಿಸಿರುವುದರಿಂದ ಒಂದು ಮೈಲಿ ಮಾತ್ರವೇ ತನ್ನ ಪ್ರಭಾವ ಬೀರಬಲ್ಲ ಮಿನಿ ಬಾಂಬ್.

(ಸಾಧಾರಣವಾದ ಅಣುಬಾಂಬಿನ ವ್ಯಾಪ್ತಿ ಒಂದುನೂರು ಮೈಲಿ.) ಇದರಿಂದ ಈ ಇನ್‌ಸ್ಟಿಟ್ಯೂಟ್ ವಿನಾ ಬೇರೆ ಪ್ರದೇಶ ನಾಶವಾಗದು. ಕೆಲವರು ಈ ಪ್ರಯತ್ನದಲ್ಲಿ ಸಾಯಬಹುದು, ಅದನ್ನು ತಪ್ಪಿಸಲು ಸಾಧ್ಯವಿಲ್ಲ...." ವಾಚನ್ನು ನೋಡಿ "ಈಗ 11.30. ಇನ್ನೊಂದು ಅರ್ಧಗಂಟೆ ಅವಕಾಶವಿದೆ. ಇಲ್ಲಿಂದ ಎರಡು ಮೈಲಿಯಾದರೂ ಹೋಗಲು ಪ್ರಯತ್ನಿಸು...ಹೊರಕ್ಕೆ ಹೋಗಲು ಸಾಧ್ಯವಿದ್ದರೆ..."

"ಉಸ್ಸೋಕ್‌ನಲ್ಲಿ ಸೇರಿದ್ದೂ, ಇಷ್ಟೊಂದು ಕಷ್ಟಗಳನ್ನು ಅನುಭವಿಸಿದ್ದು ಹೀಗೆ ಕೊನೆಯ ಘಳಿಗೆಯಲ್ಲಿ ತಮ್ಮ ತಮ್ಮ ದಾರಿಗಳನ್ನು ಹುಡುಕಿಕೊಳ್ಳಲು ಅಲ್ಲ. ಏನು ಮಾಡಿದರೂ ಇಬ್ಬರೂ ಸೇರಿಯೇ ಮಾಡಬೇಕು. ಇಲ್ಲಿಂದ ಹೊರ ಬೀಳುವ ಹಾದಿ ಇಲ್ಲದಿದ್ದರೆ ಇಬ್ಬರೂ ಒಂದಾಗಿದ್ದೇ ಸಾಯೋಣ. ಸಾಯುವ ಮೊದಲು ಈ ದುರ್ಮಾರ್ಗಿಗಳನ್ನೆಲ್ಲಾ ಬುಡಸಮೇತ ನಾಶಮಾಡೋಣ" ಎಂದಳು ರಂಜಿತಾ.

ಷಾಡೋ ಎರಡೂ ತಂತಿಗಳನ್ನು ಕೈಗೆತ್ತಿಕೊಂಡ.

* * * *

ತನ್ನ ಅನುಚರ ಹೇಳಿದ್ದನ್ನು ಕೇಳಿದ ನಂತರ ಮತ್ತೆ ತನ್ನ ಕೋಣೆಗೆ ಹೋಗುವ ಸಮಯಕ್ಕೆ ಸರಿಯಾಗಿ ವಂಶೀಕೃಷ್ಣನ ಬಳಿಗೆ ಕಾರಿಂದ ಇಳಿದ ವ್ಯಕ್ತಿಯೊಬ್ಬ ಬಂದ.

"ಸಿಕ್ಕಿದನೇ?"

"ಸಿಕ್ಕಿದ ಸಾರ್"

"ಗುಡ್"

"ಊರಿನ ಹೊರಭಾಗದಲ್ಲಿ ಕಾಯುತ್ತಿದ್ದೆವು. ಕಾರಿನಿಂದ ಮೊದಲು ಇಳಿದ. ಓಡಿ ಹೋಗುತ್ತಾನೇನೋ ಎಂದು ಓಡಿಬಂದೆವು. ಅದೇನೋ ಮತ್ತೆ ಅವನೇ ಬಂದು ಕಾರಿನಲ್ಲಿ ಕುಳಿತ..."

"ಈಗ ಎಲ್ಲಿದ್ದಾನೆ."

"ಕಾರಲ್ಲೇ ಇದ್ದಾನೆ. ಕರ್ಕೊಂಡು ಬರೋದಾ?"

"ಬೇಡ, ನಾನೇ ಬರ್ತೀನಿ" ಎನ್ನುತ್ತ ಮೆಟ್ಟಿಲಿಳಿದ.

ವಂಶೀಕೃಷ್ಣನ ಮುಖದ ಮೇಲೆ ಲಾಸ್ಯವಾಡಿದ ವಿಜಯದ ಮಂದಹಾಸ ಎದುರಿನಲ್ಲಿ ಅನುಚರರ ಮಧ್ಯೆ ಬಂಧಿತನಾಗಿದ್ದ ಸಿದ್ಧಾರ್ಥನನ್ನು ನೋಡುತ್ತಲೇ ತುಟಿಗಳ ಮಧ್ಯೆಯೇ ಅಡಗಿಹೋಯಿತು. ಅನೇಕ ಹಿರಿಯ ವ್ಯೂಹಗಳನ್ನು ರಚಿಸಬಲ್ಲವನು, ಊಹಿಸಲೂ ಸಾಧ್ಯವಿಲ್ಲದ ಪರಿಸ್ಥಿತಿಗಳು ರೂಪುಗೊಂಡರೂ

ಸ್ವಲ್ಪವೂ ಹಿಂಜರಿಯದೆ ಎದುರಿಸಬಲ್ಲ ಸಾಮರ್ಥ್ಯವುಳ್ಳವನು ಆದ ವಂಶೀಕೃಷ್ಣ ಕೂಡ ಅನೀರೀಕ್ಷಿತ ಸಂಘಟನೆಯಿಂದ ಒಂದು ಕ್ಷಣಕಾಲ ತಬ್ಬಿಬ್ಬಾದ. ಏನು ನಡೆದಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಿದ್ಧಾರ್ಥನಿಗೆ ಆ ಕ್ಷಣಕಾಲ ಸಾಕಾಯಿತು.

ಕಾರಲ್ಲಿ ಅವರು ತನ್ನನ್ನು ಹಿಡಿದಾಗಲೇ ಅವರು ತನ್ನನ್ನು ರಂಗ ಪ್ರಸಾದ್ ಎಂದು ತಿಳಿದಿದ್ದಾರೆ ಎಂಬುದು ಅರ್ಥವಾಗಿತ್ತು. ಇಷ್ಟು ಬೇಗನೆ ಇವರು ಹಿಡಿಯಲು ಸನ್ನದ್ಧರಾದದ್ದು ಕಂಡರೆ ರಂಗಪ್ರಸಾದ್ ಹೇಳಿದ್ದ ಕ್ಕಿಂತಲೂ ಸಾವಿರ ಪಾಲು ಹೆಚ್ಚು ಭಯಂಕರವಾದವರೆಂದು ನಿರೂಪಿತವಾ ಗಿತ್ತು. ತನ್ನನ್ನು ಕಾಣುತ್ತಲೇ ವಂಶೀಕೃಷ್ಣ ನಿರ್ವಿಣ್ಣನಾದದ್ದು ಗಮನಿಸಿದ್ದ.

ಒಡನೆಯೇ ಮುಖವನ್ನು ಆಚ್ಚರಿಯಲ್ಲಿ ಮುಳುಗಿಸಿ "ಇದೆಲ್ಲಾ ಏನು ಡಾಕ್ಟರ್?" ಎಂದು ಕೇಳಿದ ಸಿದ್ಧಾರ್ಥ. ವಂಶೀಕೃಷ್ಣನ ಮುಖದಲ್ಲಿ ಬದಲಾ ವಣೆ ಗಮನಿಸುತ್ತಾ "ನಮ್ಮ ಊರಿನ ಬಳಿ ಕಾರು ಕಾಣಿಸಿತು. ಇದು ನಿಮ್ಮ ಕಾರು ಇಲ್ಲಿಗೇಕೆ ಬಂತು ಎಂದು ನನಗೇ ಆಶ್ಚರ್ಯವಾಯಿತು. ಅಷ್ಟರಲ್ಲಿ ಇವರು ಇಲ್ಲಿಗೆ ಹಿಡಿದುತಂದರು" ಅವನ ಮುಗ್ಧತೆ ಕತ್ತಲಲ್ಲಿ ಬಿಟ್ಟ ಬಾಣವಾ ದರೂ ನೇರವಾಗಿ ಗುರಿ ತಾಕಿತ್ತು.

"ಊರಿನ ಹೊರ ವಲಯದಲ್ಲಿ ಕಾರನ್ನು ಬಿಟ್ಟು ರಂಗಪ್ರಸಾದ್ ಓಡಿ ಹೋಗಿದ್ದಾನೆ!" ಎಂದುಕೊಂಡ ವಂಶೀಕೃಷ್ಣ.

"ನನ್ನನ್ನು ಕ್ಷಮಿಸಿ. ನನ್ನ ಕಾರು ಕಳುವಾಗಿತ್ತು ಅದಕ್ಕಾಗಿ ಪೊಲೀಸ್ ಕಂಪ್ಲೇಂಟ್ ಕೊಟ್ಟು ಅದರೊಂದಿಗೆ ನಮ್ಮವರಿಗೂ ಹೇಳಿದ್ದೆ. ನಿಮ್ಮನ್ನು ಕಂಡು ನೀವೇ ಕಳವು ಮಾಡಿದವರು ಎಂದು ಕರೆತಂದಿದ್ದಾರೆ!" ಎಂದ ವಂಶೀಕೃಷ್ಣ ನಗುತ್ತಾ.

"ನಿಮ್ಮ ಕಾರು ನನಗೆ ದೊರೆತಿದ್ದೇ ಆಶ್ಚರ್ಯ. ಅದು ನನ್ನ ಅದೃಷ್ಟ ಎಂದುಕೊಳ್ಳುತ್ತೇನೆ. ನಾನು ಬೇಗ ಹೋಗಬೇಕು. ಕೃಷ್ಣಾಪುರದಲ್ಲಿ ನನ್ನ ಹೆಂಡತಿ ಇದ್ದ ಆಸ್ಪತ್ರೆ ದಾಳಿಗೆ ತುತ್ತಾಗಿದೆ. ಅವಳನ್ನು ಈಗ ಹುಡುಕಬೇಕು. ಎಲ್ಲಿದಾಳೋ ಏನೋ?..." ಎಂದ ಸಿದ್ಧಾರ್ಥ.

"ಹೌದೇ?...ಅಯ್ಯೋಪಾಪ...ನಾನೇ ನಿಮ್ಮನ್ನ ಅಲ್ಲಿಗೆ ಕರೆದೊಯ್ಯು ತ್ತೇನೆ...." ಎನ್ನುತ್ತಾ ಕಾರಿನತ್ತ ಹೆಜ್ಜೆ ಹಾಕಿದ.

"ಈ ಮಳೆಯಲ್ಲಿ ನೀವೇಕೆ?....ನಾನೇ ಹೋಗ್ತೀನಿ..." ಎಂದು ಸಿದ್ಧಾರ್ಥ ಕಾರಿನಿಂದ ಇಳಿದ.

"ಇಲ್ಲ ಬನ್ನಿ....ಇಂಥಾ ಪರಿಸ್ಥಿತಿಯಲ್ಲಿ ಸಹಾಯ ಮಾಡದೆ ಇನ್ನ್ಯಾವಾಗ

ಸಹಾಯ ಮಾಡಬಹುದು? ಬನ್ನಿ...ಕ್ವಿಕ್..." ಎಂದು ಬಾಗಿಲು ತೆರೆದು ವಂಶೀಕೃಷ್ಣ ಕಾರಿನಲ್ಲಿ ಕುಳಿತ. ಸಿದ್ಧಾರ್ಥ, ಸಿದ್ಧಾರ್ಥನನ್ನು ಕರೆತಂದ ಮೂವರೂ ಕಾರಿನಲ್ಲಿ ಕುಳಿತರು.

ಕಾರು ಕೃಷ್ಣಾಪುರದತ್ತ ಸಾಗಿತು.

ಸಿದ್ಧಾರ್ಥ ಯೋಚಿಸುತ್ತಿದ್ದ: 'ತನ್ನ ಹೆಂಡತಿಯ ಪ್ರಾಣ ಯಾವ ಕ್ಷುದ್ರಗಣಗಳ ಕೈಯಲ್ಲಿದ್ದರೂ ರಂಗಪ್ರಸಾದ್ ಅದಕ್ಕಿಂತಲೂ ಅಪಾಯಕರ ವಾದ ಗಣಗಳ ಕೈಯಲ್ಲಿ ಸಿಕ್ಕಿಕೊಂಡಿದ್ದಾನೆ. ಆತನನ್ನು ರಕ್ಷಿಸುವುದು ಹೇಗೆ? ಹೇಗೆ?

ಅಷ್ಟರಲ್ಲಿ ಕಾರು ಕೃಷ್ಣಾಪುರವನ್ನು ಸೇರಿತು. 'ನೀವು ಇಳಿಯುತ್ತೀರಾ' ಎನ್ನುವಂತೆ ಸಿದ್ಧಾರ್ಥನನ್ನು ನೋಡಿದ ವಂಶೀಕೃಷ್ಣ. ಸಿದ್ಧಾರ್ಥ ಇಳಿಯದೆ ಅನ್ಯ ಮಾರ್ಗವೇ ಇರಲಿಲ್ಲ. "ನಿಮ್ಮ ಉಪಕಾರಕ್ಕೆ ಕೃತಜ್ಞ" ಎಂದ. "ಮಳೆಯಲ್ಲಿ ನನಗಾಗಿ ಇಷ್ಟು ದೂರ ಬಂದಿರಿ..."

"ಅಯ್ಯೋ, ಅದೇನು ಮಹಾ. ಕಳೆದುಹೋಗಿದ್ದ ಕಾರು ನಿಮ್ಮಿಂದ ದೊರೆಯಿತು. ನಿಮಗೇ ನಾನು ಥ್ಯಾಂಕ್ಸ್ ಹೇಳಬೇಕು..." ಎಂದ ವಂಶೀ ಕೃಷ್ಣ.

ಕಾರು ರಿವರ್ಸ್ ಆಯಿತು. ಆದರೆ ಹಾಗೆ ಕಾರು ಹಿಂತಿರುಗದು ಎಂಬುದು ಸಿದ್ಧಾರ್ಥ ತಿಳಿದಿದ್ದ. ಮತ್ತೆ ರಂಗಪ್ರಸಾದ್‌ಗಾಗಿ ಶೋಧನೆ ಪ್ರಾರಂಭವಾಗುತ್ತದೆ ಎಂಬುದು ಗೊತ್ತು. ಆದರೆ ಸಿದ್ಧಾರ್ಥ ಏನು ಮಾಡಬಲ್ಲ? ತನ್ನ ಹೆಂಡತಿಯನ್ನು ಹುಡುಕಲೇಬೇಕು. ಮತ್ತೊಂದು ಕಡೆ ರಂಗಪ್ರಸಾದ್‌ರನ್ನು ಎಚ್ಚರಿಸುವುದಾದರೂ ಹೇಗೆ?

* * * *

"ಅವತಾರ್‌ಬಾಬಾ ಮೇಲೆ ಕಂಪ್ಲೇಂಟ್ ಮಾಡಲು ಬಂದಿದ್ದೇನೆ" ಎಂದ ರಂಗಪ್ರಸಾದ್. ನೀರು ತಲೆಯಮೇಲಿಂದ ಹರಿದು ಕಾಲಬಳಿ ಹನಿ ಇಕ್ಕುತ್ತಿತ್ತು. ಬಟ್ಟೆಗಳೆಲ್ಲಾ ಪೂರ್ಣವಾಗಿ ತೊಯ್ದಿತ್ತು.

ಸಬ್‌ಇನ್ಸಪೆಕ್ಟರ್ ತನ್ನ ಮನೆಯ ಮುಂದಣ ಕೋಣೆಯಲ್ಲಿ ಕುಳಿತಿದ್ದ. ಪೊಲೀಸ್ ಸ್ಟೇಷನ್ ಪಕ್ಕದಲ್ಲಿಯೇ ಇದ್ದ ಆ ಎಸ್‌ಪಿ ರಂಗಪ್ರಸಾದ್‌ಗೆ ತಿಳಿದವನೇ.

ರಾತ್ರಿಯಲ್ಲಿ ಹೀಗೆ ಬಾಗಿಲನ್ನು ದಬದಬನೆ ಬಡಿದು ಕಂಪ್ಲೇಂಟ್ ಹೇಳಿದವರು ಬೇರೆ ಯಾರಾಗಿದ್ದರೂ ಮುಖದ ಮೇಲೆ ಹೊಡೆದು ಹೊರಗೆ ತಳ್ಳುತ್ತಿದ್ದ. ಬಂದದ್ದು ರಂಗಪ್ರಸಾದ್ ಆದ್ದರಿಂದ ಒಳಕ್ಕೆ ಕರೆಯದೇ ಮಾರ್ಗವೇ

ಇರಲಿಲ್ಲ. ನಿದ್ರೆ ಚದುರಿತ್ತು. "ಯಾರನ್ನ..ಬಾಬಾನ್ನಾ?"ಎಂದು ಕೇಳಿದ ಆತ.

"ಹೌದು. ಆ ಕಪಟಿಯನ್ನು ಅರೆಸ್ಟ್ ಮಾಡಿ. ಇನ್ನೊಂದು ರೀತಿ ಹೇಳ ಬೇಕೆಂದರೆ ಅವನು ಸ್ಪರ್ಮ್ ಸೆಲ್ಲಿಂಗ್ ಏಜೆನ್ಸಿಯ ಮಾಲೀಕ" ಎಂದು ತಾನು ಕಂಡುಕೊಂಡ ಸಂಗತಿಯನ್ನು ಪೂರ್ಣವಾಗಿ ವಿವರಿಸಿದ ರಂಗಪ್ರಸಾದ್.

ಎಲ್ಲಾ ಕೇಳಿದ ನಂತರ ಎಸ್ಐ ಮುಖದ ಬಣ್ಣವೇ ಬದಲಾಯಿತು. "ನೀವೇನು ಹೇಳುತ್ತಿದ್ದೀರಿ ಡಾಕ್ಟರ್! ಅವತಾರ್‌ಬಾಬಾ ಅಂಥ ಮಹನೀಯ ರನ್ನ ಅರೆಸ್ಟ್ ಮಾಡುವುದೇ? ನೀವು ಹೇಳಿದ್ದಕ್ಕೆ ಸಾಕ್ಷಿ ಏನಾದರೂ ಇದೆಯೇ?" ಎಂದು ಕೇಳಿದ.

"ಸಾಕ್ಷೀ, ಪುರಾವೆಗಳನ್ನು ನಂತರ ಸಂಪಾದಿಸಲು ಸಾಧ್ಯವಿದೆ. ಮೊದಲು ಆ ಬಾಬಾನನ್ನು ಅರೆಸ್ಟ್ ಮಾಡಬೇಕು. ಇಲ್ಲದಿದ್ದರೆ ಸರ್ವನಾಶ ಮಾಡ್ತಾನೆ. ತೀರ ಭಯಂಕರ ವ್ಯಕ್ತಿ...."

"ಅದು ಸಾಧ್ಯವಾಗೋಲ್ಲ...ಅವತಾರ್‌ಬಾಬಾ ಎಂದರೆ ದೇವರೆಂದು ನಾವು ಪೂಜೆ ಮಾಡ್ತೀವಿ. ನನ್ನ ಮಗನಿಗೆ ಪ್ರಾಣ ಕೊಟ್ಟು ಕಾಪಾಡಿದರು. ಅಂತಹರನ್ನು ಅರೆಸ್ಟ್ ಮಾಡೋದು ಸಾಧ್ಯವೇ ಇಲ್ಲ...." ಎಂದ ಎಸ್ಐ.

ರಂಗಪ್ರಸಾದ್ ಮುಖ ಬಿಳಿಚಿಕೊಂಡಿತು. ಪರಿಸ್ಥಿತಿ ಹೀಗಾಗಬಹುದು ಎಂದು ಊಹಿಸಿರಲಿಲ್ಲ. "ಹೋಗಲಿ, ನನಗೆ ರಕ್ಷಣೆ ಕೊಡಿ. ವಂಶೀಕೃಷ್ಣನಿಂದ ನನ್ನ ಪ್ರಾಣಕ್ಕೆ ಭಯವಿದೆ. ನನಗೆ ರಕ್ಷಣೆ ಕೊಡುವುದು ನಿಮ್ಮ ಕೆಲಸ. ನನ್ನ ಆಸ್ಪತ್ರೆ ಏನಾಗಿದೆಯೋ ಅಲ್ಲಿ ಯಾರು ಸತ್ತಿದ್ದಾರೋ ಅದೂ ಗೊತ್ತಿಲ್ಲ. ಒಡ ನೆಯೇ ಅಲ್ಲಿಗೆ ನಾನು ಹೋಗಬೇಕು. ಪೊಲೀಸನ್ನು ನೆರವಿಗೆ ಕಳುಹಿಸ್ತೀರಾ?"

"ಈ ರಾತ್ರಿಯಲ್ಲಿ. ಮಳೆಯಲ್ಲಿ ಅಲ್ಲಿಗೆ ಹೋಗೋದು ಹ್ಯಾಗೆ?"

ರಂಗಪ್ರಸಾದ್‌ಗೆ ಕೋಪ ಉಕ್ಕಿತು. ಅದನ್ನು ತಡೆಯುತ್ತಾ "ಯಾರೋ ಮೂರ್ಖರು ಗುಂಪಾಗಿ ಆಸ್ಪತ್ರೆಯನ್ನು ಆವರಿಸಿದರೆ ಪೊಲೀಸ್ ಏನೂ ಮಾಡುವುದಿಲ್ಲವೇ? ರಾತ್ರಿ...ಮಳೆ ಎನ್ನುತ್ತಾ ಕುಳಿತಿರುತ್ತೀನು?"

ಎಸ್ಸೈ ತೀರಾ ಶಾಂತನಾಗಿ "ನಮಗೆ ರಾತ್ರಿಯೇ ಕಂಪ್ಲೇಂಟ್ ಬಂದಿತ್ತು. ನಾವು ಹೋಗುವ ವೇಳೆಗೆ ಅಲ್ಲಿ ಎಲ್ಲಾ ಮುಗಿದಿತ್ತು. ನಾವು ಓಡಿಸಲು ಅಲ್ಲಿ ಯಾರು ಇರಲಿಲ್ಲ. ಫರ್ನಿಚರ್ ಮಾತ್ರ ಧ್ವಂಸವಾಗಿತ್ತು. ಅಲ್ಲಿ ಒಬ್ಬ ಪೊಲೀಸ್ ಕಾವಲಿದ್ದಾನೆ. ಅದಕ್ಕಿಂತಲೂ ಹೆಚ್ಚು ನಾನೇನೂ ಮಾಡಲಾರೆ. ಈಗೇನು ಮಾಡಿದರೆ ತಾನೇ ಪ್ರಯೋಜನ?" ಎಂದು ಹೇಳಿದ.

ಆತನ ಶಾಂತ ಮಾತು ಕೇಳಿದ ರಂಗಪ್ರಸಾದ್‌ಗೆ ಏನೋ ಸಂಶಯ ಬಂತು. ಆ ಸಂಶಯಕ್ಕೆ ಒಂದು ರೂಪ ಬರುವಷ್ಟರಲ್ಲಿಯೇ ಹೊರಗೆ ಕಾರು

ನಿಂತ ಸದ್ದು ಕೇಳಿಸಿತು. ವಂಶೀಕೃಷ್ಣನು ಒಳಕ್ಕೆ ಬರುತ್ತಿರುವುದು ಕಾಣಿಸಿತು. ರಂಗಪ್ರಸಾದ್ ಥಟ್ಟನೆ ಕುರ್ಚಿಯಿಂದ ಏಳಲು ಪ್ರಯತ್ನಿಸಿದ. ಆದರೆ ಆಗ್ಗೆ ತಡವಾಗಿತ್ತು.

ವಂಶೀಕೃಷ್ಣ ರಂಗಪ್ರಸಾದ್ ಕಡೆಯಿಂದ ಎಸ್ಸೈ ಕಡೆಗೆ ಹೋಗುತ್ತಾ "ಥ್ಯಾಂಕ್ಸ್ ಇನ್ಸ್‌ಪೆಕ್ಟರ್! ಈತನಿಗಾಗಿ ತುಂಬಾ ಹೊತ್ತಿನಿಂದ ಹುಡುಕುತ್ತಾ ಇದೀವಿ. ಇಂಥಾ ಒಳ್ಳೆ ಡಾಕ್ಟರ್‌ಗೆ ಹುಚ್ಚು ಹಿಡಿದಿದ್ದು ತೀರಾ ದುರದೃಷ್ಟಕರ" ಎಂದ.

ರಂಗಪ್ರಸಾದ್ ಮುಖ ಕೆಂಪೇರಿತು.

"ಅರ್ಧರಾತ್ರಿಯಲ್ಲಿ ಬಂದು ಬಾಬಾ ಅವರನ್ನು ಅರೆಸ್ಟ್ ಮಾಡು ಎಂದಾಗಲೇ ನನಗೆ ಅನುಮಾನವಾಯಿತು ಸಾರ್" ಎಂದ ಎಸ್ಸೈ.

"ಇವರನ್ನು ನಾವು ಕರೆದುಕೊಂಡು ಹೋಗಬಹುದೇ?"

"ಖಂಡಿತವಾಗಿ. ಅದಕ್ಕೆ ನಮ್ಮದೇನು ಅಡ್ಡಿಯಿಲ್ಲ."

ಅದುವರೆವಿಗೂ ಸುಮ್ಮನೆ ಇದ್ದ ರಂಗಪ್ರಸಾದ್ "ನಾನು ಯಾರ ಜತೆಯಲ್ಲೂ ಹೋಗೋಲ್ಲ..." ಎಂದು ಹೊರಕ್ಕೆ ಓಡಿದ.

ವಂಶೀಕೃಷ್ಣನೊಂದಿಗೆ ಬಂದ ಬಲಿಷ್ಠ ವ್ಯಕ್ತಿಗಳಿಬ್ಬರು ರಂಗಪ್ರಸಾದ್‌ನನ್ನು ಎರಡೂಕಡೆ ಹಿಡಿದರು. ಆಗ ನೋಡಿದ ಎಸ್ಸೈ ತುಟಿಗಳ ಮೇಲೆ ಮಿಂಚಿದ ಕಿರುನಗೆ. ಏನೋ ಹೇಳುತ್ತಿರುವಂತೆ ಕಾರಿನೊಳಕ್ಕೆ ಸೆಳೆದೊಯ್ದರು. ಇನ್ನು ಕಿರುಚಿದರೂ ಪ್ರಯೋಜನವಿಲ್ಲವೆಂಬುದು ರಂಗಪ್ರಸಾದ್ ಅರಿತಿದ್ದ.

ಸಬ್ ಇನ್ಸ್‌ಪೆಕ್ಟರ್ ನೀಡಿದ್ದ ಷಾಕ್‌ನಿಂದ ಎಚ್ಚರಗೊಂಡಿರಲಿಲ್ಲ.

ಕಾರು ಚಲಿಸಿತು.

* * * *

ತನ್ನನ್ನು ವಿಶ್ವಾಸಪೂರ್ವಕವಾಗಿ ಕಾರಿನಿಂದ ವಂಶೀಕೃಷ್ಣ ಇಳಿಸಿ ಹೋಗುತ್ತಲೇ ಸಿದ್ಧಾರ್ಥ ಏನೂ ತೋಚದೆ ಸುಮ್ಮನೆ ನಿಂತ. ಆ ಸುತ್ತ ಮುತ್ತಲಲ್ಲಿ ರಂಗಪ್ರಸಾದ್ ಎಲ್ಲಿದ್ದರೂ ಜಿಂಕೆಯನ್ನು ಭೇಟೆಯಾಡಿದಂತೆ ಹಿಡಿಯುತ್ತಾನೆ ಎಂಬುದು ಸಿದ್ಧಾರ್ಥ ಬಲ್ಲ. ಆದರೆ ಏನು ಮಾಡಬಲ್ಲ?... ಕೋಪ, ತಳಮಳ, ನಿಸ್ಸಹಾಯಕತೆಗಳ ಸಮ್ಮಿಶ್ರಣದಿಂದ ಕತ್ತಲಲ್ಲಿ ದಿಟ್ಟಿಸಿದ. ಮಳೆ ಕಡಿಮೆಯಾಯಿತು. ಆದರೆ ಗಾಳಿ ಹಾಗೇ ಬೀಸುತ್ತಿದೆ.

ತಾನೇನು ಮಾಡಬೇಕು? ರಂಗಪ್ರಸಾದನನ್ನು ಕಾಪಾಡಲು ಓಡಬೇಕೇ? ಎಲ್ಲಿರುವಳೆಂಬುದೇ ತಿಳಿಯದ ಹೆಂಡತಿಯನ್ನು ಅಪಾಯದಿಂದ ಪಾರುಮಾಡಲು ಓಡಬೇಕೇ ಎಂಬುದೇ ಅರ್ಥವಾಗದ ಪರಿಸ್ಥಿತಿ. ಹೆಂಡತಿ ಎಂದಲ್ಲವಾದರೂ

ತುಂಬಿದ ಬಸುರಿ ಎಂದಾದರೂ ಆಕೆಯನ್ನು ರಕ್ಷಿಸಬೇಕಾದ ಹೊಣೆಗಾರಿಕೆ ತನ್ನ ಮೇಲಿದೆ.

ಕಿಂಕರ್ತವ್ಯ ವಿಮೂಢನಾಗಿ ಸಿದ್ಧಾರ್ಥ ಕತ್ತಲಲ್ಲಿ ನಿಂತ. ಅಷ್ಟರಲ್ಲಿ ವಿವೇಕ ಅವನನ್ನು ಎಚ್ಚರಿಸಿತು. ಹೆಚ್ಚು ಸಮಯವಿಲ್ಲ, ಕ್ಷುದ್ರಗಳ ಬಗ್ಗೆ ತನಗಿರುವ ನಂಬಿಕೆ ನಿಜವೇ ಆದರೆ ಈಗ ಕೇದಾರಗೌರಿ ಸ್ಮಶಾನದಲ್ಲಿರಬೇಕು. ಮೊದಲು ಆಕೆಯನ್ನು ಕಂಡು ನಂತರ ರಂಗಪ್ರಸಾದ್‌ಗಾಗಿ ಹುಡುಕುವುದೇ ಸರಿ. ಮೊದಲು ಗೌರಿ ಸುರಕ್ಷಿತ ಪ್ರದೇಶವನ್ನು ಸೇರಬೇಕು. ಒಂದು ವೇಳೆ ಈ ಹೋರಾಟದಲ್ಲಿ ತಾನು ಸೋತರೆ ಮರಣ ಕಟ್ಟಿಟ್ಟ ಬುತ್ತಿ. ಹೆಂಡತಿ-ತಾನು ಇಬ್ಬರೂ ಈ ಲೋಕದಲ್ಲಿ ಇರುವುದಿಲ್ಲ. ಆದ್ದರಿಂದ ತನಗೆ ಯಾವ ಸಮಸ್ಯೆಯೂ ಇರುವುದಿಲ್ಲ!

ನಿರ್ಣಯಕ್ಕೆ ಬಂದೊಡನೆಯೇ ಕೃಷ್ಣಾಪುರದ ಉತ್ತರದಿಕ್ಕಿನತ್ತ ಇದ್ದ ಸ್ಮಶಾನಕ್ಕೆ ನಡೆದ.

ಹದಿನೈದು ನಿಮಿಷಗಳಲ್ಲಿ ಆ ಸ್ಮಶಾನವನ್ನು ತಲುಪಿದ. ಮಳೆ ಇಲ್ಲವಾಗಿದ್ದರೂ ಆಕಾಶದ ತುಂಬಾ ಮೋಡಗಳು. ಊರು ಮುಸುಕೆಳೆದುಕೊಂಡು ಮಲಗಿದೆ. ಮನುಷ್ಯ ಸಂಚಾರವಿಲ್ಲ. ದೂರದಲ್ಲಿ ಕಾರಿನ ಹಾರನ್ ಕೇಳಿಸಿತು. ಸಿದ್ಧಾರ್ಥ ನಿಂತು ನೋಡಿದ–ಅದೇ ಕಾರು! ವಂಶೀಕೃಷ್ಣನದು! ಏನೋ, ವಿಪತ್ತು ತರುವಂತೆ ಬರುತ್ತಿತ್ತು.

ಸಿದ್ಧಾರ್ಥ ಒಡನೆಯೇ ಹೆಜ್ಜೆ ತೀವ್ರಗೊಳಿಸಿದ. ಸ್ಮಶಾನದ ಪಕ್ಕದಲ್ಲಿಯೇ ಒಂದು ದೇವಾಲಯ. ಅದು ಸ್ಮಶಾನದಲ್ಲಿ ಬೆರೆತು ದೊಡ್ಡ ಸಮಾಧಿಯಂತೆ ಕಾಣುತ್ತಿತ್ತು. ಹಗಲಲ್ಲಿ ನೋಡಿದರೆ ಮಾತ್ರವೇ ದೇವಾಲಯವೆಂದು ಗುರ್ತು ಸಿಕ್ಕುವಂತಿತ್ತು. ಅಲ್ಲಿಗೆ ಬರುತ್ತಲೇ ಭಕ್ತಿಭಾವ ಉಮ್ಮಳಿಸಿತು. ಅವನ ಇಷ್ಟದೈವ ರಾಮ. ಆತನ ಭೃತ್ಯ ಹನುಮಂತ. ಕಣ್ಮುಚ್ಚಿ ಮನಸ್ಸಿನಲ್ಲಿ "ರಂಗಪ್ರಸಾದ್ ನನಗೆ ತುಂಬಾ ಸಹಾಯ ಮಾಡಿದವನು. ಆತನನ್ನು ರಕ್ಷಿಸುವ ಬದಲು ಹೆಂಡತಿಯನ್ನು ಹುಡುಕುತ್ತಾ ತಿರುಗುತ್ತಿರುವ ನನ್ನನ್ನು ಮನ್ನಿಸು. ರಂಗಪ್ರಸಾದ್‌ನನ್ನು ರಕ್ಷಿಸು" ಎಂದು ಪ್ರಾರ್ಥಿಸಿದ.

ದೇವರಿಗೆ ಈ ಪ್ರಾರ್ಥನೆ ಇಷ್ಟವಾಗಲಿಲ್ಲ ಎನ್ನುವಂತೆ ಒಂದು ಮಿಂಚು. ಆಕಾಶವೇ ಬಿರಿದಂತೆ, ಭೂಮಿ ಸಿಡಿದಂತೆ ಗುಡುಗು. ಆ ಮಿಂಚಿನಲ್ಲಿ ಗುಡಿಯಲ್ಲಿ ಮೂಲ ಮೂರ್ತಿ ಇಲ್ಲದನ್ನು ಕಂಡು ಬೆಚ್ಚಿದ. ಕ್ಷುದ್ರಗಣಾಧಿಪತಿಗಳಿಗೆ ಭಯಪಟ್ಟು ದೇವರೇ ಓಡಿಹೋದಂತೆ ಆ ಸ್ಥಾನ ಬರಿದಾಗಿತ್ತು. ಒಳಕ್ಕೆ ಬಗ್ಗಿ ನೋಡಿದ ಏನೂ ಕಾಣಿಸುತ್ತಿರಲಿಲ್ಲ. ಹಳ್ಳಿಗರೂ ಒಳಕ್ಕೆ ಹೋಗದ

ಹೊರಗೆ ನಿಂತೇ ನಮಸ್ಕರಿಸುವುದು ಪದ್ಧತಿ.

ಮತ್ತೆ ಮಿಂಚು, ಆ ಬೆಳಕಲ್ಲಿ ಕಾಣಿಸಿತು. ವಿಗ್ರಹದ ಸ್ಥಾನದಲ್ಲಿ ಭೀಷ್ಮನ ಶರಶೈಯ್ಯೆಯಂತೆ ಮೂಳೆಗಳ ಚಿಕ್ಕಗೂಡು, ಅದನ್ನು ನೋಡಿ ಕಂಪಿಸಿದ. ಹಕ್ಕಿಯ ಗೂಡಿನಂತೆ ಹಾಸಲಾಗಿದೆ ಮೂಳೆಗಳು. ಆ ಮೂಳೆಗಳ ಮಧ್ಯೆ ಒಂದು ಕೆಂಪು ಮಾಂಸದ ಮುದ್ದೆ. ಅದೇನೆಂದು ನೋಡಲು ಬಗ್ಗಿದ ಸಿದ್ಧಾರ್ಥನಿಗೆ ಷಾಕ್ ಹೊಡೆದಂತಾಯಿತು. ಒಡನೆಯೇ ಹಿಂದಕ್ಕೆ ಅಡಿಯಿರಿಸಿದ.

ಆ ಮಾಂಸದ ಮುದ್ದೆಗೆ ಜೀವವಿತ್ತು.

ನಗುತ್ತಿದೆ...ಆಗಲೇ ಹುಟ್ಟಿದ ಮಗುವಿನ ನೊಸಲಲ್ಲಿ ಮೂರನೆಯ ಕಣ್ಣಿಗೆ ಬದಲಾಗಿ ಸಣ್ಣ ರಂಧ್ರವಿದೆ. ಮೈ ಎಂಟು ವಕ್ರಗಳಿಂದ ಸೊಟ್ಟಾಗಿದೆ.

ಅ....ಷ್ಟಾ....ವ....ಕ್ರ

ಅಷ್ಟ ದಿಕ್ಕುಗಳೂ ಪ್ರತಿಧ್ವನಿಸುವಂತೆ, ಮೇಘಗಳೆಲ್ಲಾ ಚದುರುವಂತೆ ಸಿದ್ಧಾರ್ಥ "ಗೌರೀ" ಎಂದು ಕಿರುಚಿದ.

* * * *

"ಸ್ವಲ್ಪ ತಡೆಯಿರಿ" ಎಂದಳು ರಂಜಿತಾ.

ಷಾಡೋ ಅವಳತ್ತ ನೋಡಿದ.

ಒಡನೆಯೇ ಮಾತನಾಡಲಿಲ್ಲ, ಏನೋ ಗಾಢವಾದ ಯೋಚನೆಯಲ್ಲಿದ್ದಂತೆ ಸ್ವಲ್ಪ ತಡೆದು, "ಹಿರೋಷಿಮಾದ ಮೇಲೆ ಬಾಂಬ್ ಹಾಕಿದ ಪೈಲೆಟ್ ವಿಮಾನದಿಂದ ಬಗ್ಗಿನೋಡಿ ತಾನು ಮಾಡಿದ ಕೆಲಸದ ಬಗ್ಗೆ ಪಶ್ಚಾತ್ತಾಪಪಟ್ಟ ಎಂದು ಚರಿತ್ರೆಕಾರರು ಬರೆದಿದ್ದರು. ಅದು ನೆನಪಿದೆಯೇ?"

ಆ ಮಾತು ಈಗೇಕೆ ಎಂದುಕೊಂಡೇ "ಹೌದು, ಅದರಿಂದ...?" ಎಂದ ಷಾಡೋ.

"ಅಷ್ಟು ದೊಡ್ಡ ಬಾಂಬ್ ಹಾಕಿದರೂ ಅದು ಸಿಡಿಯುವ ಮೊದಲೇ ಪೈಲೆಟ್ ಅದರ ರೇಂಜಿನಿಂದ ಹೊರಕ್ಕೆ ಬರಲು ಸಾಧ್ಯವಾಯಿತು ಎಂದು ಅರ್ಥವಾಗುವುದಿಲ್ಲವೇ?"

"ಹೌದು,ರೇಡಾರ್ ಸಿಸ್ಟಂನಿಂದ ಬಾಂಬಿನ ಡಿಟನೇಟರನ್ನು ನಿಯಂತ್ರಣಗೊಳಿಸಿದ್ದರು" ಎಂದ ಷಾಡೋ ತನ್ನ ಸೈನ್ಸ್ ಇಂಡಿಯಾ ಪತ್ರಿಕೆಯ ಅನುಭವದಿಂದ.

"ನಾವು ಹಾಗೇಕೆ ಮಾಡಲು ಸಾಧ್ಯವಾಗದು?"

"ಹೇಗೆ?" ಎಂದು ವಿಸ್ಮಯದಿಂದ ಕೇಳಿದ ಷಾಡೋ.

"ಈ ಬಾಂಬ್ ಸಿಡಿಯಲು ಕಾಲವನ್ನು ನಿಯಂತ್ರಿಸುವುದರಿಂದ ನಾವು

ಹದಿನೈದು ನಿಮಿಷಗಳ ಕಾಲ ಪಡೆಯಬಹುದು. ಅಷ್ಟರಲ್ಲಿ ನಾವು ಹೊರಬಿದ್ದರೆ ಸರಿ. ಇಲ್ಲದಿದ್ದರೆ ಸಾವು ಇದ್ದೇ ಇದೆ."

ಪಾಡೋ ಯೋಚನೆ ತೀವ್ರಗೊಂಡಿತು. ಸಾಮಾನ್ಯ ಅಣುಬಾಂಬಿನಂತೆ ಈ ಮಿನಿ ಬಾಂಬ್‌ಗಳನ್ನು ಪಿಸ್ಟರ್ ಮುಖಾಂತರವೇ ನಡೆಸಲಾಗುತ್ತದೆ. ಆದರೆ ನಮ್ಮಲ್ಲಿ ಕಂಟ್ರೋಲ್ ಮಾಡುವ ಪಿಸ್ಟರ್‌ಗಳಂತಹ ಆಧುನಿಕ ಪರಿಕರಗಳಿಲ್ಲ. ಯಾವುದೋ ರೀತಿಯಲ್ಲಿ ಡಿಟನೇಟರ್‌ಗೆ ಸಂಕೇತ ಕೊಡುವುದು ಸಾಧ್ಯವಾದರೆ.. ಅಷ್ಟರಲ್ಲಿ ನಮ್ಮ ಅದೃಷ್ಟ ಚೆನ್ನಾಗಿದ್ದು... ಒಂದು ಮೈಲಿ ದೂರವನ್ನು ದಾಟಿದರೆ ಬದುಕಿ ಉಳಿಯಬಹುದು. ಇದೆಲ್ಲಾ ನಡೆಸುವುದು ಹೇಗೆ....?

ರಂಜಿತಾ ಅವನನ್ನೇ ನೋಡುತ್ತಿದ್ದಳು.

ಇಬ್ಬರ ನೋಟವೂ ಸೇರಿತು. ಮೌನ, ಗಡಿಯಾರದ ಟಿಕ್ ಟಿಕ್ ವಿನಾ ಬೇರಾವ ಸದ್ದೂ ಇಲ್ಲ!

ಇಬ್ಬರಿಗೂ ಒಂದೇ ಸಾರಿಗೆ ಹೊಳೆದಂತೆ ಗಡಿಯಾರದತ್ತ ನೋಡಿದರು. ಗಡಿಯಾರದ ಸೆಕೆಂಡ್ ಮುಳ್ಳು ಚಲಿಸುತ್ತಿದೆ. "ಆ್ಞ, ಇದೇ ಸರಿ" ಎಂದು ಇಬ್ಬರೂ ಒಮ್ಮೆಲೆಗೇ ಉದ್ಗರಿಸಿದರು.

ಒಡನೆಯೇ ಆ ಗೋಡೆಯ ಗಡಿಯಾರದ ದೊಡ್ಡ ಮುಳ್ಳಿಗೆ ಒಂದು ತಂತಿ, ಚಿಕ್ಕಮುಕ್ಕಳಿಗೆ ಒಂದು ತಂತಿಯನ್ನು ಕಟ್ಟುತ್ತಾ "ಪ್ರೇಮಿಸಿದರೆ ಏಕಸಂಧಿಗ್ರಾಹಿಗಳನ್ನೇ ಪ್ರೇಮಿಸಬೇಕು, ಹಾಯಾಗಿರುವಾಗ ಹೊಸ ಸಂಗತಿಗಳನ್ನು ತಿಳಿಯಲು ನೆರವಾದರೆ, ಆಪತ್ತಿನಲ್ಲಿರುವಾಗ ಹಳೆಯ ವಿಜ್ಞಾನ ಶಾಸ್ತ್ರ ನೆನಪು ಮಾಡಲು ಉಪಯೋಗವಾಗುತ್ತಾರೆ" ಎಂದ ಪಾಡೋ.

ಆ ಘಳಿಗೆಯಲ್ಲೂ ರಂಜಿತಾಳ ಮುಖ ಕೆಂಪೇರಿತು.

ತಂತಿಗಳನ್ನು ಕಟ್ಟಿ ಮುಗಿಸಿದ್ದಾಯಿತು. ಡಿಟನೇಟರನ್ನು ಆನ್ ಮಾಡಿದ ಪಾಡೋ ಭಯಂಕರ ಮಾರಣಾಸ್ತ್ರದಿಂದ ಒಂದೇ ಅಡಿ ದೂರದಲ್ಲಿದ್ದ.

ಹನ್ನೆರಡು ಗಂಟೆಯಾಗಲು ಕೇವಲ ಹದಿನೈದು ನಿಮಿಷಗಳಿವೆ. ಸಣ್ಣ ಮುಳ್ಳು, ದೊಡ್ಡ ಮುಳ್ಳನ್ನು ಕೂಡುತ್ತಲೇ ಆ ಪ್ರದೇಶವೆಲ್ಲಾ ಭೀಕರ ಸ್ಫೋಟಕ್ಕೆ ಭಸ್ಮವಾಗುತ್ತದೆ. ಹೊರ ಬೀಳುವಂತಿದ್ದರೆ ಇನ್ನು ಕೇವಲ ಹದಿನೈದು ನಿಮಿಷಗಳು ಮಾತ್ರವೇ ಉಳಿದಿದೆ.

* * * *

ಕಾರು ಮುಂದೆ ಸಾಗುತ್ತಿದ್ದರೆ, ವಂಶೀಕೃಷ್ಣ ನುಡಿದ,

"ಈ ಜಗತ್ತಿನಲ್ಲಿ ಎಲ್ಲಕ್ಕಿಂತಲೂ ಭಯಂಕರವಾದ ಮಾರಣಾಸ್ತ್ರ ಯಾವುದು ನಿನಗೆ ಗೊತ್ತೇ ರಂಗಪ್ರಸಾದ್....? ಆಟಂಬಾಂಬ್, ಹೈಡ್ರೋಜನ್ ಬಾಂಬ್,

ಮಿಸೈಲ್ಸ್....ಅಲ್ಲ ಇವ್ಯಾವು ಅಲ್ಲ. ಈ ಪ್ರಪಂಚದಲ್ಲೆಲ್ಲಾ ತೀರಾ ಭಯಂಕರವಾದ ಆಯುಧ ಮನುಷ್ಯ. ಅವನ ಮೌಢ್ಯವನ್ನು ನಮಗೆ ಬೇಕಾದಂತೆ ಬಗ್ಗಿಸಿಕೊಂಡರೆ ಅವನಿಗಿಂತಲೂ ಭಯಂಕರ ಅಸ್ತ್ರ ಬೇರಿಲ್ಲ. ಇದೇ ಸೂತ್ರವನ್ನು ಅನುಸರಿಸಿ ನನ್ನ ಕಾರ್ಯ ನಡೆಸುತ್ತಾ ಬಂದಿದ್ದೇನೆ. ಸಿಂಹಳದ ಪ್ರಧಾನಿ ಕಾಷ್ಮೋರಾದ ವಿರೋಧಿ ಎನ್ನುತ್ತಲೇ ಉಸ್ನೋಕ್‌ನ ಇಬ್ಬರೂ ಸದಸ್ಯರು ಅವನನ್ನು ಕೊಂದು ತಮ್ಮ ಪ್ರಾಣ ಅರ್ಪಿಸಿದರು. ನೀನು ಸತ್ತೊಡನೆಯೇ ಅಷ್ಟಾವಕ್ರನ ಅನುಚರನಾಗುತ್ತೀ ಎಂದರೆ ಮುದುಕ ಭವಿಷ್ಯದ ಭೋಗಗಳ ಆಮಿಷಕ್ಕೆ ಆತ್ಮಾಹುತಿಗೆ ಸಿದ್ಧನಾದ. ಇವೆಲ್ಲಾ ಅವರಲ್ಲಿ ನಾನು ಪ್ರೇರಿಸಿದ ಭಕ್ತಿಯ ಫಲವಾಗಿ ನಡೆಯುತ್ತದೆ. ಇದರಿಂದ ಪ್ರಧಾನಿಯನ್ನು ಕೊಲ್ಲು ಎಂದರೂ ಕೊಲ್ಲುತ್ತಾರೆ. ಈ ರೀತಿಯಲ್ಲಿ ಭ್ರಾಂತಿಯ ಮುಳುಗಿಸಲು 'ಕಾಷ್ಮೋರಾ' ಎಂಬ ಪದ ಮಾತ್ರ ಬಳಸಿಕೊಂಡೆ.

"ರಂಗಪ್ರಸಾದ್, ನಿನ್ನ ಊಹೆಯಲ್ಲಾ ನಿಜವೇ. ಪ್ರತಿಮಾ ಅಗರ್‌ವಾಲ್ ಏಕೆ ವಿಕೃತ ಶಿಶುವಿಗೆ ಜನ್ಮಕೊಟ್ಟಳೋ ಮೊದಲು ನಮಗೂ ಅರ್ಥವಾಗಲಿಲ್ಲ. ಆದ್ದರಿಂದ ನಾವು ಕೆಲವರ ಮೇಲೆ ಪ್ರಯೋಗ ನಡೆಸಬೇಕಾಯಿತು. ಈ ಪ್ರಯೋಗ ಹೇಗೆ ನಡೆಸುವುದು. ಕೂಲಿಗಳ ಮೇಲೆ ನಡೆಸಿದರೆ ಈ ರಹಸ್ಯ ಬಯಲಾಗದು ಎಂದುಕೊಂಡೆವು. ಇನ್ಸ್‌ಟಿಟ್ಯೂಟ್ ಪಕ್ಕದಲ್ಲಿದ್ದ ಕೃಷ್ಣಾಪುರಕ್ಕೆ ಬಂದೆವು. ಏಳೆಂಟು ಹೆಣ್ಣುಗಳಿಗೆ ಪ್ರಜ್ಞೆ ತಪ್ಪಿಸಿ ಈ ಪ್ರಯೋಗ ನಡೆಸಿದೆವು. ಎರಡು ಮೂರು ಮಕ್ಕಳಾಗುವ ವೇಳೆಗೆ ನಮ್ಮ ತಪ್ಪು ಏನೆಂಬುದು ಅರ್ಥವಾಗಿತ್ತು. ಒಡನೆಯೇ ಜಗದೀಶ್‌ಚಂದ್ರರ ವೀರ್ಯವನ್ನು ನಾಶಪಡಿಸಿದೆವು. ಆದರೆ ನಮ್ಮ ಪ್ರಯೋಗದ ಫಲವಾಗಿ ವಿಕೃತ ಶಿಶುಗಳ ಜನನ ಕ್ರಮವಾಗಿ ಸಾಗಿತ್ತು.

ಇದನ್ನು ಏಕೆ ಕ್ಯಾಷ್ ಮಾಡಿಕೊಳ್ಳಬಾರದು ಎನಿಸಿತು. ಅದೇ ಸಮಯಕ್ಕೆ ಅವತಾರ್ ಬಾಬಾ ಎಂಬ ಯೋಗಿ ತನ್ನ ಉಪನ್ಯಾಸ, ಮಂತ್ರಗಳಿಂದ ಜನರನ್ನು ಆಕರ್ಷಿಸುತ್ತಿದ್ದ. ಅವನ ಸ್ಥಾನದಲ್ಲಿ ನಾನು ಪ್ರವೇಶಿಸಿದೆ. ಮಹಾದ್ರಷ್ಟನ ಪರಿಚಯವೂ ಆಗಲೇ ಆಯಿತು. ಆತ ಅಷ್ಟಾವಕ್ರನು ನಿಜವಾಗಿಯೇ ಹುಟ್ಟುತ್ತಾನೆ ಎಂದುಕೊಳ್ಳುತ್ತಿದ್ದಾನೆ. ಆತನ ಅವಶ್ಯಕತೆ ಉಸ್ನೋಕ್ ವೃದ್ಧಿಪಡಿಸಲು ತೀರಾ ಅಗತ್ಯವಿದೆ. ಅದಕ್ಕಾಗಿ ಅಷ್ಟಾವಕ್ರ ಹುಟ್ಟುತ್ತಾನೆ ಎಂದರೆ ನನಗೆ ಬಾಧಕವಿಲ್ಲ....

"ಅದಕ್ಕೆ ತಕ್ಕ ಏರ್ಪಾಟೆಲ್ಲಾ ಮಾಡಿದೆ. ಆಕಾಶವಾಣಿ ಅಷ್ಟಾವಕ್ರನನ್ನು ಗುರುತಿಸಲು ನೀಡುವ ಸೂಚನೆ ಇತ್ಯಾದಿಗಳು. ನಾನು ಯೋಜಿಸಿದ್ದ

ಕ್ಕಿಂತ ತುಂಬಾ ಚೆನ್ನಾಗಿಯೇ ನನ್ನ ಯೋಜನೆ ಮುಂದುವರೆಯಿತು. ಅಷ್ಟರಲ್ಲಿ ರಾಕೇಶ್ ಒಂದು ಬೇಡಿಕೆ ತಂದ; ಎಷ್ಟೇ ಖರ್ಚಾದರೂ ಸರಿಯೇ ಅಷ್ಟಾವಕ್ರ ಕೇದಾರಗೌರಿಯಲ್ಲಿ ಹುಟ್ಟಬೇಕು. ಅವನಿಂದ ಎರಡು ಮೂರು ಲಕ್ಷ ವಸೂಲಿ ಮಾಡಿದೆವು.

ಅಷ್ಟಾವಕ್ರ ಹುಟ್ಟಲು ಕೆಲವು ನಿಯಮಗಳು ತಾಳಗಿರಿಯೊಂದರಲ್ಲಿ ಇರುವುದಾಗಿ ಮಹಾದ್ರಷ್ಟ ಹೇಳಿದ. ಹಿಮಾಲಯಗಳಲ್ಲಿ ಹಲವು ವರ್ಷಗಳು ಓಡಾಡಿ ಅಲ್ಲಿಯ ಬೈರಾಗಿಗಳಿಂದ, ಸಿದ್ಧರಿಂದ ಹಲವು ಸಂಗತಿಗಳನ್ನು ಸಂಗ್ರಹಿಸಿದ್ದ ಮಹಾದ್ರಷ್ಟ ಅಷ್ಟಾವಕ್ರನ ಬಗ್ಗೆ, ಕಾಪ್ಯೋರಾ ಬಗ್ಗೆ ತುಂಬಾ ವಿವರ ಹೇಳುತ್ತಿದ್ದ. ಇದರಿಂದ ನನಗೇನು ನಷ್ಟ? ಅಷ್ಟಾವಕ್ರನೆಂದು ಒಬ್ಬ ಹುಟ್ಟಿದರೆ ಉಸ್ಲೋಕನ್ನು ಇನ್ನು ಹತ್ತುವರ್ಷ ಭದ್ರವಾಗಿರಸಬಹುದು!

"ರಾಕೇಶ್, ಭವಾನಿಶಂಕರ್ ಇವರ ಬಗ್ಗೆ ಹೇಳುತ್ತಲೇ ಮಹಾದ್ರಷ್ಟನಿಗೆ ಹಳೆಯ ಶತ್ರುತ್ವ ನೆನಪಾಯಿತು. ಆದ್ದರಿಂದ ಅವನ ಮಗಳನ್ನು, ಸಿದ್ಧಾರ್ಥನನ್ನು ಕೊಲ್ಲಬೇಕೆಂದುಕೊಂಡ. ಅದರಿಂದಲೂ ನನಗೇನು ನಷ್ಟವಿರಲಿಲ್ಲ."

–ಹೀಗೇ ಹೇಳುತ್ತಾ ಇದ್ದ ವಂಶೀಕೃಷ್ಣನನ್ನು ರಂಗಪ್ರಸಾದ್ ತಡೆದು ಕೇಳಿದ:

"ಇದರಿಂದ ನಿಮಗೇನು ಲಾಭ? ಈಗಾಗಲೇ ಒಳ್ಳೆಯ ಅಧಿಕಾರದಲ್ಲಿದ್ದೀರಿ ಇವೆಲ್ಲಾ ಏಕೆ ನಡೆಸಬೇಕು?"

ವಂಶೀಕೃಷ್ಣ ನಕ್ಕ. "ಅದೇ ನಿಮಗೇನು ಗೊತ್ತಿಲ್ಲ ಅಂತ ಹೇಳುತ್ತೆ. ಒಳ್ಳೆಯ ಅಧಿಕಾರದಲ್ಲಿದ್ದೂ ನಾನು ಸಂಪಾದಿಸಿದ್ದು ನೀವು ಲೆಕ್ಕ ಹಾಕೋದು ಸಾಧ್ಯವಿದೆ. ಆದರೆ ಈ ಒಂದೇ ವರ್ಷದಲ್ಲಿ ಹೀಗೆ ಸಂಪಾದಿಸಿದ್ದು ನಿಮ್ಮ ಊಹೆಗೂ ಸಿಲುಕುವುದು ಸಾಧ್ಯವಿಲ್ಲ–ನಾಲ್ಕುಕೋಟಿ. ಇದೆಲ್ಲಾ ನಮ್ಮ ಜನರ ಮುಗ್ಧತೆ ಮತ್ತು ನಂಬಿಕೆಯ ಫಲ. ಹಣದ ಮಾತು ಹಾಗಿರಲಿ ಉಸ್ಲೋಕ್‌ನ ಪ್ರಭಾವದಿಂದ, ದೇಶವಿದೇಶದ ಗೂಢಚಾರರ ಸಂಬಂಧಗಳಿಂದ ನಾನೇನು ಸಾಧಿಸಬೇಕೆಂದಿದ್ದೆನೋ ಅದನ್ನು ಸಾಧಿಸುವ ಸ್ಥಿತಿಗೆ ನಾನು ಬಂದಿದ್ದೇನೆ. ಈಗ ನಾನು ಮನಸ್ಸು ಮಾಡಿದರೆ ಯಾರನ್ನಾದರೂ ಸರಿಯೇ ಕೊಲ್ಲಿಸಬಲ್ಲೆ. ಎಂಥಾ ಆಂದೋಲನವನ್ನಾದರೂ ಹುಟ್ಟು ಹಾಕಬಲ್ಲೆ. ಇವೆರಡೇ ಸಾಲದೆ ಎಷ್ಟೆಷ್ಟೇ ಇದ್ದೇ ಇದೆ. ಈಗ ಹೇಳು ರಂಗಪ್ರಸಾದ್ ಇದೆಲ್ಲಾ ನಿರ್ವಹಿಸುತ್ತಿರುವ ನಾನು ದೊಡ್ಡವನಲ್ಲವೇ?"

ರಂಗಪ್ರಸಾದ್ ನಿರ್ವಿಕಾರವಾಗಿ ನೋಡುತ್ತಾ, "ನೀವು ದೊಡ್ಡವರೋ

ಅಲ್ಲವೋ ನಾನು ಹೇಳಲಾರೆ. ಆದರೆ ಮೂವತ್ತು ವರ್ಷಗಳ ಹಿಂದೆ ಜೋನ್ಸ್ ಅಂತ ಒಬ್ಬನಿದ್ದ. ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಲು ಒಂದು ರೀತಿಯ ಭ್ರಾಂತಿಯನ್ನು ಸೃಷ್ಟಿಸಿ, ಅವನು ಆಳುತ್ತಿದ್ದ. ಕೊನೆಗೆ ಅವರೆಲ್ಲಾ ಪೊಟ್ಯಾಷಿಯಂ ಸೈನೇಡ್ ಕುಡಿದು ಸಾಯಬೇಕಾಯಿತು. ನನಗೆ ಅದೇ ವಿಷಯ ನೆನಪಾಗುತ್ತಿದೆ. ನಿಮ್ಮ ಮನಸ್ಸು ಸಾಮಾನ್ಯ ಸ್ಥಿತಿಯಲ್ಲಿಲ್ಲ–ಅದಕ್ಕೆ ಚಿಕಿತ್ಸೆ ಬೇಕು ಎನಿಸುತ್ತಿದೆ. ನಿಮ್ಮ ಉಸ್ನೋಕ್‌ನ ಅಂತ್ಯವೂ ಹೀಗೇ..." ಎಂದ.

"ಇದು ಸಾಧ್ಯವೇ ಇಲ್ಲ. ಉಸ್ನೋಕ್ ದಿನದಿನಕ್ಕೆ ವೃದ್ಧಿಗೊಳ್ಳುತ್ತಿದೆ. ಅಷ್ಟಾವಕ್ರ ಹುಟ್ಟಿದ್ದಾನೆ ಎಂಬುದು ಗೊತ್ತಾದರೆ ಇನ್ನೂ ವಿಜೃಂಭಿಸುತ್ತದೆ. ನನ್ನ ಮಾತನ್ನು ಪಾಲಿಸು ಇನ್ನಷ್ಟು ಸೇವಕರು ತಯಾರಾಗುತ್ತಾರೆ. ನಾನು ಕೋಟ್ಯಾಧೀಶ್ವರ ಅಲ್ಲ....ಮಿಲಿಯನೇರ್ ಅಲ್ಲ. .ಬಿಲಿಯನೇರ್..."ಎನ್ನುತ್ತಾ ನಕ್ಕ.

ಕಾರು ನಿಂತಿತು.

ವಂಶೀಕೃಷ್ಣ ಇಳಿಯುತ್ತಾ "ರಂಗಪ್ರಸಾದ್ ಇಳಿಯಿರಿ" ಎಂದ.

"ಎಲ್ಲಿಗೆ ಬಂದಿದ್ದೇವೆ?"

"ಸ್ಮಶಾನಕ್ಕೆ."

"ಏಕೆ?"

"ಇಲ್ಲಿ ಕೊಂದರೆ ಬೇರೆ ಯಾರಿಗೂ ಅನುಮಾನ ಬರುವುದಿಲ್ಲ. ಅದು ಮೊದಲ ಕಾರಣ. ನಿನ್ನನ್ನು ಕೊಲ್ಲುವ ಮೊದಲು ನಿನ್ನ ಜೀವನದ ಕೊನೆಯ ವಿಚಿತ್ರ ತೋರಿಸುತ್ತೇನೆ...." ಎಂದ ವಂಶೀಕೃಷ್ಣ.

ತನ್ನ ಮೃತ್ಯು ಅನಿವಾರ್ಯವೆಂದು ಮೌನವಾಗಿ ಕಾರ್ ಬಾಗಿಲು ತೆಗೆದುಕೊಂಡು ಹೊರಬಂದ. ದೂರದಲ್ಲಿ ಸ್ಮಶಾನ. ರಂಗಪ್ರಸಾದ್ ಹಿಂದೆ ವಂಶೀಕೃಷ್ಣ ನಡೆಯುತ್ತಿದ್ದ. ಅವನ ಕೈಯಲ್ಲಿ ಪಿಸ್ತೂಲು. ಸ್ಮಶಾನದಲ್ಲಿ ಮೂರು ಆಕೃತಿಗಳು ಕಾಣಿಸುತ್ತಿವೆ. ಅವನು ಅತ್ತಕಡೆ ಹೆಜ್ಜೆ ಹಾಕುತ್ತಿದ್ದ. ಸಮೀಪಿಸಿದ ನಂತರ "ನೋಡು, ಉಸ್ನೋಕ್‌ನ ನೇತಾರ! ಕ್ಷುದ್ರ ಗಣಗಳನ್ನೆಲ್ಲಾ ವಶಪಡಿಸಿಕೊಂಡಿರುವಾತ! ಅಷ್ಟಾವಕ್ರನ ಆಗಮನಕ್ಕೆ ಪ್ರಥಮ ಕಾರಣನಾದ ಮಹಾದ್ರಷ್ಟ. ಆತನನ್ನು ಸೂಕ್ಷ್ಮವಾಗಿ ನೋಡು" ಎಂದ.

ರಂಗಪ್ರಸಾದ್ ಆ ಆಕಾರವನ್ನು ಕಣ್ಣರಳಿಸಿ ನೋಡಿದ. ಎಲ್ಲೋ ನೋಡಿದಂತೆ. ಸ್ವಲ್ಪ ಸ್ವಲ್ಪವಾಗಿ ಹತ್ತಿರವಾಗುತ್ತಿರುವ ಆ ಆಕೃತಿ ಸ್ಪಷ್ಟವಾಯಿತು. ರಂಗಪ್ರಸಾದ್‌ನ ಕೈಕಾಲು ನಡುಗಿತು. ಅಷ್ಟು ಕತ್ತಲಲ್ಲೂ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಆ ಆಕಾರ ಮತ್ತಷ್ಟು ಹತ್ತಿರವಾಯಿತು.

ಅಪ್ರಯತ್ನವಾಗಿ ಹಿಂದಡಿ ಇರಿಸುತ್ತಾ "ಅಪ್ಪಾಜಿ" ಎಂದ.

ಮಹಾದ್ರಷ್ಟನ ರೂಪದಲ್ಲಿ ಹರಿಹರರಾವ್ ಕ್ರಮ ಕ್ರಮವಾಗಿ ಸಮೀಪಿಸುತ್ತಿದ್ದ.

* * * *

ಕಾಲಬಳಿ ಶವಪೆಟ್ಟಿಗೆಯಂತೆ ಕಾಣುತ್ತಿದ್ದ ಮರದ ಪೆಟ್ಟಿಗೆ ತೋರಿಸುತ್ತಾ "ಇವರೇನು ನಂಬುತ್ತಾರೋ. ಆದರೆ ಇಲ್ಲಿರುವ ವಸ್ತುಗಳು ಮಾತ್ರ ತುಂಬಾ ವಿಚಿತ್ರನಾಗಿವೆ."

ರಂಜಿತಾಳಿಗೆ ಅರ್ಥವಾಗಲಿಲ್ಲ. ಇನ್ನು ಕಾಲ ಹದಿನೈದು ನಿಮಿಷವೂ ಇಲ್ಲ. ಷಾಡೋ ಮಾತ್ರ ತೀರಾ ಸಾಧಾರಣವಾಗಿಯೇ ಇದ್ದಾನೆ.

ರಂಜಿತಾ ಮುಖದಲ್ಲಿಯ ಭಾವವನ್ನು ಗಮನಿಸಿದವನಂತೆ "ಈಗ ಸಣ್ಣ ಟ್ರಿಕ್ ಮಾಡಬೇಕು. ಇದು ಕೊನೆಯ ಯುಕ್ತಿ!" ಎಂದ.

"ಉಸ್ಕೋಕ್ ಸದಸ್ಯರು ತಮ್ಮವರ ಶರೀರದ ಮೇಲಿನ ಗುರ್ತುಗಳನ್ನು ಕಾಣುತ್ತೇವೆ ಎಂದುಕೊಳ್ಳುತ್ತಾರೆ. ಆ ಭ್ರಾಂತಿಯನ್ನು ನಾವು ಬಳಸಿಕೊಳ್ಳೋಣ. ನೀನು ಇದರಲ್ಲಿ ಮಲಗು" ಎಂದು ಆ ಶವದ ಪೆಟ್ಟಿಗೆ ತೋರಿಸಿದ.

"ಅಯ್ಯೋ ನಾನೇ?" ಎಂದಳು ಗಾಬರಿಯಿಂದ.

"ಇದರಲ್ಲಿ ಎಷ್ಟೋ ಶವಗಳನ್ನು ಮಲಗಿಸಿದ್ದಿರಬಹುದು. ಆದರೂ ಈಗ ನೀನು ಇಲ್ಲಿ ಮಲಗದೆ ವಿಧಿಯಿಲ್ಲ. ಎಷ್ಟೋ ಕ್ಷುದ್ರ ದೇವತಾರ್ಚನಕ್ಕೆ ಬಳಸಿರುವ ಈ ಶವಪೆಟ್ಟಿಗೆ ನೀನು ಉಳಿದು ಹೊರ ಬೀಳಲು ಇದರಲ್ಲಿ ಮಲಗಬೇಕು" ಎಂದು ಅವಳನ್ನು ಮಲಗಿಸಿದ.

ಪಕ್ಕದ ಕೋಣೆಯೊಳಗಿನಿಂದ ಉದ್ದವಾದ ಬಟ್ಟೆಗಳನ್ನು ತೆಗೆದುಕೊಂಡು ತನ್ನ ಕೊರಳ ಸುತ್ತ ಸುತ್ತಿಕೊಂಡ. ಅವನೇ ಕಾಷ್ಮೋರಾದಂತೆ ಕಾಣಿಸುತ್ತಿದ್ದ. ಮುಂದಿನ ಕೋಣೆಗೆ ಬಂದ. ಅಲ್ಲಿ ನಾಲ್ಕು ಮಂದಿ ಇದ್ದರು. ಗಂಭೀರ ಧ್ವನಿಯಲ್ಲಿ "ನೀವೇನು ಮಾಡುತ್ತಿದ್ದೀರಿ ಇಲ್ಲಿ?" ಎಂದು ಕೇಳಿದ.

ಅವರೆಲ್ಲರೂ ಬಿಟ್ಟ ಕಣ್ಣುಗಳಿಂದ ದಿಟ್ಟಿಸುತ್ತಿದ್ದರು. ಅವರಿಗೆ ತಾನಾವ ಸ್ಕೆಲಿಟನ್ ಎಂಬುದೇನಾದರೂ ಗೊತ್ತಾದರೆ ತನ್ನ ಸ್ಕೆಲಿಟನ್ ತೆಗೆದು ಹೊರ ಹಾಕುತ್ತಾರೆ ಎಂಬುದು ಗೊತ್ತಿತ್ತು. ಎದೆಯ ಬಡಿತ ಹೆಚ್ಚಾಗುತ್ತಿತ್ತು. ಅವರಲ್ಲಿ ಷಾಡೋ ಬಗ್ಗೆ ಏನೋ ಗೌರವಭಾವ ಕಾಣಿಸಿತು.

ಷಾಡೋ ಆ ವಸ್ತ್ರಗಳನ್ನು ಸುತ್ತಿದ ರೀತಿ ಮಹಾದ್ರಷ್ಟನನ್ನೇ ಹೋಲುತ್ತಿತ್ತು. ಅವರೆಲ್ಲಾ ಎದ್ದು ಬರುತ್ತಲೇ "ಈ ಪೆಟ್ಟಿಗೆ ತೆಗೆದುಕೊಂಡು ಬನ್ನಿ. ಕುದಕ್ಷತಾಯಜ್ಞಕ್ಕೆ ಅಷ್ಟಾವಕ್ರನ ಹುಟ್ಟಿಗೆ ಕೊನೆಯ ಅಂಶವಾಗಿ ಷಡ್ಬುದ

ತಂತುವನ್ನು ನಿರ್ವಹಿಸಬೇಕೆಂದು ಆಜ್ಞೆಯಾಗಿದೆ" ಎಂದ. ಅವನಿಗೆ ಆ ಪದಗಳ ಅರ್ಥ ಗೊತ್ತಿರಲಿಲ್ಲ!

ಸಗೌರವವಾಗಿ ಅವರೆಲ್ಲರೂ ಶವಪೆಟ್ಟಿಗೆಯನ್ನು ಹೊತ್ತು ನಡೆದರು. ಅದುವರೆವಿಗೂ ಅವನು ಮಾಡಿದ ತಪ್ಪು ಅರ್ಥವಾಯಿತು. ಬಲಗಡೆಗಲ್ಲದೆ, ಎಡೆಗಡೆ ಕತ್ತಲಲ್ಲಿ ನಡೆದರು. ಅಲ್ಲಿ ಬಾಗಿಲಿತ್ತು. ಬಾಗಿಲ ಬಳಿ ಇಬ್ಬರು ಸದಸ್ಯರು. ಷಾಡೋ ಎದೆ ಡವಡವ ಎಂದು ಬಡಿದುಕೊಂಡಿತು. ಇವರಿಗೇನಾದರೂ ಸಂಕೇತವಿದೆಯೇನೋ ಎಂಬ ಭಯ. ಅದೃಷ್ಟವಶಾತ್ ಏನೂ ಕೇಳದೆ ಅವರು ಬಾಗಿಲು ತೆರೆದರು. ಎಲ್ಲರೂ ಹೊರಬಂದರು.

ಹೊರಗೆ ಪೊದೆಗಳು, ಗಿಡಗಳು. ಇನ್ಸ್ಟಿಟ್ಯೂಟ್ ಹಿಂಭಾಗದಲ್ಲಿ ಇರುವಂತೆ ಷಾಡೋ ಗಮದೆಸಿದ. ಮತ್ತೊಂದು ಗುಂಡು ಹಾರಿಸಿದ. "ಸ್ಮಶಾನಕ್ಕೆ ಈ ಪೆಟ್ಟಿಗೆ ತೆಗೆದುಕೊಂಡು ಹೋಗಲು ನಮ್ಮ ವಾಹನ ಯಾವುದೂ ಇಲ್ಲವೇ?"

ವಿಧೇಯತೆಯಿಂದ "ಇಲ್ಲದೇನು ಸ್ವಾಮಿ? ಈಗಲೇ ತರಿಸುತ್ತೇನೆ" ಎಂದು ಬೇಗ ವ್ಯಾನ್ ತಂದ. ಹಿಂದೆ ಪೆಟ್ಟಿಗೆ ಇರಿಸಿ ತಾನು ಡ್ರೈವರ್ ಸೀಟಿನಲ್ಲಿ ಕುಳಿತು "ಮಿತ್ರರೇ, ನಮಸ್ಕಾರ. ಅಷ್ಟಾವಕ್ರ ಇನ್ನು ಎಂಟು ನಿಮಿಷಗಳಲ್ಲಿ ಹುಟ್ಟುತ್ತಾನೆ. ನಿಮಗೆ ಶುಭವಾಗಲಿ. ಉಸ್ಪೋಕ್‌ಗೆ ಜಯವಾಗಲಿ" ಎಂದು ಹೇಳಿ ಹೊರಟ.

ಅಲ್ಲಿಂದ ತೀರಾ ವೇಗವಾಗಿ ಹೊರಟ ವ್ಯಾನ್ ರಸ್ತೆ ಸೇರಿಕೊಂಡಿತು.

ಐದು....ನಾಲ್ಕು....ಮೂರು....ಎರಡು....ವ್ಯಾನ್ ಬುಲೆಟ್ಟಿನಂತೆ ಮುಂದೆ ಸಾಗುತ್ತಿತ್ತು. ಊರಿನ ಅಂಚನ್ನು ದಾಟಿತ್ತು. ಭೂಮಿ-ಆಕಾಶವೇ ನಡುಗುವಂತೆ ಸದ್ದು. ಅದೇ ಸಮಯಕ್ಕೆ ಪ್ರಪಂಚವನ್ನೇ ಬೆಳಗುವಂತೆ ಬೆಳಕು. ಮೊದಲು ಬಿಸಿ ಗಾಳಿ ಬೀಸಿ ಮರುಕ್ಷಣದಲ್ಲಿಯೇ ಅದು ತಣ್ಣಗಾಯಿತು. ಭೂಮಿಯ ಕಂಪನದಿಂದ ವ್ಯಾನ್ ಅತ್ತಿತ್ತ ಚಲಿಸಿದರೂ ಷಾಡೋ ವ್ಯಾನನ್ನು ನಿಲ್ಲಿಸಲಿಲ್ಲ. ವ್ಯಾನ್ ನಿಲ್ಲುವ ವೇಳೆಗೆ ಹತ್ತು ನಿಮಿಷಗಳಾಗಿತ್ತು.

ಕತ್ತಲಲ್ಲಿ ಏನೂ ಕಾಣಿಸುತ್ತಿರಲಿಲ್ಲವಾದರೂ ಕೆಲವು ನಿಮಿಷಗಳ ಹಿಂದೆ ಕಾಣಿಸಿದ ಬೆಳಕಿನಲ್ಲಿ ಏನು ನಡೆದಿದೆ ಎಂಬುದನ್ನು ಊಹಿಸಿಕೊಳ್ಳಬಲ್ಲ. ತಾನು ನಂಬಿದ್ದು ಒಳಗಿಳಿದು ಬರುವ ಸಂದರ್ಭದಲ್ಲಿ ಅವರೆಲ್ಲರೂ ಮೌನವಾಗಿ ಆಕಾಶ ಸೇರುವ ಸಂದರ್ಭ ತಾನಾಗಿಯೇ ರೂಪುಗೊಂಡಿತ್ತು. ಉಸ್ಪೋಕ್ ಸದಸ್ಯರ ಆತ್ಮಗಳು ಒಡನೆಯೇ ಆಕಾಶ ಸೇರಲಾರದೆ ಅಲ್ಲಿಯೇ ಗಿರಗಿರನೆ ಸುತ್ತುತ್ತಿರುವಂತೆ ಹೊಗೆ! ಪ್ರಪಂಚದ ಭವಿಷ್ಯವನ್ನೇ ಭಯದಿಂದ ಕಂಪಿಸುವಂತೆ ಮಾಡಿದ್ದ

ಅತ್ಯಂತ ಅಪಾಯಕಾರಿ ಆಯುಧಗಳು ನಿರ್ವೀರ್ಯವಾದಂತೆ, ಅಜ್ಞಾನವೋ ಮೌಢ್ಯವೋ ತಿಳಿಯದ ಸ್ಥಿತಿಯಲ್ಲಿ ಒಬ್ಬನ ಮಾತಿನ ಮೇಲೆ, ಒಬ್ಬ ಮನುಷ್ಯ ಸೃಷ್ಟಿಸಿದ ಮಾಯಾಜಾಲದಲ್ಲಿ ತಮ್ಮ ಪ್ರಾಣವನ್ನು ಬಲಿಕೊಡಲು ಸಿದ್ಧವಾಗಿದ್ದ ನೂರಾರು ಸದಸ್ಯರ ಚಿತೆ ಒಮ್ಮೆಲೆಗೇ ಹೊತ್ತಿ ಉರಿದಂತೆ ಕಾಣಿಸಿತು.

ಇದರಲ್ಲಿ ಮುಗ್ಧರೂ ದಗ್ಧವಾಗಿರಬಹುದು. ಅದು ನಿಯಮ. ತಪ್ಪಿಸಲು ಸಾಧ್ಯವಿಲ್ಲ. ಕುರುಕ್ಷೇತ್ರದಲ್ಲಿ ಕೌರವರೊಂದಿಗೆ ಕುರುವೃದ್ಧರೂ ಕೊನೆಗಾಣದೆ ತಪ್ಪಲಿಲ್ಲವಲ್ಲಾ!

* * * *

ಸ್ಮಶಾನವೇ ಸಾಗರವಾದಂತಿದೆ. ನೆಲವೆಲ್ಲಾ ಕೆಸರು. ಚಂಡಮಾರುತದಲ್ಲಿ ದಿಕ್ಕು ತಿಳಿಯದೇ ನಡೆಯುವ ಯಾತ್ರಿಕನಂತೆ ಕತ್ತಲಲ್ಲಿ ಹೆಜ್ಜೆ ಇರಿಸುತ್ತಿದ್ದಾನೆ ಸಿದ್ಧಾರ್ಥ. "ಗೌರೀ....ಗೌರೀ...." ಎಂದು ಗಟ್ಟಿಯಾಗಿ ಕರೆಯುತ್ತಿದ್ದಾನೆ. ಕರೆಗೆ ಗಾಳಿಯ ಸಪ್ಪಳವೇ ಉತ್ತರವಾಯಿತು. ಅನುಮಾನ ಪಿಶಾಚಿ ಮನದಲ್ಲಿ ಸೇರಿ ಕ್ಷಣಕ್ಷಣಕ್ಕೂ ವೃದ್ಧಿಗೊಳ್ಳುತ್ತಿದೆ.

ಮುರಿದು ಬಿದ್ದ ಕೊಂಬೆಗಳು, ಭೂಮಿಯಿಂದ ಮೇಲೆ ಬಂದ ಬೇರುಗಳು. ಒಡೆದ ಸಮಾಧಿಗಳು....

ಅವನು ಹುಚ್ಚನಾಗುತ್ತಿದ್ದಾನೆ. ಅದುವರೆವಿಗೂ ಬೆಟ್ಟದಂತೆ ನಿಂತಿದ್ದವನು, ಮೃತ್ಯು ಅವನ ಮುಂದೆಯೇ ಬಂದು ನಿಂತಿದ್ದರೂ ಧೈರ್ಯವಾಗಿ ಮುಂದಡಿ ಇರಿಸಿದವನು ತನ್ನ ಹೆಂಡತಿಯನ್ನು ಕಾಣದೆ ಆ ಕ್ಷಣದಲ್ಲಿ ಕೃಶಿಸಿದ್ದ ಅವನನ್ನು ನೋಡಿದವರ್ಯಾರೂ ಅವನು ಸಿದ್ಧಾರ್ಥ ಎಂದು ಗುರ್ತಿಸುವಂತೆಯೂ ಇರಲಿಲ್ಲ. ಎಲ್ಲವನ್ನು ಬಿಟ್ಟ ಬೈರಾಗಿಯಂತೆ ಕಾಣುತ್ತಿದ್ದಾನೆ.

ಇನ್ನೊಮ್ಮೆ ಅರಚಿದ. ಈ ಬಾರಿ ಪ್ರಕೃತಿ ಅವನನ್ನು ಕರುಣಿಸಿತ್ತು. ಗಾಳಿಯ ಮೊರೆತ ಕಡಿಮೆಯಾಗಿತ್ತು. ಈ ಶಾಂತಿಯಲ್ಲಿ ಅವನಿಗೆ ಕೇಳಿಸಿತು–

ಸಣ್ಣ ಮುಲುಕು ಧ್ವನಿ.

ಇದೇನು ಕಿವಿಗಳ ಭ್ರಾಂತಿಯೇನೋ ಎಂದು ಒಂದು ಕ್ಷಣ ತಡೆದ.

ಮನದ ಮೂಲೆಯಲ್ಲಿ ಕಾಣಿಸಿಕೊಂಡ ಆಸೆ ಮತ್ತಷ್ಟು ವೃದ್ಧಿಗೊಂಡು ಮತ್ತೊಮ್ಮೆ ಆ ಸ್ವರ ಕೇಳಿಸಿತು. ಎಲ್ಲಿದ್ದರೂ-ಎಷ್ಟೇ ದೂರದಲ್ಲಿದ್ದರೂ–ಎಷ್ಟು ಮೆಲು ಧ್ವನಿಯಾಗಿದ್ದರೂ ಕೇವಲ ಹೃದಯಕ್ಕೆ ಮಾತ್ರವೇ ಕೇಳಿಸುವ ಮನಸ್ಸಿನ ಆ ಕರೆ ಅವನೊಬ್ಬನಿಗೇ ಕೇಳಿಸುವಂತಿತ್ತು. ಅವನೊಬ್ಬನೇ ಅದನ್ನು ಅರಿಯಬಲ್ಲ!

ಓಡಿದ.

ಎದುರಲ್ಲಿದ್ದದ್ದ ಗಿಡ, ಕಲ್ಲು, ದಿಬ್ಬ, ಸಮಾಧಿಗಳನ್ನು ಹಾರುತ್ತಾ ಓಡಿದ. ಗಾಳಿಗಿಂತಲೂ ವೇಗವಾಗಿ ಓಡಿದ.

ದೂರದಲ್ಲಿದ್ದ ಬಿದ್ದಿದ್ದ ಆಕೆ ಕಾಣಿಸಿದಳು.

ಕೊಂಬೆಗಳ ಮಧ್ಯೆ ಸಿಕ್ಕಿಕೊಂಡು, ಹರಿಯುವ ನೀರಿನಲ್ಲಿ ಕೇದಾರಗೌರಿ ಬಿದ್ದಿದ್ದಾಳೆ. ಮಿಂಚಿನ ಬೆಳಕಿನಲ್ಲಿ ಅವಳನ್ನು ಕಂಡ ಅವನ ಮನದಲ್ಲಿ ಆನಂದ, ಆಂದೋಲನಗಳು ಸಮಪಾಲಿನಲ್ಲಿ ಮಿಶ್ರಗೊಂಡಿತ್ತು. ಮುಂದೆ ಹೆಜ್ಜೆ ಹಾಕಿದ.

ಅವಳ ಶ್ವಾಸ ಪರೀಕ್ಷಿಸಿದ. ಚಿರಪರಿಚಿತ ಸ್ನೇಹಪೂರ್ಣ ಸ್ಪರ್ಶ ನೊಸಲಿನ ಮೇಲಾಗುತ್ತಲೇ ನೋವಿನಿಂದ ನರಳಿದ ಅವಳು ಕಣ್ತೆರೆದಳು.

ಸಿದ್ಧಾರ್ಥನ ಆನಂದಕ್ಕೆ ಪಾರವಿಲ್ಲ. ಅವನ ಆನಂದವನ್ನು ಕಂಡ ಆ ಕತ್ತಲೆ, ಗಾಳಿ, ಮಳೆ ಎಲ್ಲವೂ ನಾಚಿಕೊಂಡವು.

ಅವನ ಆನಂದ ಕೇದಾರಗೌರಿ ಬದುಕಿರುವುದಕ್ಕೆ ಮಾತ್ರವೇ ಅಲ್ಲ, ಗರ್ಭದಲ್ಲಿದ್ದ ಶಿಶು ಇನ್ನೂ ಹುಟ್ಟಲಿಲ್ಲ ಎಂಬುದೂ ಒಂದು ಕಾರಣ. ನಿರಾಸೆ ಪೂರ್ಣವಾಗಿ ಆಸೆಯಾಗಿ ಬದಲಿಸಲಿಲ್ಲವಾದರೂ ಅತಿಯಾಸೆಯಾಗಲಿಲ್ಲ ಎಂಬ ಸಂತೃಪ್ತಿ.

ಅವಳ ಹೊಟ್ಟೆಯ ಮೇಲೆ ಕೈಯಿರಿಸಿ ಪ್ರೇಮ ಸ್ವರದಲ್ಲಿ "ಗೌರಿ" ಎಂದು ಕರೆದ.

ಸ್ವಲ್ಪ ಚಲಿಸಿದಳು. ಆ ಚಲನೆ ಅವನಿಗೆ ಸಂಕೇತವಾಗಿ ತನ್ನ ಕರ್ತವ್ಯವನ್ನು ಎಚ್ಚರಿಸಿತು. ಸಾಧಾರಣ ಸಿದ್ಧಾರ್ಥ ಕ್ಷಣಗಳಲ್ಲಿ ನಿಜವಾದ ಸಿದ್ಧಾರ್ಥನಾದ- ಸಿದ್ಧಾಂತಕ್ಕಾಗಿ ಸಿನಿಮಾ ಹಾಲ್‌ನಲ್ಲಿ ಹೋರಾಡಿದವನು! ಶುಭಕ್ಕಾಗಿ ಹಿಮಾಲಯದಲ್ಲಿ ಪ್ರಕೃತಿಯೊಂದಿಗೆ ಸೆಣಸಿದವನು!!

ಅವನೆದ್ದು ನಿಲ್ಲುತ್ತಲೇ ಕ್ಷುದ್ರಗಣಗಳು ಹೋರಾಟಕ್ಕಾಗಿ ಸನ್ನದ್ಧವಾದಂತೆ ಕಂಡವು. ಅವನ ಮೈಮೇಲಿನ ಸೂಫೀ ಅಕ್ಷರಗಳು ಕಂಡು ಬೆದರಿದವು. ಆದರೂ ತಮ್ಮ ಬಲವನ್ನು ದ್ವಿಗುಣಗೊಳಿಸಿಕೊಂಡು ಮತ್ತೆ ಮೇಲೆರಗಲು ಸನ್ನದ್ಧವಾಗುತ್ತಿದ್ದವು.

ಮತ್ತೆ ಮಳೆ ಪ್ರಾರಂಭವಾಯಿತು. ಅವನ ಮೈ ಒಂದು ಶಿಲಾಫಲಕದಂತೆ ಕಾಣುತ್ತಿತ್ತು. ಮಿಂಚಿದಾಗ ಅಕ್ಷರಗಳು ಕೆಂಪಾಗಿ ಮಿರುಗುತ್ತಿದ್ದವು.

ಮುಂದೆ ಬಂದು ಗೌರಿಯನ್ನು ಎತ್ತಲು ಕೈಚಾಚಿದ, ಸಾಧ್ಯವಾಗಲಿಲ್ಲ. ಮಳೆಯಿಂದ ತಪ್ಪಿಸಲು, ಮರೆಗೆ ಕರೆದುಕೊಳ್ಳುವುದೂ ಸಾಧ್ಯವಾಗಲಿಲ್ಲ. ಸುತ್ತಲೂ ಯಾವ ಸೂರೂ ಇಲ್ಲ.

ಎಷ್ಟು ಹೊತ್ತಿನಿಂದ ಹಾಗೆ ಬಿದ್ದಿದ್ದಳೋ ಸಂಪೂರ್ಣವಾಗಿ ತೊಯ್ದು ಹೋಗಿದ್ದಳು. ನೋವು ಹೆಚ್ಚಿದಂತೆಲ್ಲಾ ಆಕೆಯ ನರಳುವಿಕೆಯೂ ಹೆಚ್ಚುತ್ತಿದೆ.

ಇನ್ನು ತಡಮಾಡುವುದು ಸರಿಯಲ್ಲ.

ಕತ್ತಿಯು ಮಿಂಚಿನಲ್ಲಿ ಹೊಳೆಯುತ್ತಿದೆ.

ಉದ್ದವಾದ ಸಮಾಧಿ. ಯಾರದೋ. ಪೂರ್ಣವಾಗಿ ಶಿಥಿಲವಾಗಿದೆ.

ಕತ್ತಿಯನ್ನು ಹಿಡಿದು ಅದರ ಮೇಲೆ ಕೆತ್ತತೊಡಗಿದ,

—ಶ್ರೀಚಕ್ರವನ್ನು.

ಅವನ ಪ್ರಯತ್ನವನ್ನು ಅರಿತು ಅದನ್ನು ವಿರೋಧಿಸುವುದು ತಮ್ಮ ಕರ್ತವ್ಯವೆಂಬಂತೆ ಅದೃಶ್ಯಗಣಗಳು ಸುತ್ತಲಾರಂಭಿಸಿದವು. ಮನುಷ್ಯನನ್ನು ತಳ್ಳುವಷ್ಟು ಬಲವಾದ ಹಃಹಾ....ಕಾರದ ಸದ್ದು. ಪ್ರಕೃತಿಗೂ-ವಿಕೃತಿಗೂ ಮಧ್ಯದ ಘರ್ಷಣೆ.

ಈ ಹೋರಾಟದಲ್ಲಿಯೇ ಶ್ರೀಚಕ್ರವನ್ನು ಲಿಖಿಸಿ ಪೂರೈಸಿದ. ಗೌರಿಯನ್ನು ಎರಡೂ ಕೈಗಳಿಂದ ಎತ್ತಿ ಅದರ ಮೇಲೆ ಮಲಗಿಸಿದ. ಸಾಗರದ ಅಂತರಾಳದಿಂದ ಒಂದು ಅಲೆ ಮೇಲಕ್ಕೇರಿಬಂದಂತೆ ಗೌರಿ ಚಲಿಸಿದಳು. ಅದುವರೆವಿಗೂ ಪ್ರೇಕ್ಷಕರಾಗಿ ನೋಡುತ್ತಾ ಮೌನವಾಗಿದ್ದ ಗಾಳಿ, ಮಳೆಯೂ ಚಲಿಸಿದವು. ದೂರದಿಂದ ಯಾರೋ ಪ್ರೋತ್ಸಾಹಿಸುತ್ತಿರುವಂತೆ ಹಲವು ಸಾವಿರ ಮೈಲಿಗಳ ದೂರದಲ್ಲಿ ಎಲ್ಲಿಯೋ ಕಾಡಿನಲ್ಲಿ ದಟ್ಟವಾಗಿ ಹರಡಿರುವ ಎಲೆಗಳ ಮಧ್ಯೆ ಕೆಲವು ವರ್ಷಗಳ ಮೊದಲೇ ಸೇರಿ ಶಿಥಿಲವಾಗಿದ್ದ ಶವವು ಸ್ವಲ್ಪ ಚಲಿಸಿ ಆಕಳಿಸಿದಂತೆ ಸಪ್ಪಳ. ಅಲ್ಲಿಂದ ಎದ್ದು ಬರಲು ಪ್ರಯತ್ನಿಸುತ್ತಾ ಇಲ್ಲಿಯ ಗರ್ಭದಲ್ಲಿ ಸೇರಲು ಗಾಳಿಯಲ್ಲಿ ತೇಲಿ ಬರುತ್ತಾ ಇಲ್ಲಿಯ ಮಂತ್ರಾಕ್ಷರಗಳನ್ನು ಕಂಡು ಹಿಂದಡಿ ಇರಿಸಿದ ಭಾವನೆ.

ಇದು ಬರೀ ಭ್ರಾಂತಿ ಮಾತ್ರವೇ? ಯಾವ ಭ್ರಾಂತಿಯಲ್ಲಿ ಉಸ್ಪೋಕ್ ಬದುಕುತ್ತಿದೆಯೋ ಅದೇ ಭ್ರಾಂತಿ ಅವನನ್ನು ಕರ್ತವ್ಯ ವಿಮುಖನನ್ನಾಗಿಸುತ್ತದೆಯೇ? ಈ ಗಾಳಿ, ಈ ಪ್ರಕೃತಿ ವಿಜೃಂಭಣೆ ಎಲ್ಲಾ ಮನುಷ್ಯ ಕಲ್ಪಿಸಿಕೊಂಡ ಮಾನಸಿಕ ವೈಪರೀತ್ಯಗಳೇನೇ? ಇದಕ್ಕೆ ಬೇಕಾದುದು ಉತ್ತರವಲ್ಲ ತನ್ನ ಹೆಂಡತಿಯು ಬದುಕುವುದು...

ಗೌರಿ ಗಟ್ಟಿಯಾಗಿ ಕಿರುಚಿದಳು.

ಅವನೂ ಬೆಚ್ಚಿದ.

ಮೇಘಗಳ ಮಧ್ಯೆ ಮಿಂಚಿನ ಸಂಚಾರವಾಯಿತೇ? ಇಲ್ಲ. ಆಕೆಯ ಬಳಿಯಿಂದಲೇ ಬರುತ್ತಿದೆ ಆ ಬೆಳಕು ಇಬ್ಬರ ಬಾಳನ್ನು ಬೆಳಗುವ ಆ ಬೆಳಕು....

ಅವನು ಬಗ್ಗಿ ಕೈ ಮುಂದೆ ಚಾಚಿದ. ಒಂಬತ್ತು ತಿಂಗಳ ಹಿಂದೆ ಇದೇ ಬಯಲಲ್ಲಿ ನಡೆದ ಸುಮಾಗಮ. ಶೂನ್ಯದಿಂದ ಮೂಡಿಬಂದ ಒಂದು ಶಕ್ತಿರೂಪ ರೂಪಾರಿಯಾದಂತೆ...ಆರು ಗಂಟೆಯ ನಂತರ ಮಾಡುವ ಬಾಲ ಭಾಸ್ಕರನ್ನು ಆ ಸಮಾಧಿಯ ಮೇಲೆ ಆಗಲೇ ಆವಿರ್ಭವಿಸಿದಂತೆ....ಅದುವರೆವಿಗೂ ಪ್ರಳಯ ಕಾಲ ಚಂಡಮಾರುತವನ್ನು ಸೃಷ್ಟಿಸಿದ ಗಾಳಿ, ಮರದ ಕೊಂಬೆಗಳು ತೂರ್ಯ ನಾದವನ್ನು ಸೃಷ್ಟಿಸಿದಂತೆ ಅನುಭೂತಿ. ಈ ಅನುಭೂತಿಯಲ್ಲೇ ಆಕೆಯ-ಗಂಡ ಆಕೆಗೆ ತಾಯಿಯಾದ. ತಾಯಿಯಾಗಿ ಆಕೆಯನ್ನು ತಾಯಿಯನ್ನಾಗಿಸಿದ.

ಪೂರ್ಣಚಂದ್ರನಂತಹ ಮಗು. ಬಾಲಕೃಷ್ಣನ ಕಾಂತಿ. ಮಂತ್ರಿಸಿದ್ದ ಕತ್ತಿ ಶಿಶುವಿನ ಹೊಕ್ಕಳ ಬಳ್ಳಿ ಕೊಯ್ಯಲು ಉಪಯೋಗವಾಯಿತು.

ಮುಡಿಹಾಕುತ್ತಾ ಪಕ್ಕದಲ್ಲಿ ಏನೋ ಸಪ್ಪಳವೆಂದು ತಲೆ ಎತ್ತಿ ನೋಡಿದ.

ಆಜಾನುಭಾಹು.

ಮಹಾದ್ರಷ್ಟ ನಿಂತಿದ್ದಾನೆ. ಆತನ ಹಿಂದೆ ಇಬ್ಬರು ಉಸ್ಸೋಕ್ ಸದಸ್ಯರು.

ಸಿದ್ಧಾರ್ಥ ಕಂಪಿಸಿದ. ಆ ಮತ್ತಿನಲ್ಲೂ ತಾಯುಮುಮತೆ ಎಚ್ಚರಗೊಂಡಿತೇನೋ. ಕೇದಾರಗೌರಿಯ ಕೈ ಶಿಶುವಿನ ತಲೆಯ ಮೇಲೆ ಬಂತು. ತಾಯಿ ಮಕ್ಕಳಿಗೆ ಛತ್ರಿಯಂತೆ ಅವನು ಬಗ್ಗಿನಿಂತ. 'ಮೊದಲು ನನ್ನನ್ನು ಕೊಲ್ಲು. ನಂತರ ಅವರು ದೊರೆಯುತ್ತಾರೆ' ಎನ್ನುವ ಭಾವನೆ.

ಹುಲಿಯ ಮುಂದೆ ತನ್ನ ಮರಿಗಳನ್ನು ರಕ್ಷಿಸಲು ಸನ್ನದ್ಧವಾಗುವ ಜಿಂಕೆಯಂತೆ ಕಾಣುತ್ತಿದ್ದ ಸಿದ್ಧಾರ್ಥ. ಅವನಲ್ಲಿ ಹೋರಾಡುವ ಶಕ್ತಿ ಕೂಡ ನಶಿಸಿತ್ತು.

ಮಹಾದ್ರಷ್ಟನ ದೃಷ್ಟಿ ಮಗುವಿನ ಮೇಲೆ ಬಿತ್ತು. ಆ ಕತ್ತಲಲ್ಲೂ ಬದಲಾದ ಆತನ ಮುಖಭಾವ ಕಾಣಿಸುತ್ತಿತ್ತು.

ಅದನ್ನುಗಮನಿಸುತ್ತಾ ಸಿದ್ಧಾರ್ಥ ನುಡಿದ. "ಅ...ಲ್ಲಿ....ಆ....ಮೂಲೆಯ ಗುಡಿಯಲ್ಲಿ ಒಂದು ಮಗುವಿದೆ..."

ಮಹಾದ್ರಷ್ಟ ಪರ್ವತದಂತೆ ಅಲ್ಲಿಂದ ಚಲಿಸಿದ.

* * * *

ಬರುತ್ತಿದ್ದ ಮಹಾದ್ರಷ್ಟನನ್ನು ಕಂಡು "ಅಪ್ಪಾಜೀ..." ಎಂದ ರಂಗಪ್ರಸಾದ್. ಆ ಎರಡೇ ಅಕ್ಷರಗಳಲ್ಲಿ ಆತ ಎಷ್ಟು ಅರ್ಥವನ್ನು ತುಂಬಿದ್ದನೋ ಮಹಾದ್ರಷ್ಟನೇ ಬಲ್ಲ.

ಇದೆಲ್ಲಾ ಏನು ಅಪ್ಪಾಜೀ? ನಾನು ನಿಮ್ಮ ಮಗನಲ್ಲ ಎನ್ನುವಂತೆ

ಎಂದಾದರೂ ನಡೆದುಕೊಂಡಿದ್ದೇನೆಯೇ? ಯಾರೋ ಮೂರ್ಖನೊಬ್ಬ ನೀವು ನಡೆಸಿದ ಪ್ರಯೋಗವನ್ನು ದಾರಿ ತಪ್ಪಿಸಿ ತನ್ನ ಸ್ವಾರ್ಥಕ್ಕಾಗಿ ನಿಮಗೆ ಹಾನಿಯುಂಟುಮಾಡಿದನೆಂದು ಅದಕ್ಕೆ ಪ್ರತಿಯಾಗಿ ಆತನನ್ನು, ಆತನ ತಮ್ಮನನ್ನು, ತಮ್ಮನ ಕುಟುಂಬವನ್ನೆಲ್ಲಾ ಸರ್ವನಾಶಮಾಡಬೇಕೆಂಬ ನಿಮ್ಮ ಹಾಲಾಹಲದ ಯೋಚನೆ ಹೇಗೆ ಪ್ರಾರಂಭವಾಯಿತು? ನೀವೇ ದೊಡ್ಡ ವಿಜ್ಞಾನವೇತ್ತರು. ಪ್ರಕೃತಿಯನ್ನೇ ನಿಮ್ಮ ಆಡಳಿತಕ್ಕೆ ಒಳಪಡಿಸಿಕೊಂಡಿರಿ. ಅದು ನಿಮ್ಮ ಬಗ್ಗೆಯೇ ವಿರೋಧ ತೋರಿದಾಗ ಈ ರೀತಿ ವೈರಾಗ್ಯ ಸಲ್ಲುವುದೇ? ಋಷಿಯಾಗಲೆಂದು ಹಿಮಾಲಯವನ್ನು ಪ್ರವೇಶಿಸಿದ ನೀವು ಈ ರಾಕ್ಷಸತ್ವವನ್ನು ಹೇಗೆ, ಎಲ್ಲಿ ಪಡೆದಿರಿ? ಈ ಭ್ರಾಂತಿಲೋಕಕ್ಕೆ ಏಕೆ ಜಾರಿದಿರಿ? ಈ ಸ್ವಾರ್ಥ ನಿಮ್ಮ ಭ್ರಾಂತಿಯನ್ನು ನಿಮ್ಮ ವಿಜ್ಞಾನವನ್ನೂ ತನ್ನ ಉಚ್ಚ್ರಾಯಕ್ಕಾಗಿ ಬಳಸಿಕೊಳ್ಳುತ್ತಿರುವುದು ನಿಮಗೆ ಗೊತ್ತಿದೆಯೇ....? ನನ್ನ ಬಾಳಿನ ಕೊನೆಯ ಗಳಿಗೆಯಲ್ಲಿ ಇವನ್ನೆಲ್ಲಾ ನಿಮಗೆ ಹೇಗೆ ಹೇಳಲಿ...? ನಿಮ್ಮ ಅಂಶ ಇಲ್ಲದೆ ಹೋದರೂ ನಾನು ನಿಮ್ಮ ಮಗನೇ ಅಪ್ಪಾಜೀ.... ಇಪ್ಪತ್ತೈದು ವರ್ಷಗಳ ಕಾಲ ನೀವು ಸಾಕಿ ಸಲುಹಿದ ಈ ರಂಗಪ್ರಸಾದ್ ನಿಮ್ಮ ಮಗನೇ! ನೀವು ದ್ವೇಷಿಸಿ ಹಗೆ ಸಾಧಿಸುವಷ್ಟು ಕೆಟ್ಟದ್ದು ಈ ಪ್ರಪಂಚವಲ್ಲ. ಈ ಜಗತ್ತಿಗೆ ಬೇಕಾಗಿರುವುದು ಸೈತಾನನಲ್ಲ–ಸಚ್ಛೀಲತೆ.'

ಮಹಾದ್ರಷ್ಟ ನಿಲ್ಲಲಿಲ್ಲ. ಮುಂದೆ ಬರುತ್ತಲೇ ಇದ್ದ. ಆತನ ದೃಷ್ಟಿ ವಂಶೀಕೃಷ್ಣನ ಮೇಲಿತ್ತು. ಕಣ್ಣು ಅಗ್ನಿಗೋಳಗಳಂತೆ ಮೆರೆಯುತ್ತಿದ್ದವು, ಕೈಯಲ್ಲಿ ಸೂಜಿಯಂತೆ ಮೊನಚುಗೊಳಿಸಿದ ಮೂಳೆ ಇದೆ.

ವಂಶೀಕೃಷ್ಣ ಪಿಸ್ತೂಲನ್ನು ಮೇಲೆತ್ತಿ ರಂಗಪ್ರಸಾದ್ ಕಡೆ ಗುರಿ ಇಟ್ಟ. "ದೇವರನ್ನು ಪ್ರಾರ್ಥಿಸಿಕೋ ರಂಗಪ್ರಸಾದ್! ...ಓ, ನೀನು ದೇವರನ್ನು ನಂಬುವುದಿಲ್ಲ ಎನ್ನುವುದು ಮರೆತೆ" ಎಂದು ಟ್ರಿಗರ್ ಅದುಮಲು ಹೋದ.

"ಅಷ್ಟಾವಕ್ರ ಹುಟ್ಟಲಿಲ್ಲ ಅವತಾರ್‌ಬಾಬಾ" ಎಂದು ಗಂಭೀರವಾಗಿ ಸೂಜಿಯಂತೆ ನೇರವಾಗಿ ಕೇಳಿಸಿತು ಮಹಾದ್ರಷ್ಟನ ಬಾಯಿಂದ.

ರಂಗಪ್ರಸಾದನಿಂದ ನೋಟ ಬದಲಿಸದೆ ವಂಶೀಕೃಷ್ಣ, "ಹುಟ್ಟಿದ್ದಾನೆ ಮಹಾದ್ರಷ್ಟ. ಆ ದೇವಸ್ಥಾನದಲ್ಲಿಯೇ ಇದ್ದಾನೆ."

"ಅದನ್ನು ನಾನೂ ನೋಡಿದ್ದೇನೆ. ಒಬ್ಬ ಡಾಕ್ಟರಾಗಿ ಪರೀಕ್ಷಿಸಿದ್ದೇನೆ. ಹತ್ತು ದಿನಗಳ ಹಿಂದೆ ಹುಟ್ಟಿದ ಶಿಶು, ನೀನು ಆಡಿರುವ ನಾಟಕ ಅದು. ಈ ನಾಟಕದ ಚರಮಾಂಕಕ್ಕೆಂದು ನೀನೇ ನಿಮಿತ್ತವಾಗಿ ಪ್ಲಾಸ್ಟಿಕ್ ಸರ್ಜರಿ ನಡೆಸಿ ಅಷ್ಟಾವಕ್ರನನ್ನು ರೂಪಿಸಿರುವುದು ನೋಡಿದ್ದೇನೆ. ಅವನು ಅಲ್ಲೇ ಬಿದ್ದಿದ್ದಾನೆ,

ನನಗೆ ಬೇಕಾದದ್ದು ಅದಲ್ಲ. ಕಾಷ್ಮೋರಾದ ಅಂಶದಿಂದ ಜನಿಸಿರುವ ನಿಜವಾದ ಅಷ್ಟಾವಕ್ರ. ಅವನನ್ನು ನಾನೇ ಹುಡುಕಿಕೊಳ್ಳಬೇಕು...ಇನ್ನು ನಿನ್ನ ಮಾತ ನ್ನೆಲ್ಲಾ ಕೇಳಿದ್ದೇನೆ ವಂಶೀಕೃಷ್ಣಾ... ನೀನಾಡಿದ ನಾಟಕಕ್ಕೆ ಪ್ರತಿಫಲವಾಗಿ...." ಎನ್ನುತ್ತಾ ಒಂದಡಿ ಮುಂದಿರಿಸಿದ.

ವಂಶೀಕೃಷ್ಣನ ಕೈಯಲ್ಲಿದ್ದ ಪಿಸ್ತೂಲು ಗುಂಡು ಹಾರಿಸಿತು.

ಮಹಾದ್ರಷ್ಟನ ಭುಜದಿಂದ ರಕ್ತ ಸುರಿಯತೊಡಗಿತು.

ಮಹಾದ್ರಷ್ಟ ಮುಂದೆ ಬರುತ್ತಲೇ ಇದ್ದ. ಗುಂಡು ಆತನ ನಡಿಗೆಯನ್ನು ತಡೆಯಲಿಲ್ಲ.

ವಂಶೀಕೃಷ್ಣನ ಅನುಚರರು, ಉಸ್ಸೋಕ್ ಸದಸ್ಯರೂ ಪ್ರೇಕ್ಷಕರಾಗಿ ನಿಂತಿದ್ದರು.

ಸರ್ರನೆ ಸದ್ದಾಯಿತು. ಮಹಾದ್ರಷ್ಟನ ಕೈಯಲ್ಲಿದ್ದ ಮೂಳೆ ಕೆಳಗಿಳಿದು ವಂಶೀಕೃಷ್ಣನ ಹೊಟ್ಟೆಯನ್ನು ಬೇಧಿಸಿಕೊಂಡು ಹೊರಬಂದಿತ್ತು! ವಂಶೀಕೃಷ್ಣನ ಕೊರಳಿಂದ ಯಾವ ಧ್ವನಿಯೂ ಕೇಳಿಸದಂತೆ ದಕ್ಷಿಣದ ಗಾಳಿ ಪ್ರಮಥಗಣಗಳ ಹಾಹಾಕಾರದಂತೆ ಸೊಯ್ಯನೆ ಬೀಸುತ್ತಾ ಬಂತು. ಅವನ ಶರೀರವನ್ನು ಮಹಾ ದ್ರಷ್ಟ ಗಾಳಿಯಲ್ಲಿ ಎತ್ತಿದ. ಪ್ರಾಣ ಬಿಡುವಾಗ ವಿಲವಿಲನೆ ವಿಲಪಿಸಿ ಎರಡು ಕ್ಷಣಗಳಲ್ಲಿ ಅಚೇತನಗೊಂಡಿತು.

"ಪ್ರಮಥಗಣಗಳೇ, ಇಷ್ಟುಕಾಲವೂ ನನ್ನನ್ನೂ ನಿಮ್ಮನ್ನೂ ತನ್ನ ಬಳಕೆಯ ವಸ್ತುವಾಗಿ ಬಳಸಿಕೊಂಡ ಈ ತುಚ್ಛನ ಮೈಯನ್ನು ನಿಮಗೇ ಅರ್ಪಿಸುತ್ತಿದ್ದೇನೆ."

–ಎನ್ನುತ್ತಾ ಅವನ ಹೆಣವನ್ನು ಬಲವಾಗಿ ಸಮಾಧಿಗಳ ಮಧ್ಯಕ್ಕೆ ಎಸೆದ. ಪಿಸ್ತೂಲು ಗುಂಡುಗಳಿಂದ ಸುರಿಯುತ್ತಿದ್ದ ರಕ್ತದಿಂದ ಆತನೇ ಪ್ರಳಯರುದ್ರ ನಂತೆ ಕಾಣಿಸುತ್ತಿದ್ದ. ಒಮ್ಮೆ ಸುತ್ತಲೂ ಪರೀಕ್ಷಿಸಿ ಗಂಭೀರವಾಗಿ ಹಿಂದಕ್ಕೆ ತಿರುಗಿದ. ಎಲ್ಲರೂ ಭಯದಿಂದ ಮೌನವಾಗಿ ಆತನನ್ನೇ ನೋಡುತ್ತಿದ್ದರು. ಕತ್ತಲಲ್ಲಿ ಆತನ ಆಕೃತಿ ಕ್ರಮಕ್ರಮವಾಗಿ ಕರಗಿತು.

## ಉಪಸಂಹಾರ

"ಮನುಷ್ಯನ ಬಾಳಿನಲ್ಲಿ ಸಿನಿಕತನವು ಎಷ್ಟು ಗಂಭೀರವಾದ ಪ್ರಭಾವ ಬೀರುವುದೋ ಎಂಬುದನ್ನು ತುಂಬಾ ಚೆನ್ನಾಗಿ ತೋರುವ ಉದಾಹರಣೆ ಡಾ|| ಹರಿಹರರಾವ್ ಬದುಕು. ತನಗೆ ನಡೆದ ಅನ್ಯಾಯದ ವಿರುದ್ಧ ಸಿಡಿದು ಬಿದ್ದ ವನು ಮೊದಲು ವೇದಾಂತಿಯಾದ. ಆದರೆ ಪ್ರಪಂಚದ ಸಂಬಂಧ ಕಡೆದುಕೊಳ್ಳ ಲಾರದೆ ಹಠವನ್ನು ತನ್ನ ಮೈಯಲೆಲ್ಲಾ ತುಂಬಿಕೊಂಡು ಮಹಾದ್ರಷ್ಟನಾಗಿ

ಮತ್ತೆ ಬದುಕಿಗೆ ಬಂದ!" ಎಂದಳು ಕೇದಾರಗೌರಿ.

"ಎಂದರೆ ಕಾಷ್ಮೋರಾ ಅಂಶ ಪೃಥ್ವಿಯಲ್ಲಿ ಬರುವುದು ಸುಳ್ಳು ಎನ್ನುತ್ತೀಯಾ?" ಎಂದ ಸಿದ್ಧಾರ್ಥ.

ಗೌರಿ ಬಿಳಿಚಿಕೊಂಡಳು. "ನೀವು ಇನ್ನೂ ಇದೆಲ್ಲಾ ನಿಜ ಎಂದೇ ನಂಬಿದ್ದೀರಾ?"

ಸಿದ್ಧಾರ್ಥ ನಕ್ಕು, "ಇಲ್ಲ. ಶೇಕಡ ತೊಂಬತ್ತೊಂಬತ್ತು ಭಾಗ ಇಲ್ಲ" ಎಂದ. ಅಷ್ಟರಲ್ಲಿ ಅವನ ಮುಖದ ಮೇಲಣ ನಗೆ ಮಾಯವಾಯಿತು. "ಆದರೆ ಒಂದು ಭಾಗ ಏನೋ...." ಅವನ ಮನಸ್ಸು ಒಂಬತ್ತು ತಿಂಗಳ ಹಿಂದಕ್ಕೆ ಕರೆದೊಯ್ಯಿತು. "ನಿನಗೆ ನೆನಪಿದೆಯಾ ಗೌರಿ? ಒಂಬತ್ತು ತಿಂಗಳ ಹಿಂದೆ ಆ ರಾತ್ರಿ....ನಮ್ಮ ಮೊದಲ ರಾತ್ರಿ...ಆಕಾಶದಲ್ಲಿ ಚಂದ್ರ ಕಾಣಿಸಿದಂತೆ ನನಗೆ ಸ್ವಲ್ಪ ಮಸಕಾಗಿ ನೆನಪಿದೆ. ಅಷ್ಟಾವಕ್ರನು ನಿನ್ನ ಮೂಲಕ ಜನ್ಮ ಪಡೆಯಲು ಸಾಧ್ಯವಾಗದೆ ಇದ್ದುದಕ್ಕೆ ಅದೇ ಒಂದು ಕಾರಣವೇನೋ? ತಾಳೆಗರಿಯಲ್ಲಿ ಬರೆದಿದ್ದ ಐದರಲ್ಲಿ ಅದೇ ಒಂದು ಕ್ರಿಯೆಯಾಗಿ ನಮ್ಮನ್ನು ರಕ್ಷಿಸಿದೆಯೇನೋ?"

ಕೇದಾರಗೌರಿ ಮಾತನಾಡಲಿಲ್ಲ. 'ಪರವಾಗಿಲ್ಲ. ಶೇಕಡ ತೊಂಬತ್ತೊಂಬತ್ತು ಭಾಗ ಬದಲಾಗಿದ್ದೀರಿ. ಇನ್ನುಳಿದ ಒಂದು ಪಾಲನ್ನು ಉಳಿದ ಜೀವನದ ಕಾಲದಲ್ಲಿ ನಾನು ಬದಲಿಸುತ್ತೇನೆ' ಎಂಬ ಭಾವದಿಂದ ಅವನ ಮೇಲೊಂದು ಕೈ ಹಾಕಿ, ಮತ್ತೊಂದು ಕೈಯಿಂದ ಮಗುವನ್ನೆತ್ತಿಕೊಂಡು, "ಬನ್ನಿ ಹೊರಗೆ ನಮಗಾಗಿ ಎಲ್ಲರೂ ಕಾಯುತ್ತಿದ್ದಾರೆ" ಎಂದಳು.

ಹೊರಗೆ ಎರಡು ಮಣೆಗಳನ್ನು ಹಾಕಿದ್ದರು. ಮುಂದೆ ದೊಡ್ಡ ತಟ್ಟೆಯಲ್ಲಿ ಅಕ್ಕಿ...

ರಂಜಿತಾ, ಷಾಡೋ, ರಂಗಪ್ರಸಾದ್, ನಿವೇದಿತಾ, ಸಿದ್ಧಾರ್ಥನ ತಾಯಿ ಪ್ರೊ|| ಜಯದೇವ್ ಎಲ್ಲರೂ ಕುಳಿತಿದ್ದಾರೆ.

ಸಿದ್ಧಾರ್ಥ ಬಂದು ಮಣೆಯ ಮೇಲೆ ಕುಳಿತ. ಪಕ್ಕದಲ್ಲಿಯೇ ಗೌರಿ ಕುಳಿತಳು.

ಉಂಗುರದಲ್ಲಿ ಹೆಸರು ಬರೆದ. ಅದನ್ನು ನೋಡುತ್ತಿದ್ದ ಅವರೆಲ್ಲರಿಗೂ ತುಂಬಾ ಆಶ್ಚರ್ಯ! ಅದನ್ನು ಗಮನಿಸಿದವನಂತೆ ಸಿದ್ಧಾರ್ಥ ನಕ್ಕ.

"ನನ್ನ ಹೆಸರು ಸಿದ್ಧಾರ್ಥ. ಎಂದೋ ಸಿದ್ಧಾರ್ಥನಿಗೆ ಮೂವತ್ತು ದಾಟಿದ ನಂತರ ಜ್ಞಾನೋದಯವಾಯಿತಂತೆ. ನನ್ನ ಮಗನಿಗೆ ಹುಟ್ಟಿದ ಕೂಡಲೇ ಈ ಪ್ರಪಂಚದ ಬಗ್ಗೆ ಪೂರ್ಣವಾಗಿ ತಿಳಿಯಬೇಕೆಂದು ನನ್ನ ಹೆಂಡತಿ ಹಠ ಹಿಡಿದು ಈ ಹೆಸರು ಇಡುವಂತೆ ಮಾಡಿದ್ದಾಳೆ" ಎಂದ ಸಿದ್ಧಾರ್ಥ.

ಎಲ್ಲರೂ ಪರಸ್ಪರ ಮುಖಗಳನ್ನು ನೋಡಿಕೊಂಡರು. ಆಗ ಕೇದಾರಗೌರಿ ತನ್ನ ಮನಸ್ಸನ್ನು ಬಿಚ್ಚಿ ನುಡಿದಳು.

"ಎಳೆಯ ವಯಸ್ಸಿನಲ್ಲಿ ಪೋಲೀಯೋ ಬಂತು. ಅದರಿಂದ ಬಂದ ಅಂಗ ವೈಕಲ್ಯತೆ ನನ್ನಲ್ಲಿ ಕೀಳರಿಮೆಯನ್ನು ತುಂಬಿತು. ನನ್ನ ಗಂಡ ಸುಂದರಾಂಗನಲ್ಲ. ಅದೇ ಕಳೆದ ಒಂಬತ್ತು ತಿಂಗಳಿಂದಲೂ ನನ್ನಲ್ಲಿ ಅರ್ಥಶೂನ್ಯ ಭಯವನ್ನು ತುಂಬಿತ್ತು. ಈ ಒಂಬತ್ತು ತಿಂಗಳಲ್ಲಿ ನನಗೆ ಅರ್ಥವಾದದ್ದು ಈ ಪ್ರಪಂಚದಲ್ಲಿರುವ ಜನರಲ್ಲಿ ಶೇಕಡ ತೊಂಬತ್ತೊಂಬತ್ತು ಭಾಗ ನನಗಿಂತಲೂ ಹೆಚ್ಚು ಮಾನಸಿಕ ದೌರ್ಬಲ್ಯಗಳಿಂದ [illegible]ದು. ಅವರು ನನಗಿಂತಲೂ ಹೆಚ್ಚು ಭಯಗೊಂಡಿದ್ದಾರೆ...ಜಾಣರಾದವರು ಅವರ ದೌರ್ಬಲ್ಯಗಳನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುತ್ತಲೇ ಇರುತ್ತಾರೆ.

"ನನ್ನ ಮಗನಿಗೆ ಇಟ್ಟಿರುವ ಹೆಸರು ಅಸಹ್ಯ ಹುಟ್ಟಿಸುತ್ತದೆ ನಿಜವೇ. ಅವನನ್ನು ಯಾರಾದರೂ ಇದೆಂಥ ಹೆಸರೋ ನಿನಗೆ ಎಂದರೆ ಅವನು ನಾಚಿಕೆಯಿಂದ ಭೂಮಿಗಿಳಿಯಬಾರದು. ಹೆಮ್ಮೆಯಿಂದ ಒಬ್ಬ ತಾಯಿ ತನ್ನ ಮುದ್ದು ಮಗನಿಗೆ ಏಕೆ ಆ ಹೆಸರನ್ನಿ[illegible]ಯಿತೆಂಬುದನ್ನು ವಿವರವಾಗಿ ಹೇಳಬೇಕು. ಈ ಕಥೆ ಕೇಳಿದ ಒಬ್ಬರಾದರೂ ಪರಿವರ್ತನೆಗೊಳ್ಳಬೇಕು. ಬುದ್ಧಿ ಬಂದಮೇಲೆ 'ಅಮ್ಮಾ, ನನಗೆ ಈ ಹೆ[illegible] ಖಂಡಿತವಾಗಿಯೂ ಹೆಸರು ಬದಲಿಸುತ್ತೇನೆ. ಆದರೆ ನನ್ನ ರಕ್ತವನ್ನು ಹಂಚಿಕೊಂಡು ಹುಟ್ಟಿರುವ ಮಗು... ಡಾಕ್ಟರ್ ರಂಗಪ್ರಸಾದ್ ಅವರ ಭಾಷೆಯಲ್ಲಿ ನಮ್ಮ ಜೀನ್‌ಗಳನ್ನು ಪಡೆದುಕೊಂಡು ಹುಟ್ಟಿರುವ ಮಗನಾದ್ದರಿಂದ ಅವನು ಹಾಗೆ ಕೇಳುವುದಿಲ್ಲ ಎಂದು ನಂಬಿದ್ದೇನೆ."

ಅಕ್ಕಿಯಲ್ಲಿ ನಾಲ್ಕು ಅಕ್ಷರಗಳು ಫಳಫಳನೆ ಹೊಳೆಯುತ್ತಿದ್ದವು:

'ಅಷ್ಟಾವಕ್ರ'

PUBLIC LIBRARIES